# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೧೨

## ಹೊನ್ನುಡಿ

**ಹೆಚ್.ಡಿ. ಕುಮಾರಸ್ವಾಮಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು ೫೬೦ ೦೦೧

ದಿನಾಂಕ ೦೩-೧೦-೨೦೦೬

ಕನ್ನಡ ನಾಡಿನ ಜಾನಪದ ಜಗತ್ತು ಅತ್ಯಂತ ವಿಸ್ತಾರವಾದುದು, ಸಮೃದ್ಧವಾದುದು ಮತ್ತು ವೈವಿಧ್ಯಮಯವಾದುದು. ಜನಪದ ಗೀತ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಶಿಲ್ಪಕಲೆಗಳಿಂದ ಕಿಕ್ಕಿರಿದಿರುವ ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ – ವಿಜ್ಞಾನಗಳ ಮೂಲ ನಡವಳಿಕೆ.

ಯಾವುದೇ ದೇಶದ ಜಾನಪದ ಸಂಪತ್ತು ಆ ದೇಶದ ಸಾಂಸ್ಕೃತಿಯ ತೋರುದೀವಿಗೆ, ಪಾರಂಪರಿಕವಾಗಿ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದ ಈ ಸಂಪತ್ತು ದೇಶದ ಅಮೂಲ್ಯ ಆಸ್ತಿ. ನಮ್ಮ ಹಿರಿಯರ ಜ್ಞಾನ ವಿವೇಕ ಸಾಹಿತ್ಯಕ ಸಾಧನೆಗಳನ್ನು ಪರಿಚಯಿಸುವ ತಿಳವಳಿಕೆಯನ್ನು ಹೊರಹೊಮ್ಮಿಸುವ ಮಣ್ಣಿನ ಮಕ್ಕಳ ಸಾಹಿತ್ಯವಾದ ಜಾನಪದವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬರದಿದ್ದರೆ ಅದು ದೇಶಕ್ಕಾಗುವ ದೊಡ್ಡ ನಷ್ಟವೇ ಸರಿ.

ಕನ್ನಡ ನಾಡಿನ ಜಾನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೯ನೇ ಶತಮಾನದ ಗದ್ಯ ಗ್ರಂಥವಾದ ವಡ್ಡಾರಾಧನೆಯು ಕನ್ನಡದ ಪ್ರಪ್ರಥಮ ಜನಪದ ಕಥಾ ಸಂಕಲನವೆನಿಸುತ್ತದೆ. ಇದುವರೆಗೂ ಅಸಂಖ್ಯಾತ ವಿದ್ವಾಂಸರು ಈ ಸಾಹಿತ್ಯವನ್ನು ಹೊರತರಲು ಶ್ರಮಿಸಿರುತ್ತಾರೆ. ಆದರೂ ಕರ್ನಾಟಕ ಜನಪದ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಒಟ್ಟಾಗಿ ಕೂಡಿಸಿ ಜಗತ್ತಿಗೆ ಪರಿಚಯಿಸುವ ಸದ್ದುದೇಶದಿಂದ ಕರ್ನಾಟಕ ಸರ್ಕಾರವು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯನ್ನು ಹಮ್ಮಿಕೊಂಡು ಈ ಸಮೃದ್ಧ ಸಾಹಿತ್ಯ ರಾಶಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತಿದೆ. ಈ ಯೋಜನೆಯಲ್ಲಿ ಜನಪದ ಪದ್ಯ, ಗದ್ಯ ರಂಗಭೂಮಿ ಮತ್ತು ಭಾಷಿಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈ ಸಾಹಿತ್ಯಮಾಲೆಯ ಕೃತಿ ಸಂಪುಟಗಳನ್ನು ಸಹೃದಯ ಓದುಗರು ಆಸ್ವಾದಿಸಿದರೆ ಕರ್ನಾಟಕ ಪ್ರಜಾ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಪ್ರೊ. ಹಿ.ಶಿ. ರಾಮಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ಜಾನಪದ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಸ್ಮರಿಸುತ್ತಾ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ಸುವರ್ಣ ಕರ್ನಾಟಕ ವರ್ಷದ ಈ ಸುಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಕನ್ನಡ ಜನತೆಗೆ ಸಮರ್ಪಿಸುತ್ತಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

# ಪ್ರಕಾಶಕರ ಮಾತು

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿವೆ. ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದವೇ ಮೂಲ ಆಕರವಾಗಿದೆ. ಈ ದಿಸೆಯಲ್ಲಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಅನೇಕ ಪ್ರಾತಃಸ್ಮರಣೀಯರು ಜನಪದ ಮತ್ತು ಯಕ್ಷಗಾನ ಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಆಸಕ್ತ ಜಾನಪದ ವಿದ್ವಾಂಸರು ಬಿಡಿಬಿಡಿಯಾಗಿ ಪ್ರಕಟಿಸಿರುತ್ತಾರೆ. ಇವರನ್ನೆಲ್ಲಾ ಈ ಹೊತ್ತಿನಲ್ಲಿ ನೆನೆಯುತ್ತಾ, ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಢೀಕರಿಸಿ, ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡನವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ವಿವೇಕ ರೈ, ಡಾ. ತೀ. ನಂ. ಶಂಕರನಾರಾಯಣ, ಡಾ. ಸಿದ್ಧಲಿಂಗಯ್ಯ, ಶ್ರೀ ಕೆರೆಮನೆ ಶಂಭು ಹೆಗಡೆ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಪತ್ರಾಧಿಕಾರಿಗಳು ಸದಸ್ಯರಾಗಿಯೂ, ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರನ್ನು ಸಂಚಾಲರಾಗಿರುವಂತೆ ಸಮಿತಿಯನ್ನು ರಚಿಸಲಾಯಿತು.

ಈ ಬೃಹತ್ ಯೋಜನೆ ಕಾರ್ಯರೂಪಕ್ಕಿಳಿಸಲು ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರ ಶ್ರಮ ಮತ್ತು ಸಹಕಾರ ಹೆಚ್ಚಿನದು. ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಶ್ರದ್ಧೆ ಸಹಕಾರಗಳು ಅಮೂಲ್ಯವಾದುವು. ಈ ಎಲ್ಲ ಮಹನೀಯರಿಗೆ ಇಲಾಖೆಯ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಈ ಸಂಪುಟಗಳ ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದ ಶ್ರೀ ಪ.ಸ. ಕುಮಾರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿಗೆ ನನ್ನ ನೆನಕೆಗಳು.

ಈ ಯೋಜನೆಯನ್ನು ಆಗುಮಾಡಿದ ಇಲಾಖಾ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಮತ್ತು ಈಗಿನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೆ ಇಲಾಖೆಯ ವಂದನೆಗಳು. ಈ ಸಂಪುಟಗಳನ್ನು ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ರವರಿಗೆ ನಮ್ಮ ಧನ್ಯವಾದ ಸುವರ್ಣ ಕರ್ನಾಟಕದ ವರ್ಷದ ಸಂದರ್ಭದಲ್ಲಿ ನಿರ್ದೇಶನಾಲಯ ಹೊರತರುತ್ತಿರುವ ಈ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಕೆ.ಆರ್. ನಿರಂಜನ್)**

ಆಯುಕ್ತರು

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ.

ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ  ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು  ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ  ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ  ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ  ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

‘ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು’. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

‘.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ?

‘ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

‘ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ’. **(ಕರ್ನಾಟಕ ಜನಪದ ಸಾಹಿತ್ಯ ೧೯೫೮)**

**ಬೆಟಗೇರಿ ಕೃಷ್ಣಶರ್ಮ**

‘ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ’.
**(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

‘ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ ‘ವಿಶ್ವಕೋಶ’ವೇ ಆಗಬಹುದೆಂದು ಹೇಳಬಹುದು’. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ

ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೨ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ

ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: ''ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು…. ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ…..ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ

ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ

ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ, ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೬೭ರಲ್ಲಿ ತರೀಕೆರೆಯಲ್ಲಿ, ೧೯೬೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೦ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್.

ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ  ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು  ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ  ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ  ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ  ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ  ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಂಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

**– ರಾಘವಾಂಕ**

“ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಯಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ” (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; ‘ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ’ ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ ‘ಸಾಹಿತ್ಯವೆಂಬ ಸಾಮಗ್ರಿಗೆ’ ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ: ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, ‘ಓದಿಲ್ಲದ್ದು’ ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ ‘ಅಧಿಕೃತ ಸಾಹಿತ್ಯ’ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ ‘ಸ್ಪರ್ಧೆ ಮತ್ತು ಗೆಲ್ಲು’ ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ

ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**
**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು

ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು….. ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು

ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು

ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಪ್ರಸ್ತಾವನೆ

ಯಕ್ಷಗಾನ ಬಯಲಾಟವು ವೇಷಗಾರಿಕೆ, ಗಾನ, ನೃತ್ಯ, ಮಾತುಗಾರಿಕೆ ಮತ್ತು ಅಭಿನಯಗಳಿಂದ ಕಥಾನಕಗಳನ್ನು ನಿರೂಪಿಸಿ ಪ್ರೇಕ್ಷಕರಲ್ಲಿ ಸಾತ್ವಿಕ ಪ್ರವೃತ್ತಿಯನ್ನು ಜಾಗೃತಿಗೊಳಿಸುವ ಉದ್ದೇಶಗೊಂಡ ಒಂದು ಸಂಕೀರ್ಣವಾದ ರಂಗಸಂಪ್ರದಾಯ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರತ್ಯೇಕ ಹೆಸರುಗಳಿಂದ ಈ ರಂಗಭೂಮಿ ಹಬ್ಬಿದೆ. ಕನ್ನಡನಾಡಿನ ಸುತ್ತಮುತ್ತಲಿನ ಇತರ ಭಾಷಾ ಪ್ರಾಂತ್ಯಗಳಲ್ಲೂ ಭಿನ್ನ ಭಿನ್ನ ನಾಮರೂಪಗಳಲ್ಲಿ ಇಂಥದೇ ರಂಗಕಲೆಗಳ ಅಸ್ತಿತ್ವವನ್ನು ಕಾಣಬಹುದು.

ಕರಾವಳಿ ಕನ್ನಡ ಜಿಲ್ಲೆಗಳು ಮತ್ತು ಅವುಗಳಿಗೆ ತಾಗಿಕೊಂಡಿರುವ ಮಲೆನಾಡ ಜಿಲ್ಲೆಗಳಲ್ಲಿ ಈ ರಂಗಭೂಮಿಯನ್ನು ಯಕ್ಷಗಾನ ಎಂದು ಗುರುತಿಸಲಾಗುತ್ತಿದೆ. ಹೆಚ್ಚಾಗಿ ದೇವಸ್ಥಾನಮೂಲವಾದ ರಂಗ ಸಂಪ್ರದಾಯವಿದು. ಆದರೆ ಇದರ ಪ್ರದರ್ಶನ ಮಾತ್ರ ದೇವಾಲಯಗಳ ಹೊರಗಡೆಯೆ ಆಗುವಂಥದು. ದೇವಾಲಯದ ಒಳಗೆ ಕಾಣಿಸುವಂಥ ಕಟ್ಟು-ಚಿಟ್ಟು, ಅಂತಸ್ತು ಇತ್ಯಾದಿ ಯಕ್ಷಗಾನ ಪ್ರದರ್ಶನದಲ್ಲಾಗಲಿ, ಪ್ರದರ್ಶಕರಲ್ಲಾಗಲಿ ಕಾಣಿಸುವುದಿಲ್ಲ. ಇಲ್ಲಿ ಭಕ್ತಿಗೇ ಅಗ್ರಮನ್ನಣೆ.

ಯಕ್ಷಗಾನ ರಂಗಭೂಮಿಗೆ ಅಳವಟ್ಟಿರುವ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಗಳಿಗೆ ಅವುಗಳದೇ ಆದ ಪಾರಂಪರಿಕ ವಿನ್ಯಾಸ ಕ್ರಮಗಳಿವೆ. ಈ ರಂಗದಲ್ಲಿ ನಿರೂಪಣೆಗೊಳ್ಳುವ ಕಥಾನಕದ ಲಿಖಿತ ಆಕರಕ್ಕೆ ಹೆಸರು ಪ್ರಸಂಗ. ರಂಗಶಾಸ್ತ್ರದಲ್ಲಿ ಕೃತಿಯನ್ನು ಆಧಿಕಾರಿಕ ಮತ್ತು ಪ್ರಾಸಂಗಿಕ ಎಂದು ವಿಭಾಗಿಸುವ ಕ್ರಮವಿದೆ. ಒಬ್ಬ ನಾಯಕನನ್ನು ಕೇಂದ್ರ ಬಿಂದುವಾಗಿ ಮಾಡಿಕೊಂಡು ನಡೆಸುವ ಕಥಾನಕ ಆಧಿಕಾರಿಕ. ಪೋಷಕಪಾತ್ರಗಳು ಅಥವಾ ಕಥಾನಕಗಳನ್ನು ನಿರೂಪಿಸುವಂಥವು ಪ್ರಾಸಂಗಿಕ ಕೃತಿಗಳು. ಈ ನಿರ್ವಚನಕ್ಕೂ ಯಕ್ಷಗಾನದ ಪ್ರಸಂಗ ಎಂಬ ಹೆಸರಿಗೂ ಸಾಮ್ಯ ಇರುವುದನ್ನು ಕಾಣಬಲ್ಲೆವು.

ನಡುಗನ್ನಡ ಎನ್ನಬಹುದಾದ ಭಾಷೆಯಲ್ಲಿ ರಚಿತವಾದ, ಕುಣಿತಕ್ಕೊದಗುವ ಪದಗಳ ನಿಬಂಧವೇ ಯಕ್ಷಗಾನ ಪ್ರಸಂಗ. ಪದಗಳನ್ನು ಯುಕ್ತ ರಾಗ-ತಾಳಗಳೊಂದಿಗೆ ಹಾಡುತ್ತ ಕಥಾನಿರೂಪಣೆಯನ್ನು ಅಭಿನಯದ ಗತಿಯನ್ನು ನಡೆಸಿಕೊಡುವವನೇ ಭಾಗವತ. ಪದಗಳು ದ್ರಾವಿಡ ಛಂದಸ್ಸಿನ ನೆಲಗಟ್ಟಿನಲ್ಲಿ ವೈವಿಧ್ಯಮಯ ಲಯ, ಗತಿವಿನ್ಯಾಸಗಳೊಂದಿಗೆ ರಚನೆಗೊಂಡವುಗಳಾಗಿವೆ. ಕಥಾನಿರೂಪಣೆಯ ಜತೆಯಲ್ಲಿ ವೇಷಧಾರಿಗೆ ಸಂಭಾಷಣೆ ಬೆಳೆಸಲು ಬೇಕಾದ ಸಾಮಗ್ರಿಗಳನ್ನು ಪ್ರಸಂಗ ಒದಗಿಸುತ್ತದೆ. ಕರಾವಳಿ, ಮಲೆನಾಡುಗಳ ಯಕ್ಷಗಾನ ಪಾತ್ರಧಾರಿಯ ಸಂಭಾಷಣೆ ಲಿಖಿತವಲ್ಲ. ಆಶು ವಿಧಾನದಲ್ಲಿ ಬೆಳೆಯುವಂಥದು. ಈ ಪ್ರಸಂಗಗಳನ್ನು ಆಧರಿಸಿ ಆಟದಲ್ಲಿ ಮಾತ್ರವಲ್ಲ. ತಾಳಮದ್ದಳೆ ಎಂಬ ವಾಚಿಕ ರಂಗಭೂಮಿಯಲ್ಲೂ ಬಲು ಸೊಗಸಾದ ಸಂಭಾಷಣೆಯನ್ನು ಬೆಳೆಸಿ, ಕಥೆ ಮಾತ್ರವಲ್ಲ ಸಂಸ್ಕೃತಿಯ ದರ್ಶನ ಮಾಡಿಕೊಡುವ ಪದ್ಧತಿ ಇದೆ.

ರಾಮಾಯಣ, ಮಹಾಭಾರತ, ಭಾಗವತ ಮತ್ತು ಪುರಾಣಗಳಿಂದ ಮಾತ್ರವಲ್ಲ, ವೀರಶೈವ, ಜೈನಪುರಾಣಗಳಿಂದಲೂ ವಸ್ತುಗಳನ್ನು ಯಕ್ಷಗಾನ ಪ್ರಸಂಗಗಳು ಪಡೆದುಕೊಂಡಿವೆ. ತುಳುನಾಡಿನ ಜಾನಪದವೀರರ ಕತೆಗಳು ಯಕ್ಷಗಾನದ ಕಥಾನಕಗಳಾಗಿವೆ. ಹಲವು ಭಕ್ತರ, ಜನಪದ ಮಹಿಮಾನ್ವಿತರ ಚರಿತ್ರೆಗಳೂ, ಸ್ಥಳಮಾಹಾತ್ಮ್ಯಗಳೂ ಪ್ರಸಂಗಗಳಾಗಿವೆ. ರಾಜರು, ಪಂಡಿತರು, ಭಾಗವತರು, ವೇಷಧಾರಿಗಳು, ಜನಸಾಮಾನ್ಯರು, ವಿರಕ್ತರು ಹೀಗೆ ವಿವಿಧ ಸಂಸ್ಕಾರವಲಯಗಳ ವ್ಯಕ್ತಿಗಳು ಯಕ್ಷಗಾನ ಪ್ರಸಂಗರಚನೆ ಮಾಡಿದ್ದಾರೆ. ಹೀಗೆ ರಚನೆಗೊಂಡಿರುವ ಕೃತಿಗಳು ಎರಡು ಸಾವಿರಕ್ಕೂ ಮೇಲ್ಪಟ್ಟು ಇವೆ. ಈಗಲೂ ಹೊಸ ಪ್ರಸಂಗಗಳು ವಿವಿಧ ಆಶಯಗಳೊಂದಿಗೆ ಮತ್ತು ರಂಗ ಆಧುನಿಕ ಕಾಲವನ್ನು ಎದುರಿಸುತ್ತಿರುವ ಪ್ರಶ್ನೆಗಳನ್ನು ಉತ್ತರಿಸುವ ಉದ್ದೇಶದೊಂದಿಗೆ ರಚನೆಗೊಳ್ಳುತ್ತಲೆ ಇವೆ.

ಯಕ್ಷಗಾನ ಪ್ರಸಂಗದಲ್ಲಿ ವಿವಿಧ ರಾಗತಾಳಗಳ ಪದಗಳಲ್ಲದೆ ಭಾಮಿನಿ, ವಾರ್ಧಕ, ಶರ ಮೊದಲಾದ ಷಟ್ಪದಿಗಳು ದ್ವಿಪದಿ, ಸಾಂಗತ್ಯ, ಸೀಸಪದ್ಯ, ರಗಳೆ, ವಿವಿಧ ವರ್ಣವೃತ್ತಗಳು ಮೊದಲಾದ ಛಂದೋಪ್ರಕಾರಗಳೂ, ಚೂರ್ಣಿಕೆ, ವಚನಗಳೂ ಯಥೋಚಿತವಾಗಿ ಕಾಣಿಸಿಕೊಳ್ಳುತ್ತವೆ. ಕೃತಿಯ ಪ್ರಾರಂಭ, ಬೆಳವಣಿಗೆಗೆ, ಮುಕ್ತಾಯಗಳಿಗೆ ಸಂಬಂಧಪಟ್ಟು ವ್ಯವಸ್ಥಿತವಾದ ಕ್ರಮಗಳೂ ಇವೆ, ಅನೇಕ ರಂಗ ಕ್ರಮಗಳು ಮತ್ತು ಅವುಗಳಿಗಾಗಿ ಬಳಸುವ ಕಟ್ಟುಕಟ್ಟಲೆಯ ಪದಗಳು ಪ್ರತ್ಯೇಕವಾಗಿ ಇವೆ. ಅವು ಪ್ರಸಂಗದಲ್ಲಿ ಕಾಣಿಸಿಕೊಳ್ಳವು. ಉದಾಹರಣೆಗೆ ರಾಮ, ಕೃಷ್ಣ, ದೇವೇಂದ್ರ, ದಶರಥ ಮೊದಲಾದವರ ಒಡ್ಡೋಲಗಕ್ಕೆ ಪದ್ಧತಿಯ ಪದಗಳನ್ನು ಹೇಳಿ ಕುಣಿಸಲು ಇರುತ್ತದೆ. ಒಡ್ಡೋಲಗದಲ್ಲಿ ಪರ್ಯವಸಾನಗೊಳ್ಳುವ ಪೂರ್ವರಂಗದ ಪ್ರಯೋಗಕ್ಕೆಬೇಕಾದ ಪದಗಳು, ಸಭಾಲಕ್ಷಣ, ಎಂಬ ಪ್ರತ್ಯೇಕ ಗ್ರಂಥದಲ್ಲಿ ಇವೆ.

ಯಕ್ಷಗಾನ ಪ್ರಸಂಗ ರಚನೆಯ ಧೋರಣೆಯಲ್ಲಿ ಸರಳತೆಗೆ ಬಹುವಾದ ಆದ್ಯತೆ ಇದೆ. ಗಾನಕ್ರಿಯೆಯಲ್ಲಿ ಪದ ಕಿವಿಗೆ ತಟ್ಟುತ್ತಲೆ ಅರ್ಥವಾಗಬೇಕು. ಚರಣದ ತುಣುಕುಗಳು ಮುಗಿಯುತ್ತಬಂದಂತೆ ಪದದ ಆಶಯ ಅಷ್ಟಷ್ಟಾಗಿ ತಿಳಿಯುತ್ತಲೆ ಹೋಗಬೇಕು. ಅನ್ವಯ ಮಾಡಿಕೊಂಡು ಅರ್ಥಮಾಡಿಕೊಳ್ಳುವ ಕ್ಲಿಷ್ಟತೆ ಯಕ್ಷಗಾನ ಕವಿಗಳು ಹೋಗುವಲ್ಲಿ ಇರಲಾರದು. ಅಲಂಕಾರಕ್ಕಿಂತ ರಸಪ್ರತೀತಿಗೆ ಇಲ್ಲಿ ಆದ್ಯತೆ. ಹಾಗೆಂದು ಅಲಂಕಾರವನ್ನು ನಿರಾಕರಿಸಬೇಕೆಂದು ಅವರಿಗನಿಸದು. ಪರಿಕರಾಲಂಕಾರ (ಅಲಂಕಾರಃ ಪರಿಕರಃ ಸಾಭಿಪ್ರಾಯೇ ವಿಶೇಷಣೇ) ಯಕ್ಷಗಾನ ಪದರಚನೆಯ ಜೀವಾಳ ಎನ್ನಬೇಕು. ಅಂಥ ಅರ್ಥಗರ್ಭಿತ ವಿಶೇಷಣಗಳಿಂದ ಧ್ವನಿಪೂರ್ಣವಾಗಿ ರಸವು ಒಸರುವುದನ್ನು ಕಾಣಬಹುದು.

ಸಾಹಿತ್ಯದ ರುಚಿಯರಿಯಲು ಒಂದೆರಡು ಉದಾಹರಣೆಗಳನ್ನು ಪರಿಶೀಲಿಸಬಹುದು. ರಾಮನಿಗೆ ಪಟ್ಟಾಭಿಷೇಕ ನಡೆಸುವ ನಿರ್ಧಾರ ಕ್ಷಿಪ್ರಗತಿಯಲ್ಲಿ ಆಗುತ್ತದೆ. ಕೈಕೇಯಿಗೆ ಅದು ಮಂಥರೆಯಿಂದ ತಿಳಿಯುತ್ತದೆ. ಮಂಥರೆ ತಿಳಿಸುವಾಗ ಎಷ್ಟೊಂದು ನಾಜೂಕಾಗಿ ನಿರ್ವಹಿಸುತ್ತಾಳೆ ? ಆಕೆ ಹೇಳುತ್ತಾಳೆ – ಬಾಲೆ ಕೇಳ್ ಪೂಮಾಲೆ, ಚಾರುಶೀಲೆ ಇಂದು ನಿನ್ನ ಕಾಂತ, ಭೂಲೋಕವ ರಾಮನಿಗೆ ಪಾಲಿಸಬೇಕೆಂದು ಹೀಗೆ. ಮಂತ್ರಿ ವಸಿಷ್ಠರ ಕೂಡೆ ಅಂತರಂಗದಿ ಮಾತಾಡೆ ನಿಂತು ಕೇಳಿರುವೆ ನಾ ಮಾತ. ಅರಮನೆಯ ಗೋಡೆಗೂ ಕಿವಿ ಇರುತ್ತದೆ ಎನ್ನುವುದುಂಟಲ್ಲ ? ಕೇಳಿದ್ದನ್ನು ಹೇಳುವಾಗಲೂ ನೀ ಹೂವಿನ ಮಾಲೆಹಾಗೆ ಪರಿಮಳಿಸುವವರೆಗೆ ಹೂವು ಮುಡಿಗೆಬೇಕು. ಬಾಡಿದಾಗ ಕಿತ್ತು ಎಸೆಯುವುದೇ. ಇದನ್ನೇ ಕೈಕೆಯ ಪಾಲಿಗೆ ಮಾಡಿರುವುದೆಂದು ಮಂಥರೆ ಹೇಳುವಲ್ಲಿ ವಕ್ರೋಕ್ತಿ ಅಸಾಧಾರಣವಾದದ್ದು. ಮಂಥರೆಯ ಈ ಚಾಡಿ ಮಾತಿಗೆ ಸಿಟ್ಟಿಗೆದ್ದ ಕೈಕೇಯಿ ಆ ದಾಸಿಯನ್ನು ಮುದಿಗೂಗೆ ಎನ್ನುತ್ತಾಳೆ. ಈ ಹೋಲಿಕೆಯಿಂದ ಹೊರಡುವ ಅರ್ಥವತ್ತತೆಯನ್ನು ಗಮನಿಸುವ. ಅಂಧಕಾರ ಕವಿದಾಗ ಲೋಕವಿಡೀ ಇನ್ನು ಯಾವಾಗ ಬೆಳಗಾಗಲಿಲ್ಲ ಎಂದುಕೊಂಡರೆ, ಗೂಗೆ (ಗೂಬೆ) ಮಾತ್ರ ಕತ್ತಲೆಯೆ ದೀರ್ಘವಾಗಲಿ ಎಂದು ಹಾರಯಿಸುವುದಿದೆಯಂತೆ. ಲೋಕವಿಡೀ ರಾಮನ ಪಟ್ಟಾಭಿಷೇಕವನ್ನು ಹಂಬಲಿಸುವಾಗ ಇವಳು ಮಾತ್ರ ರಾಮನಿಗೆ ಅಧಿಕಾರ ಬರಕೂಡದೆಂದು ಹಾರಯಿಸುತ್ತಾಳೆ ಎಂಬ ಧ್ವನಿ ಇಲ್ಲಿದೆ. ಪಟ್ಟಾಭಿಷೇಕ ಮುಹೂರ್ತ ಸಮೀಪಿಸುತ್ತಿರುವಂತೆ ಪನ್ನೀರ ರಾಮನಿಗೆ ಪಂಕಜಾಕ್ಷಿಯರೆರೆದು ಚಿನ್ನಗಳನ್ನು ತೊಡಿಸಿದರು, ಯಾರಿಗೆ ? ಚಿನ್ಮಯಾತ್ಮಕೆಗೆ. ಮುಹೂರ್ತಕ್ಕೆ ಸರಿಯಾಗಿ ತಾಯಿ ಕೈಕೇಯಿ ಬಾರದಿರುವುದನ್ನು ಗಮನಿಸಿ ರಾಮ ತಂದೆಯಲ್ಲಿ ಯಾಕೆ ಭರತನ ಮಾತೆ ಈ ಕಡೆಗೆ ಬರಲಿಲ್ಲ? ಎಂದು ಕೇಳಿದುದರಲ್ಲಿ ವಾಚ್ಯಾರ್ಥಕ್ಕಿಂತ ಹೆಚ್ಚಿನದಾದ ತಿರುಳು ಇದೆ. ದಶರಥ, ಕೈಕೇಯಿ ಸಂವಾದದ ರೀತಿ ಗಮನಾರ್ಹ. ಎಲ್ಲವ ನಿನ್ನೊಡನೆ ಪೇಳ್ವೆ ಕಲ್ಯಾಣಾಂಗ ಕೇಳು ಎಂದು ಎರಡು ವರಗಳನ್ನು ತೀರಿಸಲು ಇರುವುದನ್ನು ನೆನಪಿಸಿದ ಕೈಕೇಯಿಗೆ ದಶರಥ, ಅಂತರಂಗ ಶುದ್ಧವಾಗಿ ಬೇಡಿಕೊ, ನಾ ಕೊಟ್ಟೆ ಎನ್ನುತ್ತಾನೆ. ಅಂತರಂಗಶುದ್ಧಿಗೂ ಕೈಕೆಯಿಯ ಸಂಚಿಗೂ ಎಷ್ಟು ಗಾವುದ ದೂರ ? ದಶರಥನ ಅಳಿವಿನ ವಾರ್ತೆಗೆ ಸೀತೆ ದುಃಖಿಸುವ ರೀತಿ, ಇನ್ನಾರೆನ್ನನು ಗುಣದಲಿ ಮನ್ನಿಸಿ ಮನ್ನಿಸಿ ಕರೆವರು, ಕಣ್ಣಲಿ ಕಾಣದೆ ಹೋಯಿತೆ ಪುಣ್ಯವೆ ಹಾ ವಿಧಿಯೆ ? ಮನಸ್ಸನ್ನು ಕಲಕುವಂಥದ್ದು. ಕಣ್ಣಲ್ಲಿ ಕಾಣದೆ ಹೋದದ್ದು ಕೇವಲ ದಶರಥನಲ್ಲ, ಅದು ತನ್ನ ಮಾತ್ರವಲ್ಲ ಅಯೋಧ್ಯೆಯ ಎಲ್ಲರ ಪಾಲಿನ ಪುಣ್ಯ. ವಾಲ್ಮೀಕಿಯಾದರೂ ರಾಮನನ್ನು ಬಣ್ಣಿಸುವಾಗ ಗುಣದಲ್ಲಿ ದಶರಥನಿಗೆ ಸಮಾನ ಎಂದಿರುವುದು ಇಲ್ಲಿ ಸ್ಮರಣಾರ್ಹ. ಉನ್ನತ ಚೇತನದ ಚರಿತ್ರೆಯ ನಿರೂಪಣೆ ಜನಸಾಮಾನ್ಯರ ಆಡುಮಾತಿನಿಂದಲೇ ಆಗುವುದು ಈ ಸಾಹಿತ್ಯದ ವಿಲಕ್ಷಣತೆ.

ಇಲ್ಲಿ ಬೆರಗನ್ನು ಉಂಟುಮಾಡುವ ಅಂಶವೆಂದರೆ ಕನ್ನಡದ ಪಾರಂಪರಿಕ ಛಂದಸ್ಸಿನಲ್ಲಿ ಗಾನ, ನರ್ತನಗಳಿಗಾಗಿ ಮಾಡಿರುವ ಅಪರಿಮಿತವಾದ ಪ್ರಯೋಗ. ಶಬ್ದಗಳ ಅಕ್ಷರಗಳು ಸರಿಯುವ ಪರಿಯಿಂದಲೆ ತಾಳದ ಆಯ ನಿರ್ಣಯವಾಗುತ್ತದೆ. ಲಭ್ಯ ಛಂದಸ್ಸಿನ ಚೌಕಟ್ಟಿನಲ್ಲಿ, ನವೀನಗತಿ ಸೌಂದರ್ಯವನ್ನು ತರಲು ಮಾಡಿದ ಯತ್ನ ಅಗಾಧವಾದದ್ದು. ಆಧುನಿಕ ಕನ್ನಡದ ವಾಕ್ಯರಚನಾ ವೈವಿಧ್ಯದ ಬೇರುಗಳನ್ನು ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಕಾಣಬಲ್ಲೆವು.

ಯಕ್ಷಗಾನದಲ್ಲಿ ಹೆಚ್ಚಾಗಿ ಇರುವುದು ದಕ್ಷಿಣಾದಿ ಸಂಗೀತ ಪದ್ಧತಿಯಲ್ಲಿ ಕಂಡು ಬರುವ ಸುಳಾದಿ ಸಪ್ತತಾಳಗಳೇ. ಅವುಗಳನ್ನು ಸಮರ್ಪಕವಾಗಿ ಬಿಂಬಿಸುವ ಪದ್ಧತಿ ಯಕ್ಷಗಾನದಲ್ಲಿ ಉಳಿದುಬಂದಿದೆ. ರಸಭಾವಗಳಿಗೆ ಅನುಸಾರವಾಗಿ ಕವಿಗಳು ತಾಳಗಳನ್ನು ಆಯುವುದೂ ಸಂಗೀತಶಾಸ್ತ್ರಜ್ಞರ ಗಮನಸೆಳೆಯದೆ ಬಿಡದು. ವೀರರಸ ಎಂದರೆ ಅದೂ ಭೀಕರಾಕೃತಿಯವರು ಎಂದ ಮೇಲೆ ಅಲ್ಲಿ ಮಟ್ಟೆತಾಳ (ಖಂಡಮಥ್ಯ) ಬರಲೇಬೇಕು. ಭಾನು ತನುಜ ಭಳಿರೆಯನುಜ ಬಂದೆಯಾ ಮಮ ಎಂದು ಯುದ್ಧಕ್ಕೆ ಬಂದ ಸುಗ್ರೀವನಲ್ಲಿ ವಾಲಿ ಕೇಳುತ್ತಾನೆ. ಗಂಭೀರ ಸನ್ನಿವೇಶದ, ಒಡ್ಡೋಲಗದ ಬಳಿಕದ ಪೀಠಿಕೆಗೆ, ಪದ ಹೆಚ್ಚಾಗಿ ಝಂಪೆ (ಮಿಶ್ರಝಂಪೆ)ಯಲ್ಲೆ ಇರುತ್ತದೆ. ಯುವಪಾತ್ರಗಳ ವೀರಾವೇಶಕ್ಕೆ ತ್ವರಿತ ಅಷ್ಟತಾಳ, ಹಿರಿಯರ ಗಂಭೀರ ಸಿಟ್ಟಿನ ಪ್ರದರ್ಶನಕ್ಕೆ ತ್ವರಿತ ತ್ರಿವುಡೆ ಅಥವಾ ತ್ವರಿತ ಝಂಪೆ ಇತ್ಯಾದಿ ಆಯ್ಕೆ ಗಮನಾರ್ಹ. ಅನೇಕ ರಾಗಗಳ ಪ್ರಾಚೀನ ಹೆಸರುಗಳು ಯಕ್ಷಗಾನ ಪ್ರಸಂಗಗಳಲ್ಲಿ ನಮೂದುಗೊಂಡಿವೆ. ಹೆಚ್ಚಾಗಿ ಮಧ್ಯ ಮತ್ತು ತಾರಾರ್ಧ ಸಪ್ತಕಗಳಲ್ಲೆ ಸಂಚರಿಸುವ ಯಕ್ಷಗಾನದ ಪಾರಂಪರಿಕ ಗಾನರೀತಿಯಲ್ಲಿ ಸ್ವರಗಳ ಈ ವ್ಯಾಪ್ತಿಯಲ್ಲಿ, ಶಕ್ತಿಶಾಲಿಯಾಗಿ

ಕಾಣಿಸುವ ರಾಗಗಳಿಗೆ ಹೆಚ್ಚಿನ ಪ್ರಾಚುರ್ಯವಿದೆ. ದಕ್ಷಿಣಾದಿ ಸಂಗೀತದ ಪರಂಪರೆಯಂತೆ ಸಾಹಿತ್ಯ ಮತ್ತು ಸಂಗೀತ (ಮಾತು-ಧಾತು) ಸಮಪ್ರಾಧಾನ್ಯ ಹೊಂದಿಕೊಂಡಿರುವ ಗೀತ ಸಂಪ್ರದಾಯ ಯಕ್ಷಗಾನದ್ದು.

ಪ್ರಸ್ತುತ ಸಂಪುಟದಲ್ಲಿ ರಾಮಾಯಣದ ಕಥಾನಕಗಳಿಗೆ ಸಂಬಂಧಿಸಿದ ನಾಲ್ವರು ಕೃತಿಕಾರರ ಹನ್ನೆರಡು ಪ್ರಸಂಗಗಳನ್ನು ಅಳವಡಿಸಿದೆ. ಕುಂಬಳೆ ಕಣಿಪುರದ ಪಾರ್ತಿಸುಬ್ಬನ ಎಂಟು ಪ್ರಸಂಗಗಳು, ಬಲಿಪ ನಾರಾಯಣ ಭಾಗವತರ ಎರಡು ಪ್ರಸಂಗಗಳು, ಗೇರೆಸೊಪ್ಪೆ ಶಾಂತಪ್ಪಯ್ಯ ಮತ್ತು ಸಾರಡ್ಕ ಶಂಭಟ್ಟರ ತಲಾ ಒಂದು ಪ್ರಸಂಗಗಳು ಇಲ್ಲಿವೆ.

ಪಾರ್ತಿಸುಬ್ಬನ ಪುತ್ರಕಾಮೇಷ್ಟಿ, ಸೀತಾಕಲ್ಯಾಣ, ಪಟ್ಟಾಭಿಷೇಕ, ಪಂಚವಟಿ, ಸೀತಾಪಹಾರ ವಾಲಿಸಂಹಾರ (ವಾಲಿ ಸುಗ್ರೀವರ ಕಾಳಗ), ಸೇತುಬಂಧನ ಮತ್ತು ಅಂಗದ ಸಂಧಾನ ಪ್ರಸಂಗಗಳನ್ನು ಜೋಡಿಸಿದೆ. ರಾಮಾಯಣದಲ್ಲಿ ಬರುವ ಹಲವು ಪಾತ್ರಗಳಿಗೆ ಸಂಬಂಧಿಸಿದ ಕಥೆಗಳನ್ನು ನಿರೂಪಿಸುವ ಉದ್ದೇಶ ಬಲಿಪ ನಾರಾಯಣ ಭಾಗವತರ ಅಹಲ್ಯಾಶಾಪ ಮತ್ತು ವಾನರಾಭ್ಯುದಯ ಪ್ರಸಂಗಗಳಿಗೆ ಇದೆ. ದಶರಥನ ಹಿನ್ನೆಲೆಗೆ ಹೆಚ್ಚು ಒತ್ತುಕೊಟ್ಟು ರಚನೆಯಾಗಿರುವಂಥವು ಗೇರೆಸೊಪ್ಪೆ ಶಾಂತಪ್ಪಯ್ಯನ ಪುತ್ರಕಾಮೇಷ್ಟಿ- ಸೀತಾಸ್ವಯಂವರ ಮತ್ತು ಸಾರಡ್ಕ ಶಂಭಟ್ಟರ ದಶರಥೋತ್ಪತ್ತಿ ಸುಮಿತ್ರಾ ಸ್ವಯಂವರ.

**ಪಾರ್ತಿಸುಬ್ಬನ ಪ್ರಸಂಗಗಳು :**

***ಕವಿ ವಿಚಾರ***

ಪುತ್ರಕಾಮೇಷ್ಟಿ ಮೊದಲಾದ ರಾಮಾಯಣದ ಸುಮಾರು ಹತ್ತು ಪ್ರಸಂಗಗಳು, ಕುಶಲವರ ಕಾಳಗ ಎಂಬ ಉತ್ತರ ಕಾಂಡಕ್ಕೆ ಸಂಬಂಧಿಸಿದ ಪ್ರಸಂಗ, ಶ್ರೀಕೃಷ್ಣ ಚರಿತೆ ಎಂಬ ಭಾಗವತದ ಪ್ರಸಂಗ ಹಾಗೂ ಐರಾವತ (ಗಜನೋಂಪಿ) ಎಂಬ ಭಾರತಕ್ಕೆ ಸಂಬಂಧಿಸಿದ ಪ್ರಸಂಗಗಳನ್ನು ರಚಿಸಿದವನು ಕುಂಬಳೆ (ಕಾಸರಗೋಡು ತಾಲೂಕಿನ) ಕಣಿಪುರದ ಕವಿ ಪಾರ್ತಿಸುಬ್ಬನೆಂಬುದು ಬಹುಕಾಲದಿಂದ ಪ್ರತೀತವಾಗಿರುವ ವಿಚಾರವಾಗಿದೆ. ಈತನ ಪಟ್ಟಾಭಿಷೇಕ ಪ್ರಸಂಗದಲ್ಲಿ ಈ ಕೆಳಗಿನ ವೃತ್ತವಿದೆ.

**ಧಾತ್ರೀಗುತ್ತಮ ಕಣ್ವನಾಮ ಪುರದೀ ನಿಂತಿರ್ದ ಶ್ರೀಕೃಷ್ಣನಾ ತತ್ಪಾದಾಂಬುಜ ದಿವ್ಯನಾಮವರದಿಂದೀ ಪಾರ್ವತೀನಂದನಂ |**
**ಬತ್ತೀಸಾಕೃತಿತಾಳರಾಗವಿಧದಿಂ ರಾಮಾಯಣಂ ಪೇಳ್ವುದಾ**
**ಭಕ್ತಿಧ್ಯಾನದಿ ಕೇಳ್ದುಪುಣ್ಯಕಥೆಯಂ ಸಂತೋಷಮಂ ಮಾಳ್ಪುದು ||**

ಈ ಕವಿಯು ಕುಂಬಳೆಯ ಕಣ್ವನಾಮಪುರ (ಕಣಿಪುರ)ದವನೆಂದು, ಅಲ್ಲಿನ ಪ್ರಸಿದ್ಧ ಶ್ರೀಕೃಷ್ಣದೇವರ ಭಕ್ತನೆಂದು ಮತ್ತು ಪಾರ್ವತಿ (ಪಾರ್ತಿ)ಯ ಮಗ ಎಂದು ತಿಳಿಯುತ್ತದೆ, ಪಾರ್ತಿಸುಬ್ಬನ ಬಗೆಗಿರುವ ಜನಶ್ರುತಿಯೂ ಅವನ ಸ್ಥಳ ಕುಂಬಳೆ ಎಂಬುದನ್ನು ಬೆಂಬಲಿಸುತ್ತದೆ. ದೇವಸ್ಥಾನದಲ್ಲಿ ದೇವದಾಸಿ ಪದ್ಧತಿಯ ನೃತ್ಯಾರಾಧನೆ ಪುನರುತ್ಥಾನಗೊಂಡ ವಿಜಯನಗರದ ಸಾಮ್ರಾಜ್ಯದ ವೈಭವದ ಕಾಲದಲ್ಲೆ ಪಾರ್ತಿಸುಬ್ಬನಂಥ ಪ್ರತಿಭೆ ಕಾಣಿಸಿಕೊಂಡಿರುವುದು. ಈ ಕವಿ ಕಥಕಳಿಯ (ರಾಮನಾಟ್ಟದ) ಕೃತಿಗಳನ್ನಲ್ಲದೆ ತೊರವೆ ರಾಮಾಯಣ, ಚಾಟುವಿಠಲನ ಕನ್ನಡ ಭಾಗವತ, ಲಕ್ಷ್ಮೀಶನ ಜೈಮಿನಿ ಭಾರತ, ಗದುಗ ಭಾರತ ಇತ್ಯಾದಿಗಳನ್ನು ಚೆನ್ನಾಗಿ ಪಠಿಸಿದವನೆಂಬುದು ಇವನ ರಾಮಾಯಣ ಪ್ರಸಂಗಗಳು, ಶ್ರೀಕೃಷ್ಣ ಚರಿತೆ, ಕುಶಲವರ ಕಾಳಗ ಮತ್ತು ಐರಾವತ ಪ್ರಸಂಗಗಳಲ್ಲಿರುವ ಛಾಯೆಗಳಿಂದ ತಿಳಿಯುತ್ತದೆ, ಜತೆಗೆ ಸ್ವತಂತ್ರ ಪ್ರತಿಭೆಯೂ ಇವನಲ್ಲಿ ಧಾರಾಳ ಕಾಣಬಹುದು. ಇವನು ಭಾಸನ ಸಂಸ್ಕೃತ ನಾಟಕಗಳಿಂದಲೂ ಪ್ರಭಾವಿತನಿರಬೇಕೆಂದೂ ತುಲನೆಯಿಂದ ತಿಳಿದುಬಂದಿದೆ.

ಈತನ ಕಾಲದ ವಿಚಾರವಾಗಿ ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಕಾಲಗಳನ್ನು ಸೂಚಿಸಿದ್ದಾರೆ. ಪ್ರಕೃತ ಶ್ರೀ ಕುಕ್ಕಿಲ ಕೃಷ್ಣ ಭಟ್ಟರು ತಮ್ಮ ಪಾರ್ತಿಸುಬ್ಬನ ಯಕ್ಷಗಾನಗಳು ಎಂಬ ಗ್ರಂಥದಲ್ಲಿ ಸಪ್ರಮಾಣವಾಗಿ ಕಾಣಿಸಿದ ಕ್ರಿ.ಶ. ೧೫೯೦-೧೬೨೦ ಎಂಬ ಕೃತಿ ರಚನಾಕಾಲವನ್ನು ಒಪ್ಪಬಹುದಾಗಿದೆ.

**ಕಾವ್ಯಶೈಲಿಯ ನೆಲೆ-ಬೆಲೆ**

ಅವನ ಎಲ್ಲ ಹಾಡುಗಳೂ ಲಲಿತ ಪದಮಿಳಿತವಾಗಿದೆ. ಕ್ಲಿಷ್ಟತೆಗೂ ಈತನಿಗೂ ಗಾವುದಕ್ಕಿಂತಲೂ ದೂರ. ಪ್ರಾಸಕ್ಕಾಗಿ ಸಲ್ಲದ ನುಡಿಗಳನ್ನು ತುರುಕುವುದೆಂಬುದು ಅವನು ಹೋದ ದಾರಿಯಲ್ಲಿಲ್ಲ. …. ಹದಕ್ಕೆ ಮಾಗಿದ ದ್ರಾಕ್ಷೆಯನ್ನು ಬಾಯೊಳಗಿಟ್ಟ ಹಾಗೆ ಪದಗಿದಗಳೆಲ್ಲ ತಮಗೆ ತಾವೇ ಭೇದವಾಗಿ ಕುತೂಹಲಿತವಾದ ಭಾವನೆಯು ಗಂಟಲಿನೊಳಗೆ ನುಸುಳಿಬಿಡುತ್ತವೆ (ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಪಾರ್ತಿಸುಬ್ಬ ಗ್ರಂಥ ೧೯೪೫).

ಲಘುವಿನ, ಬಿಗುವಿನ, ಲಲಿತವಾದ ವಕ್ರವಾದ ತರಂಗಿತ ಪದ್ಯರಚನೆಯ ಬಗೆ ಅವನಿಗೆ ಸ್ವಾಭಾವಿಕವಾಗಿ ಬಂದಿದೆ…… ಹಾಡುವುದಕ್ಕೆ ಹೇಗೋ ಕುಣಿಯುವುದಕ್ಕೂ ಬೇಕಾದ ಅರ್ಥಪೂರ್ಣ ತರಂಗಿತತೆ ಹೆಚ್ಚಿನ ಹಾಡುಗಳಲ್ಲಿ ಕಾಣಿಸುತ್ತದೆ. (ಡಾ.ಕೆ. ಶಿವರಾಮಕಾರಂತರ ಯಕ್ಷಗಾನ ಬಯಲಾಟ ೧೯೬೩).

ಅವನು ಬರೆದಿರುವ ಪ್ರಸಂಗಗಳು ಶ್ರೀಮಂತವೂ ಸುಂದರವೂ ಆದುವು. ಅವನ ಐರಾವತದ ಭಾಷೆ ತೀರ ಸರಳವೂ, ನೇರವೂ ಅಂತಃಸ್ಪರ್ಶಿಯೂ ಆದದ್ದು. ಆತ ತನ್ನ ಪ್ರಸಂಗಗಳಲ್ಲಿ ಬಳಸಿದ ಹಾಡಿನ ಧಾಟಿಗಳು ಮಾನವ ಸಹಜ ಸುಖದುಃಖಾದಿ ಭಾವಗಳನ್ನು ಬಹಳ ಸುಂದರವಾಗಿ ಗೀತರೂಪದಲ್ಲಿ ಪ್ರಕಟಿಸುತ್ತವೆ. ಆತನಿಗೆ ಪ್ರೌಢವಾದ ಭಾಷೆಯ ಅರಿವು ಇಲ್ಲವೆಂದಿಲ್ಲ. ಅವನದು ಹಿತಮಿತವಾದ ಸರಳ ಸುಂದರ ಭಾಷೆ (ಡಾ.ಕೆ.ಶಿವರಾಮ ಕಾರಂತ – ಯಕ್ಷಗಾನ ೧೯೭೪).

ಪಾರ್ತಿಸುಬ್ಬನ ಶೈಲಿಯೆಂದರೆ ನಾವು ನೀವು ಪಡಸಾಲೆಯಲ್ಲಿ ಕುಳಿತು ಪಟ್ಟಾಂಗ ಹೊಡೆಯುವ ರೀತಿಯದು (ಗೋವಿಂದ ಪೈ ನವಭಾರತ – ೧೯೫೭).

ಯಕ್ಷಗಾನ ಪ್ರಸಂಗದ ಪದವೊಂದರ ರಚನೆಯ ಹಿಂದೆ ಮುಖ್ಯವಾಗಿ ಮೂರು ನೋಟಗಳು ಇರುತ್ತವೆ. ಒಂದು -ಪದ ಕೇಳ್ಮೆಗೆ ಹಿತಕರವಾದ ಶಬ್ದಜೋಡಣೆ ಹೊಂದಿ ರಸಭಾವಗಳನ್ನು ವ್ಯಂಜಿಸುವ ಸಾಮರ್ಥ್ಯಪಡೆಯುವುದು. ಎರಡು – ಅದು ರಾಗ, ತಾಳಗಳಿಗೆ ನಿಬದ್ಧವಾಗಿದ್ದು ವೇಷಗಳನ್ನು ವಿವಿಧ ಲಯಗತಿಗಳೊಂದಿಗೆ ಕುಣಿಸಲು ಸಮರ್ಥವಾಗುವುದು. ಮೂರು – ಪಾತ್ರಧಾರಿಗಳು ಆಶು ಸಂಭಾಷಣೆಯನ್ನು ಹೊಸೆಯುವಲ್ಲಿ ಪ್ರೇರಣೆ ನೀಡುವಂಥ ಸಾಮಗ್ರಿಯನ್ನು ಸಾಕಷ್ಟು ಪ್ರಮಾಣದಲ್ಲಿ ಪದದ ಕಿರಿದು ಚೌಕಟ್ಟಿನೊಳಗೆ ತುಂಬಿಸುವುದು. ಈ ಮೂರನ್ನು ಒಂದಕ್ಕಿಂತ ಒಂದು ಹೆಚ್ಚೆನ್ನುವಂತೆ ತುಂಬಿಕೊಂಡು ಪರಿಪೂರ್ಣತೆಯ ಮಟ್ಟಕ್ಕೆ ಏರಿದವುಗಳು ಪಾರ್ತಿಸುಬ್ಬನ ರಾಮಾಯಣದ ಕೃತಿಗಳು. ಅವನ ಪದಗಳು ತಿಳಿನೀರಿನ ತಳದಂತೆ, ಅರ್ಥ ಆಳವಾದುದಾರೂ, ನಮಗೆ ಎಟಕುವಷ್ಟು ಹತ್ತಿರವಾಗಿ ಕಾಣಿಸಿಕೊಳ್ಳುತ್ತದೆ.

ಜನಸಾಮಾನ್ಯರ ನಿತ್ಯಜೀವನದಲ್ಲಿ ಬರುವ ನುಡಿಕಟ್ಟುಗಳು, ಗಾದೆ ಮಾತುಗಳನ್ನು ಹೆಚ್ಚಾಗಿ ತುಂಬಿಕೊಂಡು ಸುಬ್ಬನು ತನ್ನ ನಿರೂಪಣೆಯನ್ನು ಪುಷ್ಟಿಗೊಳಿಸುತ್ತಾನೆ. ನಗೆಗೇಡು ಮಾಡಿದಿರಲ್ಲ, ಹೊತ್ತದ್ದು ಮೀಸೆಯೇ? ಹೊತ್ತದ್ದು ಮೊಲೆಯೆ? ಉಟ್ಟದ್ದು ಸೀರೆಯೆ?, ಏನು ಹೊಡೆಯಿತು ಮಾರಿ ?, ಪೋಗುವೆ ದಮ್ಮಯ್ಯ, ಅಡಿಗೆ ಊಟಗಳೆಂಬ ಗೊಡವೆಯು ನಮಗಿಲ್ಲ, ಕೆಟ್ಟ ಮೇಲೆ ಬುದ್ಧಿ, ಗಂಟು ಕಟ್ಟಿಕೊ ಸೆರಗಿನಲಿ, ಹೆಣ್ಣು ಜನ್ಮವೆ ಸಾಕು, ರಕ್ತಮದದಿಂದ ಕೊಡದಿಪ್ಪೆಯಾ ? ಗಂಡಸುತನ ನೋಡಿದೆ, ಇವೆಲ್ಲ ಜನಸಾಮಾನ್ಯರ ನಿತ್ಯ ಬಳಕೆಯಲ್ಲಿ ಕಿವಿಗೆ ಬೀಳುವ ನುಡಿಕಟ್ಟುಗಳಲ್ಲವೆ? ಇಂಥವು ಸುಬ್ಬನ ಪದದ ಚೌಕಟ್ಟಿನೊಳಗೆ ಕುಳಿತಾಗ ವಿಶೇಷ ಅರ್ಥಪ್ರಕಾಶವನ್ನು ಪಡೆಯುತ್ತವೆ.

ಯಕ್ಷಗಾನ ಪ್ರಸಂಗಗಳ ರಸನಿರೂಪಣೆಯಲ್ಲಿ ಏಕತಾನತೆ ಇರದು. ವೀರ, ಅದ್ಭುತ, ಕರುಣ, ಶಾಂತ ಇತ್ಯಾದಿಗಳಲ್ಲಿ ಒಂದು ಸಮತೋಲನದ ದಾರಿ ಪ್ರಸಂಗ ರಚನೆಯಲ್ಲಿ ಅಥವಾ ಕಥೆ-ಸನ್ನಿವೇಶಗಳ ಸಂಯೋಜನೆಯಲ್ಲಿ ಕಾಣಿಸುತ್ತದೆ. ನಳಚರಿತ್ರೆಯೊಂದನ್ನು ಬಿಟ್ಟರೆ ಲಕ್ಷ್ಮಣಾನ್ವಿತವಾದ ಶೃಂಗಾರರಸ ಯಕ್ಷಗಾನ ಪ್ರಸಂಗಗಳಲ್ಲಿ ಕಾಣಲಾರೆವು. ಆದರೆ ಶೃಂಗಾರ ರಸಾಭಾಸ ಮಾತ್ರ ವಿಪುಲವಾಗಿ ಪ್ರಸಂಗ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಧರ್ಮನೀತಿಗಳನ್ನು ಬಿಡದೆ ಮಾಡುವ ಪುರುಷಪ್ರಯತ್ನಕ್ಕೆ ದೈವಸಹಾಯ ಇರುತ್ತದೆಂದು ಬಿಂಬಿಸುವುದು ಹೆಚ್ಚಿನ ಪ್ರಸಂಗಗಳ ಉದ್ದೇಶ. ವೀರಭಕ್ತಿಗೆ ಮನ್ನಣೆ ಇದ್ದ ಯುಗದ ರಚನೆಗಳು ಇವಾಗಿವೆ. ಮಡಿದೇ ಮೋಕ್ಷ ಎಂಬ ಕಲ್ಪನೆಯನ್ನು ಹೆಚ್ಚಾಗಿ ಈ ರಚನೆಗಳು ಬೆಟ್ಟು ಮಾಡುತ್ತವೆ. ಇವೆಲ್ಲ ಆ ಯುಗದ ನಂಬಿಕೆಯ ಮಾತು. ಈ ನೆಲಗಟ್ಟಿನ ಮೇಲೆಯೆ ಅನಂತರದ ಕವಿಗಳೂ ಪ್ರಸಂಗಗಳನ್ನು ರಚಿಸಿರುವುದು. ಭಾರತೀಯ ಪುರಾಣಗಳ ಕಥಾವಾಹಿನಿಯಲ್ಲಿ ಒಳಗೊಂಡಿರುವ ಆಶಯವನ್ನೆ ಯಕ್ಷಗಾನದ ಕವಿಗಳೂ ಸ್ವೀಕರಿಸಿರುವುದು. ಆದರೂ ಸಾರ್ವಕಾಲಿಕ ನೆಲೆ ಬೆಲೆಯ ಆಶಯ ರೂಪಣೆಯ ಸಾಧ್ಯತೆ ಈ ಪ್ರಸಂಗರಚನೆಗಳಲ್ಲಿ ಧಾರಾಳ ಇದೆ.

**ಬಲಿಪ ನಾರಾಯಣ ಭಾಗವತರ ಕೃತಿಗಳು**

***ಕವಿ, ಕಾವ್ಯವಿಚಾರ :*** ಕಾಸರಗೋಡು ತಾಲೂಕಿನ ಪಡ್ರೆ ಗ್ರಾಮದಲ್ಲಿ ಕರ್ಹಾಡ ಬ್ರಾಹ್ಮಣ ಕುಲದಲ್ಲಿ ೧೮೮೯ರ ವಿರೋಧಿ ಸಂವತ್ಸರದಲ್ಲಿ ಜನಿಸಿದ ಬಲಿಪನಾರಾಯಣ ಭಾಗವತರು ಆಧುನಿಕ ಶಾಲಾ ವಿದ್ಯಾಭ್ಯಾಸವಿಲ್ಲದೆಯೂ ಕನ್ನಡ ಭಾಷಾ ಸಾಹಿತ್ಯದಲ್ಲಿ, ಛಂದಸ್ಸಿನಲ್ಲಿ ಮತ್ತು ಸಂಗೀತದಲ್ಲಿ ಅಪಾರ ವಿದ್ವತ್ತನ್ನು ಗಳಿಸಿಕೊಂಡ, ಅತ್ಯಂತ ಪ್ರಭಾವಿ ಭಾಗವತರಾಗಿ ಇಪ್ಪತ್ತನೆ ಶತಮಾನದ ಪೂರ್ವಾರ್ಧದಲ್ಲಿ ಯಕ್ಷಗಾನ ರಂಗವನ್ನು ಆಳಿದವರು. ಪಾಟಾಳಿ ಶಂಕರಭಾಗವತರು (ಬಣ್ಣದ ಗಾಂಧಿ ಮಾಲಿಂಗ ಅವರ ಅಜ್ಜ) ಮತ್ತು ಕೂಡ್ಲು ಸುಬ್ರಾಯ ಶ್ಯಾನುಭಾಗ ಭಾಗವತರಿಂದ ಕ್ರಮವತ್ತಾಗಿ ಯಕ್ಷಗಾನ ಸಂಗೀತವನ್ನು ಅಭ್ಯಾಸ ಮಾಡಿದ ಬಲಿಪ ಭಾಗವತರು ೧೯೬೭ (ನವೆಂಬರ್) ರಲ್ಲಿ ನಿಧನರಾಗುವವರೆಗೆ ತೆಂಕು ತಿಟ್ಟಿನ ಯಕ್ಷಗಾನ ಹಾಡುಗಾರಿಕೆಗೆ ಮಾದರಿಯಾಗಿದ್ದವರು. ಅವರು ಯಕ್ಷಗಾನದ ಪರಿಪೂರ್ಣ ಕಲಾವಿದರಾಗಿದ್ದರು. ಅಂದರೆ ಪ್ರಸಂಗ – ಹಾಡುಗಾರಿಕೆಗಳ ಮೇಲೆ ಮಾತ್ರವಲ್ಲ ಮದ್ದಳೆ ವಾದನ, ಚೆಂಡೆವಾದನ, ಹೆಜ್ಜೆಗಾರಿಕೆ ಮತ್ತು ಸಮಸ್ತ ರಂಗ ಪರಂಪರೆಗಳ ಬಗೆಗೆ ಅಧಿಕೃತವಾಗಿ ಹೇಳಬಲ್ಲವರಾಗಿದ್ದರು. ಅವರಿದ್ದ ಆಟದಲ್ಲಾಗಲಿ, ಕೂಟದಲ್ಲಾಗಲಿ ಕ್ರಮಗೇಡು ಉಂಟಾಗಲಾರದೆಂಬ ಭಾತಿ ಅವರದಾಗಿತ್ತು. ಅವರು ಯಕ್ಷಗಾನ ರಂಗದ ಮಟ್ಟಿಗೆ ಬಲಿಪ (ತುಳುವಿನಲ್ಲಿ ಹುಲಿ) ರೇ ಆಗಿದ್ದರು. ಅವರು ಆಶುಕವಿಯಾಗಿದ್ದರು. ಸೂಕ್ಷ್ಮಗ್ರಾಹಿ ವೇಷಧಾರಿಗೆ ಹೆಚ್ಚಿನ ಅಭಿನಯದ ಅವಕಾಶ ಮಾಡಿಕೊಡಲು ಅಲ್ಲೆ ಸುಂದರವಾದ ಪದವನ್ನು ಹಾಡುತ್ತಲೇ ರಚಿಸಿಕೊಡುತ್ತಿದ್ದರು. ಹಾಡುಗಾರಿಕೆಯಲ್ಲಿ ಬಹುವಾದ ಪ್ರಯೋಗಶೀಲತೆಯನ್ನು ಮೆರೆದ ಪ್ರಸಂಗಕರ್ತ ಅವರು.

ಅವರು ಇಪ್ಪತ್ತು ಪ್ರಸಂಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಎರಡು ಪ್ರಸಂಗಗಳನ್ನು – ಅಹಲ್ಯಾ ಶಾಪ ಮತ್ತು ವಾನರಾಭ್ಯುದಯ – ಇಲ್ಲಿ ಜೋಡಿಸಿದೆ. ಅವರ ಉಳಿದ ಪ್ರಸಂಗಗಳೆಂದರೆ – ಬ್ರಹ್ಮಕಪಾಲ, ಪ್ರಹ್ಲಾದ ಚರಿತ್ರೆ, ಶಶಿಪ್ರಭಾ ಪರಿಣಯ, ದೇವೀ ಮಹಾತ್ಮೆ, ಶಕುಂತಲಾ ಪರಿಣಯ, ಪದ್ಮಾವತೀ ಕಲ್ಯಾಣ, ಕಚದೇವಯಾನಿ, ಚಂದ್ರಹಾಸ, ಗದಾಪರ್ವ, ಸಮುದ್ರ ಮಥನ, ಜಲಂಧರ ಕಾಳಗ, ರುಕ್ಮಿಣೀ ಸ್ವಯಂವರ, ನರಕಾಸುರವಧೆ, ಗರುಡಗರ್ವಭಂಗ, ಕೃಷ್ಣಾರ್ಜುನಕಾಳಗ, ಉಷಾ ಪರಿಣಯ, ವೀರವರ್ಮಕಾಳಗ, ಸಿಂಹಧ್ವಜಕಾಳಗ.

ಬಲಿಪ ಭಾಗವತರ ಕೃತಿಗಳ ಕುರಿತು ಶ್ರೀ ಮಂಜೇಶ್ವರ ಗೋವಿಂದ ಪೈಯವರು ಹೇಳಿದ ಮಾತು ಇದು- ಶ್ರೀ ಬಲಿಪ ನಾಯಾಯಣ ಭಾಗವತರೆಂದರೆ ಕಳೆದ ಎಷ್ಟೋ ವರ್ಷಗಳಿಂದ ತಮ್ಮ ಜಾಗಟೆಯ ಬಾಜನೆಗೆ ಎಷ್ಟೋ ಯಕ್ಷಗಾನ ಪ್ರಸಂಗಗಳನ್ನು ಹಾಡಿ ಆಡಿಸಿರುವ ವಯೋವೃದ್ಧರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕಲೆಯಲ್ಲಿ ಅವರೆಂದರೆ ಎತ್ತಿದ ಕೈ. ಈ ಜಿಲ್ಲೆಯಲ್ಲಿ ಅವರನ್ನು ಕಂಡಿಲ್ಲದ, ಕೇಳಿಲ್ಲದ ಯಕ್ಷಗಾನ ಪ್ರೇಮಿಗಳು ಇರುವರಾದರೆ ತೀರ ಕಡಿಮೆ. ಅವರ ಹೆಸರನ್ನು ಅರಿಯದವರೆಂದರೆ ಪ್ರಾಯಶಃ ನಾಸ್ತಿ ಎನ್ನಬಹುದು.

ಹೀಗಾಗಿ ಈ ಪ್ರಸಂಗಗಳು ಅಂಥವರೊಬ್ಬ ಯಕ್ಷಗಾನ ವಿಶಾರದರ ಕೃತಿಗಳೆಂಬುದರಿಂದ ಅವು ಉತ್ತಮವಾಗಿರಲೇಬೇಕು (ಯಕ್ಷಗಾನ ಕಲಾತಪಸ್ವಿ ಸಂಸ್ಮರಣ ಗ್ರಂಥ).

ಬಲಿಪರ ರಚನೆ ಯಕ್ಷಗಾನ ಮಾರ್ಗದಂತೆ ತಿಳಿನುಡಿಯೇ. ಅವರ ರಚನೆಗಳ ಸಂಗೀತಮೌಲ್ಯ ಮೇಲ್ಮಟ್ಟದ್ದು. ಲಯದ ನಾಟ್ಯಕ್ಕೆ ಅಡಿಗಡಿಗೆ ಅನುವು ನೀಡುವ ಪದಪ್ರಯೋಗ ಅವರದು. ಭಾಷಾಶೈಲಿಯಂತು ತುಂಬ ಪರಿಷ್ಕಾರಯುತವಾದದ್ದು.

**ಗೇರೆಸೊಪ್ಪೆ ಶಾಂತಪ್ಪಯ್ಯನ ರಚನೆ**

***ಕವಿ-ಕಾವ್ಯವಿಚಾರ:*** ಗೇರೆಸೊಪ್ಪೆ ಶಾಂತಪ್ಪಯ್ಯ ಉತ್ತರ ಕನ್ನಡ ಜಿಲ್ಲೆಯ ಗೇರೆಸೊಪ್ಪೆ ಮೂಲದ ಆದರೆ ಮಂಗಳೂರಿನಲ್ಲಿ ನೆಲೆಸಿದ್ದ ಸಾರಸ್ವತ ಬ್ರಾಹ್ಮಣ ಕುಲದ ಯಕ್ಷಗಾನ ಕವಿ. ಈತ ಮಂಗಳೂರಿನಲ್ಲಿ ಕ್ರಿ.ಶ. ೧೮೪೦ – ೭೦ರ ವೇಳೆಗೆ ನ್ಯಾಯಾಧೀಶನೂ ಆಗಿದ್ದ. ಮಂಗಳೂರನ್ನು ಇವನು ಕ್ಷೇಮಪುರ ಎಂದು ಗುರುತಿಸಿದ್ದಾನೆ. ಇವನ ಕೃತಿಗಳು ಪುತ್ರಕಾಮೇಷ್ಟಿ-ಸೀತಾಸ್ವಯಂವರ ಮತ್ತು ಕರ್ಣಪರ್ವ, ಪಾರ್ತಿಸುಬ್ಬನ ಪುತ್ರಕಾಮೇಷ್ಟಿಯ ಜನಪ್ರಿಯತೆಗೆ ಸಾಟಿಯಾಗಲು ಶಾಂತಪ್ಪಯ್ಯನ ಪುತ್ರಕಾಮೇಷ್ಟಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಇದರ ಮುದ್ರಿತ ಪ್ರತಿ ಕಣ್ಣಿಗೆ ಕಾಣಿಸಿದ್ದು ದುರ್ಲಭ. ಆದರೆ ಕರ್ಣಪರ್ವ ಮಾತ್ರ ವೀರ-ಕರುಣ ರಸಗಳ ಮನೋಜ್ಞ ನಿಧಿಯಾಗಿದೆ. ಇದರಲ್ಲಿ ಬರುವ ಶಲ್ಯ-ಕರ್ಣ ಉಪಾಲಂಭವಾಗಲಿ, ಶಿಬಿರದಲ್ಲಿ ಧರ್ಮರಾಜ – ಅರ್ಜುನ ವಿರಸವಾಗಲಿ, ದುಃಶಾಸನ ವಧೆಯ ಭಾಗವಾಗಲಿ, ಅಂತಿಮವಾಗಿ ಕರ್ಣಾರ್ಜುನ ಯುದ್ಧ ಭಾಗವಾಗಲಿ ಅತ್ಯಂತ ಚೇತೋಹಾರಿಯಾದ ರಂಗಾನುಭವ ನೀಡುವಂಥದ್ದೇ. ಇದಕ್ಕೆ ತೆಂಕುತಿಟ್ಟಿನ ಆಟದ ಪದ್ಧತಿಯಲ್ಲಿ ಅನೇಕ ವಿಶಿಷ್ಟ ಪ್ರಯೋಗಕ್ರಮಗಳಿವೆ. ಪರಿಕರಾಲಂಕಾರ ಸಮೃದ್ಧವಾಗಿ ಬಳಸಿದ ಕೃತಿಗಳು ಶಾಂತಪ್ಪಯ್ಯನದು.

ಸುಬ್ಬನ ಕೃತಿಯಲ್ಲಿ ಇಲ್ಲದ ಶಂಬರಾಸುರನ ಜತೆಗಿನ ದಶರಥನ ಯುದ್ಧದ ಪ್ರಕರಣ ಮತ್ತು ಕೈಕೇಯಿಗೆ ಎರಡು ವರಗಳನ್ನು ನೀಡಿ ನ್ಯಾಸವಾಗಿ ಇರಿಸುವ ಕಥೆ ಶಾಂತಪ್ಪಯ್ಯನ ಕೃತಿಯಲ್ಲಿದೆ.

ಸೀತೆಯ ವಿವಾಹದ ವೇಳೆ ಊಟ ಮಾಡಿ ಕೈ ತೊಳೆಯಲು ಬರುತ್ತಿದ್ದ ಬಡಕಲು ವೃದ್ಧ ಬ್ರಾಹ್ಮಣನ ಕಟಿಸೂತ್ರದಿಂದ ಕೌಪೀನವನ್ನು ಸೆಳೆದು, ನಗ್ನಗೊಳಿಸಿ ಮಂಥರೆ ನಗುವುದು, ಈ ಅವಮಾನವನ್ನು ರಾಮನಿಗೆ ತಿಳಿಸಿದಾಗ, ಆತ ಮಂಥರೆಯನ್ನು ಎಳೆತರಿಸಿ ಶಾಸ್ತಿಮಾಡುವುದು, ಅದಕ್ಕೆ ಪ್ರತೀಕಾರ ಮಾಡುವುದಾಗಿ ಮಂಥರೆ ಶಪಥ ತೊಡುವುದು ಇತ್ಯಾದಿ ಹೊಸತನ ಶಾಂತಪ್ಪಯ್ಯನ ಕೃತಿಯಲ್ಲಿದೆ. ಸೀತಾಸ್ವಯಂವರಕ್ಕೆ ಬರುವ ಬ್ರಾಹ್ಮಣರಲ್ಲಿ ಹಿಂದೂಸ್ತಾನಿ, ಮಹಾರಾಷ್ಟ್ರ, ದೇಶಸ್ಥ, ತುಳುವ, ಹೈಗ ಮತ್ತು ಕೊಂಕಣ ವಿಪ್ರರಿದ್ದು ಅವರೆಲ್ಲ ತಮ್ಮ ಮಾತೃಭಾಷೆಗಳಲ್ಲೆ ಮಾತನಾಡುವ ಕುತೂಹಲಭರಿತ ಪದಗಳು ಈ ಪ್ರಸಂಗದಲ್ಲಿವೆ.

**ಸಾರಡ್ಕ ಶಂಭಟ್ಟರ ಕೃತಿ**

***ಕವಿ-ಕಾವ್ಯವಿಚಾರ:*** ದಶರಥೋತ್ಪತ್ತಿ ; ಸುಮಿತ್ರಾ ಸ್ವಯಂವರದ ಕವಿ ಸಾರಡ್ಕದ ಶಂಭಟ್ಟರು ಎಂದು ತಿಳಿಯಲಾಗಿದೆ. ಅವರ ಕಾಲವನ್ನು ೧೮೬೩ರ ಆಚೆ ಈಚೆಯಾಗಿ ಗ್ರಹಿಸಲಾಗಿದೆ. ಛಂದಸ್ಸಿನಲ್ಲಿ ಅಪಾರ ಪ್ರಯೋಗವನ್ನು ಇವರೂ ಮಾಡಿದ್ದಾರೆ. ಉದಾಹರಣೆಗೆ : ಸುರುಟಿ ಏಕತಾಳದ ಪದ ಭಿನ್ನ ರೂಪ ಪಡೆದುದನ್ನು ಇಲ್ಲಿ ಗಮನಿಸಬಹುದು – ಸಿಕ್ಕಿದೆ ಭೂಪನೆ ನೀ | ಬಲು | ಫಕ್ಕನೆ ತನ್ನೊಡನೇ ಸೊಕ್ಕಿನೊಳ್ಳಿಯನ | ತಿಕ್ಕಿದೆನೆಂಬೊಂ | ದಕ್ಕರಕಿಂದಿಲಿ | ರಕ್ಕಸಮಾಯ್ತೆ ‖ ಘನಹೋಯ್ತೆ| ದಣಿವಾಯ್ತೆ‖ ಕೊನೆಯಲ್ಲಿರುವ ಎರಡು ಮುಡಿಗಳು ಶಂಭಟ್ಟರದೇ ಪ್ರಯೋಗ.

ಈ ಕೃತಿಯಲ್ಲಿರುವ ಕೌಸಲ್ಯೆಯ ವಿವಾಹ, ರಾವಣನಿಂದ ಕೌಸಲ್ಯೆಯ ಅಪಹರಣ, ಪೆಟ್ಟಿಗೆಯಲ್ಲಿ ಹಾಕಿ ತಿಮಿಂಗಿಲಕ್ಕೆ ಕೊಡುವುದು, ಬೆಸ್ತರಿಂದ ಹಿಡಿಯಲ್ಪಟ್ಟ ತಿಮಿಂಗಿಲದ ಬಾಯಲ್ಲಿದ್ದ ಪೆಟ್ಟಿಗೆಯಲ್ಲಿದ್ದ ಕೌಸಲ್ಯೆಯನ್ನು ವರುಣ ದಶರಥನಿಗೆ ಮರಳಿಸುವುದು, ಕೌಸಲ್ಯೆಯನ್ನು

ದಶರಥನಿಗೀಯಬಾರದೆಂದು ಸೋದರಳಿಯನು ಮಾವನೊಂದಿಗೆ ಹೋರಾಡುವುದು. ಶಂಬರಾಸುರನಕಾಳಗ, ಅದರಲ್ಲಿ ರಥದ ಕೀಲುಜಾರಿದಾಗ ಕೈಕೇಯಿ ಕೈಯ ಬಳೆಯನ್ನು ಕೀಲಾಗಿ ಒತ್ತಿ, ಯುದ್ಧದಲ್ಲಿ ದಶರಥ ಗೆಲ್ಲುವ ಹಾಗೆ ಮಾಡುವುದು, ವರ ನೀಡಿಕೆ – ನ್ಯಾಸ ಇತ್ಯಾದಿ ಪ್ರಕರಣಗಳು ಯಕ್ಷಗಾನದ ಶಿಕ್ಷಾರ್ಥಿಗಳಿಗೆ ಉಪಕರಿಸುತ್ತವೆ. ಕತೆಯ ಹರಹನ್ನು ಹೇಳುವುದೇ ಈ ಕೃತಿಯ ಮುಖ್ಯ ಲಕ್ಷ್ಯ.

**ಕಥಾ ಸಾರಾಂಶ**

**ಪಾರ್ತಿಸುಬ್ಬನ ಕೃತಿಗಳು**

**ಪುತ್ರಕಾಮೇಷ್ಟಿ – ಸೀತಾಕಲ್ಯಾಣ :** ಅಯೋಧ್ಯೆಯನ್ನಾಳುತ್ತಿದ್ದ ಸೂರ್ಯವಂಶದ ಅರಸನಾದ ದಶರಥನಿಗೆ ಕೌಸಲ್ಯೆ, ಕೈಕೇಯಿ, ಸುಮಿತ್ರೆಯರೆಂಬ ಮೂವರು ರಾಣಿಯರು. ಬಹುಕಾಲದವರೆಗೆ ಪುತ್ರ ಸಂತತಿ ಇಲ್ಲದಾಗ ವಸಿಷ್ಠಮುನಿಯ ಉಪದೇಶದಂತೆ ಋಷ್ಯಶೃಂಗ ಮಹರ್ಷಿಯ ನೇತೃತ್ವದಲ್ಲಿ ಪುತ್ರಕಾಮೇಷ್ಟಿಯಾಗ ನಡೆಯುತ್ತದೆ. ವಿಧಾತನನ್ನು ಮುಂದಿಟ್ಟುಕೊಂಡು ಇಂದ್ರಾದಿ ದೇವತೆಗಳು ಕ್ಷೀರಸಾಗರಶಾಯಿಯಾದ ಮಹಾವಿಷ್ಣುವಿನ ಬಳಿಗೆ ಹೋಗಿ, ತಮಗೆ ಅತೀವ ಬಾಧೆಯನ್ನು ಕೊಡುತ್ತಿರುವ ರಾವಣಾದಿ ದುಷ್ಟರಾಕ್ಷಸರನ್ನು ಸಂಹರಿಸಿ ಅನುಗ್ರಹಿಸಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ತಾನು ದಶರಥನ ಮಗನಾಗಿ ಜನಿಸಿ ರಾವಣಾದಿ ಖಳರನ್ನು ಸಂಹರಿಸುವುದಾಗಿ ಹೇಳಿ ಮಹಾವಿಷ್ಣು ದೇವತೆಗಳನ್ನು ಸಮಾಧಾನಪಡಿಸುತ್ತಾನೆ.

ಪುತ್ರಕಾಮೇಷ್ಟಿಯ ಯಜ್ಞಕುಂಡದಿಂದ ಉದಿಸಿಬಂದ ಯಜ್ಞೇಶ್ವರನು ದಶರಥನಿಗೆ ದೇವತೆಗಳು ಕೊಟ್ಟ ಪಾಯಸವನ್ನು ನೀಡುತ್ತಾನೆ. ಆ ಪಾಯಸವನ್ನು ಸ್ವೀಕರಿಸಿದ ರಾಣಿಯರು ಗರ್ಭವತಿಯರಾಗುತ್ತಾರೆ. ಕೌಸಲ್ಯೆಯಲ್ಲಿ ರಾಮನೂ, ಕೈಕೇಯಿಯಲ್ಲಿ ಭರತನೂ, ಸುಮಿತ್ರೆಯಲ್ಲಿ ಲಕ್ಷ್ಮಣ-ಶತ್ರುಘ್ನರೂ ಜನಿಸುತ್ತಾರೆ.

ನಾಲ್ವರೂ ಮಕ್ಕಳು ಗುರು ವಸಿಷ್ಠರಲ್ಲಿ ವಿದ್ಯಾಭ್ಯಾಸ ಗಳಿಸುತ್ತಾರೆ. ವಿಶ್ವಾಮಿತ್ರ ಮಹರ್ಷಿ ಯಾಗವೊಂದಕ್ಕೆ ಆಗುವ ರಾಕ್ಷಸರ ಉಪಟಳ ಪರಿಹಾರಕ್ಕಾಗಿ ರಾಮಲಕ್ಷ್ಮಣರನ್ನು ಕೊಟ್ಟುಕಳುಹಿಸಲು ಅಪೇಕ್ಷಿಸುತ್ತಾನೆ. ವಸಿಷ್ಠ ಮಹರ್ಷಿಯ ಮಾತಿನ ಮೇರೆಗೆ ದಶರಥ ರಾಮಲಕ್ಷ್ಮಣರನ್ನು ಕಳುಹಿ ಕೊಡುತ್ತಾನೆ. ಅವರಿಗೆ ವಿಶ್ವಾಮಿತ್ರರಿಂದ ಅಪೂರ್ವವಾದ ಅಸ್ತ್ರಗಳ ಲಾಭವಾಗುತ್ತದೆ.

ಯಾಗಕಂಟಕರಾದ ತಾಟಕೆ ಎಂಬ ರಾಕ್ಷಸಿ, ಆಕೆಯ ಪುತ್ರ ಸುಬಾಹು ಇವರು ರಾಮನ ಬಾಣದಿಂದ ಹತರಾಗುತ್ತಾರೆ. ತಾಟಕೆಯ ಇನ್ನೊಬ್ಬ ಮಗ ಮಾರೀಚ ದ್ವೀಪಾಂತರಕ್ಕೆ ತಳ್ಳಿ ಹೋಗುತ್ತಾನೆ. ವಿಶ್ವಾಮಿತ್ರನ ಯಾಗ ಸಾಂಗವಾಗಿ ನೆರವೇರುತ್ತದೆ, ಮಿಥಿಲೆಯಿಂದ ಜನಕರಾಜನ ದೂತ ಬಂದು ವಿಶ್ವಾಮಿತ್ರನನ್ನು ಕಂಡು ಮಿಥಿಲೆಗೆ ಬರಲು ಕರೆ ಕೊಡುತ್ತಾನೆ. ಗೌತಮ ಮುನಿಯ ಆಶ್ರಮದಲ್ಲಿ ರಾಮನ ಚರಣಸ್ಪರ್ಶವಾಗುತ್ತಲೆ ಕಲ್ಲಾಗಿ ಬಿದ್ದುಕೊಂಡಿದ್ದ ಅಹಲ್ಯೆ ಪೂರ್ವರೂಪಕ್ಕೆ ಮರಳುತ್ತಾಳೆ. ಗೌತಮ ಮಹರ್ಷಿ ರಾಮನನ್ನು ಸ್ತುತಿಸಿ ಅಹಲ್ಯೆಯನ್ನು ಸ್ವೀಕರಿಸುತ್ತಾನೆ.

ಮಿಥಿಲೆಗೆ ತಲುಪಿದಾಗ ಅಲ್ಲಿ ಸೀತಾಸ್ವಯಂವರ ನಡೆಯುತ್ತದೆ. ರಾವಣನ ಸಹಿತ ಎಲ್ಲ ವೀರರು ಶಿವಧನುಸ್ಸನ್ನು ಎತ್ತಲು ವಿಫಲರಾದಾಗ ರಾಮನು ಲೀಲಾಜಾಲವಾಗಿ ಬಿಲ್ಲನೆತ್ತಿ ಹೆದೆಯೇರಿಸಲು ಬಾಗಿಸಿದಾಗ ಅದು ಮುರಿದುಹೋಗುತ್ತದೆ, ಸೀತೆ ರಾಮನ ಕೊರಳಿಗೆ ವರಣಮಾಲಿಕೆಯನ್ನು ಹಾಕುತ್ತಾಳೆ. ದಶರಥ ಮಹಾರಾಜನನ್ನು ಮಿಥಿಲೆಗೆ ಕರೆಸುತ್ತಾರೆ. ರಾಮ-ಸೀತೆ, ಲಕ್ಷ್ಮಣ-ಊರ್ಮಿಳೆ, ಭರತ-ಮಾಂಡವಿ, ಶತ್ರುಘ್ನ-ಶ್ರುತಕೀರ್ತಿ ಇವರ ವಿವಾಹ ನಡೆಯುತ್ತದೆ. ಅಯೋಧ್ಯೆಗೆ ಎಲ್ಲರೂ ಮರಳುವಾಗ ಇದಿರಾದ ಪರಶುರಾಮನ ಗರ್ವಭಂಗ ಮಾಡಿ ರಾಮನು ಸರ್ವಮಾನ್ಯನಾಗುತ್ತಾನೆ.

**ಪಟ್ಟಾಭಿಷೇಕ :** ತಾನು ವೃದ್ಧನಾದೆನೆಂದು ಕಂಡುಕೊಂಡ ದಶರಥ ತನ್ನ ಉತ್ತರಾಧಿಕಾರಿಯಾಗಿ ರಾಮನಿಗೆ ಪಟ್ಟಾಭಿಷೇಕ ಮಾಡಲು ಹೊರಡುತ್ತಾನೆ. ಮಂತ್ರಿ, ಪುರೋಹಿತರೊಂದಿಗೆ ಸಮಾಲೋಚನೆ ಗೈದು ದಶರಥ ಸ್ವೀಕರಿಸಿದ ನಿರ್ಣಯವನ್ನು ಮಂಥರೆ ಕೈಕೆಗೆ ಹೇಳಿ, ಭರತನಿಗೆ ಪಟ್ಟಾಭಿಷೇಕವಾಗಬೇಕೆಂದೂ ಈ ಹಿಂದೆ ಕೇಳಲು ಉಳಿದಿರುವ ಎರಡು ವರಗಳ ಮೂಲಕ ಇದನ್ನು ಸಾಧಿಸಬೇಕೆಂದೂ ದುರ್ಬೋಧನೆ ಕೊಡುತ್ತಾಳೆ. ಈ ವೇಳೆಗೆ ಭರತ, ಶತ್ರುಘ್ನರು ಕೇಕಯ ರಾಜ್ಯದಲ್ಲಿ ಇರುತ್ತಾರೆ.

ಪಟ್ಟಾಭಿಷೇಕದ ಸಡಗರದ ನಡುವೆ ದಶರಥ ಭೂಪತಿ ತನ್ನನ್ನು ಕಾಣಬೇಕೆಂದು ಹೇಳಿ ಕಳುಹಿಸಿ ಕೈಕೇಯಿ ತನ್ನ ಬೇಡಿಕೆಯನ್ನು ಪತಿಯ ಮುಂದೆ ಇರಿಸುತ್ತಾಳೆ. ದಶರಥನ ವಿಲಾಪ, ಪ್ರಲಾಪ ಯಾವುದೂ ಕೈಕೆಯ ಮನಸ್ಸನ್ನು ಮೆತ್ತಗೆ ಮಾಡಲಿಲ್ಲ. ವಿಷಯವರಿತ ರಾಮನು ವಚನಪಾಲನೆಯ ಮಹತ್ತ್ವವನ್ನು ಎತ್ತಿಹಿಡಿದು, ದಶರಥನಿಗೆ ಧೈರ್ಯದ ಮಾತನ್ನು ಹೇಳಿ, ತಾನು ವನವಾಸಕ್ಕೆ ಹೊರಡಲು ಅಣಿಯಾಗುತ್ತಾನೆ. ತಾಯಿಗೆ ಸಮಾಧಾನ ಹೇಳಿ, ವನವಾಸದಲ್ಲಿ ತಾವೂ ಜತೆಗಿರುವುದಾಗಿ ಹಠಹಿಡಿದ ಸೀತೆ, ಲಕ್ಷ್ಮಣರನ್ನು ಒಡಗೊಂಡು ರಾಮನು ಗುಹನ ನೆರವಿನಿಂದ ಗಂಗಾನದಿಯನ್ನು ದಾಟಿ, ಭಾರದ್ವಾಜ ಮಹರ್ಷಿಯ ಉಪದೇಶದಂತೆ, ಚಿತ್ರಕೂಟದಲ್ಲಿ ನೆಲೆಯಾಗುತ್ತಾನೆ.

ಪುತ್ರನ ಅಗಲಿಕೆಯಿಂದ ಕಂಗೆಟ್ಟು ಶಕ್ತಿಗುಂದಿದ ದಶರಥ ಭರತನನ್ನು ಕರೆಸಲು ಹೇಳುತ್ತಾನೆ. ಆದರೆ ಭರತನು ತಲುಪುವುದರೊಳಗೆ ದಶರಥ ಕೊನೆಯುಸಿರನ್ನೆಳೆದಿರುತ್ತಾನೆ. ವಿಚಿತ್ರವಾಗಿ ತ್ವರೆಯಿಂದ ಕರೆಸಲ್ಪಟ್ಟ ಭರತ ಎಲ್ಲ ದುರ್ಘಟನೆಗಳ ವಿವರವನ್ನರಿತು, ಇದಕ್ಕೆಲ್ಲ ಕಾರಣಳಾದ ತನ್ನ ತಾಯಿಯ ಕೊರಳರಿಯಲು ಹೊರಡುತ್ತಾನೆ. ವಸಿಷ್ಠರ ಸಾಂತ್ವನದಲ್ಲಿ ಸಮಾಧಾನಗೊಂಡು, ರಾಮನನ್ನು ಅಯೋಧ್ಯೆಗೆ ಬರಮಾಡಿಕೊಳ್ಳುವ ಸಂಕಲ್ಪದೊಂದಿಗೆ ಭರತನೂ ಇತರ ಎಲ್ಲರೂ ಚಿತ್ರಕೂಟಕ್ಕೆ ಹೋಗುತ್ತಾರೆ.

ರಾಮನು ತಂದೆಯಿತ್ತಿರುವ ವಚನದ ಪಾಲನೆ ಎಲ್ಲಕ್ಕೂ ಮಿಗಿಲಾದುದೆಂದು ತಿಳಿಸಿ, ಭರತನ ಕೋರಿಕೆಯಂತೆ ಪಾದುಕೆಯನ್ನು ಕೊಟ್ಟು ಹದಿನಾಲ್ಕು ವರ್ಷಗಳ ಗಡುವು ತೀರಿದ ಮರುದಿವಸ ತಾನು ಅಯೋಧ್ಯೆಯಲ್ಲಿ ಇರುವುದಾಗಿ ಮಾತುಕೊಟ್ಟು, ಕಳುಹಿಸುತ್ತಾನೆ.

**ಪಂಚವಟಿ :** ಪದೇ ಪದೇ ಅಯೋಧ್ಯೆಯಿಂದ ಜನರು ಬಂದಾರೆಂದು ರಾಮನು ತನ್ನ ಬಿಡದಿಯನ್ನು ರಾಕ್ಷಸಪೀಡಿತವಾದ ದಂಡಕಾರಣ್ಯಕ್ಕೆ ಸ್ಥಳಾಂತರಿಸುತ್ತಾನೆ. ಅಲ್ಲಿನ ಋಷಿಗಳಿಗೆ ರಾಕ್ಷಸಬಾಧೆಯನ್ನು ನಿವಾರಿಸುವ ಭರವಸೆ ನೀಡುತ್ತಾನೆ.

ರಾವಣನ ಸಹೋದರಿ ಶೂರ್ಪಣಖಿ ರಾಮನಲ್ಲೂ, ಲಕ್ಷ್ಮಣನಲ್ಲೂ ಪ್ರಣಯಭಿಕ್ಷೆ ಯಾಚಿಸುತ್ತಾಳೆ. ರಾಮನ ಸೂಚನೆ ಮೇರೆಗೆ ಲಕ್ಷ್ಮಣ ಆಕೆಯ ಮೂಗು ಮೊಲೆಗಳನ್ನು ಕತ್ತರಿಸುತ್ತಾನೆ. ಕೆರಳಿದ ಜನಸ್ಥಾನನಿವಾಸಿಗಳಾದ ಖರ, ದೂಷಣ, ತ್ರಿಶಿರ ಮೊದಲಾದ ರಾಕ್ಷಸನಾಯಕರಿಂದ ಕೂಡಿದ ಅಸುರ ಸೇನೆಯನ್ನು ರಾಮ ಸಂಹರಿಸುತ್ತಾನೆ.

**ಸೀತಾಪಹಾರ :** ಅವಮಾನಿತಳಾದ ಶೂರ್ಪಣಖಿ ಲಂಕೆಗೆ ಬಂದು ಅಣ್ಣನಾದ ರಾವಣನಲ್ಲಿ ತನಗಾದ ಪರಿಭವವನ್ನು ಹೇಳಿಕೊಳ್ಳುತ್ತಾಳೆ. ರಾಮ, ಲಕ್ಷ್ಮಣರಿಂದ ಜನಸ್ಥಾನದ ರಾಕ್ಷಸವೀರರು ಹತರಾದರೆಂದೂ, ರಾಮನ ಪತ್ನಿ ಸೀತೆ ಅತ್ಯಂತ ಸುಂದರಿಯಾಗಿದ್ದು ಆಕೆಯನ್ನು ಕದ್ದು ತಂದು ನಿನ್ನ ಸತಿಯನ್ನಾಗಿ ಮಾಡಿಕೊಳ್ಳಬೇಕೆಂದೂ ಹೇಳುತ್ತಾಳೆ.

ಸೀತೆಯ ಸೌಂದರ್ಯದ ಕುರಿತಾಗಿ ಶೂರ್ಪಣಖಿಯ ವರ್ಣನೆಯಿಂದಲೂ, ರಾಮಲಕ್ಷ್ಮಣರಿಂದ ಅಸುರಕುಲಕ್ಕಾದ ಪರಿಭವದಿಂದಲೂ, ಮನಸ್ಸು ಕಲುಷಿತಗೊಂಡ ರಾವಣ, ಮಂಡೋದರಿಯ ಹಿತವಚನವನ್ನು ತಳ್ಳಿ, ಮಾರೀಚನಲ್ಲಿಗೆ ಬಂದು, ಬೆದರಿಸಿ ಸೀತೆಯ ಮುಂದೆ ಕಾಂಚನಮೃಗವಾಗಿ ಕುಣಿಯಲು ಕಳುಹಿಸುತ್ತಾನೆ. ಸೀತೆಯ ಆಗ್ರಹಕ್ಕಾಗಿ ರಾಮ ಕಾಂಚನಮೃಗದ ಬೆಂಬತ್ತಿ ಬಾಣ ಪ್ರಯೋಗಿಸಿದಾಗ, ಹಾ ಸೀತೆ, ಹಾ ಲಕ್ಷ್ಮಣಾ ಎಂಬ ಕೂಗಿನೊಂದಿಗೆ ಮಾರೀಚ ಪ್ರಾಣಬಿಡುತ್ತಾನೆ. ಆ ಕೂಗಿನಿಂದ ಭಯಪಟ್ಟ ಸೀತೆ ಲಕ್ಷ್ಮಣನನ್ನು ನಿಂದಿಸಿ ರಾಮನನ್ನು ಹುಡುಕಲು ಕಳುಹಿಸುತ್ತಾಳೆ. ಆ ವೇಳೆಗೆ ಕಾವಿಬಟ್ಟೆಯನ್ನುಟ್ಟು ಸಂನ್ಯಾಸಿ ವೇಷ ಧರಿಸಿದ ರಾವಣ, ಸೀತೆಗೆ ಭರವಸೆ ಬರುವ

ಮಾತುಗಳನ್ನಾಡಿ, ಭಿಕ್ಷೆ ನೀಡಲು ಲಕ್ಷ್ಮಣ ರೇಖೆ ದಾಟಿ ಹೊರಬರುವಂತೆ ಮಾಡುತ್ತಾನೆ. ಹೊರಬರುತ್ತಲೆ ಆಕೆಯನ್ನು ಹಿಡಿದು ರಥಕ್ಕೇರಿಸಿಕೊಂಡು ಆಕಾಶಮಾರ್ಗದಲ್ಲಿ ಹೋಗುವಾಗ ಪಕ್ಷಿರಾಜ ಜಟಾಯು ತಡೆಯುತ್ತಾನೆ. ಮೋಸದಿಂದ ಜಟಾಯುವಿನ ರೆಕ್ಕೆ ಕಡಿದು ಹಾಕಿ ರಾವಣ ಸೀತೆಯೊಂದಿಗೆ ಲಂಕೆಗೆ ತಲುಪುತ್ತಾನೆ.

ಲಕ್ಷ್ಮಣನಿಂದ ವಿಷಯ ತಿಳಿದ ರಾಮ ಪರ್ಣಶಾಲೆಗೆ ಮರಳಿ ಸೀತೆ ಅಪಹೃತಳಾದುದನ್ನು ಮನವರಿತು ಆಕೆಯನ್ನು ಹುಡುಕುತ್ತ ಬರುವಾಗ ಜಟಾಯುವಿನಿಂದ ರಾವಣನ ಕೈವಾಡ ತಿಳಿಯುತ್ತದೆ. ಹುಡುಕುತ್ತ ಮುಂಬರಿದಾಗ ಶೂರ್ಪಣಖೆಯ ಮಗಳಾದ ಅಯೋಮುಖಿ ಎಂಬ ರಕ್ಕಸಿ ಇವರನ್ನು ತಿನ್ನಲು ಯತ್ನಿಸಿದಾಗ ಲಕ್ಷ್ಮಣನು ಅವಳ ಮೂಗು ಮೊಲೆಗಳನ್ನು ಕತ್ತರಿಸುತ್ತಾನೆ. ಕಬಂಧ ಮೋಕ್ಷ, ಶಬರಿ ಸಮಾಗಮದ ಬಳಿಕ ರಾಮ ಲಕ್ಷ್ಮಣರು ಪಂಪಾಸರೋವರದ ಬಳಿಗೆ ಬರುತ್ತಾರೆ.

**ವಾಲಿ ಸಂಹಾರ :** ರಾಮ-ಲಕ್ಷ್ಮಣರ ಬಗೆಗೆ ಕುತೂಹಲಿಯಾದ ಸುಗ್ರೀವ ಹನುಮಂತನನ್ನು ಮಾರುವೇಷದಲ್ಲಿ ಅವರೆಡೆಗೆ ಕಳುಹಿಸುತ್ತಾನೆ. ರಾಮ ದರ್ಶನದಿಂದ ತನ್ನಲ್ಲಿ ಸುಪ್ತವಾಗಿದ್ದ ಮಾಹಾತ್ಮ್ಯವನ್ನು ಮರಳಿ ಪಡೆದುಕೊಂಡ ಹನುಮಂತ ಅವರನ್ನು ಸುಗ್ರೀವನಲ್ಲಿಗೆ ಕರೆತಂದು ಸಖ್ಯಮಾಡಿಸುತ್ತಾನೆ.

ಸುಗ್ರೀವ ರಾಮನಲ್ಲಿ ತನಗೆ ಅಣ್ಣನಾದ ವಾಲಿಯಿಂದಾದ ಅನ್ಯಾಯವನ್ನು ಬಿನ್ನವಿಸುತ್ತಾನೆ. ವಾಲಿಯನ್ನು ಸಂಹರಿಸಿ ಅವನು ಬಲಾತ್ಕಾರವಾಗಿ ಹಿಡಿದಿಟ್ಟುಕೊಂಡಿದ್ದ ಸುಗ್ರೀವನ ಪತ್ನಿ ರುಮೆಯನ್ನು ದೊರಕಿಸಿಕೊಡುವುದಾಗಿ ರಾಮ ಭರವಸೆ ಕೊಡುತ್ತಾನೆ.

ವಾಲಿ – ಸುಗ್ರೀವರ ನಡುವೆ ಎರಡು ಯುದ್ಧಗಳಾಗುತ್ತವೆ. ಮೊದಲ ಯುದ್ಧದಲ್ಲಿ ರೂಪ ಸಾಮ್ಯದಿಂದ ವಾಲಿಯಾರು, ಸುಗ್ರೀವ ಯಾರೆಂದು ಗುರುತಿಸಲಾರದೆ ರಾಮ ಬಾಣವೆಸೆಯಲು ಹಿಂಜರಿಯುತ್ತಾನೆ. ಗುರುತಿನ ಮಾಲಿಕೆ ಧರಿಸಿ ಎರಡನೆ ಯುದ್ಧಕ್ಕೆ ಸುಗ್ರೀವ ಹೋದಾಗ, ರಾಮ ಬಾಣಬಿಟ್ಟು ವಾಲಿಯನ್ನು ಕೆಡಹುತ್ತಾನೆ. ಮೊದಲು ಬಹಳವಾಗಿ ನಿಂದಿಸಿದರೂ ಅನಂತರ ರಾಮನ ಮಾತುಗಳನ್ನು ಕೇಳಿ, ಆತನ ನಿಜವೇನೆಂದು ಮನವರಿತುಕೊಂಡು ಮೋಕ್ಷವನ್ನು ಕರುಣಿಸಲು ಪ್ರಾರ್ಥಿಸುತ್ತಾನೆ. ಈ ಪ್ರಸಂಗ ವಿಲಾಪದೊಂದಿಗೆ ಕರುಣರಸದಲ್ಲಿ ಕೊನೆಗೊಳ್ಳುವುದಾದರೂ ರಾಮನ ಅಭಯ ಸನ್ನಿವೇಶಕ್ಕೆ ಶಾಂತಿಯ ಸ್ಪರ್ಶವನ್ನು ಮಾಡಿಕೊಡುತ್ತದೆ.

**ಉಂಗುರಸಂಧಿ :** ಕಿಷ್ಕಿಂಧೆಯ ಪ್ರಸ್ರವಣ ಪರ್ವತದಲ್ಲಿ ಮಳೆಗಾಲವನ್ನು ಕಳೆದ ರಾಮ ಲಕ್ಷ್ಮಣರು ಸುಗ್ರೀವನ ಕಪಿಪಾಳ್ಯವನ್ನು ಸೀತಾನ್ವೇಷಣೆಗಾಗಿ ಪಡೆಯುತ್ತಾರೆ. ಕಪಿಸೇನೆ ನಾಲ್ಕು ವಿಭಾಗವಾಗಿ ನಾಲ್ಕು ದಿಕ್ಕುಗಳಿಗೆ ಹೋಗುತ್ತದೆ. ದಕ್ಷಿಣಕ್ಕೆ ಹೊರಟ ದಂಡಿನಲ್ಲಿರುವ ಹನುಮಂತನಿಗೆ ರಾಮ ಕೆಲವು ರಹಸ್ಯಗಳನ್ನು ಹೇಳಿ, ತನ್ನ ಮುದ್ರೆಯುಂಗುರವನ್ನು ಕೊಡುತ್ತಾನೆ.

ಜಾಂಬವ, ಅಂಗದ ಮೊದಲಾದವರಿದ್ದ ಹನುಮಂತನ ಕಪಿಪಾಳ್ಯ ಸ್ವಯಂಪ್ರಭೆಯ ಗರ್ವಭಂಗ ಮಾಡಿ ದಕ್ಷಿಣ ಸಮುದ್ರ ತೀರದಲ್ಲಿ ಸಮುದ್ರಲಂಘನ ಮಾಡಬೇಕೆಂದು ತೀರ್ಮಾನಿಸುತ್ತದೆ. ಸಂಪಾತಿ ತೋರಿದ ದಿಕ್ಕನ್ನು ಗುರಿಮಾಡಿ ಸಮುದ್ರ ಲಂಘಿಸಲು ಜಾಂಬವಂತ ಹನುಮಂತನನ್ನು ಪ್ರೇರಿಸುತ್ತಾನೆ. ಹನುಮಂತ ಹಾರಿದ ವೇಗ ಹೆಚ್ಚಿ ಲಂಕೆಯನ್ನು ಮೀರಿ ಏಳುನೂರು ಯೋಜನ ದೂರವಿರುವ ತೃಣಬಿಂದು ಮಹರ್ಷಿಯ ಆಶ್ರಮಕ್ಕೆ ತಲುಪುತ್ತಾನೆ. ಮಹರ್ಷಿಯೊಡ್ಡಿದ ಪರೀಕ್ಷೆ ಉತ್ತರಿಸಿ, ಆತನು ತೋರಿದ ದಿಕ್ಕಿನೆಡೆಗೆ ಹಾರಿ, ಹನುಮಂತ ಲಂಕಾದುರ್ಗವನ್ನು ಸೇರುತ್ತಾನೆ.

ದುರ್ಗದ ರಕ್ಷಣೆಯಲ್ಲಿದ್ದ ಲಂಕಿಣಿಯನ್ನು ಭಂಗಿಸಿ, ಲಂಕಾನಗರವನ್ನು ಸೂಕ್ಷ್ಮರೂಪದಿಂದ ಸಂಚರಿಸಿ ನೋಡಿದ ಹನುಮಂತನಿಗೆ ಅರಮನೆಯಲ್ಲಿ ರಾವಣ ಮಲಗಿರುವುದು ಕಾಣಿಸುತ್ತದೆ. ಅವನೊಂದಿಗಿರುವ ಮಂಡೋದರಿಯನ್ನು ಸೀತೆಯೆಂದು ಭ್ರಮಿಸಿದರೂ,

ಪರಾಂಬರಿಸಿ ಸೀತೆಯಲ್ಲವೆಂದು ಖಚಿತಪಡಿಸಿಕೊಂಡು, ಕೋಟೆಯ ಹೊರಕ್ಕೆ ಬಂದು, ಅಶೋಕವನದಲ್ಲಿ ಶಿಂಶುಪಾವೃಕ್ಷದಡಿಯಲ್ಲಿ ಸೀತೆಯಿರುವುದನ್ನು ಕಾಣುತ್ತಾನೆ.

ಸ್ವಲ್ಪ ಹೊತ್ತಿನಲ್ಲಿ ರಾವಣನು ಅಸುರಸ್ತ್ರೀ ಗಡಣದೊಂದಿಗೆ ಅಶೋಕವನಕ್ಕೆ ಬಂದು ಸೀತೆಯನ್ನು ತನ್ನ ರಾಣಿಯಾಗಲು ಒತ್ತಾಯಿಸುತ್ತಾನೆ. ಸೀತೆಯ ನಿಂದನೆ, ಭರ್ತ್ಸನೆಗೆ ಸಿಟ್ಟಾಗಿ ಆಕೆಯನ್ನು ಕಡಿಯಲು ಮುಂದಾದಾಗ ಮಂಡೋದರಿ ತಡೆದು ಅರಮನೆಗೆ ಕರೆದೊಯ್ಯುತ್ತಾಳೆ. ಇದೆಲ್ಲವನ್ನು ಕಂಡು ಸೀತೆಯ ಪರಿಶುದ್ಧತೆಯನ್ನು ಮನವರಿತ ಹನುಮಂತ ಮರದಿಂದ ಇಳಿದು ತನ್ನ ಪರಿಚಯ ಹೇಳಿಕೊಂಡು, ಇದೂ ರಾಕ್ಷಸರ ಕಪಟ ವಿಲಾಸವೆಂಬ ಸೀತೆಯ ಸಂದೇಹವು ದೂರಗೊಳ್ಳಲು, ಹಲವು ರಹಸ್ಯಗಳನ್ನು ತಿಳಿಸಿದ್ದಲ್ಲದೆ ರಾಮನ ಮುದ್ರೆಯುಂಗುರವನ್ನು ಹಸ್ತಾಂತರಿಸುತ್ತಾನೆ. ಇವನು ರಾಮದೂತನೆಂಬುದು ಖಚಿತವಾದೊಡನೆ ಅಂತರಾಳದಿಂದ ರಾಮಲಕ್ಷ್ಮಣರ ಬಗೆಗೆ ಕೇಳತೊಡಗಿದ ಸೀತೆ, ಅವರು ತನ್ನನ್ನು ಬಿಡಿಸುವರೇ ಎಂದು ಕಾತರದಿಂದ ಕೇಳುತ್ತಾಳೆ. ತನ್ನ ಕುರುಹನ್ನು ರಾಮನಿಗೆ ತೋರಿಸುವುದಕ್ಕಾಗಿ ಚೂಡಾಮಣಿಯನ್ನು ಹನುಮಂತನ ಕೈಯಲ್ಲಿಡುತ್ತಾಳೆ. ಇನ್ನು ಎಂಟೇ ದಿನಗಳಲ್ಲಿ ರಾಮನ ದಂಡು ಲಂಕೆಯಲ್ಲಿರುತ್ತದೆಂದೂ, ರಾವಣನ ಸಂಹಾರವಾಗಿ, ಸೀತೆಯ ವಿಮೋಚನೆಯಾಗುತ್ತದೆಂದೂ ಹನುಮಂತ ಭರವಸೆ ಕೊಡುತ್ತಾನೆ.

ಅನಂತರ ಹನುಮಂತ ರಾವಣನ ಉಪವನವನ್ನು ಧ್ವಂಸ ಮಾಡಿ, ಇದಿರಿಸಿದ ರಾಕ್ಷಸ ವೀರರನ್ನು ಮರ್ದಿಸಿ, ರಾವಣನನ್ನು ಕಂಡು ಜರೆಯುವ ತವಕದಿಂದ, ಇಂದ್ರಜಿತುವಿನ ಎದುರು ಸೋತಂತೆ ನಟಿಸಿ, ಸೆರೆಸಿಕ್ಕ. ರಾವಣನ ಆಸ್ಥಾನದಲ್ಲಿ ಆತನನ್ನು ಜರೆದು, ತನ್ನ ಬಾಲವನ್ನು ಸುಡಲು ಮಾಡಿದ ಯತ್ನವನ್ನು ಅನುಕೂಲವನ್ನಾಗಿ ಮಾಡಿಕೊಂಡು ಲಂಕಾಪಟ್ಟಣವನ್ನು ಉರಿಸಿ, ಕಡಲಲ್ಲಿ ಬಾಲದ ಬಟ್ಟೆಯ ಬೆಂಕಿಯನ್ನಾರಿಸಿ ಒಂದೇ ನೆಗೆತದಲ್ಲಿ ಉತ್ತರದಲ್ಲಿರುವ ರಾಮ, ಲಕ್ಷ್ಮಣರಲ್ಲಿಗೆ ತಲುಪಿ, ಎಲ್ಲವನ್ನು ನಿವೇದಿಸಿ, ಸೀತೆಯ ಕುರುಹಾಗಿ ಚೂಡಾಮಣಿಯನ್ನು ಒಪ್ಪಿಸುತ್ತಾನೆ.

**ಸೇತುಬಂಧನ :** ರಾಮಲಕ್ಷ್ಮಣರು ಸುಗ್ರೀವ ಮತ್ತು ಕಪಿಪಾಳ್ಯಗಳೊಂದಿಗೆ ದಕ್ಷಿಣ ಸಮುದ್ರ ತೀರವನ್ನು ಸೇರುತ್ತಾರೆ. ಈ ವಾರ್ತೆಯನ್ನು ಪಡೆದ ರಾವಣ ಲಂಕೆಯ ಕೋಟೆ ಕೊತ್ತಲಗಳನ್ನು ಬಲಪಡಿಸುತ್ತಾನೆ. ರಾಮನೊಂದಿಗೆ ಯುದ್ಧಕ್ಕೆ ಸನ್ನಾಹ ಮಾಡುತ್ತಿರುವುದಾಗಿ ತಿಳಿದು ವಿಭೀಷಣ ಅಣ್ಣನಾದ ರಾವಣನಿಗೆ ನೀತಿ ಹೇಳಿ, ಸೀತೆಯನ್ನು ರಾಮನಿಗೆ ಒಪ್ಪಿಸಲು ಒತ್ತಾಯಿಸುತ್ತಾನೆ. ಸಿಟ್ಟಿಗೆದ್ದ ರಾವಣ ವಿಭೀಷಣನನ್ನು ನಿಂದಿಸಿ ಲಂಕೆಯಿಂದ ಹೊರಗಟ್ಟುತ್ತಾನೆ. ತಾಯಿಗೆ ಇದನ್ನು ತಿಳಿಸಿ ವಿಭೀಷಣ ರಾಮನಲ್ಲಿ ಶರಣು ಹೊಂದುತ್ತಾನೆ. ವರುಣನನ್ನು ಒಲಿಸಿ ಅವನ ಸಲಹೆಯಂತೆ ವಿಶ್ವಕರ್ಮನ ಮಗನಾದ ನಳನನ್ನು ಕರೆಸಿಕೊಂಡು ಅವನ ನೇತೃತ್ವದಲ್ಲಿ ಕಪಿಗಳು ಕಿತ್ತುತಂದುಕೊಟ್ಟ ಪರ್ವತಗಳನ್ನು ಸಮುದ್ರಕ್ಕೆ ಹಾಕಿ ಸೇತುವನ್ನು ಮಾಡುತ್ತಾರೆ. ಪರ್ವತಗಳನ್ನು ಕಿತ್ತು ತರುವಲ್ಲಿ ಕಪಿನಾಯಕರು ನಡೆಸುವ ಸಾಹಸದ ಅದ್ಭುತವಾದ ನಿರೂಪಣೆ ಈ ಪ್ರಸಂಗದಲ್ಲಿದೆ.

**ಅಂಗದ ಸಂಧಾನ :** ರಾಮ-ಲಕ್ಷ್ಮಣರು, ಸುಗ್ರೀವ, ವಿಭೀಷಣ ಮತ್ತು ಕಪಿಕಟಕ ಸೇತುವೆಯನ್ನು ದಾಟಿ ಲಂಕಾದ್ವೀಪ ಸೇರುತ್ತಾರೆ. ರಾವಣನು ಶತ್ರುಪಾಳಯದ ಕಾರ್ಯಾಚರಣೆಯ ವಿಧಾನ ತಿಳಿದು ಬರಲು ಶುಕ-ಸಾರಣರೆಂಬ ಇಬ್ಬರು ಗೂಢಚರರನ್ನು ಅಟ್ಟುತ್ತಾನೆ. ಗಿಳಿಗಳಾಗಿ ಸುಳಿದಾಡುತ್ತಿದ್ದ ಇವರ ರಹಸ್ಯವರಿತ ಅಂಗದ ಇಬ್ಬರನ್ನೂ ಬಂಧಿಸಿ ರಾಮನ ಮುಂದೆ ತಂದು ನಿಲ್ಲಿಸುತ್ತಾನೆ. ರಾಮನು ಅವರನ್ನು ಮನ್ನಿಸಿ ಮಾತನಾಡುತ್ತಾನೆ. ಅವರಾದರೂ ರಾವಣನ ನಿಲುಮೆಯನ್ನು ಸಮರ್ಥಿಸಿ ಮಾತನಾಡುತ್ತಾರೆ. ಅವರ ಪ್ರಾಮಾಣಿಕತೆಗೆ ಮೆಚ್ಚಿ ಉಡುಗೊರೆ ಕೊಟ್ಟು ರಾಮ ಪಟ್ಟಣಕ್ಕೆ ಕಳುಹಿಸಿಕೊಡುತ್ತಾನೆ. ಅವರಾದರೂ ರಾವಣನಲ್ಲಿಗೆ ಬಂದು ರಾಮ ಲಕ್ಷ್ಮಣರ ಮತ್ತು ಕಪಿನಾಯಕರ ಸಾಮರ್ಥ್ಯ ವೈಭವಗಳನ್ನು ಬಣ್ಣಿಸುತ್ತಾರೆ. ಅದಕ್ಕೆ ರಾವಣ ಸಿಟ್ಟಾಗುತ್ತಾನೆ ಮತ್ತು ಕೋಟೆಯ ಮೇಲೆ ನಿಂತು ತನ್ನ ಹೆಗ್ಗಳಿಕೆಯನ್ನು ಕೊಚ್ಚಿಕೊಳ್ಳುತ್ತಾನೆ. ಆಗ ರಾಮನು ತನ್ನ ಶಸ್ತ್ರ ವಿದ್ಯಾಕೌಶಲದೊಂದಿಗೆ ಎಚ್ಚರಿಕೆ ನೀಡಲೆಂಬಂತೆ ಬಾಣವೊಂದನ್ನು ಬಿಟ್ಟು ರಾವಣನ ಬೆಳ್ಗೊಡೆಯನ್ನು ತುಂಡರಿಸುತ್ತಾನೆ. ಸುಗ್ರೀವ ಒಂದೇ ನೆಗೆತದಲ್ಲಿ ರಾವಣನ ಕಿರೀಟವನ್ನು ಕಿತ್ತು ತರುತ್ತಾನೆ. ರಾವಣನು ಇನ್ನಾದರೂ ದಾರಿಗೆ ಬಂದು ಸೀತೆಯನ್ನು ಮರಳಿಸಿದರೆ, ತಾನು ಬಂದಹಾಗೆ ಹಿಂದೆ ಹೋಗುವುದಾಗಿ ತಿಳಿಸಿ ಸಂಧಾನ ನಡೆಸಲು ಒಬ್ಬನನ್ನು ಕಳುಹಿಸೆಂದು ಸುಗ್ರೀವನಿಗೆ

ತಿಳಿಸುತ್ತಾನೆ. ಸುಗ್ರೀವ ಈ ಮಹತ್ತ್ವದ ಕೆಲಸಕ್ಕೆ ಅಂಗದನನ್ನು ಆಯುತ್ತಾನೆ. ಅಂಗದ ರಾವಣನ ಆಸ್ಥಾನ ಪ್ರವೇಶಿಸಿ ರಾವಣ ಯಾರು ಎಂದು ಕೇಳುತ್ತಾನೆ. ಪ್ರಹಸ್ತ ಅಂಗದನನ್ನು ಮಾತನಾಡಿಸಿ ಅವನ ಮೇಲೆ ರಾಜನೀತಿಯ ಹಲವು ಉಪಾಯಗಳನ್ನು ಪ್ರಯೋಗಿಸುತ್ತಾನೆ. ಕೊನೆಗೂ ರಾವಣನನ್ನು ತೋರಿಸಿದಾಗ ಅವನನ್ನು ಜರೆದು ಸೀತೆಯನ್ನು ಮರಳಿಸದಿದ್ದರೆ ಕೇಡಾದೀತೆಂದು ಎಚ್ಚರಿಸುತ್ತಾನೆ. ಕೆರಳಿದ ರಾವಣ ರಾಕ್ಷಸರಿಂದ ಹೊಡೆಸಿದಾಗ, ಕ್ರೋಧದಿಂದ ಅಂಗದ ಇದಿರಾದವರನ್ನೆಲ್ಲ ಸಂಹರಿಸುತ್ತ, ಆನೆ, ಕುದುರೆಗಳನ್ನು ಕೋಟೆಯ ಹೊರಕ್ಕೆ ಎಸೆಯುತ್ತಾನೆ. ಅಪಾಯದ ಸುಳಿವು ಸಿಕ್ಕ ರಾಮ ಹನುಮಂತನನ್ನು ಕಳುಹಿಸುತ್ತಾನೆ. ಹನುಮಂತ ಅಂಗದನ ರಕ್ಷಣೆಗೆ ಹೋಗಿ, ರಾವಣನಿಗೆ ಕೊನೆಯೆಚ್ಚರಿಕೆ ಕೊಟ್ಟು, ಅಂಗದನೊಂದಿಗೆ ಹಿಂದಿರುಗುತ್ತಾನೆ.

ಅನಂತರ ಯುದ್ಧ ಆರಂಭವಾಗುತ್ತದೆ. ರಾವಣನ ಹೊಡೆತಕ್ಕೆ ಸಿಕ್ಕಿ ಲಕ್ಷ್ಮಣ ಮೂರ್ಛಾಗತನಾಗುತ್ತಾನೆ. ರಾಮನ ಶಸ್ತ್ರಾಘಾತದಲ್ಲಿ ರಾವಣ ವಿವಸ್ತ್ರನಾಗಿ ನಾಚಿ ಹಿಮ್ಮೆಟ್ಟುತ್ತಾನೆ.

**ಬಲಿಪ ಭಾಗವತರ ಕೃತಿಗಳು**

**ಅಹಲ್ಯಾ ಶಾಪ :** ಬ್ರಹ್ಮನ ಸೃಷ್ಟಿಕಾರ್ಯದಲ್ಲಿ ಒಮ್ಮೆ ಅಪ್ರತಿಮ ರೂಪಸಿಯೊಬ್ಬಳು ಸೃಷ್ಟಿಯಾದಳು. ಅವಳೇ ಅಹಲ್ಯೆ. ಅವಳನ್ನು ಅಸಾಮಾನ್ಯ ಸಾಧಕರಿಗೇ ಕೊಡಬೇಕು ಎಂದು ವಿಧಾತನಿಗನಿಸಿತು. ಮುಹೂರ್ತವೊಂದರೊಳಗೆ ಇಳೆಯನ್ನು ಪ್ರದಕ್ಷಿಣೆಗೈದು ಬರುವವನಿಗೆ ಈ ಕನ್ಯೆ ಎಂದು ನಿಶ್ಚಯಿಸಿದನು.

ನಾರದ ದೇವೇಂದ್ರನನ್ನು ಸಮೀಪಿಸಿ ಅಹಲ್ಯೆಯಂಥ ಕನ್ಯಾರತ್ನ ಪಡೆಯಲು ನೀನೇ ಅರ್ಹ ಎಂದು ಹೇಳುತ್ತಾನೆ. ಸತ್ಯಲೋಕಕ್ಕೆ ಹೋದ ದೇವೇಂದ್ರ ವಿಧಾತನಲ್ಲಿ ಕನ್ಯೆಯನ್ನು ಕೊಡೆನ್ನಲು ಪಣದ ವಿಚಾರ ತಿಳಿಸುವನು. ಅದೇನು ತನಗೆ ದೊಡ್ಡದೆಂದು ಭೂಪ್ರದಕ್ಷಿಣೆ ಸಂಕಲ್ಪಿಸಿ ಹೊರಡುತ್ತಾನೆ.

ಇತ್ತ ನಾರದನು ಗೌತಮ ಮುನಿಯೆಡೆಗೆ ಬಂದು ಅಹಲ್ಯೆ ನಿನಗೆ ತಕ್ಕ ಸತಿಯೆಂದೂ ವಿಧಾತನಲ್ಲಿ ಕೇಳೆಂದೂ ಒತ್ತಾಯಿಸುತ್ತಾನೆ. ಗೌತಮನಿಗೂ ವಿಧಾತನದು ಅದೇ ಪಣದ ಮಾತು. ಗೌತಮ ಒಡನೆಯೆ ಕಮಂಡಲದಿಂದ ಮಂತ್ರೋದಕ ಪ್ರೋಕ್ಷಿಸಿದಾಗ ಗರ್ಭಧರಿಸಿದ ಕಪಿಲೆ ದನ ಕಾಣಿಸಿಕೊಳ್ಳುತ್ತದೆ. ಆ ದನಕ್ಕೆ ಒಂದು ಪ್ರದಕ್ಷಿಣೆಗೈದು ಗೌತಮ ಬ್ರಹ್ಮನಲ್ಲಿ ಕನ್ಯೆಯನ್ನು ಕೊಡೆಂದನು. ಧೇನುವಿಗೆ ಹಾಕಿದ ಪ್ರದಕ್ಷಿಣೆ ಭೂಮಿಗೆ ಹಾಕಿದ ಪ್ರದಕ್ಷಿಣೆಗೆ ಸಮನೆಂದು ಅಂಗೀಕರಿಸಿದ ವಿಧಾತ ಅಹಲ್ಯೆಯನ್ನು ಗೌತಮನಿಗೆ ಸತಿಯಾಗಿ ನೀಡಿದ.

ನವ ವಧೂ-ವರರು ನಿರ್ಗಮಿಸುತ್ತಲೆ ದೇವೇಂದ್ರ ಭೂ ಪ್ರದಕ್ಷಿಣೆ ಮುಗಿಸಿ ಬಂದ. ಬ್ರಹ್ಮ ನಡೆದುದನ್ನು ತಿಳಿಸಿದ. ಇಂದ್ರನಿಗೆ ಸಿಟ್ಟು ನೆತ್ತಿಗೇರಿತು. ದೇವಬಲದೊಂದಿಗೆ ಬ್ರಹ್ಮನೊಂದಿಗೆ ಯುದ್ಧ ಸಾರಿದ. ಬ್ರಹ್ಮದಂಡದೆದುರು ಪುರಂದರನ ಆಟ ಸಾಗಲಿಲ್ಲ.

ದಿಕ್ಪಾಲಕರ ಬೆಂಬಲದೊಂದಿಗೆ ಅಹಲ್ಯೆಯ ಸಂಗ ಪಡೆದೇ ಸಿದ್ಧ ಎಂದು ತೀರ್ಮಾನಿಸಿ ದೇವೇಂದ್ರ ಅವಧಿಗೆ ಮುನ್ನವೆ ಬೆಳಗಾಯಿತೆಂಬ ಭ್ರಾಂತಿ ಹುಟ್ಟಿಸಿ ಗೌತಮನನ್ನು ನದೀ ತೀರಕ್ಕೆ ಸಾಗಹಾಕುತ್ತಾನೆ. ಗೌತಮನ ರೂಪಧರಿಸಿ ಆಶ್ರಮದ ಒಳಹೊಕ್ಕು ಅಹಲ್ಯೆಯನ್ನು ವಶಪಡಿಸಿಕೊಳ್ಳುತ್ತಾನೆ. ಗೌತಮ ಗಲಿಬಿಲಿಗೊಂಡು ಆಶ್ರಮಕ್ಕೆ ಮರಳಿದಾಗ ಒಳಗೊಬ್ಬ ಇರುವುದು ಗೊತ್ತಾಗುತ್ತದೆ. ಗೌತಮ ಕುದಿದು ಕೆಂಡವಾಗುತ್ತಾನೆ. ಅಹಲ್ಯೆ ಕಲ್ಲಾಗಿ ಬಿದ್ದುಕೊಂಡಿರೆಂದು ಶಾಪ ಕೊಡುತ್ತಾನೆ. ಇಂದ್ರನಿಗೆ ಮೈಯಲ್ಲೆಲ್ಲ ಯೋನಿಗಳಾಗಲಿ ಎಂದು ಶಪಿಸುತ್ತಾನೆ. ಇಬ್ಬರೂ ಅಂಗಲಾಚಿದಾಗ, ಅಹಲ್ಯೆಗೆ ರಾಮನ ಚರಣ ಸ್ಪರ್ಶದಲ್ಲಿ ಶಾಪ ವಿಮೋಚನೆ ಎಂದ. ಇಂದ್ರನ ಯೋನಿಗಳು ಇತರರಿಗೆ ಕಣ್ಣುಗಳಂತೆ ಕಾಣಲಿ ಎಂದು ಪ್ರತಿಶಾಪವಿತ್ತ. ಆದರೆ ಇಂದ್ರನಿಗೆ ಅನ್ಯಾಯವೆಸಗಲು ಬೆಂಬಲವಾದ ದೇವತೆಗಳಲ್ಲಿ ಅಗ್ನಿಗೆ

ಸರ್ವಭಕ್ಷಕನಾಗೆಂದೂ, ಮರುತನಿಗೆ ಎಲ್ಲೂ ನಿಲ್ಲದೆ ಚಲಿಸುತ್ತಲೆ ಇರೆಂದೂ, ವರುಣನಿಗೆ ಉಲ್ಲಾಸವಡಗಿ ಕಂಪಿಸುತ್ತಿರು ಎಂದೂ ಶಪಿಸಿದ. ಹೀಗೆ ನಾರದನ ಬಯಕೆಯಂತೆ ದೇವೇಂದ್ರ ಮತ್ತು ದೇವತೆಗಳ ಗರ್ವಾಪಹಾರವಾಗುತ್ತದೆ.

**ವಾನರಾಭ್ಯುದಯ :** ಸೃಷ್ಟಿಕಾರ್ಯದಲ್ಲಿದ್ದ ಬ್ರಹ್ಮದೇವನು ಕಮಂಡಲದ ಜಲವನ್ನು ಪ್ರೋಕ್ಷಿಸಿದಾಗ ಅದ್ಭುತ ಚೇತನವೊಂದು ಉದಿಸಿಬಂತು. ಬ್ರಹ್ಮನ ಪ್ರೋಕ್ಷಣೆಯಲ್ಲಿ ಜ್ಞಾನಗಳಿಸಿದ ಆತನಿಗೆ ಋಕ್ಷ ಎಂಬ ಹೆಸರಾಯಿತು. ಹಿಂದೆ ಕಿಷ್ಕಿ ಎಂಬ ವಾನರರಾಜ ಪಾಲಿಸಿದ ಕಿಷ್ಕಿಂಧೆಗೆ ನೀನಿನ್ನು ಅರಸ ಎಂದು ವಿಧಾತ ನೇಮಿಸಿದ. ಜಾಂಬವನು ಅವನ ಮಂತ್ರಿಯೆಂದೂ ನೇಮಿಸಿದ.

ಸಂತಾನಾರ್ಥಿಯಾಗಿ ಋಕ್ಷ ಪಂಪಾತೀರದಲ್ಲಿ ಶಿವನನ್ನು ಕುರಿತು ತಪಸ್ಸು ಆರಂಭಿಸುತ್ತಾನೆ. ಶಿವ ಪ್ರತ್ಯಕ್ಷನಾಗಲಿಲ್ಲವೆಂದು ಮರುದಿವಸ ಸ್ನಾನಕ್ಕಾಗಿ ಸರೋವರವೊಂದಕ್ಕೆ ಇಳಿದು ಮೇಲಕ್ಕೆ ಏರಿದಾಗ ಋಕ್ಷನಿಗೆ ಹೆಣ್ತನ ಪ್ರಾಪ್ತಿಸಿತ್ತು. ಅಷ್ಟರಲ್ಲಿ ಶಿವಪೂಜೆಗಾಗಿ ಅಲ್ಲಿಗೆ ಬಂದ ದೇವೇಂದ್ರ ಆಕೆಯ ರೂಪಕ್ಕೆ ಮನಸೋತು ಆ ವಾನರಿಯ ಬಾಲದ ಕಡೆಯಿಂದ ಮಗುವೊಂದು ಜನಿಸಲು ಕಾರಣನಾಗುತ್ತಾನೆ. ಹಾಗೆಯೆ ಸೂರ್ಯದೇವ ಆಕೆಯ ಗ್ರೀವದಲ್ಲಿ ಶಿಶು ಗಳಿಸುತ್ತಾನೆ. ಹೀಗೆ ಜನಿಸಿದ ಇಂದ್ರಕುಮಾರನೇ ವಾಲಿ. ಸೂರ್ಯ ನಂದನನೇ ಸುಗ್ರೀವ. ಆದರೆ ತನಗಾದ ಸ್ಥಿತಿಗಾಗಿ ಕಳವಳಗೊಂಡು ಪ್ರಾಣತ್ಯಾಗ ಮಾಡುವುದಾಗಿ ತಿಳಿಗೊಳಕ್ಕೆ ಧುಮುಕಿದಾಗ ಋಕ್ಷ ತನ್ನ ಮೊದಲಿನ ಧ್ಯಾನಾಸಕ್ತ ಪುರುಷನ ರೂಪವನ್ನು ಮರಳಿ ಪಡೆದುಕೊಳ್ಳುತ್ತಾನೆ.

ಅಷ್ಟರಲ್ಲಿ ಶಿವ ಪ್ರತ್ಯಕ್ಷನಾಗಿ ಇವರನ್ನು ಸಲಹೆಂದೂ ನಿನ್ನ ಪ್ರಿಯತಮೆಯಾದ ಋಕ್ಷಿಯಲ್ಲಿ ಕುವರಿಯೊಬ್ಬಳು ಹುಟ್ಟುವಳೆಂದೂ ಅವಳಲ್ಲಿ ಲೋಕೋತ್ತರ ವಿಷ್ಣು ಭಕ್ತನೋರ್ವ ಉದಿಸುವನೆಂದೂ ಹರಸುತ್ತಾನೆ. ಅದರಂತೆ ಜನಿಸಿದವಳೇ ಅಂಜನಾದೇವಿ. ಇವಳಿಗೆ ಯೌವನವು ಕೂಡಿ ಬರಲು ವಾನರ ವೀರನಾದ ಕೇಸರಿಗೆ ಮದುವೆ ಮಾಡಿಕೊಡುತ್ತಾನೆ. ಈ ನವವಧೂವರರು ಫಲಪುಷ್ಪಭರಿತ ಕಾಂತಾರದಲ್ಲಿ ವಿಹರಿಸುತ್ತ ಬಗೆ ಬಗೆಯ ರೂಪಗಳನ್ನು ಧರಿಸಿ ಸ್ಮರಹತಿಗೆ ಉಪಶಮನ ಮಾಡಿಕೊಳ್ಳುತ್ತ ಲತಾಕುಂಜವೊಂದರಲ್ಲಿ ಮಲಗಿ ದಣಿವಾರಿಸುತ್ತಿದ್ದಾಗ, ವಾಯುದೇವನು ಅಂಜನೆಯಲ್ಲಿ ಅನುರಕ್ತನಾಗಿ ಸಿದ್ಧ ಯೋಗವಿಧಾನದಲ್ಲಿ ಆಕೆಯನ್ನು ಸೇರಿ ಮಾರುತಿಯ ಹುಟ್ಟಿಗೆ ಕಾರಣನಾದನು. ತತ್ಕ್ಷಣ ಹುಟ್ಟಿಬಂದು ತನ್ನನ್ನು ಎಬ್ಬಿಸಿದ ಮಗುವನ್ನು ಕಂಡ ಅಂಜನೆ ಅಚ್ಚರಿ, ಸಂಭ್ರಮಗಳಿಂದ ಮುದ್ದಿಸಿ ಫಲಗಳನ್ನು ತಂದುಕೊಡುವುದಾಗಿ ಹೇಳಿ ಕಾಡನ್ನು ಸುತ್ತತೊಡಗಿದಳು. ಅಷ್ಟರಲ್ಲಿ ಸೂರ್ಯನು ಕೆಂಪಗೆ ಕಾಣಿಸಿಕೊಂಡಾಗ ಅದು ಹಣ್ಣೆಂದು ಭ್ರಮಿಸಿ ಅದರೆಡೆಗೆ ನೆಗೆದ. ತನ್ನನ್ನು ಈ ವಾನರ ತಿನ್ನಬರುತ್ತಾನೆಂದು ಹೆದರಿ ಸೂರ್ಯ ದೇವೇಂದ್ರನಿಗೆ ದೂರುಕೊಟ್ಟ. ಇಂದ್ರ ವಜ್ರಾಯುಧದಿಂದ ಮಾರುತಿಯ ಕೆನ್ನೆಗೆ ಬೀಸಿದ. ಪ್ರಾಣವಡಗಿ ಬಾಲಕ ಧರೆಗೆ ಬಿದ್ದ. ವಾಯು ಹಿಮಾಲಯದ ಗಹ್ವರದಲ್ಲಿ ಅಡಗಿ ಸಿಟ್ಟು ತೋರ್ಪಡಿಸಿದಾಗ, ಎಲ್ಲ ದೇವತೆಗಳೂ ತ್ರಿಮೂರ್ತಿಗಳೂ ಬಾಲಕನೆಡೆಗೆ ಬಂದು ಅವನನ್ನು ಬದುಕಿಸಿ ವಿವಿಧ ವರಗಳಿಂದ ಅವನನ್ನು ದೈವೀ ವ್ಯಕ್ತಿಯನ್ನಾಗಿ ಮಾಡುತ್ತಾರೆ. ವಾಯು ಪ್ರಸನ್ನನಾಗಿ ಲೋಕದಲ್ಲಿ ಪಸರಿಸುತ್ತಾನೆ. ಬಾಲಕನ ಅತಿಶಕ್ತಿ, ಎಳಸುತನದಲ್ಲಿ ಅದರ ಪ್ರಯೋಗವನ್ನು ಕಂಡು ಮುನಿಗಳು ಅವನಿಗೆ ಸ್ವಸಾಮರ್ಥ್ಯದ ಅರಿವಾಗದಿರಲೆಂದು ಹೇಳುತ್ತಾರೆ.

ತಾಯಿ ಅಂಜನೆ ಅವನಿಗೆ ಕುಂಡಲವೊಂದನ್ನು ಕಿವಿಗೆ ತೊಡಿಸಿ ಇದರ ಗುರುತು ಹಿಡಿಯುವವನೇ ನಿನ್ನ ಸ್ವಾಮಿ, ರಾಮಾವತಾರದಲ್ಲಿ ಶ್ರೀಹರಿ ಬಂದಾಗ ಆತ ಯಾರಿಗೂ ಕಾಣಿಸದ ಕರ್ಣಕುಂಡಲವನ್ನು ಕಂಡುಕೊಳ್ಳುತ್ತಾನೆ. ಆಗ ನಿನಗೆ ಸ್ವಸಾಮರ್ಥ್ಯ ಪುನಃ ಲಭ್ಯವಾಗುತ್ತದೆ ಎನ್ನುತ್ತಾಳೆ.

ಇತ್ತ ಮಹಿಷಾಸುರನ ಪುತ್ರನಾದ ದುಂದುಭಿಯ ಮಗ ಮಾಯಾವಿ ಇಂದ್ರನನ್ನು ಯುದ್ಧದಲ್ಲಿ ಸೋಲಿಸಿ ದೇವಲೋಕದಿಂದ ಹೊರಗೋಡಿಸುತ್ತಾನೆ. ಭೂಲೋಕಕ್ಕೆ ಬರುತ್ತ ಋಕ್ಷನ ಉದ್ಯಾನಕ್ಕೆ ರಥ ಇಳಿದಾಗ, ಅಲ್ಲಿ ಮಾಯಾವಿ ಅಂಜನೆಯನ್ನು ಕಂಡು ಆಕೆಯನ್ನು ಬಯಸುತ್ತಾನೆ. ವಿರೋಧಿಸಿದ ಅಂಜನೆಯನ್ನು ಹಿಡಿದೊಯ್ಯುವಾಗ ಕೇಸರಿ ಇದಿರಾಗುತ್ತಾನೆ. ಹೋರಾಟದಲ್ಲಿ ಕೇಸರಿ ಮೂರ್ಛೆಗೆ

ಸರಿಯುತ್ತಾನೆ. ಅಂಜನೆಯ ಕೂಗು ಕೇಳಿ ಸುಗ್ರೀವ ಮತ್ತು ವಾಲಿ ಧಾವಿಸಿ ಬರುತ್ತಾರೆ. ವಾಲಿಯ ಹೊಡೆತದಿಂದ ಮಾಯಾವಿ ಮೂರ್ಛಿತನಾಗುತ್ತಾನೆ. ವಾಲಿ ಅಂಜನೆಯನ್ನು ಕೇಸರಿಯ ವಶಕ್ಕೆ ಕೊಡುತ್ತಾನೆ.

ಪ್ರಜ್ಞೆ ತಿಳಿದ ಮಾಯಾವಿ ಮತ್ತೆ ವಾಲಿಯನ್ನೆದುರಿಸಿ ಕತ್ತಲಲ್ಲಿ ತನಗೆ ಗೆಲವು ಸುಲಭವೆಂದು ಗುಹೆಯೊಂದನ್ನು ಹೊಗುತ್ತಾನೆ. ತಾನು ರಾಕ್ಷಸನನ್ನು ವಧಿಸಿ ಬರುವವರೆಗೆ ಹೊರಗೆ ಕಾಯಿ ಎಂದು ಸುಗ್ರೀವನಲ್ಲಿ ಹೇಳಿ ವಾಲಿ ಗುಹೆಯನ್ನು ಪ್ರವೇಶಿಸುತ್ತಾನೆ. ಕತ್ತಲಲ್ಲಿ ಘೋರ ಕಾದಾಟವುಂಟಾಗುತ್ತದೆ. ದುಷ್ಟರು ಸಾಯುವಾಗಲೂ ಅಪಕಾರವನ್ನೆ ಮಾಡುವರೆಂಬಂತೆ, ಪ್ರಾಣ ಬಿಡುತ್ತ ಮಾಯಾವಿ, ಹಾ ತಮ್ಮ ಸುಗ್ರೀವ ಉಳಿವಿಲ್ಲ ಎನ್ನುತ್ತಾನೆ. ಇದು ಹೊರಗೆ ಕಾದಿದ್ದ ಸುಗ್ರೀವನಿಗೆ ಕೇಳಿ ವಾಲಿ ಪ್ರಾಣಬಿಟ್ಟನೆಂದು ತಿಳಿಯುತ್ತಾನೆ. ಇನ್ನು ರಾಕ್ಷಸ ಹೊರಬಾರದಿರಲೆಂದು ಬಿಲದ ದ್ವಾರಕ್ಕೆ ಪರ್ವತವೊಂದನ್ನು ಕಿತ್ತು ಜಡಿದು ಮುಚ್ಚೆಬಿಡುತ್ತಾನೆ. ದುಃಖದೊಂದಿಗೆ ಮರಳಿ ಎಲ್ಲವನ್ನೂ ಜಾಂಬವಾದಿಗಳಿಗೆ ಹೇಳುತ್ತಾನೆ. ಅವರ ಅಭಿಮತದಂತೆ, ರುಮೆ-ತಾರೆ ಸಹಿತ ವಾಲಿಯ ಸಮಸ್ತ ಅಧಿಕಾರವನ್ನು ತಾನೆ ವಹಿಸಿಕೊಳ್ಳುತ್ತಾನೆ.

ಬಿಲದಲ್ಲಿ ದ್ವಾರವನ್ನು ಹುಡುಕುತ್ತ ಕೊನೆಗೂ ಬಂಧಿಸಿದ ದ್ವಾರವನ್ನು ನೂಕಿ ಬಿಡಿಸಿ ಹೊರಬಂದ ವಾಲಿ ಸಿಟ್ಟಿನಿಂದ ಕುದಿದು ಒಂದೆ ನೆಗೆತದಲ್ಲಿ ಸುಗ್ರೀವನ ಬಳಿ ಸೇರಿ ರುಮೆ, ತಾರೆಯರೊಂದಿಗಿರುವುದನ್ನು ಕಂಡು, ಬೆಂಕಿಗೆ ತುಪ್ಪ ಸುರಿದಂತೆ, ಉರಿದು ಸುಗ್ರೀವನನ್ನು ಹೊಡೆದು ಓಡಿಸುತ್ತಾನೆ. ರುಮೆಯನ್ನು ತಾರೆಯೊಂದಿಗೆ ತನ್ನ ಬಳಿ ಉಳಿಸಿಕೊಳ್ಳುತ್ತಾನೆ. ನೀತಿ ಹೇಳಿದ ಜಾಂಬವಾದಿಗಳನ್ನು ಜರೆಯುತ್ತಾನೆ.

ಮಾಯಾವಿ ಅಳಿದ ವಾರ್ತೆಗೆ ಕಿಡಿಕಿಡಿಯಾದ ಆತನ ತಂದೆ ದುಂದುಭಿ ಇಂದ್ರನಲ್ಲಿಗೆ ಹೋಗಿ ಬೆದರಿಸಿ, ಯಾರಿಂದ ವಧೆಯಾಯಿತೆಂದು ಕೇಳಿದಾಗ, ಹಿಮವಂತನಿಗೆ ಮಾತ್ರ ಅದು ತಿಳಿಯುವುದೆಂದನು. ಹಿಮವಂತ ಸಮುದ್ರರಾಜನನ್ನೂ ಸಮುದ್ರ ಸೂರ್ಯನನ್ನೂ ತೋರಿದಾಗ, ಸೂರ್ಯ ಮಾಯಾವಿಯ ಅಳಿವು ವಾಲಿಯಿಂದಾದುದನ್ನು ತಿಳಿಸುತ್ತಾನೆ. ದುಂದುಭಿ ಕಿಷ್ಕಂಧೆಗೆ ಧಾವಿಸಿ ಬರುತ್ತಾನೆ. ದುಂದುಭಿ-ವಾಲಿಯರ ಸಮರದಲ್ಲಿ ನೆಲ ನಡುಗುತ್ತದೆ. ಕೊನೆಗೂ ಅವನ ತಲೆಯ ಕೋಡುಗಳನ್ನು ಹಿಡಿದು ತಿರುಗಿ ಬೀಸಿ ಎಸೆದಾಗ ಅವನ ರಕ್ತವು ಮತಂಗಾಶ್ರಮಕ್ಕೆ ಬೀಳುವುದು. ದುಂದುಭಿ ಮಡಿದರೂ, ಮತಂಗ ಮುನಿ ಸಿಟ್ಟಾಗಿ, ಯಾರಿಂದ ರಕ್ತ ಋಷ್ಯಮೂಕದ ಮತಂಗಾಶ್ರಮಕ್ಕೆ ಬಿತ್ತೊ, ಅವನು ಇಲ್ಲಿಗೆ ಪ್ರವೇಶಿಸಿದರೆ ಸಾವಿಗೀಡಾಗಲೆಂದು ಶಪಿಸುತ್ತಾನೆ. ಹೀಗೆ ಮುಂದೆ ಸುಗ್ರೀವನಿಗೆ ಋಷ್ಯಮೂಕ ಪರ್ವತ ಸುರಕ್ಷಿತವಾಗುತ್ತದೆ. ತನ್ನನ್ನು ಕೆಣಕಲು ಬಂದ ರಾವಣನನ್ನು ಕಂಕುಳಲ್ಲಿ ಅಮುಕಿ ಹಿಡಿದು ವಾಲಿ ಸಪ್ತಸಾಗರಗಳಿಗೆ ಲಂಘಿಸಿ, ಬಳಲಿಸಿ ತನ್ನ ಮಗ ಅಂಗದನ ತೊಟ್ಟಿಲ ಸರಪಣಿಗೆ ಆಟಿಕೆ ಗೊಂಬೆಯಾಗಿ ಕಟ್ಟುತ್ತಾನೆ. ಪೌಲಸ್ತ್ಯನ ಮಾತಿಗಾಗಿ ರಾವಣನ ಬಿಡುಗಡೆಯಾಗುತ್ತದೆ.

**ಗೇರೆಸೊಪ್ಪೆ ಶಾಂತಪ್ಪಯ್ಯನ ಕೃತಿ**

**ಪುತ್ರಕಾಮೇಷ್ಟಿ – ಸೀತಾಸ್ವಯಂವರ :** ಕಥೆ ದಶರಥನಿಗೆ ದೇವಲೋಕದ ದೂತರ ಮೂಲಕ ಶಂಬರಾಸುರ ವಧೆಗೆ ಆಹ್ವಾನ ನೀಡುವಲ್ಲಿ ತೊಡಗುತ್ತದೆ. ದಶರಥ ಕೈಕೆಯೊಂದಿಗೆ ದೇವಲೋಕಕ್ಕೆ ಹೋಗುತ್ತಾನೆ. ಶಂಬರಾಸುರನೊಡನೆ ಉಗ್ರ ಕದನವಾಗುತ್ತದೆ. ಶಂಬರ ಕಾಲಕೇಯರ ಪುರಕ್ಕೆ ಸರಿಯುತ್ತಾನೆ. ದಶರಥ ಅಲ್ಲಿಗೂ ಬೆನ್ನಟ್ಟುತ್ತಾನೆ. ಅಲ್ಲಿ ಭೀಕರ ಅಂಧಕಾರ ಕವಿದು ದಶರಥ ಕಂಗೆಡುತ್ತಾನೆ. ಆಗ ಪಕ್ಷಿರಾಜ ಸಂಪಾತಿ ತನ್ನ ರೆಕ್ಕೆಗಳನ್ನೆತ್ತಿ ರತ್ನಪ್ರಭೆ ಹರಿಸಿ ಬೆಳಗಿಸುತ್ತಾನೆ. ಯುದ್ಧ ಸಾಗುತ್ತಿರುವಂತೆ ದಶರಥನ ರಥದ ಕೀಲು ಕಳಚುತ್ತದೆ. ಒಡನೆ ಕೈಕೇಯಿ ತನ್ನ ಕೈ ಕಂಕಣ, ಕಡಗಗಳಿಂದ ಕೀಲು ತೂರಿ ಪತಿಯು ಯುದ್ಧ ನಿರಾತಂಕಗೊಳಿಸುತ್ತಾಳೆ. ಶಂಬರ ನಿರ್ನಾಮವಾಗುತ್ತಾನೆ. ಪತ್ನಿಯ ಸಹಾಯಕ್ಕೆ ಹರುಷಗೊಂಡ ದಶರಥ ಎರಡು ವರಗಳನ್ನು ನೀಡುತ್ತಾನೆ. ಬೇಕಾದಾಗ ತಾನು ಕೇಳಿಕೊಳ್ಳುವೆ ಎಂದು ಕೈಕೇಯಿ ಅನ್ನುತ್ತಾಳೆ.

ರಾವಣನ ಉಪಟಳ ಸಹಿಸಲಾರದೆ ದೇವತೆಗಳು ಮಹಾವಿಷ್ಣುವಿನ ಮರೆಹೊಗುತ್ತಾರೆ. ವಿಷ್ಣು ತಾನು ದಶರಥನಿಗೆ ಮಗನಾಗಿ ಜನಿಸಿ ರಾಕ್ಷಸಬಾಧೆ ತೊಲಗಿಸುವುದಾಗಿ ಭರವಸೆ ನೀಡುತ್ತಾನೆ. ಮಾಯೆ ಮಂಥರೆಯಾಗಿ ದಶರಥನ ರಾಣೀವಾಸವನ್ನು ಸೇರುತ್ತಾಳೆ. ದೇವತೆಗಳು ವಾನರವಂಶದಲ್ಲಿ ಹುಟ್ಟಿ ಬರುತ್ತಾರೆ. ಮೃಗಬೇಟೆಗೆ ಹೋದ ದಶರಥನಿಗೆ ಶ್ರಮಣನ ಶಾಪವುಂಟಾಗುತ್ತದೆ. ಬಹುಕಾಲ ಸಂತತಿ ಕಾಣದ ದಶರಥನಿಗೆ ಆ ಶಾಪ ಅನುಗ್ರಹವೆಂದೇ ತೋರುತ್ತದೆ.

ವಸಿಷ್ಠನ ಆದೇಶದಂತೆ ಋಷ್ಯಶೃಂಗನ ನೇತೃತ್ವದಲ್ಲಿ ದಶರಥನ ಪುತ್ರಕಾಮೇಷ್ಟಿ ನಡೆಯುತ್ತದೆ. ಮೊದಲು ಅಶ್ವಮೇಧ ಯಾಗ ನಡೆಯುತ್ತದೆ. ಯಜ್ಞದಿಂದ ದೇವತೆಗಳಿಗೆ ತೃಪ್ತಿಯಾಗುತ್ತದೆ. ದಶರಥನ ರಾಣಿಯರು ಗರ್ಭವತಿಯರಾಗುತ್ತಾರೆ. ಕೌಸಲ್ಯೆಗೆ ರಾಮನೂ, ಕೈಕೆಯಿಗೆ ಭರತನೂ, ಸುಮಿತ್ರೆಗೆ ಅವಳಿ ಮಕ್ಕಳಾದ ಲಕ್ಷ್ಮಣ-ಶತ್ರುಘ್ನರೂ ಜನಿಸುತ್ತಾರೆ. ವಸಿಷ್ಠಾಶ್ರಮದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವಾಗುತ್ತದೆ.

ವಿಶ್ವಾಮಿತ್ರ ಮಹರ್ಷಿ ಬಂದು ಯಾಗಕ್ಕೆ ಆಗುವ ರಾಕ್ಷಸರ ಉಪಟಳ ನೀಗಲು ರಾಮ ಲಕ್ಷ್ಮಣರನ್ನು ಕೊಟ್ಟು ಕಳುಹಿಸಲು ಕೇಳುತ್ತಾನೆ. ಒಲ್ಲದ ಮನಸ್ಸಿನ ದಶರಥ ವಸಿಷ್ಠನ ಹೇಳಿಕೆಯಂತೆ ಕಳುಹಿಸುತ್ತಾನೆ. ವಿಶ್ವಾಮಿತ್ರರಿಂದ ಇವರಿಗೆ ಮಂತ್ರಾಸ್ತ್ರಗಳ ಪ್ರದಾನವಾಗುತ್ತದೆ. ರಾಮನಿಂದ ತಾಟಕೆ, ಸುಬಾಹುಗಳ ವಧೆಯಾಗುತ್ತದೆ. ಕಟಪ ದ್ವಿಜರೂಪದಲ್ಲಿ ಬಂದ ಮಾರೀಚ ವಿಶ್ವಾಮಿತ್ರನಿಂದ ಗುರುತಿಸಲ್ಪಟ್ಟು, ರಾಮನ ಅನಿಲಶರಕ್ಕೆ ಸಿಕ್ಕಿ ದ್ವೀಪಾಂತರಕ್ಕೆ ತಳ್ಳಿಹೋಗುತ್ತಾನೆ. ವಿಶ್ವಾಮಿತ್ರನ ಯಾಗ ಸಾಂಗವಾಗಿ ನಡೆಯುತ್ತದೆ.

ಮಿಥಿಲೆಯ ಜನಕಮಹಾರಾಜ ಯಾಗಕ್ಕಾಗಿ ನೆಲಗೀರಿದಾಗ ರತ್ನಖಚಿತ ಪೆಟ್ಟಿಗೆ ನೇಗಿಲಿಗೆಸಿಕ್ಕಿ ಮೇಲೇಳುತ್ತದೆ. ಅದರಲ್ಲಿ ಸೀತೆ ಇದ್ದಳು. ಅವಳನ್ನು ತನ್ನ ಕುವರಿಯಾಗಿ ಆತ ಪಾಲಿಸುತ್ತಾನೆ. ಯಾಗಕ್ಕೆ ಬರಲು ಜನಕಮಹಾರಾಜ ವಿಶ್ವಾಮಿತ್ರರಿಗೆ ಕರೆಕಳುಹಿಸುತ್ತಾನೆ. ಮಿಥಿಲೆಗೆ ಹೋಗುವ ದಾರಿಯಾಗಿ ವಿಶ್ವಾಮಿತ್ರರೊಂದಿಗಿದ್ದ ರಾಮನ ಚರಣಸ್ಪರ್ಶದಿಂದ ಕಲ್ಲಾಗಿದ್ದ ಅಹಲ್ಯೆ ಪೂರ್ವರೂಪ ಹೊಂದುತ್ತಾಳೆ. ಗೌತಮ ಋಷಿ ರಾಮನನ್ನು ಸ್ತುತಿಸಿ ಅಹಲ್ಯೆಯನ್ನು ಸ್ವೀಕರಿಸುತ್ತಾನೆ.

ಮಿಥಿಲೆಯಲ್ಲಿ ಶಿವಧನಸ್ಸನ್ನೆತ್ತಿ ಹೆದೆಯೇರಿಸಿದವರಿಗೆ ಸೀತೆಯನ್ನು ವಿವಾಹದಲ್ಲಿ ನೀಡುವುದಾಗಿ ಜನಕ ಸ್ವಯಂವರ ಏರ್ಪಡಿಸುತ್ತಾನೆ. ರಾವಣನು ಬಿಲ್ಲನ್ನೆತ್ತಲು ಶ್ರಮಿಸಿ ಬಿದ್ದು ಅವಮಾನಿತನಾಗಿ ನಿರ್ಗಮಿಸುತ್ತಾನೆ. ರಾಮ ಬಿಲ್ಲನ್ನೆತ್ತಿ ಬಾಗಿಸಿದಾಗ ಕಬ್ಬಿನ ಜಲ್ಲೆಯಂತೆ ಅದು ಮುರಿದು ಬೀಳುತ್ತದೆ. ಸೀತೆ ರಾಮನಿಗೆ ವರಣಮಾಲೆ ಇಕ್ಕುತ್ತಾಳೆ. ರಾಮ-ಸೀತೆ, ಭರತ-ಮಾಂಡವಿ, ಲಕ್ಷ್ಮಣ-ಊರ್ಮಿಳೆ, ಶತುಘ್ನ-ಶ್ರುತಕೀರ್ತಿ ವಿವಾಹೋತ್ಸವಕ್ಕೆ ಭೂಖಂಡದ ಎಲ್ಲೆಲ್ಲಿಂದ ವಿಪ್ರರು ಬರುತ್ತಾರೆ. ಹಿಂದೂಸ್ತಾನಿ, ಮರಾಠಿ, ತುಳು, ಕೊಂಕಣಿ, ಹೈಗ (ಕನ್ನಡ) ಭಾಷಿಗ ವಿಪ್ರರು ತಮ್ಮ ಮಾತೃಭಾಷೆಯಲ್ಲಿ ಮಾತನಾಡುತ್ತಾರೆ. ವೃದ್ಧ ವಿಪ್ರನೊಬ್ಬ ಉಂಡು ಕೈತೊಳೆಯಲು ಬರುವಾಗ ಮಂಥರೆ ಆತನ ಕೌಪೀನ ಸೆಳೆದು ಗೇಲಿ ಮಾಡಿ ರಾಮನಿಂದ ದಂಡಿಸಲ್ಪಡುತ್ತಾಳೆ. ಮಂಥರೆ ರಾಮನೊಂದಿಗೆ ಹಗೆಕಟ್ಟಿಕೊಳ್ಳುತ್ತಾಳೆ. ದಶರಥ ಸಪರಿವಾರವಾಗಿ ಅಯೋಧ್ಯೆಗೆ ಮರಳುವಾಗ ಪರಶುರಾಮ ಅಡ್ಡಗಿಸುತ್ತಾನೆ. ರಾಮನಿಂದ ಅವನ ಗರ್ವಾಪಹಾರವಾಗುತ್ತದೆ.

**ಸಾರಡ್ಕ ಶಂಭಟ್ಟರ ಕೃತಿಗಳು**

***ದಶರಥೋತ್ಪತ್ತಿ: ಸುಮಿತ್ರಾ ಸ್ವಯಂವರ :*** ಅಯೋಧ್ಯೆಯಲ್ಲಿ ಅಜಮಹಾರಾಜನ ರಾಜ್ಯಭಾರ. ನಾರದರ ಸಾಂತ್ವನದಿಂದ ಅವನಿಗೆ ಸಂತತಿಯಿಲ್ಲದ ಕೊರಗು ಪರಿಹಾರ. ಕಾಲಾಂತರದಲ್ಲಿ ಇಂದುಮತಿಯಲ್ಲಿ ದಶರಥನ ಜನನ. ಕೋಸಲ ರಾಜ ಪ್ರತೀಪನಿಗೆ ಮಗಳಾಗಿ ಕೌಸಲ್ಯೆ ಜನಿಸುತ್ತಾಳೆ. ಕೌಸಲ್ಯೆಯನ್ನು ದಶರಥನಿಗೆ ಕೊಟ್ಟು ವಿವಾಹ ನಡೆಸಲು ಪ್ರತೀಪ ನಿಶ್ಚಯಿಸುತ್ತಾನೆ. ಇದನ್ನು ಕೇಳಿ ಸಿಟ್ಟುಗೊಂಡ ಅವನ ಅಳಿಯ ಪಾಂಡ್ಯದೇಶದ ದೊರೆ ಚಂದ್ರಸೇನ ಪ್ರತೀಪನಲ್ಲಿ ಯುದ್ಧಕ್ಕೆ ನಿಲ್ಲುತ್ತಾನೆ, ಸೋಲುತ್ತಾನೆ. ದಶರಥ – ಕೌಸಲ್ಯೆಯರ ವಿವಾಹವಾಗುತ್ತದೆ.

ಚಂದ್ರಸೇನ ತನ್ನ ಗೆಳೆಯ ಕೃಷ್ಣ ಭೂಪನನ್ನು ಕಾಣಲು ವಂಗದೇಶಕ್ಕೆ ಬರುತ್ತಾನೆ. ಗೆಳೆಯನ ಪಕ್ಷ ಹಿಡಿದು ಕೃಷ್ಣಭೂಪ ಪ್ರತೀಪನಲ್ಲಿಗೆ ಯುದ್ಧಕ್ಕೆ ಹೋಗುತ್ತಾನೆ. ಪ್ರತೀಪ ಸೋತಾಗ ಅಜ ಮಹಾರಾಜ ಬಂದು ಕೃಷ್ಣಭೂಪನನ್ನು ಸದೆದು, ಪತೀಪನಿಗೆ ರಾಜ್ಯಾಧಿಕಾರ ಸ್ಥಿರಗೊಳಿಸುತ್ತಾನೆ. ಆದರೆ ಪ್ರತೀಪ ತನ್ನ ರಾಜ್ಯ (ಕೋಸಲ)ದ ಪಟ್ಟಾಧಿಕಾರವನ್ನು ಅಳಿಯ ದಶರಥನಿಗೆ ಬಳುವಳಿಯಾಗಿ ನೀಡುತ್ತಾನೆ. ಹೀಗೆ ದಶರಥ ಕೋಸಲೇಶನಾದ. ಅಜ ದಶರಥನಿಗೆ ಅಯೋಧ್ಯೆಯ ಪಟ್ಟಕಟ್ಟಿ ವಾನಪ್ರಸ್ಥಕ್ಕೆ ಸರಿಯುತ್ತಾನೆ. ಮಿತ್ರನ ಅಂತ್ಯದಿಂದ ದುಃಖತಪ್ತನಾದ ಚಂದ್ರಸೇನ ಶಿವನನ್ನು ಕುರಿತು ತಪವನ್ನಾಚರಿಸುತ್ತಾನೆ.

ಇತ್ತ ರಾವಣನಿಗೆ ಹರಿಯು ದಶರಥನ ಆತ್ಮಜನಾಗಿ ಹುಟ್ಟಿಬರುವ ವಿಚಾರ ಬ್ರಹ್ಮನಿಂದ ತಿಳಿಯುತ್ತದೆ. ರಾವಣ ಸೇನೆ ಕೂಡಿಸಿ ಅಯೋಧ್ಯೆಗೆ ದಂಡೆತ್ತಿ ಬಂದು ಯುದ್ಧದಲ್ಲಿ ದಶರಥನನ್ನು ಮೂರ್ಛೆಗೊಳಿಸಿ ಕೌಸಲ್ಯೆಯನ್ನು ವಶಪಡಿಸಿ ಲಂಕೆಗೆ ತರುತ್ತಾನೆ. ಅವಳನ್ನು ಪೆಟ್ಟಿಗೆಯೊಂದರಲ್ಲಿ ಬಂಧಿಸಿ ಅದನ್ನು ತಿಮಿಂಗಿಲದ ಬಾಯಿಗೆ ಹಾಕಿ ಸಮುದ್ರಕ್ಕೆ ಬಿಡುತ್ತಾನೆ.

ಕೇಕಯ ರಾಜ್ಯದ ಪದ್ಮಾಕ್ಷ್ಯ ಭೂಪತಿಯ ಮಗಳು ಕೈಕೇಯಿ ವನಕೇಳಿಯಲ್ಲಿರುವಾಗ ಮೃಗ ಬೇಟೆಗಾಗಿ ಬಂದ ದಶರಥನಿಗೆ ಕಾಣಿಸಿಕೊಳ್ಳುತ್ತಾಳೆ. ಪರಸ್ಪರ ಅನುರಾಗ ಮೂಡುತ್ತದೆ. ಕೈಕೇಯಿ ತನ್ನನ್ನು ದಶರಥನಿಗೆ ವಿವಾಹ ಮಾಡಿಕೊಡೆಂದು ತಂದೆಯಲ್ಲಿ ಅರಿಕೆ ಮಾಡುತ್ತಾಳೆ. ವಿವಾಹವಾಗುತ್ತದೆ. ಉಪವನದಲ್ಲಿ ದಶರಥ- ಕೈಕೆ ವಿಹಾರದಲ್ಲಿರುವಾಗ ಹಂದಿಗೆ ಬಾಣ ಎಸೆದ ವಿಷಯದಲ್ಲಿ ತಾನು ತಾನೆಂದು ಕಿರಾತ ಚಿತ್ರಾಯುಧನಿಗೂ ದಶರಥನಿಗೂ ವಿವಾದ ಉಂಟಾಗುತ್ತದೆ. ಯುದ್ಧದಲ್ಲಿ ಶಬರವೀರ ಸಾಯುತ್ತಾನೆ.

ಚಂದ್ರಸೇನನ ತಪಸ್ಸಿಗೆ ಮೆಚ್ಚಿದ ಶಿವನು ಅವನ ಕೋರಿಕೆಯಂತೆ ಒಮ್ಮೆಗೆ ಅಯೋಧ್ಯೆಯರಸನನ್ನು ಸೋಲಿಸುವ ಸಾಮರ್ಥ್ಯವನ್ನು ಕರುಣಿಸುತ್ತಾನೆ. ಚಂದ್ರಸೇನನ ದಂಡು ಅಯೋಧ್ಯೆ ತಲುಪುತ್ತದೆ. ಯುದ್ಧದಲ್ಲಿ ದಶರಥ ಮೂರ್ಛಾಗತನಾಗುತ್ತಾನೆ. ಮತ್ತೆ ಪ್ರಜ್ಞೆ ತಿಳಿದಿದ್ದೆ ದಶರಥನ ಹೊಡೆತಕ್ಕೆ ಚಂದ್ರಸೇನನ ತಲೆಯುರುಳುತ್ತದೆ.

ಸಮುದ್ರದಲ್ಲಿ ತಿಮಿಂಗಿಲದ ಬಾಯಿಯಿಂದ ಜಾರಿದ ಕೌಸಲ್ಯೆಯಿದ್ದ ಪೆಟ್ಟಿಗೆ ಬಲೆಯಲ್ಲಿ ಬೆಸ್ತರಿಗೆ ದೊರೆತು ವರುಣನ ವಶವಾಗುತ್ತದ. ಪೆಟ್ಟಿಗೆ ತೆರೆದಾಗ ಕೌಸಲ್ಯೆ ತನಗೊದಗಿದ ಅವಸ್ಥೆಗಳನ್ನು ತಿಳಿಸುತ್ತಾಳೆ. ವರುಣ ಕೌಸಲ್ಯೆಯನ್ನು ದಂಡಿಗೆಗೆ ಏರಿಸಿ ಅಯೋಧ್ಯೆಗೆ ತಂದು ದಶರಥನಿಗೆ ಒಪ್ಪಿಸುತ್ತಾನೆ.

ಮಗಧ ದೇಶದ ಚಂದ್ರಭೂಪಾಲ ತನ್ನ ಪುತ್ರಿಯಾದ ಸುಮಿತ್ರೆಗೆ ಸ್ವಯಂವರ ಏರ್ಪಡಿಸುತ್ತಾನೆ. ಸುಮಿತ್ರೆ ದಶರಥನ ಕೊರಳಿಗೆ ಮಾಲೆ ಹಾಕುತ್ತಾಳೆ. ವಧುವಿಗಾಗಿ ಸ್ವಯಂವರ ಕ್ಷೇತ್ರದಲ್ಲಿ ಭೂಪಾಲರ ನಡುವೆ ಕದನವಾಗುತ್ತದೆ. ಅಲ್ಲಿಗೆ ಪರಶುರಾಮನ ಆಗಮನವಾಗುತ್ತದೆ. ಭೂಪಾಲರನ್ನೆಲ್ಲ ಕತ್ತರಿಸುತ್ತ ನುಗ್ಗಿದ ಪರಶುರಾಮ ದಶರಥ ವಿವಾಹ ವಿಧಿಯಲ್ಲಿದ್ದುದರಿಂದ ಅವನನ್ನು ಬಿಟ್ಟು ಹಿಂದಿರುಗುತ್ತಾನೆ.

ದೇವೇಂದ್ರನಿಗೆ ಶಂಬರಾಸುರನಲ್ಲಿ ಪರಾಜಯವಾಗುತ್ತದೆ. ಬ್ರಹ್ಮನ ಸಲಹೆಯಂತೆ ಇಂದ್ರ ಖಳಬಾಧೆ ನಿವಾರಿಸಿಕೊಡುವಂತೆ ಬಿನ್ನವಿಸಿ ದಶರಥನಲ್ಲಿಗೆ ಚಾರರನ್ನು ಅಟ್ಟುತ್ತಾನೆ. ದಶರಥ ಕೈಕೇಯಿ ಸಹಿತನಾಗಿ ದೇವಲೋಕ ಸೇರಿ ಶಂಬರನನ್ನು ಹೊಡೆದಾಗ ಆತ ಕಾಲಕೇಯರ ಪುರಕ್ಕೆ ಪಲಾಯನ ಮಾಡುತ್ತಾನೆ. ಅಲ್ಲಿಗೂ ಹೋಗಿ ಯುದ್ಧ ಮುಂದುವರಿಸಿದಾಗ, ರಕ್ಕಸರು ಮಾಯೆಯ ಅಂಧಕಾರ ಕವಿಸಿದಾಗ, ಅರುಣನ ಮಗನಾದ ಸಂಪಾತಿ ತನ್ನ ಬಲದ ರೆಕ್ಕೆಯೆತ್ತಿ ಪ್ರಕಾಶ ಉಂಟು ಮಾಡಿ ದಶರಥನಿಗೆ ನೆರವಾಗುತ್ತಾನೆ.

ದಶರಥನ ತೇರಿನ ಗಾಲಿಯ ಕೀಲುಜಾರಿದಾಗ ಕೈಕೇಯಿಯು ತನ್ನ ಕೈಯ ಕಡಗಗಳನ್ನು ತೂರಿಸಿ ಯುದ್ಧ ಮುಂದುವರಿಯಲು ಸಹಾಯ ಮಾಡುತ್ತಾಳೆ. ಶಂಬರವಧೆಯಾದಾಗ ಸತಿಯ ಸಹಾಯವನ್ನು ಮನದುಂಬಿ ಮೆಚ್ಚಿ ದಶರಥ ಎರಡು ವರಗಳನ್ನು ನೀಡುತ್ತಾನೆ. ತಾನು

ಬೇಕಾದಾಗ ಅವುಗಳನ್ನು ಪಡೆದುಕೊಳ್ಳುವೆ ಎಂದು ಕೈಕೇಯಿ ಹೇಳುತ್ತಾಳೆ. ಇಂದ್ರ ದಶರಥ ಕೈಕೇಯಿಯರಿಗೆ ಪರಿಪರಿಯ ಉಪಚಾರವಿತ್ತು ಬೀಳ್ಗೊಡುತ್ತಾನೆ.

**ಗ್ರಂಥಪಾಠ :** ಪ್ರಕೃತ ಜನಜನಿತವಾದ ಪ್ರಸಂಗಗಳ ಪಾಠವನ್ನೆ ಸಂಪಾದನೆಯಲ್ಲಿ ಗಮನಿಸಲಾಗಿದೆ. ಮುಖ್ಯವಾಗಿ ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟವಾದ ಪ್ರಸಂಗಗಳು, ವಿದ್ವಾಂಸ ಕುಕ್ಕಿಲ ಕೃಷ್ಣಭಟ್ಟರು ಸಂಪಾದಿಸಿದ ಪಾರ್ತಿಸುಬ್ಬನ ಯಕ್ಷಗಾನಗಳು, ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಡಾ|| ವಿವೇಕ ರೈ ಅವರ ಸಂಪಾದಕತ್ವದಲ್ಲಿ ಹೊರತಂದ ಯಕ್ಷಗಾನ ಪ್ರಸಂಗ ಸಂಪುಟ ಮತ್ತು ಶ್ರೀ ಎಚ್. ಬಿ. ಎಲ್. ರಾವ್ ಅವರ ನೇತೃತ್ವದ ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ ಹೊರತಂದ ಪ್ರಸಂಗ ಸಂಪುಟಗಳಿಂದ ಈ ಪ್ರಸಂಗಗಳ ಪಾಠವನ್ನು ಸ್ವೀಕರಿಸಿದೆ. ಕೆಲವೆಡೆ ಸ್ಖಾಲಿತ್ಯ, ತ್ರುಟಿತತೆ ಆದಲ್ಲಿ ಆವರಣದೊಳಗೆ ಪಾದಪೂರಣವನ್ನು ಮಾಡಿದೆ, ಕೆಲವೆಡೆ ಮೂಲದಲ್ಲಿ ಕಾಣಿಸದ ರಾಗ ಸೂಚನೆಯನ್ನು ಛಂದಸ್ಸು, ತಾಳಗತಿಯ ಆಧಾರದಲ್ಲಿ ಸೂಚಿಸಿದೆ. ಇಲ್ಲಿನ ಪ್ರಸಂಗಗಳಲ್ಲಿ ಬರುವ ಚೌತಾಳ ಎಂಬ ಹೆಸರಿನ ತಾಳವು ೧೬ ಅಕ್ಷರಗಳ ೬+೪+೬ ವಿಭಜನೆಯೆಂದು ಒಂದು ಪಕ್ಷವೂ ೪ + ೪ + ೮ (ವಿಲೋಮ ಆದಿತಾಳ – ಝೊಂಪಟ) ಎಂದು ಇನ್ನೊಂದು ಪಕ್ಷವೂ ಇದೆ. ಎರಡನ್ನೂ ಸಮರ್ಥಿಸುವ ಹಾಗೆ ಜಾಗಟೆ ಪೆಟ್ಟುಗಳಿವೆ. ಕೆಲವು ಪಾಠಾಂತರಗಳನ್ನು ಆವರಣದ ಒಳಗೆ ಕೊಟ್ಟಿದೆ.

ಮುದ್ರಿತ ಪ್ರತಿಯಲ್ಲಿ ಕೊಡುವಾಗ ಪದಗಳನ್ನು ಬಿಡಿಯಾಗಿ, ಕನ್ನಡ ಪದ್ಯಗಳನ್ನು ನೀಡುವ ಪದ್ಧತಿಯನ್ನು ಅನುಸರಿಸಲಾಗಿದೆ. ಆದರೆ ಯಕ್ಷಗಾನ ಪದದ ಸಾಲುಗಳ ಶಿಸ್ತಿಗೆ ಭಂಗಬರಬಾರದೆಂಬ ಎಚ್ಚರಿಕೆಯನ್ನು ವಹಿಸಿದೆ. ಮುಖ್ಯವಾಗಿ ಓದು ಸುಗಮವೂ, ನಿರಾತಂಕವೂ ಆಗಬೇಕು, ಮುದ್ರಿತ ಹಾಳೆಯ ಒಪ್ಪ ಓರಣಕ್ಕೆ ತೊಂದರೆ ಆಗಬಾರದೆಂಬ ಕಾಳಜಿ ಇಲ್ಲಿದೆ.

**ಡಾ|| ಕೆ. ಎಂ. ರಾಘವ ನಂಬಿಯಾರ್**
ಸಂಪಾದಕರು

## ೧. ದಶರಥೋತ್ಪತ್ತಿ : ಸುಮಿತ್ರಾ ಸ್ವಯಂವರ

ಅಜ ಮಹಾರಾಜ
ಇಂದುಮತಿ
ವಸಿಷ್ಠ
ಸುಮಂತ್ರ
ಪ್ರದೀಪ
ಚಂದ್ರಸೇನ
ಕೃಷ್ಣಭೂಪ
ರಾವಣ
ಪ್ರಹಸ್ತ
ಸೂರ್ಯ
ಬ್ರಹ್ಮ
ಪೌಲಸ್ತ್ಯ
ಪದ್ಮಾಕ್ಷಿ

ಕೈಕೇಯಿ
ಶಿವ
ಪಾರ್ವತಿ
ಚಿತ್ರಾಯುಧ (ಶಬರ)
ಬೆಸ್ತರು
ವರುಣ
ಚಂದ್ರಾಕ್ಷ್ಯ
ಸುಮಿತ್ರೆ
ಪ್ರವೀರ
ದೇಶಾಧಿಪರು
ಪರಶುರಾಮ
ಶಂಬರಾಸುರ
ದೇವೇಂದ್ರ
ಕೌಸಲ್ಯೆ

## ಬಲಿಪ ನಾರಾಯಣ ಭಾಗವತರ ಪ್ರಸಂಗಗಳು

## ೧. ದಶರಥೋತ್ಪತ್ತಿ : ಸುಮಿತ್ರಾ ಸ್ವಯಂವರ

**ಶಾರ್ದೂಲವಿಕ್ರೀಡಿತ**

ಶ್ರೀಕಾಂತಂ ಸುರವೈರಿದಾವದಹನಂ ಬ್ರಹ್ಮೇಶಸಂಪೂಜಿತಂ
ಪಾಕಾರಾದಿ ಮುಖಾಮರೈಕಶರಣಂ ದಿವ್ಯಾಯುಧಾಲಂಕೃತಂ |
ರಾಕಾಭ್ಜಾಚ್ಛಸುತೀಕ್ಷ್ಣ ದಂಷ್ಟ್ರ ಯುಗಳಂ ದೀಪ್ಯಸ್ತಟಾಶೋಭಿತಂ
ಲೋಕೇಶಂ ನಿಜಭಕ್ತವಾರಶರಣಂ ಶ್ರೀನಾರಸಿಂಹಂ ಭಜೇ || ||೧||

**ರಾಗ ಭೈರವಿ ಝಂಪೆತಾಳ**

ಜಯತು ಜಯ ಗಣನಾಥ | ಜಯಲೋಕವಿಖ್ಯಾತ |
ಜಯತು ಜಯನತದಾತ | ಜಯಗೌರಿಜಾತ || ||೨||

ಪಾಶಧರ ಹರಿಪ್ರೀತ | ವಾಸವಾದ್ಯಮರನುತ |
ಕ್ಲೇಶಭವನಾಶ ಪ್ರ | ಕಾಶ ಖಳನಾಶ || ||೩||

ವೀರ ಗಂಭೀರ ರಣ | ಶೂರ ಸಾಕಾರಗುಣ |
ವಾರಿಧಿಯೆ ನಮಿಪೆ ದಯ | ದೋರಿ ಪಾಲಿಪುದು || ||೪||

**ವಾರ್ಧಕ**

ಹರನನುಂ ಗಣಪನಂ ವಾಣಿಯಂ ಗೌರಿಯಂ
ಹರಿಯನುಂ ಸಿರಿಯನುಂ ತರಣಿಯಂ ಶಶಿಯನುಂ
ಧರಣಿಯಂ ಸುರಪನಂ ಶಿಖಿಯನುಂ ಮರುತನಂ ವರುಣನಂ ದ್ಯುಮಣಿಜನನು |
ನಿಋುತಿಯಂ ಧನಪನಂ ಕವಿಗಳಂ ಮುನಿಗಳಂ
ಗುರುವನುಂ ಬ್ರಹ್ಮನಂ ಭೂಜನಂ ಹರಿಜನಂ
ಭರದೊಳುಂ ನೆನೆವೆನುಂ ಕರುಣದಿಂ ಸುಮತಿಯನ್ನೀವುತಂ ಪೊರೆಗೆಮ್ಮನು || ||೫||

**ಭಾಮಿನಿ**

ಶ್ರೀರಮಣ ಭವದೂರ ಖಳಸಂ
ಹಾರ ದೀನೋದ್ಧಾರ ನಿಧಿಗಂ
ಭೀರ ನಿತ್ಯಾನಂದನಾಗಿಹ ವಿಷ್ಣುಮೂರುತಿಯೆ |
ಮಾರಪಿತವೇದಾಂತ ಸುಪ್ರಿಯ
ಮೂರು ಲೋಕಾಧಾರ ಚಿನುಮಯ |
ನೀರಜಾಂಬಕನೊಲಿದು ಪಾಲಿಸು ಮತಿಗೆ ಮಂಗಲವ || ||೬||

**ದ್ವಿಪದಿ**

ಆದಿರಾಮಾಯಣದ ಚರಿತಾಮೃತದಲಿ
ಮೇದಿನಿಪನಜಗೆ ಸುತರುದಿಸಿ ವಿಭವದಲಿ || ||೭||

ಪತ್ತುರಥನೆಂದೆನಿಸಿ ಭೂಪರನು ಜೈಸಿ
ಮತ್ತೆ ಮೂರಬಲೆಯರ ವರಿಸಿರ್ದು ಸಹಸಿ || ||೮||

ಇಂದ್ರಲೋಕವ ಪೊಕ್ಕು ಖಳರ ಮರ್ದಿಸುತ
ಚಂದದಿಂ ಮೆರೆದಿರ್ದ ಗಂಭೀರಚರಿತ || ||೯||

ಯಕ್ಷಗಾನದೊಳೊರೆವೆ ತಿಳಿದಂದದಿಂದ
ಲಕ್ಷ್ಮೀಶ ಸಲಹೆನ್ನ ಸತತ ಕೃಪೆಯಿಂದ || ||೧೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಘನತಪೋಧನ ಸೂತ ಶೌನಕ |
ಮುನಿಕದಂಬಕೆ ಚೆಲ್ವ ಚರಿತವ |
ವಿನಯದಿಂದರುಹುತ್ತಲಿರೆ ಪದ | ವನಜಕೆರಗಿ || ||೧೧||

ಪತ್ತು ರಥನೆಂಬರಸನಾರ್ಕೈ |
ಮತ್ತೆ ವೈಭವದೊಳಗೆ ಮೂವರು |
ಮತ್ತಕಾಶಿನಿಯರನು ವರಿಸುತ | ಲರ್ತಿಯಿಂದ || ||೧೨||

ವಿಕ್ರಮದಿ ಭೃಗುರಾಮ ಕ್ಷತ್ರಿಯ |
ಚಕ್ರವಾಲವನರಿಯೆ ಬದುಕಿದ |
ಶಕ್ರನರಿಗಳ ಮರ್ದಿಸಿದನಾ | ಚಕ್ರವರ್ತಿ || ||೧೩||

ಮೆರೆದನೆಂತಾ ಚರಿತವನು ನಮ |
ಗೊರೆಯಬೇಕೆನೆ ಮೌನಿರಾಯರ |
ಕರುಣದಿಂ ತಕ್ಕೈಸಿ ಯಮಿ ತಾ | ನೊರೆದನಾಗ || ||೧೪||

**ವಾರ್ಧಕ**

ಸರಸದಿಂ ಕೇಳಿರೈ ಖದ್ಯೋತವಂಶದಲಿ
ನೆರೆಪರಂಪರೆಯೊಳಗಯೋಧ್ಯ ಪುರವರದೊಳಂ
ದರಸನಜನೆಂಬವಂ ಪುಟ್ಟಿಸದ್ಧರ್ಮದಿಂದವನಿಯಂಪಾಲಿಸುತಲಿ |
ಇರಲು ವಾಸಿಷ್ಠನುಂ ಸಚಿವಂ ಸುಮಂತ್ರನುಂ
ಇರಲೆಲ್ಲವೊಂದಿನಂ ಗದ್ದುಗೆಯೊಳೊಪ್ಪುತಂ
ಧರಣೀಂದ್ರ ಕುಶಲದಿಂ ಬಣ್ಣಿಸುತ ವಾಸಿಷ್ಠ ಮೌನೀಶಗಿಂತೆಂದನು || ||೧೫||

**[ರಾಗ ಕಾಂಭೋಜಿ ಝಂಪೆತಾಳ**

ಲಾಲಿಸೆಲೆ ದರ್ಪಣಕಪೋಲೆ ಸದುಗುಣಶೀಲೆ |
ಬಾಲೆ ಫಣಿವೇಣಿ ನಿಜರಾಣಿ |
ಪಾಲಿಸಿದೆನವನಿ ಪಲಗಾಲವಿಂದಿನವರೆಗೆ |
ಬಾಲಕರಗಾಣೆ ಸುಶ್ರೋಣಿ || ||೧೬||

ಮತ್ತಕಾಶಿನಿ ನಮಗೆ ಪುತ್ರರಿಲ್ಲದ ಮೇಲೆ |
ಧಾತ್ರಿ ಸೌಭಾಗ್ಯವೇಕಿನ್ನು ||
ವ್ಯರ್ಥವಾಯ್ತೆನ್ನಯ ಸಮಸ್ತ ಸತ್ಕರ್ಮ ಪರ |
ಮಾರ್ಥವೀನಡತೆ ಸಾಕಿನ್ನು || ||೧೭||

ಹಿಂದಾದ ಸೌಭಾಗ್ಯ ಕಂದ ಸತಿಯರ ವ್ರತವ |
ನಂದು ಕೆಡಿಸಿರ್ದಪೆನೊ ಶಿವನೆ ||
ಇಂದಪುತ್ರಸ್ಯ ಗತಿ ನಾಸ್ತ್ಯೆಂಬ ತೆರನಾಯ್ತು |
ಸಿಂದೂರಗಮನೆಯಹಿವೇಣಿ || ||೧೮||

ವೀರಯಿನಕುಲದ ಮಹವುದಾರರಾಯರ ಕೀರ್ತಿ |
ಮಾರುತಂಶಕನೆಂಬುದೆನಿಸಿ |
ಜಾರಿನೆಲೆಯಿಲ್ಲದೇ ಸಾರಿಯಾ ನರಕದೊಳ್ |
ನರಳುವಂತಾಯ್ತೆಂದ ಸಹಸೀ || ||೧೯||

ತರುಣಿಮನ ಕರಗುತ್ತ ಹರಹರಾ ನಮಗಿಂಥ |
ದುರಿತ ಬರೆದನೆ ಬ್ರಹ್ಮನೆನುತ ||
ಕೊರಗಿ ನೆಲದಲಿ ಪೊರಳೆ ನೃಪನು ನಿಟ್ಟುಸಿರಿಟ್ಟು |
ಗುರುವಸಿಷ್ಠನಿಗೆಂದನಾಗ ||] ||೨೦||

**ವಾರ್ಧಕ**

ಹರಿಗಬ್ಜಮಾಕಾಶಕಾದಿತ್ಯನುಡುಗಳ್ಗೆ
ವರ ಚಂದ್ರ ಶಿಷ್ಯರ್ಗೆ ಗುರುಲತೆಗೆ ತರು ಪೀಠ
ಕುರೆಲಿಂಗ ಮುಂಶಿರಕೆ ಮಣಿಮಕುಟ ಮುಖಕಕ್ಷಿ ರಾಜೇಂದ್ರ ಸಭೆಗೆ ಕವಿಯು |
ತರಳೆಗಾಳ್ದಂ ಸಕಲ ಸಂಪದಕೆ ದಾತಾರ
ನರಗೋರ್ವ ಸುಕುಮಾರ ನಿಲ್ಲದಿರೆ ಫಲವೇನು
ಬರಿದಾಯ್ತು ಬಾಳೆಂದು ಕೊರಗುತಿಹ ನೃಪನಿಂಗೆ ವಾಸಿಷ್ಠ ನಿಂತೆಂದನು || ||೨೧||

**ರಾಗ ಸಾಂಗತ್ಯ ರೂಪಕತಾಳ**

ರಾಜೇಂದ್ರ ವಂಶಾಬ್ಧಿ ರಾಜಾ ಕೇಳ್ ದಿವಸದಿ |
ರಾಜಕುಲಾಬ್ಜಮಾರ್ತಾಂಡ ||
ಭೋಜ ಸುಸಂಪದ ಸಾಮ್ರಾಜ್ಯ ಶೋಭಿತ |
ವ್ಯಾಜವ ಬಿಡು ಸುಪ್ರಚಂಡ || ||೨೨||

ಪೊಂದೆ ತಾವರೆಗಂದ ನಂದೊಪ್ಪಿದಾ ಸಭೆ |
ಗಂದೆಲ್ಲ ಖುಷಿಯೋಗಿ ಜನರು ||
ಬಂದಿರಲೀ ಕುಲದಂದವ ನುಡಿದುದ |
ನಂದು ಕೇಳಿಹೆ ಚೆಲ್ವ ಕಥೆಯ || ||೨೩||

ಆ ರಘುವಂಶದಿ ವೀರಮಹಾತ್ಮರು |
ಭಾರಿ ವಿಖ್ಯಾತಿಗಳಿಂದ ||
ಮೆರೆವರೆಂದೆನುತಲಿ ಸಾರಿದರೈ ಸುಕು |
ಮಾರ ಪುಟ್ಟುಗು ಸಿದ್ಧವೆಂದ || ||೧೪||

**ಭಾಮಿನಿ**

ಎನಲು ನೃಪನರ್ಧಾಂಗಿ ನುಡಿದಳು
ಘನಮಹೋತ್ತಮ ಪೇಳ್ದ ಮಾತಿನ
ಘನತೆ ದೃಢವೇ ನಮ್ಮ ಕುಲಸಿರಿ ಮೇಲೆ ಹಬ್ಬುವುದೇ |
ಜನಿಪರೇ ಬಾಲಕರು ಬಂದಿಹ
ಮನದ ಶಂಕೆಯು ಪೋಪುದೆಂದೆನೆ
ಮುನಿಪ ನಾರದನಾಗ ಬಂದನಯೋಧ್ಯಪುರಕಾಗಿ || ||೧೫||

**ರಾಗ ಕೇದಾರಗೌಳ ಅಷ್ಟತಾಳ**

ನಾರದನೈತಂದ ವಾರತೆ ಕೇಳುತ್ತ |
ಧಾರುಣಿ ಪಾಲಕನು ||
ಭೋರನಿದಿರ್ಗೊಂಡು ವೀರಮಣಿಯುತ ಮತ್ತೆ |
ಚರಣ ಪೂಜಿಸುತಿರಲೆಂದನು || ||೧೬||

ಭಾನು ವಂಶಾಂಬುಜಭಾನು ನಿನಗೆ ಸ್ವ |
ರ್ಭಾನುವೆ ತಡೆದಂದದಿ ||
ಏನಿದು ಮರುಕ ದುಮ್ಮಾನ ಪೇಳೆಂದೆನ |
ಲಾ ನರೇಶ್ವರ ಮುದದಿ || ||೧೭||

ನಂದನರಿಲ್ಲೆಂಬುದೊಂದೆ ಕಾರಣ ಬೇರಿ |
ನ್ನೊಂದಿಲ್ಲವೀ ರಾಜ್ಯದಿ ||
ಎಂದಾತನೆರಗುತ್ತ ನಿಂದಿರೆ ಭಾರತಿ |
ಕಂದನೆಂದನು ಮುದದಿ || ||೧೮||

**ರಾಗ ಬೇಗಡೆ ತ್ರಿವುಡೆತಾಳ**

ಲಾಲಿಸೈ ಕಿವಿಗೊಟ್ಟು ಭೂಪೇಂದ್ರ | ನಾನೆಂಬೆ ಮುಂದಿನಿ |
ನ್ನೇಳಿಗೆಯನರಿ ದ್ವಿಪದ ನರೇಂದ್ರ ||

ಜಾಲವಲ್ಲಿದು ಹಿಂದೆ ದಕ್ಷನ | ಬಾಲೆಯದಿತಿಯು ನುತಿಸೆ ಶ್ರೀಪತಿ ||
ಲೋಲನೇತ್ರೆಗೆ ಭಾಷೆಯನು ತಾ | ಹೇಳಿದನು ದಿಟ ತಾಳು ಧೈರ್ಯವ || ||೧೯||

ಮೂರು ಜನುಮದಿ ನಿನಗೆ ಮಗನಾಗಿ | ದಾನವರನೆಲ್ಲರ |
ತರಿದು ಭೂಮಿಯ ಭಾರವನು ನೀಗಿ ||
ತೋರುವೆನು ಸಂತಸವೆಂದು ಮು | ರಾರಿ ವಾಸವ ಜನನಿಗರುಹಿದ |
ವಾರತೆಯ ತಿಳಿದಿಲ್ಲವೇ ಸುಕು | ಮಾರನಪ್ಪನು ನಿನಗೆ ನಿಶ್ಚಯ || ||೨೦||

ಯತಿಪ ಕಾಶ್ಯಪ ನಿನಗೆ ಮಗನೆನಿಸಿ | ತಾಪತ್ತುರಥನೆಂ |
ದತಿ ಪರಾಕ್ರಮಿಯಪ್ಪನಾ ಸಹಸಿ ||
ಹಿತದೊಳಾತನ ಸತಿಯು ಕೋಸಲ | ವತಿಗೆ ಪುಟ್ಟುತ ಲಗ್ನಗೈಸಲು |
ರತಿಪತಿಯ ಪಿತನುದಿಸಿ ಖೂಳರ | ಹತಿಸಿ ರಂಜಿಪ ವ್ಯಥೆಯ ಬಿಡು ನೃಪ || ||೨೧||

**ಕಂದ**

ಮತ್ತಾ ಮೂರನೆ ದೇವರೆ
ಪುತ್ರನೆನಿಸುತಲೆ ಕೊಲ್ವನು ಜಗದೊಳ್ ಖಳರಂ |
ಚಿತ್ತದ ಚಿಂತೆಯು ಬೇಡೆಂ
ದತ್ತಲೆ ಧೈರ್ಯವ ನರುಹುತ ಮುನಿವರನಡೆದಂ || ||೨೨||

**ಭಾಮಿನಿ**

ಹರಿಹರರ ಕೀರ್ತಿಸುತ ಹಂಸೆಯೊ
ಳಿರದೆ ತೆರಳಲ್ಕತ್ತ ತೋಷದೊ
ಳರಸ ಸತಿ ಯೊಡನಿರಲು ಕಾಲಾಂತರಕೆ ಗರ್ಭವನು |
ಧರಿಸಿದಡೆ ಸೀಮಂತಮಂ ನೆರೆ
ವಿರಚಿಸಲು ನವ ಮಾಸದಂತ್ಯದಿ
ತರುಣಿ ವೇದನೆಗೊಳುತ ಮರುಗಿದಳೇನ ಬಣ್ಣಿಪೆನು || ||೨೩||

**ರಾಗ ಸೌರಾಷ್ಟ್ರ ಏಕತಾಳ**

ಎಂತು ತಾಳಲಯ್ಯೊ | ತಡೆಯಲಾರೆ | ಎಂತು ನಾ ಬಾಳಲಯ್ಯೊ ||
ಮುಂತೆಯೆ ವಡಲೊಳು | ನಿಂತು ತಿರುಗುತಿಹು |
ದಂತರವರಿಯೆನಲ್ಲ | ದೇವನೆ ಬಲ್ಲ || ||೨೪||

ಕಟಿಯೂರು ಜಾನುಗಳು | ವಕ್ಷಗಳಲ್ಲಿ | ಸಟೆಯಲ ಕುಟಿಲಗಳು |
ತುಟಿ ಕುಚ ತಟಿ ನಾಭಿ | ದಿಟ ಪಟುತರಮದೋ |
ತ್ಕಟ ಜಂಘೆ ನೋವಿದೆಲ್ಲ | ಸಹಿಸೆನಲ್ಲ || ||೩೫||

ಶಿರಕರ ಚರಣವನು | ಎತ್ತಲಿಕಾರೆ | ಭರಿತ ಭಾರಂಗಳೇನು ||
ಧರಣಿಯ ತರುಣಿಯರ್ | ಧರಿಸುವರೆಂತಿದ |
ಪರಿಯನಾರ್ಗೆಂಬೆನೆಲ್ಲ | ಶಂಕರ ಬಲ್ಲ || ||೩೬||

**ವಾರ್ಧಕ**

ಮತ್ತೆ ಸುಮುಹೂರ್ತದಿಂ ಸುರರುಘೇಯೆನ್ನಲುಂ
ಪುತ್ರನಂಪಡೆದಳುಂ ಸಂತಸದ ಗುಡಿಯೊಳುಂ
ಧಾತ್ರೀಶನಾನಂದಗೊಳ್ಳುತಂ ಮುನಿಗಳಂ ಬರಿಸುತಂ ವಿಭವದಿಂದ |
ಪತ್ತು ದಿನ ಕಳೆಯಲುಂ ಹರ್ಷದಿಂ ನಲಿವಿನಿಂ
ಉತ್ತಮದ ಪೆಸರಿಟ್ಟು ಋತ್ವಿಜರು ಸರಿಯಲ್ಕೆ
ಇತ್ತಲರ್ಭಕನ ಚಿನ್ನದ ತೊಟ್ಟಿಲೊಳಗಿಟ್ಟು ತೂಗಿದರ್ ಶೋಭಾನದಿ || ||೩೭||

**ರಾಗ ಕಾಪಿ ಅಷ್ಟತಾಳ**

ಜೋಜೋ ಖದ್ಯೋತವಂಶಲಲಾಮ |
ಜೋ ಜೋ ಸಾಗರಕುಲಸಾರ್ವಭೌಮ ||
ಜೋಜೋ ಅರಿಕಾಲತಿಮಿರಮಾರ್ತಾಂಡ |
ಜೋಜೋ ಸದ್ಗುಣನಿಧಿ ಸುಪ್ರಚಂಡ || ಜೋ || ||೩೮||

ಜೋಜೋ ಲೀಲಾವತಿಗರ್ಭಚಂದ್ರ |
ಜೋಜೋ ಭೂಮಿಪಸುತ ಗುಣಸಾಂದ್ರ ||
ಜೋಜೋ ಕುಜನವಿಘಾತ ವಿಖ್ಯಾತ |
ಜೋಜೋ ಸಜ್ಜನದಾತ ಸುಪ್ರೀತ || ಜೋ || ||೩೯||

ಜೋಜೋ ಸತ್ಯಾತ್ಮಸದ್ಧರ್ಮಾನಂದ |
ಜೋಜೋ ಬಿಡೌಜಾದಿ ಸುರಜನವೃಂದ ||
ಜೋಜೋ ಅಜಪುತ್ರ ಸೌಭಾಗ್ಯಸಿರಿಯೆ |
ಜೋಜೋ ನೀ ಮೆರೆ ಶ್ರೀಹರಿ ಪೊರೆಯೆ || ಜೋ || ||೪೦||

**ರಾಗ ಭೈರವಿ ತ್ರಿವುಡೆತಾಳ**

ತರಳ ಬಳಿಕಾ ದ್ಯುಮಣಿಯಂದದಿ | ಮೆರೆಯೆ ಬೆಳೆಯಲು ಕಾಣುತ |

ವಿರಚಿಸಿದನುಪನಯವ ಮತ್ತವ | ಶರದ ವಿದ್ಯವ ಕಲಿಸುತ |
ಗುರುಗೆ ಪಂಡಿತನಾಗಿ ಭುಜಮುಂ | ದ್ವರಿಯುತುಬ್ಬಲು ನೋಡುತ |
ಹರುಷವಾಂತಿರೆ ಸಕಲ ಗುಣಗಳ | ಭರಿತನಾಗುತ ನೃಪಸುತ | ಚಂದದಿಂದ || ||೪೧||

ಸರುವ ಬಗೆಯಲಿ ವೀರನಾಗುತೆ | ವರರಥವ ದಶದಿಕ್ಕಲಿ |
ಚರಿಸೆ ಸುರರಭ್ರದಲಿ ಪೊಗಳಿದ | ರರಸ ದಶರಥ ನೀತನು |
ತರಣಿ ವಂಶೋದ್ಧಾಮನೆನ್ನಲು | ಧರಣಿಯಲಿ ಗುಣನಾಮದಿ |
ಭರಿತ ವಿಕ್ರಮತನದೊಳಿದ್ದನು | ನಿರತಮಹಸದ್ಧರ್ಮ ಮಾರ್ಗದಿ | ಏನನೆಂಬೆ || ||೪೨||

**ಭಾಮಿನಿ**

ಇತ್ತಲೀ ತೆರದಿಂದಲಿರುತಿರ
ಲತ್ತಕೋಸಲಪಾಲನೋಲಗ
ವಿತ್ತನೊಂದಿನವಾ ಪ್ರದೀಪನು ಸಕಲ ವೈಭವದಿ
ಪುತ್ರಿ ಕೌಸಲೆಯೆಂಬ ಗುಣಮಣಿ
ಗತ್ತ ಷೋಡಶ ವರ್ಷ ತುಂಬಲು
ಚಿತ್ತದಲಿ ತಿಳಿದೆಂದನಂದು ಸುನಂದ ಮಂತ್ರಿಯೊಳು || ||೪೩||

**ರಾಗ ಕಾಂಭೋಜಿ ಝಂಪೆತಾಳ**

ಕೇಳಿದೆಯ ಸಚಿವಕುಲ ಮಾಲ ಮಣಿ ಬಾಲಕಿಗೆ |
ಮೇಲೆ ಯೌವನ ತುಂಬಿತಿಂದು ||
ಆಲಿಪುದು ವರನ ಗುಣಶೀಲವಿಕ್ರಮರಾರು |
ಭೂಲೋಕದೊಳಗೆಂದನಂದು || ||೪೪||

ಒಂದು ಸರಿಯಾದರಿನ್ನೊಂದರಲಿ ಕೊರತೆ |
ಯಿಂದುಮುಖಿಗಹ ವರನ ಕಾಣೆ ||
ಚಂದ್ರಸೇನಕನೋರ್ವನಿಂದಳಿಯನಾಗುವಡೆ |
ಮಂದಮತಿಯಾಗಿರ್ಪನವನು || ||೪೫||

ಆತನಾಗದು ಮತ್ತೆ ಭೂತಳದೊಳಾರೆನಲು |
ಆತಗೆಂದನಯೋಧ್ಯಪುರದಿ ||
ಖ್ಯಾತ ಖದ್ಯೋತಕುಲ ರಾಜನಜನಿಂಗೊಬ್ಬ |
ಜಾತನಿರ್ಪನು ಧೀರನೆಂದ || ||೪೬||

ವಸುಧೇಶರೊಳಗಾತ ದಶರಥಾಖ್ಯನು ಖ್ಯಾತ |
ಕುಸುಮಗಂಧಿನಿಗಹನು ವರನು ||
ಕುಶಲವಹುದೆನಲಾಗ ಮಂತ್ರಿಯನು ಶೀಘ್ರದಲಿ |
ಕೋಸಲೇಶನು ಪೋಪುದೆಂದ || ||೪೭||

**ರಾಗ ಕೇದಾರಗೌಳ ಅಷ್ಟತಾಳ**

ಧರಣೀಶನಪ್ಪಣೆ ಗೊಳುತಯೋಧ್ಯವ ಸೇರೆ |
ದೊರೆಯಜ ಮನ್ನಿಸುತ ||
ಬರವೇನು ಮಂತ್ರಿಯೆ ಕೋಸಲದಿಂದೆನೆ |
ಕರವ ಜೋಡಿಸುತೆಂದನು || ||೪೮||

ದೊರೆರಾಯ ಕೋಸಲದೊರೆ ನಿನ್ನೊಡನೆ ಮತ್ತೊಂ |
ದೊರೆಯೆಂದು ಕಳುಹಿಸಿದ ||
ಭರಿತ ಕ್ಷೇಮವು ಶುಭಕರ ನಿನ್ನ ತರಳಗೆ |
ತರಳೆಯ ನೀವೆನೆಂದ || ||೪೯||

ಮನ್ನಿಸಬೇಕೆಮ್ಮ ವಚನವೆಂದೆರಗಲು |
ಪೂರ್ಣಸಂತೋಷದಲಿ ||
ಚಿನ್ಮಯಾನುಗ್ರಹ ನಡೆಯಲಿ ಶುಭವೆಂದು |
ತನ್ನ ಮಂತ್ರೀಶಗೆಂದ || ||೫೦||

**ವಾರ್ಧಕ**

ದೊರೆ ಕೋಸಲೇಶ್ವರಂ ಕಳುಹಿರ್ಪನೀತನಂ
ತರಳದಶರಥನಿಗಂ ಬಾಲೆಯಳ ನೀವೆನೆಂ
ದೊರೆದನದರಿಂದಲುಂ ನಡೆ ನಿಶ್ಚಯಂಗಳಂ ಗೈದು ಬಹುದೆನುತ ಕಳುಹೆ ||
ಭರದಿಂದಲುಭಯರುಂ ಬರಲಾ ಪ್ರದೀಪನುಂ
ಪರಿಕಿಸುತ ತೋಷದಿಂ ಸತ್ಕಾರ ಗೈಯುತಂ
ಪರಿಣಾಮ ವಾರ್ತೆಯಂ ಕೇಳಲಂದರುಹುತಂ ಮತ್ತೆಂದನಾ ಸುಮಂತ || ||೫೧||

**ರಾಗ ಮಾರವಿ ಅಷ್ಟತಾಳ**

ಕೇಳಯ್ಯಾ | ಭೂಪ | ಕೇಳಯ್ಯ || ಪ ||

ಬಾಲೆಯನೀವೆನು ದಶರಥಗೆಂದು |
ಬಾಲಕಿ ರೂಪವ ಕೊಟ್ಟೆ ನೀನಿಂದು ||
ಬಾಲನ ತೇಜವ ನೋಡೆನುತ್ತಿತ್ತ |
ಬಾಲೆಗೆ ಕೊಡಲದ ಒಪ್ಪಲು ಮತ್ತ || ||೫೨||

ಸರಿಸರಿಯುಭಯರ ಮತಗಳೊಂದಾಯ್ತು |
ಕರೆಕರೆ ಜೋಯ್ಸ ಲಗ್ನಗಳೆಂತು ||
ಒರೆಯಲಿಎನೆ ಬರಪೇಳಲು ಎಲ್ಲ |
ದೊರೆರಾಯಗಿಂತೆಂದ ಗುಣಿಸುತಲೆಲ್ಲ || ||೫೩||

ಬರುವ ಸಪ್ತಮಿ ದಿನ ಲಗ್ನವದೆನಲು |
ಭರದಿ ದಿಬ್ಬಣಗೊಂಡು ಬಹೆವು ನಾವೆನಲದ ||
ತರುಣಿಯ ನೀವೆ ನಾನೆಂದೆನಲಂದು |
ಪೊರಟು ಸುಮಂತ ಬಂದನಯೋಧ್ಯಕಂದು || ||೫೪||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದುಸುರೆ ಕೇಳುತ್ತ ಭೂವರ |
ನಂದು ಬರಿಸುತ ದಿಬ್ಬಣವ ಮುದ |
ದಿಂದ ಬಂಧುಗಳೆಲ್ಲ ಪೊರಟರು | ಚಂದದಿಂದ || ||೫೫||

ಇತ್ತ ಕೋಸಲಪಾಲ ಸಂಭ್ರಮ |
ವೆತ್ತು ಭರದಲಿ ಸಿಂಗರಿಸಿ ಪುರ |
ಮತ್ತೆ ಬಂದರ ಮನ್ನಿಸುತಲಿರ | ಲತ್ತಜವದಿ || ||೫೬||

ಬಂದ ದಿಬ್ಬಣಿಗರನು ಮನ್ನಿಸು |
ತಂದುವುಪಚಾರಗಳ ಗೈವುತ |
ಚಂದದಿಂ ಮಂಟಪದೊಳಿರಿಸುತ | ಲಂದು ಮುದದಿ || ||೫೭||

ಇರಲು ವೈಭವದಿಂದಲಿತ್ತಲು |
ಧರಣಿ ಪಾಲಕ ಪಾಂಡ್ಯ ದೇಶದ |
ದೊರೆಯೆನಿಪ ಕಲಿ ಚಂದ್ರಸೇನನು | ಹರುಷದಿಂದ || ||೫೮||

ಓಲಗವ ಕೊಟ್ಟಖಿಳ ದೇಶದ | ಭೂಲಲಾಲಮರ ಮಧ್ಯದೊಳಗಿರೆ |
ಕಾಲಿಗೆರಗುತ ಗುಪ್ತಚಾರರು | ಪೇಳ್ದರಾಗ || ||೫೯||

**ರಾಗ ಮುಖಾರಿ ಏಕತಾಳ**

ಭೂತಳೇಶ್ವರ ಲಾಲಿಸಯ್ಯ | ಪ್ರೀತೀಲಿ ಜೀಯ |
ನೂತನ ಕಾರ್ಯ ಮುಂದಿಡಯ್ಯ ||
ಯಾತು ಭಟನುತವ | ಮಾತುಳ ಸುತೆಯಳ |
ಖ್ಯಾತನಯೋಧ್ಯಾ | ನಾಥಜಗೀಯುವ |
ರೀತಿಯರಿಯದೆ ನೃಪಜಾತಗಳ್ಳೈದಿತು |
ತಾ ತಡೆಯದೆ ನಿಜಧಾತ ವಿಖ್ಯಾತ || ||೬೦||

ಮತ್ತೆ ಭೂಸುರ ಕುಲವೆಲ್ಲ | ಗುಂಪಾಗುತೆಲ್ಲ |
ರತ್ತಾಲೆ ಗಮಿಸುವರಲ್ಲ ||
ಧಾತ್ರಿಪಗಳಿಯನು ಯಶಯುತ ನೀನಿರೆ |
ಪುತ್ರಿಯನನ್ಯರಿಗಿತ್ತಪನೇನದು |
ಚಿತ್ತದಿ ತಿಳಿಯುತಲತ್ತಗಮಿಸಲೆಮ |
ಗೊರ್ತಮಾನ ಸಹಿತಿಲ್ಲದೆ ಧಾರೆಯೆ || ||೬೧||

**ರಾಗ ಭೈರವಿ ಏಕತಾಳ**

ಚಾರಕರೆಂದುದ ಕೇಳಿ | ಹುಂ | ಕಾರದಿ ರೋಷವ ತಾಳಿ ||
ಭೂರಿ ಘನತೆ ಮಾತುಳಗೇ | ಇರ | ದೋರನು ವಾರ್ತೆಯ ತನಗೆ || ||೬೨||

ಸೋದರಳಿಯ ತಾನಿರಲು | ಸುತೆ | ಯಾದಳನೀವ ಲಗ್ನದೊಳು ||
ಮೇದಿನಿಯರಸುತ ಮಾವ | ನೆರೆ | ಹಾದಿಲಿ ಪೋಪಂಗೀವ || ||೬೩||

ಹಿತದಿಂದಲಿ ಕೇಳುವೆನು | ಕೊಡ | ಲತಿವಾಯ್ತೆಮ ಸುಖಗಿನ್ನು ||
ಖತಿ ದೋರಲು ಸಂಗರದಿ | ನೃಪ | ತತಿಯನು ಹೀರುವೆ ಭರದಿ || ||೬೪||

ಬಂಧಿಸಿ ಸೆರೆಯೊಳಗವನ | ಮುದ | ದಿಂದಲೆ ಬಾಲೆಯನ್ನಾ ||
ಇಂದೆಳತರುವೆನು ಸಿದ್ಧ | ನೋ | ಡೆಂದವ ಗರ್ಜಿಸುತ್ತೆದ್ದ || ||೬೫||

ಬಳಿಕವ ಮಣಿರಥವಡರಿ | ನಿಜ | ಬಲದೊಳು ವಾರ್ತೆಯ ಸಾರಿ ||
ದಳಪತಿಯೊಡಗೂಡುತ್ತ | ಬಂ | ದಳುಕದೆ ಪೊಕ್ಕನು ಮತ್ತಾ || ||೬೬||

**ಭಾಮಿನಿ**

ಆ ಸಭೆಯ ನುಗ್ಗಿದಡೆ ನೆರೆದಿಹ
ರಾ ಸಮರ್ಥರು ಬೆರಗಿನಿಂದಿರ
ಲಾ ಸಮಯದೊಳಗಾ ಪ್ರದೀಪನು ರತುನ ಗದ್ದುಗೆಯ |
ತೋಷದಿಂದಿತ್ತವನ ಮನ್ನಿಸು
ತಾಸುಜನಮಣಿ ಬಳಿಕ ಕಿರುನಗೆ
ಸೂಸಿ ವೀರನ ನೋಡುತೆಂದನು ಮಧುರ ವಚನದಲಿ || ||೬೭||

**ರಾಗ ಕೇದಾರಗೌಳ ಝಂಪೆತಾಳ**

ಕ್ಷೇಮವೇನಳಿಯ ನಿನಗೆ | ಪುರದಿ ಪರಿ | ಣಾಮವೇ ಸಕಲರಿಂಗೆ ||
ಈ ಮಹಾ ಸಭೆಗೆ ಬರಲು | ತಡವೇನು | ನೀ ಮುದದಿ ಪೇಳೆನ್ನಲು || ||೬೮||

ಎಲ್ಲ ಕ್ಷೇಮಿಗಳಾದರೂ | ನಾವ್ ಬೇಗ | ಇಲ್ಲಿ ಕೂಡಿದೆವಾದರೂ ||
ಸಲ್ಲಲಿತ ಹಿತವ ಗೈವ | ಭಟರುಂಟೆ | ಬಲ್ಲೆನಿದರಂದ ಮಾವ || ||೬೯||

ಅರರೆ ಕ್ರೋಧಗಳೇನೆಲ | ಸತ್ಕರವ | ವಿರಚಿಸಿದೆ ನಾನುಂಟೆಲ ||
ಮರುಳುತನವೇನೆನಲ್ಕೆ | ಮಾತುಳನೊ | ಳೊರೆದ ನಿಜ ಮನದ ಬಯಕೆ || ||೭೦||

ಮರುಳೆ ಸೋದರದಳಿಯಗೆ | ಕೊಡದೆ ನೀ | ತರಳೆಯನ್ನನ್ಯರಿಂಗೆ ||
ತರಲು ಯೋಚಿಸುತಲಿಂದ | ಬಲುತರದ | ಸರಸ ಮಾತೇತಕೆಂದ || ||೭೧||

ತರಳೆ ಬಯಸಿದಳಾತನ | ಅದರಿಂದ | ತೆರುವೆ ಕೇಳ್ ಸುಗುಣ ರನ್ನ ||
ಭರದಿಂದ ಮುಂಗಜ್ಜವ | ಭದ್ರದಿಂ | ನೆರವೇರಿಸಿಲ್ಲಿ ಹಿತವ || ||೭೨||

ನುಡಿಯಲೇಕೀ ಮಾತನು | ತನಗಿಂದು | ಹುಡುಗಿಯಳನಿತ್ತು ನೀನು ||
ಬಿಡದೆ ಕಳುಹಲ್ಕೆಲೇಸು | ಅಲ್ಲದಡೆ | ಕಡುಹ ತೋರೈ ಶಭಾಸು || ||೭೩||

ಧರಣಿಪನ ಕುಲದೊಳುದಿಸಿ | ಇತ್ತನುಡಿ | ಗೆರಡ ಬಗೆಯುವೆ ಸಾಹಸಿ ||
ತರುಣಿ ಹಂಬಲವ ತೊರೆದು | ನಡೆನಿನ್ನ | ಪುರಿಗೆಂದ ವೀರನಂದು || ||೭೪||

**ಕಂದ**

ಆ ನುಡಿಗಂ ಪ್ರಳಯಕೃ
ಶಾನುವಿನುಗ್ರವ ಕೈಗೊಳ್ಳುತ ನಿಜ ಬಲವಂ |
ತಾನೀಕ್ಷಿಸಲೇಣ್ಣೆಸೆ
ಕಾಣಿಸದೆನೆ ಮುತ್ತಿ ಮೇಲ್ವಾಯ್ದುರು ಭರದಿಂ || ||೭೫||

**ಭಾಮಿನಿ**

ಧುರಭಯಂಕರಪ್ರಳಯರುದ್ರನ
ತೆರದೊಳಾಕ್ಷಣ ಪಾಂಡ್ಯ ಭೂಪತಿ
ತರಿತರಿದು ಕೆಡಹುತ್ತ ಮಾರ್ಬಲಗಳನು ಸಂಗರದಿ |
ಒರೆಯಲೇನಕ್ಷೋಹಿಣೀ ಬಲ
ಪೆರಸಿ ನಡೆತಂದಾ ಪ್ರದೀಪನ
ಭರದಿ ತಾ ಜರೆವುತ್ತ ರೋಷದೊಳೆಂದ ಮಾತುಲಗೆ || ||೭೪||

**ರಾಗ ಭೈರವಿ ಅಷ್ಟತಾಳ**

ಭಳಿರೆ ಭೂಪಾಲ ಕೇಳು | ಬಲವ ಗೆಲ್ಲು | ಬಲವಂತನಾದೆ ತಾಳು ||
ಛಲದೊಳು ಬೆಳದುಬ್ಬ | ನಿಲಿಪೆ ಸತ್ತ್ವಗಳಿರೆ | ತಳುವದೆ ನಿಲ್ಲೆಂದನು || ||೭೭||

ಬಾಯ ಡಂಬದಿ ತೀರಿತೆ | ವಿಕ್ರಮ ಛಲ | ದಾಯತವಿಹುದೆ ಮತ್ತೆ ||
ಬೀಯವೇತಕೆ ಸರ್ವ | ರಾಯರ ಮುಂದೆ ನಿ | ನ್ನಾಯತಿಕೆಯ ತೋರೆಲಾ || ||೭೮||

ಆಡದೆಯೇನೆನುತ | ನಿನ್ನಸುವನು | ತೋಡಿ ಕೆಂಗರುಳ ಮತ್ತ ||
ನೀಡಿ ಭೂತಕೆ ಮುಂದೆ | ಕೂಡಿದವರ ಕಣ್ಗೆ | ಮಾಡುವೆ ಹಬ್ಬವನು || ||೭೯||

ಚಂದ್ರಸೇನಕ ಶಾಭಾಸು | ಎನ್ನೊಡ ನೀ ಮ | ದಾಂಧತೆ ತೋರಲೇಸು ||
ಬಂದಪುದೆ ಸಿರಿ ಬಂದ ದಾರಿಲಿ ಮರ | ಳೆಂದೆಚ್ಚ ಮಾರ್ಗಣವ || ||೮೦||

ಹಂದೆ ತರಿದು ನಿನ್ನಯ | ನಂದನೆಸಹಿ | ತಿಂದು ಪೋಪುದು ನಿರ್ಣಯ ||
ಎಂದಸ್ತ್ರ ಮುಸುಕ | ಲ್ಕಂದದ ತರಿಯಲು | ಕುಂದಿ ಧರೆಗೆ ಬಿದ್ದನು || ||೮೧||

**ಭಾಮಿನಿ**

ಬಿದ್ದೊಡನೆ ಜವನುಗ್ರವನು ನೃಪ
ಕದ್ದನೆನೆ ಕಿಡಿಯುಗುಳಿ ಖತಿಯೊಳ
ಗೆದ್ದು ಬಾಣಾಬ್ಧಿಯಲಿ ಮುಸುಕಿದನವನ ಹೂಂಕರಿಸಿ ||
ಐದುಮೊಗನೆಂಬಂತೆ ಭೂಮಿಪ
ಕೈದುಗೊಂಡಾ ಚಂದ್ರಸೇನನ
ಬಯ್ದು ಶರನಿಧಿಯಾರಿಸಲು ಮತ್ತೆಂದ ಮೂದಲಿಸಿ || ||೮೨||

**ರಾಗ ಭೈರವಿ ಏಕತಾಳ**

ಭುಜವಿಕ್ರಮ ನೀನಹುದೆ | ಕುರಿ | ಗಜರಲು ಹುಲಿಯಂಜುವುದೇ ||
ಅಜಬರಹವನಳಿಸುವೆನೊ | ನೀ | ಭಜಿಸಿಕೊ ಕುಲದೈವವನು || ||೮೩||

ಅಳಿಯನು ಸಣ್ಣವನೆನುತ | ಬಿಡ | ಲಳಿವುದೆ ಮೂರ್ಖತೆ ಪಿತ್ಥಾ ||
ಅಲಗೌಷಧದಿಂದೀಗ | ನೆಲ | ಕಿಳಿಸುವೆ ನೋಡೆನಲಾಗ || ||೮೪||

ವಾಂಛೆಗಳಿಹುದೇ ನಿನಗೆ | ಜಯ | ಮಿಂಚಲು ಬಿಡುವೆನೆ ಕಡೆಗೆ ||
ಗೊಂಚಾಡದಿರೆಂದೆನುತ | ಶರ | ಸಂಚಯ ಸುರಿದನು ಮತ್ತಾ || ||೮೫||

ಬರುವಂಬನು ಕತ್ತರಿಸಿ | ಘನ | ಶರಗಳ ಮಳೆಯನೆ ಸೂಸಿ ||
ಭರದಿಂದಲಿ ಮೇಲ್ವಾಯೆ | ಆ | ಧರಣಿಪ ಗಜರಿದ ಮುನಿಯೆ || ||೮೬||

**ವಾರ್ಧಕ**

ಮತ್ತೆ ಶರಬಿತ್ತಿದಡೆ ನಿತ್ತರಿಯನೊತ್ತರಿಸಿ
ಕತ್ತರಿಸಿ ಹಯರಥವ ನುಗ್ಗೊತ್ತಿ ಮತ್ತೆ ಬಲ
ವತ್ಯಂತ ಭೀತಿಯಲಿ ಹಿಂದೋಡಿ ಚಿತ್ತ ಬೇಸತ್ತವಂದಲ್ಲ ತಿರುಗೆ |
ಇತ್ತ ಮುದವೆತ್ತು ಶುಭದತ್ತ ನಿಜಪುತ್ರಿಯಂ
ಇತ್ತ ದಶರಥಗಂದು ಜನಸೊಗದಿ ಭುಂಜಿಸುತ
ಇತ್ತ ಧನಗಳ ಹೊತ್ತು ಪೊಗಳುತ್ತ ತೆರಳಿದರು ಶುಭವಾದುದೆಲ್ಲರಿಂಗೆ || ||೮೭||

**ಭಾಮಿನಿ**

ಇತ್ತ ದುಗುಡದಿ ಚಂದ್ರಸೇನನು
ಚಿತ್ತಸಂತಾಪಾಗ್ನಿಯೊಳಗುರಿ
ಯುತ್ತಲಕಟಕಟೆಂತು ಬಾಳುವೆ ಮಾನಭಂಗದಲಿ |
ಪೃಥ್ವಿಪನ ಗೆಲುವಡೆಯು ಯುವತಿಯ
ನಿತ್ತತರುವಡೆ ಪಥಗಳಾವುದೆ
ನುತ್ತ ಚಿತ್ತದಿ ಕುದಿದು ದುಃಖಿಸುತೆಂದ ಮರುಗುತಲಿ || ||೮೮||

**ರಾಗ ನೀಲಾಂಬರಿ ರೂಪಕತಾಳ**

ಮುಂದೇನ್ಮಾಡಲಿ ಶಿವ ಶಿವ | ನಿಂದಿಲಿ ಸೋತೆನು ರಣದಲಿ |
ಚಂದಿರವದನೆಯು ದೊರಕದೆ | ಹೊಂದಿದುದವಮಾನ ||
ಇಂದೇತಕೆ ಸಿರಿಯೋಲಗ | ಕುಂದಿತು ಮಾರ್ಬಲ ಮಾನಸ |
ದಂದವ ಸಲಿಸುವನಾವ ವ | ಸುಂಧರೆಯೊಳಗೆನ್ನ || ||೮೯||

ಅರಿಯನು ಗೆಲದಿರೆ ಸುರನರ | ಸರುವರು ಪರಿಹಾಸಿಸುವರು |
ಕರತಟ್ಟುತ ಬಾಲಕಿಯರು | ಕಿರುನಗೆ ನಗದಿಹರೇ ||
ಧರೆಕೈವಿಡಿವಳೆ ಬೆದರಲು | ನರಕವೆ ಸರಿ ಕ್ಷತ್ರಿಯರಿಗೆ |
ಧುರಕಾವಲು ಮತ್ಸಿರಿ | ಮರೆಯಾದಳೆ ಕಡೆಗೆ || ||೯೦||

ಆರಿಗೆ ಪೇಳುವೆ ಬಂದಿಹ | ಭೂರಿತರದ ಸಂಕಷ್ಟವ |
ಹಾರಿಸಲೇಂ ಗತಿಯೆನ್ನಲು | ತೋರಿತು ಮನಕೊಂದು ||
ವೀರನು ಕೃಷ್ಣಾಖ್ಯನು ಪ್ರಿಯ | ದೂರಲು ಕಾಯುವನೆನುತ್ತ |
ಭೋರನೆ ವಂಗಕೆ ಬಂದನು | ಧಾರುಣಿಪತಿಯಂದು || ||೯೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವಸುಧೆಸುರ ಕೇಳಿತ್ತ ಬಲುತರ |
ಕುಶಲದೊಡ್ಡೋಲಗದೊಳಿರೆ ಚರ |
ನುಸುರಿದನು ಪ್ರಿಯಬಂದನೆಂಬೊಂ | ದೊಸಗೆ ಕೇಳ್ದು || ||೯೨||

ಎದ್ದಿದಿರ್ಗೊಂಡಿರದೆ ಮಣಿಮಯ |
ಗದ್ದುಗೆಯ ತಾನಿತ್ತು ಮೌಕ್ತಿಕ |
ಬದ್ಧ ಪೀಠದೊಳೊಪ್ಪಿ ನುಡಿದನು | ಬದ್ಧಮಾತ || ||೯೩||

ಬಂದೆಯಾ ಸುಪ್ರೀಯಮಣಿಯೈ |
ತಂದೆಯಾ ಸೌಭಾಗ್ಯ ಸಿರಿ ಸುಖ |
ದಿಂದಲಿಹರೇ ನಿನ್ನವರು ಪೇ | ಳೆಂದು ನುಡಿದ || ||೯೪||

ಮತ್ತೆ ನೋಡಲು ಚಂದ್ರಸೇನನು |
ಪೊತ್ತ ದುಗುಡದೊಳೆರಡು ಕಂಗಳು |
ಹೊತ್ತಿ ಹೊಗೆಯಲು ಮೈತ್ರಿ ಭಾವದಿ | ಮತ್ತೆ ಕೇಳ್ದ || ||೯೫||

**ರಾಗ ಭೈರವಿ ಝಂಪೆತಾಳ**

ಆರಿಂದ ಬಂತು ನಿನ | ಗೀ ರೀತಿ ಚಿಂತೆಗಳು |
ಕಾರಣಂಗಳದೇನು | ಧಾರುಣೀಶ್ವರನೆ || ||೯೬||

ಅರಿಗಳಿಂದುಬ್ಬಿದರೊ | ದೊರೆತನಕೆ ಬಂದೆಡರೊ |
ಧುರದೊಳಪಜಯವಾಯ್ತೊ | ನೆರೆ ಖ್ಯಾತಿ ಪೋಯ್ತೊ || ||೯೭||

ಆನಿರಲು ಭಯವೇನು | ಏನಾದುದೆಂಬುದನು |
ನೀನೆನ್ನೊಳೊಗೆಯೆನಲು | ಕ್ಷೋಣೀಂದ್ರನೆಂದ || ||೯೮||

**ರಾಗ ಸೌರಾಷ್ಟ್ರ ಏಕತಾಳ**

ಏನೆಂಬೆನು ಪ್ರಿಯನೇ | ನಿನ್ನೊಡನೆ |
ಮಾನದ ಹಾನಿಯನೆ ||
ಕ್ಷೋಣಿಪ ಕೋಸಲ ಜಾಣನು ಸುತೆಕ |
ಲ್ಯಾಣವ ಗೈವುದ ತಾನರಿತೈದುತ |
ಮನಸೊತ್ತ | ಮುದದತ್ತ | ನೃಪನತ್ತ || ||೯೯||

ಕೇಳಲು ಬಾಲೆಯನು | ಮಾವನು |
ತಾಳುತ ಖಾತಿಯನು ||
ಕಾಳಗದೊಳು ಜನ | ಜಾಲವಳಿಸೆ ಬಲು ||
ಕೋಲನೆಸೆದು ಛಲ | ಕೇಳಿ ಗೈದು |
ಭುಜ ಹೊಯ್ದು | ಬಲುವೈದು | ಮೇಲ್ವಾಯ್ದು || ||೧೦೦||

ಮಾಡಲು ಯುದ್ಧವನು | ವಿರಥನ |
ಮಾಡಿಯೆ ಭಂಗವನು ||
ಕೂಡಲಿನ್ನು ಮುಂದಾಡಲೇನು ಪಗೆ |
ಮೂಢಗಿಂದು ಸತಿಗಾಡಿಸಿತಾರೈ |
ರಥವೇರೈ | ಪಥ ಸಾರೈ | ಹಿತಬೀರೈ || ||೧೦೧||

**ರಾಗ ಕೇದಾರಗೌಳ ಝಂಪೆತಾಳ**

ಎಂದೆನಲು ಕೃಷ್ಣಾಖ್ಯನು | ನಗೆ ಸೂಸು | ತೆಂದನೀ ಬವಣೆಯನ್ನು ||
ಮುಂದುವರಿದೈತಂದಿದೆ | ಮನಸಿನೊಳ | ಗೊಂದಿರ್ಪುದದನು ಪೇಳ್ವೆ || ||೧೦೨||

ಹಿರಿಯನಲ್ಲವೆ ಮಾವನೂ | ತಾ ತಂದೆ | ಸರಿಯಾತನೊಡನೆ ನೀನು ||
ತರಳೆಗಿಚ್ಛೆಸುತಲಲ್ಲಿ | ದ್ರೋಹತ್ವ | ವಿರಚಿಸಲಿಕಾದುದಲ್ಲಿ || ||೧೦೩||

ಬೇಡವಾ ಲಲನೆ ಬಗೆಗೆ | ಭೂಪನೊಳು | ಮಾಡದಿರು ಛಲವ ಹೀಗೆ ||
ರೂಢಿಯೊಳಗರಸಿ ನಿನಗೇ | ತಕ್ಕವಳ | ಜೋಡುಗೆತ್ತಿಸುವೆ ಕಡೆಗೆ || ||೧೦೪||

ವರೆಯಬೇಡೀ ಮಾತನು | ನೀನೆನಗೆ | ಪರಮ ಸಖನಾದಡಿನ್ನು ||
ಧರಣಿಪನ ಸಂಗರದಲಿ | ಬಂಧಿಸುತ | ತರುಣಿಯಳ ತಪ್ಪುದಿಲ್ಲಿ || ||೧೦೫||

ನೀ ಪೋಗದಿರಲು ತಡೆದು | ಭಜಿಸುತಲು | ಮಾಪತಿಯ ವರವ ಪಡೆದು ||
ಭೂಪನನು ತರಿದು ಸತಿಯ | ತರದಿರಲು | ರೂಪ ಮರೆಸುವೆನು ರಾಯ || ||೧೦೬||

**ರಾಗ ಮಾರವಿ ಏಕತಾಳ**

ಈ ತೆರ ತವ ಮನದಾಸೆಗಳಿದ್ದರೆ | ಭೀತಿಯೆ ಸಂಗರಕೆ ||
ಪ್ರೀತಿಲಿ ವೀಳ್ಯವನೋತಿಡೆ ಪಗೆಯರ | ವ್ರಾತವ ಜೈಸಲಿಕೆ || ||೧೦೭||

ಅನುಮಾನವ ಬಿಡು ಜನಪನ ಸೆರೆಸಹ | ವನಿತೆಯ ಪಿಡಿದಾನು ||
ನಿನಗೀವೆನು ಬಲು ಘನ ಭೂಪಾಲರು | ತೃಣ ಸಮ ತನಗಿನ್ನು || ||೧೦೮||

ಹಿಡಿ ನಂಬುಗೆ ಸುರರೊಡೆಯಜಭವಮುಖ | ಕಡುಗಲಿಗಳು ತಡೆಯೆ ||
ತಡೆಗಡಿದಧಟರ ನುಡಿ ನಡೆಸುವೆನಾ | ಬಿಡದೆಂದವ ನುಡಿದ || ||೧೦೯||

**ವಾರ್ಧಕ**

ಏರಿದಂ ರಥವನುಂ ಹಾರಿದಂ ಮರುತನಂ
ಮಿರಿ ಮುಂದಕೆ ಬಂದು ಪಗೆಯ ಪಟ್ಟಣವನ್ನು
ಸಾರಿದಂ ಕೋಟೆಯನ್ನೇರಿ ಸೈನ್ಯದ ಸಹಿತ ಕಣೆಗಳಿಂ ಬಾರಿಸಲ್ಕೆ |
ದ್ವಾರಪಾಲಕರಿದನು ಕಾಣುತಲಿ ತಡೆದರುಂ
ವೀರರಿಂಗಿದಿರಾಗಿ ನಿಲಲು ಕೈಸಾಗದಿರೆ
ದೂರಿದರು ಬಂದೊಡನೆ ಬೆವರುತ್ತ ತಡವರಿಸಿ ಭೂಮಿಪಗೆ ವಾರ್ತೆಯನ್ನು || ||೧೧೦||

**ರಾಗ ಮುಖಾರಿ ಏಕತಾಳ**

ರಾಜೇಂದ್ರಚಂದ್ರ ಲಾಲಿಸಯ್ಯ | ನೋಡಲು ಪಗೆಯಾ |
ರಾಜಾಭೋಜರ ದಂಡು ಜೀಯಾ ||
ತೇಜಿರಥದಿ ಬಲು ರಾಜಿಸುತ್ತಿಂದಿನೊ |
ಳಾಜಿಗೆ ಬಂದರು ಸೋಜಿಗವರಿಯೆವು || ಪಲ್ಲವಿ ||

ಎಂಬುದೇನು ಪಗೆವೃಂದ | ಮುಸುಕಿದರಿಂದ |
ಅಂಬುಧಿ ಮೇರೆ ತಪ್ಪಿದಂದ | ನುಗ್ಗಲಿಕಿಂದಾ |
ಇಂಬುಗಾಣದು ಭಟರಿಂದ | ಮುಂದ್ವರಿವಂದ |
ಶಂಭು ಬಲ್ಲನು ತಿಳಿಯೆವೊಂದ | ನಿಂದೆಂದವನಂದ |
ಅಂಬರದಿಕ್ತಟವೆಂಬುದು ತೋರದು | ಮುಂದ್ವರಿದರು ಮನ ಹಂಬಲ ಮಿರದು |

ನಿಂದೊರದು | ಬಲು ಜರದು | ನಮಗಿರಿದು | ಕದ ಸುರಿದು |
ಜನ ತರಿದು | ನುಗ್ಗರಿದು | ನೆರೆ ಮೆರದು | ಇರವರು ಖರೆ || ||೧೧೧||

ಸಟೆಮಾತೆ ಹಿಂದಣದಿದಲ್ಲ | ಕೋಟೆಯನೆಲ್ಲ |
ಹಟದಿಂದ ಪುಡಿಗೈದರಲ್ಲ | ಕೊತ್ತಳಗಳ |
ಚಟುಲತೆಯಿಂದ ಜರಿದರಲ್ಲ | ನೋಡಿದರಲ್ಲ |
ತಟಮಟ ಮನಕೆ ಮಾಡ್ದರಲ್ಲ | ಪಟುಭಟದಿಟವೆಲ್ಲ |
ಕಠಿನತೆಯಲಿ ಭೂ | ತಟ ಧೂಳೆದ್ದುದು |
ಘಟಿಸಲು ಧೂರ್ಜಟಿ ಬಲತಾಳ್ಕೈ | ಯಿದ ಕೇಳ್ಕೈ | ಭೂಪಾಲ್ಕೈ |
ಘನಹೇಳ್ಕೈ | ಬೇಗೇಳ್ಕೈ | ಖತಿತಾಳ್ಕೈ | ಪಗೆಸೀಳ್ಕೈ |
ಬಲ ಮೇಳ್ಕೈ | ಸೇಳೇಳ್ ದೊರೆಯೆ || ||೧೧೨||

**ರಾಗ ಶಂಕರಾಭರಣ ಮಟ್ಟೆತಾಳ**

ಚಾರನೆಂದ ನುಡಿಯ ಕೇಳು | ತಾರು ನಮ್ಮೊಳಳವಿಗೆಂದು |
ಮಿರಿ ಬಂದ ಭಟನ ನೋಳ್ಪ ನೀ ರಣಾಗ್ರದಿ ||
ಸೇರಿರೆಂದು ನೆರಹಿ ಸೇನೆ | ಧಾರುಣೀಂದ್ರ ಬಂದು ಪಗೆಯ |
ಮೋರೆ ನೋಡುತೆಂದ ಬಲು ಗಂಭೀರ ರೋಷದಿ || ||೧೧೩||

ಧೀರ ಭಳಿರೆ ನಮ್ಮ ಪುರಕೆ | ಭೂರಿ ದಾಳಿಯಿತ್ತು ಕೋಟೆ |
ಏರಿ ಮುರಿದು ಕೊತ್ತಳವನು | ಹೀರಿ ಜನಗಳಾ |
ಭಾರಿ ಪಂಥವಾಂತುಬಂದ | ಕಾರಣಂಗಳೇನು ವಾರ್ತೆ |
ದೋರದಿನಿತು ಗೈದೆ ಲೇಸು | ಯಾರು ಪೇಳೆಲ || ||೧೧೪||

ಒರೆಯಲೇನು ವಂಗದೇಶ | ದರಸನಾ ಕೃಷ್ಣಾಖ್ಯನೆಂದು |
ಕರೆವರೆನ್ನ ಚಂದ್ರಸೇನಗಿರದ ಹಮ್ಮನು ||
ತರಿಯಲೆಂದು ಬಂದನವನು | ಪರಮ ಪ್ರಿಯನೆನಗೆ ನಿನ್ನ |
ತರಳೆಯಾತಗೀಯದಿರಲು | ಧರಿಸು ಧನುವನು || ||೧೧೫||

ಎಂದ ಮಾತ ಕೇಳಿ ಖಾತಿ | ಯಿಂದ ನುಡಿದನೊಳ್ಳಿತಾಯ್ತು |
ಬಂದ ದಾರಿಗೊಂಡು ಪೋಗು | ಕುಂದದೆನ್ನಲಿ ||
ನಿಂದು ಪಿಂದೆ ಭಂಗವಾಂತ | ಮಂದಮತಿಯ ತೆರದೊಳಿಂದು |
ಮುಂದೆ ಬಳಲಲೇಕೆನಲ್ಕೆ | ನೊಂದು ಮನದಲಿ || ||೧೧೬||

ನುಡಿದ ನೆಲಗೆ ಪೊಡವಿಪಾಲ | ಸಡಗರಂಗಳಿಲ್ಲಿ ಬೇಡ |
ಕಡುಹುತನಗಳುಂಟೆ ತೋರು | ತಡೆಯದೆನ್ನಲಿ |
ತೊಡು ತೊಡಂಬನೆನುತ ಬಾಣ | ಝಡಿದು ಬಿಡಲಿಕಾತನದರ |
ನಡುವೆ ತರಿಯಲೆಲ್ಲ ಕಾಣು | ತ್ತೊಡನೆ ಭರದಲಿ || ||೧೧೭||

ಭಾರಿ ಕ್ರೋಧವೇರಿ ಸತ್ತ್ವ | ತೋರುತರಿಯನೆಚ್ಚ ಭರಕೆ |
ದಾರಿ ಕಾಣದಾಯ್ತು ಕೋಸ | ಲೂರ ಪಾಲಗೆ ||
ಭೂರಿ ಬಳಲುತಿಳೆಯೊಳೊರಗೆ | ವೀರನಂದು ಸೆರೆಯ ಪಿಡಿದು |
ವಾರೆ ಹಾಸ್ಯದಿಂದ ನುಡಿದ | ಧಾರುಣೇಂದ್ರಗೆ || ||೧೧೮||

**ರಾಗ ಸುರುಟಿ ಏಕತಾಳ**

ಸಿಕ್ಕಿದೆ ಭೂಪನೇ ನೀ | ಬಲು | ಘಕ್ಕನೆ ತನ್ನೊಡನೇ ||
ಸೊಕ್ಕಿನೊಳಳಿಯನ | ತಿಕ್ಕಿದೆ ನೆಂಬೊಂ |
ದಕ್ಕರಕಿಂದಿಲಿ | ಕಕ್ಕಸಮಾಯ್ತೈ |
ಘನ ಹೋಯ್ತೈ | ದಣಿ ವಾಯ್ತೈ || ||೧೧೯||

ಆರ್ಯೆ ನಿನ್ನುವನು | ಬಿಡಿಸುವ | ಭೂರಿ ಪರಾಕ್ರಮನು ||
ಹೋರಿದೆ ತೋರಿ ರೇಂ | ಕಾರದೊಳೀಪರಿ |
ದಾರಿಯಾಯ್ತೆ ತವ | ನಾರಿಗೆ ಪಥವೇನ್ |
ಗತಿಯೇನ್ | ಹಿತವೇನ್ || ||೧೨೦||

ವರ ಧೈರ್ಯ ಕುಂದಿಹೆಯಾ | ಸತಿಯೊಡ | ನುರುತರ ಸದ್ಧೈರ್ಯ ||
ಇರು ರಥದೊಳಗೆಂ | ದರಿಯನು ಬಂಧಿಸಿ |
ತರಳೆಯನರಸಲು ಸರಿಯುತ ಮತ್ತಾ |
ಬಲವಂತ | ಹುಡುಕುತ್ತ || ||೧೨೧||

**ಭಾಮಿನಿ**

ಚಾರಕರು ಬಂದಜಗೆ ಸಂಗರ
ಸಾರ ದೂರಲು ಕೇಳಿ ಧನುಗೊಂ
ಡಾರುಭಟಿಸುತ ಮಿರಿ ಪರಿಕಿಸಿ ನೃಪನ ಸೆರೆಬಿಡಿಸಿ |
ಹೀರುತರಿದಳವೇರಿ ಕೋಪದಿ
ಸಾರಿ ರಿಪುವೀರನನು ತಡೆಯುತ
ಆರುಭಟಿಸುತ ಗಜರಿ ಗರ್ಜಿಸುತೆಂದ ಹೂಂಕರಿಸಿ || ||೧೨೨||

**ರಾಗ ಕೇದಾರಗೌಳ ಅಷ್ಟತಾಳ**

ಬಲ್ಲಿದನಹೆ ಏನೋ ಮಲ್ಲತನದಲಿ ನ | ಮ್ಮೆಲ್ಲವರಿವಧಟೆಂದಾ ||
ಬಲ್ಲತನದಲಿ ನೃಪನನು ಜೈಸಿದ | ಖುಲ್ಲತೆ ತೋರ್ಪುದೆಂದ || ||೧೨೩||

ಹಾರದಿರ್ರೈ ಎಲೆ ಧೀರ ನೀನಾರ್ ಮದ | ವೇರುತ ಸಂಗರಕೆ ||
ಮೀರುತಲೈತಂದು ಭಾರಿಯೊಳಡಗಿದ | ಭೋರನೆ ಸಾಯಲಿಕೆ || ||೧೨೪||

ಅಳಿಯುಳಿಯೆಂಬುದು ನಿಲುಗಡೆ ನಿನಗೇನು | ಜಲಜನಂದನನಹುದೆ ||
ಅಳವಿಯೊಳೆನ್ನಯ ಬಲ ವೀಕ್ಷಿಸೆಂದಾತ | ಬಲುಶರವೆಚ್ಚ ಮುಂದೆ || ||೧೨೫||

ತರಿದೆಂದ ನೋಡಲು ಧುರಮಲ್ಲನೈ ವೃದ್ಧ | ತೆರಳುವದೈ ಮನೆಗೆ ||
ನೆರೆ ಜವ್ವನದ ಭಟರಿರಲಿತ್ತ ಬರಲೆಂದು | ತಿರುಹೆ ಮಿಸೆಯನವಗೆ || ||೧೨೬||

ಪೊಳೆಯನುತ್ತರಿಸದ ಹುಳುವಿಗೇತಕೆ ಪಂಥ | ಜಲನಿಧಿ ಲಂಘಿಸುವ ||
ಸಲೆಭುಜಬಲವಿರೆ ನಿಲುವದೆಂದಾತಗೆ | ಮುಳಿದೆಚ್ಚಯೋಧ್ಯನಾಥ || ||೧೨೭||

ಎಚ್ಚಡೆ ಶರಮಯ್ಯ ಚುಚ್ಚಿತು ಸರ್ವಾಂಗ | ಬಚ್ಚಿದುದರುಣ ಧಾರೆ ||
ಹೆಚ್ಚಿದ ಪಗೆ ಪ್ರಾಣ ಚಚ್ಚರವೈದಲು | ಬೆಚ್ಚುತ ಭಟರು ಜಾರೆ || ||೧೨೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಳಿಕ ಭೂಮಿಪ ರಣಕೆ ತನ್ನಲಿ |
ನಿಲುವರನು ಕಾಣದೆಯು ಬರೆ ಕೋ |
ಸಲಪತಿಯು ಬಹುವಿಧದಿ ಮನ್ನಿಸು | ತಜನಿಗೆಂದ || ||೧೨೯||

ಆವ ಭಯ ನಮಗಿನ್ನು ಬಂದಿಹ |
ನೋವ ಪರಿಹರಗೈದು ಪಗೆಯನ |
ಜೀವವನು ಶೈಮಿನಿಗೆ ಕಳುಹಿದ | ಭಾವನವರೇ || ||೧೩೦||

ಎಂದವನ ಮನ್ನಿಸುತಲಜಸುತ |
ಗೆಂದ ನೀ ರಾಜ್ಯವನು ಪಾಲಿಸು |
ನಂದನರು ತನಗಿಲ್ಲವಳಿಯನು | ಕಂದ ಸರಿಯೈ || ||೧೩೧||

**ವಾರ್ಧಕ**

ಎಂದು ದಶರಥನಿಗಂ ಬಳುವಳಿಗೆ ದೇಶಮಂ
ಚಂದ ಮಿಗೆ ಭೂವರಂ ಇತ್ತು ಮುದಗೊಂಡವಂ
ಇಂದಿರಾಧವನನುಂ ಮನದೊಳಗೆ ನೆನೆವುತಂ ಕೈವಲ್ಯಮಂ ಪಡೆದನು ||
ಅಂದಲ್ಲಿ ಮಂತ್ರಿಯಂ ನಿಲಿಸುತಲೆ ಸೊಸೆ ಸಹಿತ
ಕಂದನೊಡಗೂಡುತದ ಅಂದಯೋಧ್ಯಕೆ ಬಂದು
ಚಂದದಿಂದಿರುತಿರಲು ಒಂದು ದಿನ ಅಜ ತನ್ನ ನಂದನಂಗಿಂತೆಂದನು || ||೧೩೧||

**ರಾಗ ಬೇಗಡೆ ಆದಿತಾಳ**

ಕಂದ ನೀನಿಂದು ಮಾತ ಲಾಲಿಸೊ | ಕಡುವೃದ್ಧನಾದೆ |
ಮುಂದೆ ನೀ ಧಾತ್ರಿ ಪಾಲಿಸೊ ||
ಕುಂದು ಕೊರತೆಯೊಂದ ತಾರದೆ | ಇನಕುಲಕೆ ಕೀರ್ತಿ ||
ಯಿಂದ ಬಾಳು ಚಿಂತೆಯಿಲ್ಲದೆ || ||೧೩೩||

ನೀತಿ ಧರ್ಮಾಚಾರ ಚಾತುರ್ಯ | ಕಲ್ಯಾಣ ಭೋಗ |
ರೀತಿ ಸುಜನ ಪಾಲವೀಕಾರ್ಯ ||
ಘಾತಕಿಗಳತರಿ ಸಮರದಿ | ಸುಖ ಸಂ |
ಪ್ರೀತಿಯಾಂತು ಮೆರೆಯೊ ನಿತ್ಯದಿ || ||೧೩೪||

ವನಕೆ ಪೋಗಿ ದೇವನಡಿಯನು | ನೆನಸುತ್ತ ಆನು |
ಘನತೆ ಪದವಿಯನ್ನು ಪಡೆವೆನು ||
ಎನುವ ಮಾತ ಕೇಳುತಾಳ್ದನ | ಬೆಂಬಿಡೆನೆಂದು |
ವನಿತೆಯಲ್ಲಿ ಬರಲಿಕಾಕ್ಷಣ || ||೧೩೫||

**ಭಾಮಿನಿ**

ಅರಸ ಪರಿಕಿಸಿ ಸುತಗೆ ಪಟ್ಟವ
ವಿರಚಿಸುತ ಮಂತ್ರಿ ಪ್ರಧಾನಂ
ಗರುಹಿಸತಿಸಹಿ ತೈದಿ ವನದಲಿ ಮುನಿಗಳೆರಕದಲಿ ||
ಭರದಿ ಹರಿಯನು ಭಜಿಸುತಲೆ ಸುರ
ವರರು ಭಾಪೆಂದೆನುತ ಪೊಗಳಲು
ಪರಮತರ ಸಾಯಜ್ಯಪದವನು ಪಡೆದ ತೋಷದಲಿ || ||೧೩೮||

**ರಾಗ ಕಾಂಭೋಜಿ ಝಂಪೆತಾಳ**

ಅರಸನಾ ಪತ್ತುರಥನಿರಲಿತ್ತ ವಂಗೇಶ | ನೊರಗೆ ಕರಗುತಲಿ ಸಾರಥಿಯು ||
ಮರುಗಿ ಬಂದೆಲ್ಲವನು ನೆರೆ ಚಂದ್ರಸೇನಕನಿ | ಗೊರೆಯೆ ಬಿಸುಸುಯ್ದನಾ ರಾಯ || ||೧೩೭||

ಹರಹರಾ ನಿಜ ಸಖನ ತರಿದನೇನಜರಾಜ | ತರಳೆಯಳ ಸಹಿತೊಯ್ದನಲ್ಲ ||
ಪರಮ ಸ್ನೇಹಿತನನ್ನು ತರಿದ ಶತ್ರುಗಳನ್ನು | ಧುರದಿ ಗೆಲ್ಲುವ ಪರಿಯದೆಂತು || ||೧೩೮||

ಅದ್ರಿಜೆಯ ರಮಣನಡಿ ಭದ್ರ ಸ್ತೋತ್ರಗಳಿಂದ | ಸಾರ್ದರ್ಚಿಸುತ ವರವ ಪಡೆದು ||
ಉದ್ರೇಕನಾಂತರಿಪು ಭಟರ ಗೆಲ್ಲುವೆನೆಂದು | ರುದ್ರನನು ಕಾಣಲವ ನಡೆದ || ||೧೩೯||

ಸರಿದು ಬಿಲ್ವದ ವನದಿ ನೆರೆ ಮಿಂದು ರುದ್ರಾಕ್ಷಿ | ಧರಿಸಿ ಭಸ್ಮವ ಪೂಸಿನಿಂದ ||
ವರನಾಸಿಕದಿ ದೃಷ್ಟಿಯಿರಿಸಿ ಏಕೋಮನದಿ | ಹರನ ಪಾದವ ನೆನೆದನಂದು || ||೧೪೦||

**ವಾರ್ಧಕ**

ಈಶ ಗಿರಿಜೇಶ ಲೋಕೇಶ ನುತಪೋಷ ಭೂ
ತೇಶ ಖಳನಾಶ ಮುನಿತೋಷ ಸರ್ವೇಶ ಜಗ
ದೀಶ ತ್ರೈನೇತ್ರ ಸರ್ವೇಶ ಶಶಿಭಾಸ ವಿಶ್ವೇಶ ಲೋಕೇಶ ರಕ್ಷ |
ಶ್ರೀಶಸಖ ನಂದೀಶ ಕಾಶೀಶ ತ್ರಿಗುಣೇಶ
ಪಾಶಭಯನಾಶ ಯೋಗೇಶ ಪ್ರಣವೇಶ ಜಯ
ನೀ ಸಲಹು ಪೋಷಿಸೆಂದಾತ ಕೊಂಡಾಡಿದನು ಪರಶಿವನನಂದು ದೃಢದಿ || ||೧೪೧||

**ಭಾಮಿನಿ**

ಅವನು ತಪವಾಂತಿರಲಿಕಿತ್ತಲು
ಭುವನದಲ್ಲಣ ದಶವದನನು
ತ್ಸವದಿ ಸಿಂಹಾಸನದೊಳಧಿಕಾನಂದ ವೈಭವದಿ |
ದಿವಿಜತತಿಜಯವೆನಲು ದಿತಿ ಸಂ
ಭವರು ರಾಕ್ಷಸ ಮಂತ್ರಿ ಮುಖ್ಯರು
ಕುವರರೊಡನೊಪ್ಪಿರಲು ಮನದೊಳು ತಾನೆಯೋಚಿಸಿದ || ||೧೪೨||

**ರಾಗ ಕಾಂಭೋಜಿ ಝಂಪೆತಾಳ**

ಆರಿರುವರಿನ್ನು ಸರಿ ಮೂರುಲೋಕವನೆಲ್ಲ |
ಸಾರಿಜೈಸುತ ಭಾಗ್ಯಸೆಳೆದ ||
ವಾರಿಜೋದ್ಭವ ಸುರರ ಸೋಲಿಸಿದೆ ಶಂಕರನ |
ಮೀರಿವಲಿಸಿದೆ ಛಲದಿ ಹಿಂದೆ || ||೧೪೩||

ಅರಿತೆ ಸನಕಾದ್ಯರಲಿ ತರಣಿವಂಶದಿ ವೈರಿ |
ದೊರೆ ಪತ್ತುರಥಗೆ ಮಗನಾಗಿ ||
ಹರಿಜನಿಸಿ ಬಹನೆಂದು ತಿಳಿದಯೋಧ್ಯಾಖ್ಯಪುರ |
ದರಸ ಮಾಂಧಾತಗಿದಿರಾಗಿ || ||೧೪೪||

ಭೂರಿ ಸೇಣಸುತ ಗೆದ್ದೆ ಸಾರಿಯನರಣ್ಯಕನ |||
ಹೀರಿ ಪಲಗಾಲವಾಯ್ತೀಗ ||
ಧಾರುಣಿಪರಾರೆಂದು ನೀರಜೋದ್ಭವಗೊರೆಯೆ |
ವೀರ ದಶರಥನೆಂದು ಪೇಳ್ದ || ||೧೪೫||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಿಸಜಭವನೆಂದುದನು ಕೇಳುತ |
ಮಸಗಿ ಬಹಿರಂಗದಿ ಪ್ರಹಸ್ತನೊ |
ಳುಸುರಿದನು ಮಾರ್ಬಲವನೆರಹುವ | ದಸಮ ಧುರಕೆ || ||೧೪೬||

ಪತ್ತುಸ್ಯಂದನಯೋಧ್ಯಪುರದಲಿ |
ಉತ್ತಮನು ತಾ ಶ್ರೇಷ್ಠನೆಂಬುದ |
ನಿತ್ತಲರಿತೆನು ಜೈಸಬೇಕವ | ನತ್ತಸರಿಯೆ || ||೧೪೭||

ಎಂದು ಮಿಸೆಯ ತಿರುಹಿ ಮಣಿಮಯ |
ಸ್ಯಂದನವನಡರುತ್ತ ಬಲ ಸಹಿ |
ತಂದು ಪೊರಟೈತಂದನಾ ಅಸು | ರೇಂದ್ರ ಭರದಿ || ||೧೪೮||

**ವಾರ್ಧಕ**

ಆರ್ಬಣ್ಣಿಸುವನಸುರನರ್ಭಕರ ಸಹಿತ ಸಚಿ
ವರ್ಬಹಳ ಬಲದಿಂದಲರ್ಬುದದ ಸಂಖ್ಯೆಯಿಂ
ಪರ್ಬುದಳ ಕೂಡಿಬರೆ ಪರ್ವತವೆ ಜರಿದು ಭೂಗರ್ಭಾಭ್ರನಡನಡುಗಲು ||
ಜರ್ಬಿನಿಂದಾಪುರವ ಪರ್ಬುಕಂದಿಸಿಕಾದ
ವರ್ಬರಲು ಮೇಲೆ ಖಳ ವೂರ್ಬಲವು ಧುಮುಕುತಂ
ದಾರ್ಭಡಿಸುತಿರೆ ಚಾರಕರ್ ಭೀತಿಯಿಂದೈದುತುರ್ವೀಂದ್ರಗಿಂತೆಂದರು || ||೧೪೯||

**ರಾಗ ಸಾರಂಗ ಏಕತಾಳ**

ಲಾಲಿಸಬೇಕು ಜೀಯ | ರಾಯ ನಮ್ಮೊಡೆಯಾ |
ಲಾಲಿಸಬೇಕು ಜೀಯ || ಪಲ್ಲವಿ ||

ಈಟಿ ಕಠಾರಿಯು | ಘೋಟಕ ಗಜರಥ |
ಕೂಟವಧಿಕ ಖಳ | ಕೋಟಿಯೊಳಿಂದೂ | ಐತಂದು || ಲಾಲಿಸ || ೧೫೦ ||

ಇತ್ತ ನಮ್ಮ ದ್ವಾರದ ಹೊರಗೆ | ಹತ್ತು ತಲೆಯ ದೈತ್ಯ ಕಡೆಗೆ |
ಸುತ್ತುಮುತ್ತು ಬಲವ ನಿಲಿಸುತ | ಇರ್ಪನು ದಾತ || || ೧೫೧ ||

ಏನೆಂಬೆ ದೊರೆಯೆ | ದಾನವರುಬ್ಬಟೆ |
ತಾನಂಭೋ ನಿಧಿ | ಗಾನದೊಳಿಹುದು | ನೋಡುವುದು || ೧೫೨ |

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಉಸುರಲೀ ಪರಿ ಕೇಳ್ದು ರೌದ್ರದಿ |
ಮಸಗಲೇಣ್ದೆಸೆ ಕಂಪಿಸಲು ಮದ |
ಮೆಸಗಿ ಮುತ್ತಿದನಾವನಿಂದಿನೊ | ಳಸಮ ಭಟನು || ೧೫೩ ||

ಆರು ಬಂದರದೇನಿದೆಂಬುದ |
ಸಾರಿ ಪರಿಕಿಪೆನೆಂದು ಮಣಿರಥ |
ವೇರಿ ಬಲಗೂಡುತ್ತ ಪೊರಟನು | ದಾರಧೀರ || ೧೫೪ ||

ಬಂದು ತಾರಕೆ ಮಧ್ಯದಲಿ ಶಶಿ |
ಯಂದದಿಂದರಿತಿಮಿರದ್ಯುಮಣಿಯ |
ನಿಂದು ನಿಜಕುಲ ಧರ್ಮ ಮಾರ್ಗದೊ | ಳೆಂದ ಖಳಗೆ || ೧೫೫ ||

**ರಾಗ ಶಂಕರಾಭರಣ ಅಷ್ಟತಾಳ**

ಅಸುರರಧಿಪ ಕೇಳು ನಿನ್ನ | ಪೆಸರು ವಂಶ ರಾಜ್ಯಗಳನು ||
ಕುಶಲದಿಂದ ಪೇಳೆನಲ್ಕೆ | ವಸುಧೆಪಾಲಗೆ || ೧೫೬ ||

ಅಸಮಸಹಸಿ ಲಂಕೆಯಾಳ್ದ | ದಶಶಿರಾಖ್ಯ ಬೊಮ್ಮ ವಂಶ |
ವೆಸೆಯುವಹಿತಶರಧಿವಡಬ | ನುಸುರು ನಾಮವ || ೧೫೭ ||

ತರಣಿಕುಲವಯೋಧ್ಯದೇಶ | ದರಸ ವೈರಿ ಕರ್ಪುರಾಗ್ನಿ |
ಮೆರೆವ ದಶರಥೇಂದ್ರ ನಿಲ್ಲಿ | ಯರುಹು ಕಾರ್ಯವ || ೧೫೮ ||

ಧರಿಸು ಚಾಪ ಸರಿಸು ಬಲವ | ಧುರಕೆನುತ್ತ ಬಂದೆನಿಲ್ಲಂ |
ದೊರೆಯೆ ಖಾತಿಗೊಂಡು ನುಡಿದ | ಜರೆದು ವೈರಿಯ || ೧೫೯ ||

**ಭಾಮಿನಿ**

ನೀನೆಲಾ ಪಿಂದೆಮ್ಮ ವಂಶದ
ಕ್ಷೋಣಿಪತಿಯನರಣ್ಯನಿರಿದಿಹ
ದಾನವಾಧಿಪ ಬಲ್ಲೆ ನಿಲ್ಲೆಂದೆನುತ ಗರ್ಜಿಸಿದ |
ತಾನೆ ಖಳಪತಿ ಸನ್ನೆಯಿಂಬಲು
ಸೇನೆ ಮುತ್ತಲಿಕಾ ಪ್ರಹಸ್ತನು
ಸಾಣೆಯಲಗನು ಸುರಿಸಿ ಮತ್ತಾ ನೃಪತಿಗಿಂತೆಂದ || ೧೬೦ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ರಾಯ ನಮ್ಮೊಳಿಂದು ಧುರವ ಗೈಯುತ |
ಕೊಲಿಸಲೇಕೆ ದಳವನೆಲ್ಲ ವ್ಯರ್ಥ ಕಾದುತ ||
ಕಲಿತ ಚಾಪ ಶಸ್ತ್ರ ವಿದ್ಯಗಳನು ತೋರಿಸು |
ತಿಳಿವೆನೆನಲು ನಿನ್ನ ಪೆಸರದಾವುದೆಂದನು || ||೧೬೧||

ಇತ್ತಕೇಳು ಲಂಕೆಯೊಡೆಯ ರಾವಣೇಂದ್ರನ |
ಮಿತ್ರ ಸಚಿವ ನಾ ಪ್ರಹಸ್ತ ನೋಡು ವಿಕ್ರಮ ||
ದೈತ್ಯ ಸೇನೆ ಸಹಿತ ಮುಸುಕಿ ಮೇಲೆ ಬೀಳಲು |
ಅಸ್ತ್ರದಿಂದ ರಕ್ತ ಸುರಿಸೆ ಮಂತ್ರಿ ಖತಿಯೊಳು || ||೧೬೨||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ವೀರ ನೀನಾದೆ ಶಾಭಾಸುರೆ | ಖಳ | ರಾರುಭಟೆಗೆ ನರರ್ ನಿಲುವರೆ ||
ಈ ರೀತಿ ಬಲಗಳ ಭಂಗಿಸಿ | ನಮ್ಮ | ಮೀರಿಸಲಪ್ಪುದೆ ಸಹಸಿ || ||೧೬೩||

ಧಾರಿಣಿಯೊಳಗಿಪ್ಪ ಮನುಜರ | ಬಲ | ಹಾರಿಸುತ್ತೇರಿದಹಂಕಾರ ||
ಭೂರಿಯ ಪಿತ್ತವನಳಿಸುವೆ | ಪ್ರಾಣ | ಹಾರಿಸುತ್ತೆಮನತ್ತ ಸರಿಸುವೆ || ||೧೬೪||

ಎನೆ ಕೇಳ್ದು ಖಾತಿಯ ಧರಿಸುತ್ತ | ಹೇ | ಜನಪಾಲ ನೀನುಬ್ಬಬೇಡಿತ್ತ ||
ಘನತೆಯ ತೋರೆನ್ನುತೆಸೆಯಲು | ನೃಪ | ನನಿತಾನು ಖಂಡಿಸೆ ಛಲದೊಳು || ||೧೬೫||

ಏರಿ ಮದದಿ ಬಹ ಶರವನು | ಖಳ | ಧಾರುಣೀಂದ್ರನಿಗೆಚ್ಚಡದರನು ||
ಹೀರಿಸಿ ಪೊಯ್ಯಲು ಬೀಳುತ್ತ | ನೋಡಿ | ಜಾರಿತು ಸೇನೆಯು ಪಿಂದತ್ತ || ||೧೬೬||

**ವಾರ್ಧಕ**

ಧುರದೊಳರಿಜನರು ಶಚಿಮುಖಖಳರು ದಳಗಳುಂ
ಧರೆಗೊರಗೆ ಪಲವರುಂ ಸರಿಯೆ ಲಂಕೇಶ್ವರಂ
ಪರಿಕಿಸುತ ದಶಚಾಪ ಝೇಂಕರಿಸಿ ಹೂಂಕರಿಸೆ ಭುವನತ್ರಯಂ ಬೆಚ್ಚಲು ||
ಸುರರೆಲ್ಲರಚ್ಚರಿಯಲಿರಲಿಕಂದಾ ರಾಯ
ಮೆರೆವ ಕಾರ್ಮುಕವನ್ನು ಝೇಗೈಸೆ ಮುನಿತಂದ
ದೊರೆರಥಕೆ ತೇರನುಂ ಚಾಚಲಂದುಭುಯರುಂ ಕಾದಿದರು ಏವೇಳ್ವೆನು || ||೧೬೭||

**ರಾಗ ಭೈರವಿ ಅಷ್ಟತಾಳ**

ಎಲವೋ ಭೂಪಾಲ ಕೇಳು | ಶಚಿಮುಖ | ಖಳರ ನೀ ಯುದ್ಧದೊಳು ||
ಗೆಲಿದ ಗರ್ವವನರೆ | ಘಳಿಗೆಯೊಳ್ ನಿಲುಸುವೆ | ಛಲದಂಕ ನಿಲ್ಲೆಂದನು || ||೧೬೮||

ಅರಿವೆ ಕೇಳ್ ತವ ಪೂರ್ವದಿ | ಮಾಹಿಷ್ಮತಿ | ಯರಸನೊಡನೆ ರಣದಿ ||
ಸೆರೆಸಿಕ್ಕಿದಧಟನೀ | ಧುರಧೀರ ಬಾರಿಂದು | ಪರಿಕಿಪೆ ಭುಜಬಲವ || ||೧೬೯||

ಗಳಹುವದೇನು ನೀನು | ತ್ರೈಲೋಕ್ಯವ | ಗೆಲಿದಾತನೆಂಬುದನು ||
ತಿಳಿದುಸುರೈ ಸುರ | ಕುಲಜರೆಲ್ಲವರಳು | ಕುವರೇನು ನೀ ಬಲ್ಲೆಯ || ||೧೭೦||

ಕೇಳ್ದೆ ರಸಾತಳದಿ | ಬಲಿಯು ನಿನ್ನ | ನೊಯ್ದಿಡೆ ಬಿಳಿದುರ್ಗದಿ ||
ಜೋಲ್ದಾಬಲೆಯರೆಲ್ಲ | ನಾಲ್ದೆಸೆ ನಿಂದು ಕೈ | ಹೊಯ್ದು ಕುಣಿಸಿದಂದವ || ||೧೭೧||

ಪರಶುರಾಮನು ಭೂಪರ | ಕೊಲ್ಲುತ ಬರ | ಲರಿತಡಗುತಲಿ ಪೋರ ||
ನೆರೆ ಬದುಕಿದ ಭಂಡ | ತರಣಿ ವಂಶಜ ಕ್ಷತ್ರಿ | ಯರಸೆ ನೀ ಧಾರುಣಿಗೆ || ||೧೭೨||

ಅರಿತಿಹೆ ನೀ ರಂಭೆಯ | ತುಡುಕಿ ತಪಿ | ಸಿರುವ ವೇದಾವತಿಯ ||
ಕರವಿಕ್ಕಿ ಶಾಪವ | ಧರಿಸಿದ ಭಟನಲ್ಲೋ | ಸರಿ ಶಾಭಾಸೆಂದನು || ||೧೭೩||

**ಭಾಮಿನಿ**

ಗಿರಿಗೆ ಗಿರಿ ನಿಧಿ ನಿಧಿಗೆ ಮಲೆಯುವ
ತೆರದಿ ಝೇಂಕೃತಿ ಗೈದು ಪಂಥದೊ
ಳೆರಡು ಜಾವವ ಕಾದುತಿರ್ದರದೇನ ಬಣ್ಣಿಪೆನು ||

ಸುರರು ಭಾಪೆಂದೆನುತನಭದೋ
ಳಿರಲು ಶಸ್ತ್ರಾಸ್ತ್ರಗಳ ಕೆದರುತ
ಭರದಿ ಹೂಂಕರಿಸುತ್ತ ದಾನವ ರಾಯನಿಂತೆಂದ || ||೧೭೪||

**ರಾಗ ಭೈರವಿ ಏಕತಾಳ**

ಧಿರುರೆ ಪರಾಕ್ರಮನಹೆಯ | ಸರಿ | ಸರಿಯಾಗುತ ಸೆಣಸುವೆಯ ||
ಪರಿಕಿಸು ಬಲು ಹಂದೆನುತ | ಬಲು | ಶರವೆಚ್ಚಡೆ ಖಂಡಿಸುತ || ||೧೭೫||

ಅಣ್ಣನ ಪುರಬೆಂಬೊತ್ತಿ | ಮು | ಕ್ಕಣ್ಣನ ಪರ್ವತವೆತ್ತಿ ||
ಕುನ್ನಿಯೆ ಪಾತಕಿ ನೀನು | ದಿಟ | ಗಣ್ಯವೆ ತನಗೆನಲವನು || ||೧೭೬||

ದಶರಥ ತಾನೆಂದೆನುತ | ಮದ | ದಶಶಿರನೊಡನೆ ಯುದ್ಧ ||
ಎಸಗಲು ಜಯವಧು ಬಂದು | ನಿ | ನ್ನೊಶವಪ್ಪಳೆ ಸಾರಿಂದು || ||೧೭೭||

ಉತ್ತಮ ಕುಲದೊಳಗುದಿಸಿ | ಆ | ದೈತ್ಯರ ವೇಷವ ಧರಿಸಿ ||
ನೆತ್ತರು ಮಾಂಸವ ಸವಿದು | ಇಹ | ನತ್ತಲೆ ಬರುವಳೆ ಒಲಿದು || ||೧೭೮||

ಆದಡೆ ನಿಲ್ಲೆಂದೆನುತ | ಬಲು | ಕ್ರೋಧದಿ ಮುಸುಕಲು ಮತ್ತ ||
ಮೇದಿನಿಪತಿ ತುಂಡಿಸುತ | ಪಗೆ | ಯಾದನಿಗುಸುರಿದನತ್ತ || ||೧೭೯||

**ರಾಗ ಭೈರವಿ ಝಂಪೆತಾಳ**

ಧೀರ ಹುಲುಶರವೇಕೆ | ಹರ ಬೊಮ್ಮರೊಲಿದಿತ್ತ |
ಭೂರಿ ಮಾರ್ಗಣವೆಂದು | ತೂರಿದನು ಕಣೆಯ || ||೧೮೦||

ತರಿದೆಂದ ಹಾಳೂರಿ | ಗರಸ ನಿನಗೇಕಂಥ |
ಹರಕಮಲಜಾದಿಗಳ | ಶರವೆನ್ನುತೆಚ್ಚ || ||೧೮೧||

ಸಾಕೆಲವೊ ಬೊಬ್ಬಾಟ | ವೀಕಣದಿ ಕೇಳದಟ |
ಕೋಕಿ ಕೆಂಗರುಳೀವೆ | ಶಾಕಿನೀ ಗಣಕೆ || ||೧೮೨||

ಎಲವೊ ಬಿಸದಬ್ಜಮಿಂ | ದಳಿಕುಲಕೆ ಪಥ್ಯವೇ |
ಖಳರಿಂಗೆ ನರರಿದಿರೆ | ಬಳಲದೇಕೆಂದ || ||೧೮೩||

ಗರುಡ ತಾನಳಿಯಾಗಿ | ನೆರೆಹಾಲಹಲಮಬ್ಜ |
ಬೆರಸುಗೈ ದಾನವರ | ತರಿಯಲಾವೆಂದ || ||೧೮೪||

**ಭಾಮಿನಿ**

ಕಾದಿದರು ಪುರಹರಗಜಾಸುರ
ಮಾಧವನ ಕೈಟಭನ ಸಂಗರ
ಹಾದಿಗಿಮ್ಮಡಿಯೆನಲು ವಿವಿಧಾಯುಧದಿ ತಮ್ಮೊಳಗೆ |
ಕ್ರೋಧದಿಂ ದಿನವೈದು ಸಲೆಯಂ
ದಾದಿದೇವಿ ನಿಕುಂಭಿಳೇಶ್ವರಿ
ಯಾ ದನುಜಗಿತ್ತಿರ್ಪಶಕ್ತಿಯ ತೆಗೆದ ಖತಿಮಸಗೆ || ||೧೮೫||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಾಯ ಕೇಳೈ ವ್ಯರ್ಥ ಬಲು ಪರಿ |
ಬಾಯೊಳಾಡಲು ಫಲವೇಕೋನಿ |
ನ್ನಾಯತಿಕೆಯಿದ ಗೆಲಲು ವೀರರ | ಜೀಯನ್ನೈಸೆ || ||೧೮೬||

ಖಳನೆ ಕೇಳವನಿಯಲಿ ಸಜ್ಜನ |
ಬಲವಿಹೀನನ ಬೆದರಿಸಿದ ತೆರ |
ಕಳುಕುವನೆ ನಿಲ್ಲೆನುತಲಜಶರ | ಮುಳಿಯುತೆಚ್ಚ || ||೧೮೭||

ಧರೆಗೊರಗುತೆಚ್ಚರ್ತು ನುಡಿದನು |
ಕರೆಸು ಮೃತ್ಯುಂಜಯನ ನಿನ್ನಯ |
ಹರಣ ಕಾವರ ಬರಿಸೆನುತ್ತಲಿ | ಭರದೊಳೆಚ್ಚ || ||೧೮೮||

ಗಜರಿ ನೃಪ ಬಲು ದಿವ್ಯ ಶಸ್ತ್ರ |
ವ್ರಜವ ತುಂಬಲು ಕೊಳ್ಳದೈತರೆ |
ಸುಜನ ಕರಗಲು ಬಿದ್ದ ಸೈನಿಕ | ಗಜಬಜಿಸಲು || ||೧೮೯||

**ವಾರ್ಧಕ**

ಅರಸ ಮಣಿರಥದೊಳಂ ಮೂರ್ಛೆಯಿಂದೊರಗಲುಂ
ನೆರೆ ಮುತ್ತಿದಹಿತರಂ ನುಗ್ಗರದು ಖಳವರಂ
ದರಮನೆಯ ಪೊಕ್ಕವಂ ಸರ್ವರತ್ನಂಗಳಂ ವಿಭವಮಂ ಸೂರೆಗೈದು ||
ಹೊರಸಿದಂ ಬಲದೊಡಂ ಮತ್ತೆ ತಾನರಸಲುಂ
ಧರಣೀಶನರಸಿಯುಂ ಬಾಲೆಯರ ವೃಂದದಿಂ
ದಿರೆ ನೋಡಿ ರಾಕ್ಷಸಂ ಮನದೊಳಂ ಯೋಚಿಸುತ ಕೂಗುತ್ತಲಿಂತೆಂದನು || ||೧೯೦||

**ಭಾಮಿನಿ**

ಹರಿಣನೇತ್ರೆಯನಿವಳ ಸೆರೆಯೊಳ
ಗಿರಿಸಲರಿ ತಾನೆಂತು ಜನಿಸುವ
ನರಿವೆನೆಂದಬಲೆಯರ ಸಹಿತವನೊದು ರಥದೊಳಗೆ |
ಹರಿಸುತಂಬರಪಥದಿ ಬರುತಿರೆ
ತರಳೆ ಕೋಸಲರಾಯನಂದನೆ
ಮರುಗಿದಳು ನಡನಡುಗಿ ಕಲ್ಮರ ಕರಗುವಂದದಲಿ || ||೧೯೧||

**ರಾಗ ನೀಲಾಂಬರಿ ಏಕತಾಳ**

ಹರಹರಯಿಂದಿನಲಿ | ಬಲಸಹಿತೆನ್ನ | ವರನನು ಸಮರದಲಿ ||
ಇರಿದು ಭಂಡಾರವೆಲ್ಲ | ಹೊರಿಸುತಲೆಮ್ಮ | ಭರದಿ ಕೊಂಡೊವನಲ್ಲ || ||೧೯೨||

ಪತ್ತುರಥನ ಸತಿಯಾ | ಆ ಪ್ರದೀಪನ | ಪುತ್ರಿಯಜನ ಸೊಸೆಯ ||
ಧೂರ್ತ ಸ್ವಾಧೀನ ಗೈವನು | ಗತಿ ಯಾರು ಎನ್ನ | ನತ್ತಲೆ ಬಿಡಿಸಲಿನ್ನು || ||೧೯೩||

ಸುರಪ ದಿಕ್ಪಾಲಕರು | ಮನುಮುನಿ | ಯುರಗ ಧರಣಿಯುನವಗ್ರಹರು ||
ತರಳೆ ಕಷ್ಟವನೋಳ್ಪುದು | ಪ್ರಾರಬ್ಧಮೆನ್ನ | ಪೊರೆಯಲೊಬ್ಬರ ಕಾಣದು || ||೧೯೪||

ವನಜಸಖನೆ ನಿನ್ನಯ | ಕುಲದೊರೆಗೊಲಿಸಿ | ದನುಜನೊಡವೆ ದಮ್ಮಯ್ಯ ||
ಅನುಕಂಪನಿಧಿ ಮಡುಹಿ | ಖೂಳನ ಕೀರ್ತಿ | ಯನು ಧರಿಸೆನ್ನ ಸಲಹಿ || ||೧೯೫||

**ರಾಗ ಬೇಗಡೆ ಆದಿತಾಳ**

ಎಂದು ದ್ಯುಮಣಿಯಡಿಯ ನೆನೆದಳು | ಜಗತಿಗೆ ನೀ |
ನೊಂದು ಕಣ್ಣಾಗಿರ್ಪೆ ಮುದದೊಳು ||
ಕುಂದದೆರಡು ಪಥದಿ ನಡೆಯುವೆ | ತ್ರೈಮೂರ್ತಿಯರ |
ಚಂದದಿಂದೊಳಗೊಂಡು ಬೆಳಗುವೆ || ||೧೯೬||

ಎರಡೆರಡು ವೇದದೊಡಲಾಗಿ | ಬ್ರಹ್ಮತ್ವ ಮೆದ್ಯೆ |
ಸಲಿಸುತಾಮರುತುವಿನಾಲಿಸಾಗಿ ||
ತಿರುಗಿ ಪನ್ನೆರಡು ಸ್ಥಾನದಿ | ಸಪ್ತಾಶ್ವದಿಂದ |
ಚರಿಸಿ ಲೋಕ ನಿತ್ಯ ಭರದಿ || ||೧೯೭||

ಇರುವದೊಂದೇ ಪಾಲಿಸಲಾತನೆ | ಹೆಳವನಾಗಿರುತೆ |
ಸರ್ವಗುಪಕಾರ ಮಾಳ್ಪನೇ ||
ತರಳೆಯನ್ನು ಮರತು ಪೋಪುದೇ | ಸಹಸ್ರಕಿರಣ |
ಕರುಣದೊಳ್ ಕಾಯಬಾರದೆ || ||೧೯೮||

**ವಾರ್ಧಕ**

ಹರಿಯೊಡನೆ ಸಿಲುಕಿರ್ದ ಕುರಿಯಂತೆ ವಾಯಸನ
ನುರೆಸೇರ್ದ ಕೋಗಿಲೆಯ ಮರಿಯಂತೆ ವಿಹಗನೊಶ
ವಿರುವ ಫಣಿಯಂತೆ ಪುಲಿಯಾಧೀನವಾಗಿರ್ಪ ಪಸುವಿನೆಳೆಗರುವಿನಂತೆ |
ನೆರೆಬೆಕ್ಕಿನೊಳಗಾದ ಇಲಿಯಂತೆ ಭಯದಿಂದ
ದುರುಳ ರಕ್ಕಸನ ನೋಡುತ ಬಿದ್ದು ಮರುಗುತಿರೆ
ತರಣಿ ಬಿಡದೈತಂದು ರಥವನುಂ ಪಥದೊಳಂ ತಡೆದು ಖಳಗಿಂತೆಂದನು || ||೧೯೯||

**ರಾಗ ಮಾರವಿ ಅಷ್ಟತಾಳ**

ಏನಯ್ಯಾ | ವೀರ | ಏನಯ್ಯ || ಪಲ್ಲವಿ ||

ಏನಯ್ಯ ತನ್ನಯ ವಂಶದ ದೊರೆಯ |
ಕ್ಷೋಣಿಲಿ ಜಯಿಸುತ್ತಲಾತನ ಸತಿಯ ||
ಕೌಣಪರಾಯ ನೀನೊಯ್ಯುವುದಿಂದು |
ಜಾಣರ ಮತವಲ್ಲ ಯೋಚಿಪುದಿಂದು || ||೨೦೦||

ಸಾಲ್ದಲೆಯವ ವೀರನಾಗಿರಲರಿಯ |
ಧಾಳ್ಧಳಿ ಗೈವುದು ನೀ ತವ ಪರಿಯ |
ಪೊದು ನಾರಿಯಗೊಂಬುದೇತರ ಧರ್ಮ |
ಐದು ಮೊಗನು ಮೆಚ್ಚಗೈವೆಯ ಕರ್ಮ || ||೨೦೧||

ಪರಸತಿ ಪರಧನವೆಳೆಯುವಭಟಗೆ |
ನರಕವೆಂದೆಂಬುದು ಸಿದ್ಧಾಂತ ಕಡೆಗೆ |
ನೆರೆ ಬಲ್ಲಿದವನಾಗಿ ನೀ ಗೈಯಬಹುದೇ |
ತರುಣಿಯ ಬಿಟ್ಟತ್ತ ಪೋಪುದು ಮುಂದೆ || ||೨೦೨||

ವರಬ್ರಹ್ಮವಂಶಜನಾಗುತ್ತ ನೀನು |
ದುರುಳತೆಯೆಸಗಲು ಕೀರ್ತಿಗಳೇನು |

ಬರುವುದೆ ಲೇಸಲ್ಲ ಬಿಡು ಬಿಡೆಂದೆನಲು |
ತಿರುಹುತ್ತ ಖಡ್ಗವನೆಂದ ಕೋಪದೊಳು || ||೧೦೩||

**ಭಾಮಿನಿ**

ನೀತಿಯರುಹಲು ಬಂದೆಯಾ ಖ
ದ್ಯೋತ ತಿಳಿವೆನು ಧರ್ಮಗಳ ಬಿಡು
ಸೂತ ಪೌರಾಣಿಕನೆ ಸಾರೆಂದೆನುತ ಹೂಂಕರಿಸೆ |
ಆತ ಖಳನಿಗೆ ತನ್ನ ವಂಶದ
ಭೂತಳಾಧಿಪನಿಂದ ಮಡಿಯೆಂ
ದಾತತೂಕ್ಷಣ ಶಪಿಸಿ ಸರಿಯಲು ಬಂದ ನಿಜಪುರಕೆ || ||೧೦೪||

**ರಾಗ ಕಾಂಭೋಜಿ ಝಂಪೆತಾಳ**

ಬಂದು ಕಮಲೋದ್ಭವನೊಳೆಂದ ದಶರಥನಿಗಾ |
ನಿಂದಿರಿದು ಸತಿಯ ತಂದಿಹೆನು ||
ಮುಂದೆಂತು ಜನಿಪ ಪಗೆಯೆಂದೆನಲು ರಾವಣನೊ |
ಳೆಂದನುರು ಭಯದಿಂದಲಜನು || ||೧೦೫||

ಧರಣೀಂದ್ರ ಸಂಗರದೊಳುರೆ ಬಳಲಿ ಮೂರ್ಛಿಸಿದ |
ನಿರದೆದ್ದು ಮುಂದಕಾ ಸತಿಯ ||
ಎರಕದಿಂ ಜನಿಸುತಿಹನರಸ ನಿನ್ನಯ ವೈರಿ |
ಮರೆಯ ಬೇಡೆನೆ ಕೇಳ್ದು ಸತಿಯ || ||೧೦೬||

ತರಿವೆನಿವಳಿಂಗೆನಲು ತರುಣಿ ಹತ್ಯವದೇಕೆ |
ಮರುಳುತನವೇಕೆನಲಿಕೆಂದ ||
ಸೆರೆಗಿಡುವೆನೆನಲು ಸರಸಿರುಹಭವ ಸನ್ನೆಯಲಿ |
ಸರಿಸೆ ಪೌಲಸ್ತ್ಯನಿಂತೆಂದ || ||೧೦೭||

**ರಾಗ ಭೈರವಿ ತ್ರಿವುಡೆತಾಳ**
ಏನಿದೇನೈ | ಯೋಚನೆ | ಏನಿದೇನೈ || ಪಲ್ಲವಿ ||

ಅರಿತರಿತು ನಿಗಮಾದಿಶಾಸ್ತ್ರವ | ಪರರ ದಂಡಿಸಬಹುದೆಯದರೊಳು |
ತರಳೆಯಲ್ಲವೆ ಪಾತಕದ ಮನ | ತರವೆ ನಿನ್ನಯ ಪಗೆಯು ಜನಿಸದ |
ತೆರವುಪಾಯವದುಂಟಿವಳನೀ | ಕರಸಿ ನಮ್ಮ ತಿಮಿಂಗಿಲನ ವಶ |

ಕಿರದೆ ಭದ್ರದೊಳಿತ್ತು ಕಾಯೆಂ | ದರುಹಿ ಬಿಡು ರಿಪುವೆಂತು ಜನಿಸುವ |
ಮಾತ ಕೇಳು || ||೨೦೮||

ಎಂದೆನಲು ಕೈಕಸೆಯು ನಡೆಯು | ತ್ತೆಂದಳಣುಗನಿಗಜ್ಞನುಸುರಿದ |
ನಂದದಿಂ ನಡೆ ಕುಟಿಲತನಗಳು | ಬಂದುದೇಕವ ಬಿಡುವದೆನುತಲೇ |
ನಿಂದು ಪೇಳಲು ಕೇಳ್ದು ಝಷಕವ | ನಂದು ಬರಸುತ ಸತಿಯ ಪೆಟ್ಟಿಗೆ |
ಯಿಂದ ಭದ್ರದೊಳಿರಿಸುತವನೊಡ | ನಂದು ಕೊಟ್ಟವನೆಂದ ಭರದಲಿ |
ಖಳಕುಲೇಂದ್ರ || ||೨೦೯||

ಇರಿಪುದೆಚ್ಚರಿಕೆಯಲಿ ಕಾಯುತ | ಲಿರುವದೆಂದವನನ್ನು ಕಳುಹುತ |
ಲೊರೆದನಜನೊಡನಹಿತ ಜನಿಸುತ | ಬರುವದೆಂತೈ ಸನಕರೆಂದುದು |
ಬರಿಯದಾದುದು ನೀನು ಪುಸಿಯೊಡ | ನೊರೆವೆನೆನಲಿಂತೆಂದ ನಿಶ್ಚಯ |
ಬರುವ ಸಮಯದೊಳೊರೆವೆನೆನ್ನಲು | ಪರಿಕಿಸುವೆನೆಂದೆನುತಲಿರ್ದನು |
ತೋಷದಿಂದ || ||೨೧೦||

**ಭಾಮಿನಿ**

ಮತ್ತೆ ನೃಪನರ್ಧಾಂಗಿ ಜೊತೆಯೊಳ
ಗಿತ್ತ ತಂದಿಹ ದೂತಿಯರ ಬಿಡ
ಲತ್ತ ಬಲ ಸಹಿತೆದ್ದು ಭೂವರ ಪರಿಕಿಸಲು ಪಗೆಯ |
ದೈತ್ಯನಿಲ್ಲದಿರಲ್ಕೆ ಪುರದಿಸ
ಮಸ್ತಭಾಗ್ಯಗಳರಸಿ ಸಹಿತಲೆ
ಎತ್ತ ನೋಡಲು ಕಾಣದಿರೆ ಬಿಸುಸುಯ್ದನಾರಾಯ || ||೨೧೧||

**ರಾಗ ನೀಲಾಂಬರಿ ಝಂಪೆತಾಳ**

ಏನ ಮಾಡಲಿ ಇನ್ನು | ಸೇನೆ ಸಹಿತೆನ್ನುವನು |
ದಾನವಾಧಮನೆನ್ನ | ತ್ರಾಣ ಜೈಸಿದನು || ||೨೧೨||

ರತುನ ಭಂಡಾರಗಳ | ನತಿಪರಾಕ್ರಮಿ ಖೂಳ |
ಸತಿಯರ ಸ್ತೋಮಗಳ | ಜೊತೆಯ ಭಾಗ್ಯಗಳ || ||೨೧೩||

ಅತಿ ಮದೋತ್ಕಟದಿಂದ | ಕದನ ಗೈಯುತಲಿಂದು |
ಚತುರತೆಲಿ ಕೊಂಡೊದ | ಗತಿಯೇನು ಮುಂದು || ||೨೧೪||

ಹಾ ನಾರಿ ಸುಗುಣಮಣಿ | ಜಾಣೆ ಫಣಿವೇಣಿ |
ಏಣಾಂಕ ವದನೆ ನಿಜ | ರಾಣಿ ಸುಶ್ರೋಣಿ || ||೨೧೫||

ಆ ನಾಗಗಮನೆ ಶುಕ | ವಾಣಿ ಕಟ್ವಾಣಿ |
ಕಾಣಿಸೆಲೆ ಬಾಲೆ ಮಣಿ | ಮಾನಿನೀರಮಣಿ || ||೨೧೬||

ಎತ್ತ ಪೋದಳೊ ತನ್ನ | ಮತ್ತಕಾಶಿನಿಯನ್ನು |
ದೈತ್ಯವಶಗೈದವನೇ | ನೆತ್ತಗಮಿಸಿದನೊ || ||೨೧೭||

ನಿತ್ಯ ಖಳ ಬಂಧನದೊ | ಳಿನಿತೆಂತು ಬಾಳುವಳೊ ||
ಬಿತ್ತರಿಪರಾರೆನಗೆ | ಚಿತ್ತಹಿತ ಕಡೆಗೆ || ||೨೧೮||

**ರಾಗ ತೋಡಿ ಏಕತಾಳ**

ಅರಸ ಮರುಗಲರಿತು ಸಚಿವ | ನೊರೆದು ನೀತಿಯತ್ತ |
ಮರುಕವನ್ನು ಬಿಡಿಸುತಿರುತ | ಸರಿಯೆ ಮಾಸ ಪತ್ತ ||
ತರಳೆಯರು ಬಂದು ಭೂಮಿ | ವರಗೆರಗಲಾಗ |
ಭರದಿ ಬಂದುದಲ್ಲಿಂದೆನಲು | ಸೊರಗಿ ಪೇಳ್ದರ್ ಬೇಗ || ||೨೧೯||

ದುರುಳನೊದನೆಮ್ಮನೆಲ್ಲ | ಸರ್ವಭಾಗ್ಯವಂದು |
ತರಣಿ ತಡೆದು ಶಾಪಿಸಲ್ಕೆ | ಪುರವ ಪೊಕ್ಕನಂದು ||
ಒರೆದರೆಲ್ಲ ನೀತಿ ಕೇಳು | ತರಸಿಯಳನಂದು |
ಇರಿಸಿ ಪೆಟ್ಟಿಗೆಯಲಿ ಮಿನಿನ | ಕರೆದು ಕೊಟ್ಟನಂದು || ||೨೨೦||

ಶರಧಿಯೊಳಗೆ ಭದ್ರತ್ವದಿ | ಸರಿಸಿ ಕಾಯ್ದುದೆಂದು |
ಒರೆಯುತಾಜ್ಞೆ ಎಮ್ಮನೆಲ್ಲ | ಸೆರೆಯ ಬಿಟ್ಟನಂದು ||
ಇರದೆ ನಿಧಿಯ ದಾಟಿಸಲ್ಕೆ | ಕರಗಿ ಬಂದೆವಿಂದು |
ಪೊರೆಯೆನಲ್ಕೆ ಪೂರ್ವ ಸ್ಥಿತಿಯೊ | ಳಿರುವದೆಂದನಂದು || ||೨೨೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತಲಾ ಪದ್ಮಾಕ್ಷ್ಯ ಕೇಕಯ |
ಪೃಥ್ವಿಪತಿ ರಂಜಿಸುತಲೊಂದಿನ |
ಪುತ್ರಿ ಕೈಕೆಯ ನೋಡಿ ಮನದಲಿ | ಬಿತ್ತರಿಸಿದ || ||೨೨೨||

ರತಿಯ ಧಿಕ್ಕಾರವನು ಗೈಯುತ |
ಲತಿ ಸೊಬಗನಾಂತಿರುವ ಜಾತೆಗೆ |
ಪತಿಯನಾವನ ಮಾಳ್ಪನೆನ್ನುತ | ವ್ಯಥಿಸುತಿರಲು || ||೧೧೩||

ಇಂದುಮುಖಿಯರ ವೃಂದದಲಿ ನಡೆ |
ತಂದು ಕೈಕೆಯು ಜನಕಗೆರಗುತ |
ಲಿಂದಿನಲಿ ವನಕೇಳಿಗೈದುವ | ದೆಂದು ಮನವೈ || ||೧೧೪||

ಕುಶಲದಲಿ ಕಳುಹೆನಲಿಕೊಪ್ಪಲು |
ಬಿಸಜಗಂಧಿಯರೆಲ್ಲ ವನದಲಿ |
ಕುಸುಮಗಳ ಕೊಯ್ಯುತ್ತ ವನದೊಳ | ಗೆಸೆಯುತಿರಲು || ||೧೧೫||

ಅರಸ ದಶರಥಗೆರಗಿ ಮೃಗಗಳ |
ಬಿರಿಸು ಹೆಚ್ಚಿದುದೆಂದು ದುಗುಡದೊ |
ಳೊರೆಯೆ ವನಪಾಲಕರಿಗಭಯವ | ನರಸನಿತ್ತು || ||೧೧೬||

**ರಾಗ ಮುಖಾರಿ ಏಕತಾಳ**

ನೋಡುತಲೆಡಬಲಗಳನು | ಬಲೆ |
ಗೂಡಿಸಿ ಶಬರರ್ಕಳನು ||
ಕೂಡುತ ವನದೊಳು | ರೂಢಿಪ ಮುತ್ತುತ |
ಕಾಡಿನ ಮೃಗಗಳ | ಗಾಢವ ನಿಲಿಸಲು ||
ಬೇಟೆಯಾಡುತ್ತ ಬಂದ ವೀರ || ||೧೧೭||

ತಿರುಗುತ ಗಂಡಿಯನರಸಿ | ಬಲ |
ಸರಿಸುತ ಮಾರ್ಗಣ ಸುರಿಸಿ ||
ಕರಿಸೂಕರ ಪುಲಿ | ಹರಿ ಮುಖ್ಯಾದ್ಯವ |
ತರಿಯಲಿ ಕೊಂದಾ | ಹರಿಣನು ಸರಿಯೆ | ಬೇಟೆ || ||೧೧೮||

ಅರಸನು ಅದ ಬೆಂಬತ್ತೆ | ಗಿರಿ |
ಚರಿಸುತಲಾ ಕೊಳದತ್ತೆ |
ಸರಿಯಲು ಬಳಲುತ | ಸರಸಿಯನರಸುತ |
ತರಳೆಯರಿರುವಡೆ | ಗಿರದೈತಂದ || ಬೇಟೆ || ||೧೧೯||

**ಶರಷಟ್ಪದಿ**

ಬರುವನ ಪರಿಕಿಸಿ

ಸರಸಿಯ ಕೇಳಿಯ
ತೊರೆಯುತ ಸತಿಯರು ಹಾರುವನು |
ಪರಿಸುತ ಕುಪ್ಪಸ
ಧರಿಸುತ ಶಾಲೆಯ
ಮರೆಸುತ ನಾಚಲು ಧರಣಿಪನು || ||೧೩೦||

**ವಾರ್ಧಕ**

ವರಹಂಸಚರಣದಿಂ ಮದಗಜದ ಗಮನದಿಂ
ನೆರೆರಂಭದಂಕದಿಂ ಹರಿಮಧ್ಯ ಗತಿಯೊಳುಂ
ಸರಿಯಸುಳಿನಾಭಿಯಿಂ ಪೊಂಗಲಶ ಕುಚಗಳಿಂದುಲುಕುತಿಹ ಹಾರದಿಂದ ||
ಮೆರೆವ ನಳಿತೋಳ್ಗಳಿಂ ಕೇತಕಿಯುಗುರ್ಗಳಿಂ
ಪರಿ ಕಂಬುಕಂಠದಿಂ ಪವಳಲತೆಯಧರದಿಂ
ದುರೆಕುಂದರದನದಿಂ ಚಂಪಕದ ನಾಸೆಯಿಂ ದರ್ಪಣ ಕಪೋಲದಿಂದ || ||೧೩೧||

**ಭಾಮಿನಿ**

ಹರಿಣಲೋಚನೆ ಪುಷ್ಪಶರಧನು
ಸರಿಯ ಪುರ್ಬಿನೊಳಿಂದು ವದನದಿ
ಸ್ವರ ನುಡಿಯು ಶುಕಪಿಕದಿಕೋಮಲೆ ಶುಭ್ರ ಹರಿಗಾತ್ರೆ ||
ಉರಗವೇಣಿಯು ಭೃಂಗ ಕುಂತಳೆ
ಮೆರೆವ ತ್ರೈಭುವನೈಕ ಸುಂದರಿ
ಯರರೆ ಯಾರಿವಳೆನುತ ಕೈಕೆಯೊಳೆಂದ ನಗೆ ಮಿನುಗೆ || ||೧೩೨||

**ರಾಗ ಸಾವೇರಿ ಏಕತಾಳ**

ಮಾತನಾಡೆಲೆ ನೀತಿಯುತೆಗುಣದಾತೆ ಎನ್ನೊಡನೆ | ನೀ ದಯ |
ರೀತಿ ತೋರೆಲೆ ಪ್ರೀತಿ ಬೀರೆಲೆ ಸೋತೆ ನಿನ್ನೊಡನೆ || ಮತ್ತೆ |
ಭೂತಳದಿ ಸತಿ ಜಾತಿಯಲಿ ತವ ರೀತಿವಂತರನೇ | ಕಾಣೆನು |
ಖಾತಿದೋರದೆ ರೀತಿವೊಪ್ಪುವ ಮಾತ ಹೇ ಜಾಣೆ | ನುಡಿ ಎಲೆ ತನ್ನಾಣೆ ||
ಭೂತಳದೊಳು ವಿಖ್ಯಾತನಯೋಧ್ಯಾ | ನಾಥನು ದಶರಥ ನಾ ತಳುವದೆ ತಿಳಿ |
ಭೀತಿಗಳೇನ್ಬಲು ಕಾತುರಗೊಳ್ಳುವ | ದೇತಕೆ ನುಡಿ ಸಂಪ್ರೀತಿಯೊಳೆಂದ || ||೧೩೩||

ನರರು ಸುರರಲಿಯುರಗ ಖಳರೊಳು ಸರಿಯೆ ನಿನ್ನಂಥಾ | ಬಾಲೆಯ |
ಗರುಡ ಗಂಧರ್ವರಲಿ ವರ ಕಿಂಪುರುಷರೊಳಗಿತ್ತ | ನಿಜಕಿ |

ನ್ನರರ ಚಾರಣ ಸಿದ್ಧ ಯಕ್ಷರೊಳರಿಯೆ ಕಂಡತ್ತ | ಎನ್ನೊಡ |
ನರುಹು ದೇಶವ ಹಿರಿಯನಾರವ ಕರವ ಪೆಸರಿತ್ತಾ || ಪೇಳುವದೆಲೆ ಮತ್ತಾ |
ತರುಣಿಯರೆಲ್ಲರೀ ತೆರದಿಂ ವನದೊಳ | ಗಿರುತಿಹ ಕಾರಣ ಭರವೇನೆನ್ನುತ |
ಕರುಣಿಸು ಬೇಗದಿ ಕಿರುನಗೆ ಸೂಸುತ | ಭರವಸವೆನುತವನರುಹುತಲಂದ || ||೨೩೪||

ನೊಂದು ಚಾರರು ನಿಂದು ದೂರಿದರಿಂದು ವನದೊಳಗೆ || ಮೃಗತತಿ |
ಯಿಂದ ಬಳಲುತ ಅಂದಗೆಟ್ಟಿರೆ ಬಂದೆ ನಾ ಹೊರೆಗೆ | ಬೇಟೆಯ |
ಲಂದು ಗಂಡಿಗೆ ಹೊಂದಿಸುತ ಶರ ಕೊಂದಿರಲು ಬಗೆಗೆ | ಓಡಿದು |
ದೊಂದು ಹರಿಣವದಿಂದು ಮಥಿಸಲಿ | ಕ್ಕೆಂದು ಈ ಕಡೆಗೆ | ಬೆನ್ನಟ್ಟುತ ಹೀಗೆ |
ಬಂದೆನು ಸ್ಮರಶರದಿಂದೆಚ್ಚಡೆ ಮನ | ಕುಂದುತ ನಿನ್ನೊಡನೆಂದೆನು ಯೋಚಿಸು |
ತ್ತಂದಜ ನಮ್ಮುವನಂದದಿ ನಿರ್ಮಿಸಿ | ದಂದಕೆ ನೀ ಬಲು ಚಂದದಿ ಮೆರೆಯೆ || ||೨೩೫||

**ರಾಗ ಸುರುಟಿ ಏಕತಾಳ**

ಎಂದೆನಲಾ ಕಾಂತೆ | ಸೀಮಂತೆ |
ಎಂದಳು ಗುಣವಂತೆ ||
ಕುಂದರದನೆ ಸುಮ | ಗಂಧಿನಿ ಲಜ್ಜೆಯ |
ಮುಂದಕಿರಿಸಿ ನಗೆ | ಯಿಂದಲಿ ಮೃದುನುಡಿ || ಪಲ್ಲವಿ ||

ವೀರ | ಪೂಶರನಾಕಾರ | ವರದುದು ಬಲುಸಾರ |
ವಿಕ್ರಮ ಗಂಭೀರ | ಮುಬ್ಬಿದಮೌದಾರ |
ದೋರುವ ಕೇಕಯ | ಧಾರುಣಿ ಪತಿಸುತೆ |
ನಾರಿಯರೆಲ್ಲರು | ಸೇರುತ ಬಂದೀ |
ಸಾರಿಯ ಜಲದಿಂ | ದೋರಾಡುತಲೀ ಹೇ |
ಧೀರನೆ ಸದ್ಗುಣ ವಾರಿಧಿ ಕೇಳೈ || ||೨೩೬||

ಅರಿಯೆ | ನೀನೆಂದುದು ಸರಿಯೆ | ಸದ್ಧರ್ಮದ ಪರಿಯೆ |
ಆಗಲಿ ಪೆಸರೊರವೆ | ಕೈಕಯಿಯು | ಕೇಳ್ದೊರೆಯೆ |
ಇರಿಸಿದೆಯೈ ಮನ | ಸರಿಯಾದುದು ದಿಟ |
ಭರದೊಳು ಜನಕನೊ | ಳೊರೆಯುತ ನಿನ್ನಯ |
ಕರಪಿಡಿವೆನು ಎಂದಿ | ರಿಸುತ ನಂಬುಗೆ |
ಸರಿದಳು ಬಲು ಸಖಿ | ಯರು ಸಹ ಮನೆಗೆ || ||೨೩೭||

ಇತ್ತ | ದಶರಥ ಪುರದತ್ತ | ತೆರಳುತಲಿಪ್ಪ |
ಪದ್ಮಕ ಸುತೆಗತ್ತ | ವರನಾರ್ ನಿನಗೆತ್ತ |

ಧಾತ್ರಿಯೊಳಗೆ ಜನ | ಮೊತ್ತದಿ ಬಯಸಿದ |
ಪೃಥ್ವಿಪರಿದ್ದಡೆ | ಬಿತ್ತರಿಸೆನ್ನುತ |
ಮತ್ತೆ ನುಡಿಯೆ ನಾ | ಚುತ್ತಲೆ ಪಿತನಡಿ |
ಗೊತ್ತಿ ಶಿರವ ತಾ | ನುತ್ತರವಿತ್ತಳು || ||೧೩೮||

**ರಾಗ ಮಧುಮಾಧವಿ ಏಕತಾಳ**

ತಾತ ಲಾಲಿಸಿ ಕೇಳ್ವುದಬಲೆಗಿನ್ನೆಂತು |
ಭೂತಳೇಶರ ಗುಣವರಿಯುವುದೆಂತು ||
ಯಾತಕೆ ಲಜ್ಜಿಪೆ ಎನ್ನುವನಿಂದು |
ಪ್ರೀತಿ ಬಂದರಿಗಿತ್ತು ಕಳುಹೆನಲಂದು || ||೧೩೯||

ಅರಿತರು ಗುಣವನು ಸಖಿಯರ ಮುಖದಿ |
ಮರೆಮಾಡದರಿತುದನೊರೆಯೆನೆ ಮುದದಿ ||
ಸ್ಮರರೂಪ ದಶರಥನಧಿಕ ವಿಕ್ರಮನು |
ನೆರೆ ಬಯಸಿಹೆ ನಾನು ಎನಲಂದು ನೃಪನು || ||೧೪೦||

ಎರಕವ ಗೈಯ್ಯುವೆನೆಂದೊರೆದಂದು |
ಸರಿದಯೋಧ್ಯೆಗೆ ಬರೆ ಭೂಮಿಪನಂದು ||
ಭರದಿ ಮನ್ನಿಸಿ ಬಂದ ಕಾರ್ಯವೇನೆಂದು |
ಕಿರುನಗೆಯಲಿ ಕೇಳಲಿಂತೆಂದ ಮುಂದು || ||೧೪೧||

**ಭಾಮಿನಿ**

ಅರಸ ನಿಜಸುತೆ ನಿನ್ನ ಬಯಸುತ
ಲಿರುವಳೈ ನಿನಗೀಯ ಬೇಕೆಂ
ದಿರದೆ ನುಡಿಸಲು ಬಂದೆನೆಂದೆನೆ ರೋಗಿ ವೈದ್ಯಮತ |
ಸರಿಯದಾಯ್ತೆಂದೆನುತ ಲಗ್ನವ
ನಿರಿಸುತೊಪ್ಪುತ ಕಳುಹೆ ತಿರುಗುತ
ಪುರಕೆ ಬಂದವ ಸಕಲ ಸನ್ನಹ ಗೈಸುತಿರಲಿತ್ತ || ||೧೪೨||

**ವಾರ್ಧಕ**

ಬರಿಸಿ ಬಾಂಧವರನುಂ ದಿಬ್ಬಣವ ತರಿಸುತಂ
ಬರಲಿದಿರುಗೊಂಡವಂ ಶುಭಮುಹೂರ್ತದಿ ನೃಪಂ
ತರಳೆ ಕೈಕೆಯಳನುಂ ದಶರಥಗೆ ಧಾರೆಯನ್ನೆರೆದನತಿ ಸಂತಸದಲಿ |

ಇರಲು ದಿನವೈದನುಂ ಕಳೆಯೆ ಬಳುವಳಿಯೊಳಂ
ದಿರದೆ ಕಳುಹಲ್ಕವಂ ಬಂದಯೋಧ್ಯದೊಳಿವಂ
ಪರಮ ಸಂಭ್ರಮಗಳಿಂದೊಪ್ಪುತೊಂದಿನದೊಳಂ ಸತಿಗೆಂದ ಮೃದುನುಡಿಯಲಿ || ||೨೪೩||

**ರಾಗ ಕಲ್ಯಾಣಿ ಏಕತಾಳ**

ನಾರಿ | ಘನ ಶೃಂಗಾರಿ | ಬಾರೆಲೆ ವಯ್ಯಾರಿ |
ಕೀರವಾಣಿ ಮಯೂರಗಮನೆ ನಗೆ |
ಬೀರುತಲೆನ್ನ ನೀರೆ ಲತಾಂಗಿ || ||೨೪೪||

ಎಂದ | ನುಡಿಯಾಲಿಸುತಂದ | ವರನೆಡೆಗೈತಂದ ||
ಅಂದಪ್ಪುತ ಕುಚ | ದಿಂದಿರಿಯುತಲೆ |
ನ್ನಿಂದಲೊಂದು ಕುಂದೆಂದಿಗೆ ಬಪ್ಪುದೆ || ||೨೪೫||

ಮತ್ತಾ | ಸತಿಸಹ ವನದತ್ತಾ | ಬಲುಸುಮ ಕೊಯ್ಯುತ್ತ |
ಚಿತ್ತದಿ ಬಲುಮುದ | ವೆತ್ತಲ್ಲಿರುತಿರೆ |
ಬಿತ್ತರಿಸುವೆ ಕಥೆ | ಯುತ್ತಮರಾಲಿಸಿ || ||೨೪೬||

**ರಾಗ ಮಾರವಿ ಏಕತಾಳ**

ಇತ್ತಲು ಕಾಡ್ಗಿರಿ ಗೊತ್ತಿದ ಕೊಪ್ಪಲು
ದತ್ತಲು ಶಬರರೊ | ಳುತ್ತಮನೆನಿಸಿದ ||
ಚಿತ್ರಾಯುಧನಹ | ಧೂರ್ತನು ಲುಬ್ಧಕ |
ರೊತ್ತಿಲಿ ಬೇಟೆಗೆ | ನುತ್ತಲಿ ಪೊರಟ || ಬೇಟೆಯಾಡುತ್ತ ಬಂದ || ||೨೪೭||

ನೆರಹಿಸಿ ಬಲೆಗಳ | ಧರಿಸುತ ಶರಗಳ |
ನಿರಿಸುತ ಗಂಡಿಯ | ಸರಿಸುತ ಮೃಗಗಳ ||
ಕರಡಿ ಪುಲಿ ಹರಿ | ಶರಭಸ್ತಳವೆಂ |
ದೊರೆಯುತ ಕುರುಹನು | ಪರಿಕಿಸುತಾಗ || ಬೇಟೆಯಾಡುತ್ತ ಬಂದ || ||೨೪೮||

ಜೊತೆಯ ಕಿರಾತರ | ತತಿಗುಂಪಿಲಿ ಬರು |
ತತಿಯನೆ ಭೇದಿಸು | ತತುಳ ಭಯಂಕರ ||
ಪಥಗಿರಿಯಲಿ ಧ್ವನಿ ಗೈಯುವ ಪಂದಿಯ |
ಧೃತಿಯಲಿ(ತಾ) ಕಂಡಾ(ಚಿತ್ರಾಯುಧ) || ಬೇಟೆಯಾಡುತ್ತ ಬಂದ || ||೨೪೯||

**ಭಾಮಿನಿ**

ನೋಡಿದನು ಸೂಕರವ ತಿರುಹಿಲಿ
ಹೂಡಿದಡೆ ಬಾಣವನು ತಪ್ಪಿಸು
ತೋಡಿ ಬರೆ ನೃಪನಿದಿರು ಕಾಣಿಸಲೆಚ್ಚ ಮಾರ್ಗಣದಿ |
ಕೂಡೆ ಬೀಳಲಿಕಿತ್ತ ಲುಬ್ಧಕ
ನೋಡಿ ಬಂದದ ಮತ್ತೆ ಖತಿಯಿಂ
ದಾಡಿದನು ಭೂವರನು ಕೈರಾತೇಶನಲಿ ಭರದಿ || ||೧೫೦||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಶಬರ ಎನ್ನ ಶರದೊ | ಳಳಿದ ಪಂದಿಯನ್ನು ಬಿಡೆನು |
ನಲವಿನಿಂದ ಬಿಟ್ಟು ಅದರ | ಕೆಲಕೆ ಸಾರೆಲಾ ||
ಮಲೆತು ನುಡಿದ ಭಳಿರೆ ತನ್ನ | ಅಲಗಿನಿಂದ ಮಡಿದುದಿಂದು |
ಛಲವದೇಕೆ ಬಿಡುವನಲ್ಲೆಂ | ದುಲಿಯಲೆಂದನು || ||೧೫೧||

ಬಿಡುಬಿಡೆಲವೊ ಸಾಕು ನಿನ್ನ | ಧಡಿಗತನವ ತೋರಲಿನ್ನು |
ಮಡುಹದುಳಿಯೆನೆಂದು ಪೇಳ | ಲೊಡನೆ ಗಜರಿದ ||
ಪೊಡವಿಪಾಲನೆಂದು ನಿನ್ನ | ಕಡುಹಿಗಂಜಿ ಪೋಪನಲ್ಲ |
ತಡೆದುಕೊಳುವುದೆನುತ ಲೆಚ್ಚ | ನೊಡನೆ ಬಾಣವ || ||೧೫೨||

ತರಿಯುತೆಂದ ಹರಣದಾಸೆ | ಇರಲು ಹಂಬಲವನು ಬಿಟ್ಟು |
ತೆರಳೆ ಲೇಸೆನುತ್ತ ಪತ್ತು | ಶರದಿ ಮುಸುಕಿದ ||
ಹರಿಸಿಕಾಲನೂರಪೊಗಿಸಿ | ತರಳೆಯನ್ನು ಒಯ್ವೆನೆಂದು |
ಸರಳ ಮಳೆಯ ಕರೆದನಾಗ | ಸುರರು ಬೆಚ್ಚಲು || ||೧೫೩||

**ವಾರ್ಧಕ**

ಉರಿಮಸಗಿ ಭೂವರಂ ಬರುವಂಬ ತರಿಯುತಂ
ಮೆರೆವ ದಿವ್ಯಾಸ್ತ್ರದಿಂದರಿಗೆಸೆಯೆ ಪಗೆಶಿರಂ
ಧರೆಗುರುಳಲಾಕ್ಷಣಂ ಬೇಡ ಪಡೆ ಮುತ್ತಲುಂ ಹತಿಸಿದಂ ಪರಬಲವನು |
ಕರೆಸಿ ನಿಜ ಶಬರರಂ ಸೂಕರವ ನೀಯುತಂ
ದರಿಸಿ ಸಹ ಪುರವನುಂ ಪೊಕ್ಕು ಬಲು ತೋಷದಿಂ
ದಿರೆ ಚಂದ್ರಸೇನನುಂ ನುತಿಸುತಿರೆ ಪುರಹರಂ ತಿಳಿದೆಂದನಗಜೆಯೊಡನೆ || ||೧೫೪||

**ರಾಗ ಕೇದಾರಗೌಳ ಅಷ್ಟತಾಳ**

ಹರಿಣಾಂಕವದನೆ ಕೇಳ್ | ಮರಿದುಂಬಿಗುರುಳೆ ಪಂ |
ಕರುಹಾಕ್ಷಿ ರನ್ನೆ ಕನ್ನೆ ||
ಧರಣೀಶ ಶಶಿಸೇನ | ನಿರದೆನ್ನನುತಿಗೈವ |
ನರುಹುವದೇನೆ ಕಾಣೆ || ||೧೫೫||

ದಶರಥನನು ಗೆಲ್ಲು | ತೆಸೆಯಬೇಕೆನ್ನುತ |
ಮಸಗಿ ತಪವ ಗೈವನು ||
ಕುಶಲದೊಳಿಜ್ಜೆಯ | ತುಸು ಮಾತ್ರ ಸಲಿಪೆನೆಂ |
ದುಸುರಲಿಕ್ಕಿಂತೆಂದಳು || ||೧೫೬||

ಹರಿ ದಶರಥನಿಗೆ | ತರಳನಾಗುತ ಲಂಕಾ |
ಪುರದರಸಾಧ್ಯರನು ||
ತರಿದಿಳೆ ಭಾರವನೊರಸಲಿಕೆಡರೆನ್ನು |
ತ್ತರುಹಲು ಪುರಹರನು || ||೧೫೭||

**ಭಾಮಿನಿ**

ಗಿರಿಜೆ ಕೇಳಿಂದೆಮ್ಮ ನುತಿಪರಿ
ಗಿರದೆ ವರವೀಯದಿರೆ ಬರುವುದೆ
ಶರಣವತ್ಸಲನೆಂಬ ಕೀರ್ತಿಯುಪಾಯದಿಂದೀಗ |
ಧುರದೊಳೊಮ್ಮೆಗೆ ಜೈಸಿ ಪುನರಪಿ
ಮರಣಗೈಯುವ ತೆರವು ಬಾಯೆಂ
ದಿರದೆ ನಡೆತಂದಲ್ಲಿ ಮೆಚ್ಚಿದೆನೆನಲು ಕಣ್ತೆರೆದ || ||೧೫೮||

**ರಾಗ ಕಾಂಭೋಜಿ ಝಂಪೆತಾಳ**

ರೂಢಿಪತಿ ನೋಡಿ ನಲಿದಾಡಿ ಕರ ಜೋಡಿ ನುಡಿ |
ಮಾಡಿ ಶಿರ ನೀಡಿ ಹೊರಳಾಡಿ ||
ವ್ಯಾಢಭೂಷಣ ಕೃಪೆಯ ಮಾಡಿ ತನ್ನಿಚ್ಛೆಕೈ |
ಗೂಡಿಸೆನಲಾಗ ನಗೆಗೂಡಿ || ||೧೫೯||

ಒರೆವುದೆನೆ ಕೋಸಲದ ದೊರೆಯಯೋಧ್ಯೇಶನನು |
ಇರಿದು ಜಯವಪ್ಪಂತೆ ದಯದಿ ||
ವರವ ಪಾಲಿಪುದೆಂದು ಶಿರವ ಚಾಚಲು ನೆಗಹಿ |
ಪುರಹರನು ಪ್ರೀತಿಯೊಳಗೆಂದ || ||೧೬೦||

ಒಂದು ಬಾರಿಗೆ ಜೈಸು ಎಂದು ವರಗಳನಿತ್ತು |
ಚಂದದಿಂ ಹರಸಿ ಸಂತಸದಿ ||
ಇಂದುಶೇಖರನಗಜೆ ಸಹಿತ ಗಿರಿಯನು ಸೇರೆ |
ಮಂದಮತಿಯಧಿಕ ಹರ್ಷದಲಿ || ||೧೯೧||

**ರಾಗ ಭೈರವಿ ಏಕತಾಳ**

ಭೂರಮಣನು ಬಳಿಕತ್ತ | ಮದ | ವೇರುತ ಹೂಂಕರಿಸುತ್ತ ||
ಮಾರಾರಿಯು ಬಂದೊಲಿದ | ಮೇ | ಲಾರೆನಗಿದಿರೆಂದ || ||೧೯೨||

ತಿಕ್ಕುವೆನಹಿತರನೆಂದು | ಬಲು | ಸೊಕ್ಕುತ ಪುರಕೈತಂದು ||
ಫಕ್ಕನೆ ಬಲಗೂಡುತ್ತ | ಬಂ | ದಕ್ಕರದಿಂದವನತ್ತ || ||೧೯೩||

ಮುತ್ತಿಯಯೋಧ್ಯಾಪುರವ | ಪಡೆ | ಸುತ್ತಿಸಿ ಕಾಯವು ಬಲವ ||
ಕತ್ತರಿಸಲು ಬೆದರಿದರಾಗ | ಬಲೆ | ತತ್ತರಿಸುತ ಅರುಹಲು ಬೇಗ || ||೧೯೪||

**ರಾಗ ಸುರುಟಿ ಏಕತಾಳ**

ಲಾಲಿಪುದೆಲೆ ರಾಯ | ಹೇ ಜೀಯ |
ಪೇಳುವದೇನ್ ಪರಿಯ ||
ಖೂಳತೆಯಲಿ ಬಲ | ಜಾಲ ಸಹಿತ ಖತಿ |
ತಾಳುತಕೋಟೆಯ | ಮೇಲೇರಿದ ಭಟ |
ಬಲು ಹಟ | ಇದು ದಿಟ || ಲಾಲಿಪು || ||೧೯೫||

ಆರೆಂಬುದನರಿಯೆ | ಬಂದಿಹ | ವೀರನ ಪೆಸರರಿಯೆ ||
ತೋರುತ ಮಹ ಘೋರ | ಕಾರದಿಕಾದರ |
ಹೀರುತ ಕೊತ್ತಳ | ಮಿರುತ ಬಂದ |
ಮದದಿಂದ | ಪಗೆಯಿಂದ || ಲಾಲಿಪು || ||೧೯೬||

ಏರು ನೀ ರಥವನ್ನು | ರಿಪು ಶಿರ |
ಹಾರಿಸಿ ನಮ್ಮವನು ||
ಭೋರನೆ ಕರುಣವ | ಬೀರುತಲಿಂದು ಮುಂ |
ದಾರಕ ಸಂಗರ | ಧೀರನೆ ಪೊರೆಯೈ |
ನೆರೆಯೈ | ಮೆರೆಯೈ || ಲಾಲಿಪು || ||೧೯೭||

**ಭಾಮಿನಿ**

ಕೇಳುತಲೆ ಭೂಪಾಲನೆದ್ದನು
ಕಾಲ ಭೈರವನಂತೆ ಪಟುಭಟ
ಜಾಲ ಬೆದರಲು ಬಿಂಕದಲಿ ನೆಡೆ ಹೊಯ್ದು ಗದ್ದುಗೆಗೆ ||
ಖೂಳನಾರವನಿಂದು ಪರಿಕಿಪೆ
ನೇಳಿರೆನೆ ವಾಹಿನಿಯು ನೆರೆಯಲು
ತಾಳಿ ರೋಷಾವೇಶದಿಂದಿದಿರಾದನಾಹವಕೆ || ||೨೯೮||

**ರಾಗ ಶಂಕರಾಭರಣ ಮಟ್ಟೆತಾಳ**

ಆರೆಲೋ ನೃಪಾಲ ಭಳಿರೇ | ಭೂರಿಬಲವ ನೆರಹುತೆಮ್ಮ |
ನೂರಮುತ್ತಿ ಚರರನಿರಿದ | ಕಾರ್ಯವೇನೆಲಾ ||
ವೀರನಾದಡಿಂದು ಪೇಳ್ವು | ದಾವ ಪುರದ ಧಾರುಣೀಂದ್ರ |
ಶೂರತನವಿದ್ಯಾತಕೆನಲು | ಭೋರನೆಂದನು || ||೨೯೯||

ಇತ್ತ ತಿರುಗಿ ಕೇಳು ಪಾಂಡ್ಯ | ಪೃಥ್ವಿಪಾಲ ವಿಜಯವರ್ಮ |
ಪುತ್ರ ವೈರಿಕದಳಿವನಕೆ | ಮತ್ತದಂತಿಯು ||
ಮತ್ತೆ ಚಂದ್ರಸೇನನೆಂಬ | ಉತ್ತಮದ ಪೆಸರು ನೀನು |
ಬಿತ್ತರಿಪುದು ವಂಶನಾಮ | ಸತ್ತ್ವ ವಿವರವ || ||೧೮೦||

ಧರೆಯೊಳಧಿಕವಾದಯೋಧ್ಯ | ದರಸ ತರಣಿವಂಶದ ಜನ |
ತರಳ ಪಗೆಯ ಕರಿಯಸಿಂಗ | ಮೆರೆವ ದಶರಥ ||
ಧುರಬಲಾಢ್ಯನೆಂಬುದರಿತು | ತೆರಳು ವೈರವ್ಯಾತಕೆನಲು |
ಉರಿಯ ಮಸಗಿ ಚಂದ್ರಸೇನ | ನಿರದೆ ಗರ್ಜಿಸಿ || ||೧೮೧||

**ಕಂದ**

ಮತ್ತೆಡೆಬಿಡದಿರೆ ಕಾಳಗ
ಹತ್ತಿದುದಿಳೆ ಬಾಯ್ಬಿಡುವಂತೆ ಗರ್ಜಿಸಿಯುಭಯರ್ |
ಮಲೆಯುತ(ಬಲುಶರಗಳ)ಲರಿ
ದತ್ತಲೆ ಶಸ್ತ್ರಾಸ್ತ್ರವಂ ಕೆದರುತಲು ನುಡಿದರ್ || ||೧೮೨||

**ರಾಗ ಭೈರವಿ ಅಷ್ಟತಾಳ**

ಭಳಿರೆ ಶಾಭಾಸು ಮಲ್ಲ | ಲೋಕದಿ ನಿನ್ನ | ಛಲದಂಕನೆಂಬರೆಲ್ಲ ||
ತಿಳಿಯಬೇಕಾ ಪರಿಯ | ನಳವಿಯೋಳೀಗೆಂದು | ಹಿಳುಕಿಡೆತರಿದೆಂದನು || ||೧೮೩||

ಅರಿವೆ ಪ್ರದೀಪನಲೀ | ಭಂಗದೊಳೋಡಿ | ತಿರುಗಿ ನೀ ಸಮರಕಿಲ್ಲಿ ||
ಮರಣವ ಬಯಸುತ್ತ | ಮರುಳುತನದಿ ಬಂದೆ | ಮರಳತ್ತ ಸಾಕೆಂದನು || ||೧೭೪||

ಬಲ್ಲೆ ರಾವಣನೊಡನೆ | ಯುದ್ಧದಿ ಜೀವ | ದಲ್ಲುಳಿದ ಭಟನು ನೀನೆ ||
ಹುಲ್ಲು ವ್ಯಾಧನ ಗೆಲ್ದು | ಬಲ್ಲಿದನಾದಂತೆ | ಸಲ್ಲದು ತನ್ನೊಡನೆ || ||೧೭೫||

ಡಂಬತನಂಗಳೇಕೆ | ಬಾಹುವಿನ ಸೌ | ರಂಭಗಳಿರಲು ಜೋಕೆ ||
ಇಂಬರಿತು ತನ್ನ ವಿ | ಜೃಂಭ ಗೈಸುವ ಸತ್ತ್ವ | ಸಂಭ್ರಮದೋರೆನ್ನುತ || ||೧೭೬||

**ವಾರ್ಧಕ**

ಅರಿರಥಕೆ ಪತ್ತು ಧ್ವಜಗಿಪ್ಪತ್ತು ಚಕ್ರಕಂ
ಸರಿಸಿ ಮೂವತ್ತು ಸಾರಥಿಗೆ ನಲುವತ್ತು ಹಯ
ಕಿರದೆಯ್ವೈವತ್ತು ನೃಪಗಂನೂರು ಮಾರ್ಗಣವ ಬೀರ್ದವಂ ಬೊಬ್ಬಿರಿಯಲು ||
ಇರದೆ ತೇರ್ಗಿಪ್ಪತ್ತು ಕೇತಕ್ಕೆ ನಲ್ವತ್ತು
ನೆರೆಚಕ್ರಕರುವತ್ತು ಸೂತನಿಂಗೆಂಬತ್ತು
ಹರಿಗಳ್ಗೆ ಪಗೆಗಳ್ಗೆ ಇನ್ನೂರು ಕೂರ್ಗಣೆಯ ನಾರ್ದೆಚ್ಚು ಗರ್ಜಿಸಿದನು || ||೧೭೭||

**ರಾಗ ಶಂಕರಾಭರಣ ಮಟ್ಟೆತಾಳ**

ಖಾತಿಯಾಂತು ಬಳಿಕಯೋಧ್ಯನಾಥ ನುಡಿದನು |
ವಾತ ಬಗೆವನೇನು ಜೀಮೂತತತಿಯನು ||
ಯಾತಕೆನ್ನೊಡನೆ ನಿಲುವೆ ಜಾತು ಸಾರೆಲೋ |
ಬೂತು ಛಲಕೆ ಬೆದರುವಾತನಲ್ಲ ತಾನೆಲೊ || ||೧೭೮||

ಮರುಳೆಯಾಕೃಶಾನುವಿಂಗೆ ನೊರಜುವುದು ಬಲು |
ಭರಿತಸಿಂಗನಿಂಗೆ ಗಜಗಳರಸಿ ಮುತ್ತಲು ||
ಹರಣವುಳಿಗೆ ತನ್ನೊಳಿಂದು ಧುರವ ಗೈಯಲು |
ಶಿರಕೆ ಬೆಲೆಯು ಕಾಂಬೆನುತ್ತ ಭರದೊಳೆಸೆಯಲು || ||೧೭೯||

ತರಿದು ಮಿಂಚು ಪುಳುವಿಗಂಜಿ ತರಣಿ ಸರಿಯುಗೇ |
ಮೆರೆವುದಾ ಪಂಚಾಸ್ಯ ತಡೆಯೆ ಶರಭ ಬೆದರುಗೆ ||
ಬರಿದೆ ಗಳಹಬೇಡೆನುತ್ತ ಸರಳ ಸುರಿದನು |
ಪರಿಕಿಸುತ್ತ ಚಂದ್ರಸೇನ ತರಿದು ನುಡಿದನು || ||೧೮೦||

ಭಾನುವಂಶಜಾತ ಧಿರುರೆ ಭಾನು ನೀನೆಲಾ |
ತಾನೆಲಾ ಸ್ವರ್ಭಾನುವಿಂದು ಜಾಣ ಕೇಳೆಲಾ ||
ತ್ರಾಣವಿರಲು ತಾಳೆನುತ್ತ ಸಾಣೆಯಲಗನು |
ಕ್ಷೋಣಿಪಾಲ ನೆನೆದು ಶಿವನನರಸಗೆಚ್ಚನು || ||೨೮೧||

**ಭಾಮಿನಿ**

ಹರನ ವರವಿರಲೆಸೆದ ಶರದಿಂ
ದರಸ ಮೂರ್ಛೆಯೊಳರಗೆ ರಥದಲಿ
ಮರುಗಿದುದು ಜನಕಟಕ ಹಾಯೆಂದೆನುತ ಹಮ್ಮೈಸಿ |
ಸುರರ ಮನ ಕರಗಲ್ಕೆ ಸುಜನರು
ಕರಕರಿಸೆ ವಿಧುಸೇನ ಹಾಸ್ಯವ
ಸರಿಸಿ ಮದವಂಕುರಿಸಲೆಂದನು ಬಳಿಕ ನಗೆ ಸೂಸಿ || ||೨೮೨||

**ರಾಗ ಕಮಾಚು ಏಕತಾಳ**

ಭಲಾ ಭಲಾ ಭಲೆ ದಶರಥ ಭೂಪತಿ |
ಕಲಹದಿ ತನ್ನನ್ನು ಜೈಸಿದೆಯ ||
ಕಲಿಯು ಪರಾಕ್ರಮಿ | ಛಲದಂಕನು ರಿಪು |
ಕುಲತಿಮಿರಾರ್ಕನು | ಬಳಲಿದೆಯ || ||೨೮೩||

ವಸುಧೆಯೊಳಗ್ಗಳ | ದಶರಥ ಮನುಕುಲ |
ದಸಮಸುಕೀರ್ತಿಯೊ | ಳೆಸೆಯುವನೆ ||
ಮಸಗುತ ವ್ಯಾಧನ | ನುಸುರಡಗಿಸುತಲೆ |
ಕುಶಲದೊಳಾ ನೃಪ | ಶಶಿಸಮನು || ||೨೮೪||

ಇಂದೆನ್ನೊಳು ಮದ | ದಿಂದ ರಣಾಗ್ರದಿ |
ನೊಂದುರುಳಿದೆ ಹಾ ನಿನ್ನರಸಿ ||
ಗಿಂದುಗತಿಯದೇ | ನೆಂದುಸುರೈಬಾ |
ಎಂದೆನೆ ಗಜರಿದ ನಾ ಸಹಸಿ || ||೨೮೫||

**ಭಾಮಿನಿ**

ಏಳು ಪುನಃ ಕಟ್ಟಾಳುತನವಿರೆ
ಕಾಳಗಕೆ ನಿಲು ತೀರದಡೆ ನಿಜ
ಕಾಲಿಗೆರಗಲು ಪೊರೆವೆ ಬಲಹೀನರನು ಪೊರೆವಂದ |

ತಾಳುವೆನು ಭಯವೇತಕೆನ್ನುತ
ಖೂಳ ಬಲುತರ ಗಳಹಲೆದ್ದು ವಿ
ಶಾಲಮತಿಯದ ನೋಡಿದನು ಝೇಂಕರಿಸುತಿದಿರಾದ || ||೧೮೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವೀರ ನಿಮಿಷಾರ್ಧದಲಿ ನಿನ್ನಸು |
ಹೀರುವೆನು ನಿನಗಾಸೆಯುಳ್ಳಡೆ |
ಸೇರುಪಾದವನೆಂದು ಭೂಮಿಪ | ನಾರುಭಟಿಸೆ || ||೧೮೭||

ಮರುಳೆ ಮಂಜಿನ ಮಳೆಗೆ ಕುಲಗಿರಿ |
ಜರಿವುದೇ ನೀನೆಷ್ಟು ಸೆಣಸಲು |
ಸರಿದು ಪೋಪೆನೆ ಕಂಡೆ ನಿನ್ನಯ | ಪರಿಯನೆಲ್ಲ || ||೧೮೮||

ಒಂದು ಬಾರಿಗೆ ತನ್ನ ಮೂರ್ಛಿಸು |
ತಿಂದು ಬೆಳೆದಿಹ ಮದದ ಗಿರಿಗಾ |
ನಿಂದು ವಜ್ರನೆನುತ್ತ ನುಡಿಯ | ಲ್ಕೆಂದನಾಗ || ||೧೮೯||

ಈಶನನು ಒಲಿಸಿರ್ಪೆನಿಂದಿಲಿ |
ನಾಶಗೈಯದೆ ಪೋದೆನಾದರೆ |
ಭೂಸತಿಯ ಪಾಲಕನೆ ಶರಸ | ನ್ಯಾಸವೆಂದ || ||೧೯೦||

ಫಾಲನೇತ್ರನ ಕರೆಸು ನಿನ್ನನು |
ಸೀಳದಿರಲಜಸೂನು ಮನುಕುಲ |
ಮೌಳಿ ದಶರಥನೆಂಬ ಕಾಯವ | ಜ್ವಾಲೆಗೀವೆ || ||೧೯೧||

**ಭಾಮಿನಿ**

ಒರೆದ ನುಡಿ ಕೇಳುತ್ತ ಕೋಪದೊ
ಳರಿರಥಕೆ ತೆಗೆದೆಚ್ಚ ಭರಕದು
ಸರಿದು ಯೋಜನವೆರಡ ಸರ್ರನೆ ತಿರುಗಲೀಕ್ಷಿಸುತ |
ತಿರುಗಿ ಪಗೆ ತೇರಿಂಗೆ ಶಸ್ತ್ರವ
ಸುರಿಯೆ ಯೋಜನ ಮೂರು ಪಿಂದ
ಕ್ಕಿರದೆ ಫರ್ರನೆ ಸರಿಯೆ ಸರಿಸುತ ವೀರನಿಂತೆಂದ || ||೧೯೨||

**ರಾಗ ಮಾರವಿ ಏಕತಾಳ**

ಪೊಡವಿಪ ನೀ ಬಲು | ಕಡುಗಲಿಯಾದೆಯ | ದೃಢಭುಜ ವಿಕ್ರಮದಿ ||
ಧಡಿಗತೆ ತೋರೆನು | ತಡೆಬಿಡದೆಚ್ಚಡೆ | ಕಡಿಯುತಲದ ಭರದಿ || ||೧೯೩||

ಬಿಗುತರ ನುಡಿಗಳ | ಬಗುಳುವ ನಾಲಗೆ | ಸಿಗಿಯುತಲಿಂದಿನಲಿ ||
ಜಗಳದೊಳಾ ಜಯ | ಮುಗುದೆಯ ಸೆಳೆವೆನು | ಬಗೆದೋರೆನೆ ಕನಲಿ || ||೧೯೪||

ಬಲುತರ ಶಸ್ತ್ರಾಯುಧದೊಳು ಹೆಣಗಲು | ಬಳುವಳಿಯಜಶರವ ||
ಮುಳಿದೆಚ್ಚಡೆ ಪಗೆ | ತಲೆಧಾರುಣಿಯೊಳು | ಹೊಳೆಯಲು ಜನ ನಲಿಯೆ || ||೧೯೫||

**ವಾರ್ಧಕ**

ಒರೆವೆ ಮುಂದಣ ಕಥೆಯನರಿದಳಂ ಸರಳಿಂಗೆ
ಸರಿಯಲಾಚೆಗೆ ನೃಪಂ ಹರುಷದಿಂ ಪುರದೊಳಿರೆ
ಶರಧಿಯಲಿ ಕೌಸಲ್ಯೆಯಿರ್ಪ ಪೆಟ್ಟಿಗೆ ಝಷದ ಕೈತಪ್ಪಿ ಶರಧಿಯೊಳಗೆ ||
ಸರಿದು ಬಲುತೆರೆವಶದಿ ತೇಲುತ್ತಲೈತರಲು
ವರುಣನಾಳ್ಗಳು ಕೊಂಡು ಅರಸಗರುಹುವೆವೆಂದು
ವರುಣನಡಿಗೆರಗಿತಂದಿರಿಸಿ ಕಾಣ್ಕೆಯನಂದು ಪೇಳಿದರು ನೋಡಿದುದನು || ||೧೯೬||

**ರಾಗ ಸುರುಟಿ ಏಕತಾಳ**

ಶರಧಿಪ ಕೇಳಿಂದು | ಬಲೆಗಳ |
ಸರಿಸುತಲಾವಿಂದು ||
ತೆರೆ ಬಳಿಯರಸಲು | ಕರೆ ಪೊದ್ದುತಲಿಹ |
ಸರಿ ಪೆಟ್ಟಿಗೆಯಿದ | ಪರಿಕಿಸಿ ತಂದೆವು || ||೧೯೭||

ಏನಿದು ಚೋದಿಗವು | ನಿಜವನು |
ಕಾಣೆವಾವೀತೆರವು ||
ದಾನವ ಕುಹಕವೊ | ಜಾಣರಪಾಯವೊ |
ಏನಾ ಹರಿಕೃಪೆ | ಕಾಣಿಸಿದಂದವೊ || ||೧೯೮||

ಅರಿಯುವರಾರಿದನು | ನೀನದ |
ನರಿಯುವೊಡಾಜ್ಞೆಯನು ||
ಕರುಣಿಸಿದಡೆ ಮನ | ಹರುಷದೊಳಿಹೆವೆನ |
ಲರಸಿಯೊಡನೆ ತಾ | ನರುಹಿದ ವರುಣನು || ||೧೯೯||

**ರಾಗ ಕೇದಾರಗೌಳ ಝಂಪೆತಾಳ**

ಕಾಂತೆ ನೋಡಿದರನೆಲ್ಲಾ | ಸತ್ಯವನು | ಕಂತು ಪಿತನೊಬ್ಬ ಬಲ್ಲ ||
ಎಂತು ಬಂದುದೊ ಪೆಟ್ಟಿಗೆ | ಇದರೊಳಿ | ನ್ನೆಂತು ಕೃತ್ರಿಮವೊ ಕಡೆಗೆ || ||೩೦೦||

ಇರದೆ ನಮ್ಮೊಳು ದ್ವೇಷದಿ | ಖಳರೇನು | ವಿರಚಿಸಿದರೋ ಮಾಯದಿ ||
ಹರಹರಾ ಇದನರಿಯಲು | ಪಥಮಾವು | ದರಿಯದಾಯ್ತೆನಗೆನ್ನಲು || ||೩೦೧||

ಹಿಂದೊಂದು ಶಿಶುಕಂಡುದು | ಅದು ಬೊಮ್ಮ | ನಿಂದ ನಿಶ್ಚಯಮಾದುದು ||
ಇಂದು ಪೆಟ್ಟಿಗೆಯೊಳೇನು | ನೋಳ್ಪೆ ಗೋ | ವಿಂದ ಗತಿ ಎನ್ನುತವನು || ||೩೦೨||

**ಭಾಮಿನಿ**

ಭರದಿ ಬೀಗವ ಸೆಳೆದು ಬಾಗಿಲ
ಪರಿಕಿಸಲಿಕೇನೆಂಬೆ ರತಿಯೋ
ಸಿರಿಯೊ ಗಿರಿಜೆಯೊ ವಾಣಿಶಚಿಯೋ ರಂಭೆ ಮೋಹಿನಿಯೊ |
ತರಣಿ ಕಿರಣವೆ ತರುಣಿಯೆನಿಸಿತೊ
ಪರಿಯ ದೇವನೆ ಬಲ್ಲನದರಿಂ
ದರಿಯ ಬೇಕಿದನೆನುತ ಭಾಮಾಮಣಿಯೊಳಿಂತೆಂದ || ||೩೦೩||

**ರಾಗ ಕಾಂಭೋದಿ ಝಂಪೆತಾಳ**

ಆರು ನೀನೆಲೆ ತಾಯೆ ಭೂರಿತವ ಭದ್ರತೆಯ |
ಸಾರಿರ್ದ ಕಾರಣವದೇನು ||
ಈ ರೀತಿಯೊಬ್ಬಳೀ ನೀರಿನೊಳಗೈತಂದ |
ಕಾರಿಯವ ಪೇಳ್ವುದೆನುತ || ||೩೦೪||

ತಿರುಗಿ ವರುಣನು ಮತ್ತೆ ನೆರೆಯೋಚಿಸುತಲಾವ |
ದೊರೆಯರಸಿ ಜನಕನಾರಬಲೆ ||
ಮೆರೆವ ಮೊಗ ಕಂದಿರ್ಪ ಚರಿತೆಯೇನೆಂಬುದನು |
ಕರುಣದಿಂದುಸುರುವದು ಬಾಲೆ || ||೩೦೫||

ಅರಿಯದಾದೆನು ನಿನ್ನ ಪೆಸರಿರವನೆಲ್ಲವನು |
ಸರಸಿಜಾಂಬಕಿಯೆನ್ನೊಳೀಗ ||
ಅರುಹುವದು ಭಯಗೊಳದೆಯೆನಲಾಕೆ ಪೇಳಿದಳು |
ವರುಣನೊಳು ವ್ಯಥೆಯ ನಿಜ ಕಥೆಯ|| ||೩೦೬||

**ರಾಗ ಭೈರವಿ ತ್ರಿವುಡೆತಾಳ**

ಚಿತ್ತವಿಸಯ್ಯ ಖ್ಯಾತ | ಬಿನ್ನಪವಿದ |
ನುತ್ತಮನುದಧಿನಾಥ || ಪೇಳುವೆನೆನ್ನ |
ವೃತ್ತಾಂತವೆಲ್ಲವತ್ತ | ಕೋಸಲ ದೊರೆ |
ಪುತ್ರಿಯಾಗಿರ್ದೆನತ್ತ | ಕೌಸಲೆ ಎನ್ನ |
ಪತ್ತು ರಥಾಖ್ಯಗಿತ್ತ | ರಾಜ್ಯವ ಸಹಿ |
ತಿತ್ತೆನ್ನ ಜನಕನತ್ತ | ತಪಕೆ ಪೋಗ |
ಲಿತ್ತಯೋಧ್ಯದೊಳಾವತ್ತ | ಸಂತಸದೊಳಿರುತ ||
ಉತ್ತಮೋತ್ತಮ ಭಾಗ್ಯದಿಂ ನಿಜ |
ಪತ್ತನದಿ ಸುಖವೆತ್ತು ಬಾಳಿರ |
ಲತ್ತ ಬಂದಾಪತ್ತನೇನದ |
ಬಿತ್ತರಿಪೆ ಮನವಿತ್ತು ತಿಳಿಯಿದ || ||೩೦೭||

ಶರನಿಧಿಯ ಮಧ್ಯದಿ | ತ್ರೈಕೂಟದ |
ಗಿರಿಲಂಕಾ ಪುರವರದಿ | ಇರುವ ದೈತ್ಯ |
ರರಸ ರಾವಣ ಮದದಿ | ಮುತ್ತುತನಲ್ಲಾ |
ಗಿರದೆ ಮೂರ್ಛಿಸಿ ಭರದಿ | ಸೂರೆಗೈದನ |
ನೆರೆ ಭಾಗ್ಯವನು ಮುದದಿ | ಎನ್ನನು ಸಖಿ |
ಯರ ಸಹಿತೊಯ್ಯಹಾದಿ | ಗಟ್ಟುತಲಿನ |
ನುರಿದು ಶಾಪಿಸಲಿಕ್ಕೈದಿ | ಪುರದಿ ವೈರೋದಿ ||
ಅರಿಯು ಪುಟ್ಟುಗೀ ತರಳೆಯುದರದಿ |
ತರಿವೆನಲ್ಲದೊಡಿರಿಪೆ ಸೆರೆಗೆಂ |
ದೊರೆಯೆ ಅಜಮುಖ್ಯರರುಹೆ ನೀತಿಯ |
ತರಿಸಿ ಪೆಟ್ಟಿಗೆ ಕರೆಸಿ ಮತ್ಸ್ಯವ || ||೩೦೮||

ಅಂದೆನ್ನನಿರಿಸುತಲಿ | ಬೀಗವನಿಕ್ಕು |
ತಂದಾತಗೀಯುತಲಿ || ಕಾದಿರುವನು |
ತಂದರುಹಲು ತನ್ನಲಿ | ಭದ್ರವಿದೆನು |
ತಂದಿಡುತತಿ ಬಾಯಲಿ | ಇರುತಲಿರ |
ಲೊಂದಿನ ಮರೆವೆಯಲಿ | ತಪ್ಪಲು ನಡೆ |
ತಂದುದೀ ಜಲಧಿಯಲಿ | ದೇವರ ದಯ |
ದಿಂದಲಿ ಬದುಕುತಲಿ | ಸೇರ್ದೆನಾನಿಲ್ಲಿ ||
ತಂದೆಯಂದದೊಳಿಂದು ಕಾಯೆನು |
ತಂದು ಮರುಗುತ ಮುಂದೆ ಪತಿಯೊಡ |

ನೆಂದಿಗಾದರು ಚಂದದಿಂದಿಹ |
ನಂದ ಗೈಯೆನಲ್ಕೆಂದ ವರುಣನು || ||೨೦೯||

**ವಾರ್ಧಕ**

ಮರುಗದಿರು ನೀನೆಂದು ಮನ್ನಣೆಯ ಗೈದಂದು
ತರತರದಿ ಶೃಂಗರಿಸಿ ದಂಡಿಗೆಯೊಳ್ ಕುಳ್ಳಿರಿಸಿ
ಪರಮಸಂಭ್ರಮದಿಂದಯೋಧ್ಯೆಗೈತರಲಂದು ನೃಪನೆದ್ದು ಮನ್ನಿಸಿದನು ||
ವರುಣ ಕೌಸಲೆಯನುಂ ದೊರೆಗಿತ್ತು ಕಥೆಯನುಂ
ಒರೆದತ್ತ ಸರಿಯಲ್ಕೆ ಸತಿರಮಣಗೆರಗಲ್ಕೆ
ಹರುಷದಿಂದಪ್ಪುತಂ ವಿಭವದಿಂದೊಪ್ಪುತಂದಿರುತಿರ್ದ ನಾ ವೀರನು || ||೨೧೦||

**ರಾಗ ಕಾಂಭೋಜಿ ಝಂಪೆತಾಳ**

ಇತ್ತ ಮಗಧೇಶ ಮುದವೆತ್ತು ಚಂದ್ರಾಖ್ಯಮಣಿ |
ರತ್ನ ಪೀಠದೊಳೆಸೆದು ನುಡಿದ ||
ಪುತ್ರಿಯಾದ ಸುಮಿತ್ರೆಗಿತ್ತಲೇರಿತು ಪ್ರಾಯ |
ಧಾತ್ರಿಪಾಲರ ಬರಿಸಿ ಮುಂದ || ||೨೧೧||

ವಿರಚಿಪೆ ಸ್ವಯಂವರವ ಪುರವ ಶೃಂಗರಿಸುತ್ತ |
ಬರೆಸು ಲೇಖನ ಡಂಗುರವನು ||
ಭರದಿಂದ ಹೊಯ್ಸೆಂದು ಅರುಹಿ ಮಂತ್ರೀಶನಲಿ |
ತರಳ ಶ್ರುತಸೇನನೊಡನವನು || ||೨೧೨||

ಸರ್ವಾಧಿಕಾರವನು ಸರಸದಿಂ ಗೈಯೆನ್ನು |
ತರುಹೆ ಸನ್ನಹಗಳನು ತಾನು ||
ನೆರಹಿ ಬಹು ವಿಧದಿಂದ ಪರಮತರ ಸಿಂಗರವ |
ವಿರಚಿಸಲು ನಡೆಯಿಸಿದನವನು || ||೨೧೩||

ಇತ್ತ ಡಂಗುರವಾಲೆಯತ್ತೆಲ್ಲ ಬರಸಲ್ಕೆ |
ಮತ್ತು ಭೂಪಾಲಕರು ನೆರೆಯೆ ||
ಉತ್ತಮೋತ್ತಮದಿಂದ ಮನ್ನಿಸುತ್ತಿರುತಿರಲು |
ಇತ್ತ ಕಾಳಿಂಗ ದೇಶದಲಿ || ||೨೧೪||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವೀರ ಸೇನಕಸುತ ಪ್ರವೀರನು |
ಭೂರಿ ಜನರೊಡನಲ್ಲಿಗೈತಂ |
ದೊರೆದನಾ ಸೊಬಗಿಂಗೆ ಮೆಚ್ಚುತ | ವೀರನಂದು || ||೩೧೫||

ಅರರೆ ತ್ರೈಜಗತಿಯೊಳಗೀತೆರ |
ವಿರುವದೇ ಸೌಭಾಗ್ಯ ಸಿಂಗರ |
ಧರೆಶರಧಿಯಜಭವರು ತೆತ್ತರೆ | ವರೆಯಲೇನ್ನೈ || ||೩೧೬||

ನೀಲ ಭಿತ್ತಿಯೊ ಹರಿಯ ಕಾರ್ಮುಕ |
ಮೇಲು ಮಂಟಪವೋ ಖರದ್ಯುತಿ |
ಏಳುಲೋಕವೊ ಚಪ್ಪರವೊ ಮನೆ | ಶೂಲಿಧನುವೊ || ||೩೧೭||

ಒಂದೆಸೆಗೆ ಸುರವರರು ಮುನಿಜನ |
ರೊಂದು ಬದಿ ರಾಜೇಂದ್ರ ದೊರೆಗಳು |
ಒಂದು ಕಡೆ ಸತಿಯೊಂದು ಪಥ ಭಟ | ರಿಂದಲೆಸೆಯೆ || ||೩೧೮||

**ಭಾಮಿನಿ**

ವರ ನಿಗಮ ಸ್ಮೃತಿ ಗೀತ ಗಾಯನ
ಮೆರೆಯುವಾಗಮ ಶ್ರುತಿ ಪುರಾಣದೊ
ಳಿರದೆ ಶಾಸ್ತ್ರಾದಿಗಳ ತರ್ಕದ ವಾದ್ಯ ಘೋಷದಲಿ |
ಇರಲು ಬರೆ ಮರ್ಯಾದೆಯಲಿ ಕು
ಳ್ಳಿರಿಸಿ ಸೋದರ ಭಾನುದತ್ತನ
ತರಳೆ ನೀಲೆಯ ಸಹಿತ ಶೃಂಗರ ಗೈದರೊಲವಿನಲಿ || ||೩೧೯||

**ಆರ್ಯಸವಾ**

ತರಳೆಯರಿಬ್ಬರ | ಹರುಷದಿ ನೃಪದಂ | ಡಿಗೆಯಲಿ ಕುಳ್ಳಿರಿಸಿ ||
ನೆರೆದಿಹ ಜನಸಭೆ | ಗಿರದೈತಂದವ | ನೆರೆದರ ತೋರಿಸಿದ || ||೩೨೦||

**ರಾಗ ತೋಡಿ ಅಷ್ಟತಾಳ**

ನೋಡಿರಿ | ಸಭೆ | ನೋಡಿರಿ || ಪಲ್ಲವಿ ||

ಈತನು ತೆಲುಗನಂಗನು ಬಳಿಕೀತ |
ಭೂತಳಪತಿ ಚೋಳ ಕೇರಳದಾತ |
ಈತನು ಕೊಂಕಣ ಸೌರಾಷ್ಟ್ರದಾತ |
ನೀತನು ಸೌವೀರ ಕಾಶ್ಮೀರದಾತ || ||೩೨೧||

ಮತ್ತೆಂದನಯೋಧ್ಯೇಶ ದಶರಥನೀತ |
ನುತ್ತಮ ಬಲವಂತ ರಾಜೇಂದ್ರನಾತ |
ಇತ್ತ ಕಾಳಿಂಗ ಧಾತ್ರಿಪನ ಸಂಜಾತ |
ಮತ್ತಕಾಶಿನಿ ಪ್ರದೀಪನ ನೋಳ್ಪುದೀತ || ||೩೧೧||

ಪರಿಕಿಸುತಾ ದಶಸ್ಯಂದನನನ್ನು |
ತರಳೆ ಸುಮಿತ್ರೆಯು ಪೂಸರವನ್ನು |
ಇರಿಸೆ ಕಂಠದಿ ನೀಲೆಯಾ ಪ್ರವೀರನನು |
ಇರಿಸಲ್ಕೆ ನೋಡುತ್ತ ಭದ್ರಾಖ್ಯತಾನು || ||೩೧೩||

ಮಣಿಮಂಟಪದಿ ವಧುವರರ ಕುಳ್ಳಿರಿಸಿ |
ಜನಪ ಧಾರೆಯ ಗೈದ ದಕ್ಷಿಣೆ ಕೊಡಿಸಿ |
ಘನದಾನ ಭೋಜನದಿಂದಲಿ ದಣಿಯೆ |
ಮುನಿಜನರೆಲ್ಲರು ಹರಸುತ ನಲಿಯೆ || ||೩೧೪||

**ವಾರ್ಧಕ**

ಇರುತಿರಲಿಕತ್ತಲುಂ ಪರಶುಧರನರಸಿದಂ
ಅರಿಗಳಂ ಪದಿನೆಂಟು ಬಾರಿ ಸಂಹರಿಸಿದಂ
ತಿರುಗಿ ಖಂಡಿಸದೆಯುಂ ವರುಷ ಪಲವಾದುದುಂ ಕೊಬ್ಬಿರುವ ಕ್ಷತ್ರಿಕುಲವ ||
ತರಿಯಬೇಕೆನ್ನುತಂ ಬತ್ತಳಿಕೆ ಬಿಗಿಯುತಂ
ಪರಶುಧರ ಗದೆಯಾಂತು ಭಸ್ಮಮಂ ಪೂಸುತಂ
ಉರಿಯನಂದುಗುಳುತಂ ನಡುಗೆ ಸಚರಾಚರಂ ನಡೆತಂದನಾ ಸ್ಥಾನಕೆ || ||೩೧೫||

**ರಾಗ ಮಾರವಿ ಏಕತಾಳ**

ಬರುತವನಂಗನ | ನಿರಿಯುತವಂಗ |
ಹರಸಿ ತೆಲುಂಗನನು | ತರಿದು ಕಾಳಿಂಗನ |
ನೆರೆಕೊಂಕಣ ಬ | ರ್ಬರ ಕೇರಳ ಪಲಿ |
ಪುರ ನೇಪಾಳರ | ಧರೆಗೊರಗಿಸಿದ || ಏನನೆಂಬೆ || ||೩೧೬||

ಮತ್ತೆ ಕಾಶಿಯ | ನೊತ್ತುತ ಕಾಶ್ಮೀರ |
ದತ್ತ ಸೌವೀರವ | ಸುತ್ತಿ ಸೌರಾಷ್ಟ್ರವ |
ಸುತ್ತುತ ಮಾಳವ | ದತ್ತ ನಿಷದನಿಧಿ |
ನೊತ್ತಾಯದಿ ಮಥಿ | ಸುತ್ತಲಿ ಬಂದಾ || ಏನನೆಂಬೆ || ||೩೧೭||

ಚರಿಸುತ ಬಲುಪುರ | ವರಿಗಳನುರೆ ಸಂ |
ಹರಿಸುತ ಕಾ | ಢ್ಗಿರಿ ಯರನು |
ಇರಿದಡಗಿಸಿ ಭುಜ | ತರಳರ ಕುಲವನು |
ತರಿಯುತಲಂ | ದಿರ ದೈತಂದ || ಏನನೆಂಬೆ || ||೨೧೮||

**ಭಾಮಿನಿ**

ಝುಗಝುಗಿಸಿ ಪರಶುಧರ ತಾ ಬಂ
ದೊಗುತ ಮಗಧನ ಕೋಟೆ ಭಂಗಿಸಿ
ಬಗೆಗೊಳದೆ ಕಾದರನು ಸವರುತ ದ್ವಾರ ಪುಡಿಗೈಯ್ಯೆ
ಧಿಗಿಲೆನುತಲುಳಿದವರು ನೃಪಪದ
ಯುಗಕೆ ದೂರಲು ಮುನಿದು ಬಂದನೆ
ಭೃಗು ಕುಲೋತ್ತಮನೆಂದು ಯೋಚಿಸುತಿರ್ದ ಮಾಗಧನು || ||೨೧೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂದು ಕ್ಷತ್ರಿಯ ಜಲಧಿವಡಬನ |
ಮುಂದೆ ಬಾಳುವನಾವ ಬೆದರಲು |
ಹೊಂದುವುದು ನಾರಕವ ಕ್ಷತ್ರಿಯ | ವೃಂದವದಕೆ || ||೨೨೦||

ಇದಿರಾಗಿ ಹೆಣಗುತ್ತಲಳಿಯಲು |
ತ್ರಿದಶಲೋಕದ ಸಕಲಸಂಪದ |
ಕೊದಗಲಪ್ಪುದೆನುತ್ತ ನಿಶ್ಚಯ | ಮುದದಿ ಗೈದ || ||೨೨೧||

ಅನಿತರಲಿ ಭೃಗುರಾಮ ನುಗ್ಗುತ |
ಜನರ ಮಥಿಸುತಲಿಹುದ ಕಾಣುತ |
ಜನಪನಾ ಚಂದ್ರಾಖ್ಯ ನುಡಿದನು | ಘನತೆಯಿಂದ || ||೨೨೨||

**ರಾಗ ಭೈರವಿ ಅಷ್ಟತಾಳ**

ಎಲವೊ ಭಾರ್ಗವ ಕೇಳೆಲಾ | ಕೋಟೆಯ ಮುರಿ | ದೊಳ ನುಗ್ಗಿ ಬಾಗಿಲ್ಗಳ ||
ಕಳಚಿ ಪುಡಿಗೈದು | ಬಲಗಳ ಕೊಲುತಿಹ | ಕೆಲಸವೇನುಸುರೆಂದನು || ||೨೨೩||

ನೆಲಪಾಲರೆಲ್ಲರನು | ಕೊಲ್ಲುವೆನೆಂಬ | ಛಲವಾಂತು ಬಂದೆ ನಾನು ||
ಬಲವಂತನಾದಡೆ | ನಿಲು ಎಂದು ಸಾರಥಿ | ತಲೆಗಡಿದುರುಳಿಸಿದ || ||೨೨೪||

ಮುನಿಕುಲದಲಿ ಜನಿಸಿ | ಕೋಪದೊಳೆಲ್ಲ | ಜನಪರ ಸಂಹರಿಸಿ ||
ಘನತೆಯ ಗೊಂಡರೆ | ಸನುಮತವೇ ಧರ್ಮ | ವನುಕರಿಸದೆ ಬಂದೆಯ || ||೩೩೫||

ದುರುಳರು ಬಾಹುಜರು | ದ್ರೋಹವ ಮುನಿ | ವರರಿಗೆ ಗೈಯುವರು ||
ತರಿಯದೆ ಬಿಟ್ಟರೆ | ಧರೆ ಹೊರಲಾರದೆಂ | ದಿರಿದನು ಪಗೆಯುರಕೆ || ||೩೩೬||

ಮತ್ತೆ ಭೂಪಾಲಕನ | ಪದ್ಮಕ ನಿನ | ದತ್ತನ ಶ್ರುತ ಸೇನನ ||
ಎತ್ತಿ ಖಡ್ಗದಿ ತಲೆ | ಕತ್ತರಿಸುತ ನೃಪ | ಮೊತ್ತವ ಬರಿಗೈದನು || ||೩೩೭||

**ವಾರ್ಧಕ**

ಅರಿಗಳಂ ಜನಗಳಂ ದೊರೆಗಳಂ ದಳಗಳಂ
ತರಳರಂ ವೃದ್ಧರಂ ಬಂದರಂ ನಿಂದರಂ
ಸರಿದರಂ ಜರಿವರಂ ಜಾರ್ವರಂ ಪಾರ್ವರನ್ನೊರಸಿದಂ ಧಾರುಣಿಯಲಿ |
ತಿರುಗುತಂ ನೋಡುತಂ ಅಜಸುತನು ದಶರಥಂ
ವರನಸುವ್ರತಗಳಿಂ ವಿಭವದಿಂದಿರಲವಂ
ತರಿಯಲುಂ ಕಾಲಮಿದು ಅಲ್ಲವೆಂದಾಕ್ಷಣಂ ತಿರುಗಿದಂ ರಾಮ ಭರದಿ || ||೩೩೮||

**ಭಾಮಿನಿ**

ಮತ್ತೆ ದಶರಥನಾ ಕಳಿಂಗಜ
ಮತ್ತಕಾಶಿನಿಯರು ಸಮೇತದೊ
ಳತ್ತ ತಮ್ಮಾಲಯಕೆ ಸರಿಯುತ ಸುಖದೊಳಿರುತಿರಲು |
ಇತ್ತ ಕಾಳಿಕಪುರದಿ ದಾನವ
ಮೊತ್ತದಿಂದೋಲಗವನೀಯುತ
ಚಿತ್ತದಲಿ ಯೊಚಿಸುತ ಶಂಬರನೆಂದ ಬಲಿಯೊಡನೆ || ||೩೩೯||

**ರಾಗ ಕಾಂಭೋಜಿ ಝಂಪೆತಾಳ**

ತಮ್ಮ ಕೇಳ್ ನಾವಿನ್ನು ಸುಮ್ಮನಿರಬಹುದೆ ದಿಟ |
ನಮ್ಮವರ ಕೂಡಿ ಭುವನವನು ||
ಘಮ್ಮನೈದುತ ಧುರದಿ ಹಮ್ಮಿರುವ ಭೂಪರ |
ನ್ನೊಮ್ಮೆ ಜೈಸುವ ಮನವಿದೇಳು || ||೩೪೦||

ತಿರುಗಿ ಮತ್ತೊರೆದನೈ ನರರ ಪಾಡೇನು ಸಂ |
ಗರದಿ ಸುರಕುಲವ ಭಂಗಿಸುತ ||

ಮೆರೆಯೆನಮಗಾರಿದಿರು ಪರಮತರ ಸಾಮ್ರಾಜ್ಯ |
ದೊರಕುವುದು ತಮ್ಮ ಕೇಳೆಂದ || ||೩೪೧||

ಯತಿಪ ಕಾಶ್ಯಪನ ಸತಿ ದಿತಿಯದಿತಿಯರಲಿ ಸುರ |
ತತಿ ಕಿರಿಯ ಭಾಗವವರಿಂದು ||
ಹಿತದಿ ಸುರಲೋಕದೊಳಗತಿ ಭಾಗ್ಯ ಪಾಲಿಪರು |
ಸತತ ಜ್ಯೇಷ್ಠರು ದೈತ್ಯರೆಂದು || ||೩೪೨||

ಇರುತಿರಲು ಖಳರ ಕುಲ ಹರಿಸುತನ್ಯಾಯದಿಂ |
ಮೆರೆವ ಸಂಕ್ರಂದಗಿಂದಿನಲಿ ||
ಇರಿದು ಸುರಸಿರಿಗೆ ನಾವ್ ದೊರೆಯೆನಿಸಬೇಕೆನಲಿ |
ಕರುಹಿದನು ಬಲಿಯು ಸಂತಸದಿ || ||೩೪೩||

**ರಾಗ ಕೇದಾರಗೌಳ ಝಂಪೆತಾಳ**

ಅಣ್ಣ ಕೇಳಿಂದು ರಣದೀ | ಬಿಡದೆ ಮೈ | ಗಣ್ಣನನು ಮುತ್ತಿ ಭರದಿ ||
ಪನ್ನತಿಕೆ ಮೆರೆಸುತಿಂದು | ಸ್ವರವೆಳೆಯ | ಲೆನ್ನ ಮನಕೊಂದು ಕುಂದು || ||೩೪೪||

ತಪ್ಪದೆಯು ಸುರರ ಜೈಸಿ | ಇರೆಬಪ್ಪ | ಕಪ್ಪು ಮೈಯವ ಸಾಹಸಿ ||
ಅಪ್ಪನವರಿಂಗೆ ಮುನ್ನ | ನಮ್ಮಗಳ | ನಪ್ಪಳಿಸದಿಹನೆಯಣ್ಣ || ||೩೪೫||

ಅದಕೊಂದುಪಾಯವಿಹುದು | ತಪದಿಂದ | ಪದುಮಭವಗೊಲಿಸುತಿಂದು ||
ವಿಧವಿಧದಿ ಪಡೆದು ವರವ | ಸುಮನಸರ | ಕದನದಲಿ ಗೆಲಿದು ಮೆರೆವ || ||೩೪೬||

**ರಾಗ ಭೈರವಿ ತ್ರಿವುಡೆತಾಳ**

ಎಂದೆನಲು ದಿಟವೆನುತ ಶಂಬರ | ನಂದು ವನಕೈದುತ್ತ ಭಕ್ತಿಲಿ |
ಮಿಂದು ಶುಚಿಯಾಗುತ್ತ ಭಸ್ಮವ | ನಂದು ಪೂಸುತಲಗ್ನಿಕುಂಡದಿ |
ಚಂದದಿಂದವನೂರ್ಧ್ವ ಮುಖದೊಳ | ಗಂದು ಹೃದಯದ ಮಧ್ಯದೊಳಗಜ |
ಗಂದು ತಾನೇಕಾಗ್ರಚಿತ್ತದಿ | ಮಂದಮತಿ ಜಯವೆನ್ನುತಿರ್ದನು | ಶ್ರದ್ಧೆಯಿಂದ || ||೩೪೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹಲವುಗಾಲವು ನುತಿಸುತಿರಲಜ |
ತಿಳಿದು ಬರೆಕಂಡೆರಗಲೆತ್ತುತ |
ಬಳಲಲೇಕೀ ತನುವ ದಂಡಿಪೆ | ಖಳಕುಲೇಶ || ||೩೪೮||

ಮೆಚ್ಚಿದೆನು ತಪಕಾನು ಮನದಿರ |
ವುಚ್ಚರಿಸಿದೊಡನೀವೆ ವರವೆನೆ |
ಹೆಚ್ಚಿತೋಷದಿ ವಾಣಿವರನಲಿ | ಉಚ್ಚರಿಸಿದ || ||೩೪೯||

ನರರು ಪಾಡಲ್ಲೆನಗೆ ಸುರಮುಖ |
ಹರಿಹರಾದಿಗಳಿಂದ ಸಾಯದ |
ವರವ ಪಾಲಿಸೆ ನಲ್ಕೆ ಕೊಟ್ಟವ | ಸರಿದನಾಗ || ||೩೫೦||

ದೇವರಿಪು ತಾನತ್ತ ಪುರದೊಡ |
ನಾವ ಭಯವಿಲ್ಲೆಂದು ಬಲಿಸಹ |
ದೇವಪುರವನು ಮುತ್ತಿದನು ಬಲು | ರೀವಿಯಿಂದ || ||೩೫೧||

**ವಾರ್ಧಕ**

ಬಂದು ಸುರಲೋಕಮಂ ಸೇವೆ ಸಹ ಮುತ್ತುತಂ
ಇಂದೆಲ್ಲ ಜನರಿಂಗೆ ಭೀತಿಯಂ ಬೀರುತಂ
ಮುಂದೆ ಕೈತಡದರಂ ಮರ್ದಿಸುತ ಖಳರೆಲ್ಲ ಗರ್ವದಿಂ ಬೊಬ್ಬಿರಿಯಲು |
ಅಂದು ನರ್ತನಗಳಿಂ ಚಮರ ಛತ್ರಂಗಳಿಂ
ಕುಂದದಿಹ ತೋಷದಿಂ ಮಣಿಮಯದ ಪೀಠದಿಂ
ಚಂದದಿಂದೊಪ್ಪುತಂ ಝೇಂಕೃತಿಯ ಕೇಳುತಂ ಸುರಪಾಲನಿಂತೆಂದನು || ||೩೫೨||

**ರಾಗ ಮಾರವಿ ಅಷ್ಟತಾಳ**

ಏನಿದು | ಬೊಬ್ಬೆ | ಏನಿದು || ಪಲ್ಲವಿ ||

ಏನಿದು ಗರ್ಜನೆ ದ್ವಾರದೊಳಿಂದು |
ದಾನವ ಕುಲ ಬಂದು ಹಾಯ್ದುದೇನಿಂದು |
ಕಾಣುವೆನಾರೆಂಬ ಪರಿಯೆನುತಂದು |
ತಾನೆ ದ್ವಿಪವನೇರುತ್ತಿಂತೆಂದನು || ||೩೫೩||

ಸೊಕ್ಕಿಲಿ ಪಗೆಯಿಂದಲುಬ್ಬಿದ ಖಳರ |
ತಿಕ್ಕಿಯೆ ನಿಮಿಷಾರ್ಧದೊಳಗೆಮನೂರ |
ವಕ್ಕರದಿಂದಲಿ ನುಗ್ಗಿಪೆನೆನುತ |
ಮುಕ್ಕಣ್ಣಸಖನನು ಮನದಿ ಧ್ಯಾನಿಸುತ || ||೩೫೪||

ನೆರಹಿಸಿ ಬಲವನು ಪೊರಮಡುತ್ತಿರಲು |
ದುರುಳರು ತಿಳುಹಲು ಚಾರರು ಬರಲು |
ಸುರರಾಯನಾರೆಂದು ಕೇಳಲಿಕ್ಕಂದು |
ಒರೆದರು ಖಳನೆಂದ ಮಾತುಗಳಂದು || ||೩೫೫||

**ರಾಗ ಮುಖಾರಿ ಏಕತಾಳ**

ಕೇಳು ಕೇಳಯ್ಯ ಶಚಿಲೋಲ | ಸುಮನಸ ಪಾಲ |
ಕೇಳು ಕೇಳಯ್ಯ ಶಚಿಲೋಲ || ಪ ||

ದೊರೆ ಶಂಬರನು ಬಂದನಿಂದು | ತ್ರೈದಶ ಲೋಕ |
ದರಸುತನವ ಮನಕಂದು ||
ಹಿರಿಯವರಿಂಗತಿ | ಸರಸದೊಳಿತ್ತಡೆ |
ಯುರುತರಲೇಸೆಂದರುಹಿದ ಮತ್ತೆ ತಾ || ||೩೫೬||

ದಿಟ್ಟತನವ ತೋರಲಿಂದು | ಬಲುತರದಿಂದ |
ಕಷ್ಟವಪ್ಪುದು ತಿಳಿಯುತ್ತಿಂದು |
ಇಷ್ಟದೊಳುತ್ತರ | ಶ್ರೇಷ್ಠನೆಯೀಯೆನೆ |
ಸಿಟ್ಟಿನೊಳೆಂದ ತ್ರಿವಿಷ್ಟಪದೊಡೆಯ || ||೩೫೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನಿದೇನಾಶ್ಚರ್ಯ ಬುದ್ಧಿಯ |
ತಾನೆ ಪೇಳ್ವರು ವೀರರೆನಿಸುತೆ |
ದಾನವಾಧಮರಿಂತು ಕೊಬ್ಬಿದ | ರೇನನೆಂಬೆ || ||೩೫೮||

ಧಡಿಗರಿಗೆ ಸಮರಾಂಗಣದಿ ಪುರ |
ಕೊಡುವೆ ಶ್ಯೆಮಿನಿಯತ್ತ ಪೇಳೆಂ |
ದೊಡನೆ ಕಳುಹುತ ಬಂದು ದೈತ್ಯರ | ಪಡೆಯನುಗ್ಗೆ || ||೩೫೯||

ಮೇಲೆ ಖಳಬಲ ಮುತ್ತೆ ಮಥಿಸುತ |
ಕಾಲನಂದದಿ ಬರಲು ದಿತಿಕುಲ |
ಪಾಲ ಶಂಬರ ಹಾಯ್ದು ರಿಪು ಶಚಿ | ಲೋಲಗೆಂದ || ||೩೬೦||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಸುರಪ ನೀನೆನಮ್ಮ | ದಳವ ಸವರಿದದಟ ಭಳಿರೆ |
ಚೆಲುವ ನಾಕವಾಳುವಾತ | ಛಲದೊಳೆಮ್ಮಲಿ || ||೩೬೧||

ಖಳಕುಲೇಂದ್ರನಹುದೆ ಮಝರೆ | ಮಲೆತು ಬಂದಿರ್ಬಲವ ಸೆಳೆವ |
ಸುಭಟನಲ್ಲೊ ಸಾಕು ಸಾಕು | ನಿಲುವದೆನ್ನಲಿ || ||೩೬೨||

ಹಿರಿಯ ಭಾಗದವರುನಮ್ಮ | ನಿರಿದು ಸ್ವರ್ಗ ಪಾಲಿಪಂದ |
ತರವೆ ಲೇಸಿನಿಂದಲಿತ್ತು | ಭರದಿ ಮನ್ನಿಸು || ||೩೬೩||

ಅರಿವೆ ಜ್ಯೇಷ್ಠರೆಂದು ಧರ್ಮ | ತೆರವ ಬಲ್ಲೆ ನೀವೆನೆಂದು |
ಸರಳ ಸೋನೆಯಿಂದ ತುಂಬೆ | ತರಿದು ನುಡಿದನು || ||೩೬೪||

ಸಾರಿ ಪೇಳ್ವೆ ವಿಹಿತವಲ್ಲ | ಊರ ಬಿಡದೆಯಿರಲು ರಣದಿ |
ವೀರ ನಿಮ್ಮ ನೋಳ್ಪವೆನಲು | ಬ್ಬೇರಿ ಶಕ್ರನು || ||೩೬೫||

ಕ್ರೂರ ದನುಜ ಬಾಯ್ಗೆ ಬಂದ | ತೆರದಿ ಬಗುಳಬೇಡೆನುತ್ತ |
ಭಾರಿ ವಜ್ರದಿಂದಲಿಟ್ಟ | ಮೀರಿ ಕೋಪದಿ || ||೩೬೬||

**ಭಾಮಿನಿ**

ಎಂಬುದೇನಾ ಕುಲಿಶಹತಿಯಲಿ
ಶಂಬರನು ಮೈಮರೆಯೆ ಭುಜಸೌ
ರಂಭಬರ್ದಿಲರೊಡೆಯ ಹಾಯ್ದನು ಖಳರ ಭಂಗಿಸುತ ||
ಮುಂಬರಿವ ಬಗೆ ನೋಡೆ ಬಲಿ ಶರ
ತುಂಬಿ ಪಥದಲಿ ತಡೆಯೆ ನಿನ್ನಯ
ಹಂಬಲವ ನಿಲಿಸುವೆನು ತಾನೆಂದೆನುತ ಗರ್ಜಿಸಿದ || ||೩೬೭||

**ರಾಗ ಭೈರವಿ ಅಷ್ಟತಾಳ**

ಭಾಪುರೆ ಮೈಗಣ್ಣನೆ | ಬಲವನೆಲ್ಲಾ | ವೀಪರಿ ಜೈಸಿ ನೀನೆ ||
ಕೋಪದೊಳಣ್ಣನಾ | ಟೋಪವ ಸೋಲಿಸಿ | ತಾಪ ಗೈದುದ ತೋರೆಲಾ || ||೩೬೮||

ನಿಶಿಚರಾಧಮನೆ ಕೇಳು | ಬಯಸಿನಾಕ | ದೆಸೆಗೆಡಲೇಕೆ ಪೇಳು ||
ಕುಶಲವೆ ಸಂಗ್ರಾಮ | ಖತಿ ಮಸಗಲು ನಿನ್ನ | ನುಸುರನೆ ಭಂಗಿಪೆನು || ||೩೬೯||

ಹುಲುಖಳರೊಡನೆ ನೀನು | ಗೆಲವನೊದ | ಬಲುಹಿಂದಲೇರುತಿನ್ನು ||
ಮಲೆತು ಬಂದೆಯ ನಿನ್ನ | ಬಲನೋಳ್ಪೆ ನಿಲ್ಲೆಂದು | ಮುಳಿದೆಚ್ಚಡದ ತರಿದ || ||೩೭೦||

ನಿನ್ನಂತೆ ಬಲು ಖಳರು | ಛಲದಿ ಬಂದು | ತನ್ನೊಡನಳಿದಿಹರು |
ಪನ್ನತಿಕೆಗಳದ | ಮಣ್ಣಿಗಿಕ್ಕುವೆನೆಂದು | ತನ್ನ ಪವಿಯೊಳಿಟ್ಟನು || ||೩೭೧||

**ರಾಗ ಭೈರವಿ ಏಕತಾಳ**

ಅನಿತರೊಳೆದ್ದಾಖಳನು | ಸುರ | ಪನಿಗೆಂದನು ಕೇಳ್ ನೀನು ||
ಘನತೆಲಿ ಗೆಲ್ದಂದವನು | ತತ್ | ಕ್ಷಣದಲಿ ನಿಲಿಸದೆ ಬಿಡೆನು || ||೩೭೨||

ಸಾಕೆಲ ಬಲು ಬೊಬ್ಬಾಟ | ಬರಿ | ದೇಕೆಲ ತನ್ನೊಳಗದಟ ||
ಜೋಕೆಯು ನೋಡೆಂದೆನುತ | ಶರ | ನಾಕಾಧಿಪ ತೊಡಲಾತ || ||೩೭೩||

ಜೀವದೊಳಾಶೆಗಳಿರಲು | ಬಲ | ಕಾವರ ಕರೆಸೆಂದೆನಲು ||
ದೇವಾಧಿಪನದಕೆಂದ | ನಿ | ರ್ಜೀವತೆ ಗೈಯುವೆನೆಂದ || ||೩೭೪||

ಕಪ್ಪೊಡಲವ ನೀನಿಂದು | ದಿಟ | ತಪ್ಪದೆ ಕರಸಿಕೊ ಮುಂದು ||
ಅಪ್ಪಳಿಸುವೆ ನೋಡೆಂದು | ಖಳ | ಧೊಪ್ಪನೆ ಹೊಯ್ಸಲಿಕಂದು || ||೩೭೫||

**ರಾಗ ಶಂಕರಾಭರಣ ಮಟ್ಟೆತಾಳ**

ಬಳಿಕ ಬೀಳುತೆದ್ದು ನುಡಿದ | ಗೆಲಿದೆನೆನ್ನುತುಬ್ಬಬೇಡ |
ಬೆಳೆದ ಮದವ ನಿಲಿಸದುಳಿಯೆ | ಮಲೆತು ನಿನ್ನನು ||
ಖಳರ ದಳವ ಸಹಿತಲೀಗ | ತಲೆಯಗೊಂಬೆನೆನುತ ಕುಲಿಶ |
ಸೆಳೆದು ಪೊಯ್ಯೆ ಬಿದ್ದನಾಗ | ಇಳೆಗೆ ದೈತ್ಯನು || ||೩೭೬||

ಉರಿಯನುಗುಳುತೆದ್ದು ನೋಡು | ತರರೆ ಶಕ್ರ ಧೀರನಾದೆ |
ಯರಿವೆನೆನುತ ಕಲಿಯು ನುಡಿಯ | ಲಿರದೆ ಸುರಪನು ||
ತರತರಾಸ್ತ್ರದಿಂದಲೆಸೆಯೆ | ತರಿದು ಕಲ್ಲುಗುಂಡುಮಯವ |
ಸರಿಸೆ ದಾರಿಗಾಣದಾಗ | ಹರಿಯು ಸೋತನು || ||೩೭೭||

ಮತ್ತೆ ಹಲವು ಬಾರಿಯಿಂದ | ದೈತ್ಯನೊಡನೆ ಕಾದಿ ಸೋಲು |
ತತ್ತಸಾರೆನುತ್ತ ಹಲುಬಿ | ಚಿತ್ತಚಲಿಸುತ || ||೩೭೮||

**ರಾಗ ಘಂಟಾರವ ರೂಪಕತಾಳ**

ಏನ ಮಾಡಲಿ | ದಾನವರಲಿ |
ತಾನೆತಾಗಿದೆ | ಕ್ಷೋಣಿಗೊರಗಿದೆ ||

ಕೌಣಪಾದ್ಯರ | ಇನ್ನು ಕೊಲುವರ |
ಜಾಣ ಭಟರನು | ಕಾಣದಾದೆನು || ||೩೭೯||

ಎತ್ತ ನೋಡಲು | ಧೂರ್ತಬಲಗಳು |
ಮೊತ್ತ ಸಹಿತಲೀ | ಮತ್ತೆ ರಣದಲಿ ||
ನಿತ್ತು ಕಾದಲು ಮತ್ತೆ ಸೋಲಲು |
ಎತ್ತಲಿರುವರೇ | ಸತ್ತ್ವವಂತರೇ || ||೩೮೦||

ಆರಿಗಿಂದಿಲೀ | ಪೊರೆಯೆನ್ನಲೀ |
ನೀರಜೋದ್ಭವಾ | ತೋರು ರೂಪವಾ ||
ವೀರ ಸುಮತಿಯಾ | ಸಾರಿ ಹೇಳಯ್ಯಾ |
ದೂರ ಕೇಳಯ್ಯಾ | ಮೀರಿ ಪೊರೆಯಯ್ಯಾ || ||೩೮೧||

**ವಾರ್ಧಕ**

ಎಂದು ಸುರರೆಲ್ಲರುಂ ಗೋಳಿಡಲಿಕರಿತಜಂ
ಬಂದೊರೆದನೇನಿದುಂ ಮರುಕ ಪೇಳೆನ್ನಲುಂ
ಮಂದ ಮತಿ ಶಂಬರಂ ಬಂದು ನಮ್ಮೆಲ್ಲರಂ ಜೈಸಿ ಭಂಗಿಸಿದನವನ ||
ಕೊಂದು ಸುರನಿಕರಮಂ ಕಾಯುವವನಾವನುಂ
ತಂದೆಗತಿಯೆಲ್ಲವಂ ಪೇಳ್ದು ಪೊರೆಯೆನ್ನಲುಂ |
ನೊಂದಿರುವ ಶಕ್ರನಂ ಮೈದಡವಿ ತಾ ಪೇಳ್ದನಂಬುರುಹಭವನು ನಗುತ || ||೩೮೨||

**ರಾಗ ಭೈರವಿ ತ್ರಿವುಡೆತಾಳ**

ಮರುಗಬೇಡೈ | ಈ ಪರಿ | ಸೊರಗಬೇಡೈ ||
ಮರುಗಬೇಡೈ ನಿರ್ಜರೇಶ್ವರ | ನೊರೆವೆನಾತನು ತನ್ನನು |
ಭರಿತ ತಪದೊಳಗೊಲಿಸಿ ಕೇಳಿದ | ದುರುಳ ಬಲುತರವರವನು |
ಹರಿಹರಾದ್ಯಮರೌಘದಿಂದಲಿ | ಮರಣ ಪೊದ್ದದ ರೀತಿಯ |
ಇರದೆ ಪಡೆದವನಿಂದು ಸೊಕ್ಕಿದ | ಪರಿಗೆ ಕೇಳ್ದುದುಪಾಯವ | ಪೇಳ್ವೆನೀಗ || ||೩೮೩||

ಮತ್ತೆ ಮಾನವರಿಂದ ಮಡಿಯುವ | ಧೂರ್ತ ನಿಶ್ಚಯ ಬೇಗದಿ |
ಪೃಥ್ವಿ ಪಾಲಕ ಧೀರಯೋಧ್ಯಾ | ಪತ್ತನೇಶಗೆ ಶೀಘ್ರದಿ |
ಪತ್ರಿಕೆಯ ಬರೆದತ್ತ ಕಳುಹಿಸಲಿತ್ತ ಬಂದವ ಖೂಳರ |
ನೊತ್ತಿಮರ್ದಿಸಿ ಕ್ಷೇಮ ಗೈಯುವ | ನತ್ತ ಕಳುಹೈ ಚಾರರ | ಎಂದು ನುಡಿದ || ||೩೮೪||

ನೀರಜೋದ್ಭವನತ್ತ ಗಮಿಸಲು | ಭೂರಿ ತೋಷದಿ ಸುರವರ |
ವೀರ ದಶರಥನಲ್ಲಿಗಟ್ಟಿದ | ತೋರಿ ಲಿಖಿತವ ಚಾರರ |
ಭಾರಿ ತ್ವರಿತದಿ ಬಂದು ನೃಪನ ಪ | ದಾರವಿಂದಕೆ ಮಣಿಯಲು |
ಆರಿದೇನೆನೆ ವಾಲೆ ಕೊಡಲದ | ಭೂರಮಣನಾ ಸಭೆಯೊಳು | ವಾಚಿಸಿದನು || ||೩೮೫||

**ರಾಗ ಕಾಂಭೋಜಿ ಝಂಪೆತಾಳ**

ಶ್ರೀರಾಜಯೋಧ್ಯೇಂದ್ರ ಭೂರಾಜ ನಿಧಿಚಂದ್ರ |
ಭೂರಿಭುಜಬಲದಶರಥೇಂದ್ರ ||
ಧೀರಗುಣಸಾಂದ್ರ ಪಗೆ ಭಾರಿವನಜ್ವಾಲೇಂದ್ರ |
ದೂರುವೆನು ನಿಮ್ಮೊಳಮರೇಂದ್ರ || ||೩೮೬||

ದುಷ್ಟ ಶಂಬರನ ಖಳರೊಟ್ಟಿನಲಿ ಬಂದೆಮ್ಮ |
ಪಟ್ಟಕ್ಕೆ ಬಲು ಭಂಗಗೈದ ||
ಇಷ್ಟದಲಿ ಬಂದರಿಘರಟ್ಟನೆಂದೆನಿಸಿ ಸುಖ |
ಗೊಟ್ಟೆಮ್ಮನುಳುಹಬೇಕೆಂದ || ||೩೮೭||

ಎಂದು ಬರೆದಿರ್ದ ಆನಂದ ಒಕ್ಕಣೆಯೋದು |
ತಂದವರ ಮನ್ನಿಸುತಲಿತ್ತ ||
ಚಂದದಿಂ ಕಳುಹಿ ನಿಜ ಮಂದಗಾಮಿನಿ ಕೈಕೆ |
ಗಂದು ನಿಜ ವಾರ್ತೆ ತಾನೆಂದ || ||೩೮೮||

**ರಾಗ ತೋಡಿ ಏಕತಾಳ**

ಕೇಳಿದೆಯ | ಮಾತ | ಕೇಳಿದೆಯ || ಪಲ್ಲವಿ ||

ಕೇಳಿದೆಯ ಮೋಹನಾಂಗಿ | ವಾಲೆ ಬರೆದನಿಂದು ಸುರಪ |
ಖೂಳರುಪಟಳ ಹೆಚ್ಚಿ | ಬಾಳಲಿಸರೆಂದು ತನಗೆ || ಕೇಳಿ || ||೩೮೯||

ಬಂದು ಶಂಬರಾದಿ ಖಳರ | ಕೊಂದು ಸುಖವ ತೋರಬೇಕೆಂ |
ದಿಂದು ಚರರ ಕಳುಹಿದನು | ಚಂದನಗಂಧಿ || ||೩೯೦||

ಅದರಿಂದಾನು ತೆರಳಿ | ಮದಮುಖರ ಮಡುಹಿ ಧುರದಿ |
ಮಘವಗಧಿಕ ಪ್ರಿಯನೆನಿಸಿ ಬಪ್ಪೆ | ಮುದದೊಳಿಹುದೆನಲು ತಾನೆ || ||೩೯೧||

**ರಾಗ ಶಂಕರಾಭರಣ ಏಕತಾಳ**

ಅರಸ ಲಾಲಿಸಯ್ಯ ಸುರರ | ಪರಮ ಭಾಗ್ಯಗಳನ್ನು ನೋಡಿ |
ಹರಿಯರಸಿ ಸ್ನೇಹವಾಂತು | ಬರುವೆ ಕರದೊಯ್ಯೊ || ||೩೯೨||

ಸ್ಫುರಿತಕನಕಗಾತ್ರೆ ದುಷ್ಟ | ರಿರುವರಲ್ಲಿಗುಚಿತವಲ್ಲ |
ಬರುವುದೆನುತಲುಸುರಲಾಗ | ಲೊರೆದಾಳಾಳ್ದಗೆ || ||೩೯೩||

ಎರೆಯ ನೀನಿರಲ್ಕೆ ಪಗೆಯ | ದುರುಳರಿಂದಲಪ್ಪುದೇನು |
ಪರಿಯನರಿವೆನೈವಿನೋದ | ತರಳೆಗಳೇತಕೆ || ||೩೯೪||

**ಭಾಮಿನಿ**

ಭೂರಮಣ ಬೇಡೆನೆಲು ಕೇಳದೆ
ನೀರಜಾಂಬಕಿ ಛಲದೊಳಿರೆ ಕರೆ
ದೇರಿಸುತ ರಥದೊಳಗೆ ಮಾರುತ ವೇಗದಿಂ ಬರುತ |
ಭೂರಿತರ ಸಾಮ್ರಾಜ್ಯ ಲಕ್ಷ್ಮಿಯು
ತೋರಿತೈ ನಂದನವ ಕಾಣುತ
ನೀರೆಯೇನೆನೆ ಭೂಪ ಮತ್ತಾ ಸುದತಿಗಿಂತೆಂದ || ||೩೯೫||

**ರಾಗ ಕಾಂಭೋದಿ ಝಂಪೆತಾಳ**

ಅರಸಿಯತಿಹಿತವಾಗಿ ನಿರತ ದಿವ ಶಶಿಯೆಂಬ |
ತೆರದ ನಿರ್ಭೇದದಿಂದಿರುತ ||
ಮೆರೆವ ನಿರ್ಜರವನದೊಳಧಿಕ ಸೌಭಾಗ್ಯವಿದು |
ತರುಪುಷ್ಪಫಲ ಪಕ್ಷಿ ಸಹಿತ || ||೩೯೬|

ಸುರಗಿ ಹರಿಕೇತಕಿಯು ಸುರಹೊನ್ನೆ ಮಂದಾರ |
ವರಪಾರಿಶ್ಯಾಮಂತ ಕುಲಪಿ ||
ನೆರಕರ್ಣಿ ಶ್ರೀವರ್ಣಿ ಚಂಪಬಕುಳಮಶೋಕೆ |
ಪರಿಜಾಜಿ ಕುಂದಹನೆ ಸುರಳಿ || ||೩೯೭||

ಜಂಬು ಫಲದ್ರಾಕ್ಷೆ ದಾಡಿಂಬ ಮಾಫಲ ಚೂತ |
ನಿಂಬೆ ತಂಕಲ್ಲಿ ಪನಸುಗಳು ||
ರಂಭಾ ಕಪಿತ್ಥ ಕರ್ಜೂರಿಕ್ಷು ಸರ್ವಫಲ |
ಸಂಭ್ರಮದ ಶೋಭೆ ಪಾರ್ಶ್ವಗಳು || ||೩೯೮||

ಶುಕಭೃಂಗ ಚಕ್ರಂಚೆ ಪಿಕ ಮದುಕ ಕಾರಂಡ |
ಬಕ ಪಿಂಗಳೀಸು ಪಕ್ಷಿಗಳೆ ||
ಅಖಿಲ ಕಸ್ತುರಿಕೃಷ್ಣ ಚಕಹರಿಣ ಸೌಗಂಧ |
ಸಕಲಖಗಮೃಗವಿದೆ ಸುಶೀಲೆ || ||೩೯೯||

ಎಂದೆಲ್ಲ ವಿಭವ ಮುದದಿಂದತಾ ತೋರುತ್ತ |
ಲಂದುವೊಳಪೊಗಲು ಭೂಪೇಂದ್ರ ||
ಚಂದದಿಂ ಸುಮನಸರ ವೃಂದ ಸಹಿತಿದಿರ್ಗೊಂಡು |
ಮುಂದೆ ಮನ್ನಿಸಿದನಮರೇಂದ್ರ || ||೪೦೦||

**ರಾಗ ಸುರುಟಿ ಏಕತಾಳ**

ಕ್ಷೇಮವೆ ರಾಜೇಂದ್ರ | ಪ್ರಜೆ ಪರಿ | ಣಾಮವೆ ಗುಣಸಾಂದ್ರ ||
ಸೀಮೆಯ ಬಲು ಜನ | ಸ್ತೋಮವು ನಿನ್ನಯ |
ಕಾಮಿನಿಯರು ಸಹ | ಪ್ರೇಮದೊಳಿಹರೇ || ||೪೦೧||

ಸತಿಯೊಡಗೂಡುತ್ತ | ಬಂದುದೆ | ಯತಿ ಹಿತವೆನೆ ಮತ್ತ ||
ಕ್ಷಿತಿಯೊಳು ಪ್ರಜೆಜನ | ತತಿ ನಾವೆಲ್ಲವ |
ರತಿ ಸುಕ್ಷೇಮಿಗಳ್ | ವ್ಯಥೆಯನು ಬಿಡುಬಿಡು || ||೪೦೨||

ತೋರಿದರರಿಗಳನು | ನಿಮಿಷದಿ | ಹೀರುತ ಸುಖವನ್ನು ||
ತೋರುವೆನೆನೆ ಬಲ | ವಾರಿಧಿ ಸಹಸುರ |
ವೀರನೊಡನೆ ರಥ | ವೇರುತ ಬಂದ || ||೪೦೩||

**ಕಂದ**

ಹರಿಸುರರೊಡನೈತರುವುದ
ಪರಿಕಿಸುತಲೆ ದಾನವನುಬ್ಬೇರುತ ಖತಿಯಂ |
ಧರಿಸುತ ಮುಂದುರೆ ದಶರಥ
ಬರೆದೊರೆತೇರಿಂಗೆ ರಥವ ಸರಿಸುತಲೆಂದಂ || ||೪೦೪||

**ರಾಗ ಭೈರವಿ ಅಷ್ಟತಾಳ**

ಆರೆಲೊ ಫಡ ಮಾನವ | ನಮ್ಮೊಳು ಯುದ್ಧ | ದಾರೀತಿಗಿದಿರಾದವ ||
ನಾರಿಯು ಸಹಿತಲೆ | ಹೋರಿ ಸಾಯಲಿದೇಕೆ | ಭೋರನೆ ತೆರಳೆಂದನು || ||೪೦೫||

ದಾನವಾಧಮನೆ ನೀನು | ಮರ್ದಿಸುತಲು | ಕಾಣಿಸಿದಂದವನು ||
ತ್ರಾಣವುಳ್ಳಡೆ ತೋರು | ಜಾಣತೆ ಬಲ್ಲೆಯೆನ | ಲಾ ನರೇಶ್ವರಗೆಂದನು || ||೪೦೬||

ಸುರಪನ ಬೆಂಬಲಕೆ | ಬಂದವನೆಂಬು | ದರಿತೆ ಕಾದಲ್ಕೆ ಜೋಕೆ ||
ತರಿದು ನಿನ್ನನು ಸತಿಯ | ನಿರದೊಯ್ಯೆ ಬಿಡಿಸುವ | ಧುರಪರಾಕ್ರಮನಾವನು || ||೪೦೭||

ಭಂಡ ನಿಮ್ಮೆಲರನು | ಮರ್ದಿಸುತಲು | ದ್ದಂಡ ದೇವೇಂದ್ರಗಿನ್ನು ||
ಖಂಡಿತ ಸುಖವೀವ | ಮಂಡಲಾಧಿಪ ತಾನು | ಗಂಡುತನವ ತೋರೆಲಾ || ||೪೦೮||

ಸುರಮುಖ್ಯ ಭಟರೆನಗೆ | ಬೆದರಿರೆ | ನರನೇ ನೀನಿದಿರು ಹೇಗೆ ||
ಹರಣಗಳುಳಿವವೆ | ಶಿರಬರಹವನಿಂದು | ಮರೆಸುವೆನೆನಲೆಂದನು || ||೪೦೯||

ಸುರರಂದವಲ್ಲವಿಂದು | ಮಾನವರ ಸಂ | ಗರವನೆ ಪರಿಕಿಸೆಂದು ||
ಭರಿತ ಬಾಣವನಿಡೆ | ತರಿಯಲು ಕಾಣುತ್ತ | ಉರಿಸೂಸಿ ತೆಗೆದೆಚ್ಚನು || ||೪೧೦||

**ಭಾಮಿನಿ**

ಅರಿರಥವ ಸಾರಥಿಯ ತುರಗವ
ಹರಿಸೆ ಪೊಸ ರಥ ಬರಲು ತರಿಯುತ
ಲಿರದೆ ಪೊಡ್ಡವ ತರಿದನಾ ರಿಪು ಕರದ ದಂಡೆಯವ
ಧರಿಸಿದಡೆ ಬೇರೊಂದು ಮತ್ತೊಂ
ದೊರೆಯಲೇನರುವತ್ತನಿರಿಯಲು
ದುರುಳ ಪೊಸ ಕಾರ್ಮುಕವ ಪಿಡಿಯುತ ಸಮರಕಿದಿರಾದ || ||೪೧೧||

**ರಾಗ ಭೈರವಿ ಏಕತಾಳ**

ಹಾರದಿರೆಲವೊ ನಮ್ಮ | ಧನು | ಸಾರಥಿ ಮಡುಹಿದ ಹಮ್ಮ ||
ತೋರೆನ್ನುತ ಶರ ಸುರಿಸಿ | ಬರೆ | ಮೀರುತ ತರಿದನು ಸಹಸಿ || ||೪೧೨||

ಬಗುಳುತ ಗಾರ್ದಭನಂತೆ | ಜಗ | ಲಿಗೆಯರಿ ಕುಕ್ಕುರದಂತೆ ||
ಮಿಗೆ ಬೀಳುತ ಸಾವದನು | ಖಳ | ಬಗೆಗಳ ತಾನರಿಯುವೆನು || ||೪೧೩||

ನರಗುರಿ ಕೇಳಿಂದಿನಲಿ | ಬಲು | ಗರುವದಿ ಕುಣಿಯದಿರಿಲ್ಲಿ ||
ಶಿರತರಿಯುವೆ ನೋಡೆನುತ | ಪೊಸ | ಸರಳೆಚ್ಚನು ಗರ್ಜಿಸುತ || ||೪೧೪||

ತರಿದೆಸೆಯಲು ಶಂಬರನು | ಕಣ್ | ತಿರುಗುತ ಮಲಗಿದನವನು ||
ಪರಿಕಾಣುತ ಬಲಿ ಬಂದ | ಭೂ | ವರನಲಿ ಖಾತಿಯೊಳೆಂದ || ||೪೧೫||

ಆರೆಲೊ ನಮ್ಮಗ್ರಜನ | ರಣ | ಧಾರುಣಿಗೊರಗಿಸಿದಧಮ ||
ತೋರಾ ಮದ ಪಿತ್ತವನು | ಪುಡಿ | ಹಾರಿಸದುಳಿಯೆನು ತಾನು || ||೪೧೬||

**ರಾಗ ಶಂಕರಾಭರಣ ಮಟ್ಟೆತಾಳ**

ದನುಜನೆಂದ ನುಡಿಯ ಕೇಳು | ತನುಜ ನೀನೆ ಲೇಸಿದಾಯ್ತು |
ಎಣಿಕೆಯ ನಿರ್ಭೀದದಿಂದ | ರಣದಿ ಮನ್ನಿಪೆ ||
ಎನಲಿಕೆಂದನನುಜ ನಿನ್ನ | ತನುವ ಬಗಿದು ಭೂತಗಳ್ಗೆ |
ಸನುಮತದಿ ಹಬ್ಬವಿಕ್ಕಿ | ಘನದಿ ಮೆರೆವೆನು || ||೪೧೭||

ಬಿಗುತರದ ಮಾತನಿಂದು | ಬಗುಳುತಿರುವ ನಾಲ್ಗೆಯನ್ನು |
ಸಿಗಿದು ಜಯದ ಮುಗುದೆಯೆಳೆವ | ಬಗೆಯ ನೋಡೆಲ ||
ಬಗೆಯ ನೋಳ್ಪೆನೆಂದು ಧನುವ | ನೆಗಹಿ ಕೋಲನೆಸೆಯೆ ಹಣಿದು |
ಧಗ ಧಗಿಪ ಬಾಣ ಬಿಡಲು | ಜಗತಿಗೊರಗಿದ || ||೪೧೮||

ಎದ್ದು ಶಂಬರನು ನುಡಿದ | ನುದ್ದುರುಟುತನವ ನಿಲಿಪೆ |
ಬದ್ಧವೆಂದು ಪೊಯ್ಯೆ ಭೂಪ | ಪೊಯ್ದನಾತಗೆ ||
ರುದ್ರನಂತೆ ಬಲಿಯು ಕೇಳು | ತೆದ್ದು ಖಳರು ನಿಲಲು ರಾಯ |
ಬದ್ಧ ಭ್ರುಕುಟಿಯಿಂದ ಶರಸ | ಮುದ್ರ ಮುಸುಕಿದ || ||೪೧೯||

**ವಾರ್ಧಕ**

ಒರೆಯಲೇನ್ ಪಗೆಗಳಂದರಸ ಶರವೆಚ್ಚಡಂ
ವಿರಥರಾಗುತ ಖಳರ್ ಕಾಳಕೇಯರಪುರಕೆ
ಸರಿಯಲಾ ಭೂಪಾಲ ಹಾರಿಸಿದ ತೇರನುಂ ಬೆನ್ನಟ್ಟಿ ಖಾತಿಯಿಂದ ||
ದುರಳರಾ ಪುರದೊಳಂ ಬಲು ತರದ ಮಾಯವಂ
ಸರಿಸಿ ಕಗ್ಗತ್ತಲೆಯ ವಿಧ ವಿಧದಿ ನೋಯಿಸಲು
ದೊರೆಯು ನೆರೆ ಬಳಲಿದುದ ಅರಿತರುಣನಂದನಂ ಯೋಚಿಸುತ ಮನದೊಳೆಂದ || ||೪೨೦||

# ೨. ವಾನರಾಭ್ಯುದಯ – ಪಾತ್ರಗಳು

ದೇವೇಂದ್ರ
ದಿಕ್ಪಾಲರು
ಋಕ್ಷ
ಸೂರ್ಯ
ಜಾಂಬವ
ಋಕ್ಷನ ಸ್ತ್ರೀರೂಪ
ಕೇಸರಿ
ಅಂಜನೆ
ವಾಯು
ಬ್ರಹ್ಮ
ಸ್ವರ್ಭಾನು
ವಿಷ್ಣು
ಶಿವ
ಶಬರ ಸುಕೇತ
ಶಬರ ಪಡೆ
ಮಾಯಾವಿ
ವಾಲಿ
ಸುಗ್ರೀವ
ಹನುಮಂತ
ರುಮಾ
ಮತಂಗ ಮುನಿ
ದುಂದುಭಿ
ಹಿಮವಂತ
ವರುಣ
ರಾವಣ
ವಿಶ್ರವಸು
ಋಷಿಗಳು
ಕೈಕಸೆ
ತಾರೆ
ದೂತಿ

**ವಾರ್ಧಕ**

ಗುರುವರಗೆ ಮಣಿದು ಕರಿಮುಖಗೆ ಜಯವೆಂದು ಹರಿ
ಹರ ಕಮಲ ಭವ ಗಿರಿಜೆ ಸಿರಿ ಸರಸ್ವತಿಯರಿಗೆ
ಕರಮುಗಿದು ಸಕಲ ಮುನಿವರರ ಗುಹ ಸುರಪಮುಖ್ಯಾಮರರಿಗಭಿವಂದಿಸಿ |
ಹಿರಿಯರಿಗೆ ಸುಜನರಿಗೆ ಕವಿಗಳಿಗೆ ಶಿರಬಾಗಿ
ಪರಶಿವಂ ಕರುಣಿಸಿದ ಬುದ್ಧಿಯಿಂದಂಜನೆಗೆ
ಮರುತನಿಂ ಸುತನು ಜನಿಸಿದ ಪುಣ್ಯಚರಿತೆಯಂ ಯಕ್ಷಗಾನದಿ ಪೇಳ್ವೆನು || ||೧||

ದುರುಳ ದಶಕಂಠಾದ್ಯರಂ ತರಿದು ಸತಿಸಹಿತ
ಪುರಕೆ ನಡೆತಂದು ರಾಜ್ಯವನಾಳುತಿರೆ ರಾಮ
ದರುಶನಕೆ ಬಂದಖಿಳ ಮುನಿವರರನುಪಚರಿಸಿ ರಾವಣಾದ್ಯರ ಚರಿತೆಯ |
ಅರಿತು ವಿಧಿಯಿಂದಲಾ ಋಕ್ಷರಾಜಂ ಜನಿಸಿ
ಭರಿತಬಲ ವಾಲಿಸುಗ್ರೀವರಂ ಪಡೆದುದಂ
ಪರಮಪಾವನೆ ಅಂಜನೇಯಳ ಚರಿತ್ರವರುಹೆನಲು ಕುಂಭಜನೆಂದನು || ||೨||

ಲಾಲಿಸೈ ರಾಮ ಕಲ್ಪಾವಸಾನದೊಳು ಶ್ರೀ
ಲೋಲ ವಟಪತ್ರದೊಳು ಪವಡಿಸಿರಲಾ ಕರ್ಣ
ಮೂಲದಿಂ ಕಿಲ್ಬಿಷವ ತೆಗೆದು ಶರಧಿಯೊಳಿಡಲು ಮಧುಕೈಟಭರು ಜನಿಸುತ |
ಕಾಳಗಕೆ ನಿಲಲವರ ಸದೆದು ಮೇದಿನಿ ಸೃಜಿಸಿ
ಗೋಳುಗುಟ್ಟುತ ಒಡಲೊಳಿರ್ಪ ವಿಧಿಯಂ ಕರೆದು
ಪಾಲಿಸಲು ಸೃಷ್ಟಿಯಧಿಕಾರಮಂ ಮೊದಲಿಗಾ ನವಬ್ರಹ್ಮರಂ ನಿರ್ಮಿಸಿ || ||೩||

ಒತ್ತಿನೊಳು ಜಾಂಬವಂತನು ಜನಿಸಿ ಬಳಿಯೊಳಿರ
ಲತ್ತಲು ಮರೀಚಿಯಿಂದುದಿಸಿರುವ ಕಶ್ಯಪಗೆ
ಪತ್ನಿಯಾಗಿಹ ದಕ್ಷಜೆಯರೊಳದಿತಿಗೆ ಸುರಪ ಮೊದಲಾದ ಸುತರುದಿಸಲು |
ವಿಸ್ತರಿಸಿ ಶತಯಾಗ ಮೂಲೋಕದಧಿಕಾರ
ಸುತ್ರಾಮ ಹರಿಹರಾದ್ಯರ ಮತದಿ ಕೈಗೊಳುತ
ಲರ್ತಿಯಿಂ ಮೆರೆದಿರಲು ಓಲಗದೊಳೊಂದು ದಿನ ದಿಕ್ಪಾಲಕರೊಳೆಂದನು || ||೪||

**ರಾಗ ಭೈರವಿ ಝಂಪೆತಾಳ**

ಕೇಳಿ ನಿರ್ಜರರು ದಿವ | ದಾಳ್ವಿಕೆಯ ಹರಿಹರರು |
ಪಾಲಿಸಿದರಿಂದ ಅನು | ಗಾಲ ಸುಖವೆಮಗೆ || ||೫||

ಸರಸಿರುಹ ಭವ ನಮಗೆ | ನೆರವಾದನದಕವನ |
ಚರಣಪೂಜೆಯ ಗೈದು | ಬರುವದೆನಲಾಗ || ||೭||

ಸುರಪಾಲ ನಿನ್ನೆಣಿಕೆ | ಸರಿ ಎಂದು ಸರಸದಿಂ |
ನೆರಹಿ ಸನ್ನಾಹ ಸಕ | ಲರು ಬರುತಲಂದು || ||೭||

ಯೋಗ ನಿದ್ರೆಯೊಳಿರಲು | ವಾಗೀಶನಡಿಗೆ ತಲೆ |
ಬಾಗಿ ಸ್ತುತಿಗೈದರೊಂ | ದಾಗಿಭಕ್ತಿಯಲಿ || ||೮||

**ರಾಗ ಮಧ್ಯಮಾವತಿ ಆದಿತಾಳ**

ಕರುಣಾಸಾಗರ ಶುಭಚರಿತ ವಾಣೀಶ | ಕರುಣಿಸೆಮಗೆ ಅನವರತ ಸಂತೋಷ ||
ಭರಿತ ಸೌಭಾಗ್ಯ ಸಂಪನ್ನನೆಂದೆನಿಸು | ದುರುಳರ ಭಯ ಸೋಕದಂದದಿ ನಡೆಸು || ||೯||

ಮೂರು ಲೋಕದ ಪಾರುಪತ್ಯ ನಿರ್ಜರರ | ಸೇರಿಕೊಂಡವರೊಳು ಮೇಲಧಿಕಾರ |
ಕಾರಣಕರ್ತ ನೀ ಸ್ಥಿರಗೊಳಿಸೆನಲು | ವಾರಿಜಭವ ಕಂಗಳ್ತೆರೆವನಿತರೊಳು || ||೧೦||

**ರಾಗ ಜಂಜೂಟಿ ಏಕತಾಳ**

ಭಲರೇ ಸುರಕುಲತಿಲಕನೆ ನಿನ್ನಯ | ಬಲುತರ ಭಕ್ತಿಗೊಲಿದೆನಯ್ಯ ||
ತಿಳಿದವ ಮೊದಲೇ ನಿನಗಾ ಹರಿಹರ | ರೊಲಿದಿತ್ತಿಹರು ಮಹಾಸಿರಿಯ ||
ಸಲಹೈ ಮನುಮನಿಗಳು ಇರುವನಕವು | ಬಲು ಸುಖದಿಂ ನಿನ್ನಾಳ್ತನಕೆ ||
ಖಳರಟ್ಟುಳಿ ಸೋಕಲು ಬಿಡದಂದದಿ | ನಳಿನಾಂಬಕನಿಹ ಬೆಂಬಲಕೆ || ||೧೧||

ಇದಕೋ ಪೂಜಿಸಿದುದಕೆ ಪ್ರಸಾದವು | ಮುದದಿಂ ಬಾಳಿರು ನೀನೆನುತ ||
ತ್ರಿದಶಾಧಿಪನಿಂಗೀವುತ ಕಳುಹಿಸಿ | ಮೊದಲಂದದಿ ಸೃಜಿಸುತ ಮತ್ತಾ ||
ವಿಧಿಯು ಕಮಂಡಲದುದಕವ ಪ್ರೋಕ್ಷಿಸೆ | ಉದಧಿ ಕುದಿದು ಧರೆ ನಡುಗಿದುದು ||
ಆದುಭುತ ಕಾಯದೊಳಿದಿರೊಳಗೋರುವ | ನುದಿಸಿ ಪೇಳ್ದ ರೌದ್ರವ ತಳೆದು || ||೧೨||

**ರಾಗ ಮಾರವಿ ಏಕತಾಳ**

ತಿಂಬೆನು ತ್ರೈಲೋಕ್ಯವ ಹಸಿವೆನಗೆ ಸ | ಪ್ತಾಂಬುಧಿಯನು ತೃಷೆಗೆ ||
ಕೊಂಬೆನು ಉದರಕೆ ಎನ್ನ ಪಡೆದರಾ | ರೆಂಬುದರಿಯೆನೆನುತ || ||೧೩||

ಸುತ್ತಲು ಪರಿಕಿಸಿ ಹತ್ತಿರದುಪವನ | ದತ್ತ ಹಾರಿ ಭರದಿ ||
ಉತ್ತಮ ಫಲತರು ಕಿತ್ತು ಕೆಡಹಿ ಮೆ | ಲ್ಲುತ್ತಿರಲಜ ಕಂಡು || ||೧೪||

ಕೊಡಲಿಯ ಕಾವೇ ಕೆಡಿಸಿತು ಕುಲವೆಂ | ದಡಚಿತಿಂದಿಗೆನುತ ||
ಬಿಡದೆ ಮಂತ್ರಜಲ ಜಡಜಜ ಪ್ರೋಕ್ಷಿಸ | ಲಡಿಗೆರೆಗುತಲೆಂದ || ||೧೫||

**ರಾಗ ಕೇದಾರಗೌಳ ಝಂಪೆತಾಳ**

ಗುಣವನಧಿ ನಿನ್ನಿಂದಲಿ | ಸಂಭವಿಸಿ | ತೆನಗೆ ಜನುಮವಿದಿಂದಿಲಿ ||
ಜನಕ ನೀನೆಂದ ತೆರದಿ | ನಡೆವೆ ನಾ | ನನವರತ ನೆಲೆಸಿ ಜಗದಿ || ||೧೬||

ಠಾವೆಲ್ಲಿ ತೋರಿಸೆನಗೆ | ಪೆಸರು ಇ | ನ್ನಾವುದೈ ಲೋಕದೊಳಗೆ ||
ಕೋವಿದನೆ ಪೇಳ್ವುದನ್ನು | ಮಾಳ್ಪೆನೆನ | ಲಾ ವಿರಿಂಚಿಯು ನುಡಿದನು || ||೧೭||

**ಭಾಮಿನಿ**

ಸುತನೆ ಕೇಳ್ಪೂರ್ವದೊಳು ದಕ್ಷನ
ಸುತೆ ಕುಶಸ್ಥಳಿಯಿಂದಲಾ ಮುನಿ
ಪತಿ ಮಹಾಕಾಶ್ಯಪಗೆ ಕಿಷ್ಕಿಯ ಪೆಸರ ವಾನರನು |
ಸುತನವನ ಇರಕಾಗಿ ಸೃಜಿಸಿರು
ವತಿಶಯದ ಕಿಷ್ಕಿಂಧೆ ಪಾಲಿಸು
ಅತುಳಬಲ ಋಕ್ಷಾಭಿಧಾನದಿ ಕೀಶಪತಿಯೆನಿಸಿ || ||೧೮||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ನವಬ್ರಹ್ಮರೊಡನೆ ಜಾಂಬವ ಪುಟ್ಟಿ ಇಲ್ಲಿರ್ಪ |
ನವನ ನಿಲ್ಲಿಪೆ ಮಂತ್ರಿತನಕೆ ||
ಅವನಿಯನಾಳೆಂದು ಋಕ್ಷಿ ಎನ್ನುವಳೋರ್ವ |
ಯುವತಿಯ ಸೃಜಿಸುತ್ತನವಗೆ || ||೧೯||

ತ್ವರಿತದಿ ಪಟ್ಟವ ರಚಿಸಿ ಬಾರೆನ್ನುತ |
ಸುರದೂತನನು ಜತೆಗೊಳಿಸಿ ||
ಧರೆಗಟ್ಟಲವರೊಂದುಗೂಡಿ ಇಳಿದು ಬಂದು |
ತೆರಳಿದರಾ ಗಿರಿಯೆಡೆಗೆ || ||೨೦||

**ರಾಗ ಕಾಂಭೋಜಿ ಝಂಪೆತಾಳ**

ಪರಿಕಿಸುತ ಬೆರಗಾದರಖಿಳಜಾತಿಯ ಫಲವು |
ಪರಿಪರಿಯ ಸುಮಗಳಿಹವಮಿತ ||

ನೆರೆದು ಖಗಮೃಗನಿಕರ ಚರಿಸುತ್ತಲಿರೆ ಕಂಡು |
ಶಿರವ ತೂಗುತಲಿ ವೈಭವಕೆ || ||೨೧||

ಪುಣ್ಯಫಲದಿಂ ಒದಗಿತೆನುತ ಪಟ್ಟವ ಕಟ್ಟಿ |
ಮನ್ನಣೆಯಗೊಳುತ ಚರ ತೆರಳೆ ||
ಇನ್ನಖಿಳ ಕಪಿವರ್ಗ ಕಾಣಿಕೆಯನಿತ್ತು ಸಂ |
ಪನ್ನನನು ಸೇವಿಸುತಲಿರಲು || ||೨೨||

ಸಲಹೆ ಕೆಲಕಾಲ ಧರ್ಮದಿ ಸಕಲ ಪ್ರಜೆಗಳಂ |
ನೆಲಸಿದುದು ಸರ್ವಸೌಭಾಗ್ಯ ||
ಕುಲವ ಬೆಳಗಿಸುವ ಸಂತತಿ ಇಲ್ಲದಿರೆ ಮನದ |
ಕಳವಳವ ಜಾಂಬವನೊಳೆಂದ || ||೨೩||

**ರಾಗ ಪಂತುವರಾಳಿ ರೂಪಕತಾಳ**

ಅರುಹಲರಿಯೆ ಹಿರಿಯ ಜಾಂಬವ | ಜನುಮವೇಕೆ |
ಕರುಣಿಸಿದನು ಜಲಜ ಸಂಭವ ||
ತೊರೆಯದಂತೆ ಧರ್ಮಮಾರ್ಗ | ಪೊರೆದ ಸಕಲ ಕೀಶವರ್ಗ ||
ಬರಿದೆಕೆಟ್ಟುದೆನ್ನ ಬಾಳ್ವೆ | ಪರಿಹರಿಸಲಿಕೇನ ಗೈವೆ || ||೨೪||

ಫಲಿಸದಿರುವ ತರುವಿನಂದದಿ | ಇಳೆಯೊಳುದಿಸಿ |
ಬೆಳೆದರೇನು ಧರ್ಮಮಾರ್ಗದಿ ||
ತಿಳಿದು ಪುಣ್ಯಕರ್ಮಗಳನು | ಹಲವನೆಸಗಿ ದಣಿದೆ ತಾನು |
ಕುಲವ ಬೆಳಗಿಸುವ ಸುಪುತ್ರ | ಫಲವ ಕಾಣೆನಿದು ವಿಚಿತ್ರ || ||೨೫||

**ರಾಗ ಸುರುಟಿ ಏಕತಾಳ**

ಇಂತೆನೆ ಜಾಂಬವನು | ಪೇಳಿದ |
ಚಿಂತಿಸಿ ಫಲವೇನು ||
ಸಂತಾಪವ ತೊರೆ | ದಂತಃಶುದ್ಧದಿ |
ನಿಂತು ಭಜಿಸು ಆ | ಕಂತುವಿರೋಧಿಯ || ||೨೬||

ಹತ್ತಿರ ರಂಜಿಸುವ | ಪಂಪಾ |
ಕ್ಷೇತ್ರದಿ ತಪಗೈವ ||
ಭಕ್ತರ ಮನದಿ | ಷ್ಟಾರ್ಥ ಸಿದ್ಧಿಪುದೆನೆ |
ಮತ್ತವನಾಜ್ಞೆ ಕೊ | ಳುತ್ತವನೈದಿದ || ||೨೭||

**ಕಂದ**

ಮಿಂದು ಭಸಿತ ರುದ್ರಾಕ್ಷಿಗ
ಳಂ ಧರಿಸುತ್ತಲಿ ಮಹೇಶನಂಪ್ರಿಯನಾತಂ |
ಒಂದೇ ಮನದಿಂ ಜಯ ಜಯ
ವೆಂದೆನುತಲಿ ಸ್ತುತಿಯ ಗೈದ ಕುಳಿತೊಂದೆಡೆಯೊಳ್ || ||೧೮||

**ರಾಗ ತೋಡಿ ಆದಿತಾಳ**

ಜಯ ಜಯ ಗೌರೀರಮಣ | ಕೃಪಾವರಣ || ಪಲ್ಲವಿ ||

ದಯೆದೋರೈ ಭವ | ಭಯಹರ ಸಜ್ಜನ |
ಪ್ರಿಯ ಪಾವನ ಶಿಖಿ | ನಯನ ವಿಶ್ವಂಭರ || ಜಯ || ||೧೯||

ಅಂಧಕಾರಿ ಮುನಿ | ವೃಂದ ವಂದ್ಯ ಶ್ರೀ |
ಚಂದ್ರಮೌಳಿ ಬ್ರ | ಹ್ಮೇಂದ್ರ ಸುರಾರ್ಚಿತ || ಜಯ || ||೨೦||

**ವಾರ್ಧಕ**

ಹರನು ಮೈದೋರದಿರೆ ಮರುದಿವಸದುದಯದೊಳ್
ವಿರಚಿಸುವೆ ಸ್ನಾನವೆಂದೆನುತ ಪರಿಶೋಭಿಸುವ
ಸರಸಿಯೊಳು ಮುಳುಗಿ ಮೇಲಡರೆ ಸ್ತ್ರೀಯಾಗೆ ನಾಚುತ ನಿಂದಿರುವ ವೇಳ್ಯದಿ ||
ಸುರಪಾಲನೆಂದಿನಂದದಿ ಬಂದು ಶಂಕರನ
ಚರಣಪೂಜೆಯ ಗೈದು ಮರಳುತಿರೆ ಪರಿಕಿಸುತ |
ಸ್ಮರಶರದಿ ಬಸವಳಿದು ಹತ್ತಿರಕೆ ತೆರಳಿಯವಳೊಡನೆ ನಸುನಗುತೆಂದನು || ||೨೧||

**ರಾಗ ಘಂಟಾರವ ಏಕತಾಳ**

ಸುಂದರಾಗಿ ಸುಮಗಂಧಿ ಚಂದ್ರವದನೆ | ಮಾ |
ತೊಂದಾಲಿಸು ಸುಗುಣೆ ||
ಬಂದೋರ್ವಳೆ ನೀ ನಿಂದುದೇನು ಜಾಣೆ ||
ತಂದೆ ತಾಯಿ ಸಂ | ಬಂಧಿಕರಿಲ್ಲವೆ |
ಸಂದೇಹದೊಳಿರು | ವಂದವನರಿಯೆನು || ||೨೨||

ತರುಣಿ ನಿನ್ನ ಸುಂದರತರ ರೂಪವನು | ಪರಿಕಿಸಿ ಭ್ರಮಿಸಿದೆನು |
ಸ್ಮರನುರುಬೆಯ ಪರಿಹರಿಸಲರಿಯೆನಿನ್ನು | ನಾನೇ ವಾಸವನು ||

ಸುರತದೊಳೆನ್ನನು ಸರಸಗೊಳಿಸು ನೀನು ||
ತೊರೆದು ಪುರಕೆ ಪಿಂ | ದಿರುಗೆನೆನುತ್ತಲಿ |
ಕರವಿಕ್ಕಲು ತಡೆ | ದರುಹಿದನವನೊಳು || | |೩೩||

**ರಾಗ ಜಂಜೂಟಿ ಏಕತಾಳ**

ತಡೆಯ್ಯೆ ಎನ್ನೊಳ್ಯಾತಕಿನಿತು ನುಡಿವೆ ಹೀನ ಮಾತು |
ಬಡ ವಾನರರ ಹುಡುಗಿಯೊಡನೆ ದುಡುಕಬಹುದೆ ಇನಿತು ||
ಒಡೆಯ ಸುರರ್ಗೆ ಅಪ್ಸರೆಯರ ಬಿಡದೆ ರಮಿಪ ನೀನು |
ದೃಢವ ಮರೆದು ಅಲ್ಪ ಜನರ ನಡತೆ ನಡೆವುದೇನು || ||೩೪||

ಮನಕೆ ಹಿತವೆಂದೆನಿಸಲದಕೆ ಘನತೆಯಧಿಕ ಜಗದಿ |
ವನಚರನಾದರೆಯು ಬಿಡೆನೆಂದೆನುತ ಪಿಡಿವಾತುರದಿ ||
ಅನಿಮಿಷೇಂದ್ರ ಬಳಿಗೆ ಸರಿದಾ ಕ್ಷಣಕೆ ಓಡಲವನು |
ಗಣಿಸದೆ ಬೆಂಬಿಡಿದು ಮುದದಿ ತನುವ ಬಿಗಿದಪ್ಪಿದನು || ||೩೫||

**ಭಾಮಿನಿ**

ಅನಿತರಲಿ ಚಲಿಸುತ್ತ ರೇತಸು
ವನಚರನ ವಾಲಾಗ್ರದೆಸೆಯ
ನ್ನನುಸರಿಸಿ ಕೆಳಗಿಳಿಯಲದರಿಂದಾ ತತೂಕ್ಷಣದಿ |
ತನಯನಾಗಲು ದಿವ್ಯ ಮಾಲಿಕೆ
ಯನು ಗಳಕೆ ತೊಡಿಸುತ್ತ ಸುತನ |
ನ್ನನುಪಮೆಯ ಕೈಗಿತ್ತು ನಾಕಕೆ ನಡೆದನಮರೇಂದ್ರ || ||೩೬||

**ರಾಗ ಆರ್ಯ ಸವಾಯ್ ಏಕತಾಳ**

ತರಳನ ಬಗೆಗಚ್ಚರಿಗೊಂಡಿರೆ ಭಾ | ಸ್ಕರನಂಬರದಿಂದೀಕ್ಷಿಸುತ ||
ತರುಣಿಯ ರೂಪಕೆ ಮರುಳಾಗುತ್ತಲಿ | ಸರಿದು ಬಳಿಗೆ ನುಡಿಸಿದನಾತ || ||೩೭||

**ರಾಗ ಬೇಗಡೆ ಅಷ್ಟತಾಳ**

ಮತ್ತಕಾಶಿನಿ ವನದೊಳೋರ್ವಳೆ ನಿತ್ತಿರುವುದೇನು | ಶೋಭಿಪ |
ಪುತ್ರನಾವನು ವಿವರಿಸೆನಗೆ ಚರಿತ್ರವೆಲ್ಲವನು || ಬಂದ ವಿ |
ಪತ್ತು ಆರಿಂದೆನಲಿಕದರ ನಿವೃತ್ತಿ ಪಡಿಸುವೆನು | ಮನದೊಳು ||

ತತ್ತಳಿಸದಿರು ನಿರತ ಸುಖಸಂ | ಪತ್ತು ಒದಗುವ ವರವ ಪಾಲಿಪೆ |
ಉತ್ತರೋತ್ತರವಹುದು ಒಡಗೂ | ಡುತ್ತ ಮನ್ಮನಕರ್ತಿಪಡಿಸೆಲೆ || ||೩೮||

ತಿಳಿಯೆಯಾ ಹನ್ನೆರಡು ರಾಶಿಗಳೊಳು ಬೆಳಗುತಿಹೆನು | ಲೋಕಂ |
ಗಳಿಗೆ ಕಂಗಳ ತೆರದಿ ಜ್ವಲಿಸುವ ಪ್ರಭೆಯ ಬೀರುವೆನು | ಅಲ್ಲದೆ |
ಗಳಿಸಿ ತ್ರೈಮೂರ್ತಿಗಳೊಲುಮೆ ಬರ್ದಿಲರೊಳುತ್ತಮನು | ಶರಣರಿ |
ಗೊಲಿದು ಇಷ್ಟಾರ್ಥವನು ಪಾಲಿಪೆ | ಲಲನೆಯರ ಕುಲಮಣಿಯೆ ಸಂತಸ |
ಜಲಧಿಯಲಿ ಮುಳುಗಿಸುವೆ ಸುಮ್ಮನೆ | ಬಳಲಿಸದೆ ತನು ಉಳಿಸು ಒಮ್ಮೆಗೆ || ||೩೯||

**ವಾರ್ಧಕ**

ಇಂತು ಬಲು ವಿಧದಿಂದ ಬೋಧಿಸಿದರಾ ನುಡಿಗೆ |
ಕಾಂತೆ ಮೈಗೊಡದೆ ಯೋಚಿಸುತ ನಿಂದಿರೆ ರವಿಯು |
ತಾಂ ತವಕದಿಂದ ಪಿಡಿದಪ್ಪಲು ಮನೋಭೀಷ್ಟ ಸಂತು ಗ್ರೀವದ ಕಡೆಯಲಿ ||
ಕಂತು ಸನ್ನಿಭನೋರ್ವನುದಿಸಲು ತತ್‌ಕ್ಷಣಕೆ
ಸಂತಸದಿ ತಡವರಿಸುತವಳ ಕೈಗಿತ್ತಾ ಕೃ
ತಾಂತಪಿತ ನಭಕಡರಿ ತೀವ್ರಗತಿಯಿಂ ತೆರಳೆ ಬೇಸರಿಸುತವನಾಗಲು || ||೪೦||

**ವೃತ್ತ**

ಕಾಣಿಸಲೆಂತೀ ವದನ ಮುಂದೆ ಜಗಕಂ ಪ್ರಾಣದಿಂದುಳಿಯೆನಿಂದು
ತಾನೀ ಬಾಲರನುಳಿದು ಶೋಭಿಪ ಕೊಳಕೆ ಧುಮುಕುತ್ತಲಳಿವೆನಿಂದು |
ಆನಂದ ಜಗಕಾಗಲೆನ್ನುತ ತ್ವರಿಯದಿಂದ್ಯೆದಿ ಜಲಕಿಳಿಯಲು
ಧ್ಯಾನಾಸಕ್ತಿಯ ಪುರುಷನಾಗೆ ಬಂದಾ ಸ್ಥಾಣು ಪೇಳಿದವನೊಳು || ||೪೧||

**ರಾಗ ಯಮುನಾಕಲ್ಯಾಣಿ ಅಷ್ಟತಾಳ**

ಕರಗದಿರೈ ವೃಕ್ಷಂಚರ ನೀನು | ತಾ | ನೊರೆವೆ ವಿಸ್ತರಿಸುತೆಲ್ಲವನಿನ್ನು ||
ತರಳನುದಿಪ ಯೋಗ ನಿನಗಿಲ್ಲ | ಎಂಬ | ತೆರಕಾಗಿ ನಡೆದ ಘಟನೆಯೆಲ್ಲ || ||೪೨||

ಇಂದ್ರರೇತಸವು ಬಾಲದಿ ನಿಂದು | ಪುಟ್ಟಿ | ಕಂದನಾದಗೆ ವಾಲಿ ಎನುತಿಂದು ||
ಹೊಂದಿಕೆ ನಾಮ ಭಾಸ್ಕರನಿಂದ | ಗ್ರೀವ | ದಿಂದಾದ ಸುಗ್ರೀವ ಕಿರಿಕಂದ || ||೪೩||

ಜನಿಸುವಳೊರ್ವಳ್ಕುವರಿ ನಿನ್ನ | ಪ್ರಿಯ | ವನಿತೆ ಖುಕ್ಷಿಯಲಿ ಸುಗುಣಪೂರ್ಣ ||
ಘನವಂತ ವೈಷ್ಣವರಧಿನಾಥ | ಪುಟ್ಟು | ವನು ಆಕೆಯಿಂದ ಶ್ರೀಶನ ದೂತ || ||೪೪||

**ರಾಗ ಕಾಂಭೋಜಿ ಝಂಪೆತಾಳ**

ಶೂಲಿ ಇಂತೆನಲವನ ಕಾಲಿಗೆರಗುತ್ತಲಾ |
ಬಾಲಕರ ಕೂಡಿ ಶೀಘ್ರದಲಿ ||
ಆಲಯಕೆ ಬಂದು ಗೋಲಾಂಗೂಲಪತಿ ವಾರ್ತೆ |
ಮೂಲದಿಂ ಜಾಂಬವನೊಳರುಹಿ || ||೪೫||

ಪುರವರದಿ ಸುಖದಿಂದಲಿರಲು ಸುತೆಯುದಿಸಲಾ |
ಕರೆದು ಅಂಜನೆ ಎನುತ ಮುದದಿ ||
ಮೆರೆಯಲಿತ್ತಲು ವಾಲಿ ಸುಗ್ರೀವರಾಡಿದರು |
ನೆರಹಿ ಗೆಳೆಯರ ಪಂಥ ಪಿಡಿದು || ||೪೬||

**ರಾಗ ಮುಖಾರಿ ಆದಿತಾಳ**

ಬಾಲರಾಟದ ಲೀಲೆಗಳನು | ತೋರ್ದರು ಪಿತಗೆ |
ಮೂಲೋಕ ಭ್ರಮಿಸುವಂದವನ್ನು || ಪಲ್ಲವಿ ||

ಮೇಲುವರಿದು ತಂತಮ್ಮೊಳು ಪಂಥ ವಿ |
ಶಾಲತೆಯಿಂದಲೆ ವಾಲಿಸುಗ್ರೀವರು || ಅ.ಪ ||

ಚಂಡವಿಕ್ರಮರು ಒಂದೊಂದು | ತಂಡವ ಮಾಡಿ |
ಕೊಂಡವರನ್ನು ಕೂಡಿಕೊಂಡು ||
ಚೆಂಡು ಬುಗರಿ ಗುಂಡಾಟ ಓಟ ಉ |
ದ್ದಂಡದಾಲ ಉಯ್ಯಾಲೆಯೊಳತಿಮುದ |
ಗೊಂಡವರೀರ್ವರು ದಂಡಿಸಿ ಹಲವರ |
ಅಂಡಲೆಯುತ್ತಲಿ ಪುಂಡರ ತೆರದೊಳು || ಬಾಲರಾಟದ || ||೪೭||

**ವಾರ್ಧಕ**

ತಾತಗೆಂದನು ಇನಜ ಬಡಿದನಗ್ರಜನವನ
ಘಾತಿಸದೆ ಬಿಡೆನೆನಲು ಉಗುರಿಂದ ಗೀರಿ ತನು
ಭೂತಳದಿ ಪೊರಳಾಡಿ ವಾಲಿ ತೋರ್ದನುಜನಂ ಶಿಕ್ಷಿಸುವೆನೆನಲೆಂದನು |
ನೀತಿಯಲ್ಲಿದು ಒಂದೆ ಮತದೊಳಿಹುದೆಂದವರ
ಪ್ರೀತಿಯಿಂ ಕಳುಹಲಂಜನೆ ಸ್ಮರನ ತಾಪದಿಂ |
ಕಾತರಿಸುತನ್ನಪಾನವ ತೊರೆದು ಕುಳ್ಳಿರಲು ದೂತಿ ಪರಿಕಿಸುತೆಂದಳು || ||೪೮||

**ರಾಗ ಪೂರ್ವಿಕಲ್ಯಾಣಿ ಅಷ್ಟತಾಳ**

ಎಂದಿನ ತೆರ ಕಾಣದು | ಮೊಗದ ಕಾಂತಿ |
ಕುಂದಿ ಬೆಂಡಾಗಿಹುದು ||
ಮಂದಗಾಮಿನಿ ಸುಖ | ದಿಂದ ರಂಜಿಪಳಿಗೆ |
ಬಂದಿಹ ದುಗುಡವೇ | ನೆಂದು ತಿಳಿಯೆನಮ್ಮ || ||೪೯||

ಅನ್ನಪಾನೀಯಗಳು | ತ್ಯಜಿಸಿ ಶೋಕ |
ವನ್ನಾಂತುದೇಕೆ ಪೇಳು ||
ಸ್ವರ್ಣಭೂಷಣ ಒಲ್ಲೆ | ಯೆನ್ನುವ ಬಗೆಯೇನು |
ಸನ್ನುತ ಸುಮಫಲ | ವನ್ನು ತೊರೆದೆ ಏಕೆ || ||೫೦||

**ರಾಗ ಹನುಮತೋಡಿ ಆದಿತಾಳ**

ವಿಸ್ತರಿಸುವದೇನಾಪತ್ತನು ನಿನಗೆ |
ವ್ಯರ್ಥ ವಿಧಿಯು ಜನ್ಮವಿತ್ತನೇಕೆನಗೆ ||
ನಿತ್ಯ ಭೋಗಿಸುತ ಸಮಸ್ತ ವೈಭವದಿ |
ಹೊತ್ತು ಕಳೆದರೇನು ಸಾರ್ಥಭೂತಳದಿ || ||೫೧||

ಹಾರ ಪದಕ ಬಲು ಭಾರ ತೋರುವುದು |
ಸೇರದನ್ನವು ನಿದ್ದೆ ದೂರವಾಗಿಹುದು ||
ಸಾರತರದ ಸುಮಗಂಧಗಳೆಲ್ಲ |
ವೈರ ಪಿಡಿದು ಎನ್ನ ಪೀಡಿಪುದಲ್ಲ || ||೫೨||

ಒರಗಿ ನಿದ್ರಿಸುತಿರೆ ಪುರುಷನೋರುವನು |
ನೆರೆದು ಕನಸಿನೊಳು ತೆರಳಿ ಪೋಗಿಹನು ||
ಸುರತ ಸಂದುದು ಗುಟ್ಟ ನರುಹಿದೆ ಸಖಿಯೆ |
ಅರುಹು ಸುಖದಿ ಬಾಳ್ವ ತೆರ ಶಶಿಮುಖಿಯೆ || ||೫೩||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಏನೆಂಬೆನಮ್ಮ ನಾನದಕೆ | ಕಷ್ಟ |
ತಾನಾಂತುದನ್ನು ಬಣ್ಣಿಸಲರಿದೆನಗೆ ||
ಧ್ಯಾನಿಸಿ ವರನ ನಿದ್ರಿಸಲು ಸ್ವಪ್ನದಿ ಸುಮ |
ಬಾಣದುರಿಗೆ ಎದ್ದು ಮೈನೆರಳಪ್ಪಿದೆ || ||೫೪||

ತತ್ತಳಿಸುವದೇತಕಿದಕೆ | ಪೋಗಿ |
ಪೆತ್ತವನಲಿ ನಿನ್ನ ಮುತ್ತಿನ ಸರಕೆ ||
ಉತ್ತಮವಾದೊಂದು ರತ್ನಪದಕ ಕೇಳು |
ಚಿತ್ತಚಂಚಲವ ನಿವೃತ್ತಿಪಡಿಸದಿರ || ||೫೫||

**ಭಾಮಿನಿ**

ಸರಸಿಜಾಂಬಕಿ ಇಂತೆನಲಿಕತಿ |
ಸರಸದಿಂ ಕರಕೊಳುತಲಾಕೆಯ
ತೆರಳಿದಳು ಪಿತಗರುಹಲಳುಕುತಲಂಜನಾದೇವಿ ||
ಮೆರೆದಿರಲು ಓಲಗದಿ ಋಕ್ಷನು
ಚರಣಕಾನತಳಾಗಿ ನಾಚುತ |
ಶಿರವ ನೆಗಹದೆ ನಿಂದವಳ ಹತ್ತಿರಕೆ ಕರೆದೆಂದ || ||೫೬||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ಬಾರವ್ವ ಮುದ್ದು ಕುಮಾರಿ ಮೌನವನಾಂತು |
ದೂರ ನಿಂದಿಹುದ್ಯಾತಕಿಂದು ||
ಆರು ನಿಂದಿಸಿ ನಿನ್ನ ಜರೆದರು ಬೇರೆ ವಿ |
ಚಾರವಿರಲು ಮಾಜದುಸುರು || ||೫೭||

ಎರಕದ ನೂತನಾಭರಣದೊಳಾಸೆಯೊ |
ಹರೆಯದಿ ರಂಜಿಪ ನೀನು |
ವರನಾಪೇಕ್ಷೆಯಲಿ ಬೇಸರಿಪೆಯೊ ಪೇಳೆನೆ |
ಶಿರಬಾಗುತೆಂದಳು ಪಿತಗೆ || ||೫೮||

**ರಾಗ ನವರೋಜು ಏಕತಾಳ**

ಲಾಲಿಪುದೆನ್ನಯ ಮಾತ | ಗುಣ |
ಶೀಲ ಸಜ್ಜನಪ್ರೀತ ||
ಬಾಲಕಿ ಇದಿರೊಳು ಮನಬಂದಂದದಿ |
ಪೇಳಿದಳೆನುತಲಿ ತಾಳದೆ ಕ್ರೋಧವ || ||೫೯||

ಸುಲಲಿತ ಉದ್ಯಾನದಲಿ | ಲತೆ |
ಬೆಳೆಸಿ ಸಂಪ್ರೀತಿಯಲಿ ||

ಫಲಿಸುವ ವೇಳೆಗೆ ಚೆಲುವ ತರುವ ಬೆಂ |
ಬಲವಿಲ್ಲದೆ ಸೊಗಸಿಲಿ ರಂಜಿಸುವುದೆ || ||೬೦||

**ಭಾಮಿನಿ**

ತನುಜೆ ಇಂತೆನೆ ಪೇಳ್ದ ನಿನ್ನಯ
ಮನದೆಣಿಕೆಯನ್ನರಿತೆ ಚೆಲುವಿಕೆ
ಗೆಣೆಯ ವರನನ್ನರಸಿ ಪರಿಣಯ ಗೈವೆ ತಾನೆನುತ ||
ವನಜನೇತ್ರೆಯ ಕಳುಹಲಲ್ಲಿಗೆ
ಮನುಮಥೋಪಮ ಕೇಸರಿಯು ಬರೆ
ವನಚರಾಧಿಪನವನ ಸತ್ಕರಿಸುತ್ತಲಿಂತೆಂದ || ||೬೧||

**ರಾಗ ಸಾವೇರಿ ಆದಿತಾಳ**

ಎತ್ತಣಿಂದ ಇತ್ತ ಬಂದೆ | ವಾನರೇಂದ್ರ | ನಿನ್ನ |
ಪೆತ್ತ ಜನನಿಜನಕರಾರು | ವಾನರೇಂದ್ರ ||
ಬಿತ್ತರಿಸು ನಿನ್ನಾಗಮವ | ವಾನರೇಂದ್ರ | ವಾಸಿ |
ಸುತ್ತಿರುವ ಪುರವಿನ್ನೆಲ್ಲಿ | ವಾನರೇಂದ್ರ || ||೬೨||

ಹರಿಹರಬ್ರಹ್ಮೇಂದ್ರಾದಿಗಳು | ವಾನರೇಂದ್ರ | ಆಜ್ಞೆ |
ಹೊರತು ಒಳ ಸರಿಯರಿಲ್ಲಿ | ವಾನರೇಂದ್ರ ||
ತರಳತನದ ಮರುಳಾಟದೊಳು | ವಾನರೇಂದ್ರ | ಬಲು |
ತ್ವರಿತ ಬರವೇನೆನಲು ಪೇಳ್ದ | ವಾನರೇಂದ್ರ || ||೬೩||

**ರಾಗ ಕೇದಾರ ಅಷ್ಟತಾಳ**

ಲಾಲಿಸು ಕಪಿಕುಲಪಾಲ ಮತ್ಕಥನ |
ಪೇಳಲರಿದು ಕೇಳಿದರೆ ಬಲುವ್ಯಸನ || ಪಲ್ಲವಿ ||

ಮೇಲಾದ ಸತ್ಯದಿ ಪಿತ ಧರ್ಮಕೇಸರಿ |
ಪಾಲಿಸುತಿರ್ದನು ಸಿತದ್ವೀಪವವಗನು |
ಕೂಲೆ ಚಿತ್ತಿಣಿದೇವಿಗೆ | ಜನಿಸಿ ಪುಟ್ಟ |
ಬಾಲನಾಗಿರಲವರ್ಗೆ | ವೈರಾಗ್ಯವು |
ಮೇಲುವರಿದು ಕಡೆಗೆ | ಅಗಲಿದರಲ್ಲಿ |
ಶೂಲಿಸತಿಯೊಡನೈದಿ ಕಾರುಣ್ಯದೊಳಗೆ || ಲಾಲಿಸು || ||೬೪||

ಕರೆಯುತ ಕೇಸರಿ ಎನ್ನುವ ನಾಮದಿ |
ಪೊರೆದುಕೊಂಡಿರು ಎಂದು ಕ್ಷಿತಿ ಎಂಬ ವೃದ್ಧೆಯ |
ಕರಕಿತ್ತು ಪೋದರೆನ್ನ | ರಕ್ಷಿಸೆ ಪ್ರಾಯ |
ಸರಿದಾಕೆ ಮಡಿಯೆ ಮುನ್ನ | ಆಕೆಯ ಕರೆ |
ಕರೆದರಸುತಲಜನ | ಕೇಳಲು ವಾಣಿ |
ವರನಿಲ್ಲಿ ಕಳುಹಲ್ಕೈತಂದೆ ಸಂಪನ್ನ || ಲಾಲಿಸು || ||೬೫||

ಇನ್ನೊಂದನುಸುರಿದ ನಿನ್ನಯ ತನುಜೆ ಸಂ |
ಪನ್ನೆ ಅಂಜನೆ ಎಂಬಳನ್ನುವರಿಸಿ ಸುಖ |
ವನ್ನನುಭವಿಪುದೆಂದು | ಕಳುಹೆ ಬಂದೆ |
ಎನ್ನಲಿ ಕರುಣ ತಂದು | ಲಗ್ನದೊಳಿತ್ತು |
ಮನ್ನಿಸು ಸುಗುಣಸಿಂಧು | ಇಲ್ಲಿಯೆ ನೆಲೆ |
ಯನ್ನೆಸಗುತಲಿರ್ಪೆ ಅಗಲದೆಂದೆಂದು || ಲಾಲಿಸು || ||೬೬||

**ರಾಗ ಕಾನಡ ಝುಂಪೆತಾಳ**

ನಿಧಿ ಕಂಡ ಭಿಕ್ಷುಕನೊ ಸ್ವಾತಿಯಂ ನೆನೆದ ಮು |
ತ್ತಿದುವೊ ತೊರೆದಿನಿಯನಂ ಕಂಡಬ್ಜಮುಖಿಯೊ ||
ಮಧುಮಾಧವಿಯನಾಂತ ವತ್ಸರವೊ ಎಂಬಂತೆ |
ಮುದವ ತಾಳುತ ಋಕ್ಷನದಕೆ ಅವಗೆಂದ || ||೬೭||

ಬಳಲಿ ರೋಗದಿ ವೈದ್ಯನೊಲವರಿಯದವನೆಡೆಗೆ |
ಸುಳಿವುತೌಷಧವು ಕಾಲ್ಗಳ ಸುತ್ತಿದಂತೆ ||
ನಲಿನಾಕ್ಷಿಗೆಣೆಯಾದ ಚೆಲುವನಂ ಕಾಣದಿರೆ |
ಒಲಿದಿತ್ತ ಶಿವ ನಿನಗವಳನೀವೆನೆನುತ || ||೬೮||

ಪರಿಕಿಸುತ ಶುಭಲಗ್ನ ಪುರವ ಸಿಂಗರಿಸುತಲಿ |
ಬರಿಸುತೆಲ್ಲರನು ಸುತೆಯಳ ಅಲಂಕರಿಸಿ ||
ಪರಿಣಯವನೆಸಗೆ ಭೂ | ಸುರರು ಪರಸುತ್ತಿರಲು |
ತರುಣಿಯರು ಪಾಡುತಾರತಿಯ ಬೆಳಗಿದರು || ||೬೯||

**ವಾರ್ಧಕ**

ನೆರೆದಖಿಳ ಬಂಧು ಬಾಂಧವರ ಸತ್ಕರಿಸಿ ವಧು
ವರರಿಗೀಯುತ ವಿವಿಧತರಮಾದ ಬಳುವಳಿಯ

ಪುರದಿ ನಿಲಿಸುತ ಸಕಲರಂ ಬೀಳುಗೊಂಡಾತನಿರಲು ಬಲು ವೈಭವದಲಿ ||
ಸುರಪಾತ್ಮಜಂ ತರಣಿಸುತನೊಡನೆ ಒಮ್ಮತದಿ
ಚರಿಸಿನಾಲ್ದೆಸೆಯ ಲೋಕಾಧಿಪಾಲರ ಗೆದ್ದು
ಧುರಧುರಂಧರನೆನಿಸಬೇಕೆನುತ ನಿರ್ಧರಿಸಿ ಕರೆದನುಜಗಿಂತೆಂದನು || ||೭೦||

**ರಾಗ ಭೈರವಿ ಅಷ್ಟತಾಳ**

ತಮ್ಮ ಕೇಳೀ ಪ್ರಾಯದಿ | ಉಂಡಾಡುತ | ಸುಮ್ಮನಿರ್ಪುದೆ ಜಗದಿ |
ಹಮ್ಮಿನಿಂ ನಲಿದಾಡುವರ ಗೆಲ್ದು ಬಾಳ್ವುದು | ಒಮ್ಮತದಿಂ ಪುರದಿ || ||೭೧||

ತಕ್ಕುದು ನಿನ್ನೆಣಿಕೆ | ವೀರರ ಮುರಿ | ದಿಕ್ಕದ ಜನ್ಮವೇಕೆ ||
ಮುಕ್ಕಣ್ಣ ಪೊಗಳುವಂದದಿ ತೋರ್ಪೆ ಎನ್ನಯ | ವಿಕ್ರಮವನು ಜಗಕೆ || ||೭೨||

ಸರಿ ಮಾತ ನುಡಿದೆ ನೀನು | ತಾತನೊಳಿದ | ನರುಹುತ್ತ ಪೋಪುದಿನ್ನು ||
ಬರಿದೇಕಿದಕೆ ಕಾಲ | ಹರಣವೆನ್ನುತ ಪೋಗಿ | ಪೇಳಿದರದನವಗೆ || ||೭೩||

**ರಾಗ ಕೇತಾರಗೌಳ ಝಂಪೆತಾಳ**

ಅವಧರಿಸು ನುಡಿಯ ಜೀಯ | ಮನದೆಣಿಕೆ | ವಿವರಿಸಲು ಬಂದೆವಯ್ಯ ||
ಅವನಿಯನು ಚರಿಸುತ್ತಲಿ | ಭೂಭುಜರ | ಜವಗೆಡಿಸಿ ಬರುವೆವಿಲ್ಲಿ || ||೭೪||

ನಲಿಯುತಿದೆ ಭುಜದಿ ಬಲವು | ಮಂದಿರದಿ | ಕುಳಿತರಿನ್ನೇನು ಫಲವು ||
ಕಳುಹೆಮ್ಮ ಪೋಪೆವೆನಲು | ಸಮ್ಮತಿಸಿ | ಕೊಳುಗುಳಕೆ ಮುಂದ್ವರಿಯಲು || ||೭೫||

**ಕಂದ**

ಆ ಸಮಯದಿ ಒದಗಿದು ಮಧು
ಮಾಸಂ ಕಾಮಿಗಳಿಗಾಯ್ತು ಹೃದಯಕೆ ಶೂಲಂ |
ಕೇಸರಿ ಕುದಿಯುತ ವಿರಹದೊ
ಳಾ ಶಶಿಮುಖಿಯಂಜನೆಯಳ ಪರಿಕಿಸುತೆಂದಂ || ||೭೬||

**ರಾಗ ಘಂಟಾರವ ಆದಿತಾಳ**

ನಾರಿ ರತುನೆ ಕಾಂತೆ | ಪೇಳ್ವೆ ವಿ | ಚಾರ ಸುಗುಣವಂತೆ ||
ವಾರಿಜಾಕ್ಷಿ ಮದವಾರಣಗಮನೆಯೆ |
ಮಾರನ ಶರದುರಿ ಏರಿಹುದಿಂದಿಗೆ || ಪಲ್ಲವಿ ||

ಚಂದ್ರನ ಕಿರಣದೊಳು | ಭಾಸ್ಕರ |
ನಿಂದ ಉರಿಯ ಮಿಗಿಲು | ತೋರ್ಪುದು |
ಕುಂದುತ ಸತ್ವಗಳು | ಹಶುತೃಷೆ |
ಯೊಂದಿಲ್ಲವು ಕೇಳು ||
ಗಂಧ ಕುಸುಮಗಳನೊಂದನೊಲ್ಲೆ ಕೊಲೆ |
ಗೆಂದು ಸುಳಿವನಾ ಮರಳುವುದೆನಲೆಂದಳು || ನಾರಿ ರತುನೆ || ||೭೭||

ತೆರಳಿ ನಮ್ಮುಪವನವ | ಸುತ್ತುತ |
ಸರಸಿಗಿಳಿದು ದಣಿವ | ನೀಗುವ |
ತೆರದೊಳಾಡಿ ಮನವ | ತಣಿಸುತ |
ಸ್ಮರನಾಟದಿ ಪಣವ ||
ಮೆರೆಸುತ್ತಲಿ ನಾವಿರುತ ಕೆಲವು ದಿನ |
ಸರಿದ ಮೇಲೆ ಮರಳುವುದೆನಲೆಂದಳು || ನಾರಿ ರತುನೆ || ||೭೮||

ಸ್ಮರನು ಶರವ ನಿನಗೆ | ಪಿಡಿದರು |
ಗುರಿಯು ತಪ್ಪಿತೆನಗೆ | ನಾಟುತ |
ಉರಿಯುವ ತನುವ ಬಗೆ | ಬಣ್ಣಿಸ |
ಲರಿಯೆ ಪೇಳ್ದ ನುಡಿಗೆ ||
ಸರಸವಾಂತೆ ಬೇಸರ ಬಿಡಿಸುತ ಉ |
ದ್ಧರಿಸೆನ್ನನು ನಡೆ ತರುವೆನು ಜತೆಯಲಿ || ನಾರಿ ರತುನೆ || ||೭೯||

**ಆರ್ಯ ಸವಾಯ್ ಏಕತಾಳ**

ಅರಿತವಳೊಡನೈತರುತಾ ಉಪವನ | ಚರಿಸುತ ತೋರ್ದಾಕೆಗೆ ಬಂದು |
ಸರಸಿಯ ಬಳಿಯಲಿ ವಸನಾಭರಣವ | ನಿರಿಸಿ ಜಲದೊಳಾಡಿದರಂದು || ||೮೦||

**ರಾಗ ಪೂರ್ವಿ ಏಕತಾಳ**

ಜಲದೊಳಗಾಡಿದರು | ಬಲುವಿಧ | ಒಲವಿಂದೀರುವರು || ಪಲ್ಲವಿ ||
ಮುಳುಗಿ ಕುಳಿತು ಬಹು ಚಳಕದಿ ಕೈಕಾ |

ಲ್ಗಳ ಪಿಡಿದೆಳೆಯುತ | ತಳಮಳಗೊಳ್ಳದೆ || ಜಲದೊಳ || ||೮೧||

ಹತ್ತುತ ಪೆಗಲಂ | ಮತ್ತೆ ಕೆಳಕೆ ಹಾ |
ರುತ್ತ ಹೊತ್ತೊತ್ತಿಗೆ | ಮುತ್ತ ನೀಡುತ್ತಲಿ || ಜಲದೊಳ || ||೮೨||

**ವಾರ್ಧಕ**

ರಘುನಾಥ ಲಾಲಿಸೈ ಜಲಕೇಳಿಯನ್ನಡೆಸಿ
ಮಿಗೆ ವಹಿಲದಿಂ ಮೇಲಡರಿ ಲತಾಮಂಟಪದಿ
ಬಗೆ ಬಗೆಯ ರೂಪುಗಳ ತಾಳಿ ರಮಿಸುತ ಸ್ಮರನ ಶರದುರಿಯ ಪರಿಹರಿಸುತ |
ಅಗಣಿತಾನಂದವನ್ನಾಂತು ಒಂದೆಡೆ ಕುಳಿತು
ಪಗಡೆಯಾಟವನಾಡುತಿರೆ ಸೂರ್ಯನಸ್ತಮಿಸೆ
ಗಗನ ಪರಿಕಿಸುತಲಂಜನೆಯು ಕುಳ್ಳಿರಲು ಕೇಸರಿಯು ನಿದ್ರಿಸಲಿತ್ತಲು || ||೮೩||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತಾನೆ ಸಕಲ ಚರಾಚರಂಗಳ |
ಪ್ರಾಣರೂಪನೆನುತ್ತಲಾ ಪವ |
ಮಾನ ಚರಿಸುತ ಬರಲು ಋಕ್ಷನು | ದ್ಯಾನದೆಡೆಗೆ || ||೮೪||

ಬಳಲಲೇತಕೆ ವೇಗದಿಂದದ |
ರೊಳಪೊಗುತ ನಾ ಮಂದಗತಿಯಿಂ |
ಸುಳಿವೆನೆನುತ್ತೈತರಲು ಮನಭ್ರಮೆ | ಗೊಳುತಲೆಂದ || ||೮೫||

**ರಾಗ ಬೇಗಡೆ ಅಷ್ಟತಾಳ**

ಏನು ಸೊಬಗಿನೊಳಿರುವುದೀ ವನವು | ತ್ರೈಜಗದೊಳಿದಕೆ ಸ |
ಮಾನವಿನ್ನೊಂದಿಲ್ಲ ನಿಶ್ಚಯವು ||
ಕಾಣಿಪುದು ನಾಲ್ದೆಸೆಗಳಲಿ ನಾ | ನಾ ಕುಸುಮ ಫಲವೆನುತ ಮುಂಬರ |
ಲಾ ನಳಿನಮುಖಿಯಂಜನೆಯ ಪವ | ಮಾನನೀಕ್ಷಿಸಿ ತನ್ನೊಳೆಂದನು || ಪಲ್ಲವಿ ||

ಮಾನಿನಿಯು ಯಾರಿವಳ ಪೋಲ್ವರ ಕಾಣೆನೀವರೆಗೆ | ಸುಂದರ |
ದಾನನವ ಬಣ್ಣಿಸಲಿಕಸದಳ ಸ್ಥಾಣು ಮುಖ್ಯರಿಗೆ | ಬಂದು |
ದ್ಯಾನದಲಿ ನೆಲಸಿರ್ಪ ಕಾರಣವೇನರಿಯದೆನಗೆ | ನಾಕದಿ |
ಗಾನನರ್ತನ ಗೈವರಿಹರು ಸಮಾನವಲ್ಲಿವಳ್ಗೆ | ಸರಸದಿ ||
ಈ ನಿತಂಬಿನಿಯೊಡನೆ ಸುಖಿಪ ಮ | ಹಾನುಭಾವನಿನ್ನಾರೊ ಚೆಲುವೆಯು |
ಮೀನಕೇತನ ಸಿಂಗರದ ಮದ | ದಾನೆಯೋ ಫಣಿವೇಣಿ ಸುಂದರಿ || ಏನು || ||೮೬||

ನಾರಿಮಣಿಯಂ ಕಂಡು ತನುಮನ ಸೂರೆಯಾಯ್ತಿನ್ನು | ರಮಿಸದೆ |
ಸಾರಲಸದಳ ಮುಂದೆ ಇದಕೇನ್ ದಾರಿ ಎಸಗುವೆನು | ಬಳಿಯಂ |
ಸೇರಿ ಕೈ ತುಡುಕಿದರೆ ನಾ ಅವಿಚಾರಿಯಾಗುವೆನು | ನಿದ್ರಿಪ |

ವೀರನೆಚ್ಚರವಾಗಿ ಮನನಿರ್ಧಾರ ಕೆಡಿಸುವನು | ಜಗಕಾ |
ಧಾರನಾಗಿರ್ಪವಗೆ ಸಕಲರು | ದೂರುವರು ಏನ್ನೈವೆ ಮತ್ತೀ |
ಸಾರಸಾಕ್ಷಿಯ ಕೂಡೆ ರಮಿಸಲು | ಬೇರೆ ಯತ್ನದಿ ಕಾರ್ಯನಡೆಸುವೆ || ಏನು || ||೮೭||

**ಭಾಮಿನಿ**

ಅಂತರಂಗದಿ ತಿಳಿದು ಹದನವ
ಕಾಂತೆಯಳಿಗರಿವಾಗದಂದದಿ
ತಾಂತವಕದಿಂದೊಲಿದು ರಮಿಸಿದ ಸಿದ್ಧಯೋಗದಲಿ |
ದಂತಿಗಾಮಿನಿಗಾ ತತೂಕ್ಷಣ
ಕಂತುಹರನ ಸಮಾನಲಕ್ಷಣ
ವಂತ ಸುತನುದಿಸಲ್ಕೆ ಕಂಡಚ್ಚರಿಗೊಳುತಲೆಂದ || ||೮೮||

**ಆರ್ಯ ಸವಾಯ್**

ತನುಮರೆದಿಹಳೆನ್ನನು ಕಂಡರೆ ಏ | ನೆನುವಳೋ ಶಪಿಪಳೊ ಬಾಲನನು ||
ಘನತೆಯೊಳರಿವಳೆಂದನಿಲ ತೆರಳೆ ತನ | ಯನು ಕರೆಕರೆಯುತ್ತುಸುರಿದನು || ||೮೯||

**ರಾಗ ಸಾರಂಗ ಅಷ್ಟತಾಳ**

ಏಳಮ್ಮ ಜನನಿ ನೀನು | ನಿದ್ದೆಯೊಳೆಷ್ಟು |
ಕಾಲವ ಕಳೆವೆ ಇನ್ನು ||
ತಾಳಲಾರೆನು ಹಸಿವೆಂದೊಡಲುರಿವುದು |
ಹಾಲು ಸಕ್ಕರೆ ದ್ರಾಕ್ಷಿ ಬಾಳೆ ಹಣ್ಣನು ಕೊಡು || ||೯೦||

ಎತ್ತಿ ಮುದ್ದಿಸಿ ಉಣಿಸು | ನೇರಳೆ ಜಂಬು |
ಕಿತ್ತಳೆಗಳ ತಿನಿಸು ||
ಉತ್ತಮವಾದ ಸಮಸ್ತ ಫಲಂಗಳು |
ಸುತ್ತಮುತ್ತಲು ಕಾಣಿಸುತ್ತಿವೆ ತಾರವ್ವ || ||೯೧||

**ಕಂದ**

ಎಚ್ಚರಗೊಂಡೀಕ್ಷಿಸಿ ತಾ
ನಚ್ಚರಿಗೊಂಡಳು ಕುಮಾರ ಪುಟ್ಟಿದನೆಂತೋ |
ಹೆಚ್ಚಿನ ತನುಕಾಂತಿಯೊಳಿಹ
ಸಚ್ಚರಿತಂಗುಣಿಪೆನೆಂದು ಮುದ್ದಿಸುತೆಂದಳ್ || ||೯೨||

**ರಾಗ ಬಿಲಹರಿ ಅಷ್ಟತಾಳ**

ಕಂದ ಅಳಲದಿರು ಒಂದರೆ ಕ್ಷಣದಿ |
ತಂದೀವೆ ಫಲ ಧೈರ್ಯದಿಂದಿರು ಮನದಿ ||
ಸಂದೇಹಗೊಳದಿರು ಸುಂದರ ರೂಪ |
ಚಂದದಿಂದುಣಿಸುವೆ ಮಮಕುಲದೀಪ | ಸತ್ಕೀರ್ತಿ ಕಲಾಪ || ||೯೩||

ತಾತ ನಿದ್ರೆಯೊಳಿರ್ಪನಾತನ ಬಳಿಗೆ |
ನೀ ತೆರಳುತ್ತ ಎಚ್ಚರಗೊಳಿಸವಗೆ ||
ಪ್ರೀತಿಯಿಂದಲಿ ನಾನಾ ಜಾತಿಯ ಫಲವ |
ಸಾತಿಶಯದೊಳಿತ್ತು ಸರಸಗೊಳಿಸುವ | ತಾಳದಿರು ಬೇಸರವ || ||೯೪||

ಪರಿಪರಿಯಿಂದೊಡಂಬಡಿಸಿ ಬಾಲಕನ |
ಸರಸದೊಳಲ್ಲಿ ಕುಳ್ಳಿರಿಸಿ ಉದ್ಯಾನ |
ಚರಿಸಿ ಸುಫಲಗಳ ತರುವೆ ತಾನೆನುತ |
ತರುಣಿ ಪೋಗಲು ನಭ ಪರಿಕಿಸಲಾತ || ಭಾಸ್ಕರನ ಕಾಣುತ್ತ || ||೯೫||

**ರಾಗ ಕಾಂಭೋಜಿ ಝಂಪೆತಾಳ**

ಬರಿದೆ ದಣಿವಳೊ ಜನನಿ ಸುರಗಂಗೆ ಇರಲು ಜಲ |
ವರಸಿ ತುಹಿನಾಚಲಕೆ ಪೋದ ||
ತೆರವಾಯ್ತು ಸುರಭಿ ಇರೆ (ಅರಸುವೆನೆ) ಬಡತುರುವ |
ಮರುಳಾಟ ಗೈದೆನಾನಿದಕೆ || ||೯೬||

ಉತ್ತಮದ ಫಲವು ಕಾಣುತ್ತಿಹುದು ಮೇಲೆ ನಾ |
ಹತ್ತುತದ ಮೆಲಲು ಹಿತವಹುದು ||
ಹೊತ್ತು ಕಳೆಯದೆ ಸಾಧಿಸುವೆನೆನುತ ಹಾರಿದನು |
ಮಿತ್ರನ ವರೂಥವಿದ್ದೆಡೆಗೆ || ||೯೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಾರಿ ಗಣಿಸದೆ ಕಿರಣದುರಿಯನು |
ಏರಿ ಧ್ವಜದಲ್ಲಿರಲು ಗ್ರಹಣದ |
ತಾರೆಗಾ ಸ್ವರ್ಭಾನು ದಿನಪನ | ವೈರದಿಂದ || ||೯೮||

ನುಡಿದನುಬ್ಬುತ ಹರಿಹರರ ಮತ |
ವಿಡಿದು ತಾನೀ ಸಮಯ ತರಣಿಯ |
ತುಡುಕಿ ಪೀಡಿತ ಕಾಲವಲ್ಲಿಗೆ | ನಡೆವೆನೆನುತ || ||೯೯||

ಆತ ಬರಲಾ ರವಿಯು ಬಳಿಯೊಳು |
ವಾತಸಂಭವ ತಡೆದವನ ನಿ |
ರ್ಭೀತಿಯಿಂದಿರೆ ಕಂಡು ನುಡಿದನು | ಖಾತಿಯಿಂದ || ||೧೦೦||

**ರಾಗ ಭೈರವಿ ಏಕತಾಳ**

ಎಲೆ ನೀನಾರೈ ಶಿಶುವೆ | ಎನ | ಗಳುಕದಿದಿರು ನಿಂದಿರುವೆ ||
ಸಲಹುವನಾವನು ನಿನ್ನ | ನಡೆ | ಛಲದಿಂದಳಿಯುವೆ ಚೆಣ್ಣ || ||೧೦೧||

ಆರಾದರೆ ನಿನಗೇನು | ಬಹ | ಕಾರಣವೇನಹುದಿನ್ನು ||
ಸಾರಲು ಬಿಡೆ ತಾನೆನುತ | ಉ | ಬ್ಬೇರಿ ತಡೆದನವಗಾತ || ||೧೦೨||

ನಡೆಯೆಂದಡಿ ಮುಂದಿಡಲು | ಎಡೆ | ಗೊಡದೆ ತುಳಿಯೆ ಕ್ರೋಧದೊಳು ||
ಉಡುಗಿ ಸತ್ವ ಸ್ವರ್ಭಾನು | ಭಯ | ಪಡುತ ಹಿಂಜರಿದುಸುರಿದನು || ||೧೦೩||

**ಕಂದ**

ನಿಂದು ಛಲದಿ ಕಾದುವನೊಳು
ಮುಂದ್ವರಿವುದು ಉಚಿತವಲ್ಲ ಬಾಲಕನೀತಂ |
ಕುಂದದೆ ಮನದೊಳು ಸುರಪನಿ
ಗೆಂದಪೆನಿದನೆನುತ ಪೋಗಿಪೇಳಿದನವನೊಳ್ || ||೧೦೪||

**ರಾಗ ಮುಖಾರಿ ಏಕತಾಳ**

ಕೇಳು ನಿರ್ಜರರಧಿನಾಥ | ಎನಗಾದ ಭಂಗ |
ಪೇಳಲರಿದು ಲೋಕ ವಿಖ್ಯಾತ ||
ಪಾಲಾಬ್ಧಿಯ ಮಥನದಿ ನೀವೆಲ್ಲರು |
ಪಾಲಿಸಿದಾಜ್ಞೆಯ ಹಾಳಾಯ್ತಿಂದಿಗೆ | ||೧೦೫||

ಎಂದಿನ ತೆರದೊಳಾ ಭಾಸ್ಕರನ | ಬಳಿಗೈಯೆ ರಥದಿ |
ನಿಂದಿಹನವನಂತಿಹ ನಿಸ್ಸೀಮ ||

ಮುಂದ್ವರಿಯದ ತೆರದಿಂದಲಿ ತಡೆಯುತ |
ಹಿಂದಟ್ಟಿದನಾರೆಂದು ತಿಳಿಯದೆ || ||೧೦೬||

**ರಾಗ ಭೈರವಿ ಏಕತಾಳ**

ಇನಿತಾದುದೆ ಭಂಗಗಳು | ಆ | ದಿನಪನ ಪಿಡಿವನಿತರೊಳು ||
ನಿನಗೆ ತಡೆದ ಬಾಲಕನ | ತೋ | ರೆನಗೆ ಬಾಳಗೊಡೆಯವನ || ||೧೦೭||

ಜತೆ ಪಿಡಿದೈತಹೆನೆಂದು | ಸುರ | ಪತಿ ಕರಿಯಡರುತಲಂದು ||
ಅತಿ ತ್ವರಿತದಿ ನಡೆ ತರುತ | ಮಾ | ರುತಜನ ಕಾಣಿಸಲಾತ || ||೧೦೮||

ನುಡಿದನು ಸ್ವರ್ಭಾನುವಿಗೆ | ನೀ | ನಡೆ ನಡೆ ಭಾಸ್ಕರನೆಡೆಗೆ ||
ತಡೆಯುವನಾರವ ಬರಲಿ | ಶಿರ | ಕಡಿದಿಡುಕುವೆ ನಿಮಿಷದಲಿ || ||೧೦೯||

**ಕಂದ**

ಕೇಳುತಲಾ ನುಡಿ ಧೈರ್ಯವ
ತಾಳುತ ರವಿಯೆಡೆಗೆ ಮುಂದೆ ನಡೆಯಲ್ಕಾತನ |
ಬೀಳಗೆಡಹೆ ಕಂಡಾ ಸುರ |
ಪಾಲಂ ಕುಲಿಶದಿ ವಿಭಾಡಿಸುತಲಿಂತೆಂದಂ || ||೧೧೦||

**ರಾಗ ಶಂಕರಾಭರಣ ಮಟ್ಟೆತಾಳ**

ಫಡ ಫಡೆಲವೊ ತರಳ ರವಿಯ | ಪಿಡಿವೆನೆಂದು ಎಂದಿನಂತೆ |
ನಡೆವನಿವನ ಪೋಗಗೊಡದೆ | ತಡೆದುದೇನೆಲ ||
ಕಡೆಯ ಕಾಳವಿದರೊಳ್ನಿನಗೆ | ನುಡಿವೆ ಧರ್ಮ ಮಾರ್ಗಗಳು |
ಮಡಿವೆ ಯಾಕೆ ಪೋಗಿ ಬಾಳು | ಪೊಡವಿ ತಳದಲಿ || ||೧೧೧||

ಭೂತಳವನು ಬೆಳಗಿಸುವ ಪ್ರ | ಖ್ಯಾತ ಪುರುಷ ಲೋಕನಯನ |
ನೀತನಿಂಗೆ ಕಷ್ಟಕೊಡುವ | ರೀತಿ ವಿಹಿತವೆ ||
ಪಾತಕಿಗಳ ಪರಮಮಿತ್ರ | ಮಾತ ನುಡಿದ ಮರು ಕ್ಷಣದಲಿ |
ಘಾತಿಸುತ್ತಲುಣಿಪೆ ಸಕಲ | ಭೂತ ಬಳಗಕೆ || ||೧೧೨||

ಕಡಗಲಿತ್ವಕಿವಗೆ ಮದ್ದು | ಕೊಡದೆ ಬೆದರನೆಂದು ತ್ರಿದಶ |
ರೊಡೆಯ ಕುಲಿಶದಿಂದ ಮೊಗಕೆ | ಹೊಡೆಯಲಾಕ್ಷಣ ||

ಒಡೆದು ರಕ್ತ ಸುರಿಯೆ ಪ್ರಾಣ | ವಡಗಿ ಬೀಳಲಾ ಸ್ವರ್ಭಾನು |
ನಡೆಯೆ ಮುಂದೆ ಸುರಪ ನಾಕ | ದೆಡೆಗೆ ಪೋಗಲು || ||೧೧೩||

**ಕಂದ**

ಸುತ್ತುತಲಿರಲಾ ಮಾರುತ
ಪುತ್ರನಿಗೊದಗಿದ ವಿಪತ್ತ ಪರಿಕಿಸುತಾಗಂ |
ಮಸ್ತಕ ತೊಡೆ ಮೇಲಿರಿಸುತ
ಮತ್ತಾತನ ಗುಣಗಣಂಗಳೆಣ್ಣಿಸುತಳಲ್ದಂ || ||೧೧೪||

**ರಾಗ ನೀಲಾಂಬರಿ ರೂಪಕತಾಳ**

ಈ ತೆರ ದುರ್ಮರಣವು ತನು | ಜಾತನಿಗೊದಗಿಸಿದನೆ ಸುರ |
ನಾಥನು ಯೋಚಿಸದೊಂದ ದು | ರಾತುಮನಿಂಗಾಗಿ ||
ಮಾತೆಯು ತನಯನನಗಲಿದ | ಳೇತಕೆ ಪುಟ್ಟಿದ ದಿನವೇ |
ಈತಗೆ ಮೃತಿಯೆಂದೆನುತ ವಿ | ಧಾತನ ಲಿಪಿಯಾಯ್ತೆ || ||೧೧೫||

ಬಿತ್ತರಿಸನು ಸ್ಪಷ್ಟದಿ ನುಡಿ | ನೆತ್ತಿ ಬಲಿಯಲಿಲ್ಲವು ಹಾ |
ವೃತ್ರಾರಿಯ ಹಗೆಯಾದನೆ | ಪುತ್ರರತ್ನ ನಿನಗೆ ||
ಚಿತ್ತಜವೈರಿಯ ಮನಕೀ | ಕೃತ್ಯವು ಹಿತವೇ ಎನಗೀ |
ಪೃಥ್ವಿಯ ಚಲಿಸುತ ಬಳಲುವ | ವೃತ್ತಿಯು ಸಾಕೆನುತ || ||೧೧೬||

**ವಾರ್ಧಕ**

ಆ ಸದಾಗತಿ ಹಲವು ಹಂಬಲಿಸಿ ಮಡಿದಿರುವ
ಕೂಸ ಪೆಣದೊಡನೆ ನಡೆತರುವಾಗ ಹಿಮಗಿರಿಗೆ |
ವಾಸಿಸಿದ ಗುಹೆಯೊಂದರಲಿ ಗುಪ್ತದಿಂ ಜಗದ ಶ್ವಾಸಸಂಚಾರವಡಗಿ |
ನಾಶವಾಗಲು ತೊಡೆಗೆ ಸಚರಾಚರಂಗಳದ
ವಾಸವನು ತಿಳಿದು ದೋಷವ ಗೈದೆನೆನುತ ಕಮ
ಲಾಸನನ ಕೂಡಿ ಕ್ಷೀರಾಬ್ಧಿ ತಡಿಯಲಿನಿಂದು ಹರಿಯ ಸಂಸ್ತುತಿಗೈದರು || ||೧೧೭||

**ರಾಗ ಕಾಂಭೋಜಿ ತ್ರಿವುಡೆತಾಳ**

ಜಯತು ಜಯತು ಗೋವಿಂದ | ನಿತ್ಯಾನಂದ |
ಜಯತು ಜಯತು ಗೋವಿಂದ |
ಜಯ ಜಗನ್ಮಯ ಸಜ್ಜನಪ್ರಿಯ |

ಭಯನಿವಾರಣ ವಿಶ್ವಧಾರಣ |
ದಯದೊಳಾಶ್ರಯವಿತ್ತು ಪೊರೆಯಹಿ |
ಶಯನ ತೋಯಜನಯನ ಮಾಧವ || ||೧೧೮||

ವಾರಿಜಾಪ್ತನ ತೇರನು | ಏರಿರ್ದನಾ | ಮಾರುತ ಸುಕುಮಾರನು ||
ಸಾರಗೊಡ ರವಿ ಬಳಿಗೆನ್ನುತ್ತಲಿ | ದೂರಲಾ ಸ್ವರ್ಭಾನುಗೋಸುಗ |
ತೀರಿಸಲು ಪವಮಾನಚರಿಸದೆ | ಸೇರಿದನು ಹಿಮಗಿರಿಯ ಗುಹೆಯಲಿ || ||೧೧೯||

**ಆರ್ಯ ಸವಾಯ್**

ಗಾಳಿಯು ಸುಳಿಯದೆ ಹಾಳಾಯಿತು ಜಗ | ಪೇಳಿ ನೀತಿ ನೀ ಬರಿಸೆನುತ ||
ಗೋಳಿಡಲೆಂದನು ಶೂಲಿಗರುಹಿ ಕರು | ಣಾಳು ಬರಲಿ ಮುನಿಜನ ಸಹಿತ || ||೧೨೦||

ಶ್ರೀಲಲಾಮನಂ ಬೀಳ್ಕೊಳುತಾ ಶಶಿ | ಮೌಳಿಗುಸುರೆ ಬಲುತ್ವರ್ಯದಲಿ ||
ಮೇಳವಿಸುತ ಸಕಲರು ಬರೆ ಪಥದೊಳು | ನೀಲಾಂಗನ ಜತೆ ಸೇರುತಲಿ || ||೧೨೧||

**ವೃತ್ತ**

ಹರಿಯಂ ಕಾಣುತ ಪುರಹರಂ ಮನದೊಳತ್ಯಾನಂದವಂ ತಾಳುತ
ಪರಮೇಷ್ಠ್ಯಾದಿ ಸಮಸ್ತದೇವತತಿಯಂ ಮುನಿಗಳನ್ನೊಡಗೂಡುತ |
ಅರಸುತ್ತೆಲ್ಲರ ಮಾರುತಂ ನೆಲಸಿರ್ಪ ಗುಹೆಯ ಬಾಗಿಲೊಳು ನಿಂದು
ಪರಿಪರಿಯಿಂ ಸ್ತುತಿಸುತ್ತಲಾ ಪವನನಂ ಕರೆಕರೆದು ಪೇಳ್ದರಂದು || ||೧೨೨||

**ರಾಗ ಪೀಲು ಅಷ್ಟತಾಳ**

ಮಾರುತ ಬಾರೊ ಚರಾಚರಭರಿತ | ಮೂರು ಲೋಕಗಳಿಗಾಧಾರ ಸಚ್ಚರಿತ ||
ಕಾರುಣ್ಯನಿಧಿ ನೀ ಸಂಚರಿಸದುಳಿದರೆ | ಆರಿಲ್ಲ ಲೋಕಕೆ ಕರ್ತರು ಬೇರೆ || ||೧೨೩||

ಉತ್ತಮರಿಗೆ ಕೋಪ ಚಿತ್ತದಿ ನಿಲದು | ಪೃಥ್ವಿಯ ಚಲಿಸುವ ಕರ್ತವ್ಯ ಉಳಿದು ||
ಸ್ವಸ್ಥದಿ ನೀನಿರೆ ಮೃತ್ಯುವು ಸುಳಿದು | ನಿತ್ಯವು ಜಗತಿಗಾಪತ್ತೊದಗುವುದು || ||೧೨೪||

**ವಾರ್ಧಕ**

ಹೊರವಳಯದಿಂದ ಪರಿಪರಿಯ ನೀತಿಯನುಸುರೆ
ಪೊರಟು ಬರುತಾ ಶವವ ಮುಂದಿರಿಸಿ ನುಡಿದೆನಿದ
ಪರಿಕಿಸಿರಿ ಹರಿಹರಬ್ರಹ್ಮಾದಿ ಸಕಲರಿಗೆ ಸರಸವೇ ಬಾಲನಳಿವು |
ಸರುವ ಲಕ್ಷಣಭರಿತನಿವನಳಿದ ಮೇಲಿನ್ನು

ಧರೆಯ ಸಂಚಾರವೇಕೆನಗೆ ವೈರಾಗ್ಯದಿಂ
ದಿರುವ ಗುಹೆಯೊಳಗನ್ಯರಿಂದ ನಡೆಸುವದಿದರನೆಂದು ಕಂಬನಿ ಸುರಿಸಲು || ||೧೨೫||

**ರಾಗ ಕಾಂಭೋಜಿ ಝಂಪೆತಾಳ**

ಮರುಗದಿರು ಕಾರ್ಯ ಮುಂದ್ವರಿದು ಪೋದುದಕೆ ಪರಿ |
ಹರಿಪಯತ್ನವ ಮಾಳ್ಪುದೆನುತ ||
ಹರಿಹರಾದ್ಯರು ಸಂತವಿಸೆ ಕಮಂಡಲಜಲವ |
ಸರಸಿರುಹಭವನು ಪ್ರೋಕ್ಷಿಸಲು || ||೧೨೬||

ಘಳಿಲನೆದ್ದೆಲ್ಲರಿಗೆ ತಲೆಬಾಗಿ ಕುಶಲದಿಂ |
ದಳಿದರಿಂ ಕುಶಲಾಂಗನಾಗಿ ||
ನೆಲಸು ಅಳಿಯದೆ ಮುಂದೆ ಹನುಮನೆಂಬಭಿಧಾನ |
ತಳೆದು ನೀನೆನುತ ವಿಧಿ ಪರಸೆ || ||೧೨೭||

ಹರನು ಎನ್ನೊೀಲ್ ಸತ್ವಭರಿತನಾಗೆನಲು ಶ್ರೀ |
ವರನು ಎನಗನುಯಾಯಿಯಾಗಿ ||
ಇರುವದೆನೆ ಸುರಪ ಸೌಭಾಗ್ಯಮಂ ತರಣಿ ಚಂ |
ದ್ರರು ತೇಜವಿತ್ತರಾತಂಗೆ || ||೧೨೮||

ಮರುತ ಗತಿ ಧನಪ ಸಿರಿ ತರಣಿಜಂ ಶಕ್ತಿಯಂ |
ವರುಣ ಗಾಂಭೀರ್ಯ ಮುನಿವರರು ||
ದೊರೆಯದಾಗಲಿ ಶಾಪಭಯವೆನಲು ಪೂಮಳೆಯ |
ಸುರಿಯೆ ಹರಸುತ ಪೋದರೆಲ್ಲ || ||೧೨೯||

**ವಾರ್ಧಕ**

ತನಯನಂ ಪಿಡಿದಪ್ಪಿ ಪೇಳ್ದ ಮಾರುತ ನಿನ್ನ
ಜನನಿ ಸುತನೇನಾದನೆಂದು ತರಹರಿಸುವಳ
ಘನವೇಗದಿಂದಲ್ಲಿ ಪೋಗಿ ಒದಗಿದ ಭಂಗವೆಲ್ಲವಂ ವಿಸ್ತರಿಸುತ |
ಜನನದಾಗಮ ತಿಳುಹಿ ಸಂತೈಸುತಾಕೆಯಿಂ
ದನುಮತಿಯ ಕೊಳುತ ನಿಗಮಾಗಮವ ಪಠಿಸಲ್ಕೆ
ದಿನಪನೆಡೆಗೈದೆನುತ ಬೀಳ್ಕೊಡಲು ಬಹ ಪಥದಿ ನೈಮಿಷಾವನ ಕಾಣುತ || ||೧೩೦||

**ರಾಗ ಮಾರವಿ ಏಕತಾಳ**

ಉತ್ತಮ ವನವೆನ್ನುತ್ತ ಪೊಕ್ಕು ಮರ | ಹತ್ತಿ ವಿನೋದದಲಿ ||
ಕಿತ್ತಳೆ ಜಂಬು ಕಪಿತ್ಥ ದ್ರಾಕ್ಷೆಗಳ | ಕಿತ್ತು ಮೆಲುತ್ತವನು || ||೧೩೦||

ಹಿಂಡು ಮುನೀಂದ್ರರ ತಂಡವಲ್ಲಿರ್ಪುದ | ನಂಡಲೆಯುತಲವರ ||
ಹೆಂಡಿರು ಮಕ್ಕಳ ಕಂಡೆಡೆಗೋಡಿಸಿ | ದಂಡಿಸಿ ಕೆಲವರನು || ||೧೩೧||

ಸೆಳೆಯುತ ಜಪಸರಗಳ ಹರಿದಿಡುಕುತ | ಎಳೆ ಪೆಣ್ಗಳ ಪಿಡಿದು ||
ಬಳಲಿಸಿ ಹೋಮಂಗಳ ಕೆಡಿಸುವ ಮ | ಕ್ಕಳ ಮುಳುಗಿಪ ಜಲದಿ || ||೧೩೩||

**ಕಂದ**

ಲೂಟಿಯನೆಸಗುತ ಮನದೊಳು
ಪಾಟಲ ಮೊಗದವನಿರಲ್ಕೆ ಮತ್ತಾಕಡೆಗಂ |
ಬೇಟೆಯನಾಡುವ ಶಬರರ
ಕೂಟವ ನೆರಹಿಸಿ ಸುಕೇತ ತಾನೈತಂದಂ || ||೧೩೪||

**ರಾಗ ಮುಖಾರಿ ಏಕತಾಳ**

ಬಂದು ಪೊಕ್ಕರು ಪುಣ್ಯಾಶ್ರಮಕೆ | ಬೇಟೆಯಾಡಲ್ಕೆ |
ಬಂದು ಪೊಕ್ಕರು ಪುಣ್ಯಾಶ್ರಮಕೆ ||
ಸಂದುಗೊಂದನರಸಲು ಮೃಗ ಕಾಣದೆ |
ಮುಂದೆ ನಡೆದು ತಪದಿಂದಿರ್ಪರ ನಿ |
ರ್ಬಂಧಪಡಿಸುತ ಪುಳಿಂದರು ನಾಲ್ದೆಸೆ |
ಯಿಂದ ಸುಳಿಯೆ ತಡೆದೆಂದನು ಹನುಮನು || ||೧೩೫||

**ರಾಗ ಶಂಕರಾಭರಣ ಮಟ್ಟೆತಾಳ**

ಫಡ ಪುಳಿಂದಕರಿರ ತೊಲಗಿ ದೃಢತೆಯಿಂದಲೆ |
ನಡೆಸಿ ತಪದೊಳಿರ್ಪ ಮೌನಿ ಗಡಣಕಿಂದಿಲಿ ||
ಬಿಡದೆ ಭಂಗಪಡಿಪ ದುಷ್ಟಕಾರ್ಯ ಸಲ್ಲದು |
ಬಡ ಮೃಗಂಗಳನ್ನು ಕೆಡಹಿದಂದವಲ್ಲಿದು || ||೧೩೬||

ಆರು ಕರೆದರಿಲ್ಲಿ ಕೀಶ ಪೋರ ನಿನ್ನನು |
ಏರಿ ಮರವ ದಿನವ ಕಳೆವ ಕೀಳ ನಮ್ಮನು ||
ಪಾರುಪತ್ಯ ಮಾಳ್ಪ ನಿನ್ನ ಕಾರ್ಯ ಸಲ್ಲದು |
ಮಾರಿ ಬಾಯ ಪೊಕ್ಕ ಕುರಿಯ ಬಾಳ್ವೆಯಪ್ಪುದು || ||೧೩೭||

ಕಿರಿಯನೆಂಬ ಎಣಿಕೆ ಬೇಡ ಘೋರ ವನವನು |
ಉರಿಯ ಕಿಡಿಯು ಸುಡುವ ತೆರದಿ ದಹಿಪೆ ಕುಲವನು ||
ಮರೆಗೆ ನಿಂದು ಶರವ ಬಿಡುವ ಶೌರ್ಯವೆನ್ನೊಳು |
ಮೆರೆಯಲರಿದು ಇರಿದು ನಿಂದು ಕಾದು ಧುರದೊಳು || ||೧೩೮||

ಮೊದಲೆ ಮಂಗ ಜಾತಿ ನೀನದರೊಳ್ಕಿರಿಯನು |
ಬದುಕುವಾಸೆ ಬಿಟ್ಟು ನುಡಿವೆ ಹಲವು ಮಾತನು ||
ಮದನವೈರಿ ಸುರಪಮುಖ್ಯ ತ್ರಿದಶರೆಮ್ಮೊಳು |
ಕದನಕಳುಕಿ ಭೀತಿಯಿಂದಲಿದಿರು ಬಾರರು || ||೧೩೯||

ಬಲುಹ ನೊಳ್ಪನೆನುತ ಮರದ ಕೊಂಬೆ ಕೀಳುತ |
ಹಲವರನ್ನು ಬಡಿದು ಇಳೆಗೆ ಕೆಡಹೆ ಕಾಣುತ ||
ಉಳಿದರೊಂದುಗೂಡೆ ಬಳಲಲ್ಯಾಕೆನುತ್ತಲಿ |
ಒಲಿಸಿ ಶಿಖಿಯನವರ ಬಲಕೆ ಕಳುಹೆ ಜವದಲಿ || ||೧೪೦||

**ವಾರ್ಧಕ**

ಬೀಸಲಾ ಉರಿಯ ಜತೆಯಿಂ ಮರುತ ಶಬರಕುಲ
ನಾಶವಾಗಲು ಕಂಡು ಮುನಿವರರು ಗೋಳಿಡುತ
ಮೂಷಿಕನ ದ್ವೇಷದೊಳು ಗೃಹಕೆ ಕಿಚ್ಚಿಟ್ಟ ತೆರವಾದುದೀತನ ಬಗೆಯಲಿ |
ಘಾಸಿಯಾಗುವೆವು ನಾವೆನುತ ಗೋಳಾಡುತಿರ
ಲಾ ಸಮಯಕೆಲ್ಲರಂ ಪೊತ್ತು ಹೊರಗಿಡೆ ಪ್ರಾಣ
ದಾಸೆಯಿಂದೋಡುತಿಹ ವ್ಯಾಧರ್ಗೆ ಕುದಿವ ಜಲ ಸುರಿಸಿದಂ ನಾಲ್ದೆಸೆಯಲಿ || ||೧೪೧||

**ಆರ್ಯ ಸವಾರ್ಯ**

ಉರಿಯಲು ವ್ಯಾಧರ ಪರಿಹಾರವು ಮುನಿ | ಪರರೀಕ್ಷಿಸಿ ಬಲಯುತ ನಿಮಗೆ ||
ಸರಿಯಲ್ಲವು ತಿಳಿದರೆ ಸತ್ವದಿ ಜಗ | ಉರಿಸದೆ ಬಿಡನದಕೀತನಿಗೆ ||
ಮರವೆಯಾಗಿ ಅಧಟಿರಲಿಯೆನುತ್ತವ | ರರುಹಲು ಪೊರಟು ಜವದಿ ಬರುತ ||
ತರಳನ ಕಾಣದೆ ಮರುಗುವ ಜನನಿಗೆ | ಎರಗಿ ಪೇಳ್ದ ನಡೆದಿಹ ಚರಿತ || ||೧೪೨||

**ರಾಗ ಕಾಂಭೋಜಿ ಅಷ್ಟತಾಳ**

ಶರಣಮ್ಮ ಜನನಿ ಬೇಸರಿಸದಿರೆನ್ನೊಳು | ತಾಯೆ ಕೇಳು | ಫಲ |
ತರುವಡೆ ನೀ ಪೋಗೆ ನಭ ಪರಿಕಿಸಿದೆ ನಾ | ತಾಯೆ ಕೇಳು ||

ತರಣಿ ಶೋಭಿಸುತಿರೆ ಹಣ್ಣೆಂದು ಭ್ರಮಿಸತ | ತಾಯೆ ಕೇಳು || ಒಡ |
ಲುರಿಯ ತಡೆಯದಲೆ ಭರದಿ ಲಂಘಿಸಿದೆ ನಾ | ತಾಯೆ ಕೇಳು || ||೧೪೩||

ಹತ್ತಿರಕೈದಲು ಮಿತ್ರನೆಂದರಿವಾಗಿ | ತಾಯೆ ಕೇಳು || ರಥ |
ಹತ್ತಿರ ರಾಹು ಸವಿತ್ರನೆಡೆಗೆಬಂದ | ತಾಯೆ ಕೇಳು ||
ಧೂರ್ತನ ತಡೆವುತ ನಿತ್ತಿರೆ ತ್ವರಿಯದಿ | ತಾಯೆ ಕೇಳು || ಆತ |
ನೊತ್ತಾಸೆ ಗೈದೆನ್ನ ಸುತ್ರಾಮ ಮಡುಹಿದ | ತಾಯೆ ಕೇಳು || ||೧೪೪||

ಚೇತನ ಕುಂದಿ ನಾ ಭೂತಳಕೊರಗಿರೆ | ತಾಯೆ ಕೇಳು | ಬಳಿ |
ಗಾತತೂಕ್ಷಣ ಬಂದು ತಾತ ಮಾರುತನೊಯ್ದು | ತಾಯೆ ಕೇಳು ||
ಆತನ ದೆಸೆಯಿಂದ ಹರಿಯಜಭವರೈದಿ | ತಾಯೆ ಕೇಳು | ಬಲು |
ಪ್ರೀತಿಯಿಂದೆಲ್ಲರು ಹರಸಿ ಪೋಗಿಹರೆನ್ನ | ತಾಯೆ ಕೇಳು || ||೧೪೫||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ಎನಗೆ ಪೇಳಿದನಯ್ಯ ಸಿದ್ಧಯೋಗದಿ ನಿನ್ನ |
ಜನನಿಯ ಕೂಡಿದ ದಿನವೆ ||
ಜನಿಸಿದ ಮೋಹದ ತನಯ ನೀ ಚರಿತೆಯ |
ವಿನಯದಿ ಪೇಳೆಂದ ಹರಸಿ || ||೧೪೬||

ಕಳುಹಿರ್ಪ ನಡೆತಹ ಪಥದೊಳು ವ್ಯಾಧರ |
ಬಳಗವು ಮುನಿಗಳೆಲ್ಲರನು ||
ಬಳಲಿಪ ದುಷ್ಟರ ಬಳಗ ತೀರ್ಚೆದರಿಂದ |
ಬಲಯುತನಾದರು ಮುಂದೆ || ||೧೪೭||

ಮರವೆಯಾಗಲಿ ಸತ್ವವೆಂದು ಪೇಳ್ದುದರಿಂದ |
ತರಹರಿಸುವೆ ಮೇಘ ಕವಿದ ||
ತರಣಿಯ ತೆರನಾದೆ ಮತಿಮಲಿನತ್ವದೊ |
ಳಿರುವಂತಾದುದು ಬಾಳ್ವೆ ಜಗದಿ || ||೧೪೮||

ಬಾಲನಿಂತೆಂದುದ ಕೇಳಿ ಮಾರುತನಿಂದ |
ಹಾಳಾಯ್ತು ಧರ್ಮ ಯೋಚಿಸಲು ||
ಮೂಲೋಕಗಳ ಪ್ರಾಣರೂಪನಾಗಿರಲೆನ್ನ |
ಶೀಲಕ್ಕೆ ಕುಂದಿಲ್ಲವೆನುತ || ||೧೪೯||

**ಕಂದ**

ಪುತ್ರನ ನಡೆನುಡಿಗಂ ಹಿ
ಗ್ಗುತ್ತಲಿ ಪಿಡಿದಪ್ಪುತೆಂದಳಾ ಮುನಿಬಳಗಂ |
ಬಿತ್ತರಿಸಿದರಿಂ ನಿನ್ನ ಚ
ರಿತ್ರವು ಜಗಕಧಿಕಮಾಗಿ ಬೆಳಗಲಿ ಎನುತಂ ‖ ೧೫೦ ‖

**ರಾಗ ಕೇತಾರಗೌಳ ಅಷ್ಟತಾಳ**

ತೊಡಿಸುತ ರನ್ನದ ಉಡುದಾರ ಕೌಪೀನ |
ಉಡಿಸಿ ಕುಂಡಲವನಿಟ್ಟು ||
ಜಡಜನಾಭನು ರಾಮನವತಾರದಿಂದಲಿ |
ಪೊಡವಿಯೊಳುದಿಸುತಲಿ ‖ ‖ ೧೫೧ ‖

ನಿನ್ನ ಕುರುಹ ಸೂಚಿಸುತ ಕರೆಯುವನಾತ |
ನನ್ನು ಸೇವಿಸು ನಿರತ ||
ಇನ್ನಾರಿಗದು ಗೋಚರಿಸದು ಎಂದುಪದೇಶ |
ವನ್ನಿತ್ತು ಹರಸಲೆಂದ ‖ ೧೫೨ ‖

ಕಳುಹೆನ್ನ ಹರಸುತ ಪಿತನಾಜ್ಞೆಯಂತೆ ನಾ |
ನಳಿನಾಪ್ತನೆಡೆಗೆ ಪೋಗಿ |
ತಿಳಿಯುವೆ ನಿಗಮಾಗಮಾದಿ ತತ್ವಗಳನೆ |
ನಲವಿಂದ ಬೀಳ್ಗೊಟ್ಟಳು ‖ ೧೫೩ ‖

**ರಾಗ ಕಾಂಭೋಜಿ ಝಂಪೆತಾಳ**

ಲಾಲಿಸೈ ರಘುನಾಥ ವಾಲಿಯನುಜನ ಕೂಡಿ |
ಕಾಳಗದಿ ಗೆದ್ದು ಹಲವರನು ||
ಮೇಲೆ ವಿಂಗಡವಾಗಿ ಇಂದ್ರಜ ಸುರಾಸುರರ |
ಪಾಲಾಬ್ಧಿ ಮಥಿಸುವೆಡೆಗೈದಿ ‖ ೧೫೪ ‖

ಇತ್ತಂಡವನು ನಿಂದಿಸುತ್ತಲೊರ್ವನೆ ಮಥಿಸೆ |
ಮತ್ತ ಕಾಶಿನಿ ತಾರೆಗಾಗಿ ||
ಶತ್ರುತ್ವದಿಂ ಶಶಿಯನಿದಿರಿಸಲ್ಕಾ ಸಮತೆ |
ವೆತ್ತವಳ ಸೃಜಿಸುತಲೆ ವಿಧಿಯು ‖ ೧೫೫ ‖

ತೋರಿ ದ್ವಯ ತಾರೆಯರೊಳೋರ್ವಳಂ ತಾರಕ ಕು |
ಮಾರಿ ಎನುತಲಿ ವಾಲಿಗಿತ್ತು ||

ಮಾರನಯ್ಯನ ಹಗೆಯನೆಚ್ಚರಿಸೆ ಸತಿಯೊಡನೆ |
ಸಾರಿದನು ತನ್ನ ಪುರವರಕೆ || ೧೫೬ ||

ದ್ಯುಮಣಿಯಾತ್ಮಜನತ್ತ ರುಮನೊಡನೆ ಒಂದಬ್ದ |
ಸಮರಗೈದವನ ಬಂಧಿಸುತ ||
ಕಮಲಮುಖಿಯವನಣುಗೆ ರುಮೆ ಎಂಬವಳ ಕೂಡಿ |
ಗಮಿಸಿದನು ತನ್ನ ಮಂದಿರಕೆ || ೧೫೭ ||

**ವಾರ್ಧಕ**

ಒತ್ತಿನಿಂ ನಡೆತಂದು ಪಿತಗೆ ಮಣಿಯುತ ಸಕಲ
ವೃತ್ತಾಂತ ಬಿನ್ನವಿಸೆ ಸಂತಸದೊಳುಭಯರಿಗೆ
ಉತ್ತಮದ ಲಗ್ನ ಪರಿಕಿಸುತ ಪಾಣಿಗ್ರಹಣ ವಿರಚಿಸುತ ವೈಭವದಲಿ |
ಮತ್ತೆ ಕೆಲಕಾಲ ಕಳೆದಧಿಕಾರ ತನಯರಿಂ
ಗಿತ್ತು ತಪಕೈದಲಾ ಮಹಿಷಸುತ ದುಂದುಭಿಯ
ಪುತ್ರ ಮಾಯಾವಿ ಪಾತಾಳಲೋಕದೊಳಿರ್ದು ತನ್ನವರೊಳಿಂತೆಂದನು ||೧೫೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿ ಸುಭಟರು ದಿತಿಜರನು ಸುರ |
ಪಾಲ ಕೊಲಿಸುತ ನಾಕಪದವಿಯ |
ನಾಳುವನು ನಮಗಿರುವಿಕೆಗೆ ಪಾ | ತಾಳವಾಯ್ತು || ೧೫೯ ||

ಮತ್ತವಾರಣ ಬಿದ್ದು ಕುಣಿಯೊಳು |
ಸತ್ವಗುಂದಿದ ತೆರದಿ ದೈತ್ಯರ |
ಮೊತ್ತ ಕಂಡೆಡೆಗೋಡಿ ಬಾಳುವೆ | ವ್ಯರ್ಥವಾಯ್ತು || ೧೬೦ ||

ಕೋಣ ಬಲು ಕೊಬ್ಬಿದರೆ ಜಗತಿಯೊ |
ಳಾನೆಗೆಣೆಯಾಗುವುದೆ ಬಡ ಗೀ |
ರ್ವಾಣರಿಗೆ ನಮ್ಮಿದಿರು ಕಾದುವ | ತ್ರಾಣವಿಹುದೆ || ||೧೬೧||

ಹೊತ್ತು ಕಳೆಯದೆ ಬಲದೊಡನೆ ಗಮಿ |
ಸುತ್ತ ಸುರರಂ ಗೆಲಿದವರ ಸ |
ದ್ವಸ್ತುಗಳ ಸೆಳೆದಾಳ್ವ ಸತಿಯರ | ಮೊತ್ತದೊಡನೆ || ||೧೬೨||

**ಭಾಮಿನಿ**

ಎಂದವನ ನುಡಿ ಕೇಳಿ ರಕ್ಕಸ
ವೃಂದ ಉಬ್ಬುತ ಪೊರಟುದಾಗಲೆ
ಸಿಂಧುವಿಂ ಮೇಲ್ವರಿವ ನೊರೆಗಳ ತೆರದಿ ಸುರಪುರಕೆ ||
ಮುಂದ್ವರಿದು ನಾಕದಲಿ ನಾಲ್ದೆಸೆ
ಯಿಂದ ಲೂಟಿಯನೆಸಗೆ ಭಯದಲಿ
ಇಂದ್ರನೆಡೆಗಾಗಮಿಸಿ ಚರರುಸುರಿದರು ನಡುನಡುಗಿ || ||೧೬೩||

**ರಾಗ ಸಾರಂಗ ಅಷ್ಟತಾಳ**

ಲಾಲಿಸು ನಿರ್ಜರರೆರೆಯ | ಖಳ |
ಜಾಲ ನಾಕಕೆ ಬಂದು ಮಾಳ್ಪಹಾವಳಿಯ ||
ಪೇಳಿ ತೀರದು ಎಲ್ಲ | ರಾಲಯಂಗಳ ಪೊಕ್ಕು |
ಗೋಳುಗುಟ್ಟಿಪ ಬಗೆ | ಶೂಲಿಯೆ ಬಲ್ಲನು || ||೧೬೪||

ನಾರಿಯರನು ಸೆರೆ ಪಿಡಿದು | ಸುಕು |
ಮಾರರ ಕಂಡ ಕಂಡೆಡೆಯೊಳು ಬಡಿದು ||
ಮಾರಿಯ ತೆರದೊಳು | ಊರೆಲ್ಲ ಸುಳಿಯುತ |
ಸಾರ ಸಂಪತ್ತನು | ಸೂರೆಗೈಯುವರೆಲ್ಲ || ||೧೬೫||

**ರಾಗ ಭೈರವಿ ಅಷ್ಟತಾಳ**

ಸಂತೈಸಿ ಕಳುಹುತಲಿ | ಸುರರ ಕರೆ | ದಿಂತೆಂದ ಹಗೆಯಿಂದಲಿ ||
ಪಂಥ ಪಿಡಿದು ಬಂದ ಖಳರಿಗೆ ತೋರ್ಪೆ ನಾ | ನಂತ್ಯವನಿಂದಿನಲಿ || ||೧೬೬||

ತಡೆಯದೆ ಪೋಪುದೆಂದು | ಕೂಡುತ ಸುರ | ಗಡವಣ ಭರದೊಳಂದು ||
ಅಡರುತ್ತ ದಂತಿಯ ನಡೆದು ಮಾಯಾವಿಯ | ತಡೆದೆಂದನಿದಿರು ನಿಂದು || ||೧೬೭||

ಹೇಡಿ ಖಳರೊಳಧಮ | ಸಂಗರವ ಬಿ | ಟ್ಟೋಡಿಯುಳಿದೆಯಮಮ ||
ಖೋಡಿ ವಿಕ್ರಮ ಸುಡು ಇಂದು ಎನ್ನೊಡನೆ ಕಾ | ದಾಡಿ ತೀರಿಪೆಯ ಜನ್ಮ || ||೧೬೮||

ಬಲ್ಲೆ ಸುರಪ ನಿನ್ನನು | ಇದಿರಿನೊಳು | ನಿಲ್ಲದೆ ದಿತಿಜರನು ||
ಕ್ಷುಲ್ಲಕ ಕೃತ್ಯದಿ ಕೊಲಿಸುತ್ತ ಲೋಕದಿ | ಬಲ್ಲಿದನಾದುದನು ||
ಹರಿಹರರೊಲಿದೆಮಗೆ | ಉತ್ತಮರೆಂಬು | ದರಿತು ಪಾಲಿಸಿದ ಬಗೆ ||
ಅರಿಯದೆ ನಿನ್ನಯ ಹಿರಿಯರಳಿದರದು | ಮರವೆಯಾದುದೆ ನಿನಗೆ || ||೧೬೯||

ಆ ದಿನ ಮಾಯೆಯಿಂದ | ಜಯವು ವಶ | ವಾದುದ ಬಲ್ಲೆನಿಂದ್ರ ||
ಕಾದಲಿಕೆನಗಿದಿರಾಗೆಂದು ಮುಸುಕಿದ | ಕ್ರೋಧದಿ ಶರಗಳಿಂದ || ||೧೭೦||

**ವಾರ್ಧಕ**

ತ್ರಾಣಗುಂದುತ ಸುರಪ ಸಮರ ಬಿಟ್ಟೋಡೆ ಶಿಖಿ
ಕೋಣನೇರ್ದವ ಮರುತವರುಣರಾಹವವೆಸಗೆ
ಕಾಣಿಸದೆ ಜಯವು ಪಿಂತಿರುಗೆ ಸದ್ವಸ್ತುಗಳ ವಶಪಡಿಸಿ ಕಳುಹಿ ಪುರಕೆ |
ದಾನವಂ ರಥವಡರಿ ಮರುಳುತಿರೆ ಸಾರಥಿಯ
ಜಾಣ್ಮೆ ಕುಗ್ಗುತ್ತ ಸ್ಯಂದನ ಸರಿದು ಋಕ್ಷನು
ದ್ಯಾನಕಂ ಪೊಗಲು ಶೋಭಿಸುವ ಅಂಜನೆಯಳಂ ಕಂಡು ಮರುಳಾಗುತೆಂದ || ||೧೭೧||

**ರಾಗ ಬೇಹಾಗ್ ರೂಪಕತಾಳ**

ನಾರಿ ಯಾರೀಕೆ ವೈಯಾರಿ ಸುಂದರಿ |
ಸೇರಿ ವನದೊಳೋರ್ವಳಿಹಳು ಕಂಬುಕಂಧರಿ ||
ಮೂರುಲೋಕ ಸೂರೆಗೊಂಬ ಮಾರನರಸಿಯೊ |
ವಾರಿಜಸಂಭವನ ಸತಿಯೊ ಸಿರಿಯೊ ಗೌರಿಯೊ || ||೧೭೨||

ಹಲವು ಜನ್ಮಗೈದ ಪುಣ್ಯಫಲಗಳಿಂದಲಿ |
ಚೆಲುವ ಜನಿಸಿ ಕುಲವ ಬೆಳಗಿಸುವಳ ಜತೆಯಲಿ ||
ನೆಲಸಿ ಸುಖದಿ ನಲಿವನಾವನೆಂಬ ವಳವನು |
ತಿಳಿವೆನೆಂದು ಬಳಿಗೆ ಸರಿದವಳೊಳು ನುಡಿದನು || ||೧೭೩||

ಜಾಣೆ ನಿನ್ನ ಸ್ಥಾನವೆಲ್ಲಿ ನೀನೀ ವಿಪಿನದಿ |
ಕಾಣಿಸುತಿಹೆ ಮೀನಕೇತನಾನೆಯಂದದಿ ||
ತ್ರಾಣ ಕುಗ್ಗಿಸಿದನು ಮದನ ಬಾಣವೆಸೆಯುತ |
ಪ್ರಾಣವುಳಿಸು ನೀನೆಂದೆನಲು ನುಡಿದಳ್ಕನಲುತ || ||೧೭೪||

**ರಾಗ ಕೇತಾರಗೌಳ ಏಕತಾಳ**

ಎಷ್ಟು ಮಾತ ನುಡಿವೆ ಸಾಕು ಭ್ರಷ್ಟ ತೊಲಗಾ ಕಡೆಗೆ |
ನಿಷ್ಠೂರವೇಕೆಂದು ಕುಳಿತರಿಷ್ಟು ಬಂತು ಸಲಿಗೆ ||
ಪಟ್ಟದರಸ ವನದೊಳಿಹ ಬಲಿಷ್ಠನಾ ಕೇಸರಿಯು |
ಥಟ್ಟನಿಲ್ಲಿ ಬರಲು ಪ್ರಾಣ ಕುಟ್ಟಿ ಕಳೆವ ಖರೆಯು || ||೧೭೫||

ಪೇಳಬೇಡ ವನದಿ ಬಾಳ್ವ ಕೀಳನವನ ಶೌರ್ಯ |
ಕೇಳಿ ಬಲ್ಲೆ ಗಾಳಿ ನಿನ್ನ ಮೇಳವಿಸಲು ಧೈರ್ಯ ||
ತೋಳ ಬಲುಹು ಪೋದುದೆಲ್ಲಿ ಏಳು ಬಾ ಬಾ ಸ್ಮರನ |
ಕಾಳಗದಲಿ ಸರಸಗೊಳಿಸಿ ಉಳಿಸು ಎನ್ನ ಹರಣ || ||೧೭೩||

ನಡೆ ದುರಾತ್ಮ ಋಕ್ಷ ಎನ್ನ ಪಡೆದ ಸಚ್ಚರಿತನು |
ಕಡು ಬಲಾಢ್ಯ ವಾಲಿ ಇನ್ನು ಜಡಜಸಖನ ಸುತನು ||
ಮೃಡಸಮಾನಬಲರಗ್ರಜರು ಪೊಡವಿಗಧಿಕರವರ |
ಕಡುಹ ತಿಳಿಯದ್ಯಾಕೆ ಪ್ರಾಣ ಕೊಡುವೆ ನುಡಿದೆ ವಿವರ || ||೧೭೭||

ವನಜಗಂಧಿ ಬಣ್ಣಿಸದಿರು ಬಿನುಗು ಕಪಿಗಳನ್ನು |
ಘನ ಬಲಿಷ್ಠ ತಾನು ಮುನಿಯೆ ಹರಿಹರಾದ್ಯರನ್ನು |
ಗಣಿಪನಲ್ಲ ಸುರತಕೊಮ್ಮೆ ಮನವ ಮಾಡಿ ಎನ್ನ ||
ತನುವನುಳುಹು ದೈನ್ಯದಿಂದ ಮಣಿದು ಕೇಳ್ವೆಚಿನ್ನ || ||೧೭೮||

**ವಾರ್ಧಕ**

ಋಳನಿವನೊಳು ನುಡಿದು ಫಲವಿಲ್ಲ ನೀತಿಯಂ
ಪೇಳಿ ದಣಿಯುವದ್ಯಾಕೆ ಇದಿರು ನಿಲೆನೆನುತಲಾ
ಲೋಲಲೋಚನೆ ನಿರ್ಧರಿಸಿ ಮುಂದಕಡಿಯಿಡಲ್ಕಾಲೋಚಿಸಿದ ಮನದಲಿ ||
ಕೇಳಿ ಗಾರ್ದಭನ ಮೇಲೇರಿಪುದೆ ಹೊರೆಯ ನಾ
ವೇಳೆಯಂ ಕಳೆಯದೊಯ್ಯುವೆನೆಂದು ಕೈಯಿಡಲು
ಗೋಳಿಡುವದಾಲಿಸುತ ಬಂದು ಕೇಸರಿ ನೃಕೇಸರಿಯಂತೆ ತಡೆದೆಂದನು || ||೧೭೯||

**ರಾಗ ಮಾರವಿ ಅಷ್ಟತಾಳ**

ಆರೆಲಾ ಮತಿಹೀನ ರಕ್ಕಸ | ಬಂದು | ನಾರಿ ಈಕೆಯ ಕೂಡೆ ಸಾಹಸ |
ತೋರುವೆ ಚೋರರ ತೆರದಲಿ | ಬಿಟ್ಟು | ಸಾರಿ ಬಾಳಿರು ಪೋಗಿ ಪುರದಲಿ || ||೧೮೦||

ಕೇಳುವನಾರೆಲೊ ಎನ್ನನು | ಕ | ಟ್ಟಾಳು ನಾನೆಣೆಯಾದಳಿವಳನು ||
ಮೇಲೆನ್ನಾಲಯಕೊಯ್ದು ಜವದಲಿ | ಅನು | ಗಾಲ ಪಾಲನೆ ಮಾಳ್ಪೆ ಸುಖದಲಿ || ||೧೮೧||

ಮತಿಹೀನ ಕೇಳೆನ್ನರಸಿ ಈಕೆ | ಪರ | ಸತಿನಿನಗಿವಳ ನುಡಿಸಿದೇಕೆ |
ದಿತಿಜರ ಕುಲದ ಸ್ವಭಾವವು | ದುಷ್ಟ | ಕೃತಿಯಿಂದ ಮಡಿವ ನಿರ್ಧಾರವು || ||೧೮೨||

ಕುರುಡಗೆ ದರ್ಪಣವೀಯಲು | ಫಲ | ವಿರುವುದೆ ವರಿಸಿ ನೀನಿವಳೊಳು ||
ಸರಸದಿ ಸುಖಿಸಲು ಬಲ್ಲೆಯ | ಯಾರು | ಕರೆದಿತ್ತರೈ ನಿನಗೀಕೆಯ || ||೧೮೩||

ಸರಸಿಜಭವನ ಘಟನೆಯಲಿ | ಪಟ್ಟ | ದರಸಿಯಾಗಿಹಳ ತುಡುಕಲಿಲ್ಲಿ ||
ಉರಿವಗ್ನಿಮೆಲಲು ಪತಂಗವು | ಪೋದ | ತೆರದೊಳಪ್ಪುದು ನಿನ್ನ ಮರಣವು || ||೧೮೪||

ಬಾಯ ಪೌರುಷನೋಳ್ಪೆನೆನ್ನುತ | ಖಳ | ರಾಯನು ಖಾತಿಯ ತಾಳುತ ||
ಸಾಯಕಂಗಳ ಮುಳಿದೆಸೆಯಲು | ಕಪಿ | ನಾಯಕ ಮೂರ್ಛೆಯೊಳೊರಗಲು || ||೧೮೫||

ಇನ್ನಾರು ತಡೆವವರೆನ್ನುತ | ಖಳ | ಪನ್ನಗವೇಣಿಯ ಪಿಡಿಯುತ್ತ ||
ತನ್ನಯ ರಥದೊಳೇರಿಸುತಲೆ | ಪೋಪೆ | ನೆನ್ನಲು ಮೊರೆಯಿಟ್ಟಳಾ ಬಾಲೆ || ||೧೮೬||

**ರಾಗ ನೀಲಾಂಬರಿ ಏಕತಾಳ**

ಇನ್ನೇನೆಸಗುವೆ ಖಳನು | ಬಲು | ಬನ್ನಬಡಿಸುತೊಯ್ಯುವನು ||
ಪುಣ್ಯಹೀನೆಯ ದಯೆ ತಂದು | ಮು | ಕ್ಕಣ್ಣ ಸಲಹೊ ಗುಣಸಿಂಧು || ||೧೮೭||

ಸುರಮನುಮುನಿಗಳೆ ನಿಮಗೆ | ಮನ | ಕರಗದೆ ಮತ್ತೀ ಬಗೆಗೆ ||
ಕರಗಳ ಮುಗಿಯುವೆನಯ್ಯ | ಪರಿ | ಹರಿಸಿರಿ ಕಷ್ಟ ದಮ್ಮಯ್ಯ || ||೧೮೮||

ರಣಗಲಿ ವಾಲಿಯನುಜೆಯ | ಆ | ಇನಜಾತನ ಸೋದರಿಯ |
ಹನುಮನ ಪಡೆದಂಜನೆಯ | ದು | ರ್ಜನನಿಂ ಬಿಡಿಸಿರಿ ಸತಿಯ || ||೧೮೯||

**ವಾರ್ಧಕ**

ಕೇಳಿಸಿತು ನಾಲ್ದೆಸೆಗೆ ಮರುತ ತಾನಾಲಿಸುತ
ಕಾಲಭೈರವನಂತೆ ಪೊರಡಲೊಂದೆಡೆ ಹನುಮ
ಖೂಳ ಖಳನಾತನ ಸಮೂಲವಳಿಸುವೆನೆಂದು ಉಗ್ರದಿಂದೇಳಲಾಗ |
ಮೂಲೋಕ ಉರಿವುದೆಂದವರ ರವಿ ತಡೆಯೆ ಎಳೆ
ಬಾಳೆ ಭಂಗಿಪ ಗಜದ ಬಳಿಗೆ ಬಹ ಸಿಂಹದೋಲ್
ಗಾಳಿ ವೇಗದಿ ಬಂದು ವೈರಿ ಕಾಲಗ್ರೀವ ಸುಗ್ರೀವ ತಡೆದೆಂದನು || ||೧೯೦||

**ರಾಗ ಭೈರವಿ ಏಕತಾಳ**

ಫಡ ಯಾಮಿನಿಚರ ನೀನು | ಕೈ | ಪಿಡಿದೆಳೆಯುತ ಸಾಧ್ವಿಯನು ||
ನಡೆವುದೆಲ್ಲಿಗೆ ಬಲವಿರಲು | ಧುರ | ಕೊಡು ಮಲೆತೆನ್ನಿದಿರಿನೊಳು || ||೧೯೧||

ಧರೆಗೊರಗಿಹನೋರುವನು | ತುಂ | ಡರಿಪೆ ನಿನ್ನ ಬಲಕಿನ್ನು ||
ಕರೆಸು ಬರಲಿ ಮಹದೇವ | ಬಳಿ | ಇರಿಸೈ ಸಂಜೀವನವ || ||೧೯೨||

ಬಲ ಕುಂದಲು ಗರಗಸಕೆ | ತರು | ಗಳ ಕುಲ ಉಳಿವುದೆ ಇದಕೆ ||
ಬಲು ಮಾತಿಲಿ ಫಲವೇನು | ನಿ | ನ್ನಳಿವಿಗೆ ಕಾರಣ ನಾನು || ||೧೯೩||

ಒದರದಿರೈ ಪೌರುಷವ | ತನು | ಭೇದಿಪ ಉತ್ತಮ ಶರವ ||
ಆಧರಿಸಿಕೊ ಎಂದೆಸೆದ | ಕಂ | ಡಾದಿತ್ಯಜನದ ಕಡಿದ || ||೧೯೪||

**ಭಾಮಿನಿ**

ಸತ್ತ್ವದಿಂ ಕಾದಾಡುತಿರಲಾ
ಪೃಥ್ವಿಯದುರಿತು ಗರ್ಜನೆಯ ಕೇ
ಳುತ್ತ ಸುರಪಜ ಶತ್ರುಗಳು ಯಾರೆಂದು ಪರಿಕಿಸಲು |
ಹತ್ತಿ ಕೋಟೆಯ ತಿಳಿಯುತಾಗಲೆ
ಕಿತ್ತು ಗಿರಿಕಲ್ಮರಗಳಂ ಧರಿ
ಸುತ್ತ ರಣದೆಡೆಗೈದೆ ಇನಜನ ನಿಲಿಸಿ ಖಳಗೆಂದ || ||೧೯೫||

**ರಾಗ ಮಾರವಿ ಏಕತಾಳ**

ದುರುಳ ಖಳನೆ ವಿಷಭರಿತ ಕಮಲ ಮಧು | ವರಸಿ ಮೆಲುವೆನೆಂದು ||
ಮರಿ ಭ್ರಮರವು ಮೇಲ್ವರಿದಂತಿವಳಿಗೆ | ಕರವಿಕ್ಕಿದೆ ಇಂದು || ||೧೯೬||

ಅರಿಯದು ನಿನಗಾ ಗರಳದ ನಳಿನಕೆ | ಗರುಡ ತುಂಬಿಯಾಗಿ ||
ಸರಸದಿ ಮೆಲುವಾತುರದಿ ಬಂದೆ ತಡೆ | ವರು ಯಾರೆನಲೆಂದ || ||೧೯೭||

ಖಗನಿರ್ಪರವಟ್ಟಿಗೆಗೆ ಪೊಕ್ಕು ಉರ | ಗಗಳು ಬಾಯ ಬಿಡುವ ||
ಬಗೆಯಾಯ್ತೆನ್ನಯ ಹಗೆಯೊಳುಳಿಯೆ ಬಿ | ಟ್ಟಗಲು ಮುಗುದೆಯಳನು || ||೧೯೮||

ಸಿಡಿಲಿನ ಭರಮಂ ತಡೆಯಲುಂಟೆ ಹುಲು | ಕೊಡೆಯು ಮರುಳರಂತೆ ||
ನುಡಿಯದೆ ಎನಗೀ ಹುಡುಗಿಯನೊಪ್ಪಿಸಿ | ನಡೆ ವನದೆಡೆಗೆಂದ || ||೧೯೯||

**ರಾಗ ಭೈರವಿ ಅಷ್ಟತಾಳ**

ಕೇಳುತಲಾ ನುಡಿಯ | ಪೇಳಿದನೆಲೆ | ಖೂಳನೆ ನಿನ್ನೆದೆಯ ||
ಸೀಳಿ ರಕ್ತದಿ ಗಣ | ಜಾಲವ ದಣಿಸುತ್ತ | ಪಾಲಿಪೆ ನಾನೀಕೆಯ || ||೨೦೦||

ನೀತಿಯ ಮಾತಿನೊಳು | ತಿಳಿಯೆ ಹುಲು | ಕೋತಿಯೆ ಸಮರದೊಳು ||
ಈ ತತೂಕ್ಷಣ ತೋರ್ಪೆನೆನುತಲೆಚ್ಚನು ಶರ | ವ್ರಾತವ ಮುನಿಸಿನೊಳು || ||೨೦೧||

ಬಿಟ್ಟ ಶರಂಗಳನು | ತುಂಡಿಸಿ ಕಲ್ಲು | ಬೆಟ್ಟ ವೃಕ್ಷಂಗಳನು ||
ಇಟ್ಟಡೆ ಶಿರಕೆ ಕಂಗೆಟ್ಟು ಮೂರ್ಛಿತನಾಗಿ | ಸೃಷ್ಟಿಯೊಳೊರಗಿದನು || ||೨೦೨||

**ಕಂದ**

ಖಳ ಮೂರ್ಛೆಯನಾಂತಿರಲಾ
ತಿಳುಹುತ ನಲು ಧೈರ್ಯದಿಂದಲಾ ಅಂಜನೆಯಂ
ನಿಳಯಕೆ ಕೇಸರಿಯಂ ಜತೆ
ಗೊಳಿಸುತ ಮರಳಿಸಲಿಕೆದ್ದು ದುರುಳಂ ಪೇಳ್ದಂ || ||೨೦೩||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಮೆಚ್ಚಿದೆ ನಿನ್ನ ಸತ್ವಕೆ |
ಗೆಲಿದೆನೆನುತಲಿ ಹಿಗ್ಗದಿರು ರಣ |
ಕಳುಕುವೆನೆ ನಾ ತೋರಿಸೈ ಕೈ | ಚಳಕವೆಂದ || ||೨೦೪||

ಪ್ರಾಣಮಾತ್ರದಿ ಬಿಟ್ಟೆನೊಮ್ಮೆಗೆ |
ಜಾಣತನ ನುಡಿಯದಿರು ನಿನ್ನಯ |
ಸ್ಥಾನ ಸೇರುತ ಬಾಳು ಎನ್ನಯ | ಧ್ಯಾನದಿಂದ || ||೨೦೫||

ವೀರರಿಗೆ ಜಯವಪಜಯಂಗಳು |
ಸೇರುವಂದವು ಸಹಜ ಹಗೆಯಿದು |
ತೀರದೈ ಓರುವನ ಪ್ರಾಣವ | ಹೀರುವನಕ || ||೨೦೬||

ಒಳ್ಳಿತಾದುದು ನಿನ್ನೆಣಿಕೆಯೆ |
ನ್ನಲ್ಲಿ ಬಲ ತೋರೆನುತ ಬಲು ಬಗೆ |
ಯಲ್ಲಿ ಸೆಣಸಲು ದಣಿದ ಖಳ ರಣ | ಮಲ್ಲನಿದಿರು || ||೨೦೭||

**ವಾರ್ಧಕ**

ಸತ್ತ್ವವಂತನು ಇವನ ಗೆಲಲು ಯತ್ನದೊಳೊಂದು
ಕತ್ತಲೆಯ ಠಾಣದಲಿ ಹೀರುವೆನು ಪ್ರಾಣವೆ
ನ್ನುತ್ತ ಸುಳಿ ಸುಳಿದು ಹಿಂದೈದಿ ಪೊಕ್ಕನು ಮಹಾ ಗುಹೆವೊಂದ ತಿಳಿವುತದನು |
ಎತ್ತ ಪೋದರು ನಿನ್ನ ಬಿಡೆನೆನುತಲಾ ವಾಲಿ
ಒತ್ತಿನವಗೆಂದು ದುಷ್ಟನ ಸದೆದು ಬರುವನಕ
ನಿತ್ತುಕೊಂಡೆಚ್ಚರದೊಳಿರು ಓಡದಂದದಿಂದೆನುತುಸುರಿ ಒಳಪೊಕ್ಕನು || ||೨೦೮||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ಆತನೊಳ್ ಕೆಲಕಾಲ ಸೆಣಸಿ ಕೆಡಹಿ ನಾನಾ |
ರೀತಿಯಿಂ ಹಿಂಸಿಸುತಿರಲು ||
ಹಾ ತಮ್ಮ ಸುಗ್ರೀವ ಉಳಿವಿಲ್ಲವೆನ್ನುತ |
ಯಾತುಧಾನನು ಪ್ರಾಣ ಬಿಡಲು || ||೨೦೯||

ಈ ತೆರ ದುರ್ನುಡಿಯಾಲಿಸುತಲಿ ಭಾನು |
ಜಾತ ದುಃಖಿಸಿದನಗ್ರಜನ ||
ಘಾತಿಸಿದನೆ ತಂತ್ರದಿಂದ ಗುಹೆಯ ಒಳ |
ಗ್ಯಾತಕೈದಿದ ದುಷ್ಟನೊಡನೆ || ||೨೧೦||

ಮೇಲುವರಿಯೆ ಕ್ಷಣ ಕಾಲವಾದರು ಎನ್ನ |
ಬಾಳಲು ಬಿಡನೆಂದು ಜವದಿ ||
ಕೀಳುತ ಗಿರಿಯಿಂದ ಬಿಲದ್ವಾರ ಬಂಧಿಸು |
ತಾಲಯಕೈದೆಲ್ಲರ್ಗುಸುರಿ || ||೨೧೧||

ಚಿಂತೆಯೊಳಿರ್ಪರ ಸಂತವಿಸುತ್ತಲಾ |
ನಂತರ ಸಂಸ್ಕಾರ ನಡೆಸಿ ||
ಕಾಂತೆ ರುಮೆಯು ತಾರೆ ಸಹಿತಾತನಧಿಕಾರ |
ವಂ ತಾನು ನಡುಸುತಲಿರ್ದ || ||೨೧೨||

**ರಾಗ ಮಾರವಿ ಏಕತಾಳ**

ರಣವೆಸಗುತ ಬಲು | ದಣಿದ ವಾಲಿ ಕೆಲ |
ದಿನ ಸಂದರು ತಿಳಿ | ಯನು ಕತ್ತಲೆಯಲಿ |
ತನು ಮುರಿದೆದ್ದಾ | ಕ್ಷಣ ಮೇಲ್ವರಿಯುವೆ |
ನೆನುತಲಿರದೆ ಪಥ | ವನ್ನರಸುತ್ತಲೆ | ಸುತ್ತುತಿರ್ದ || ||೨೧೩||

ಬಳಲಿದುದಲ್ಲದೆ | ಇಳೆಗೈದುವ ಬಗೆ |
ತಿಳಿಯದಾಗಲಾ | ಮುಳಿಸಿಂದಲೆ ಸಿರ |
ಗಳನೋಲ್ ಕನಲುತ | ತುಳಿಯಲೊಂದು ಕಡೆ |
ಯೊಳು ಭರದಲಿ ಗಿರಿ | ಕಳಚಿದುದಾ ಕ್ಷಣ | ದ್ವಾರಮಾಗೆ || ||೨೧೪||

**ವಾರ್ಧಕ**

ಶರಧಿಯಿಂದೇಳ್ವ ವಡಬಾಗ್ನಿಯಂದದೊಳಾತ
ಪೊರಮಡುತಲೊಂದು ನೆಗೆತದಲಿ ಮಂದಿರದ ಬಳಿ
ಸರಿದು ತಾರೆ ರುಮೆಯರೊಡನಾನಂದದಿಂದಿನಜನಿರುತಿರಲ್ಕೆ |
ಉರಿವ ಪಾವಕಗೆ ಘೃತ ಸುರಿದಂತೆ ಖಾತಿ ಮೇ
ಲ್ವರಿಯೆ ವಿಷ್ಟರದೊಳಿಹ ತರಣಿತನಯಗೆ ಒದ್ದು
ಧರೆಗೆ ಕೆಡಹುತ ಭಂಗ ಬರಿಸೆ ತಡೆದರ ಜರೆದು ಸುಗ್ರೀವಗಿಂತೆಂದನು || ||೨೧೫||

**ರಾಗ ಮಾರವಿ ಏಕತಾಳ**

ಕುಲಕಂಟಕಿ ಎನ್ನಳಿವಿಗೆ ಯತ್ನಂ | ಗಳ ಯೋಚಿಸಿ ಕಡೆಗೆ ||
ಖಳನ ವಧೆಗೆ ಗುಹೆಯೊಳ ಪೊಗೆ ಪೊರಡದ | ಕೆಲಸಗೈದೆಯಧಮ || ||೨೧೬||

ಅನುಜನೆನುತಲನುದಿನ ಪ್ರೀತಿಯೊಳಿರೆ | ಕೆಣಕಲಂಜಿ ಗಜವ ||
ಕುಣಿಯೊಳು ಕೆಡಹಿಪುದನು ತಿಳಿದೆಸಗಿದೆ | ದಿನ ಕಡೆಯಿದು ನಿನಗೆ || ||೨೧೭||

ಭೇದವ ಸ್ವಪ್ನದೊಳಾದರೆಣಿಸದಾ | ರಾಧಿಸುವೆನು ನಿನ್ನ ||
ಕ್ರೋಧವಿದೇಕೆ ವಿರೋಧಿಯೆ ಎನ್ನೊಡ | ನಾದರವಿರಿಸಣ್ಣ || || ೨೧೮||

**ರಾಗ ಕೇತಾರಗೌಳ ಝಂಪೆತಾಳ**

ತುಸು ಮಾತ್ರ ಕರುಣವಿರಲು | ಗುಹೆಯ ಬಂ |
ಧಿಸುತ ಬಂದತಿ ಸುಖದೊಳು ||
ವಸುಧೆಗಧಿಕಾರಿಯೆನುತ | ನೆಲಸುವೆಯ |
ಶಶಿಮುಖಿಯರೊಡನೆ ಧೂರ್ತ || ||೨೧೯||

ಹಾ ತಮ್ಮ ಖಳನಿಂದಲಿ | ಕಡೆಯೆನುವ |
ಮಾತಾಲಿಸುತ ಭಯದಲಿ ||
ಆತ ಬರಲುಳಿಸನೆಂದು | ಇನಿತೆಸರಿ |
ನಾ ತಳುವ ಗೈದೆನಂದು || ||೨೨೦||

ತನುವಿನಾಸೆಯೊಳು ಓಡಿ | ಬಂದೆನ್ನೊ |
ಳಿನಿತು ಬೋಧಿಪೆಯ ಹೇಡಿ ||
ಕ್ಷಣಕಾಲ ಬಾಳಗೊಡೆನು | ಎಂದುಸುರಿ
ಕನಲುತವನೆಡೆಗೈದನು || ||೧೧೧||

**ವಾರ್ಧಕ**

ಆ ಸಮಯದಲಿ ಜಾಂಬವಾದಿಗಳು ಬೋಧಿಸಲು
ವಾಸವಾತ್ಮಜ ಜರೆಯೆ ಇರಗೊಡೆನು ಎಂದಿನಜ
ಸೂಸಿ ಕಂಬನಿಯ ಪೇಳಿದ ನಿನ್ನ ಮನಕೆ ಹಿತವಿಲ್ಲದಿರೆ ನಿಲೆನು ಮನದ |
ರೋಷ ಬಿಡು ಪೋಪೆ ಸತಿ ರುಮೆಯ ಕಳುಹಿಸು ನೀನು
ಲೇಸಾಗಿ ಅಧಿಕಾರ ನಡೆಸೆನಲು ಷಂಡ ನಿನ
ಗಾ ಸುದತಿ ಏಕೆಂದು ಜರೆದು ದಂಡಿಸುತಿರಲು ಓಡಿದಂ ಭೀತಿಯಿಂದ || ||೧೧೧||

**ಆರ್ಯ ಸವಾಯ್**

ಪ್ರಾಣದೊಳುಳಿದರೆ ಮಾನಿನಿಗೋಸುಗ | ತಾನ್ಯೆತಹೆ ತೀರ್ಚುವೆನೆನುತ ||
ಭಾನುಸುತನ ಬೆನ್ನಟ್ಟಲು ಹಲವೆಡೆ | ತಾ ನಡೆವುತ ಬಳಲಿದನಾತ || ||೧೧೩||

ಕಾಣದೆ ಠಾವನು ಸಾರಿದ ಗುಪ್ತದೊ | ಳಾ ನಳಿನಾಪ್ತನ ಬಳಿಗಂದು ||
ತಾ ನಿಲಿಸಿದನು ಕಲಾಂಜಲಿಯೊಳಗವ | ಹಾನಿಯಪ್ಪ ಕಿರಣದೊಳೆಂದು || ||೧೧೪||

**ಕಂದ**

ಬಾರನು ತಾನಿಹ ಠಾವಿಗೆ
ಸಾರುತ್ತಲಿ ವೈರವಾಂತು ಹರನಂ ಸೇರ್ದರು |
ತೀರಿಸದುಳಿಯನೆನುತ್ತವ
ಭೋರನೆ ಮಂದಿರಕೆ ಸಾರ್ದು ಸುಖದಿಂದಿರ್ದಂ || ||೧೧೫||

**ರಾಗ ಕಾಂಭೋಜಿ ಝಂಪೆತಾಳ**

ಇತ್ತ ದುಂದುಭಿ ಸಭೆಯೊಳಿರೆ ಗುಪ್ತಚರರು ತವ |
ಪುತ್ರ ಸುರರಂ ಸದೆದನೆನಲು ||
ಮತ್ತೋರ್ವ ಬಂದು ಪೇಳಿದ ಪಗೆಗಳಾತನಂ |
ಪೃಥ್ವಿಯಲಿ ಸದೆದಿರ್ಪರೆಂದು || ||೧೧೬||

ಕೇಳಿ ಕನಲುತಲೆಂದು ಭೂಲೋಕದೊಳಗೆನ್ನ |
ಬಾಲಕನ ಗೆಲುವರಾರಿಲ್ಲ ||
ಕೀಳರಾ ಸುರರೆಮ್ಮ ಪಾಳಯವ ಸದೆದು ದಿವ |
ವಾಳುತ್ತಲಿಹರು ವೈಭವದಿ || ||೧೧೭||

ಎನ್ನ ಸೌಭಾಗ್ಯನಿಧಿ ಪೂರ್ಣ ಬಲಯುತ ಕೋಟಿ |
ಮನ್ಮಥರ ಧಿಕ್ಕರಿಪ ರೂಪ ||
ಬಣ್ಣಿಸಲಿಕಳವಲ್ಲ ಗುಣಗಳಾತಗೆ ಮೃತ್ಯು |
ವನ್ನೊದಗಿಸಿದರೆ ಅಕಟಕಟ || ||೧೧೮||

ಪಡೆದ ಪಿತನನು ಮೊದಲೆ ಮಡುಹಿದರು ಮೂಲ ಬೇ |
ರ್ಕಡಿದರೇ ಇಂದು ತಂತ್ರದಲಿ ||
ಬಡ ತ್ರಿದಶರಾತನನು ಪೊಡವಿಗಿಳಿಸುತಲಿ ಸದೆ |
ಬಡಿದರೇ ಒಡಲುರಿವುದಕಟ || ||೧೧೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುತಗೆ ಬಲು ವಿಧ ಕೃತಕ ನಡೆಸುತ |
ಮೃತಿಗೆ ಕಾರಣನಾದ ನಿರ್ಜರ |
ಪತಿಯ ಶಿಕ್ಷಿಸದುಳಿದರೇನ್ಫಲ | ಕ್ಷಿತಿಯೊಳಾನು || ||೧೨೦||

ಖಂಡ ಪರಶುವಿನೆಡೆಯೊ ವಿಧಿಯ ಕ |
ಮಂಡಲವೊ ಎಲ್ಲಡಗಿ ಕುಳಿತರು |
ದಂಡಿಸದೆ ನಾ ಬಿಟ್ಟೆನಾದರೆ | ಗಂಡುಸಲ್ಲ || ||೧೨೧||

ಎಂದು ಶಪಥವ ನುಡಿದು ಸೇನಾ |
ವೃಂದ ಸಹ ತೆರಳುತಲಿ ಸುರರನು ||
ಹಿಂದಿರಿಸಿ ಇಂದ್ರನನು ತಡೆಯುತ | ಲೆಂದ ಮುಳಿದು || ||೧೨೧||

**ರಾಗ ಭೈರವಿ ಏಕತಾಳ**

ಘಡ ಸುರಪತಿ ಇಂದಿನಲಿ | ಧುರ | ತೊಡಗೈ ಎನ್ನಿದಿರಿನಲಿ ||
ನಡೆಸುತ ದುಷ್ಕೃತ್ಯವನು | ಇ | ನ್ನಡಗಲು ನಾನೆಡೆಗೊಡೆನು || ||೧೨೨||

ನಡನಡುಗುತ ಪೇಳಿದನು | ನಾ | ನಡೆಸಿದ ದ್ರೋಹಗಳೇನು ||
ಬಿಡು ಕ್ರೋಧಗಳಿನ್ನೇಕೆ | ಕೈ | ತುಡುಕದೆ ಸಲಹು ಪರಾಕೆ || ||೧೨೪||

ಎಲ್ಲವರರಿತಿಹರದನು | ಹಗೆ | ಇಲ್ಲದೆ ಸುಕುಮಾರನನು ||
ಕೊಲ್ಲಿಸಿ ಬಾಳ್ವೆಯ ಅಧಮ | ನಿ | ನ್ನಲ್ಲಿ ಇನ್ನೇತರ ಪ್ರೇಮ || ||೧೩೫||

**ವಾರ್ಧಕ**

ಎನಲೆಂದನಕಟ ಮಡಿದನೆ ವೀರನಳಿವಿಂಗೆ
ಕಿನಿಸ್ಯಾತಕೆನ್ನೊಡನೆ ಇಲ್ಲಿ ಗೈತರೆ ತಿಳಿದು
ಘನತರೋತ್ಸವದಿಂದ ಕರೆತಂದು ಕುಳ್ಳಿರಿಸಿ ಮನ್ನಿಸಿದೆ ಬಲು ವಿಧದಲಿ |
ಮನದಿ ಸಂತಸವಾಂತು ಭೂತಳಕ್ಕೈದಿಹಂ
ಹನನಗೈದವರಾರು ನಾಲ್ದೆಸೆಯ ಪರಿಕಿಸುವ
ಘನವಂತ ಹಿಮವಂತನಿಂದ ತಿಳಿದಪುದೆನಲು ಧರೆಗಿಳಿದು ತ್ವರಿತದಿಂದ || ||೧೩೬||

**ರಾಗ ಶಂಕರಾಭರಣ ಮಟ್ಟೆತಾಳ**

ಗಿರಿಯ ಬಳಿಗೆ ತೆರಳಿ ಪೇಳ್ದ ಎನ್ನ ತರಳನ
ಹರಣಗೊಂಡರಾರು ಅರುಹೆನಲ್ಕೆ ವರುಣನ ||
ಪರಿಕಿಸಿದರೆ ಖಚಿತವಪ್ಪುದೆನಲು ತ್ವರಿತದಿ ||
ಶರಧಿರಾಜನೊಡನೆ ಕೇಳೆ ನುಡಿದ ದೈನ್ಯದಿ || ||೧೩೭||

ತರಣಿ ಬಲ್ಲನೆನಲು ಪೋಗೆ ದಿನಪನೆಂದನು ||
ಬರವನರಿತೆ ವಾಲಿ ಸದೆದು ಎನ್ನ ಸುತನನು ||
ಇರಲು ಬಿಡದೆ ಪೊರಡಿಸುತ್ತ ಸತಿಯನಾಳ್ವನು |
ತ್ವರಿಯದಿಂದ ತೆರಳಿ ವಧಿಸು ಹಗೆಯನೆಂದನು || ||೧೩೮||

**ಭಾಮಿನಿ**

ಲಾಲಿಸುತಲಾ ನುಡಿಯ ಕಲ್ಪದ
ಕಾಲಭೈರವನಂತೆ ಕನಲುತ
ವಾಲಿಯಂ ಬಿಡೆನೆಂದು ಕಿಷ್ಕಿಂಧೆಯ ಪುರಕೆ ಬರಲು |
ಓಲಗದೊಳವನಿರಲು ನಡೆದಾ
ಖೂಳನೊದೆಯುತ್ತಿರಲು ಗಣಿಸದೆ
ಬಾಲೆಯರ ಸಂತೈಸಿ ಸುರಪಕುಮಾರ ಖಳಗೆಂದ || ||೧೩೯||

**ರಾಗ ಭೈರವಿ ಏಕತಾಳ**

ಮರುಳನೊ ಮೂರ್ಖನೊ ನೀನು | ಮೃತಿ | ಯರಸುತ ಬಂದೆಯೊ ಇನ್ನು ||
ಮರಳಿ ಪೋಗಿ ಮಂದಿರದಿ | ಬಾ | ಳಿರು ಕೆಲ ದಿನ ಬಲು ಸುಖದಿ || ||೧೪೦||

ಮತಿಗೆಡುಕರ ಗುರು ನಿನಗೆ | ಮಮ | ಸುತನಂ ತರಿದಿಹ ಬಗೆಗೆ ||
ಮಥಿಸಿ ಹಗೆಯ ತೀರ್ಚದಿರೆ | ಜನ | ತತಿ ನಿಂದಿಸದುಳಿಯುವುದೆ || ||೧೪೧||

ಅರಿಯೆಯ ಎನ್ನನುಜೆಯಳ | ಮೇಲ್ | ಕರವಿಕ್ಕಿದನಾ ಖೂಳ ||
ಮರಣ ಒದಗಿತದರಿಂದ | ನೀ | ನರಿಯೆ ತೊಲಗಿ ಬಾಳೆಂದ || ||೧೪೨||

**ರಾಗ ಭೈರವಿ ಅಷ್ಟತಾಳ**

ಆರೊಡನೊರೆವೆ ನೀನು | ಸುವ್ರತೆಯ ವಿ | ಚಾರವ ಬಲ್ಲೆ ನಾನು ||
ಮಾರುತನಾಕೆಯ ಸೇರಿ ಪುಟ್ಟಿರುವ ಕು | ಮಾರಕನೆಂಬುದನು || ||೧೪೩||

ಈರೇಳು ಭುವನದೊಳು | ಪ್ರಾಣಾಧಾರ | ಮಾರುತನಾಗಿರಲು ||
ಕ್ರೂರ ನೀನರಿತರೆ ಓರ್ವಳ ವ್ರತಕೆಟ್ಟ | ಕಾರಣವೇನು ಪೇಳು || ||೧೪೪||

ಕೀಳು ವಾನರ ಕುಲಕೆ | ಸದ್ಧರ್ಮದ | ಶೀಲ ತಿಳಿಯದದಕೆ ||
ಕಾಳಗಕಿದಿರಾಗೆ ತೋಳ ಬಲ್ಪಿಂದ ಸ | ಮೂಲ ತಿಳಿಪೆ ನಿನಗೆ || ||೧೪೫||

ಎಂದೆಚ್ಚ ಶರಗಳನು | ಗಣಿಸದೆಲ್ಲ | ಇಂದ್ರಜ ಪುಡಿಗೈದನು ||
ಮಂದಮತಿಯು ಬೆದರದೆ ಮಲ್ಲಯುದ್ಧಕೆ | ನಿಂದು ಕಾದಾಡಿದನು || ||೧೪೬||

**ವಾರ್ಧಕ**

ಸೆಣಸಿದರು ಬಲು ವಿಧದಿ ಜಯ ಕಾಣದಿರಲು ಖಳ
ಮನದೊಳೆಣಿಸಿದ ಮಾಯೆಯಿಂ ಗೆಲುವೆನೆನುತಲಾ |
ಕ್ಷಣ ಬೀರಲದರಿಂದ ಪೊರಟು ನಾನಾ ಜಾತಿ ಖಗಮೃಗಗಳಿದಿರಾಗಲು |
ಗಣಿಸುವನೆ ವಾಲಿ ಪರಿಹರಿಸಲಾ ಮಧ್ಯದೊಳು
ದನುಜ ಭೀಕರ ಮಹಿಷನಾಗಿ ಮುಂಬರಿಯೆ ಮೇ
ದಿನಿಯಿಂದ ಗಗನವರೆಗಿರ್ಪ ತನು ಪರಿಕಿಸುತ ಮೂಲೋಕ ಬೆರಗಾಗಲು || ||೧೪೭||

**ರಾಗ ಭೈರವಿ ತ್ರಿವುಡೆತಾಳ**

ನಡೆದು ಬರಲಾ ಕಣದ ಮಧ್ಯಕೆ |
ಪೊಡವಿಯದುರಿತು ವಾಲಿ ಪರಿಕಿಸಿ |
ಸಿಡಿಲಿನಂತಾರ್ಭಟಿಸಿ ಮುಂಬರ |

ಲೆಡೆಗೊಡದೆ ಗಿರಿ ಕಲ್ಮರಗಳಿಂ |
ಹೊಡೆಯುತಿರಲದು ಕೆಡೆಯೆ ಧರೆಯಲಿ |
ಬಿಡದೆ ಮುಸುಕಲು ಶಿರ ನೆಗಹಲಾ |
ಪಿಡಿದು ಶೃಂಗವ ತಿರುಹಿಸಲ್ಕಾ |
ಸಿಡಿದು ರುಧಿರ ಮತಂಗನಾಶ್ರಮ |
ದೆಡೆಯೊಳಂದು | ಬೀಳಲು | ನುಡಿದನಂದು || ||೧೪೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆರ ಪುಣ್ಯಾಶ್ರಮವಿದೆಂದು ವಿ |
ಚಾರಿಸದೆ ಇಂತೆಸಗಿದಧಮರು |
ಸಾರಿದರೆ ಈ ಕಡೆಗೆ ಮಡಿಯಲಿ | ಕ್ರೂರರೆಂದು || ||೧೪೯||

ಮುನಿದು ಶಪಿಸಿದುದರಿತು ಭಾಸ್ಕರ |
ತನಯನನು ಮುನಿವರನಿಗೊಪ್ಪಿಸಿ |
ಹನುಮ ನಳ ನೀಲಾದಿಗಳ ಜತೆ | ಯನುಗೊಳಿಸಿದ || ||೧೫೦||

ಅತ್ತ ಪುರವರಕೈದಿ ಸುರಪಜ |
ಮಿತ್ರಜನ ಬಗೆಯರಿತು ಪೊರಡಲು |
ಮತ್ತೆ ಜಾಂಬವ ತಡೆದ ಶಾಪದ | ವಾರ್ತೆ ತಿಳಿಸಿ || ||೧೫೧||

**ವಾರ್ಧಕ**

ಲಾಲಿಸೈ ರಘುಕುಲಲಲಾಮ ಸಂತೋಷದಲಿ
ಪಾಲಿಸುತಲಿರಲು ಕಿಷ್ಕಿಂಧಾಧಿಪತ್ಯ ಕೆಲ
ಕಾಲದೊಳು ತಾರೆಯಲಿ ಸುಕುಮಾರನೋರ್ವ ಸಂಜನಿಸಲಾ ವೈಭವದಲಿ |
ಬಾಲನಂ ಕರೆದನಂಗದನೆನುತಲನುದಿನವು
ಕಾಲ ಸಾಧಿಸುತ ನಿತ್ಯಾಹ್ನಿಕವ ನಡೆಸಿ ಬಲ
ಶಾಲಿ ಸಚ್ಚರಿತನವ ಪ್ರತಿಭಟಭಯಂಕರಂ ತಾನೆನಿಸಿ ಮೆರೆದಿರ್ದನು || ||೧೫೨||

**ರಾಗ ಕಾಂಭೋಜಿ ಝಂಪೆತಾಳ**

ಈ ತೆರದೊಳವನಿರಲು ದಶಶಿರನು ನಿರ್ಜರರ |
ವ್ರಾತ ದೆಸಗೆಡಿಸುತಲ್ಲಿರುವ ||
ನೂತನದ ವಸ್ತು ಕೊಳುತವರ ಸೇವೆಗೆ ನಿಲಿಸಿ |
ಭೂತಾಳಾಧಿಪರ ಸದೆಬಡಿದು || ||೧೫೩||

ಹೊರಿಸುತಲಿ ಕಪ್ಪವಂ ಉರಗಾದಿಗಳ ಸೊಕ್ಕ |
ಮುರಿದು ಪರಿಪರಿಯ ವೈಭವದಿ ||
ಶರಧಿ ಮಧ್ಯದ ಲಂಕೆಯಲಿ ತ್ರಿಜಗಪತಿ ಎನುತ |
ಮೆರೆದಿರ್ದನಧಿಕ ಗರ್ವದಲಿ || ||೧೫೪||

ಜಡಜಸಖನುದಯದಲಿ ನಿತ್ಯಕರ್ಮಂಗಳಂ |
ನಡೆಸುತಲಿ ಎಂದಿನಂದದಲಿ ||
ಅಡರಿ ವೈಮಾನ ಸಂಚರಿಪೆನೆನ್ನುತ ಕರೆಸು |
ತೊಡನೆ ಒತ್ತಿನ ವಿಭೀಷಣನ || ||೧೫೫||

ಸತ್ವಪೂರಿತ ಸುಭಟ ಮೊತ್ತ ಕೂಡುತ್ತಲೆ ಪ್ರ |
ಹಸ್ತಾದಿ ಸಚಿವರೊಗ್ಗಿನಲಿ ||
ಹತ್ತಿ ಪುಷ್ಪಕ ಗಗನಪಥದಿ ಮನಬಂದಂತೆ |
ಸುತ್ತುತಿರೆ ದಿಟ್ಟಿಸಲ್ಕಿಳೆಯ || ||೧೫೬||

**ಕಂದ**

ಶರಧಿಯ ತೀರದೊಳೊಂದೆಡೆ
ಸುರಪಾತ್ಮಜ ಭಕ್ತಿಯಿಂದ ಮಿಂದರ್ಘ್ಯವನುಂ |
ಧರಿಸಿ ಕರಾಂಜಲಿಯಲಿ ದಿನ
ಕರನಂ ಧ್ಯಾನಿಸುತಲಿರ್ಪುದದ ಕಂಡೆಂದಂ || ||೧೫೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಹಹ ಕಾಲದ ಮಹಿಮೆ ಕೆಟ್ಟಿತು |
ಬಹುತರದ ವರ್ಣಾಶ್ರಮದೊಳಾ |
ಮಿಹಿರಗರ್ಘ್ಯವನೀವ ಕಟ್ಟಳೆ | ಇಹುದು ಜಗದಿ || ||೧೫೮||

ಕಾಡನಲೆಯುತ ಜೀವಿಸುವಹುಲು |
ಕೋಡಗನು ಈ ಕೃತ್ಯಗೈವುದು |
ರೂಢಿಪರ ಹೀನೈಸುವಂದವು | ಮಾಡಲೇನು || | ||೧೫೯||

ಕಾಲಕಾಲನ ಭಜಕ ಲೋಕದಿ |
ಮೇಲೆನಿಪ ಬ್ರಹ್ಮಕುಲಸಂಭವ |
ವೇಳೆ ಬಿಡದಾಹ್ನಿಕವ ನಡೆಸುವ | ಶೀಲವಂತ || ||೧೬೦||

ಕೀಳು ವಾನರರನ್ನು ಶಿಕ್ಷಿಪ |
ತೋಳ ಬಲ್ಪಿಗರಿಲ್ಲವೆನುತಲಿ |
ಪೇಳಿ ನಿಂದಿಪ ದುರ್ನುಡಿಯ ನಾ | ಕೇಳಲೆಂತು || ||೨೬೧||

**ರಾಗ ಕೇತಾರಗೌಳ ಝಂಪೆತಾಳ**

ನೀತಿಯಂ ಪೇಳ್ದರಿವಗೆ | ತಿಳಿಯುವುದೆ |
ಮಾತಿನಂತರ ಕೋತಿಗೆ ||
ಈತ ಚಂಚಲ ಮತಿಯಲಿ | ಬಾಳ್ವನೊಳು |
ನಾ ತಾಳಲೇತಕಿಲ್ಲಿ || ||೨೬೨||

ಪಿಡಿದೊಯ್ದು ಸೆರೆಮನೆಯೊಳು | ಭಂಗವಂ |
ಪಡಿಸಿದರೆ ಕೆಲದಿನದೊಳು ||
ದೃಢತೆ ಪುಟ್ಟುವದು ಮನಕೆ | ಮುನ್ನಡೆಯ |
ಗೊಡದೆ ಬಂಧಿಸುವೆ ಕ್ಷಣಕೆ || ||೨೬೩||

ಎಂದು ನಿರ್ಧರಿಸುತವನು | ಬಳಿ ಸರಿದು |
ಹಿಂದಿನಿಂ ಕರಗಳನ್ನು ||
ಇಂದ್ರಜನ ಕಂಕುಳಿನಲಿ | ತುರುಕಿಸಿದ |
ರಂದವರಿತಾಗಿ ವಾಲಿ || ||೨೬೪||

**ವಾರ್ಧಕ**

ಒತ್ತಿ ಪಿಡಿಯಲು ತೋಳುಗಳ ಬಿಡಿಸಲಾರದವ |
ಶಕ್ತಿಗುಂದುತ ತತ್ತರಿಸಲು ಬಂದಲ್ಲಿಗೆ ಪ್ರ
ಹಸ್ತಾದಿಗಳನೆ ಹಿಂದಿರಿಸಿ ದಶಶಿರನ ಕೊಂಡಾತ ನೆಗೆಯುತ ಶರಧಿಯ |
ಸುತ್ತಿ ನಾಲ್ದೆಸೆಗಳಲಿ ಮಿಂದು ಆಹ್ನಿಕವ ನಡೆ
ಸುತ್ತ ಮುನ್ನಡೆಯೆ ರಾವಣ ಬಳಲಿ ಬೆಂಡಾಗಿ |
ಗೊತ್ತಾಗದಿವಗೆ ಲಂಕಾಪುರದ ದೆಸೆಯಲ್ಲಿ ಬಿಟ್ಟು ಮುಂದ್ವರಿವೆನೆಂದು || ||೨೬೫||

**ಕಂದ**

ಸಾಗುತಲಾ ಲಂಕಾಪುರ
ಬಾಗಿಲ ಬಳಿ ಇರಿಸುತಾಗ ವಾಲಿಯು ಪೊರಡಲು |
ಪೋಗ ಬಿಡದೆ ಗರ್ವದಿ ಇದಿ |
ರಾಗುತ ಮೂದಲಿಸುತೆಂದ ಸುರಪಾತ್ಮಜಗಂ || ||೨೬೬||

**ರಾಗ ಭೈರವಿ ಅಷ್ಟತಾಳ**

ನಡೆವುದೆಲ್ಲಿಗೆ ವಾನರ | ಕಂಕುಳೊಳೆನ್ನ | ಪಿಡಿದಮರ್ಚಿದೆಯೊ ಚೋರ ||
ಬಿಡುವೆನೆ ಜೀವದಿ ನಡೆಸಿದ ಕೃತ್ಯಕೆ | ಕುಡಿಸುವೆ ಮದ್ದ ಕ್ರೂರ || ||೨೭೭||

ತಿಳಿಯದೆ ಪೋದೆ ನಾನು | ನೀನೆನ್ನ ಕಂ | ಕುಳೊಳಿರ್ಪ ಬಗೆಗಳನು ||
ಅಳಿದರೆ ಪಾತಕಗಳು ಬಪ್ಪುದೆನಗೆ ನೀ | ನುಳಿದು ತೊಲಗಿತೆಂದನು || ||೨೭೮||

ಪುಣ್ಯಪಾಪಂಗಳನು | ಬಲ್ಲಿದನಾಗೆ | ನಿನ್ನ ಸ್ವಭಾವವನು ||
ಎಣ್ಣದೆ ಭಾಸ್ಕರನನ್ನು ಧ್ಯಾನಿಸಿ ಅರ್ಘ್ಯ | ವನ್ನೀವ ನಡೆತೆಯೇನು || ||೨೭೯||

ಮೇಲು ಕೀಳೆಂಬ ವಾದ | ವ್ಯಾತಕೆ ಭಕ್ತ | ಜಾಲಕೆಲ್ಲಿಹುದು ಭೇದ ||
ಕಾಲ ಸಾಧಿಸುತನುಗಾಲ ಪೂಜಿಸುವೆ ನಾ | ಫಾಲಲೋಚನನ ಪಾದ || ||೨೮೦||

ನರರಿಗಿರುವ ಧರ್ಮವು | ಮಾಳ್ಪುದಕೆ ವಾ | ನರನಿಗೇನಧಿಕಾರವು ||
ನಿರತವಾಚರಿಸುತಲಿರುವೆಯಾದರೆ ನಾ | ವಿರಚಿಪೆ ಪರಿಹಾರವ || ||೨೮೧||

**ವಾರ್ಧಕ**

ಕಿತ್ತರೀ ಬಾಲ ವಾನರನಲ್ಲ ನರನಹೆ ಎ
ನುತ್ತ ತನ್ನವರಿಗಾಜ್ಞಾಪಿಸಿದ ಲಾಂಗೂಲ
ಕತ್ತರಿಸಿ ಹೊರತಳ್ಳಿರೆನಲು ಕೇಳುತ ಸುಭಟರೊಂದಾಗಿ ಖಾತಿಯಿಂದ |
ಸುತ್ತಮುತ್ತಲು ಮುಸುಕೆ ದೆಸೆಗೆಡಿಸೆ ದಶಶಿರನ
ಸುತ್ತಿ ವಾಲಾಗ್ರದಲಿ ಕೊಳುತೊಂದೆ ನೆಗೆತದಿಂ
ಸುತ್ರಾಮತನಯ ಕಿಷ್ಕಿಂಧೆ ಬಳಿ ತಂದಿರಿಸಿ ಮನದಿ ಯೋಚಿಸುತೆಂದನು || ||೨೮೨||

**ರಾಗ ಕಾಂಭೋಜಿ ಝಂಪೆತಾಳ**

ಹತ್ತು ಶಿರವಿದೆ ತನುವಿಗೊಂದಕ್ಕೆ ಎಣಿಕೆಗಿ |
ಪ್ಪತ್ತು ಕರ ಪರಿಕಿಪರ ಮನಕೆ ||
ಪೃಥ್ವಿಯೊಳು ಕಾಣದ ವಿಚಿತ್ರವೀ ಪ್ರಾಣಿ ಎ |
ನ್ನುತ್ತೆರಡು ದಿನ ದ್ವಾರಕಿರಿಸಿ || ||೨೮೩||

ಪುಟ್ಟ ಬಾಲಕನಧಿಕವಾಗಿ ಅಳುತಿಹನಿದನು |
ದಿಟ್ಟಿಸುತ ಸರಸ ತಾಳುವನು ||

ದೃಷ್ಟಿಯಪ್ಪುದಕೊಂದು ರಕ್ಷೆಯೆನ್ನುತ ಬಿಗಿದ |
ತೊಟ್ಟಿಲಿನ ನೇಣಿಗಾತನನು || ||೧೭೪||

ನಿತ್ಯ ಜೋಗುಳವ ಪಾಡುತ್ತ ತೂಗಲು ಬರುವ |
ಮತ್ತಕಾಶಿನಿಯರೊಂದೊಂದು ||
ತುತ್ತು ಆಹಾರವನ್ನಿತ್ತಪುದು ಎಂದಾಜ್ಞೆ |
ಇತ್ತು ಸುಖದಿಂದಿರ್ದ ಪುರದಿ || ||೧೭೫||

**ಸಾಂಗತ್ಯ ರೂಪಕತಾಳ**

ಇತ್ತಲಾ ಕೈಕಸೆ ಪುತ್ರನ ಕಾಣದ |
ಳುತ್ತಿರೆ ಪೌಲಸ್ತ್ಯನರಿತು |
ಮತ್ತೇಭಗಮನೆಯ ಸಂತೈಸಿ ಬರೆ ದಿವಿ |
ಜೋತ್ತಮನಣುಗನಿದ್ದೆಡೆಗೆ || ||೧೭೬||

ಚರಣಕಾನತನಾಗಿ ಕರೆತಂದು ಪೂಜೆಯ |
ವಿರಚಿಸಿ ಸುರಪಜ ನುಡಿದ ||
ಪರಮಪಾವನ ನಿನ್ನ ದರುಶನವಪರೂಪ |
ವರಿಯೆ ಕಾರಣವೆನಲೆಂದ || ||೧೭೭||

ತರಳ ರಾವಣನಿಲ್ಲಿ ಸೆರೆಯೊಳಿರ್ಪನು ಎಂಬು |
ದರಿತನ್ನಾಹಾರವ ತೊರೆದು ||
ಮರುಗುವಳವನವ್ವೆ ಮರೆದು ದ್ರೋಹವನು ಸ |
ತ್ಕರುಣದಿಂದೆನಗೀವುದೆನಲು || ||೧೭೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಜ್ಞಾನನಿಧಿ ಇಂತರುಹೆ ಬಿಡಿಸುತ |
ದಾನವನ ಸೆರೆಯಿಂದ ತಂದು ಕೃ |
ಶಾನುವಿನ ಸಾಕ್ಷಿಯಲಿ ಪೇಳ್ದ ದ | ಶಾನನಂಗೆ || ||೧೭೯||

ತಾನು ಪ್ರಾಣದೊಳಿರುವನಕ ನಿನ |
ಗೇನು ಕಷ್ಟಗಳೊದಗಿದರು ನಿ |
ನ್ನಾಣೆ ಹೊಣೆಯಾಗಿರುವೆನೆನುತಲೆ | ವಾನರೇಂದ್ರ || ||೧೮೦||

ಕಳುಹಲಾಗಲೆ ಬಂದು ಲಂಕಾ |
ನಿಳಯದಲಿ ದಶಕಂಠನಿರಲದ |
ತಿಳಿದು ಸುರಪತಿ ಸುತಗೆ ಎಚ್ಚರ | ಗೊಳಿಸಿ ತೆರಳಿ || ||೨೮೧||

ಸರಸದಿಂದಿರೆ ಮೊಳಗೆ ದುಂದುಭಿ |
ತರುಣಿಯರು ಆರತಿಯ ಬೆಳಗಲು |
ಧರೆಗೆ ಮಂಗಲವೆನುತ ಪೂಮಳೆ | ಸುರಿದುದಾಗ || ||೨೮೨||

**ವಾರ್ಧಕ**

ಸಲಿಲಜಾಪ್ತನ ಕುಲಲಲಾಮ ರಾಮಂಗೆ ಮುನಿ
ತಿಲಕ ಕುಂಭಜನೆಂದ ರಾಮಾಯಣಾಮೃತದ
ಜಲಧಿಯೊಳಗೊಂದು ಬಿಂದುವ ಬಣ್ಣಿಪನ ತೆರದಿ ಯಕ್ಷಗಾನದೊಳಿದರನು |
ಬಲಿಪ ನಾರಾಯಣಂ ಭಾಗವತಜನಶರಣ
ತಿಳಿದಂತೆ ರಚಿಸಿದುದ ಪೇಳಿ ಕೇಳುವ ಜನರಿ
ಗೊಲಿದು ಮನದಿಷ್ಟಾರ್ಥ ಕರುಣದಿಂ ಪಾಲಿಸುವ ಕಣ್ವಪುರ ಶ್ರೀಕೃಷ್ಣನು || ||೨೮೩||

**|| ವಾನರಾಭ್ಯುದಯ ಪ್ರಸಂಗ ಮುಗಿದುದು ||**

## ೧. ಪುತ್ರಕಾಮೇಷ್ಟಿ - ಸೀತಾಸ್ವಯಂವರ - ಪಾತ್ರಗಳು

ದಶರಥ
ಕೈಕೇಯಿ
ಶಂಬರಾಸುರ
ಸಂಪಾತಿ
ಚೌಡಲ್ಯ
ತಾಯಿ-ತಂದೆ
ವಸಿಷ್ಠ
ಸುಮಂತ್ರ
ಋಷ್ಯಶೃಂಗ
ಕೌಸಲ್ಯೆ
ಸುಮಿತ್ರೆ
ರಾಮ

ಲಕ್ಷ್ಮಣ
ಭರತ
ಶತ್ರುಘ್ನ
ವಿಶ್ವಾಮಿತ್ರ
ತಾಟಕಿ
ಸುಬಾಹು
ಮಾರೀಚ
ಕಪಟದ್ವಿಜ
ಜನಕಮಹಾರಾಜ
ಸೀತೆ
ಅಹಲ್ಯೆ
ಗೌತಮ
ದೇಶಾಧಿಪರು
ರಾವಣ
ವಧುಗಳು
ಮಂಥರೆ
ವಿಪ್ರರು
ಪರಶುರಾಮ
ದೂತರು
ಚಾರಕರು

**ಮಾಲಿನೀ ವೃತ್ತ**

ಮದಗಜವದನಂ ತಂ ವಿಘ್ನವಿಚ್ಛೇದದಕ್ಷಂ
ಸರಸಿಜಭವಜಾಯಾಂ ಭಾರತೀಂ ಸೋಮಮಿಶಂ |
ನಿಶಿಚರಕುಲಕಾಲಂ ರಾಘವಂ (ಜಾನಕೀಂ ಚ) ಜಾನಕೀಶಂ
ಪ್ರತಿದಿನಮತಿಭಕ್ತ್ಯಾ ನೌಮಿ ವಾಲ್ಮೀಕಿಮಾರ್ಯಂ || ||೧||

**ಶಾರ್ದೂಲವಿಕ್ರೀಡಿತ**

ಪ್ರಾಪ್ತಾನಂತಘನಶ್ರಿಯಃ ಪ್ರಿಯತಮಶ್ರೀರೋಹಿಣೀಜನ್ಮನೋ
ವಂಚಿಕ್ಷ್ಮಾವರ ವೀರಕೇರಳವಿಭೋಃ ರಾಜ್ಞಃ ಸ್ವಸೋಃ ಸೂನುನಾ |
ಶಿಷ್ಯೇಣ ಪ್ರವರೇಣ ಶಂಕರಕವೇಃ ರಾಮಾಯಣಂ ವರ್ಣ್ಯತೇ
ಕಾರುಣ್ಯೇನ ಕಥಾಗುಣೇನ ಕವಯಃ ಕುರ್ವಂತು ತಾಂ ಕರ್ಣಯೋಃ || ||೨||

**ರಾಗ ನಾಟಿ ಝಂಪೆತಾಳ**

ಜಯತು ಗೌರಿಯ ಕುವರ | ಜಯ ಸಕಲ ವಿಘ್ನಹರ |
ಜಯ ಸುಜನ ಮಂದಾರ | ಜಯ ಸುರೋದ್ಧಾರ || || ಪ ||

ಕಮನೀಯ ಗುಣರಾಜ | ಕಂಜಬಾಂಧವತೇಜ |
ಕುಮುದಕುಟ್ಮಲದಂತ | ಕುಂದಧವಿಯಂಥ |
ರಮಣೀಯಕರರೂಪ | ರಕ್ಷಿಸೆನ್ನನು ಗಣಪ |
ನಮಿಪೆನಾ ಬಲಬಂದು | ಹೇ ದಯಾಸಿಂಧು || ||೩||

ಬಾಲೇಂದುಶೇಖರಾ | ಬಲುದುರಿತಸಂಹಾರ |
ಮೂಲೋಕಸಂಚಾರ | ಮುನಿಜನೋದ್ಧಾರ |
ನೀಲಾಚಲೋತ್ತುಂಗ | ನಿಖಿಲದೇವಾಸಂಗ |
ಪಾಲಿಸೋ ಮಂಗಲವ | ಪರಮಗುರುಜನವ || ||೪||

ವರವೀವ ಧಾತಾರ | ವಾರ್ಧಿಸಮಗಂಭೀರ |
ಮೆರೆವ ಮೋಹನಕಾಯ | ಮೋದಕಪ್ರೀಯ |
ಸುರಪಾಲಕನ ರಕ್ಷ | ಸಕಲದೇವಾಧ್ಯಕ್ಷ |
ವರದ ಮಧುಪುರವಾಸ | ಶರಣು ವಿಘ್ನೇಶ || ||೫||

**ಕಂದ**

ಗಜವದನ ಗೌರಿ ಶಾರದೆ
ಅಜಹರಿ ಶಿವರಂಫ್ರಿಯುಗಳಕಭಿವಂದಿಸುತ |
ಸುಜನಂ ವಾಲ್ಮಿಕ ಮುನಿಪನ
ಭಜಿಸುತ ರಾಮಾಯಣವನು ಪೇಳುವೆ ಮುದದಿ || ||೬||

**ದ್ವಿಪದಿ**

ಪರಶಿವನ ಪಾದಕ್ಕೆ ಪೊಡಮಟ್ಟು ನಿಂದು |
ಗಿರಿಜೆ ಹರಿಕಥೆಗಧಿಕವಾವುದೆನಲಂದು || ||೭||

ರಾಮಾಯಣಾಮೃತವು ರಮಣೀಯಕರವು |
ಭಾಮಿನೀಮಣಿ ಕೇಳು ಬಹುಸೌಖ್ಯಕರವು || ||೮||

ಎನಲಾಗಿ ಈ ಕಥೆಯ ಎನಗೆ ಪೇಳೆನಲು |
ಘನಮಹಿಮ ರಾಮಾಯಣವನೊರೆಯುತಿರಲು || ||೯||

ಇತ್ತ ಬದರಿಯೊಳೋರ್ವ ಚೋರ ವ್ಯಾಧಂಗೆ |
ಉತ್ತಮಶ್ಲೋಕ ಮುನಿವರರ ದಯವಾಗೆ || ||೧೦||

ಪರಮತಪಸಿಗೆ ಮೆಚ್ಚಿ ಪರಮೇಷ್ಠಿ ಬಂದು |
ಕರುಣಿಸಲು ವಾಲ್ಮೀಕಿ ಋಷಿಯಾದನೆಂದು || ||೧೧||

ವರಕ್ರೌಂಚಪಕ್ಷಿಯನು ಕಂಡು ಚಿಂತಿಸುತ |
ಇರುತಿರಲು ಸುರಮುನಿಪ ನಾರದನು ಬರುತ || ||೧೨||

ನಾರದನ ಚರಣಕ್ಕೆ ನಮಿಸಿ ನಿಂದಿರುವ |
ನೀರೇರುವಾಲಿಗಳ ವಾಲ್ಮಿಕನ ಕರವ || ||೧೩||

ಪಿಡಿದು ರಜತಾದ್ರಿಯೊಳು ಪಾರ್ವತಿಗೆ ಪ್ರಿಯದಿ |
ಮೃಡನುಸುರ್ದ ರಾಮಾಯಣವ ಪೇಳ್ದ ಮುದದಿ || ||೧೪||

ಕೇಳಿ ವಾಲ್ಮೀಕಿ ಮುನಿ ಕುಶಲವರಿಗಂದು |
ಪೇಳ್ವ ಮನವಾಗಿರಲು ಬಾಲಕರು ಬಂದು || ||೧೫||

ನಮ್ಮ ಪೂರ್ವಜರೆಂತು ಜನಿಸಿದರು ಜೀಯ |
ಎಮ್ಮನರುಹೆನೆ ಪೇಳ್ದನಾಗ ಮುನಿರಾಯ || ||೧೬||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಬ್ರಹ್ಮನಿಂದ ಮರೀಚಿ ಕಶ್ಯಪ |
ಸೂರ್ಯ ಮನುವಾ ಕುಕ್ಷಿಯು |
ಧರ್ಮಯುತನು ವಿಕುಕ್ಷಿ ಇಕ್ಷ್ವಾಕು |
ಕುಲದಿ ರಾಯರಘೂತ್ತಮ | ರಾಮಕೇಳು || ||೧೭||

ಅಜಕುಮಾರ ಸುಧೀರಮಂಗಲ |
ತ್ರಿಜಗರಕ್ಷಕನೆನಿಸುತ |
ಸುಜನವಂದಿತನಾದ ದಶರಥ |
ನೃಪತಿಲಕನೆಸೆದಿರ್ದನು | ಸುಂದರಾಂಗ || ||೧೮||

ಭಾಸುರಾಂಗದ ದಶರಥೇಂದ್ರಗೆ |
ಕೌಸಲ್ಯಾ ಸ್ತ್ರೀರತ್ನವ |
ಆ ಸುಮಿತ್ರೆಯ ಕೈಕಾದೇವಿಯ |
ನೀಶ ಮದುವೆಯ ರಚಿಸಿದ | ಚಂದದಿಂದ || ||೧೯||

ಒಂದು ದಿನದಿ ಸುಮಂತ್ರ ಕೌಸಲೇ |
ಇಂದೀವರಾಕ್ಷಿ ಸುಮಿತ್ರೆಯೂ |
ಮಂದಗಮನದ ಕೈಕೆ ಸಹಿತಾ |
ನಂದದಿಂದಲಿ ಬಂದನು | ದಶರಥೇಂದ್ರ || ||೨೦||

**ಮತ್ತೇಭವಿಕ್ರೀಡಿತ**

ಇನವಂಶಾಬ್ಧಿ ಅಯೋಧ್ಯೆಯೊಳ್ ದಶರಥಂ ಒಡ್ಡೋಲಗಂಗೊಟ್ಟು ತಾ
ಮನಕಂದುತ್ತ ಸುಮಂತ್ರ ಮಂತ್ರಿಮುಖಮಂ ನೋಡುತ್ತಲಿರ್ಪಾಗಳಾ |
ಅನುವಿಂ ಬಂದ ವಸಿಷ್ಠರಿಂಗೆರಗುತಾ ಮಾತಾಡುವಾ ಭಕ್ತಿಯಿಂ
ಜನಪಾಲಾಗ್ರಣಿ ತನ್ನ ಕಾರ್ಯದಿರವಂ ಪೇಳುತ್ತಲಿಂತೆಂದನು || ||೨೧||

**ರಾಗ ಘಂಟಾವರ ಝಂಪೆತಾಳ**

ವರಮುನೀಶ್ವರದೇವ | ಪರಮಗುರುವೆ | || ಪ ||

ಪರಮೇಷ್ಠಿಯ ಕುವರ | ಎನ್ನ ರಕ್ಷಿಸು ತಂದೆ |
ಕರವ ಮುಗಿಯುವೆನೊಂದು | ಮಾತನೀ ಕೇಳು || ||೨೨||

ಸಕಲನೃಪಶೇಖರ | ಕೋಸಲಪತೇ | || ಪ ||

ಹೇಳೆನ್ನ ಭೂಪಾಲ | ನಿನ್ನಮನದಿರವ ಸುರ |
ಪಾಲನಿಗೆ ಸಮಧೀರ | ಭೂಲೋಕತಿಲಕ || ||೨೩||

ಮಕ್ಕಳಿಲ್ಲದರಿಂದ | ಮಾನಸದೊಳಿಂದು ನಾ |
ಕಕ್ಕುಲಿತೆಗೊಳುತ ಬಲು | ದುಃಖಿಸುವೆನಯ್ಯ || ||೨೪||

ಅಶ್ವಮೇಧವ ರಚಿಸಿ | ಅಮರಕುಲಗಳಿಗೆಲ್ಲ |
ಐಶ್ವರ್ಯ ಮಾಡಿದರೆ | ಆಗದೇನಯ್ಯ || ||೨೫||

ಅರಿತೆ ನಿನ್ನಯ ಮನವ | ಧರಣಿಪಾಲಾಗ್ರಣಿಯೆ |
ತರಿಸು ಬೇಕಾದುದನು | ತಡವಮಾಡದಿರು || ||೨೬||

ತುರಗಮಂ ಬಿಡುನೃಪತಿ | ದೀಕ್ಷೆಯಂ ಆಚರಿಸು |
ಹರಿಣಾಕ್ಷಿಯರ ಸಹಿತ | ನಾಗಿ ತೊಡಗಯ್ಯ || ||೧೭||

**ಕಂದ**

ಇಂತೆಂದಾ ಮುನಿ ಪೇಳಲ್
ಸಂತೋಷದಿ ಮುನಿಗಳೊಡನೆ ಕರಕೊಳುತಾಗ |
ಮಂತ್ರಿ ಸುಮಂತ್ರನ ಕರಪಿಡಿ
ದಂತಸ್ಥದ ಭವನದೆಡೆಗೆ ನರಪತಿ ಬಂದಂ || ||೧೮||

**ರಾಗ ತೋಡಿ ಏಕತಾಳ**

ವಾರಿಜಗಂಧಿ ವಯ್ಯಾರೆ | ನೀರೆ ಮೊಗವ ತೋರೆ |
ಮಾರನ ಮದ್ದಾನೆ ಎನ್ನ | ಮಾನಿನಿ ಕೌಸಲ್ಯೆ || ||೧೯||

ಪುತ್ರರಿಲ್ಲವೆಂದು ಬಲು | ಚಿಂತೆಯಿಂದ ಕಮಲ |
ಪುತ್ರಜಾತಂಗೆ ನಾಪೇಳೆ | ಮಖವ ನೀ ಮಾಡೆಂದ || ||೨೦||

ಒಳ್ಳಿತಾಯಿತು ಭೂಪಾಲ | ಫುಲ್ಲಶರಣ ರೂಪ |
ನಲ್ಲ ನಮಗೆ ಪೇಳಿದ್ದೀಗ | ಕಲ್ಯಾಣದ ಕಾರ್ಯ || ||೨೧||

ನೀ ಕೇಳಿದೆ ಏನೆ ಕೈಕೆ | ನಿನ್ನ ಮನವದೇನೆ |
ಏಕಾಂತವೇತಕೆ ಇನ್ನು | ಯಜ್ಞ ವಿರಚಿಸುವೆನು || ||೨೧||

ಭೂಕಾಂತರೊಳಗೆಲ್ಲ ಗು | ಣಾಢ್ಯ ಎನ್ನ ಕಾಂತ |
ಶ್ರೀಕಾಂತ ದಯ ಮಾಡುವನು | ಮಾಡು ಯಜ್ಞ ವನ್ನು || ||೨೨||

ಚಂದವಾಯ್ತು ರಮಣ ರಚಿಸು | ಇಂದೇ ಕ್ರತುವ ಜವದಿ |
ಕಂದನನ್ನು ಪಡೆದು ನಿತ್ಯಾ | ನಂದಗೊಳುವೆ ಮನದಿ || ||೨೪||

ನಿನ್ನ ಮನವದೇನೆ ಕನ್ಯಾ | ರನ್ನಳೆ ಸುಮಿತ್ರೆ |
ಎನ್ನೊಡನೆ ದೀಕ್ಷೆಯಿಂದ | ಇರಬೇಕಾಯಿತಲ್ಲೆ || ||೨೫||

ಎಲ್ಲ ಕಾಮ ಕಲೆಯಬಲ್ಲ | ಮುದ್ದು ಪ್ರೌಢ ನಲ್ಲ |
ಇನ್ನು ತಡವದೇಕೆ ಕ್ರತುವ | ನಾಚರಿಸುವ ಬೇಗ || ||೨೬||

**ವಚನ ||** ಇಂತು ಸತಿಯರು ಪೇಳುತ್ತಿರಲಾಗಿ ಸುಮಂತ್ರನು ಏನೆಂದನು ಎಂದರೆ –

**ರಾಗ ಪಂತುವರಾಳಿ ಏಕತಾಳ**

ಭೂಪಾಲಮಣೀ | ಕೇಳಿದೆ ಏನ್ನೈ |
ದೇವಮುನಿಯು ಪೇ | ಳಿದುದಂ ಪೇಳುವೆ || ಪ ||

ಸೂರ್ಯಾನ್ವಯದೊಳ | ಗುದಿಸಿದ ದಶರಥ |
ಧಾರಿಣಿಯಂ ಪಾ | ಲಿಸುವಾ ಸಮಯದಿ || ಅ.ಪ. ||

ಸುತರಿಲ್ಲದೆ ವೈ | ಭಾಂಡುಕ ವರಮುನಿ
ಸುತಕಾಮೇಷ್ಟಿಯ | ಮಾಡಿದಡಂದು |
ಸುತರಾಗುವರೆಂ | ದಾ ಮುನಿ ಪೇಳಿದ |
ನದರಿಂದಾತನ | ಕರೆಸಲು ಬೇಕು || ||೩೭||

**ರಾಗ ಭೈರವಿ ಝಂಪೆತಾಳ**

ಚಿಂತೆಯನು ಪರಿಹರಿಸು | ಮಂತ್ರಿಕುಲತಿಲಕನೆ ಸು |
ಮಂತ್ರ ಮುಂದೇನೆಂದ | ಡಿಂತೆಂದನಾಗ || ||೩೮||

ಪುತ್ರಕಾಮೇಷ್ಟಿಯನು | ಋತ್ವಿಜರ ಕರೆಸೀ ಧ |
ರಿತ್ರಿಯಲಿ ಮಾಡಿಸೈ | ಶಾಸ್ತ್ರವಿಧಿಯಿಂದ || ||೩೯||

ಆಗಲಾಗಲಿ ಮಂತ್ರಿ | ಏ ಗುಣಾಢ್ಯನೆ ಯಜ್ಞ |
ಸಾಗಬೇಕಾದಡದ | ಕೇನು ಸನ್ನಾಹ || ||೪೦||

ಜನಪಾಲನಲ್ಲಿಗಾ | ಮುನಿಬಂದಿರುವನೇಕೆ |
ವನದಿಂದ ನಡೆತಂದ | ಅನುವ ಪೇಳ್ ಮುಂದೆ || ||೪೧||

**ದ್ವಿಪದಿ**

ರೋಮಪಾದನು ಪೂರ್ವದೊಳಗೆ ಯಜ್ಞವನು |
ತಾ ಮಾಡಲಾ ಸುರಪ ಮಳೆಯ ತಡಸಿದನು || ||೪೨||

ಚಿಂತಿಸಲು ನಾರದನು ಚಿತ್ತೈಸಿ ಬಂದು |
ನಿಂತಾಕ್ಷಣದಿ ಭೂಪ ಪೊಡಮಟ್ಟನಂದು || ||೪೪||

ವರ ವಿಭಾಂಡುಕಪುತ್ರ ಋಷ್ಯಶೃಂಗಾಖ್ಯ |
ತೆರಳಿ ಬಂದರೆ ನಮ್ಮ ರಾಷ್ಟ್ರದಲಿ ಸೌಖ್ಯ || ||೪೫||

ಎಂದೆನಲು ಹೇಗವನ ಬರುವ ಹೇಳಯ್ಯ |
ಇಂದುಮುಖಿಯರ ಕಳುಹಿ ಕರೆಸೆನಲು ರಾಯ || ||೪೬||

ವಾರಾಂಗನೆಯರನೆಲ್ಲ ವನಕೆ ಕಳುಹಿದನು |
ನೀರೆಯರ ಋಷ್ಯಶೃಂಗಾಖ್ಯ ನೋಡಿದನು || ||೪೭||

**ವಚನ ||** ಆಗಳಾ ಅಗಣಿತದ ನಾರಿಯರೈದಿದರದೆಂತೆನೆ –

**ರಾಗ ಪಂತುವರಾಳಿ ಏಕತಾಳ**

ತರುಣಿಯರೈದಿದರಾ ವನಕೆ | ಮುನಿ |
ವರನ ಮರುಳುಮಾಡಿ ಕರೆವುದಕೆ || || ಪ ||

ಮುನಿಯ ವೇಷವನಾಂತು | ವನದೊಳಗೆಲ್ಲರು |
ಘನಕುಚ ದ್ವಯಗಳ | ತೋರಿಸುತ |
ಕುಣಿಯುತಲಿರಲಾಗ | ಘನತಪವನು ಬಿಟ್ಟು |
ಮುನಿಪ ವನಿತೆಯರ | ನೀಕ್ಷಿಸುತ || ||೪೮||

ನಮಗೆ ಒಂದೇ ಕೋಡು | ನಿಮಗೆ ದ್ವಯಗಳುಂಟು |
ಅಮಮ ಮಹಾಮುನಿ | ವರರೆನಲು |
ಕಮಲ ವದನೆಯರು | ಭ್ರಮರಕುಂತಳೆಯರು |
ಚಮರದವೊಲು ಬೀ | ಸುತ ಹೊದ್ದುತಾ || ||೪೯||

ಕರದಲಿ ಕಜ್ಜಾಯ | ಗಳ ನೀಡಲಾ ಮುನಿ |
ವರನದ ಭಕ್ಷಿಸಿ | ತಕ್ಕೈಸಿದ |
ಗುರುಕುಚಗಳಮುಟ್ಟಿ | ತಪವನೆಲ್ಲವ ಬಿಟ್ಟು |
ಬರುತಿರ್ದ ಭೂಪ ದೀ | ಕ್ಷೆಯಕೊಂಡ ಬಳಿಗೆ || ||೫೦||

**ಕಂದ**

ಫುಲ್ಲಾಸ್ತ್ರನ ಬಾಧೆಯೊಳಾ
ಬಲ್ಲಿದ ಮುನಿ ರೋಮಪಾದ ಭೂಮಿಪನೆಡೆಗಂ |
ನಿಲ್ಲದೆ ಬರಲಾ ಮಗಳಂ
ಕಲ್ಯಾಣವ ರಚಿಸಿ ಯಜ್ಞಕಾರಂಭಿಸಿದಂ || ||೫೧||

**ವಚನ ||** ಈ ಪ್ರಕಾರ ಆ ರೋಮಪಾದ ನರೇಶ್ವರನಲ್ಲಿ ಋಷ್ಯಶೃಂಗ ಮುನೀಶ್ವರಂ ಬಂದಿಹನವನ ನೀನೀಕ್ಷಣದಿಂ ಕರೆಸೆಂದನು –

**ಮತ್ತೇಭವಿಕ್ರೀಡಿತ**

ವರಮಂತ್ರೀಶ್ವರನೆಂದಡಾ ದಶರಥಂ ಆನಂದದಿಂ ಮಿಂದು ಭೂ
ಸುರಶ್ರೇಷ್ಠಾದ್ಯರ ವಂದಿಸುತ್ತ ಮುನಿಯಂ ಕರೆತಂದು ಸುಮುಹೂರ್ತದಿ |
ಸುರನಾಥಾದ್ಯರು ಮೆಚ್ಚುವಂತೆ ಮಖವಂ ತಾ ಮಾಳ್ಪನೆಂದಾಗಳಾ
ನರನಾಥಾಗ್ರಣಿ ಕೀರ್ತಿಯಾಹ ಪರಿಯಂ ವೃಂದಾರಕರ್ಕೇಳಲು || ||೫೨||

**ಕಂದ**

ಚತುರಂಬುಧಿಯೊಳಗುಳ್ಳಾ
ಪೃಥಿವಿಪರಂ ಗೆಲ್ದು ತುರಗ ಬಂದಾಕ್ಷಣದೊಳ್ |
ಯತಿತಿಲಕ ಬ್ರಹ್ಮಸುತನನು
ಮತದಿಂದಲೆ ತಾನು ಯಜ್ಞಕಾರಂಭಿಸಿದಂ || ||೫೩||

ಹಿಂದೆ ದಶಶಿರನ ಬಾಧೆಗೆ
ವೃಂದಾರಕರೆಲ್ಲ ನೊಂದು ಬ್ರಹ್ಮನ ಬಳಿಗೈ |
ತಂದುಂ ಜಯ ಜಯವೆನ್ನುತ
ವಂದಿಸುತವರವರು ತಮ್ಮ ಗತಿಯಂ ಪೇಳ್ದರ್ || ||೫೪||

**ರಾಗ ಮಧುಮಾಧವಿ ಅಷ್ಟತಾಳ**

ಪಾಹಿ ಸಾರಸಸಂ | ಭವ ದೇವ ದೇವ || ಪಲ್ಲವಿ ||

ರಾವಣನಾದ ನಿ | ಶಾಚರ ನೀಚನು |
ತಾ ವರದಿಂದ ಸ | ಮರ್ಥನಾಗಿ |
ದೇವರ್ಕಳೆಲ್ಲರ | ಪೀಡಿಸುತೈದಾನೆ |
ಕೇವಲ ದುಷ್ಟನಾ | ಗಿರುವ ದಾರಿಯ ಕಾಣೆ || ||೫೫||

ತರಣಿಚಂದ್ರಮರ ಸು | ಖದಿ ಸಂಚರಿಸ ಗೊಡ |
ತಿರುಗಾಡಬಿಡನು ಮಾ | ರುತನನೀಗ |
ಧರಣಿದೇವಿಯು ತಾನು | ಬಲು ಚಿಂತಿಸುವಳಯ್ಯ |
ಉರಗೇಂದ್ರ ಭಾರವ | ಧರಿಸಲೊಲ್ಲನು ಸ್ವಾಮಿ || ||೫೬||

ಚಿಂತೆಯಾತಕೆ ಕೇ | ಳಿಂದ್ರ ರಾವಣನಿಗೆ |
ಸಂತೋಷದಿಂ ಘೋರ | ವರವಿತ್ತೆನು |

ಸಂತತವವನಕೊ | ಲ್ಲುವ ಯತ್ನಗಳಿಗೆ ಅ |
ನಂತಶಯನನಿದ | ಕನುವ ಬಲ್ಲನು ಎಲ್ಲ || ||೫೭||

ಪೋಗುವ ನಾವೆಲ್ಲ | ಕ್ಷೀರಾಬ್ಧಿ ತಡಿಗೆ || ಪ ||

**ಕಂದ**

ಪರಮೇಷ್ಠಿಯು ನಗುತಾಕ್ಷಣ
ಸುರರಂ ಕರಕೊಂಡು ಕ್ಷೀರಸಾಗರ ತಡಿಯೊಳ್ |
ಹರಿಯಂಘ್ರಿಗೆರಗಿ ಕಾರ್ಯದ
ಪರಿ ಎಲ್ಲವನರುಹುತಿರ್ದನತಿ ಮುದದಿಂದ || ||೫೮||

**ರಾಗ ನವರೋಜು ಚೌತಾಳ ಮತ್ತು ತಿತ್ತಿತ್ತೈತಾಳ**

ಮಾಧವಸ್ವಾಮಿ ಮಾತ | ಲಾಲಿಸು ಪ್ರೇಮಿ |
ನೀ ದಯಾನಿಧಿ ಎಂದು | ನಿನ್ನಸೇರಿದೆ ಬಂದು || ಪಲ್ಲವಿ ||

ರಾವಣನೆಂಬ ನಿ | ಶಾಚರ ವೀರನು |
ದೇವತೆಗಳನೆಲ್ಲ | ಬಾಧಿಸುತ್ತಿಹನು |
ಗೋವಿಂದ ನೀ ಬಂದು | ಅಸುರರೆಲ್ಲರ ಕೊಂದು |
ಶ್ರೀವರ ಸುಜನರ | ಪೊರೆಯೋ ಭಕುತಬಂಧು || ||೫೯||

ಎನ್ನಭಜಿಸಲಂದು | ನಾನೇ ವರವಿತ್ತೆನು |
ಇನ್ನು ತಪ್ಪಿಸಲೆನ | ಗಳವಲ್ಲವಯ್ಯಾ |
ಪನ್ನಗಶಯನ ಕೇಳ್ | ನಿನ್ನ ಸುತನ ತಪ್ಪ |
ಮನ್ನಿಸಿ ದೇವರ್ಕಳ | ನಿನ್ನು ಪೊರೆಯೋ ದೇವ || ||೬೦||

**ಕಂದ**

ಇಂತೆನೆ ಭಜಿಸುತ ಲಕ್ಷ್ಮೀ
ಕಾಂತನಪಾದಯುಗಳಕೆರಗುತಿರಲಾಕ್ಷಣದೊಳ್ |
ನಂತನೊಳೊರಗಿದ ಹರಿ ಸುರ
ಸಂತತಿಯೊಡನಾಗಳಿಂತು ನುಡಿಯುತ್ತಿರ್ದ || ||೬೧||

**ರಾಗ ಮಧ್ಯಮಾವತಿ ಏಕತಾಳ**

ಏಳಿ ಕ್ಲೇಶಗಳೇನ್ಮೈ ನಿಮಗಿದು ಗಾಢ |
ಖೂಳ ರಾವಣನ ಬಾ | ಧೆಗೆ ಚಿಂತೆ ಬೇಡ || ಪ ||

ದಶರಥ ನೃಪತಿಗೆ | ಸುತನಾಗಿ ಜನಿಸುವೆ |
ದಶಶಿರನನು ಕೊಂದು | ಕೊಡುವೆನಯ್ಯ |
ವಸುಧೆಯೊಳಗೆ ಹವ್ಯ | ಕವ್ಯಗಳೆಲ್ಲವು |
ಹಸನಾಗಿ ನಡೆವಂತೆ | ಕರುಣಿಸುವೆನು ತಾಳಿ || ||೬೧||

ಆತನ ಬಂಧು ಬಾಂ | ಧವರ ಮಕ್ಕಳ ಸಹ |
ಜಾತಿಯನೆಲ್ಲವ | ಸಂಹರಿಸುವೆನು |
ಕೋತಿಗಳಾಗಿ ನೀ | ವೆಲ್ಲರುದಿಸಿರೆಂಬ |
ಮಾತ ಕೇಳುತಸುರ | ವ್ರಾತ ಕೈಮುಗಿಯೆ || ||೬೨||

**ಶಾರ್ದೂಲವಿಕ್ರೀಡಿತ**

ಇಂತಿಂದ್ರಾದ್ಯರಿಗೆಂದು ಶೇಷಶಯನಂ ಪಕ್ಷೀಂದ್ರನನ್ನೇರುತ
ಸಂತೋಷಾಧಿಕನಾಗಿ ಬಂದು ನಿಲಲುಂ ತದ್ಯಾಗ ಸಾಮಿಪ್ಯದಿ |
ಕಾಂತಾವರ್ಗವ ಕೂಡಿಕೊಂಡು ಮಖವಂ ಮಾಡುತ್ತ ಭೂಪಾಲಕಂ
ನಿಂತಾ ಮಾತ್ರದಿ ಋಷ್ಯಶೃಂಗಮುನಿಪಂ ಪೇಳ್ದಂ ಸುಮಾಂಗಲ್ಯದಿ || ||೬೪||

**ರಾಗ ಕಲ್ಯಾಣಿ ಏಕತಾಳ**

ನೃಪತೇ ಮಹಾರಾಜ | ದಶರಥ ಸುಮತೇ || ಪ ||

ಪುತ್ರಕಾಮೇಷ್ಟಿಯ | ಮಾಡಿದ್ದರಿಂದಲೆ |
ಅತ್ತ ನಿನ್ನ ಮನೋ | ರಥ ಸಿದ್ಧಿಯಾಯ್ತು |
ಪುತ್ರರು ನಾಲ್ವರು | ದಿಪರೀಗ ನೀ ಕೇಳು |
ಚಿತ್ತಚಂಚಲ ಬಿಟ್ಟು | ಸ್ಥಿರವಾಗಿ ಬಾಳಯ್ಯ || ||೬೫||

ಲಕ್ಷಣ ಶುಭವಾಗಿ | ಕಾಣ ಬಂದಿದೆ ಮತ್ತೆ |
ದಕ್ಷಿಣಾವರ್ತದಿ | ಜ್ವಲಿಪನು ಹವನ |
ಪಕ್ಷೀಂದ್ರ ವಾಹನ | ಪರಮ ಮಂಗಲದಿಂದ |
ಈಕ್ಷಣ ದಯವಹ | ಈಗ ನಿನ್ನೊಳು ಮೋಹ || ||೬೬||

ಹವ್ಯ ವಾಹನನ ಮ | ಧ್ಯದೊಳು ತೋರುತಲಿದೆ |
ದಿವ್ಯ ಸ್ವರೂಪವು | ಪಾತ್ರವ ಪಿಡಿದು |

ಅವ್ಯಕ್ತಾದ್ವಯನಾದ | ಶ್ರೀಹರಿಯವಗೆ ನೀ
ಸೇವ್ಯ ತಾನಾದೆಯೈ | ದಶರಥ ನೀ ಕೇಳು || ||೬೭||

**ಕಂದ**

ಇಂತೇಳು ದಿವಸ ಮುನಿಗಳ
ತಿಂಥಿಣಿಯಿಂ ಮಖವ ರಚಿಪೆ ಪೂರ್ಣಾಹುತಿಯೊಳ್ |
ಮುಂತೆಸೆದಿರೆ ವರಲಕ್ಷ್ಮೀ
ಕಾಂತನೆ ಗೋಚರಿಸಿದಂತೆ ಯಜ್ಞೇಶ್ವರನು || ||೬೮||

**(ಯಜ್ಞೇಶ್ವರನ ಪ್ರವೇಶ)**
**ರಾಗ ವರಾಳಿ ಅಷ್ಟತಾಳ**

ರಾಜಶೇಖರ ರಾಜ | ರಾಜಮಾನವದನ |
ರಾಜೀವಾಕ್ಷನ ಭಜಕ |
ರಾಜಿಪಗ್ನಿಯೊಳಿಂದು | ನರವೇಷವನು ತಾಳಿ |
ಆ ಜಗತ್ಪತಿಯನು | ಜ್ಞೆಯೊಳೀಗ ಬಂದೆನು || ||೬೯||

ಭಗವನ್ ವೀತಿಹೋತ್ರನೆ | ನಮಿಪೆ ನಿನ್ನಯ ಪಾದ |
ಯುಗಳಕೆ ಶುಭದಾಯಕ |
ಧಗಧಗಿಸುವ ತೇಜ | ಸ್ಸುಗಳ ಶರೀರದ |
ನಗೆಮೊಗ ದರುಶನ | ದಿಂದ ಸಫಲವಾಯ್ತು || ||೭೦||

ನರವರ ಸುರರೆಲ್ಲ | ಕೊಟ್ಟಪಾಯಸವಿದು |
ಧರಣೀಶ ನಿನಗೀವೆನು |
ತರುಣಿಯರಿಗೆ ನಾಲ್ಕು | ಪಾಲಾಗಿ ನೀ ನೀಡು |
ತರುಣರ್ನಾಲ್ವರುದಿಪ | ರ್ತರಣಿವಂಶಕೆ ದೀಪ || ||೭೧||

**ಕಂದ**

ತಂದಾಪಾಯಸ ಪಾತ್ರೆಯ
ನಂದಾ ಭೂಪತಿಗೆ ಕೊಟ್ಟು ತೆರಳಲ್ ದಿವಿಜಂ |
ಮಂದಿರಕೆ ಬಂದು ದಶರಥ
ಚಂದದಿ ತನ್ನರಸಿಯರ್ಗೆ ನುಡಿಯುತ್ತಿರ್ದಂ || ||೭೨||

**ರಾಗ ತೋಡಿ ಏಕತಾಳ (ತಿತ್ತಿತ್ತೈ)**

ಫುಲ್ಲಲೋಚನೇ ಸುಶೀಲೆ | ವಲ್ಲಭೆ ಕೌಸಲ್ಯೆ |
ಕಲ್ಯಾಣದ ಪಾಯಸವಿದು | ಪುತ್ರಾರ್ಥಿ ನೀ ಗ್ರಹಿಸೆ ||
ಎಲ್ಲ ಕಾಮ ಕಲೆಯ ಬಲ್ಲ | ಮದ್ದು ಪ್ರೌಢ ಬೇಗ |
ನಲ್ಲ ಕೊಡಿಸೆನ್ನ ಭಾಗ | ವೆನಲು ಕೊಟ್ಟನಾಗ || ||೭೩||

ಸರಸಿರುಹದಳನೇತ್ರೆ | ಸುರುಚಿರ ಸುಗಾತ್ರೆ |
ತರುಣಿ ನಿನ್ನ ಅಂಶ ಇಕ್ಕೊ | ಬೇಡಿಕೊಳ್ಳೆ ಕೈಕೆ ||
ವೈರಿ ನೃಪರೆದೆಗೆ ಕುಂತ | ಮಾರ ರೂಪವಂತ |
ಧೀರ ಎನ್ನ ಕಾಂತ ಬೇಗ | ತಾರೊ ಪರಮಾನ್ನವನು || ||೭೪||

ಪುತ್ರರುದಿಸುವಡಿದು | ಕಾರಣ ಸುಮಿತ್ರೆ |
ಚಿತ್ರತರ ಪಾಯಸವ | ಗ್ರಹಿಸೆಲೆ ನೀ ಬಾಲೆ ||
ಪೃಥ್ವಿಪಾಲ ಶಿರೋಮಣೇ | ಚಿತ್ತಜಸ್ವರೂಪ |
ಹಸ್ತದಲ್ಲಿ ಕೊಡಿಸೊ ಎನ್ನ | ಉತ್ತಮಾಂಶವನ್ನು || ||೭೫||

ಶೇಷದ ಪಾಯಸವಿದು | ಸುದತಿ ಕೇಳ್ ಸುಮಿತ್ರೆ |
ನಾ ಸುಮಂಗಲದಿಂದೀವೆ | ಬೇಡೆ ಪ್ರೌಢ ಗಾತ್ರೆ ||
ಭೂಸುದತೀವರ ಗುಣಾಢ್ಯ | ಬಾರೊ ಎನ್ನ ಕಾಂತ |
ಏಸು ಧನ್ಯರೋ ನಾವಿಂದು | ತಾರೊ ಪರಮಾನ್ನವನು || ||೭೬||

**ಕಂದ**

ಧರಣಿಪ ದಶರಥ ಭೂಪಂ
ತರುಣಿಯರಿಗೆ ಪ್ರೀತಿಯಿಂದ ಪರಮಾನ್ನವನು |
ಕರೆದಿತ್ತಾ ಮಾತ್ರದೊಳಾ
ತರುಣಿಯರುಂ ಗರ್ಭಧರಿಸೆ ಮಾತಾಡಿದರು || ||೭೭||

**ರಾಗ ಕಾಂಭೋಜಿ ಝಂಪೆತಾಳ**

ನಾರೀ ಶಿರೋರೆನ್ನೆ ಕೌಸಲ್ಯೆ ನಿನ್ನ |
ಮೋರೆ ಬೆಳ್ಚಾಯಾಗಿ ತೋರುತಿದೆ ಏಕೆ || ||೭೮||

ಕೋಕಿಲಸುವಾಣಿ ಕೇಳೆಲೆ ಕೈಕೆ ನಿನ್ನ |
ಕೋಕನದಕೋರಕ ಕುಚಾಗ್ರಕಪ್ಪೇಕೆ || ||೭೯||

ಇಂದುವದನೆ ಸುಮಿತ್ರೆ ಸುಮಗಂಧಿ ನಿನ್ನ |
ಅಂದವಾದ ತ್ರಿವಳಿ ಮರೆಯಾಯಿತೇಕೆ || ||೬೦||

**ಕಂದ**

ಅತ್ತಲು ದಿವಿಜಸ್ತೋಮವ
ದುತ್ತಮ ಕಲ್ಯಾಣಮೀಕ್ಷಿಸುವೆವೆನೆ ಭರದಿಂ |
ಮೊತ್ತದಿಹರಬ್ರಹ್ಮಾದಿಗ
ಳಿತ್ತರು ಬಂದೊಡ್ಡೋಲಗಮಭ್ರದೊಳಾಗಳ್ || ||೨೪೯||

**ರಾಗ ಘಂಟಾರವ ಏಕತಾಳ**

ವರಕುಶಧ್ವಜನಂದು | ಕರೆದು ಮೋಹದೊಳು ಕು |
ಳ್ಳಿರಿಸಿಕೊಂಡನು ಸೀತಾ | ತರುಣಿಯನೊಲಿದು || ||೨೫೦||

ಇವಳಿಗಿನ್ನೆರೆಯ ನಾ | ವವನಪ್ಪನೊ ಕಾಣೆ |
ಹವಣಿಸಿಕೊಂಡಿರ್ದ | ಭುವಿಯ ಪಾಲಕರಲಿ || ||೨೫೧||

ಎನುತಲೆ ಬಳಿಕಾಗ | ತನುಜೆ ಶೃಂಗರಿಸು |
ತನುವಾಗಿರೆಂದನು | ವನಜಾಕ್ಷಿಯರೊಳು || ||೨೫೨||

**ವಾರ್ಧಕ**

ತಜ್ಜನಕಜೆಗೆ ದಿವ್ಯತೈಲದಿಂ ಕುರುಳೊಳಂ
ಸಜ್ಜನಿಂ ನೇವರಿಸಿ ಮೈಗರಸಿನಂ ಪೂಸಿ
ಮಜ್ಜನಂ ಗೈಸಿ ಪೀತಾಂಬರವನಳವಡಿಸಿ ಕುಪ್ಪಸಂ ತೊಡಿಸಿ ಕಣ್ಗೆ |
ಕಜ್ಜಳಂ ತಿದ್ದಿ ಕುಂಕುಮದ ಕಸ್ತುರಿ ತಿಲಕ
ವುಜ್ಜ್ವಲಿಪ ಫಣೆಗಿಟ್ಟು ಪರಿಮಳಿಪ ಗಂಧಂಜ
ಗಜ್ಜನನಿಗಂತಿಗುರ್ದಿ ನಾನಾಸುಮಂ ಮುಡಿಸಿ ಶೃಂಗರಿಸಿದರು ಸತಿಯರು || ||೨೫೩||

**ರಾಗ ಮಾರವಿ ಏಕತಾಳ**

ಬಂದನೈಯ್ಯ ಸಭೆಗೆ ಕುಶಧ್ವಜನು ಬೇಗ | ತಾ |
ಮಂದಗಾಮಿನಿಯನು ಕೊಂಡು ನಲಿಯುತಾಗ || ಬಂದನಾಗ || ||೨೫೪||

ಆನೆಯನ್ನು ಮುದದೊಳು ಶೃಂಗರಿಸಿ | ಮಧ್ವನಿಯ ತೋರಿಸಿ |
ಮುಂದಿ | ನ್ನಾನುವ ಶುಭ ಶಕುನಂಗಳ ವಿಚಾರಿಸಿ || ಬಂದಾ || ||೨೫೫||

ಗಣವಿಲ್ಲದ ಗಾನ ಗೀತ ಘೋಷದಿ | ಒಳ್ಳೆ |
ಕುಣಿವ ನಾಟಕಿ ಜನ ಸಂತೋಷದಿ ||
ಮಣಿಕೇಯೂರರವಂಗಳ ವಿಲಾಸದಿ | ಬಂದ |
ದಣಿಸಿ ಗಜವನಿಳಿದಳ್ ಮಂದಹಾಸದಿ | ಬಂದಳೈ ಸಭೆಗೆ || ||೧೫೬||

**ಕಂದ**

ಮದಗಜವಿಳಿದಾ ಸಭೆಗಂ
ಮದುವಳಿಯೈತಂದೀಕ್ಷಿಸಿ ಕಡೆಗಣ್ಣಿನೊಳಂ |
ಮುದದಿ ಮುಗುಳ್ನಗೆಯಾಡುತ
ಲಿದರೊಳ್ ತಂನೆರೆಯನ ಕಾಣೆನುತಂ ಬಗೆದಳ್ || ||೧೫೭||

**ವಾರ್ಧಕ**

ಧೂರ್ಜಟಿಯ ಮಗಳರಸಬೊಮ್ಮನಾತ್ಮಜನು ವರ
ನಿರ್ಜರರ ಸೇವಕರ್ ಮುನಿಗಳೆಂಬವರೆಲ್ಲ
ನಿರ್ಜಿತೇಂದ್ರಿಯರು ಮೇಲಾದ ಭೂವಲ್ಲಭರ ನೋಡಲು ವಿಶೇಷ ಗುಣವು |
ವರ್ಜಿತನರಾದ ಮರ್ಮಿವರಗೊಡವೇನೆಂದು
ದುರ್ಜನ ವಿನಾಶಲಜ್ಜಾಯ ಮಾನಸಳಾಗಿ
ಮೂರ್ಜಗದ ಪತಿಯೆ ತನಗೆರೆಯೆಂಬ ಹರುಷದಿಂ ಬಂದಳಾ ಜನಕನೆಡೆಗೆ || ||೧೫೮||

**ರಾಗ ಸೌರಾಷ್ಟ್ರ ಅಷ್ಟತಾಳ**

ಮಗುವೆ ನೋಡೀಗ ಮೋಹದ ಮುದ್ದುಕಣಿ ನಿನ್ನ |
ಮೊಗವೆತ್ತಿ ಹರುಷದಿಂದ ||
ವಿಗಡ ಧರಾಧಿಪರಿವರೆಲ್ಲ ಕುಳಿತಿಹ |
ಬಗೆದೆಯ ಕೋಮಲಾಂಗಿ || ||೧೫೯||

ಇದಕೋ ಹಿಮಾಂಶುಶೇಖರನ ಚಾಪವ ಪೂ |
ಜಿಸಿದೆ ನೋಡು ಹರುಷದಿಂದಾ ||
ಚದುರೆ ನಿನ್ನಯ ವೈವಾಹ ಸನ್ನಹಗಳ |
ನೊದಗಿಕೊಂಡಿದೆ ಚೋದ್ಯದಿ || ||೧೬೦||

ದೊರೆಗಳೊಳಾವನಾದರು ಧನುವೆತ್ತಿ |
ವರಿಸಿಕೊಳ್ಳುವನ ಕಾಣೆ ||

ತರುಣಿ ನೀನದರಿಂದ ಮೊದಲಾಗೋರ್ವನಿ |
ಷ್ಕರಿಸಿಕೊ ಮನಸಿನಲಿ || ||೨೯೦||

ಎನುತವಳನು ತೆಗೆದಪ್ಪಿ ಮುದ್ದಿಸುತಲಿ |
ಜನಪನು ತಾ ಬಳಿಕ ||
ವನಿತೆಯರ್ಸಂದೋಹದೊಳು ಕುಳ್ಳಿರಿಸಿದನುಡು |
ಗಣ ಮಧ್ಯಚಂದ್ರನಂತೆ || ||೨೯೧||

**ವಾರ್ಧಕ**

ವೇಷ್ಟಿಸಿದರಾಗಲಲ್ಲಿನಜನಂ ವಿವಿಧ ಸುಖ
ಗೋಷ್ಠಿಗಳನಾಡುತ ಕುಮಾರಿಯಳ ಸರಿಸದೋಳ್
ಸೃಷ್ಟೀಶನಾಜ್ಞೆಯಿಂ ಮೊಳಗಿದವು ನಿಸ್ಸಾಳ ಕೋಟಿಗಳ್ ಬಳಿಕ ಕೃತಿಯ |
ದೃಷ್ಟಿಯುಳ್ಳವನು ತಾ ಚಾಪದೆಡೆಯೋಲ್ ಸಮರ
ಚೇಷ್ಟಿತಧರಾಧಿಪರ ನಿಚಯಮಂ ಪೊಕ್ಕಳಿಸಿ
ಶ್ರೇಷ್ಠತನದಿಂ ಪೊದ್ದಿ ಹೇರಿದರ್ಬಹಳ ಪ್ರತಾಪದಿಂದೋರೋರ್ವರೂ || ||೨೯೩||

**ರಾಗ ಘಂಟಾರವ ಅಷ್ಟತಾಳ**

ಕೇಳಿದೆನಯ್ಯ ಇನವಂಶಜಾತನೆ |
ಪೇಳಲಸದಳವೀಗ ಶಿವನ ಕ |
ರಾಳ ಕಾರ್ಮುಕದುಗ್ರವ || ಕೇಳಿದೆ || ||೨೯೪||

ಸಾರಿಪತ್ತಿರೆ ಬರುವರಿಗೆಲ್ಲ |
ಚಾರಿ ಧನುವಲ್ಲೆಂಬ ತೆರದ ವಿ |
ಚಾರವನೆ ತಾದೋರ್ವುದು || ||೨೯೫||

ಎತ್ತಲೆಂದೆನುತಲಿ ಕೈಯ್ಯ ನೀಡಿದ |
ರೊತ್ತಿ ಪಿಡಿದು ವಿಭಾವಿಸುತ ಭೂ |
ಪೋತ್ತಮರ ಸದೆಬಡಿವುದು || ||೨೯೬||

ಭುಜಬಲಾಢ್ಯರು ತವಕಿಸಿ ಕೊಂಡತಿ |
ಗಜರುತಲೆ ಕೈಯಿಕ್ಕಿ ಧರೆಯಿಂ |
ಜಗಿಸುವವೊಲ್ ತಾವೊದೆವುದು || ||೨೯೭||

ಪೃಥುಳ ಭೂಭುಜರೆಲ್ಲರೀ ಪರಿಯಿಂದ |
ಮಿಥಿಳೆಯರಸನ ಧನುವಿನುಗ್ರದಿ |
ವ್ಯಥೆಯ ತಾಳ್ದಳವಳಿದರು || | |೧೬೮||

**ವಾರ್ಧಕ**

ವಂಗಪತಿ ಬಸವಳಿದನಳವಳಿದನಾ ಚೈದ್ಯ
ಹಿಂಗಿದಂ ಚೋಳ ಹಿಮ್ಮೆಟ್ಟಿದಂ ಪಾಂಡ್ಯನೃಪ
ಬೆಂಗೊಟ್ಟು ತಿರುಗಿದಂ ಪಾಂಚಾಲ ಬಾಹ್ಲಿಕಂ ಪಿಂತೆ ಸರಿದಂ ಲಾಳನು |
ಅಂಗಮರ್ಭರ್ಭರ ದ್ರವಿಡ ಕುರುಮಾಗಧ ಕ
ಳಿಂಗನೇಪಾಳಮುಖ್ಯರವನಿಪರ್ಬಿಲ್ಲಿನಿಂ
ಭಂಗಮಂಬಡುತಲಪಹಾಸ್ಯಕಂವೊಳಗಾದರಾ ಸಖೀಸಂದೋಹದ || ||೧೬೯||

ಕಡೆಗುಳಿದ ಭೂಪಾಲಕರ್ ಕೆಲರ್ ಕೆಲರು ತಮ
ಗೆಡದ ಚಂದಿರ ವಧಾ ಕಾರಾಗೃಹದ ಮಿತ್ರತ್ವ
ಕಡುಕಠಿನಮಾಗಿರ್ಪುದಿಂದು ತಾವೊಲ್ಲೆವೆನುತಲ್ಲಲ್ಲಿ ಮರೆಸಾರ್ದರು |
ನುಡಿಚಮತ್ಕಾರದವನಿಪ ನಿನ್ನಿನಾರಾಭ್ಯ
ಬಿಡದೆ ತಲೆ ಶೂಲೆ ಪೈತ್ಯದ ವಿಕಾರಂಗಳಿಂ
ನಡುಗುತಿದೆ ಕೈಕಾಲ್ಗಳೆಂದು ತಂತಮ್ಮೊಳಾಲೋಚಿಸುತ ಹಿಂದೆಗೆದರು || ||೧೭೦||

ಕೆಲರು ತಾವೀವರೆಗೆ ಧನುವೆತ್ತಿ ಪೆಣ್ಗಳಿಂ
ಗೊಳಿಸಿಕೊಳಲಿಲ್ಲವಂ ಧಾರೆಯನ್ನೆರೆದೆಮಗೆ
ಲಲನೆಯಂ ಕೊಡುವುದಾದರೆ ಕೊಡಲದಲ್ಲದಿರೆ ತಾನಿರಿಸಿ ಕೊಳಲೆಂದರು |
ಕೆಲರೀ ಸಖೀಜನರ ಹಾಸ್ಯಕಲ್ಲ್ಯಲ್ಲಿ ತಲೆ
ತಲೆಯ ತಗ್ಗಿಸಿಕೊಂಡು ಕೈಗಳಂ ಮುಗಿದರಾ
ಬಲ ಪ್ರತಾಪಾನ್ವಿತ ಶರಾಸನಕೆ ನಮೊಯೆಂದರಾ ಸಭಾಸ್ಥಾನದೊಳಗೆ || ||೧೭೧||

**ಕಂದ**

ಅನಿತರೊಳಭ್ರದಿ ಝಳಪಿಸಿ
ದನುಜಾಧಿಪ ರಾವಣನತಿ ಸಂಭ್ರಮದಿಂದಂ |
ಜನಕನ ಜರೆದು ಸಭಾಸ್ಥಳ
ಕೆನುತೈತಂದನು ಘುಡುಘುಡಿಸುತ್ತಲಿ ಭರದೊಳ್ || ||೧೭೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೋಡಿದನು ವರರಾಜ ಸಭೆಯನು |
ಪಾಡಿನಂಗನೆಯರ ಸಮೂಹವ |
ಕೂಡೆ ಪೂಜೆಯ ಗೈದ ಶಿವನ ಸ | ಗಾಢ ಧನುವ || ||೨೭೩||

ಕೇಳಿದರೆ ನೀವೆಮ್ಮವರು ತಾವ್ |
ಭಾಳಲೋಚನ ದಯವ ಮಾಡಿದು |
ನೀಳಕುಂತಳೆಯಳ ಮಹೋತ್ಸವ | ದೂಳಿಗವನು || ||೨೭೪||

ತನಗೆ ದೊರಕಿಸಿ ಕೊಟ್ಟನಲ್ಲದೆ |
ಜನಪರಿಂಗೀ ತರುಣಿ ಯೋಗ್ಯಳೆ |
ಯೆನುತ ಶಿರಗಳ ತೂಗಿ ನಡೆದನು | ಧನುವಿನೆಡೆಗೆ || ||೨೭೫||

**ಭಾಮಿನಿ**

ದಾನವರೊಳಗತ್ಯಧಿಕ ಖೂಳ ದ
ಶಾನನನು ಭ್ರಮೆಗೊಂಡು ತಾ ಸುಂ
ಮಾನದೊಳು ಬಿಲ್ಲೆಡೆಗೆ ಪೋಗುವ ರಭಸವನು ಕಂಡು ||
ಮಾನಿನಿಯರಳುಕಿದರು ಬಲುದು
ಮ್ಮಾನಗೊಂಡನು ನೃಪತಿ ಬಳಿಕಾ
ಮೀನಕೇತನಜನನಿ ನುಡಿದಳು ಮನುಜರಂದದಲೀ || ||೨೭೬||

**ರಾಗ ಸೌರಾಷ್ಟ್ರ ಆದಿತಾಳ**

ಇವನ್ಯಾರೆ ಬಂದವನು | ಅಕ್ಕೈಯ ನೋಡೆ | ಜವನಂತೆ ನಿಂದವನು |
ಹವಣಿಸಿಕೊಂಡುಬೇಗ | ಚಾಪವನೆತ್ತು | ವವನೇನೋ ಕಾಣೆನೀಗ || ||೨೭೭||

ಖೂಳ ಧನುವ ತಾನೇ | ಎತ್ತಿದ ಮೇಲೆ | ನ್ನಾಳದೆ ಬಿಡುವನೇನೇ ||
ಪೇಳುವುದಾರೀತನು | ಶಿವಶಿವಯಿಂಥ | ಬಾಳುವೆಗೆಟ್ಟುದನ್ನು || ||೨೭೮||

ವನಜಾಕ್ಷನಲ್ಲದೆನ್ನ | ರಮಣನ ಕಾಣೆ | ಜನಪರೊಳೆಂಬ ಮುನ್ನ ||
ದನುಜನ ಸೇರಿ ಮುಂತೆ | ಜೀವಿಸುವಂ | ತನುವಾಗಿ ಕಾಲ ಬಂತೇ || ||೨೭೯||

**ಮಾಲಿನಿ ವೃತ್ತ**

ಎನುತ ಮನದಿ ಚಿಂತಾಭಾರಮಂ ತಾಳ್ದ ಕಾಂತೇ |
ವನಧಿಶಯನಗೇವೆಂ ವಂಚಿಸೀ ಖೂಳ ಬಂದೂ ||

ತನಗೆ ಪಿಡಿವನಲ್ಲಾ ತಾಳಲೆಂತೀಶ ಬಲ್ಲಂ |
ಇನಿತು ನುಡಿದ ಮೇಲೇ ಈಕ್ಷಿಸೀಯೋರ್ವ ಬಾಲೇ || ||೧೮೦||

**ರಾಗ ನವರೋಜು ಏಕತಾಳ**

ಚಿಂತೆಯಾತಕೆ ಸೀತೇ | ರಾಮು | ಕಾಂತೆಯಲ್ಲವೆ ಖ್ಯಾತೇ ||
ಕಂತುಜನಕ ನಿನ್ನ | ಕಾಂತನಲ್ಲದೆ ಬರಿ |
ಭ್ರಾಂತ ದೈತ್ಯನ ಕೈ | ಗೆಂತು ಸಿಕ್ಕುವೆ ಬಿಡು || ಚಿಂತೆ || ||೧೮೧||

ಮುಗುದೆಯೆನ್ನನು ನೋಡಾ | ಖಳ | ನಿಗೆ ನೀನೀಕ್ಷಿಸಬೇಡ ||
ಮೊಗವ ವೃಥಾ ಖಿ | ನ್ನಗೆ ಮಾಡದಿರರಿ |
ಸೊಗಡನು ತಾಂಗಿನ್ನು | ಗುರಿಗೆ ತಾಗದು || ಚಿಂತೆ || ||೧೮೨||

ಹರನ ಚಾಪವಯೀಗ | ತಾನೇ | ನರಿಯದಿಪ್ಪುದೆ ಬೇಗ ||
ದುರುಳನ ಕೈವಶ | ದೊರಕಲು ಬೇಕಾ |
ದರೆಯು ಪ್ರಯಾಸದ | ಸರಣಂಗಳುಂಟದು || ಚಿಂತೆ || ||೧೮೩||

**ಕಂದ**

ಇಂತೀ ಪರಿಯೊಳಗಾ ಸತಿ
ಕಾಂತಾಮಣಿಯಳ ಸಂತವಿಸಿದಳಾ ಬಳಿಕಾ |
ನಂತರದೊಳು ತಾ ಹರುಷದಿ
ನಿಂತು ದಶಾನನ ಸಂತಸದಿಂ ಪೇಳ್ದನು ಭರದೊಳ್ || ||೧೮೪||

**ವಾರ್ಧಕ**

ನೃಪತಿರಸ್ಕಾರಾಪಹಾಸ ದಶರಾಸನವಿ
ದುಪಕರಿಸಿತೆಮಗೆ ಕಂಡಿರೆ ಖಳರ್ಮದನಾರಿ
ಕೃಪೆಯುಮಿನಿತಿಲ್ಲದತಿ ಪೋಪುದೇನೆಂದೆನುತಲುಮ್ಮಯದಿ ಬಯಲ್ಮೋಹದಾ |
ದ್ವಿಪಮಂನಡರ್ದ ಮದಗೊಬ್ಬಿನಿಂದುಬ್ಬಿ ಕೋ
ಣಪಕುಲಾಗ್ರಣಿಯು ಮುಂದೊರೆದು ಕೈಯಿಕ್ಕಿದಂ
ವಿಪುಳ ನಿಕ್ಷೇಪಮಾಶ್ಯೈಸಿಕೊಂಡಿರ್ದ ಕಾಳೋರಗನ ತುಡುಕುವಂತೆ || ||೧೮೫||

**ರಾಗ ಮಾರವಿ ಏಕತಾಳ**

ಜಡಿದವ ಮುಷ್ಟಿಯೊ | ಳೌಕುತಿರಲು ಮೈ |
ಗೊಡಗಿರೆ ಕಾಣುತ | ಲಸುರನತ್ಯುಗ್ರದಿ |
ಕಡುಗಿ ಬೊಬ್ಬಿರಿದವ | ನಿಯ ಪದದಿಂದಲಿ |
ಬಿಡದೆತ್ತಿದ ನಾ | ಹರ ಕಾರ್ಮುಕವ || ಏನನೆಂಬೆ || ||೧೮೬||

ಕದಡಿತು ಶರಧಿಯು | ಫಣಿಪನು ಪೊರಳಿದ |
ನೆದೆಗೆಡೆ ಕೂರ್ಮನು | ಕುಸಿದವು ಗಿರಿಗಳು |
ಉದುರಿತೆಂಬರವ | ದಾನವ ಪಿಡಿದೆ |
ತ್ತಿದಚಾಪದ ಭರ | ಕದುಭುತ ಮೆರೆಯೇ || ಏನನೆಂಬೇ || ||೧೮೭||

ನಿಲಿಸಿದು ಚಾಪವ | ಮೊಳಕಾಲಿಂದಲಿ |
ನಲಿದೌಕುತಲಾ ನಾರಿಯ ಬಿಲ್ಲಿನ |
ತಲೆಪೆಡಕಿನ ಪರಿ | ಯೆಂತರ ಕೊಂಡೊ |
ಯ್ಯಲು ಸುಲಭವೆಂದೆನುತ | ಬೊಬ್ಬಿರಿದರು ಖಳರೂ || ಏನನೆಂಬೆ || ||೧೮೮||

**ವಾರ್ಧಕ**

ಆಗಬೇಕಾಗಬೇಕೀ ನೃಪಾಲಕಗೆಮ್ಮ
ಭಾಗದಧಿದೇವರೀ ಖಳನ ತಂದಿರಿಸಿರ್ದು
ದೀಗಿವಂಗಪಹಾಸ್ಯಮಂ ಮಾಡಲೀ ಸಖೀ ಜನರು ಬಳಿಕಾ ಜನಕನು |
ರೋಗ ಬಂದವರಂತೆ ನಿಂದಿರ್ಪನ್ಯಾಕೆ ತನು
ನೀಗುವನೊ ಯೇನೆಂದು ಬಾಯ್ಗೆ ಬಂದಂತೆ ಬೈ
ದೂಗರದು ಸಂತೋಷದಿಂದ ನಗುತಿರ್ದುದಾ ಭೂಪಾಲ ಸಂದೋಹವು || ||೧೮೯||

**ರಾಗ ಕೇತಾರಗೌಳ ಅಷ್ಟತಾಳ**

ಬಳಿಕ ಲಾಲಿಸು ಕುಶ ಜಗದೇಕ ದೈವವ | ನಳುಪಲಿನ್ನಾರಳವು ||
ಇಳಿಕೆಗೊಂಡುದು ತತೂಕ್ಷಣ ಶರಾಸನವದು | ಖಳ ದಶಕಂಠಗಂದು ||
ಕಳವಳಿಸಿತು ಕರಣೇಂದ್ರಿಯಗಳ್ಹಂಕೃತಿ | ಗಳ ನಡುಗಿತು ಧಿಮ್ಮನೆ ||
ಎಳೆದೇರಿಸಿದ ತೆಬ್ಬು ನಿಲುಕದಾಯಿತು ಕೂಡೆ | ತಳಮಳಿಸಿದನಾತನು || ||೧೯೦||

**ವಾರ್ಧಕ**

ಸರ್ರೆಂದು ಸಿಡಿದು ಕೈಯಿಂದುಡಿದು ಚಾಪಮಂ
ಘರ್ರೆಂದು ಮಗುಚಿಮೆಡೆಯೋಳ್ನಿಗುಚಿ ಬೀಳಲ್ಕೆ
ಕಿರ್ರೆಂದು ಚೀರಿ ನೆತ್ತರ ಕಾರಿ ಘರ್ಗರನೆ ಬಾಯೊಳ್ನೊರೆ ಹಾಯ್ದು ಕಡೆಗೆ |

ಘರ್ರೆಂದು ಕಣ್ಗೆ ಕತ್ತಲೆ ನುಣ್ಗೆ ಸೇರಿತಲೆ
ಭರ್ರೆಂದು ತಿರುಗಿ ಮೂರ್ಛೆಯೊಳೊರಗಿದಬ್ಬರಕೆ
ಧರ್ರೆಂದು ನೆರೆದ ಜನರಂಬರದ ಸುರರು ಸಹಿತೆಲ್ಲರುಂ ಭಯಗೊಂಡರು || ||೧೯೧||

**ಭಾಮಿನಿ**

ಬಳಲಿದನು ದಶಕಂಠನೆಂಬುದ
ತಿಳಿದು ಇಂದ್ರಾರಾತಿ ಮುಖ್ಯರು
ಬಳಿ ಸಲಿಸಿ ಕೊಂಡೊಯ್ದು ಸಂತವಿಸಿದರು ನಿಮಿಷದಲಿ |
ಬಳಿಕ ಸಭೆಗೈತಂದು ನುಡಿದನು
ಭಳಿರೆ ಜನಪತಿಯೆನ್ನ ಮಾನವ
ಕಳೆದುದಕೆ ಕೇಳ್ಜಾನಕಿಯ ನಾನೊಯ್ವೆ ಕಳವಿನೊಳು || ||೧೯೨||

**ಕಂದ**

ಎನುತಂ ಬಲುಗರ್ಜಿಸುತಂ
ದನುಜಂ ಮೊಗಮಂ ತಿರುಗಿಸಿ ಪೋಗಲ್ಕಿತ್ತಂ |
ಜನಕ ನೃಪಾಲಕನಾಗಂ
ಮುನಿ ಸಭೆಗೈತಂದೆಂದನು ತಾ ನಸುನಗುತಂ || ||೧೯೩||

**ರಾಗ ತುಜಾವಂತು ಝಂಪೆತಾಳ**

ಕೇಳಿಮುನಿ ತಿಲಕರಿರ | ಕಡುಹರುಷದಿಂದ |
ಪೇಳುವೆನು ಮನಸಿನೊಳ | ಗಿರ್ದ ಸಂಗತಿಯ || ||೧೯೪||

ಸುತೆಯ ಪರಿಣಯಕಾಗಿ | ಸರಿಸಮಾನಸರಾಗ |
ಕ್ಷಿತಿಪರೆಲ್ಲರ ಮಾನ | ಕ್ಷಯವಾಯಿತಿಂದೂ || ||೧೯೫||

ವ್ರತಿ ಕುಲದಿ ಭುಜಬಲ | ವ್ರಜರಾಗಿ ಎಸೆದಿರ್ಪ |
ರತುಳರೀಕ್ಷಣವೆದ್ದು | ರಭಸದಿಂ ಬರಲೀ || ||೧೯೬||

ಸಲ್ಲದಿಹ ನುಡಿ ರಾಜ | ವಲ್ಲಭನೆ ನೀ ಪೇಳ್ದ |
ಬಲ್ಲಿದ ಸಮರ್ಥರಿ | ಲ್ಲಿಲ್ಲ ನಿಚಯದೊಳು || ||೧೯೭||

ಎಲ್ಲಿ ಶುಭ ಶೋಭನವಿ | ದೆಲ್ಲಿ ಮಖಯಾಗವಹು |
ದಲ್ಲಿ ಸಂಚರಿಸುವರಿ | ಗೆಲ್ಲಿಹುದು ಕಡುಹು || ||೧೯೮||

ಎಂದು ಮುನಿಗಳು ಪೇಳ | ಲಂದು ಭೂಪನ ಮೊಗವು |
ಕುಂದಲದು ಕಾಣುತರ | ವಿಂದನಾಭನಿಗೆ || ||೧೯೯||

ಚಂದದಿಂದಾ ಕುಶಿಕ | ನಂದನನು ಕಣ್ಸನ್ನೆ |
ಯಿಂದ ಧನುವೆತ್ತು ನೀ | ನೆಂದು ಸೂಚಿಸಿದ || ||೨೦೦||

**ಕಂದ**

ಸನ್ನೆಯ ನೋಡುತ ರಘುಜಂ
ತನ್ನಯ ಚಿತ್ತದಿ ಬಲು ಸಂತೋಷವಬಡುತಂ |
ಸನ್ನಹದಿಂದಂ ಗುಣ ಸಂ
ಪನ್ನನು ತಾನೆದ್ದು ಸಭಾಸ್ಥಳಕೈತಂದಂ || ||೨೦೧||

**ವಾರ್ಧಕ**

ಕೆಳೆಯನೇನಾದಿಮಾಯಾಭಿರಂಜಿತ ರಾಮ
ನಿಳಯನಿವ ಬಳಿಕ ವೈಭವದಿ ವಿಕ್ರಮದಿ ಭೂ
ವಳಯದೊಳ್ಕಮಲಭವಕುಸುಮಶರರಗ್ಗಳರಿವರ್ಗೆ ಪೆತ್ತವನಲ್ಲವೆ |
ಹೊಳೆಯ ಪಿತನಂದಬ್ಧಿಯಿಂದೆದ್ದ ಸುಧೆಯವೋಲ್
ಪೊಳೆಯುವ ಮುನಿಸ್ತೋಮದಿಂ ಪೊರಡುತೈತರಲ್
ಇಳೆಯಸುತೆ ನೋಡುತಿವನೇ ಗಂಡನೆಂದು ಮನದೋಲ್ ನಿಶ್ಚಯಂ ತಾಳ್ದಳು || ||೨೦೨||

**ರಾಗ ತೋಡಿ ಅಷ್ಟತಾಳ**

ಬಂದನು ರಾಘವದೇವ | ಸತಿ | ವೃಂದಾರಕರ ಸಂಜೀವ ||
ಕಂದರ್ಪ ಜನಕ ಮು | ಕುಂದ ಮಾಧವನರ |
ವಿಂದ ಲೋಚನ ಮುನಿ | ವೃಂದವಂದಿತನೆದ್ದು || ಬಂದನು || ||೨೦೩||

ಕೆದರಿದ ನೃಪಮಂಡಲಕಾರ | ಮೇ | ಣೆದಿರಿನೊಳಿಹನಾರೀನಿಕರ ||
ಮುದದಿ ತಾನೀಕ್ಷಿಸು | ತುದಧಿಗಂಭೀರನು |
ಮದನಾರಿ ಧನುಪೂಜಿ | ಸಿದ ಠಾವಿಗಾಕ್ಷಣ || ಬಂದನು || ||೨೦೪||

**ವಾರ್ಧಕ**

ಬಂದುಗ್ರಚಾಪದೆಡೆಯೊಳ್ನಿಂತ ರಾಘವಂ
ಇಂದಿರಾರಮಣನೊಲ್ ದಿವಿಜರ್ಗೆ ಪರಬ್ರಹ್ಮ

ನಂದದಿ ಮುನೀಶ್ವರರಿಗಧಿಪತಿಯವೋಲ್ ಧರಾಧಿಪಗೆ ಮೇಲೀತನಿಂಗೆ |
ಕಂದನಾಕಾರದೊಳ್ ನೆರದಖಿಳ ಸತಿಯರ್ಗೆ
ಕಂದರ್ಪನಂತೀ ಪ್ರಕಾರದಿಂ ಕಾಣಿಸ
ಲ್ಕಿಂದೀವರಾಕ್ಷಿಯಳ ಚೆಲುವನುಂ ಕಂಡಂಗಜಂಗೊಪ್ಪಿಸಿದರಂಗವ || ||೩೦೫||

ಆ ನೆರೆದ ಜನರೆಲ್ಲ ಕಂಡುದೋ ಕಾಣದೋ
ಏನೆಂದು ತಿಳಿಯದಾ ರೀತಿಯೊಳ್ ಚಾಪಮಂ
ದಾನವಧ್ವಂಸಿ ಪಿಡಿದೆತ್ತಿ ತಿರುವಂ ಬಿಗಿದು ಕರ್ಣಪೂರದಿ ಸೆಳೆಯಲು |
ಆನೆ ಕಬ್ಬಂ ಸವಿವ ತೆರದಿ ನಿರಿ ನಿಟಿಲೆನೆ ವಿ
ತಾನದಿಂ ಮುರಿದುದಿಕ್ಕಡಿಯಾಗಿ ಧರೆಗುರುಳೆ
ಮೀನಕೇತನವೈರಿಕಾರ್ಮುಕಂ ಭಾರ್ಗವನ ಹೃದಯಮಂ ಕಳವಳಿಸಲು || ||೩೦೬||

**ರಾಗ ಆರಭಿ ಏಕತಾಳ**

ಅಂಗಜ ಸ್ವರೂಪೆಯರ | ವಂಗಡದಿಂದೆದ್ದು ರಘು |
ಪುಂಗವೆನೆಡೆಗೆ ಬಂದ | ಳಂಗನೆ ಸೀತೇ || ಪಲ್ಲವಿ ||

ತುಂಗಕುಚ ಭಾರದಿ ಮ | ತಂಗಗಮನೆ ವೈಯ್ಯಾರದಿ |
ಕಂಗಳ ಪಿಡಾಳದಿ | ಪತಂಗನ ಪ್ರಭೆ ||
ನುಂಗುವಂತಾ ಸತಿ ಕೋಮ | ಲಾಂಗದಿಂದ ಸತಿ ಸೇವೆ ಸ್ಮರನ |
ಮುಂಗೈ ಅರಗಿಣಿಯವೋಲು | ಶೃಂಗಾರಮಣೀ || ಅಂಗ || ||೩೦೭||

ಆ ಲತಾಂಗಿ ಬಳಿಕ ತಾ ವಿ | ಶಾಲ ವೈಭವದಿಂದ ತನ್ನ |
ಲೋಲನ ಹತ್ತಿರ ನಿಂತು ಪದ್ಮ | ಮಾಲೆಯ ಕೊರಳ್ಗೆ ||
ಲೀಲೆಯಿಂದ ಹಾಕಿ ನಗುತ | ಕಾಲಿಗೆರಗಿ ನಿಂದಿರಲ್ಕೆ |
ಮೇಲೆ ನಲಿನಲಿದು ದಿವಿಜ | ಜಾಲ ಕೊಂಡಾಡೇ || ||೩೦೮||

**ಭಾಮಿನಿ**

ತರುಣ ಕೇಳೈ ಬಳಿಕ ನೃಪವಧು
ವರರ ತನ್ನಾಲಯಕೆ ಕೊಂಡೊ
ದಿರಿಸಿ ಮನ್ನಿಸಲಾಗ ಭೂಪನೊಳಪ್ಪಣೆಯಗೊಂಡು |
ಧರಣಿಪರು ದುಮ್ಮಾನದಿಂದಲಿ
ಪುರಕೆ ಬಿಜಯಂಗೈಯಲಮರರು
ತೆರಳಿದರು ಮೇಲಿತ್ತ ವಿಭವದೊಳೆಸೆದನಾ ಜನಕ || ||೩೦೯||

**ವಾರ್ಧಕ**

ಹರುಷದಿಂದಾಗ ವಿಶ್ವಾಮಿತ್ರಮುನಿ ನೃಪನಿ
ಗರುಹಿದಂ ಕೋಸಲಧರಾಧಿಪನ ತನುಜರಿವ
ರರಿಕೆ ನಿನಗಿರಲೆಂದು ವಿನಯ ಪರನಾಗಿ ನಡೆದಂ ನಿಜಾಶ್ರಮಕೆ ನಲಿದು |
ತೆರನಲೇಸಾಯ್ತು ನಿಮಿವಂಶ ತಾ ಮನು ಪರಂ
ಪರೆಗೆ ಸಂಬಂಧಮಂ ಘಟನೆಯಾಯ್ತಿನ್ನೇನು
ಧರೆ ತಾನೆ ಧನ್ಯವಾಯ್ತೆಂದು ಪುಳಕಿತನಾಗುತಾ ನೃಪಂ ಮಂತ್ರಿಗೆಂದಂ || ||೩೧೦||

**ರಾಗ ಮುಖಾರಿ ಅಷ್ಟತಾಳ**

ಲಾಲಿಸೋ | ಮಂತ್ರಿ | ಲಾಲಿಸೋ || ಪಲ್ಲವಿ ||

ಲಾಲಿಸೋ ಮಂತ್ರಿಕುಲೋತ್ತಮ ಖ್ಯಾತ |
ಮೇಲೆಮಗೊಂದಾಶ್ಚರ್ಯದ ಮಾತ || ಅನುಪಲ್ಲವಿ ||

ಇವನಂತೆ ಕೋಸಲಾಧಿಪನಾತ್ಮಜನು |
ಭುವಿಯೊಳಗಧಿಕ ಪರಾಕ್ರಮ ವ್ರಜನು |
ಕುವರಿಯ ಪುಣ್ಯದಿ ದೊರಕಿದನಲ್ಲ |
ಅವನಿಯೊಳೆನ್ನಂತ ಧನ್ಯರ್ಯಾರಿಲ್ಲ || ಲಾಲಿಸು || ||೩೧೧||

ಗುರುಶತಾನಂದರು ನೀ ಸಹಿತಾಗಿ |
ಹರುಷದಿಂದಯೋಧ್ಯಾಪುರಕೀಗ ಪೋಗಿ ||
ವರದಶರಥ ಭೂಮೀಶನ ಕಂಡು |
ಬರುವುದು ದಿಬ್ಬಣವನು ಕರಕೊಂಡು || ಲಾಲಿಸು || ||೩೧೨||

**ಕಂದ**

ಎನುತಾ ಸಚಿವ ಪುರೋಹಿತ
ರನು ಸನ್ನಾಹದಿ ನೃಪ ತಾಂ ಕಳುಹಲ್ಕವರುಂ |
ವಿನಯದಿ ಬಂದಾ ಕೋಸಲ
ಜನಪದವಂ ಸಾರ್ದು ಭೂಪನಂ ಕಂಡೆಂದರ್ || ||೩೧೩||

**ರಾಗ ತುಜಾವಂತು ಝಂಪೆತಾಳ**

ಲಾಲಿಸೋ ಮಹವೀರ ಶರಧಿಗಂಭೀರ |
ಪಾಲಿಸೈ ದಶರಥನೃಪಾಲ ಗುಣಶೀಲ || ಪ ||

ಇಂದು ಮಿಥಿಳಾನಗರ | ದಿಂದ ನಿಮಿಕುಲಶರಧಿ |
ಚಂದಿರನು ನಿಮ್ಮಲ್ಲಿ | ಗೆಂದು ಕಳುಹಿಸಲು ||
ಬಂದೆವೈ ಶುಭಕಾರ್ಯ | ವೊಂದಿಹುದು ನಿಮಗೀಗ |
ಚಂದವಾಯ್ತಿನ ವಂಶ | ಯಿಂದುಕುಲಕೆಲ್ಲ || ||೩೧೪||

ರಾಮನೆಂಬವ ನಿಮ್ಮ | ಪ್ರೇಮದಾತ್ಮಜನಂತೆ |
ಸೋಮಶೇಖರನ ಧನು | ವಾಮಹಸ್ತದೊಳು |
ತಾ ಮುರಿದು ಸಂತಸದಿ | ಕಾಮಿನಿ ವಿದೇಹಜೆಯ |
ನಾ ಮಹಿಮವರಿಸಿದನು | ಭೂಮಿಪರ ಮುಂದೆ || ||೩೧೫||

ಅದರಿಂದ ನಿಮ್ಮೆಡೆಗೆ | ಮುದದೊಳು ವಿದೇಹ ನೃಪ |
ಮದುವೆಗೆಂದೆನುತೆಲ್ಲ | ಒದಗಿಬಹುದೆಂದು |
ಪದುಳದಿಂ ಪತ್ರಿಕೆಯ | ನಿದನಿತ್ತು ಎಮ್ಮುವನು |
ಚದುರ ತಾ ಕಳುಹಿದನು | ಸುದಿನವನು ನೋಡಿ || ||೩೧೬||

**ಕಂದ**

ಎಂದು ಸುಧಾಮನು ದಶರಥ
ಗಂದಿತ್ತಸುಲೇಖನಮಂ ಕರಣಿಕರೊಡನಂ |
ಚಂದದಿ ವಾಚಿಸಲೆನುತಾ
ನಂದದೊಳೀಯಲು ಭರದಿಂದೋದಿದರಾಗಳ್ || ||೩೧೭||

**ವಾರ್ಧಕ**

ಶ್ರೀಮತ್ಪ್ರಭಾಕರ ಕುಲೋತ್ತಮನ ಪಾಲಕ ಶಿ
ರೋಮಂಡನಪ್ರತಿಮನಹಿತ ಮದಗಜಸಿಂಹ
ಭೀಮವಿಕ್ರಮ ಚತುರ್ದಶಭುವನವಿಖ್ಯಾತ ಸಾಕೇತನಗರಾಧಿಪ |
ಆ ಮಹಾ ದಶರಥೇಂದ್ರೈಯ್ಯನವರಿಗೆ ನಿಮ್ಮ
ತಾಮರಸವೈರಿಕುಲಸಂಜಾತನಾದ ಮಿಥಿ
ಳಾ ಮಹೀಪಾಲಕ ವಿದೇಹಂ ಕೃತಾನೇಕ ಸಾಷ್ಟಾಂಗ ಬಿನ್ನಪವನು || ||೩೧೮||

ಕುಶಲರೀ ನೆಲೆಗೆ ನಾವೆಲ್ಲ ನಿಮ್ಮಭ್ಯುದಯ |
ಕುಶಲಂಗಳಂ ಬಿಡದೆ ಲೇಖನಾನನದೊಳರು

ಹಿಸಬೇಕು ತರುವಾಯ ಸಕಲಮವನೀಶ್ವರರ ಗರ್ವಾಪಹಾರೋತ್ಕಟ |

ಶಶಿಧರ ಶರಾಸನಂ ಗೆಲಿದೊಲಿಸಿದಂ ಸೀತೆ

ಗಸಮಬಲ ರಾಘವಂ ಈಗ ನೀವೆಲ್ಲರೀ

ಒಸಗೆಯಂ ಕೇಳಿದಾಕ್ಷಣ ವಿವಾಹೋತ್ಸವಕೆ ಐತರುವುದಿತಿ ಬಿನ್ನಹ || ||೨೧೯||

**ರಾಗ ಗಾಂಧಾರಿ ಅಷ್ಟತಾಳ**

ಭಳಿರೆ ಶಭಾಸು ಸುಧಾಮ | ನಾ |

ತಿಳಿದೆನುತ್ಸಹವನತಿಪ್ರೇಮ ||

ಖಳರುಪಹತಿಗಾ | ಕುಳಮುನಿ ಕೌಶಿಕ |

ನೆಳೆಯರನು ಕೊಂಡೊದ ಮೇಲಣ |

ದೊಳವ ತಾನರಿಯದಿರ್ದೆನು || ||೨೨೦||

ಮುನಿಕ್ರತುವನು ರಕ್ಷಿಸಿದನೇ | ದುಷ್ಟ |

ದನುಜರೆಲ್ಲರ ಶಿಕ್ಷಿಸಿದನೇ ||

ವಿನಯದಿಂದಾಮೇಲೆ | ಘನಮಿಥಿಳೆಗೆ ಪೋಗಿ |

ಜನಕನಲ್ಲಿಹ ಶಿವಪಿನಾಕವ |

ನೆನಿತು ಮುರಿದನೆ ರಾಮನು || ||೨೨೧||

ವ್ರತಿಪನ ಮಾತದು ಸಿದ್ಧ | ಮಧು |

ಚಿತನವಕರಿಸಿದು ಬದ್ಧ ||

ಇತರಿಂದೇನಪ್ಪುದತಿಶಯ ಮಹಿಮೆಯು |

ಸತತಕ್ಷೇಮಿಗಳಹರೆ ಯೆನ್ನಯ |

ಸುತರು ನಿಮ್ಮಯ ಪುರದೊಳು || ||೨೨೨||

**ಕಂದ**

ಬಳಿಕಾ ಭೂಪತಿ ತನ್ನಾ

ತುಳ ಮಂತ್ರಿಯನೊಡನೀ ಹದನವ ಪೇಳುತ್ತಂ |

ಪುಳಕಿತ ಹರುಷದಿ ಮೋಹದ

ಕೆಳದಿಯರೊಡನಿಂತೆಂದನು ನಸುನಗುತಾಗಳ್ || ||೨೨೩||

**ರಾಗ ಸೌರಾಷ್ಟ್ರ ಅಷ್ಟತಾಳ**

ಕಾಮಿನಿಯರು ನೀವೆನ್ನಯ ಮಾತನು | ಕೇಳ್ದಿರೇನೈ | ನಮ್ಮ ||

ರಾಮಲಕ್ಷ್ಮಣರ ಉತ್ಸವ ವರ್ತಮಾನವ | ಕೇಳ್ದಿರೇನೈ || ||೨೨೪||

ತಾ ಮುನಿವರನೆಜ್ಞವನು ಕಾಯ್ದನಂತೆ | ಕೇಳ್ದಿರೇನ್ನೈ | ದುಷ್ಟ |
ತಾಮಸಿಚರರನ್ನು ಸಂಹರಿಸಿದನಂತೆ | ಕೇಳ್ದಿರೇನ್ನೈ || ||೩೧೫||

ಕಲ್ಲಾದಹಲ್ಯೆಯನುದ್ಧರಿಸಿದನಂತೆ | ಕೇಳ್ದಿರೇನ್ನೈ | ಗೌರಿ |
ವಲ್ಲಭನುರು ಚಾಪವಂ ಖಂಡಿಸಿದನಂತೆ | ಕೇಳ್ದಿರೇನ್ನೈ || ||೩೧೬||

ಸಲ್ಲಲಿತಾಂಗಿ ಜಾನಕಿಗೊಲಿಸಿದನಂತೆ | ಕೇಳ್ದಿರೇನ್ನೈ | ನ |
ಮ್ಮೆಲ್ಲರ ಬರ ಹೇಳಿ ಕಳುಹಿದ ಜನಕನು | ಕೇಳ್ದಿರೇನ್ನೈ || ||೩೧೭||

**ವಾರ್ಧಕ**

ತರುಣ ಕೇಳಾ ಮೇಲೆ ಸಕಲಸನ್ನಾಹದಿಂ
ಮರುದಿವಸ ಸತಿಸುತರ್ಮಂತ್ರಿ ಪ್ರಜೆ ಪರಿವಾರ
ಗುರುವಸಿಷ್ಠಾದ್ಯರೊಡಗೊಂಡು ವಾದ್ಯಾರವದಿ ನಡೆತಂದನಾ ಮಿಥಿಲೆಗೆ |
ಭರದಿ ಮುಂದೈತಂದು ಜನಕ ಕ್ಷಿತೀಶ್ವರಗೆ
ಹರಿಕಾರ ಪೇಳ್ದರಾ ದಶರಥನೃಪೋತ್ತಮನ
ಬರವಾಯಿತೆಂದು ಕೇಳ್ದಾಕ್ಷಣಂ ಸರ್ವಸಂಭ್ರಮದಿಂದಲಿದಿರ್ಗೊಂಡನು || ||೩೧೮||

**ಭಾಮಿನಿ**

ಏನನೆಂಬೆನು ಶರಧಿವಾರಿಧಿ
ಗಾನುವಂದದೊಳುಭಯರಾಯರ
ಸೇನೆ ಸನ್ನಹದೊಳು ಸತಿಯ ವೈವಾಹ ಸಂಭ್ರಮವ |
ತಾನೆರೆದು ಚೆಲುವಾಯ್ತು ಬಲು ಸಂ
ಮಾನದಿಂ ಸುರಮುನಿಪನೆಂದ ವಿ
ಧಾನವಿಡಿದಾ ಲಗ್ನವನು ನಿಶ್ಚೈಸಿದರು ಬಳಿಕ || ||೩೧೯||

**ರಾಗ ಸೌರಾಷ್ಟ್ರ ಏಕತಾಳ**

ತನುಜರು ಕೇಳಿರೈ ವಿನಯದಿ ದಶರಥ |
ಜನಕರು ಸಹಿತ ಮಾತಾಡಿ ||
ವನಜಲೋಚನನಿಗೆ | ವನಿತೆ ಸೀತಾದೇವಿ |
ತನಯ ಲಕ್ಷ್ಮಣನಿಗೂರ್ಮಿಳೆಯ || ||೩೨೦||

ಭರತಂಗೆ ಮಾಳವಿ ನಿರತ ಶತ್ರುಘ್ನಗೆ |
ತರುಣಿ ತಾ ಶ್ರುತಕೀರ್ತಿಯೆಂದು ||

ಪರಮ ವೈಭವದಿ ನಿರ್ಧರಿಸಿದ ಬಳಿಕಾಗ |
ವಿರಚಿಸಿ ನಿಶ್ಚಯ ತಾಂಬೂಲವಾ || ||೩೩೧||

**ವಾರ್ಧಕ**

ಎಸೆದುದಾ ಬಳಿಕ ವೈವಾಹಮಂದಿರದೊಳಂ
ಪಸರಿಸುವ ನವರತ್ನಭೂಷಣಂ ನೂತನದ
ವಸನವರ ಚಂದನಾಕ್ಷತೆಲಾಜೆದೂರ್ವೆಗೋರೋಜನಂ ನಾನಾವಿಧ |
ಕುಸುಮದಶಧಾನ್ಯದಿಂ ಸಾಹಿತ್ಯಮಂ ಮೇಲೆ
ಮುಸುಕಿಕೊಂಡಿಹುದು ಮಂಡಪದೊರೆಗೆ ವಿಪ್ರರ್ಜೋ
ಯಿಸರು ವಿದ್ವಾಂಸ ಕವಿಕೋವಿದರ್ಪಂಡಿತಾಚಾರ್ಯ ಯಾಜಕನಿಚಯವು || ||೩೩೨||

**ರಾಗ ಕಾಂಭೋಜಿ ಆದಿತಾಳ**

ಬಾಲರು ಕೇಳ್ದಿರೆ ಬಳಿಕ ಸಂತೋಷದಿ ಭೂ |
ಪಾಲನು ತನ್ನಯ ಪೊಳೆವ ಮಕ್ಕಳಿಗೆ ||
ಲೀಲೆಯಿಂದಲಿ ನಾಂದಿ ಮುಖವನು ಮಾಡಿ ವಿ |
ಶಾಲ ಮುತ್ತಿನ ಬಾಸಿಗವ ಕಟ್ಟಿಸಿದಾ ||
ಏನನೆಂಬೆನುತ್ಸವದಾನಂಗಳು || ||೩೩೩||

ರಭಸದೊಳಾ ಮೇಲೆ ರಾಜಪುತ್ರರನು |
ಇಭದ ಮೇಲೇರಿಸಿ ಎಸೆವ ವಾದ್ಯದೊಳು |
ಶುಭದ ಮುಹೂರ್ತದೊಳಾಗ ನಾಟ್ಯ ನರ್ತನದ |
ವಿಭವದಿ ಬಂದರ್ವಿವಾಹಮಂದಿರಕೆ ||
ಏನನೆಂಬೆನುತ್ಸವದಾನಂಗಳು || ||೩೩೪||

ಕಲಶಕನ್ನಡಿಗಳ ಕೈಯೊಳು ಪಿಡಿದು |
ಲಲನೆಯರೈದರು ಲಾಘವಂಗಳಲೀ |
ಒಲಿದಿದಿರಾಕ್ಷತೆ ಬೀಸುವ ಜನರನು |
ಕುಲದಿಂದ ಬಂದಿತು ಕೂಡೆ ದಿಬ್ಬಣವು ||
ಏನನೆಂಬೆನುತ್ಸವದಾನಂಗಳು || ||೩೩೫||

ಆನೆಯಿಂದಿಳಿಸಿದು ಆ ನೃಪಜನರ ಸು |
ಮಾನದಿ ಕುಳ್ಳಿರ್ಸಿದರ್ಮಂಟಪದೊಳಗೆ |
ಏನು ಧನ್ಯನೊ ವಿದೇಹನು ರಾಮಪಾದವ |

ತಾನೆ ತೊಳೆದು ತೀರ್ಥವನು ಧರಿಸಿದ ||
ಏನನೆಂಬೆನುತ್ಸವ ದಾನಂಗಳು || ||೩೩೬||

**ವಾರ್ಧಕ**

ಕಡೆಗೆ ಮಧುಪರ್ಕದಿಂ ವೈದಿಕಂಗಳಗೈದು
ಗುಡಜೀರಿಗೆಯನಿತ್ತು ಪುಣ್ಯಾಹ ರಚನೆಯಂ
ನಡೆಸಿ ಕನ್ಯಾವರಣಮಂ ಮಾಡಿ ಬಳಿಕ ಧಾರೆಯನೆರೆದನಾ ಜನಕನು |
ಜಡಿದು ಹೋಮಾಗ್ನಿಯಂ ಗಮಿಸಿ ಕುಳ್ಳಿಹ ಪುರುಷ
ರೆಡದೊಳೊಪ್ಪಿರ್ದರಾ ವಧುಗಳಾ ಮೇಲೆಲ್ಲ
ಮಡದಿಯರ್ಸೇಸೆಯಂ ತಳಿದು ಹಸೆಗೇಳಿಸಿದರಾ ಶೋಭನಂ ಪಾಡುತ || ||೩೩೭||

**ವಾರ್ಧಕ**

ಬೊಬ್ಬೆಯಂ ಗೈದಸುರೆ ಘರ್ಘರನೆ ಪಲ್ದಿನುವ
ನಿಬ್ಬೆರಕೆ ಮುನಿಪ ಕೈಕಾಲ್ಗೊಟ್ಟು ಲಕ್ಷ್ಮಣನ
ತಬ್ಬಿಕೊಳೆ ಮುನಿವಟುಗಳೋಡಿದರ್ಬಳಿಕಸುರರಿಪು ಕೋಪದಿಂ ಚಾಪದಾ |
ಕೆಬ್ಬಿಗಾರ್ಗೊಂದು ಕೂರ್ಗಣೆಯಿರಿಯಲಾಗ ಬಂ
ದುಬ್ಬಿರ್ದ ಬಲದ ತೋಳಂ ಕತ್ತರಿಸಲಾಗ
ಲರ್ಬಿಯಿಂ ನೀರ್ಪರಿವವೋಲ್ನೆತ್ತರಂ ಸುರಿದು ವನವರುಣಮಯವಾಗಲು || ||೧೭೫||

**ರಾಗ ಶಂಕರಾಭರಣ ಮಟ್ಟೆತಾಳ**

ಪೊಡವಿಗುರುಳೆ ಬಲದತೋಳು | ಜಡಿದು ಕನಲುತಾ |
ಎಡದ ಕೈಯೊಳ್ ಶೂಲವನ್ನು | ಪಿಡಿದು ಗಜರುತ ||
ನುಡಿದಳೆಲವೊ ಶೂಲವಿದನು | ಬಿಡುವೆನೀಕ್ಷಣ |
ತಡೆದುಕೊಂಡರಿಳೆಯೊಳ್ನೀನೆ | ಕಡುವಿಚಕ್ಷಣ || ||೧೭೬||

ಎನಲು ಕೇಳುತಾಗ ರಾಮ | ಕನಲಿ ಕೋಪದಿ |
ದನುಜೆ ಶೂಲವಿಡಿದ ಕೈ | ಯನೆ ಪ್ರತಾಪದಿ |
ತರಿದು ಬಳಿಕ ತಾ ಮಹೋಗ್ರ | ಶರದೊಳವಳನು |
ಧರಣಿಗುರುಳಿಸಲ್ಕೆ ಮುನಿಪ | ಪಿರಿದು ಪೊಗಳ್ದನು || ||೧೭೭||

**ವಾರ್ಧಕ**

ಬಳಿಕ ಕುಶ ಕೇಳು ತತ್ಕಲುಷಕಾಂತಾರಮಂ
ಕಳೆದು ತನ್ಮುನಿತಿಲಕನಾ ರಾಜಪುತ್ರನಂ
ಬಳಿಸರಿಸಿ ಪೊಕ್ಕನತ್ಯಧಿಕ ಪಾವನ ತಪೋವನದ ತನ್ನಾಶ್ರಮವನು ||
ಎಳೆದಳಿರಿನಿಂದೆಸವ ಪುಣ್ಯಭೂಜಗಳ ಮಂ
ಜುಳ ಲತಾ ಸೌರಂಭದರಳ್ದು ಶೋಭಿಸುವ ಪರಿ
ಮಳದ ಕುಸುಮೋಚ್ಚಳಿತ ಚದುರ ಮಾರುತ ಮಿಶ್ರ ಕರಮಹಾವನಮೆಸೆದುದು || ||೧೭೮||

ಶ್ರುತಿಗಳುಚ್ಚರಣೆಯಂ ಮಾಳ್ಪಸಲೆ ಪಿಕದ ಸಂ
ತತಿಯ ಶಾಸ್ತ್ರಧ್ವನಿಯ ನಿರತಗೈಯುವ ಶುಕ
ಪ್ರತತಿಯಂ ವರತಪಾನುಷ್ಠಾನದಿಂದಿಹವನೇಚರದ ನಿಚಯವದನು |
ಅತುಲ ಭುಜಬಲ ರಾಘವಂ ಕಂಡು ಮನ(ದಿ) ವಿ
ಸ್ಮಿತನಾಗಿ ಲಕ್ಷ್ಮಣಂ ಕೊಂಡಾಡುತಾ (ವಿಭವ
ಯತಿವಿರಾಜಿತ ತಪೋವನವ ಹೊಕ್ಕರು ಪುಣ್ಯಮೂರ್ತಿಗಳು ಮುನಿಪನೊಡನೆ ||) ||೧೭೯||

**ರಾಗ ಭೈರವಿ ಝಂಪೆತಾಳ**

ಧರಣಿಜಾ ಸುತಕೇಳು | ಪರಮಮುನಿ ಕೌಶಿಕನು |
ಹರುಷದಿಂದಾಗಲ | ಧ್ವರದ ಸಂಗ್ರಹವ ||
ಘನದಿ ನೆರಹಿಸಿ ತಪೋ | ವನದೊಳಿಹ ಋಷಿವರ್ಗ |
ವನು ಕರೆಸಿ ಮಖಶಾಲೆ | ಯನು ರಚಿಸಿ ಬಳಿಕ || ||೧೮೦||

ಚರು ಪುರೋಡಾಶಾಜ್ಯ | ವರ ಸಮಿಧೆ ತಿಲಗಳಲಿ |
ಮೆರೆದುದಾಹವನೀಯ | ಪರಮ ವೈಭವದಿ ||
ಮುನಿವರರ ಶ್ರುತಿಘೋಷ | ವಿನುತ ಹುತವಾಹನನ |
ಘನವಾದ ಚಿಳಿ ಛಿಟಿಲ್ | ಧ್ವನಿಯು ರಂಜಿಸಿತು || ||೧೮೧||

**ವಾರ್ಧಕ**

ತರಣಿ ಕುಲಜಾತಕೇಳ್ ಯಜ್ಞದೊಳ್ ತಿಲಸಮಿಧ
ಚರುಘೃತಗಳಾಹುತಿಯನುಂ ಬೀಳೆ ಧೂಮಮಂ
ಬರಕಡರಲಿತ್ತಲೀ ವಾರ್ತೆಯಂ ತಿಳಿದು ಬೇರೊಂದು ಠಾಣದಿ ದೈತ್ಯರು |
ನೆರೆದಭ್ರದೊಳು ಹವಿರ್ಭಾಗಮಂಗೊಂಬ ದಿವಿ
ಜರ ಬಾಯ್ಗಳಂ ಬಡಿದು ತುತ್ತುಗಳ ಬಾಚುತ
ಬ್ಬರಿಸಿ ತಿನ್ನಲು ಬೊಬ್ಬೆಯಾದುದು ಮುನಿಸ್ತೋಮವದು ಬೆದರಿತಾಕ್ಷಣದೊಳು || ||೧೮೨||

**ಭಾಮಿನಿ**

ಅಸುರರುಪಟಳವನ್ನು ತಾ ಸೈ
ರಿಸಲು ಬಲ್ಲರೆ ನಿಮ್ಮವರು ಸಾ
ಹಸದಿ ಕೂರ್ಗಣೆಗಳನು ಕಳುಹಿಸಿ ಚೋರವೃತ್ತಿಯಲಿ |
ಎಸೆದು ಹವಿರ್ಭಾಗಗಳ ತಿನ್ನುವ
ರಸುವನಂತಕಪುರಿಗೆ ಕಳುಹಲು
ಮಸಗಿದಂಬುಧಿಯಂತೆ ದೈತ್ಯ ಸುಬಾಹು ನಡೆತಂದಾ || ||೧೮೩||

**ರಾಗ ಭೈರವಿ ಏಕತಾಳ**

ಆರೆಲೊ ನೀ ಕೇಳು ಮನುಜಾ | ತಾ | ನಾರೆಂಬುದ ಬಲ್ಲೈ ತನುಜಾ |
ಚೋರನೆರುಹಿವನಕಿಂದೂ | ನಿನ | ಗಾರಟ್ಟಿದರೈ ಬಂದು || ||೧೮೪||

ದಾನವರೆಲ್ಲರ ಕೊಂದು | ಬಹು | ಮಾನದಿ ಮುನಿಗಳೊಳಿಂದು |
ನೀನಹೆ ಬಲು ಸುಪವಿತ್ರ | ನಾ | ಗೇನದು ನಿನ್ನ ವಿಚಿತ್ರ || ||೧೮೫||

ಒಂದೇ ಕ್ಷಣದಲಿ ನಿಮ್ಮಾ | ಕರೆ | ದಂದೀ ಮುನಿಗಳನೆಮ್ಮ |
ಮಂದಿರಕೊದು ತಿನ್ನುವೆವೂ | ಸುಖ | ದಿಂದ ರಾಜ್ಯವನಾಳುವೆವು || ||೧೮೬||

ಬಗುಳದಿರೆಲವೋ ದುರುಳಾ | ಕ್ಷಣ | ಕುಗಿವೆನು ನಿಮ್ಮಯ ಕರುಳಾ |
ತೆಗೆತೆಗೆ ತವ ವಿಕ್ರಮವಾ | ನೀ | ಜಗತಿಯನಾಳ್ವತಿಕ್ರಮವಾ || ||೧೮೭||

ಮೀರಿದು ಕರೆದಸುರರಿಗೇ | ಭೂ | ಭಾರವನಿಳುಹಿಸುವರೆಗೆ |
ಯಾರೆನ್ನಟ್ಟಿರಬೇಕೊ | ಖಳ | ಸಾರತ್ತಲು ಬಿಡು ಸಾಕೋ || ||೧೮೮||

ಎನೆ ಕೇಳ್ದಾಗಲೆ ಭರದಿ | ತಾ | ದನುಜನು ಕೋಪಿಸಿ ಧುರದೀ |
ವನಜದಳಾಕ್ಷನ ಕೂಡೇ | ಮ | ತ್ತನುವಾಗಿದು ನಲಿದಾಡೆ || ||೧೮೯||

**ವಾರ್ಧಕ**

ಭೋರ್ಗರೆದು ಮೆರೆವ ಭೈರವನಂತೆ ಜವನಂತೆ |
ಕೂರ್ಗಣೆಗಳಂ ಸುರಿದು ಧರಣಿಗಂ ತರಣಿಗಂ |
ಸಾರ್ಗಟ್ಟೆ ರಘುಜನಂ ತರುಬಿದಂ ತುರುಬಿದಂ ಖಾತಿಯಿಂದಂ ಸುಬಾಹು |
ಆರ್ಗುಂಟು ರಾಮನ ಪರಾಕ್ರಮಂ ವಿಕ್ರಮಂ |

ಸೇರ್ಗೊಡದೆ ಖಳನ ಶಸ್ತ್ರಾಳಿಯಂ ಪಾಳಿಯಂ |
ಮಾರ್ಗಣದೊಳವನ ಕೋದಂಡಮಂ ದಂಡಮಂ ಖಂಡಿಸಿದನಾಕ್ಷಣದೊಳು || ||೧೯೦||

**ರಾಗ ಶಂಕರಾಭರಣ ಮಟ್ಟೆತಾಳ**

ನೋಡಿ ದನುಜನು | ಮೋಡಿಯಿಂದಲೆ |
ಹೂಡಿ ಸುರಪದತ್ತದುರುಸ | ಗಾಢದಸ್ತ್ರವ || ||೧೯೧||

ಬಿಡಲು ರಾಘವ | ತಡೆಯದಾಕ್ಷಣ |
ಕಡುಗಿ ರೋಷದಿಂದಲದರ | ನಡುವೆ ತರಿದನು || ||೧೯೨||

ಬಳಿಕ ಕನಲುತಾ | ನಳಿನನಾಭನು |
ಖಳನ ತಲೆಯ ತರಿದು ಬಾಂ | ದಳದೊಳಿರಿಸಿದ || ||೧೯೩||

ಖೂಳಸೊರಗಲು | ಕೇಳಿ ತವಕದಿ |
ಕೀಳ ಮಾರೀಚನುರುಕ | ರಾಳ ರೂಪನು || ||೧೯೪||

ಬಂದು ರಘುಜನೋಳ್ | ಹೊಂದಿ ಯುದ್ಧವ |
ಕುಂದಿ ಮೊಗದ ಕಾಂತಿ ಬಳಿಕ | ಪಿಂದೆ ಸರಿದನು || ||೧೯೫||

**ಭಾಮಿನಿ**

ಕೃತಕದಲಿ ಮಾರೀಚನೆಂಬವ
ನತಿಶಯನು ಮೇಣಾತ ನೆನೆದನು
ಕ್ಷಿತಿಯೊಳೀ ರಘುಜನೊಳು ಯುದ್ಧವ ಗೈದು ಬದುಕುವರೆ |
ಅತುಳ ಬಲತನಗಿಲ್ಲ ಮಾಯದಿ
ಪ್ರತಿಭಟ ಭಯಂಕರನ ಗೆಲುವುದು
ಮತವೆನುತ ನಡೆತಂದ ಕಪಟದ್ವಿಜನ ರೂಪದೊಳು || ||೧೯೬||

**ರಾಗ ರೇಗುಪ್ತಿ ತ್ರಿವುಡೆತಾಳ**

ಜಯ ಜಯ ಜಯ ರಾಘವಾ | ದಯಾನಿಧೇ |
ಜಯ ಜಯ ಜಯ ರಾಘವಾ || ಪಲ್ಲವಿ ||

ಅಗಣಿತ ವಿಕ್ರಮ | ನನುಪಮ ಚಾರಿತ್ರ |
ಜಗತಿವಲ್ಲಭನೆ ಸಜ್ಜನ ರಕ್ಷಾಮಣಿಯೇ || ||೧೯೭||

ಮರೆಯ ಹೊಕ್ಕವರನ್ನು | ಮಮತೆಯಿಂದಲಿ ಕಾಯ್ವ |
ಬಿರುದು ನಿನ್ನದು ದೇವ | ಬಿಡದೆ ಎನ್ನನುಕಾಯೊ || ||೧೯೮||

**ಕಂದ**

ಎಂಬ ನಿಶಿಚರನ ಕಾಣುತ
ಲಂಬುಜನೇತ್ರನೊಳಾ ಕೌಶಿಕಮುನಿನಾಥಂ ||
ನಂಬಿದಿರಿವ ಭೂಸರನ
ಲ್ಲಿಂಬುಗೊಡದೆಸೆಯೆನುತ್ತಂ ತಾ ಬೊಬ್ಬಿರಿದಂ || ||೧೯೯||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿದ್ಯೆ ಮುನಿತಿಲಕನೊಂದೂ |
ಪೇಳಿದುದು ಹದನಾಯ್ತು ಮೇಣವ |
ಖೂಳನಾಗಲಿ ವಿಪ್ರನಾಗಲಿ | ತಾಳದಿಂದು || ||೨೦೦||

ದೀನತನದಲಿ ಬೇಡಿಕೊಳ್ಳುವ |
ನೇನು ದೋಷವ ಗೈದುದಾದರು |
ಮಾನದಲಿ ಕಳುಹುವುದು ಮತವೈ | ಭಾನುಕುಲದಿ || ||೨೦೧||

ಇಳೆಯ ಪಾಲರ ನೀತಿ ಮೇಲೀ |
ಖಳನುಪದ್ರವ ಹೊಂದದಂದದಿ |
ಕಳುಹುವೆನು ಬೇರೊಂದು ಠಾವಿಂ | ಗಳುಕದಿವನ || ||೨೦೨||

**ವಾರ್ಧಕ**

ಅನಿಲಶರದಿಂದೆಚ್ಚ ಭರಕೆ ಮಾರೀಚ ಖಳ
ವನಧಿ ದಕ್ಷಿಣ ತೀರಕೈದಿ ಬಿದ್ದಿರಲತ್ತ
ಅನಿಮಿಷರ ನಿಲಿಸಿದಂ ಹವ್ಯಭೋಜನಕೆ ಸುಸ್ಥಿರಮಾಗಿ ಸಂತೋಷದಿ |
ಮುನಿಪನಧ್ವರವನೇವೇಳ್ವೆ ನಿರ್ವಿಘ್ನದಿಂ
ಘನತರದೊಳಂ ಸಾಂಗಮಾದುದ್ಯೆ ಬಳಿಕ ಕೇಳ್
ತನುಜಾತಮವಭೃತ ಮಹೋತ್ಸವಂ ಸುಲಭಮಾಯ್ತುಸುರಾರಿ ಕರುಣದಿಂದ || ||೨೦೩||

**ಕಂದ**

ಈ ಪರಿಯೊಳ್ ನೃಪತನುಜ |
ತಾ್ಪಸವನದೊಳ್ ಕೌಶಿಕನೊಡಲಿರಲಿತ್ತಂ ||
ತಾಪರಿತೋಷದೊಳಿರೆ ಮಿಥಿ |
ಲಾಪುರದೊಳ್ ಜನಕ ನೃಪೋತ್ತಮನೆಸೆದಿರ್ದಂ || ||೧೦೪||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಒಂದುದಿನ ಮಿಥಿಲೇಶ ಹಯಮಖ |
ಕೆಂದು ನೆಲಶೋಧಿಸಲು ಕಾಣಿಸಿ |
ತಂದು ನವರತ್ನಗಳ ಖಚಿತದೊಳ್ |
ಬಂಧಿಸಿದ ಪೆಟ್ಟಿಗೆಯನು | ನಲವಿನಿಂದ || ||೧೦೫||

ನೋಡಿ ಮನದೊಳು ವಿಸ್ಮಯವಬಡು |
ತಾಡಿದನು ತಾನೇನ ಕಂಡೆನು |
ರೂಢಿಗದ್ಭುತವನ್ನು ಹರಹರ |
ಹಾಡಿನಧ್ವರವೆನುತಲೀ | ವಿನಯದಿಂದ || ||೧೦೬||

ತಿಳಿದು ನಾರದಮುನಿಪನಂಬರ |
ವಿಳಿದುತತ್ತ್ವರಕಾಗಿ ಜನಕನ |
ಬಳಿಗೆ ಬರುತಿರೆ ಕಂಡು ಭೂಪತಿ |
ಘಳಿಲನೈದಿದಿರ್ಗೊಂಡನು | ತೋಷದಿಂದ || ||೧೦೭||

**ರಾಗ ಪೂರ್ವಿ ರೂಪಕತಾಳ**

ನಾರದನೈತರೆ ನಾರಾಯಣೆನುತಲಿ |
ಧಾರುಣೀಪತಿ ಕಂಡು ಬಳಿಕ ||
ಭೂರಿಸಂತಸದಿಂದಲರ್ಘ್ಯಪಾದ್ಯದೊಳುಪ |
ಚಾರವ ಗೈದೆಂದನವಗೆ || ||೧೦೮||

ಏನಚ್ಚರಿಯವಿದು ಪೆಟ್ಟಿಗೆ ದೊರೆತಿರ್ಪು |
ದೇನು ಕಾರಣವೆನೆ ಮುನಿಪ ||
ತಾನೆಂದನೆಲೆರಾಯ ಕೇಳಿದದ್ಭುತವಲ್ಲ |
ಮಾನಿನಿಯಿಹಳೊರ್ವಳೊಲಿದು || ||೧೦೯||

ಆದಿಲಕ್ಷ್ಮೀದೇವಿ ಭೂಭಾರವಿಳುಹಲು |
ಮೇದಿನಿಯೊಳಗವತರಿಸಿ ||

ಮೋದದಿಂ ತವಜಾತೆಯಾಗಿರ್ಪಳಯ್ಯ ಭಾ |
ಗ್ಯೋದಯಕಿನ್ನೆಣೆಯುಂಟೆ || ||೧೧೦||

ಆ ಮಹಾಸತಿಗೆ ನೀ ಸೀತೆಯೆಂದೆನುತಲಿ |
ನಾಮವನಿಟ್ಟು ರಕ್ಷಿಪುದು ||
ಭೂಮಿಯೊಳ್ ಪಾವನನಹೆಯೆಂದು ಸಂತೈಸು |
ತಾ ಮುನಿ ನಡೆದಾ ಹಂಸೆಯಲಿ || ||೧೧೧||

**ವಾರ್ಧಕ**

ಜನಪ ಕೇಳಾ ಮಂದಸಂ ತೆಗಸಿ ನೋಡಿದಡೆ
ಮಿನುಗುತಿಹ ಕಾಂಚನಾಭರಣ ವರಚಂದಿರಾ
ನನದ ಕಸ್ತುರಿ ತಿಲಕ ಫಣಿವೇಣಿ ಭೃಂಗ ಕುಂತಳೆ ಚಾರುಹರಿಣನೇತ್ರೆ |
ವಿನುತಲಲಿತಾಂಗ ಪೀತಾಂಬರಾಲಂಕಾರ
ದಿನಪ ಶತಕೋಟಿ ಲಾವಣ್ಯದಿಂ ಶೋಭಿಸುವ
ಘನ ವಿಚಿತ್ರದ ಬಾಲೆಯೆಸೆವುತಿರೆ ತಂದಿರಿಸಿಕೊಂಡುಪಾಲನೆಗೈದನು || ||೧೧೨||

**ರಾಗ ಸೌರಾಷ್ಟ್ರ ಆದಿತಾಳ**

ಬಾಲಕರಿರ ಕೇಳಿ ಮಿಥಿಳೇಂದ್ರ ಭೂಪ ತಾ |
ನಾರಿಯತಂದು ಸಂತಸದೀ ||

ಬಾಲಕಿಯನು ತಂದು ಸ್ವೀಕಾರವನು ಗೈದು |
ಮೇಲೆ ರಕ್ಷಿಸಿದನನವರತ || | | ೧೧೩||

ವರಪುರೋಹಿತನಾದ ಶತಾನಂದ ಮುನಿಪನ |
ಕರೆಸಿದು ಜಾತಕರ್ಮವನು ||
ವಿರಚಿಸಿಗೀರ್ವಾಣ ಮುನಿನಾಥಪೇಳಿದ |
ತೆರದಿ ಸೀತಾಂಗನೆಯೆನುತ || ||೧೧೪||

ಪೆಸರಿಟ್ಟು ಮೋಹದೊಳ್ ಕರೆದು ಮುದ್ದಿಸುತಲೆ |
ಎಸೆವ ಬಾಲ್ತೊಡಿಗುಡಿಗೆಗಳ ||
ಕುಸುಮದಳಾಕ್ಷಿಗೆ ಶೃಂಗರಿಸಲು (ಚೆಲ್ವ) |
ಮಿಸುನಿ ಬೊಂಬೆಯ ವೋಲುನಲಿಯೆ || ||೧೧೫||

**ವಾರ್ಧಕ**

ಇರಲೊಂದು ದಿವಸದೋಳ್ ಸಂಚಾರಕೋಸುಗಂ
ಪರಶುರಾಮಂ ಭೂಮಿಪಾಲಕನ ಮಂದಿರಕೆ
ಬರಲವಂಗುಪಚರಿಸಲಾಗನುಷ್ಠಾನಮಂ ಗೈವ ಭರದಿಂದಲೆದ್ದು |
ಪರಮಸಾಹಸಿಪೋಗಿ ಬಹುದನ್ನೆಗಾಕ್ಷಿತಿಪ
ವರಮನೆಯೊಳೀರ್ದ ತ್ರಿಪುರಾರಿಕೋದಂಡಮಂ
ತರಳೆ ತಾನೆತ್ತಿಕೊಂಡಶ್ವಮಂ ಮಾಡಿಕುಣಿದಾಡಿದಳ್ ಸಖಿಗಳೊಡನೇ || ||೨೧೬||

**ರಾಗ ಮಧ್ಯಮಾವತಿ ಏಕತಾಳ**

ಆಡಿದಳು | ಸೀತೇ | ಆಡಿದಳು ||
ಪಾಡಿಸಿ ಬಿಲ್ಲುದುರೆಯೇರಿ |
ನೋಡಿ ಜನರ ನಗುತಲಾಗ || ಆಡಿದಳು ||
ಶಿವನ ಬಿಲ್ಲೆಂದರಿಯದೆ ತ | ಧ್ಬವನದಿಂದಲೆತ್ತಿಕೊಂಡು |
ತವಕದಿಂದ ಬರಿಯೊಳಿಟ್ಟು | ಹವಣಿಸಿ ಮತ್ತೆ ||
ಕುವರಿಯರ ಸಂಗಡವೆ ಕೂಡಿ |
ನವನೂತನದ ಸ್ವರಗಳಿಂದ |
ದಿವಿಜನೋ್ಡಿ ನಗುವತೆರದಿ |
ಕುವಲಯಾಕ್ಷಿ ಸಂತಸದಿಂದ || ಆಡಿದಳು || ||೨೧೭||

ಒದಗಿನಿಂದೈತರುವ ಭಾರ್ಗವ | ನಿದ ಕಂಡು ವಿಸ್ಮಿತನಾಗಿ |
ಮದನವೈರಿಯ ಧನುವು ಬಾಲಕಿ | ಗೊದಗಿತಿನ್ನೆಂತೋ ||
ಸುದತಿಯಲ್ಲಿವಳ್ ಸಾಕ್ಷಾತ್ ಗೋಮಿನಿ |
ವಧುವೆಂದರಿತು ತನ್ನ ಮನದಿ |
ಮುದವಗೊಂಡು ಭೂಮಿಪನೆಡೆಗೆ |
ಚದುರತಾನೈತಂದನತ್ತಾ || ಆಡಿದಳು || ||೨೧೮||

**ವಾರ್ಧಕ**

ಕಾಣೆನೆಲೆ ನೃಪತಿ ನಿನ್ನಂಥ ಸೌಭಾಗ್ಯರಂ
ಜಾಣನಹೆ ಕೇಳು ತವ ತನುಜೆಯಾಡಿಸುವ ಸು
ತ್ರಾಣದ ಶರಾಸನವ ಜೋಕೆಯಿಂದಿರಿಸಿ ಸ್ವಯಂವರವ ರಚಿಸು ಬಳಿಕಾ |
ಕೇಣವಿಲ್ಲದೆ ದಿಟ್ಟನಾರಿದಂ ಪಿಡಿದೆತ್ತಿ
ಬಾಣಂಗಳಂ ಹೂಡಿ ಎಸೆವನಾತನೆ ಜಗ
ತ್ರಾಣನಾಯಕನವಂಗೀ ಕುವರಿಯಂ ಕೊಡಿಸು ಧನ್ಯನಹೆ ನೀನೆಂದನು || ||೨೧೯||

**ಭಾಮಿನಿ**

ಇಂತುಪೇಳಿದು ಜಾಮದಗ್ನಿಯು
ಸಂತಸದಿ ತಾಗಮಿಸಲಿತ್ತಲು
ದಂತಿಗಾಮಿನಿಯಳ ಸ್ವಯಂವರವೆಸಗಬೇಕೆನುತ |
ಅಂತವಿಲ್ಲದ ಸಂನಹಂಗಳ
ನಂತರಿಸಿ ದೇಶಾಧಿಪತಿಗಳ
ತಿಂಥಿಣಿಯನೆರಹಿಸಿದು ಪುರಶೃಂಗರಿಸಲಾಕ್ಷಣದಿ || ||೧೧೦||

**ಕಂದ**

ಅನಿತರ ಮೇಲಾ ಭೂಪಂ
ಘನ ಋಷಿ ಸಂದೋಹವ ಕೂಡಿಸುತಾ ಬಳಿಕಂ |
ಮುನಿಕುಶಿಕಾತ್ಮಜನೆಡೆಗಂ
ವಿನಯದಿ ಚರನಂ ಕಳುಪಲು ಬಂದಿಂತೆಂದಂ || ||೧೧೧||

**ರಾಗ ಮಾರವಿ ಏಕತಾಳ**

ಸಲಾಮು ಮಾಡ್ತೆನೆಲೆ ಮುನಿಯಪ್ಪನೆ | ವಿಲಾಸದಿಂದ ಬೇಗ ಬಲ್ |
ಕಲಾಪಿ ಕೌಶಿಕನೆಂಬ ನೀನಹುದಲಾ ಪೇಳೆನಗೀಗ || ಸಲಾಮು ||
ಸಡಗರದೋಲ್ ನಮ್ದೊರೆ ಜನಕಪ್ಪನು |
ಹುಡುಗಿಯ ಮದುವೆಗೆಂದೆನುತಾ | ತಾ
ಕೊಡಕ್ಯಾ ಸಿಂದಿಗೆ ಕೂಡಿಸಿ ಧಾರೇನ್ |
ಕಡುಗಲಿರಾಯ | ತಡೆಯಾದೆ ವಾದ್ಯಗಳ್ | ಬೆಳತನಕಾಗಿ |
ನಡೆಯದ್ದೇಳ್ಳೆ ಯೀಕ್ಷಣ ಸುಮ್ಮನೆ |
ಬಿಡುವವನಲ್ಲೈ ಬಂದವನೀತಾ || ಸಲಾಮು || ||೧೧೨||

ಯೇಟಾದರು ನೀವು ಕಾಡಿನೊಳಿರ್ಸೋಗ |
ಸಾಟಿದ ಬಗೆಯೇನ ಬಲ್ಲಿರಿ | ಬಲ್ |
ಮೀಟಾಗಿಹುದೈ ಮಿಥಿಳಾನಗರದ | ತಾಟನೆ ಕಾಣುವರಿ |
ಪೋಟೇ ನೀಡಿದ ವೋಲೆಯ ನೋಡಿಸಿ | ಧಾಟಿವಂ ಮಾಡೆಮಗೆ |
ಬಿಡಧೂಟವ ಮಾಡ್ಯಾನ್ ಬೆರ್ರನೆನಾಂ
ಸಂಗಾಟಲೆ ಪೋಗುವ ಬಾ ಬೇಗಾ || ||೧೧೩||

**ವಾರ್ಧಕ**

ಚಾರಕಂ ತನಗತ್ತ ವೈವಾಹ ಪತ್ರಿಕೆಯ
ಚಾರುಮುನಿಯೋದಿ ಭೂಜಾತೆಸ್ವಯಂವರ
ಕ್ಕಾರಣಿಸಿ ಬಹುದೆಂದು ಬರೆದಿರ್ದ ಪರಿಕರಂ ತಿಳಿದು ತನ್ನಂ ಕರದೊಳೂ |
ನಾರಿ ಸೀತೆಯನು ರಘುಜಾತಂಗೆ ಪರಿಣಯಂ
ಧಾರುಣೀಶ್ವರರ ಮುಂದೆಸಗಬೇಕೆಂಬ ನಿ
ರ್ಧಾರಮಂ ಗೈದು ಸುಮುಹೂರ್ತದೊಳ್ ಪೊರಟನಾ ನೃಪಸುತರ ಕೂಡಿಕೊಂಡು || ||೧೧೪||

**ರಾಗ ಮಾರವಿ ಏಕತಾಳ**

ಬಳಿಕಲ್ಲಿಂದಲಿ | ಘಳಿಲನೆ ಪೊರಟಾ |
ಕುಳಮುನಿ ತಾನಾ | ಗಳೆ ಸುರನದಿಯಂ |
ಕಳೆದರೆ ಬೇಗದಿ | ನಳಿನಸಖಾನ್ವಯ |
ದೊಳು ಜನಿಸಿರ್ದರು | ಗಳು ಸಹಿತಾಗೀ || ಬಂದರಂದು || ||೧೧೫||

ಕಂಡರು ಪಥದೊಳು | ದ್ದಂಡದ ಸುಮತಿಯ |
ಖಂಡ ಪುರಾಂತರ | ಗೊಂಡಿದಿರ್ಬರಲು ಪ್ರ |
ಚಂಡನಶ್ವಂಜಯ | ಮಂಡಲಾಧಿಪನಿದಿ
ರ್ಗೊಂಡನು ವರದೋ | ರ್ದಂಡ ವಿಕ್ರಮರಾ || ಏನನೆಂಬೇ || | | ೧೧೬||

ಮುನಿಪತಿ ಬಳಿಕಾ | ವನಜದಳಾಕ್ಷನೋ |
ಳಿನಿತೀಪುರಕವ | ಜನಕನ ದಾಯಾದ್ಯ |
ನೃಪನಶ್ವಂಜಯ | ನಿನಗೆ ಸಂಬಂಧಿಗ |
ನೆನುತರುಹಿದನಾ | ಗನುನಯದಿಂದಾ || ಏನನೆಂಬೆ | ||೧೧೭||

ಕಡೆಗಾ ಭೂಪನು | ಬಿಡದಲೆ ಮನ್ನಿಸಿ |
ಕಡುತವಕದಿ ಜಗ | ದೊಡೆಯನ ಕಳುಹಿಸಿ |
ಕೊಡಲಾಗಳು ಪಥ | ವಿಡಿದೈ ತರುತಿರೆ |
ಪೊಡವಿಯೊಳದ್ಭುತ | ಕಡರಿದ ವನಕೇ || ಬಂದರಂದು || ||೧೧೮||

**ವಾರ್ಧಕ**

ಕೋಕನಂಗಳನಾಡದಿರ್ಪ ಪುಷ್ಕರದೋಲ್ದಿ
ವಾಕರ ಹಿಮಾಂಶುಗಳ್ ಮೂಡದಂಬರದೋಲು
ಮಾಕರದೊಳಿಲ್ಲನಿರ್ದಾಗಾರದೋಳ್ ಗೌತಮಾಶ್ರಮಂ ಕಂಗೊಳಿಸಲು |
ಈ ಕುತೂಹಲವದೇನೆಂದು ಹರಿ ಬೆಸಗೊಂಡ

ರಾ ಕುಶಿಕನಂದನಂ ಸಂತಸದಿ ನುಡಿದನೆಲೆ
ಕಾಕುತ್ಸ್ಥಕೇಳ್ ಗೌತಮನ ಸತಿಗೆ ಸುರಪನಳುಪಿದರೆ ಮುನಿ ಶಪಿಸಿರ್ದನು || ||೧೧೯||

ನಡನಡುಗುತ್ತಾ ಜಗತ್ಪಾವನೆಯು ಖೇದದಿಂ
ದೆಡೆ ಬಿಡದೆ ಬಳಿಕಾ ಮುನೀಶ್ವರನ ಚರಣಮಂ
ಪಿಡಿದೆಂದಳೆಲೆ ಪ್ರಾಣನಾಥನಾ ನಿರಪರಾಧಿಯು ಸಲಹವೇಳ್ವುದೆನುತ |
ಜಡಿವ ಕಂಬನಿಯಿಂದ ಬೇಡಿಕೊಳಲಿವಳಿಂಗೆ
ಕಡುಕರುಣದಿಂದ ಶಾಂತತ್ವಮಂ ತಾಳ್ದು ಮುನಿ
ನುಡಿದನೈ ಮುಂದೆ ಕಾಲಾಂತರದಿ ರಾಮನಿಂದುದ್ಧಾರಮಾಗಲೆಂದು || ||೧೨೦||

ಆಗಲೆ ವಿಶಾಪಮಂಗೊಂಡು ವನಜಾಕ್ಷಿ ಶಿಲೆ
ಯಾಗಿ ಬಿದ್ದಿಹಳಿಲ್ಲಿ ಕೇಳಿದೈಯೆಲೆ ಕೃಪಾ
ಸಾಗರನೆ ನಿನ್ನ ಪದದರುಶನವನಿತ್ತಿವಳನುದ್ಧರಿಸುದೆನುತಿಲ್ಲಿಗೆ |
ಸಾಗಿ ಬರುಬರುತಲಾ ಪಾಷಾಣದಲ್ಲಿ ಭವ
ರೋಗ ಭೇಷಜನ ಪರಮಾಂಘ್ರಿರಜಮಂ ಸೋಂಕ
ಲಾಗಿ ಶಿಲೆಯೊಡೆದು ಸಲ್ಲಲಿತಾಂಗಿ ಬಂದು ಪದದೊಳ್ ಮಣಿದಳಾ ರಘುಜನ || ||೧೨೧||

**ರಾಗ ದೇಶಿ ಸಾವೇರಿ ಏಕತಾಳ**

ಜಯ ಜಯ ಜಯ ರಾಘವ | ಜಗನ್ಮಯ ವಿಶ್ವರೂಪ ಭವ |
ಭಯನಾಶನಘಹರ || ಪ ||

ಬಹುದೀನಳಾಗಿಯರಣ್ಯದಿ ಬಿ | ದ್ದಿಹೆ ತಾನು ನೀಯೆನ್ನ ಪುಣ್ಯದಿ |
ಕ್ಷಯರಹಿತನಿಲ್ಲಿಗೆ ಬಂದು | ಮಹಿಳೆಗುದ್ಧರಿಸಿದೆ || ಜಯ ಜಯ || ||೧೨೨||
ಸ್ಮರಣೆಯಿಂದಲಿ ಜನ್ಮ ಜನ್ಮದ ಪಾಪ | ತರಿದೋಗುವದು ನಿದ್ದೆ ತನ್ಮಯಳಾಗಿ |
ಸ್ಮರಿಸದಿದ್ದವಳಿಂಗೆ ದೊರಕಿದುದಾಶ್ಚರ್ಯ | ಜಯ ಜಯ || ||೧೨೩||

**ಭಾಮಿನಿ**

ಇನಿತು ವಂದಿಸಿ ಚರಣಕೆರಗಿದ
ಮುನಿಸತಿಯಹಲ್ಯೆಯನು ಕಾಣುತ
ವನಜದಳಲೋಚನನು ತಾ ಮಿಗೆ ತೆಗೆದು ಮನ್ನಿಸಲು |
ಅನಕ ಗೌತಮನೆಂಬ ವೃತಿಪನು
ಇನಕುಲೇಶರ ಬಳಿಗೆ ಬರಲಾ
ತನಿಗೆ ತಕ್ಕವಿಸುತ್ತಲಾ ಬಳಿಕಿತ್ತನಾ ಸತಿಯ || ||೧೨೪||

**ವಾರ್ಧಕ**

ಮುನಿಪತಿಯ ನೋಡಿ ಸಂತಸಗೊಂಡು ನುಡಿದನೆಲೆ
ವನಜಲೋಚನ ನಿನ್ನ ಮಹಿಮೆಗವಧಿಯ ಕಾಣೆ
ಮನುಜ ರೂಪವ ತಾಳ್ದು ಬಂದುದಕೆ ತಾ ಪೇಳ್ವೆ ಶಿಲೆಯನುಂ ಉದ್ಧರಿಸಿದು |
ವನಿತೆಯಂಗೈದುಮೆನಗಿತ್ತ ಕಾರಣದಿಂದ
ನಿನಗೆ ಕಲ್ಯಾಣಮಾಗಲಿ ಮುಂದಿದೇ ಪರಿಯೊ
ಳೆನುತ ನಲಿದಾಡಿ ಪರಸಿದು ತನ್ನ ಸತಿಯಳಂ ಕೊಂಡೈದಿದಂ ತೋಷದಿ || ||೧೩೫||

**ರಾಗ ಕಾಂಭೋಜಿ ಝಂಪೆತಾಳ**

ಕುಶನೆ ಕೇಳಾ ಮೇಲೆ | ನೃಪಸುತರನೊಡಗೊಂಡು |
ಕುಶಿಕಸುತ ಮುಂದೈತರಲ್ಕೆ ||
ಕುಶಲದಿಂದೆಸೆವ ಮಿಥಿ | ಲಾಪುರದ ಕಲಶಗಳು |
ಶಶಿ ಸೂರ್ಯರಂತೆ ತೋರಿದವು || ||೧೩೬||

ಇದಕೊ ದೂರಿಲ್ಲ ರಾ | ಘವ ನೋಡು ನಿಮಿಕುಲದ |
ಚದುರನೃಪನೂರು ಕಾಣುತಿದೆ ||
ಒದಗಿಸಿಯೆ ಪೋಪುದೆನೆ | ಅಗಣಿತ ಗುಣಾನ್ವಿತರು |
ಮುದದಿ ನಗರವ ಹೊಕ್ಕರಂದು || ||೧೩೭||

ಮುನಿಪತಿಯ ಬರವಾಯಿ | ತೆಂದು ಕೇಳ್ದಾ ಕ್ಷಣದಿ |
ಜನಕನೃಪನಿದಿರ್ಗೊಂಡು ಬಳಿಕ ||
ಇನಕುಲೇಶರ ಸಹಿತ | ಪಡಿಬಿಡಾರದೊಳಿಳುಹಿ |
ವಿನಯದಿಂ ಮನ್ನಿಸಿದನಾಗ || ||೧೩೮||

**ಭಾಮಿನಿ**

ಮೇಲೆ ಪುರವನು ಶೃಂಗರಿಸಿದು ವಿ
ಶಾಲ ಗುಡಿತೋರಣವಗಟ್ಟಿಸಿ
ಮೂಲಮಂತ್ರಿ ಸುಧಾಮನಿಂದುದ್ವಾಹಪರಿಕರದ |
ಜಾಲವನು ನೆರಹಿಸುತ ಸಕಲನು
ಕೂಲತೆಯ ಗೈದೊಡನೆ ತಾ ಭೂ
ಪಾಲ ನಿಚಯವ ಬೇರೆ ಬೇರಿಳುಹಿಸಿದು ಮನ್ನಿಸಿದ || ||೧೩೯||

**ರಾಗ ಕೇದಾರಗೌಳ ಅಷ್ಟತಾಳ**

ಆಮೇಲುದ್ವಾಹ ಮಂಟಪ ಕಾಣಾ ರಂಜಿಸಿ |
ಗೋಮೇಧಿಕಗಳೆಂದು ||
ನೇಮಿಸಿ ನೆಲಗಟ್ಟುಕಟ್ಟಿ ವೈಡೂರ್ಯದಿಂ |
ದಾ ಮಹಕಂಭವಿಟ್ಟು || ||೧೪೦||

ಪಚ್ಚೆಯ ತೊಲೆಗಳು ವಜ್ರದ ಮಾಳಿಗೆ |
ಸ್ವಚ್ಛನೀಲದ ಲೋವೆಯಾ ||
ಹೆಚ್ಚಿನ ಮುತ್ತು ಮಾಣಿಕಗಳ ಝಲ್ಲಿಯಾ |
ಮುಚ್ಚಿದ ಕುಂದಣವ || ||೧೪೧||

ಪವಳದ ಹೊಸ್ತಿಲು ಪುಷ್ಯರಾಗದ ಗೋಡೆ |
ಪವಣಿಸಿದನುಪಮದ ||
ನವರತ್ನ ಖಚಿತದ ಕಲಶಗಳೆಸೆದವು |
ರವಿಕೋಟಿ ತೇಜದಿಂದ || ||೧೪೨||

**ವಾರ್ಧಕ**

ಇಳಿದುದೊಲ್ ದಿವಿಜೇಂದ್ರನಾಲಯದ ಭಾಗ್ಯಮೀ
ಸ್ಥಳಕೆ ವೈವಾಹ ಮಂಟಪದ ರೂಪಂಗೊಂಡು
ತಿಳಿಯದೆನಲೀಪರಿಯ ರಂಜಿಸಿತು ವಿವಿಧ ರಚನಾ ಚಮತ್ಕಾರದಿಂದ |
ಬಳಿಕ ನಗರಂ ಗುಡಿಯ ಪಲ್ಲವದ ಝಲ್ಲರಿಯ
ಬಿಳುಗೊಡೆಗಳುಂ ಪತಾಕೆಗಳ ನಾನಾ ವಿಧದ
ಕಲಶ ಮುತ್ತಿನ ಸೂಸಕದ ಸೀಗುರ್ತಗಳಿಂದ ಸುರಪುರಕೆ ಮಿಗಿಲೆನಿಸಿತು || ||೧೪೩||

**ರಾಗ ಭೈರವಿ ಝಂಪೆತಾಳ**

ರಾಜ ಕುವರರು ಕೇಳಿ | ಮೂಜಗದಿ ಪೊಸತೆನಲು |
ರಾಜಶೇಖರನದನು | ರಾಜಸಭೆಗಂದು || ||೧೪೪||

ತರಿಸೆನುತಲನುಜಂಗೆ | ಕರೆದು ಪೇಳಲು ಪೋಗಿ |
ಭರದಿ ಸಾವಿರದನೂ | ರ್ಕರಿ ಘಟಿಗಳಿಂದ || ||೧೪೫||

ಎಳೆತಂದು ರಾಜಸಭೆ | ಗಿಳುಹಲಾಕ್ಷಣದಲ್ಲಿ |
ತಳೆದು ಶೈವಾಗಮಂ | ಗಳಲಿ ಪೂಜಿಸಲು || ||೧೪೬||

**ವಾರ್ಧಕ**

ಅಂಗಜ ಸುರೂಪ ಕೇಳಿತ್ತಲುವಿದೇಹನೃಪ
ಡಂಗುರಂ ಪೊಸಿದಂ ನೆರದಖಿಳ ಪಾರ್ಥಿವರ
ಶೃಂಗ ಸಂದೋಹದೊಳ್ ವೈದೇಹಿಯಂ ವರಿಸುವಡೆ ಮಹೇಶನ ಚಾಪವ |
ಹಿಂಗದೇರಿಸಿ ಗೆಲುವೆನೆಂಬ ಸಾಹಸಮುಳ್ಳ
ತುಂಗ ಭುಜಬಲರು ನಡೆತನ್ನಿರೆಂದೆನೆ ಬಿಡಾ
ರಂಗಳೊಳ್ ಸೂರ್ಯಾಸ್ತ ಸಮಯಾಂತರದೊಳೆಲ್ಲರುಂ ಕೇಳ್ವ ತೆರದಿಂದಲಿ || ||೨೪೭||

**ಭಾಮಿನಿ**

ಮರುದಿವಸ ಬೆಳಗಿನಲಿ ಜನಪನು
ಕರೆಸಿ ಸರ್ವರಸಭೆಗೆ ತಾನುಪ
ಚರಿಸಿ ತಾಂಬೂಲಾದಿಗಳನಿತ್ತವರ ಮನ್ನಿಸುತಾ |
ವರಕುಶಧ್ವಜನೊಡನೆ ಸಭೆಗಾ
ತರಳಲೋಚನೆಯನ್ನು ತಾರೆನೆ
ಭರದಿ ತಾನೈತಂದು ಕಂಡನು ದಿವಿಜವಂದಿತೆಯಾ || ||೨೪೮||

**ರಾಗ ಮಧ್ಯಮಾವತಿ ಏಕತಾಳ**

ಧರಣಿಪಾಲಕನಂದು | ಗುರುವಸಿಷ್ಠರ ಕರಸಿ |
ತರಳರ್ಗೆ ಗುಣನಾಮ | ಕರಣಂಗಳನು ಗೈದ || ||೧೧೪||

ಸುರನರೋರಗ ನುತಗೆ | ಕರೆದು ರಾಮಾಖ್ಯದೊಳು |
ಕಿರಿಯಾತ್ಮಭವಗಿಟ್ಟ | ಭರತಾಭಿಧಾನ || ||೧೧೫||

ಕಡೆಗೆ ಪುಟ್ಟಿದವರ್ಗೆ | ದೃಢದಿ ಲಕ್ಷ್ಮಣ ಶತ್ರುಘ್ನ |
ಕಡುದಿಟ್ಟರಿವರೆಂದು | ಪೊಡವೀಶ ನುಡಿದ || ||೧೧೬||

**ವಾರ್ಧಕ**

ಪೊಡೆಯೊಳಗೆ ಬ್ರಹ್ಮಾಂಡ ಕೋಟಿಗಳನನುದಿನದೊ
ಳಡಗಿಸುವ ಮಹಿಮಂಗೆ ಧರಣಿಪನ ಮಂದಿರದೊ
ಳಡಕದಿಂದಿರವಾಯ್ತು ಪಯನಿಧಿಯನುಳಿದು (ದಶರಥ) ನೃಪನ (ಭಾಗ್ಯವೆಂಬೆ) |
ಮಡದಿಯಳ ಮೊಲೆವಾಲು ಸವಿಯಾಯ್ತು (ವನಿತೆಯರ)
ಜೋಗುಳುವೆ ಹಸನಾಯ್ತು ಶ್ರುತಿವೇದ್ಯ (ಗೀಪರಿಯೊಳಾನೃಪಾಲಯದೊಳಂದು) || ||೧೧೭||

**ಕಂದ**

ಇಂತಾಶ್ರುತಿಸ್ಮೃತಿಗೋಚರ
ನಂ ತಮ್ಮಯ ಮನೆಯೊಳ್ ನೃಪನರ್ಧಾಂಗಿಯರುಂ |
ಸಂತಸದಿಂದಂ ಕನಕದೊ
ಳಂತರಿಸಿದ ತೊಟ್ಟಿಲೊಳಿಟ್ಟಾಡಿದರಾಗಳ್ || ||೧೧೮||

**ರಾಗ ಜೋಗುಳ ಅಷ್ಟತಾಳ**

ಜೋ ಜೋ ರಘುಕುಲದೀಪ ಕಲಾಪ ||
ಜೋ ಜೋ ಪರಬ್ರಹ್ಮರೂಪ ನಿರ್ಲೇಪ |
ಜೋ ಜೋ ರವಿಕೋಟಿತೇಜ ವಿರಾಜ |
ಜೊ ಜೋ ಶ್ರೀರಾಮರಾಜಾಧಿರಾಜ || ಜೋ ಜೋ || ||೧೧೯||

ತ್ರುವಿತ್ರುವಿ ಇಕ್ಷ್ವಾಕು ವಂಶೋದ್ಧಾರ |
ತ್ರುವಿತ್ರುವಿ ಪರತರ ಕಂಬುಶರೀರ |
ತ್ರುವಿತ್ರುವಿ ನಿರುಪಮ ಸದ್ಗುಣಚರಿತ |
ತ್ರುವಿತ್ರುವಿ ಭರತಾಖ್ಯಪಾವನ ಚರಿತ || ಜೋ ಜೋ || ||೧೨೦||

ಜೋ ಜೋ ಮನುಸಂತತಿ ಪರಿಪಾಲ |
ಜೋ ಜೋ ಶೇಷಾವತಾರ ಸುಶೀಲ |
ಜೋ ಜೋ ದೈತ್ಯ ಕುಲಾಂತಕನನುಜ |
ಜೋ ಜೋ ಲಕ್ಷ್ಮಣ ದಶರಥತನುಜ || ಜೋ ಜೋ || ||೧೨೧||

ತ್ರುವಿತ್ರುವಿ ಇನ ಪರಂಪರೆಯ ವಿಶೇಷ |
ತ್ರುವಿತ್ರುವಿ ನವರತ್ನ ಖಚಿತ ವಿಭೂಷ |
ತ್ರುವಿತ್ರುವಿ ಶತಧಾರಾಂಶುಸಂಪೂರ್ಣ |
ತ್ರುವಿತ್ರುವಿ ಶತ್ರುಘ್ನ ಸುಖದ ಸಂಪೂರ್ಣ || ಜೋ ಜೋ || ||೧೨೨||

**ಭಾಮಿನಿ**

ಕುಶಲವರು ಕೇಳಿಂತು ಬಿದಿಗೆಯ
ಶಶಿಯ ದಿನದಿನವೇರಿ ಕಲೆಗಳ
ವಶಗೊಳುವ ತೆರನಂತೆ ಬಾಲರು ನೆರೆದರಾ ಬಳಿಕ |
ಕುಶಲದಲಿ ಚವಲೋಪನಯನವ
ದಶರಥ ನೃಪೋತ್ತಮನು ಗೈಸಿದ
ದಶವರುಷದಾದಿಯೊಳು ಕಲಿಸಿದ ಸಕಲ ವಿದ್ಯೆಗಳ || ||೧೨೩||

**ರಾಗ ತೋಡಿ ಆದಿತಾಳ**

ನೋಡುವೆ ಮಕ್ಕಳಿರಾ | ನೀವಿಂ | ದಾಡುವ ವಿದ್ಯೆಗಳ ||
ಕಾಡಿನೊಳಗೆ ವೊಬ್ಬೊಬ್ಬರೆ | ಮಾಡದಿರಿ ಬೇಟೆಗಳ || ನೋಡುವೆ || ಪ ||

ರಾಮ ಬಾರೊಯೆನ್ನ | ಮುದ್ದು | ರಾಮ ಮನವಿಶ್ರಾಮ ||
ಕೋಮಲಾಂಗ ಸೂರ್ಯಾನ್ವಯ ಲ | ಲಾಮ ಸದ್ಗುಣಧಾಮ || ನೋಡುವೆ || ||೧೨೪||

ಎನ್ನ ಮುಂದೆ ನಿಲ್ಲು ನೀ ಮೋ | ಹನ್ನ ಬಂದು ಭರತಾ |
ಮನ್ನಿಸೆಲ್ಲ ಕಲಿತ ವಿದ್ಯೆ | ಯನ್ನು ತೋರನವರತ || ನೋಡುವೆ || ||೧೨೫||

ನಿಲ್ಲು ಜಾಣುಗದಿರು ಲಕ್ಷ್ಮಣನೆ | ಎಲ್ಲಿಯು ತಾ ಕಾಣೆ ||
ಮೆಲ್ಲನೆ ಹತ್ತಿರ ಬಾರೊ ಪೋಪುದು | ಬಲ್ಲೆ ನಿನ್ನಾಣೆ || ನೋಡುವೆ || ||೧೨೬||

ಮಗುವೆ ಬಾರೈ ಶತ್ರುಘ್ನ ನೀ | ನಗುತಲೆನ್ನ ಮುಂದೇ ||
ಸೊಗಸುದೋರಿ ನಲಿಯೋ ಬೇಗ | ಬಗೆಯನೋಳ್ಪೇ ನಿಂದೆ || ನೋಡುವೆ || ||೧೨೭||

**ವಾರ್ಧಕ**

ವಸುಧಾಸುತಾತ್ಮಜನೆ ಲಾಲಿಸೈ ಬಳಿಕಿತ್ತ
ಲೆಸೆವ ಸಿದ್ಧಾಶ್ರಮದೊಳಮಿತ ಮುನಿ ವೃಂದದಿಂ
ಕುಶಿಕಸುತನಿರಲು ಮಾರೀಚಾಖ್ಯ ಕಲಿ ಸುಬಾಹುಗಳೆಂಬರತ್ಯಧಿಕದ |
ಪೆಸರುಳ್ಳ ದೈತ್ಯರುಂ ತಾಪಸ ಕುಲೋತ್ತಮರ್
ಎಸಗುವಧ್ವರಕೆ ಕಂಟಕರಾಗೆ ಚಿಂತಿಸುತ
ಅಸಮ ಮುನಿ ಕೌಶಿಕಂ ಪೋಗಿ ಕಮಲಜನೊಡನೆ ದೂರಲ್ಕವಂ ಪೇಳ್ದನು || ||೧೨೮||

ಮುನಿಪ ಕೇಳಿದರಾಕೆ ಭಯಗೊಂಡು ಬಂದಿರ್ಪೆ
ವನಜಾಕ್ಷ ದಶರಥನ ಸುತನಾಗಿ ಜನಿಸಿಹಂ
ಘನ ಬೇಗದಿಂದೈದು ನಿರುಪಮನ ಕೊಂಡುಪೋಗೆಂದು ವಾಣೀಶ ನುಡಿಯೆ |
ತನುಪುಳಕದಿಂದ ವಿಶ್ವಾಮಿತ್ರ ಧರೆಗಿಳಿದು
ಮುನಿವಶಿಷ್ಠರನರಸಿ ಬಂದು ಘೋರಾರಣ್ಯ
ದನುಪಮೋದ್ಯಾನ ಸಹಿತೆಲ್ಲ ಕಳೆಕಳೆದಯೋಧ್ಯಾಪುರಕೆ ನಡೆತಂದನು || ||೧೨೯||

**ಕಂದ**

ಮುನಿತಾ ಬಂದಿಹನೆಂಬೀ
ಘನವಾರ್ತೆಯ ಚರರೈತಂದರುಹಲ್ಕಾಗಂ |
ವಿನಯದಿ ಸಭೆ ಸಹಿತಾಕ್ಷಣ
ಜನಪಂ ಕಾಣಿಸಿ ಕೊಂಡಾತನ ಕರೆತಂದಂ || ||೧೩೦||

**ರಾಗ ಕಾಂಭೋಜಿ ಅಷ್ಟತಾಳ**

ಬಂದ ಮುನಿಯ ಪೀಠದಲ್ಲಿ | ಚಂದದಿಂ ಕುಳ್ಳಿರಿಸಿ ಪಾದ |
ದ್ವಂದ್ವವನ್ನು ಪೂಜಿಸುತ್ತಲೀ ||
ನಿಂದು ನೃಪತಿ ಕರವ ಮುಗಿವು | ತಿಂದು ಪುರಕೆ ಬಿಜಯಂಗೈದಿ |
ರ್ದಂದವೇನೆನಲಾತ ಪೇಳ್ದನು || ||೧೩೧||

ಬಂದೆವಯ್ಯ ಹೀಗೆ ನಿನ್ನಲಿ | ಕಂದರಾಗಿಹರೆಂಬ ವಾರ್ತೆಯ |
ಹೊಂದಿತದನು ದಾರಿಯ ಮ್ಯಾಲೆ ||
ಚಂದವಾಯ್ತು ಬಹಳ ದಿವಸ | ದಿಂದ ಪುತ್ರರಿಲ್ಲವೆಂಬು |
ದೊಂದು ಹೇತುವ ಕಳೆದೆ ಲೋಕದಿ || ||೧೩೨||

ನಾವಿಂದಿಲ್ಲಿಗೆ ಬಂದುದು ನೀ | ಭೂವರಾಂಕ ಲಾಲಿಸೈ ಸ |
ದ್ಭಾವದಿಂದ ಮಖವನೆಸಗುವ ||
ರೀವಿಯನ್ನು ಯೋಚಿಸಿ ಕೊಂ | ಡಾವ ಪುಣ್ಯ ನಿಧಿಗಳಾದರು |
ಕಾವರೆಂಬ ಹದನ ನೋಳ್ಪಾರೆ || ||೧೩೩||

**ವಾರ್ಧಕ**

ಅಗ್ನಿಹೋತ್ರಾದಿ ನೈಮಿಕಗಳೀವರೆಗೆ ನಿ
ರ್ವಿಘ್ನದಿಂ ನಡೆದುದೈ ಕ್ಷಿತಿಪ ಕೇಳೀಗದಕೆ
ವಿಘ್ನಗಳು ಬಂದಕಾರಣದಿಂದಲೆಮ್ಮ ಬರವಾಯ್ತಿಲ್ಲಿಗೆನೆ ಕೇಳುತ |
ಯಜ್ಞಕೆನ್ನಿಂದಾಹ ಸೇವೆಯಂ ಗೈವೆ ಸ
ರ್ವಜ್ಞನೆ ನಿರೂಪಿಸಿದ ಸಕಲವಂ ಮಾಳ್ಪೆ ನಿ
ಮ್ಮಾಜ್ಞೆಯಂ ಮೀರ್ವನಲ್ಲೆಂದು ನೃಪನುಡಿಯಲಾಮಾತಿಗವನಿಂತೆಂದನು || ||೧೩೪||

**ರಾಗ ಮುಖಾರಿ ಏಕತಾಳ**

ಹೋ ಹೋ ಮೆಚ್ಚಿದೆ ಮೆಚ್ಚಿದೆ ನೃಪತಿ | ಈ ಮಾತಿಗಾನು |
ಹೋ ಹೋ ಮೆಚ್ಚಿದೆ ಮೆಚ್ಚಿದೆ ನೃಪತಿ ||

ಸೋಹರಸಲು ಪೋದ | ಹಗ್ಗವು ಕಾಲಿಗೇ |
ಸುತ್ತಿದ ತೆರನಂ | ತಾದುದು ಭಳಿರೆ || ಹೋ ಹೋ || ||೧೩೫||

ಪೂರ್ವದ ದೊರೆಗಳಂತಲ್ಲ | ನೀನೀಗ ಭೂಪ |
ಉರ್ವಿಯೊಳಾರೆಣೆಯಿಲ್ಲ ||
ಪರ್ವತ ಜರೆದರು | ನಿರ್ವಹಿಸೆಂದಿಗು |
ಸರ್ವಥ ಭಾಷೆಯ ಮೀರ್ವವನಲ್ಲ || ಹೋ ಹೋ || ||೧೩೬||

ವಸ್ತುವಾಹನವ ನಾ ಕೇಳೆ | ನಿನ್ನೊಡನಿರ್ದ |
ವಸ್ತು ಯಾವುದು ಕೊನೆ ಪೇಳೇ ||
ಪ್ರಸ್ತುತ ಸುತರೊಳು ಮಸ್ತಕಮಣಿ ನಿಗ |
ಮಸ್ತುತನ ಮನಸ್ವಸ್ಥದಿ ನೀ ಕೊಡು || ಹೋ ಹೋ || ||೧೩೭||

**ವಾರ್ಧಕ**

ಕುಶನೆ ಕೇಳಾ ಮುನಿಪನುತ್ತರಂ ನಾಟಿದವು
ವಶವಳಿದು ಮುನ್ನಿನೊಳ್ ಜಿಂಹ್ವೆ ಪೆಡೆತಲೆ ಸೇರಿ
ವಶವಿಲ್ಲವಾಯ್ತು ಕರಣೇಂದ್ರಿಯಂಗಳು ಹಲವನೆಣಿಸುತ್ತಲಿರ್ದು ಬಳಿಕಾ |
ಕುಶಿಕಜನೊಳೆಂದ ನೀ ಯೌವನಂ ತುಂಬದಿಹ
ಶಿಶುವಿನಿಂದಾ ಮಹಾಯಜ್ಞಮಂ ಬಿಡದೆ ಪಾ
ಲಿಸಿ ಕೊಂಬುದೇ ಸಕಲ ಪರಿಕರವ ಮೇಳೈಸಿಕೊಂಡು ತಾ ಬಹೆನೆಂದನು || ||೧೩೮||

**ಕಂದ**

ಎನೆ ಕೇಳ್ದಾಗತಿ ವ್ರತಿಪಂ
ಮನದೊಳ್ತಾ ಬಲು ಕೋಪವ ತಾಳುತ ಬಳಿಕಂ |
ಘನರೌದ್ರಾವೇಶದೊಳಂ
ಕನಲುತ ನೃಪನೊಡನಿಂತೆಂದನು ತಾ ಭರದಿಂ || ||೧೩೯||

**ರಾಗ ಕಾಂಭೋಜಿ ಅಷ್ಟತಾಳ**

ಚಂದವಾಯ್ತು ಭೂಮಿಪಾಲ ನಿನ್ನ ಮಾತಾ | ಈಗ |
ಲೆಂದುದನ್ನು ಮರೆತೆಯಲ್ಲ ಕ್ಷಣದಿ ಖ್ಯಾತಾ ||
ಬಂದ ದಾರಿಯನ್ನುವಿಡಿದು ಪೋಪೆನಾನು | ಈ
ಕಂದರನ್ನು ಕೂಡಿ ಸುಖದಿ ಬಾಳು ನೀನು || ||೧೪೦||

ಆ ದಿವಾಕರ ವಂಶದಲ್ಲಿ ಪುಟ್ಟಿ ವ್ಯರ್ಥ| ಸತ್ಯ |
ವಾದಿಯೆಂಬ ಬಿರುದ ಪೊತ್ತೆ ನೀ ನಿರರ್ಥ ||
ಮೇದಿನಿಯಲಿ ಮಖವ ರಕ್ಷಿಸಿರ್ಪರನ್ನು | ಯಾ |
ರಾದರಿಂದಿಗೆ ದೊರಕುತಾರೊ ನೋಳ್ಪೆ ನಾನು || ||೧೪೧||

ಸುರರ ಪುರಕೆ ಪೋಗಿ ಶಂಬರ ದೈತ್ಯನಾಗಾ | ನೀ |
ಮುರಿದು ಬಂದೆಯೆಂಬುದಿಂಥ ಗರ್ವವೀಗ ||
ಸರಿಯಲರಿದು ಖೂಳರಾ ಮಾರೀಚ ಮುಖ್ಯ | ರಕ್ಷ |
ದುರುಳರೊಡನೆ ಗೆಲ್ವೆನೆಂಬ ಗರ್ವವಾಕ್ಯ || ||೧೪೨||

**ಕಂದ**

ವೃತಿಪನ ಖತಿಯಂ ಕಾಣುತ
ಕ್ಷಿತಿಪತಿ ತನ್ನೊಳು ತಾನೇ ಬೆರಗಾಗುತ್ತಂ |
ಧೃತಿಗೆಟ್ಟತಿಶಯ ದುಃಖದಿ
ಮತಿಯುತನೊಡನಿಂತೆಂದನು ಮಾರುತ್ತರಮಂ || ||೧೪೩||

**ರಾಗ ನೀಲಾಂಬರಿ ಝುಂಪೆತಾಳ**

ಏನಿದೇನನುಚಿತದ ಕಾಲ | ಬರಿದೆ ನೀ |
ನೇನು ಮುನಿದಪೆಯೊ ವೃತಿಪಾಲ ಗುಣಶೀಲ || ಪಲ್ಲವಿ ||

ಒಡಲೊಳಗೆ ಸುತರಿಲ್ಲವೆಂದು | ಬಲುದುಃಖ |
ದೊಳಗಿರಲು ಮುನಿವರರು ಭರದೊಳೈತಂದು ||
ಬಿಡದೆ ಗೈಸಿಹ ಮಹಾಮಖದಿ | ಪುತ್ರರನು |
ಪಡೆದೆನೈ ಖುಷಿರಾಯ ಈಗ ಕೇಳುವುದು || ||೧೪೪||

ಪ್ರಾಯವನು ಸಾಲದವನೆಂತು | ಯಜ್ಞವನು |
ಪಾಲಿಸುವ ಖಳರತರಿದೆಂಬುದಿನ್ನೆಂತು ||
ರಾಯ ನಾ ಚತುರಂಗದೊಡನೆ | ಬಂದೀಗ |
ಪ್ರೀಯದಲಿ ಮಖದ ರಕ್ಷಣೆಗೈದು ಕೊಡೆನೇ || ||೧೪೫||

ಮಕ್ಕಳನು ಪಡೆದ ಮೇಲಿತ್ತ | ವೊಂದೆ ಕ್ಷಣ |
ಚಿಕ್ಕವರನಗಲಿ ತಾನಿರಲಿಲ್ಲವಲ್ಲ ||
ರಕ್ಕಸರ ಘಾತಿಪಡೆ ನಿನ್ನ | ವಶವಿಕ್ಕಿ |
ಘಕ್ಕನೇ ಕಳುಹಿಸುವೆನೆಂತು ರಾಘವನ || ||೧೪೬||

**ಕಂದ**

ಈ ಪರಿಯಿಂದಾ ಭುವನ ಪ್ರ
ಳಾಪವ ಗೈದಳಲುವುದನು ತಾ ಕಾಣುತ್ತಂ |
ಕೋಪದಿ ಕಿಡಿ ಕಿಡಿಯೋಗುತ
ತಾಪಸ ಕುಲವಿಖ್ಯಾತಂ ಗರ್ಜಿಸುತೆಂದಂ || ||೧೪೭||

**ರಾಗ ಭೈರವಿ ಅಷ್ಟತಾಳ**

ದುಃಖ ಸಾಕೊ | ನಿನ್ನ | ದುಃಖ ಸಾಕೊ ||
ಬೇಡ ನಿನ್ನ ಮಕ್ಕಳನ್ನು | ಕೂಡಿಕೊಂಡು ಸುಖದಿ ಬಾಳು |
ಆಡಿದಂಥ ಮಾತು ತಪ್ಪಿ | ಮೂಢತನದೊಳಿಪ್ಪೆಯಾದರೆ || ದುಃಖ || ||೧೪೮||

ದುರುಳ ದೈತ್ಯರನ್ನು ಕೊಂದು | ಧರೆಯ ಭಾರವನಿಳುಹಲೆಂದವ |
ತರಿಸಿಕೊಂಡಿಹ ತಾನೆ ಲಕ್ಷ್ಮೀ | ಯರಸನೆಂಬುದ ತಿಳಿಯದಿಂಥಾ || ದುಃಖ || ||೧೪೯||

ಜಗದಿ ವಿಶ್ವಾಮಿತ್ರನೆನಿಸಿ | ಅಗಡುತನವನರಿಯದಾದೆ |
ಬಗೆಯ ತೋರ್ಪೆ ಲೇಸು ಲೇಸು | ನಗೆಯಗೇಡ ಗೈದೆಯಲ್ಲೊ ||
ದುಃಖ ಸಾಕೊ | ದಶರಥ | ದುಃಖ ಸಾಕೊ || ೧೫೦ ||

**ವಾರ್ಧಕ**

ಎಂದ ಮುನಿಪನ ಮಾತಿಗುತ್ತರಂ ಕಾಣದತಿ
ನೊಂದು ಮನದೊಳ್ದುಗುಡಮಂ ತಾಳ್ದು ಭೂಮಿಪಂ
ಮುಂದಿರ್ದ ಗುರು ವಸಿಷ್ಠರ ಮುಖಾಂಬುಜದೆಡೆ ನಿರೀಕ್ಷಿಸಲ್ಕವನೆಂದನು |
ಇಂದು ಜಯವಹುದಂಜಬೇಡ ರಾಘವನ ಕಳು
ಹೆಂದು ಪೇಳಲ್ಕೆ ಭೂಪತಿ ಗುರು ನಿರೂಪದಿಂ
ಕಂದನಂ ಕರೆದು ಮುನಿಕೃಪೆಯಾಯ್ತು ನೀ ಪೋಗಿ ಮಖವ ಪಾಲಿಪುದೆಂದನು || || ೧೫೧ ||

**ಭಾಮಿನಿ**

ಎಂದ ನುಡಿಯನು ಕೇಳಿದಾಕ್ಷಣ
ತಂದೆಯಡಿಗೆರಗುತಲಿ ರಘುಜನು
ಮುಂದೆಸೆವ ಕೌಶಿಕನ ಪಾದದೊಳೆರಗಿ ನುತಿಸಲ್ಕೇ |
ಬಂದು ಲಕ್ಷ್ಮಣ ನೃಪನ ಪದದರ

ವಿಂದಕೆರಗಿದು ಪೇಳ್ದನಣ್ಣನ
ಹೊಂದಿ ಸಂಗಡಲೈದಿ ಬರುವೆನೆನುತ್ತ ಹೊರವಂಟ || ೧೫೨ ||

**ರಾಗ ನೀಲಾಂಬರಿ ಝಂಪೆತಾಳ**

ಮುನಿಪ ಲಾಲಿಸೊ | ತನುಜರೀರ್ವರಾ |
ವನದಿ ನಿನ್ನಯಾ | ವಿನುತಯಾಗಕೆ || ೧೫೩ ||

ಕೊಂಡು ಪೋದರೆ | ಪುಂಡು ದೈತ್ಯರಾ |
ಕಂಡುಬೆದರಲು | ದ್ದಂಡ ರಕ್ಷಿಸೋ || ೧೫೪ ||

ಮುಂದೆ ಕ್ಷೇಮದೀ | ತಂದು ಶೀಘ್ರದಿ |
ಕಂದರೀರ್ವರಾ | ಹೊಂದಿಸೆನ್ನೊಳೂ || ೧೫೫ ||

**ಕಂದ**

ಎನುತಾ ಭೂಮಿಪರೀರ್ವರ
ತನುಜಾತರಿಗಾವ್ರತಿಪನ ಕೈಯೊಳಗಿತ್ತಂ |
ವಿನಯದಿ ಮನ್ನಿಸಿ ಕಳುಹಲ್
ತನಯರು ಸಹಿತೈತಂದರು ಸರಯೂ ನದಿಗಂ || ೧೫೬ ||

**ವಾರ್ಧಕ**

ಸೆಳೆಗೊಳುವ ವೇಗದುರು ಸಲಿಲ ಪ್ರವಾಹದೊಳು
ಘುಳು ಘುಳಿಸುತಲ್ಲಲ್ಲಿ ಬಿಡದೆ ತಿರುತಿರುಗುತಿಹ
ಸುಳಿಗಳ ವಿಚಿತ್ರದಿಂ ಬೆಳೆಸಿ ವನ ಸಂದೋಹಮಂ ತನ್ನ ಇತ್ತಡಿಯೊಳು |
ಹೊಳೆ ಹೊಳೆದು ಪರಿದಾಡುತೀರ್ಪ ಸಂಭ್ರಮಗಳಿಂ
ಮಳಲೆಳೆದು ದಡವೆಲ್ಲ ಬೆಳ್ಪೇರಿ ಸೊಗಯಿಸುತ
ಮಿಳೆಯೊಳಘಹರವೆಂದು ಪೆಸರ್ವಡೆದ ಘನ ನದಿಯ ಪುಣ್ಯನಿಧಿಗಳ್ಕಂಡರು || ೧೫೭ ||

**ರಾಗ ಕೇದಾರಗೌಳ ಅಷ್ಟತಾಳ**

ಸರಯೂ ನದಿಯಲ್ಲಿ ಸ್ನಾನಂಗಳನುಗೈದು |
ವರಮುನಿಪನು ಬಳಿಕ ||
ಭರದಿ ಜಪಾನುಷ್ಠಾನಂಗಳ ತೀರಿಸಿ |
ತರಳರೀರ್ವರ ಕರೆದು || ೧೫೮ ||

ಹರಿಹರ ಬ್ರಹ್ಮಾಮರೇಂದ್ರರಂಶದೊಳಿರ್ಪ |
ತರತರದಸ್ತ್ರಗಳಾ ||
ದುರುಳರ ವಧೆಗೆನುತಿತ್ತ ಮನ್ನಿಸಿ ತಾನು |
ಪರತರ ಪಾವನರ್ಗೆ || ೧೫೯ ||

ಬಳಿಕ ಮುಂದೈತರೆ ಘೋರಾಟವಿಯಲದು |
ಪೊಳವರ್ದಿದೇನೆನುತಾ ||
ನಳಿನನಾಭನು ಬೆಸಗೊಳ್ಳಲು ಕೇಳ್ದಾ |
ತುಳಮುನಿನಾಥ ಪೇಳ್ದಾ || ೧೬೦ ||

**ವಾರ್ಧಕ**

ಬಲ್ಮೆಯಿಂ ಸುರಪ ವೃತ್ರಾಸುರನವಧಿಸಲಾ
ಕಲ್ಮಷಂ ಪ್ರಾಪ್ತಮಾಯ್ತವಗೆ ಪೂರ್ವದಿ ಬಳಿಕ
ನಾಲ್ಮೊಗದವಂ ಬಂದು ಅಭಿಷೇಕಮಂ ಗೈದವಾರಿಯನ್ನಿಳೆಗೆ ತಿದ್ದಿ |
ಸಲ್ಮೊಗದುಬೀಳಲೀ ಕಾನನದೊಳಿರ್ದ ತರು
ಗುಲ್ಮಗಳ್ಕರಕರಗಿ ಕಲುಷ ವನಮಾಯಿತಾ
ಮೇಲ್ಮೂರ್ಖ ದೈತ್ಯರಾವಾಸವಾಯ್ತಲ್ಲಿ ನಮ್ಮಾ ಶ್ರಮಕೆ ಪಗೆಯಾಯಿತು || ||೧೬೧||

**ಭಾಮಿನಿ**

ಕೇಳಿದೈ ರಘುರಾಮ ಮತ್ತೀ
ತಾಳು ಬನದೊಳಗಿರವದಾಯಿತು
ಖೂಳದನುಜ ಸುಬಾಹು ಮಾರೀಚಾದಿ ರಿಪುಗಳಿಗೆ |
ಪೇಳಲಿಂನೇನೆನುತ ತಾಪಸ
ಮೌಳಿನುಡಿಯಲ್ಕಿತ್ತ ನರಮೂ
ಗಾಳಿ ಸೋಂಕಿದು ಬೆಸಸಿ ಬಂದಳು ದುರುಳೆ ತಾಟಕಿಯು || ||೧೬೨||

**ರಾಗ ಮಧ್ಯಮಾವತಿ ಅಷ್ಟತಾಳ**

ಆರೊ ಬಂದವರು | ನಮ್ಮಡವಿಗಿ | ನ್ಯಾರೊ ಬಂದವರು ||
ಮನುಜರ ಮಾಂಸವ ಮೆಲ್ಲದೆ | ಬಲು | ದಿನವಾಯ್ತು ನೀವೆನ್ನಗಲದೆ ||
ಮನದೊಳುಂಟೇ ಬದುಕಿ ಪೋಪಿ | ರೆನುವದಾಶೆಯನ್ನು ಬರಿದೇ ||
ದನುಜರಿರ್ಪಾ ವಿಪಿನವೆಂಬುದ | ರಿನಿತು ಶಂಕೆಗಳಿಲ್ಲದೆ ನೀ | ವ್ಯಾರೊ || ||೧೬೩||

ಖಂಡ ಖಂಡಗಳಾಗಿ ಕರಿದು | ಉರಿ | ಗೆಂಡಾದ ಮೇಲಿಟ್ಟು ಹುರಿದು |
ಕಂಡಕಂಡದಿಂದಲೆಮ್ಮ | ಹಿಂಡು ದೈತ್ಯರನ್ನು ಕೂಡೀ |
ಕೊಂಡು ತಿಂದು ತೀರ್ಚಿಸುವೆನೂ | ಕಂಡ ಮೇಲೆ ಬಿಡುವುದುಂಟೆ || ಆರೊ || ||೧೬೪||

ಹುಡುಗರ ನೀ ಕೂಡಿಕೊಂಡೇ | ಬಂ | ದೊಡನೆಮ್ಮವನವನು ಕಂಡೆ ||
ಧಡಿಗ ಮುನಿಪ ನಿನ್ನನೀಗಳೆ | ಹಿಡಿದು ಕೊರಳಗಚ್ಚಿ ರಕ್ತವ |
ಕುಡಿದು ಸೀಳ್ದು ಕರುಳ ತೆಗೆದು | ಮುಡಿದು ನಲಿವೆ ಗಂಡನೊಳು || ಆರೊ || ||೧೬೫||

**ವಾರ್ಧಕ**

ಜವನ ಜನನಿಯೊ ಭೈರವನ ಭಗಿನಿಯೋ ಪ್ರಳಯ
ಶಿವನ ಕಣ್ಗಿಚ್ಚೊಮೇಣ್ ಸಂವರ್ತ ಮೃತ್ಯುವಿನ
ಸವತಿಯೋ ಎನುವವೋಲ್ ದನುಜೆ ಘರಘರನೆ ಪಲ್ಮೊರೆದು ಮುಂದೈತರಲ್ಕೇ |
ಇವಳು ಬಂದಳು ಕಡುಕರಾಳ ಮುಖಿಯಿದಕೊ ರಾ
ಘವದೇವ ನೋಡು ನೀ ಬೇಗದಿ ಶರಾಸನದ
ಗವಸಣಿಗೆಯನು ಕಳೆದುಕೊಡು ಮಹಾಸ್ತ್ರವ ಧುರಕೆ ಪ್ರಾರಂಭಮೆಂದು ಮುನಿಪ || ||೧೬೬||

**ರಾಗ ಸೌರಾಷ್ಟ್ರ ಅಷ್ಟತಾಳ**

ಎಂದ ಮಾತಿಗೆ ರಘುನಾಥ ಪೇಳಿದನೆಲೆ | ಮೌನಿಪಾಲ | ನೀ |
ನಿಂದರುಹಿದೀಗಲೇ ನಿನ್ನಯ ನುಡಿಯೇನ್ಯೆ | ಮೌನಿಪಾಲ || ||೧೬೭||

ಕೊಲಬಹುದೇನಯ್ಯ ಈ ಹೆಣ್ಣುಪ್ರಾಣಿಯ | ಮೌನಿಪಾಲ || ಕ್ಷತ್ರಿ |
ಕುಲದವರಿಂಗಿದು ಹೀನತ್ವವಲ್ಲವೆ || ಮೌನಿಪಾಲ || ||೧೬೮||

ಇವಳಿಗೇನಾದರು ಗೈದು ಭಂಗಿಸುವೆನು | ಮೌನಿಪಾಲ | ಎಂ |
ದವನೊಳು ತಾನಾಗ ನಗುತಲಿಂತೆಂದನು | ಮೌನಿಪಾಲ || ||೧೬೯||

**ವಾರ್ಧಕ**

ಪೂರ್ವದೊಳು ಮೃತ್ಯುವನು ಶಿವಕೊಲ್ವ ಸಮಯದೋಳ್
ಗರ್ವದಿಂದಬಲೆಯೆಂದುಳುಹಿದನೆ ರಾಮನೇ
ನುರ್ವಿ ಭಾರಪಹಾರನಲ್ಲವೇ ನೀ ಬರಿದೆ ಸಂಕೋಚಮಂ ತಾಳದೆ |
ಕರ್ವಿಕೊಂಡೈತಹ ಕರಾಳಮುಖಿಯಂ ಕೊಂದು
ನಿರ್ವಹಿಪುದಂಜದಿರು ಇದರಿಂದ ಪಾತಕಂ
ಸರ್ವಥಾ ನಿನಗಿಲ್ಲಮೆನಲೆತ್ತಿ ಚಾಪಮಂ ಝೇಗೈವುತಿದಿರಾದನು || ||೧೭೦||

**ರಾಗ ಶಂಕರಾಭರಣ ಮಟ್ಟೆತಾಳ**

ಎಲೆಲೆ ಹುಚ್ಚಮೂಳಿ ನಿನ್ನ | ಬಲುಹು ಸಲ್ಲದೆನ್ನಕೂಡೆ |
ತಲೆಯಕುಟ್ಟಿ ಭೂತಗಣಕೆ | ಬಲಿಯ ಕೊಡುವೆನು || ||೧೭೧||

ಮೊದಲೆ ಮನುಜ ನೀನು ಮತ್ತೆ | ಅದರೊಳಿರ್ಪೆ ಹುಡುಗನಾಗಿ |
ಪದುಳದಿಂದ ತಿಂಬೆನೆಂದ | ರೊದಗೆ ನಾಲ್ಗೆಗೇ || ||೧೭೨||

ಖಳರೊಳಧಮೆ ನೋಡಿನ್ನೊಂದು | ಘಳಿಗೆಯಲ್ಲಿ ನಿನ್ನ ಜಿಹ್ವೆ |
ಯಿಳುಹಿ ಬಿಡುವೆನೆನುತ ರಾಮ | ಮುಳಿದು ತುಳಿದನು || ||೧೭೩||

ಕೇಳು ಪಸುಳೆ ನಿನ್ನ ಶೌರ್‍ಯ | ದಾಳುತನವ ತಿಳಿದೆನೀಗ |
ಸೀಳಿ ಬಿಡುವೆನೆನುತ ಕಡುಗಿ | ತೋಳನೆಗಹಿದ || ||೧೭೪||

**ಭಾಮಿನಿ**

ಮಾಯೆಗಾ ಮಂಥರೆಯ ರೂಪದಿ
ರಾಯ ದಶರಥನಲ್ಲಿ ಸೇರುವ
ದಾಯವನು ನೆರೆ ತಿಳುಹಿ ಮುಂದಣ ರಾಜಕಾರ್‍ಯವನು |
ಪ್ರೀಯದಿಂ ರಮೆದೇವಿಗರುಹಲಿ
ಕಾಯತಾಕ್ಷಿಯು ಪೋಗಿ ನಿಮಿಕುಲ
ರಾಯ ಜನಕನ ಮನೆಯೊಳಿರ್ದಳು ಬಾಲತನದಿಂದ || ||೫೭||

ಮೇಲೆ ದಿವಿಜರು ಕಪಿ ಸ್ವರೂಪವ
ಲೀಲೆಯಿಂದಲಿ ಧರಿಸಿ ಜನಿಸುತ
ವಾಲಿ ಸುಗ್ರೀವಾದಿ ಬಹುವಿಧ ನಾಮಧೇಯದೊಳು |
ಜಾಲನೆರೆದಿರಲನಿಲತನುಜ ವಿ
ಶಾಲಮತಿ ಹನುಮಂತ ವಾನರ
ಲೋಲ ರವಿಜನ ಪೊರೆಗೆ ಬಂದಿಂತೆಂದನುತ್ಸಹದಿ || ||೫೮||

**ರಾಗ ಮಧ್ಯಮಾವತಿ ಏಕತಾಳ**

ಕೇಳಿದೆನಯ್ಯ ಮಾವ ಸುಗ್ರೀವ |
ತಾಳಿ ಹರುಷವ ಮನದೊಳಗಿಂದು || ಕೇಳಿದೆನಯ್ಯ || ಪ ||

ಸೂರ್ಯನಪ್ಪಣೆಯಿಂದ ನಾನಿಲ್ಲಿಗೈತಂದೆ |
ಕಾರಿಯಂಗಳು ಬಹಳುಂಟದನು ಪೇಳ್ವೆ ||
ಶೌರ್ಯವಂತನು ವಾಲಿ ನಿನಗವನೊಳು ನಿಲ್ವ |
ಧೈರ್ಯಸಾಲದೆಂಬುದ ತಾನೆ ತಿಳಿದು || ಕೇಳಿದೆನಯ್ಯ || ||೫೯||

ಮುಂದಹ ಕಾರ್ಯ ಕೈಗೂಡಲೋಸುಗರ |
ವಿಂದನಾಭನು ಮಮಕಾರವಗೊಂಡು ||
ಚಂದದೊಳೈತಹ ನಾವಿಲ್ಲಿ ಕೂಡಿರ್ಪು |
ದೆಂದು ನೇಮವನಿತ್ತು ಕಳುಹಿದನಯ್ಯ || ಕೇಳಿದೆನಯ್ಯ || ||೬೦||

**ಭಾಮಿನಿ**

ಇಂತು ಕೇಳಿದು ಸಕಲ ತಾವ
ತ್ಯಂತ ಹರುಷಂಬಡುತ ಕಮಲಾ
ಕಾಂತನನುಪಮ ಮನುಜ ಲೀಲೆಯ ಕಾಂಬ ಲವಲವಿಕೆ |
ಯಿಂ ತಳೆದು ಗಿರಿ ಕಾನನಂಗಳ
ಲಂತರಿದು ಚರಿಸುತ್ತಲಿರ್ದರು
ಕಂತುಜನಕನ ಮಹಿಮೆಯೆಂತುಟೊ ಕುಶನೆ ಕೇಳೆಂದ || ||೬೧||

**ಕಂದ**

ಇನಿತೀಪರಿಯೊಳು ಮನುಮಥ
ಜನಕಂ ಕ್ಷೀರಾಬ್ಧಿಯೊಳಿರುತಿರೆ ಬಳಿಕಿತ್ತಂ |
ಜನಪ ದಶರಥಂ ತನ್ನಯ
ಮನದೊಳು ಸುತರಿಲ್ಲೆನುತಂ ಚಿಂತಿಸುತಿರ್ದಂ || ||೬೨||

**ರಾಗ ಘಂಟಾರವ ಝಂಪೆತಾಳ**

ಕೇಳಿರರ್ಧಾಂಗಿಯರು | ಕೇಯೂರ ಖಚಿತ ರ |
ತ್ನಾಳಿ ಶೋಭಿತೆಯರುಗ | ಳೆನ್ನ ಮಾತಾ || ||೬೩||

ಪಾಲಿಸಿದೆನಿಳೆಯನರು | ವತ್ತು ಸಾವಿರ ವರುಷ |
ಬಾಲಕರ ಮೊಗಗಾಣ | ಬಾರದಾಯ್ತಲ್ಲ || ||೬೪||

ಹರಹರಾ ಪೂರ್ವದೊಳು | ಹಗೆಯಾರಿಗಾಗಿಹೆನೊ |
ತರಳರನು ಪಡೆಯದಾ | ಯೋಗ್ಯ ನಾನಾದೆ || ||೬೫||

**ಭಾಮಿನಿ**

ಇಂತು ತನುಜಾಪೇಕ್ಷೆಯೊಳು ಭೂ
ಕಾಂತನಿರುತಿರೆ ಕಂಡು ಸತಿಯರು
ಕಂತುಪಿತ ದಯಗೈದರೇನದು ದೊಡ್ಡಿತೇ ಬರಿದೆ |
ಭ್ರಾಂತಿಯನು ಕೈಗೊಂಡು ಚಿತ್ತದಿ
ಚಿಂತಿಸುತಲಿರಲೇತಕೆನುತಲಿ
ಸಂತವಿಸೆ ಬಳಿಕೊಂದು ದಿನ ಮೃಗಬೇಟೆ ಗೈದಿದನು || ||೬೬||

**ರಾಗ ಮುಖಾರಿ ಏಕತಾಳ**

ಬೇಟೆಗೆನ್ನುತ ಪೋದನೃಪತಿ | ಉದ್ಯಾನವ ಕಂಡು |
ಬೇಟೆಗೆನ್ನುತ ಪೋದ ನೃಪತಿ || ಪ ||

ಮೀಟಾಗಿಹ ಕರಿ | ಘೋಟಕ ರಥಗಳ |
ಕಾಟಕ ಜನರನು | ಕೂಟವನೆರಹಿ || ಬೇಟೆ || ಅ.ಪ. ||

ಕಂಡೊಂದು ಕಡೆಯೊಳ್ವಲೆಯಾ ಕಟ್ಟಿದರು | ಬೇರೊಂದು ಬದಿಯೊಳು |
ಶುಂಡಾಲ ಮೋಹರವನಟ್ಟಿದರು | ಹಿಂಭಾಗದೆಡೆಯೊಳ್ |
ತಂಡಾಗಿ ಸ್ಯಂದನವ ನೊಚ್ಚಿದರು | ಕೆಲರೈದಿ ನಡುವೆ |
ಹಿಂಡಾಗಿ ಭರದಿ ಬೈಗಟ್ಟಿದರು ||
ಕಂಡು ಮೃಗಂಗಳು | ಗಂಡಿಯ ಕಾಣದೆ |
ದಂಡದಿ ಸಿಲುಕಲು | ಗಂಡುಗಲಿಗಳುರೆ |
ಖಂಡಿಸುತಲಿ ನೃಪ ಮಂಡಲದಿದಿರಿಗೆ |
ಕೊಂಡೊದಿಟ್ಟರು | ರುಂಡಗಳೊಲಿದು || ಬೇಟೆ || ||೬೭||

ಇತ್ತೋರ್ವ ಚೌಡಲ್ಯ ಭೂಸುರನು | ಯಾತ್ರೆಯ ನೆವದಿ |
ಹೊತ್ತಿರ್ದ ಕುರುಡರಿರ್ವರನು | ಕಾವಡಿಯಲ್ಲಿ |
ಹೊತ್ತಿರ್ದು ಪಥದಿ ನಡೆಯಲವನು | ಮಧ್ಯಾಹ್ನ ಕಾಲ |
ದತ್ಯುಗ್ರವಾಗಿಹ ದಿವಾಕರನು ||
ಹತ್ತಿತು ತೃಷೆ ನೀ | ರೆತ್ತಲು ಕಾಣದೆ |
ನುತ್ತಲಿ ಕಾವಡಿ ಯೆತ್ತಿಯೆ ಮರದಡಿ |
ಗಿತ್ತು ಕಮಂಡಲ | ವೆತ್ತು ಕೊಳವನರ |
ಸುತ್ತಲಿ ಹೋದ ದ್ವಿ | ಜೋತ್ತಮ ಭರದಿ || ಬೇಟೆ || ||೬೮||

**ಭಾಮಿನಿ**

ಕಂಡು ತಾ ಬಳಿಕೊಂದು ಕೊಳದಿ ಕ
ಮಂಡಲವ ಮುಳುಗಿಸುತಲಿರೆ ಮದ
ಶುಂಡಿಲಾಕಾರದಲಿ ಘಳಿಘಳಿಸಿತ್ತು ಶಬ್ದವದು |
ಚಂಡ ಭುಜಬಲ ನೃಪತಿ ಕೇಳಿದು
ಕೆಂಡದಂತುರಿ ಮಸಗಿ ಚಾಪವ
ಗೊಂಡು ಕೂರ್ಗಣೆಯುಗಿದನಾ ಕುಂಜರವಿದೆಂದೆನುತ || ||೬೯||

**ವಾರ್ಧಕ**

ಮತ್ತಗಜವೆಂಬ ಭಾವದೊಳೆಚ್ಚ ಕಣೆಯಿಂದ
ಕತ್ತರಿಸಿತವನ ತಲೆ ಶಿವಶಿವ ಮಹಾದೇವೆ
ನುತ್ತ ಪ್ರಾಣಂ ಬಿಡಲ್ ನಡನಡುಗುತ್ಯೆದಿ ನೃಪನಂಧಕರಿಗರುಹಲಂದು |
ಎತ್ತಣಿಂದುದಿಸಿತೋ ಕೋಪಶಿಖಿ ತಾಂಡವಗೆ
ಮತ್ತೆಂದ ನೀ ಪುತ್ರ ಶೋಕದೊಳ್ ಮಡಿಯೆನುತ
ಲಿತ್ತು ಶಾಪಂ ಬಳಿಕ ಸ್ವರ್ಗಸ್ಥರಾಗೆ ನೃಪ ಸಂಸ್ಕಾರಮಂ ಗೈದನು || ||೭೦||

**ಕಂದ**

ಮನದೊಳು ವಿಪ್ರನ ಶಾಪವ
ನೆನದಾ ನಿಜಪುರಕೆ ಐತರುತ ನರಪಾಲಂ |
ಘನ ಪುತ್ರೋತ್ಸಹಮಂ ಪಡೆ
ವೆನು ಬಳಿಕೇನಾದರು ಆಗಲಿಯೆನುತಿರ್ದಂ || ||೭೧||

**ರಾಗ ಕೇದಾರಗೌಳ ಅಷ್ಟತಾಳ**

ಇಂತೆಂದು ನಿಶ್ವೈಸುತ್ತಲಿ ಭೂಮೀಶ |
ನಂತರ್ಯವನು ತಿಳಿದು ||
ಸಂತಸದಿಂದ ವಸಿಷ್ಠರು ಬರಲಾ |
ನಂತರದೊಳು ಜಾಬಾಲಿ || ||೭೨||

ವಾಮದೇವರು ಸಹಿತಲಿ ನಡೆತಂದಿರೆ |
ಭೂಮೀಶನರಿತು ತನ್ನ ||
ಕಾಮಿನಿಯರು ಸಹಿತಿದಿರ್ಗೊಂಡು ಕರೆತಂದು |
ಪ್ರೇಮದಿ ಪೀಠವನು || ||೭೩||

ಏರಿಸಿ ವರಪಾದ ಪೂಜೆಯಗೈದುಪ |
ಚಾರದಿ ವಂದಿಸಲು ||
ಧಾರಿಣಿಪನ ಮೊಗನೋಡಿ ಮತ್ತಜನ ಕು |
ಮಾರನಿಂತೆಂದನಾಗ || ||೭೪||

**ರಾಗ ಸೌರಾಷ್ಟ್ರ ಏಕತಾಳ**

ಭೂರಿ ವಿಕ್ರಮನೆ ನಿನ್ನ | ಪಾರುಪತ್ಯ ಸುಕ್ಷೇಮವೆ |
ಚಾರುಮೊಗವು ಕಂದಿದೇಕೆ | ಧಾರಿಣಿಪಾಲ || ||೭೫||

ಏನಿರವ್ವ ಸುಗುಣೆಯರು ನಿ | ಮ್ಮಾನನವು ಬಾಡಿದೇಕೆ |
ಮಾನಿನಿಯರ್ನಿಮಗೇಕಂಥಾ | ಹಾನಿಯಿಲ್ಲವಲ್ಲಾ || ||೭೬||

ಎನಲು ಕೇಳುತುದರದಲ್ಲಿ | ತನುಜ ಸಂತತಿಯಿಲ್ಲದ ||
ಮನುಜಾತ ಸಲ್ಲನು ಗಡ ಮುಂ | ದನಿಮಿಷರಲ್ಲಿ || ||೭೭||

ಕಂದರಿಲ್ಲದರಿಂಗಿಸಿತ್ತು | ಹೊಂದದೀ ರಾಜ್ಯದ ಮೇಲೆ |
ಕಂದು ಕೊರಳನಾಣೆ ಹುಸಿಯ | ಲ್ಲೆಂದನು ಭೂಪ || ||೭೮||

**ವಾರ್ಧಕ**

ವ್ಯರ್ಥವಾಯ್ತೀ ಜನ್ಮವಕಟಕಟ ಬರಿದೇ ನಿ
ರರ್ಥವಾಯ್ತನ್ವಯದ ಭಾಗ್ಯಸಿರಿ ವಿಭವ ಪರ
ಮಾರ್ಥಂ ಅಪುತ್ರಸ್ಯ ಲೋಕೋಕ್ತಿಯೆಂಬುದಿದು ಮನ ಕೊರೆವುದೀ ಭವದೊಳು |
ಸ್ವಾರ್ಥಮಾಯ್ತಧಿಕ ತರಮಾಗಿ ನೆಲೆ ಇಲ್ಲದಾ
ನರ್ಥದಿಂ ನರಕಭಾಜನನಾದೆ ಧರೆಯೊಳು ಸ
ಮರ್ಥ ಮನುಕುಲದ ರಾಯರ ಕೀರ್ತಿಗಂತಕಂ ತಾನಾದೆಯೆನುತಳಲ್ದನು || ||೭೯||

**ಭಾಮಿನಿ**

ಎನೆ ತಪೋಧನರೆಂದರೆಲೆ ಭೂ
ವಿನಯ ಕೇಳ್ನೈ ನೀನಯೋಗ್ಯನೆ
ಮನುಕುಲದ ಬೆಳುವಿಕೆಗೆ ಪುತ್ರೋತ್ಸಹವು ತೋರದುದೇ |
ಇನಿತು ಖೇದವ ಪಡುವುದೇತಕೆ
ವನಜನಾಭನ ದಯದಿ ನಿನ್ನಲಿ
ತನುಜರುದ್ಭವಿಸುವರು ಸುತಕಾಮೇಷ್ಟಿಯಾಗದೊಳು || ||೮೦||

**ಕಂದ**

ಎಂದವರ್ಗೈದಿರಲಿತ್ತಾ
ನಂದದಿ ಸತಿಯರ ಮೊಗವನ್ನೀಕ್ಷಿಸುತಾಗಂ |
ನಂದನರಾಪೇಕ್ಷೆಯೊಳಂ
ಮಂದಸ್ಮಿತ ವಚನದೊಳ್ ಕುವಲಯಪ ನುಡಿದಂ || ||೮೧||

**ರಾಗ ತೋಡಿ ಆದಿತಾಳ**

ತರುಣಿ ಕೇಳ್ದೆಯಾ ನೀನೊಲಿದು | ತವಕದಿ ಕೌಸಲ್ಯೇ ||
ವರಮುನೀಂದ್ರರ್ವಚಿಸಿದ ಯಜ್ಞ | ವಿರಚಿಸಲು ಲೇಸಲ್ಲೇ ||
ಪರಮಪಾವನ ರೂಪೆ ಕೇಳ್ | ಪಡೆವೆ ಸುತರ ಬೇಗ ||
ಬರಿದೆ ತಡವಿನ್ಯಾತಕಾರಂ | ಭಿಸುವ ಯಜ್ಞವೀಗ || ||೮೨||

ಏನೆ ಕೈಕೆ ವ್ರತಿಪರೆಜ್ಞ | ಯೆಲ್ಲಿ ಗೈವೆಧ್ವರಕೇ |
ಮಾನಿನೀ ಮಣಿ ನಿನ್ನ ಮನದೀ | ಮಾಳ್ಪುದು ನಿರ್ಧರವೆ ||
ಭಾನುತೇಜ ಕೇಳುಯೆನ್ನ | ಭಾವವದನು ನೆರೆವೇ ||
ಸಾನುಕುಲಕೆ ಯಿಂದಧ್ವರವ | ಸಾಗಿಸ್ಯೆ ನಾಸ್ವರಿತೇ || ||೮೩||

ಸುಲಲಿತಾಂಗಿಯೆ ಸುಮಿತ್ರ ಕೇಳ್ | ಸುಗುಣರೆಂದ ಮಖಕೇ ||
ಒಲಿವುದುಂಟೆ ನಿನ್ನ ಮನದ | ಒಳವ ಪೇಳ್ ಸನ್ಮಖಕೆ ||
ಬಲಿದ ಸ್ಮರನ ತಂತ್ರವನ್ನು | ಬಲ್ಲಿದೆರೆಯನಿಂತು ||
ಸುಲಭವೇ ನಾವ್ ಸುರತವಾಡದೆ | ಸುತರ ಪಡೆವದೆಂತು || ||೮೪||

ನಳಿನಾಕ್ಷಿ ಕೇಳ್ ಮದನ ಸುಖದಿ | ನಲಿದರಿಂದಲೇನೆ ||
ಖಳಸಂಹಾರನ ಕೃಪೆಯಾಗಲು ಬೇ | ಕೆಜ್ಞ ಮುಖದಿ ಕಾಣೇ ||
ತಿಳಿಯದಾದೆ ಪ್ರಾಣಕಾಂತ | ಮಖಕೆಯಿನ್ನೇನ್‌ತಡವೇ ||
ಘಳಿಲನೆ ನೀ ಮಾಡಿಸಿದರೆ | ಘನ ಸಂಜಾತರ ಪಡೆವೇ || ||೮೫||

**ವಾರ್ಧಕ**

ಉಚಿತದಿಂದರ್ಧಾಂಗಿಯರ್ನುಡಿಯಲಾ ಕುಂಭ
ಕುಚಯುಗಳೆಯರ್ಗೆ ಮನ್ನಿಸಿ ಬಳಿಕ ಭೂಮಿಪಂ
ಸಚಿವನಾಗಿಹ ಸುಮಂತನ ಕರೆಸಿಕೊಂಡು ಗುಪ್ತಾಲಯದೊಳೈದಿ ನಗುತ |
ಪ್ರಚುರನೊಳು ಪೇಳ್ದನೆಲೆ ಮಂತ್ರಿ ಕೇಳಾವ್ರತಿಪ

ರ್ವಚಿಸಿರ್ದ ಕ್ರತುಮುಖದಿ ಸಂತಾನಮಪ್ಪುದೇ

ಸಚರಾಚರಾತ್ಮಕಂ ಕೃಪೆ ಗೈವನೇ ತನ್ನ ಮೇಲೆನಲ್ಕವನೆಂದನು || ||೮೬||

**ರಾಗ ಕೇದಾರಗೌಳ ಏಕತಾಳ**

ದೇವಲಾಲಿಸಿಂದು ನೀ ರಾ | ಜೀವಾತ್ಮ ಸಂಭವನಲ್ಲಿ |

ತಾವೆ ಸನತ್ಕುಮಾರರು | ಭೂ ವಿಸ್ತಾರವ || ||೮೭||

ಪೇಳಿದಾಗ ಸೂರ್ಯಾನ್ವಯದ | ಬಾಳಿಕೆಯೊಳು ನಿಮ್ಮಯ ವಂ |

ಶಾವಳಿಯನು ವಿವರಿಸಿ ಮುಂ | ದಾಳುವದುಂಟು || ||೮೮||

ಎಂದು ಪೇಳ್ದ ಮಾತಿಗಾಗಿ | ಹಿಂದೆ ತಾಂಡವನ ಶಾಪ |

ಬಂದುದರಿಂ ಸಂತಾನವು | ಪೊಂದದಿರ್ಪುದೇ || ||೮೯||

**ವಾರ್ಧಕ**

ಅತ್ತ ಸುಮನಸರ ದೂರಂ ಕೇಳ್ದು ವಿನಯದಿಂ

ಚಿತ್ತಜನ ತಾತನಿನ್ನುದರದೋಳ್ ಬರುವನೆಂ

ದಿತ್ತ ಭಾಷೆಯನೆಂಬುದನು ಕೇಳಿಬಲ್ಲೆ ಮೊದಲಿಂಗೆ ನಿಶ್ಚಯವಿದಿನ್ನು |

ಚಿತ್ತದನುಮಾನಮಂ ಕಳೆದು ನೀ ಸಕಲ ಸಂ

ಪತ್ತಿನಿಂದಧ್ವರಂ ಎಸಗು ಆಚಾರ್ಯತ್ವ

ಕುತ್ತಮಂ ಋಷ್ಯಶೃಂಗಂ ಎಂಬ ಮುನಿಪನಂ ಕರೆಸು ಎಂದಡೆ ನುಡಿದನು || ||೯೦||

**ಭಾಮಿನಿ**

ಹಿಂಗದಲ್ಲಿಗೆ ಕರಸಿಕೊಂಡರು

ಮಂಗಳಾತ್ಮರು ಪೇಳಿದೆಜ್ಞ ಕ್ರ

ಮಂಗಳನು ತಿಳಿಕೊಂಬನೇ ಯೆನಲಾತನಿಂತೆಂದ || ಅರ್ಧ || ||೯೧||

**ರಾಗ ಶಂಕರಾಭರಣ ತ್ರಿವುಡೆತಾಳ**

ಎಲೆ ನೃಪಾಲಕ ಕೇಳು ಕಾಶ್ಯಪ |

ಕುಲದೊಳುದಿಸಿರ್ದವ ವಿಭಾಂಡಕ |

ಸತಿಮುನಿಪನೂರ್ವಶಿಯ ಕಾಣಲು | ಚಲಿತಮಾಗೀ || ||೯೨||

ನೀರಿನೊಳಗಿಹ ರೇತಸವ ಮೃಗ |
ನಾರಿ ಕುಡಿದಾಕ್ಷಣದಿ ಗರ್ಭವ |
ಮೀರಿ ಬಳಿಕ ಪ್ರಸೂತೆಯಾದಳು | ಚಾರುಮುನಿಯಾ || ||೯೩||

ಕಂಡು ಶಿವ ವರವಿತ್ತನದನು |
ದ್ದಂಡಮಾಗಿಯೆ ಪರಸಿತಾ ಭೂ |
ಮಂಡಲದೊಳಿದ್ದಲ್ಲಿ ಕ್ಷಾಮಗ | ಳಂಡಲೆಯನು || ||೯೪||

ಹೊಂದಲಾಗದೆನುತ್ತ ಕಡೆಗದ |
ರಿಂದ ತನ್ನಯ ಪುರದೊಳಾತನ |
ತಂದು ಕ್ಷೇಮದಿ ರೋಮಪಾದನು | ವಂದಿಸಿದನು || ||೯೫||

ಸಕಲ ಋತ್ವಿಜರುಗಳೊಳುತ್ತಮ |
ಪ್ರಕಟ ನಿಗಮಾಗಮದೊಳಾತನು |
ಶುಕಮುನೀಂದ್ರಾದಿಗಳ ಸಮವೈ | ದಿಕದೊಳೆಂದ || ||೯೬||

**ವಾರ್ಧಕ**

ಇನ್ನು ತಡವೇತಕ್ಕೆ ನಾ ಪೋಗಿ ಸುಗುಣ ಸಂ
ಪನ್ನನಂ ತಂದು ದೀಕ್ಷೆಯಗೊಂಡರಾಗದೇ
ಎನ್ನುವ ಸುಮಂತನಂ ತಕ್ಕೈಸಿ ಪೊರಮಟ್ಟು ವಂಗದೇಶವ ಕಾಣುತ |
ಉನ್ನತೋತ್ಸಹಗಳಿಂ ಪುರಕೈದಿತಾನ್ನೃಪನ
ಮನ್ನಣೆಯಕೈಗೊಳ್ಳುತಲಿ ಋಷ್ಯಶೃಂಗನಂ
ಸನ್ನುತಿಸಿ ಬಳಿಕವರನೊಡಗೊಂಡು ದಶರಥೇಂದ್ರಂ ಬಂದ ನಗರಕಂದು || ||೯೭||

**ಭಾಮಿನಿ**

ಮೇಲೆ ನೆರಹಿಸಿ ಸಕಲ ಸನ್ನಹ
ವಾಲಯವ ಶೃಂಗರಿಸುತಧ್ವರ
ಶಾಲೆಯನು ವಿರಚಿಸಿದನಂದು ವಶಿಷ್ಠನಾಜ್ಞೆಯಲಿ |
ಓಲೆಯನು ಬರೆದಿತ್ತು ಧರಣೀ
ಪಾಲಕರ ಸಂದೋಹ ವರಮುನಿ
ಜಾಲ ಭೂಸುರ ತತಿಯ ಸಹಿತಾಕ್ಷಣವೆ ಕರೆಸಿದನು || ||೯೮||

**ರಾಗ ಕಾಂಭೋಜಿ ಅಷ್ಟತಾಳ**

ಕೇಳ್ದಿರೇನೈಯ್ಯ ಕೌತುಕವ | ಲಕ್ಷ್ಮೀ |
ಯಾಳ್ದನು ಧರೆಗವತರಿಪ ಮೂಲಕವ || ಪ ||

ಸುತಕಾಮೇಷ್ಟಿಯಧ್ವರಕೆ | ಬೇಕಾ |
ದತುಳಸೋಪಸ್ಕರ ಯಾಗಮಂಟಪಕೆ |
ಕ್ಷಿತಿಪನು ತರಿಸಿ ದೀಕ್ಷೆಯೊಳು | ತನು |
ಸತಿಯರು ಸಹಿತಿರ್ದ ತನುಜಾಪೇಕ್ಷೆಯೊಳು || ||೯೯||

ಮೊದಲಶ್ವಮೇಧಯಾಗವನು | ಮಾಳ್ಪು |
ದನು ವಿಧಿಸಿದ ಋಷಿಗಳ ವಾಕ್ಯವನ್ನು ||
ಪದುಳದಿ ಕೇಳಿ ಶೃಂಗರಿಸಿ | ಬಂದು |
ಕುದುರೆಯ ಬಿಡಲು ದಿಗ್ದೇಶ ಸಂಚರಿಸಿ || ||೧೦೦||

ಸಾರಲು ಬಳಿಕಲುತ್ಸಹದಿ | ಯಜ್ಞ |
ಕಾರಂಭಿಸಿದರಾಗ ದ್ರವ್ಯಸಂಗ್ರಹದಿ ||
ಸಾರಂಗಮುನಿ ವಶಿಷ್ಠರನು | ತಾ ವಿ |
ಚಾರಿಸಿ ಬ್ರಹ್ಮತ್ವವಿತ್ತು ಭೂವರನು || ||೧೦೧||

**ವಾರ್ಧಕ**

ಬಳಿಕ ಋತ್ವಿಜರೆಲ್ಲವರ ಮಂತ್ರ ತಂತ್ರಾಳಿ
ಗಳಲಿ ತತ್ಸಾಮಗಾನದೊಳೆಸದು ಸ್ವರವಿಡಿದು
ಮೊಳಗುವಂಬರ ಮೇಘಧ್ವಾನದಿಂದೆಸವುತಿಹ ನಿಗಮಘೋಷಗಳಿಂದಲಿ |
ನಳಿನ ತೋಳ್ಗಳ ಬೀಸಿ ಚರುಸಮಿಧೆ ಘೃತಶೀಲ
ಗಳನು ಸ್ವಾಹಾಕಾರದಿಂದಲಾಹುತಿಗೊಡಲ್
ಚಿಳಿ ಚಿಟಿಲು ಚಿಟಿಲೆಂದು ಶಿಖಿಪ್ರಕಾಶಿಸೆ ಸುರರು ಸಂತುಷ್ಟಿಯಂ ತಾಳ್ದರು || ||೧೦೨||

**ಕಂದ**

ಭಾರೀ ಸೀಮಂತವ ಗೈ
ದಾ ರಸೆಯಧಿಪತಿ ಸಂತೋಷದೊಳಿರಲಿತ್ತಂ |
ನಾರಿಯರಿಗೆ ನವಮಾಸಂ
ಪೂರಿತವಾಗಲ್ಕೆ ತಮ್ಮೊಳು ನುಡಿವುತಿರ್ಪರ್ || ||೧೦೩||

**ರಾಗ ತೋಡಿ ಝಂಪೆತಾಳ**

ನಾರೀಶಿರೋರನ್ನೆ ಕೌಸಲ್ಯೆ ನಿನ್ನ |
ಮೋರೆ ಬೆಳ್ ಚಾಯಾಗಿ ತೋರುತಿದೆ ಏಕೆ || ||೧೦೪||

ಕೋಕಿಲ ಸುವಾಣಿ ಕೇಳ್ಲೆ ಕೈಕೆ ನಿನ್ನ
ಕೋಕನದ ಕೋರಕ ಕುಚಾಗ್ರ ಕಪ್ಪೇನೆ || ||೧೦೫||

ಇಂದುವದನೆ ಸುಮಿತ್ರೆ ಸುಮಗಂಧಿ ನಿನ್ನ |
ಅಂದವಾಗಿಹ ತ್ರಿವಳಿ ಮರೆಯಾಯಿತೇಕೆ || ||೧೦೬||

ವಚನ || ಇಂತೆಂದಾಗ ಕೈಕೆ ಕೌಸಲ್ಯಾ ಸುಮಿತ್ರೆಯರು ಏನೆಂದರು ಎಂದರೆ ||

**ರಾಗ ಯರಕಲ ಕಾಂಭೋಜಿ ಅಷ್ಟತಾಳ**

ಎಂತು ಬಾಳ್ದಪರೊ | ಲೋಕದಿ ಗರ್ಭ | ವೆಂತು ತಾಳ್ದಪರೊ ||
ಎಂತು ತಾಳ್ದಪರೊ ಭೂ | ಕಾಂತೆಯರ್ಬಸುರೊಳ |
ಗಾಂತೀರ್ದಶಿಶುವಿನ | ತ್ಯಂತ ವೇದನೆಯಿಂದ || ಎಂತು || ||೧೦೭||

ತಂಗಿ ಸೈರಿಸಲಾರೆ | ಮೈಯೊಳಗಾಪು | ದಂಗದ ಬಗೆ ಬೇರೆ ||
ಹಿಂಗದೆ ಪೊಡಲೊಳು | ಶೃಂಗದಿಂದಿರಿದಂತೆ |
ಕಂಗೊಳಿಸುವದು ಕೇಳ್ | ಭೃಂಗ ಕುಂತಳೆಯಿಂ || ಎಂತು ಬಾಳ್ದಪರೊ || ||೧೦೮||

ಅಕ್ಕ ನಿನ್ನಂತಿದೇನೂ | ತನಗಾಗಿದೆ | ಬೆಕ್ಕಸ ಬೆರಗಾದೆನು ||
ಇಕ್ಕಿದನ್ನವನುಂಡ | ರುಕ್ಕಿ ಮೇಲ್ಬಂದುಸುರು |
ಸಿಕ್ಕಿದಂತಿಹುದು ಮೇ | ಣಕ್ಕರಗೊಳದಿಂ || ಎಂತು || ||೧೦೯||

ನಿಮ್ಮಂತೆಯೆನಗಲ್ಲವೇ | ವ್ಯಥೆಯನು | ಒಮ್ಮೆ ಕಾಣಿಸಲಿಲ್ಲವೆ ||
ದಮ್ಮಯ್ಯ ಕಟಿಯಲ್ಲಿ | ಗುಮ್ಮಿದೋಲ್ ಬದಿಯಲ್ಲಿ |
ಸುಮ್ಮನೆ ಕರರಿದಂ | ತುಮ್ಮಳಿಸುವದಿಂ || ಎಂತು || ||೧೧೦||

**ಆರ್ಯಸವಾ**

ಈ ಪರಿಯಿಂದಾ ಸತಿಯರು ತಮತಮ | ಗಾಪ ಪರೀಕ್ಷೆಯ ವಿವರಿಸಲು ||
ಭೂಪನ ವಂಶೋದ್ಧರಿಸುವ ಕಾಲ ಸ | ಮೀಪದಿ ಬಂದುದು ಸವನಿಸಲು || ||೧೧೧||

**ವಾರ್ಧಕ**

ತರುಣಿಯೇಕಾದಶದರಾಹುವಿನ ಬಲನಿಶಾ
ಕರನ ಶುಭದೃಷ್ಟಿ ದಾನವಪುರೋಹಿತ ದೇವ
ಗುರು ಸೋಮಸುತರ ಕೇಂದ್ರದೊಳಗಾ ಚೈತ್ರ ಸಿತಪಕ್ಷದ ಸುನವಮಿ ದಿನದಿ |
ವರ ಪುನರ್ವಸು ತಾರೆ ಕರ್ಕಟಕ ಲಗ್ನದೋಳ್
ಹಿರಿಯರಸಿ ಬೆಸಲಾಗಿಯಾ ಹರಿಯ ಮೇಲೆಯವ
ತರಿಸಿದಂ ಸತ್ತ್ವ ರಜ ತಮಗುಣ ವ್ಯಾಪಕಂ ಮಧ್ಯಾಹ್ನ ಸಮಯದೊಡನೇ || ||೧೧೭||

**ಭಾಮಿನಿ**

ಮರುದಿವಸಮಧ್ಯೆಯಲಿ ಕೈಕಾ
ತರುಣಿ ಬೆಸಲಾಗಿರ್ದಡಾ ಮೇ
ಲೆರಡನೆಯ ಮಖತಾರೆಯಲಿ ಬಳಿಕಾ ನೃಪನ ಮಡದಿ |
ವರ ಸುಮಿತ್ರೆಯು ಪಡೆದಳೀರ್ವರ
ಧರಣಿಪಗೆ ತೋಷಾಬ್ಧಿಯುಕ್ಕಿತು
ಪುರದಿ ಗುಡಿ ತೋರಣವಗಟ್ಟಿದು ಜನರು ನಲಿದಾಡೇ || ||೧೧೩||

**ಶಾರ್ದೂಲವಿಕ್ರೀಡಿತ**

ಶ್ರೀ ರಾಮಂ ದಿವಿಜೌಘ ವಂದಿತಪದಂ ಸೀತಾಮನೋಹ್ಲಾದಕಂ
ಕಾರುಣ್ಯಾಂಬುಧಿ ಭಕ್ತವತ್ಸಲ ಹರಿಂ ಕೌಸಲ್ಯ ಗರ್ಭೋದ್ಭವಂ |
ಮಾರೀಚಾದಿ ಸಮಸ್ತ ದೈತ್ಯಮಥನಂ ಮಹಾತ್ಪ್ರತಾಪಾನ್ವಿತಂ
ವೀರಂ ಪಾವನ ಪುಣ್ಯನಾಮಚರಿತಂ ವಂದೇ ಸದಾ ರಾಘವಂ || ||೧||

**ರಾಗ ನಾಟಿ ಮಟ್ಟೆತಾಳ**

ಜಯ ಜಯ ಸಿದ್ಧಿವಿನಾಯಕ | ಜಯ ಜಯ ಬುದ್ಧಿಪ್ರದಾಯಕ |
ಜಯ ಸುಂದರ ಮಹಾಕಾಯ | ಜಯಮೋದಕ ಪ್ರಿಯಾ ||
ಜಯ ಜಯ ಮೂಷಿಕವಾಹನ | ಜಯ ಜಯ ಕರಿಮುಖ ಮೋಹನ |
ಜಯಧೃತ ಅಂಕುಶ ಪಾಶ | ಜಯ ವಿಘ್ನವಿನಾಶ || ಜಯ ಜಯ ಜಯತು || ||೭||

ಕುಂಜರಕೇತನ ಪೂಜಿತ | ಕಂಜಸಖೋಪಮ ತೇಜಿತ |
ರಂಜಿತ ಕನಕವಿಭೂಷ | ಮಂಜುಳಕರಭಾಷ ||
ಭುಂಜ ಕಪಿತ್ಥ ಫಲೋರಸ | ಭಂಜನ ಶಶಿಮದಸಾರಸ |
ಗುಂಜ ಸಮಾರಕ್ತಾಭ | ಪುಂಜಕಲಾಶೋಭಾ || ಜಯ ಜಯ ಜಯತು || ||೩||

ಗಿರಿಜಾನಂದಸುವರ್ಧನ | ದುರುಳಾಸುರತತಿಮರ್ದನ |
ವರಮುನಿಮಾನಸಹಂಸ | ದುರಿತಕುಲಧ್ವಂಸ ||
ಶರಣಾಗತ ಜನಪಾಲಕ | ನರಕಾಂತಕಹಿತ ಬಾಲಕ |
ಶರನಗರಾಂತರ ನಿಲಯ | ಸುರುಚಿರ ಮಣಿವಲಯ || ಜಯ ಜಯ ಜಯತು || ||೪||

**ಕಂದ**

ಶಾರದೆಗೆರಗುತ ಶಾಸ್ತ್ರವಿ
ಶಾರದೆ ಲಕ್ಷುಮಿಯನುತಿಸಿ ಕಾತ್ಯಾಯಿನಿಗಂ |
ಮೀರದೆ ಮಣಿದಾಲಸ್ಯದಿ
ಸೇರದೆ ತ್ರಿದಶರಿಗೊಂದಿಪೆ ನಾ ಮನ್ಮನದೊಳ್ || ||೫||

**ಭಾಮಿನಿ**

ವೀರವಿತರಣ ಶೂರ ಕುಲಿಶಶ
ರೀರ ನತಮಂದಾರ ತತ್ತ್ವವಿ
ಚಾರ ಶರಧಿಗಭೀರ ಜಗದುದ್ಧಾರ ಭವ ದೂರ |
ಧೀರ ದಶಶಿರ ಕ್ರೂರದರ್ಪ ವಿ
ಹಾರ ಕದನಕಠೋರ ಅಕ್ಷಕು
ಮಾರಖಳಸಂಹಾರ ಭಳಿರೆ ಸಮೀರಸುತ ಶರಣು || ||೬||

**ದ್ವಿಪದಿ**

ಆದಿಕವಿ ವಾಲ್ಮೀಕಿ ಮುನಿಪಗೊಂದಿಸುತ |
ಮೇದಿನಿಯೊಳೆಸೆವ ಕವಿಜನರ ಮನ್ನಿಸುತ || ||೭||

ಗುರುಕೇಶವಾಖ್ಯ ಯತಿವರರ ವರ್ಣಿಸುತ |
ಹಿರಿಯವರ ಪದಯುಗಂಗಳಿಗೆರಗಿ ಮತ್ತಾ || ||೮||

ನಾಟಕ ಸುರಾಮಾಯಣಾಮೃತದೊಳಂದು |
ತಾಟಕಿ ಸುಬಾಹು ಮುಖ್ಯರಿಗೆಲ್ಲ ಕೊಂದು || ||೯||

ಸೀತಾಸ್ವಯಂವರವ ಗೈದು ರಘುವರನು |
ಖ್ಯಾತಿಯಂ ತಳೆಯುತ್ತಯೋಧ್ಯೆಗೈದಿದನು || ||೧೦||

ಇಂತೆಂಬ ಕಥನವನು ಯಕ್ಷಗಾನದಲಿ |
ಕಂತುಪಿತನಾಜ್ಞೆಯಿಂದೊರೆವೆನಿಂದಿನಲಿ || ||೧೧||

**ವಾರ್ಧಕ**

ರಜತಾದ್ರಿ ಶಿಖರದೊಳ್ ಪರಮ ವೈಭವದಿಂದ
ಅಜಸುರಾದಿಗಳ ವಂದನೆಯನುಂ ಕೈಗೊಂಡು
ಗಜವದನ ಶರಜನ್ಮನಂದಿ ಭೃಂಗೀಶ್ವರರ ಅಭಿನಯ ವಿಲಾಸದೊಡನೆ |
ಗಜಬಜಿಪ ಶ್ರುತಿಘೋಷ ಗಾನಗೀತಂಗಳಿಂ
ನಿಜದ ಪಂಚ ಬ್ರಹ್ಮ ವೈದುಮುಖಮಾಗೆಸೆದು
ತ್ರಿಜಗಮಂ ಪಾಲಿಸುತ ಗಿರಿಜೆಯೊಡಗೂಡಿ ಪರಮೇಶ್ವರಂ ಇರುತಿರಲ್ಕೆ || ||೧೨||

**ಭಾಮಿನಿ**

ಒಂದು ದಿನ ಕೈ ಮುಗಿದು ಪಾರ್ವತಿ
ಇಂದುಶೇಖರನೊಡನೆ ನಗುತಿಂ
ತೆಂದಳೆಲೆ ಪ್ರಾಣೇಶ ನೀ ಕೇಳಾದಿ ವಿಷ್ಣುವಿಗೆ |
ಬಂದಿರುವ ಸಾಹಸ್ರನಾಮಗ
ಳಿಂದ ಉತ್ತಮವಾವುದೆನುತೆನ
ಗಿಂದು ಕರುಣಾರಸದಿ ಪೇಳೆನೆ ತ್ರಿಪುರಹರ ನುಡಿದ || ||೧೩||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತರುಣಿ ಕೇಳು ಸಹಸ್ರನಾಮದ |
ಸರಿ ಕಣಾ ರಘುರಾಮ ನಾಮಾ |
ಕ್ಷರಗಳೆರಡರ ಮಹಿಮೆ ಬಹಳವ | ನೊರೆವೆ ನಿನಗೆ || ೧೪||

ಎನುತ ಮೂಲ ಕಥಾನುಸಾರವ |
ವನಿತೆಗರುಹಲು ಬಳಿಕ ವಾರಿಜ |
ತನಯನುಪದೇಶಿಸಿದ ನಾರದ | ಮುನಿಪಗಂದು || ||೧೫||

ಇತ್ತ ಬದರಿಯೊಳೋರ್ವ ವ್ಯಾಧನು |
ಕೃತ್ರಿಮದ ಜನ ಹತ್ಯೆಗೈದಿರೆ |
ಉತ್ತಮರ ದೆಶೆಯಿಂದರುಹಿ ತನ | ಪೆತ್ತವರ್ಗೆ || ||೧೬||

**ವಾರ್ಧಕ**

ಮುನಿಯಾದ ವಾಲ್ಮೀಕಿ ಕ್ರೌಂಚಪಕ್ಷಿಯ ನೆವದಿ
ವನದಿ ಚಿಂತಿಸುತಿರಲ್ ನಾರದಂ ಬಂದುಮವ
ಗನುಪಮದ ರಾಮಕಥೆಯನ್ನರುಹಿ ಸಂತೈಸಿ ಪೋಗಲಾನಂತರದೊಳು |
ವನದೊಳಿತ್ತಂ ಬಳಿಕ ತನ್ನಾಶ್ರಮದೊಳಿರ್ದ
ಜನಕಜಾ ನಂದನರ್ ತಾವ್ಯಾವ ಕುಲಜರೆಂ
ದೆನಲವರಿಗೀ ರಾಮಚರಿತಮಂ ಪೇಳಲಾರಂಭಿಸಿದ (ಕವಿಮಾರ್ಗದಿ) || ||೧೭||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಖಗ ಕುಲಾನ್ವಯರಾದ ಕುಶಲವ |
ರುಗಳು ಲಾಲಿಸಿ ವಿನಯದಿಂದೀ |
ಜಗತಿಗುತ್ತಮವಾದಯೋಧ್ಯಾ |
ನಗರ ಶೋಭಿಸುತಿರ್ದುದು | ಚಂದದಿಂದ|| ||೧೮||

ಆ ಪುರದೊಳಿಕ್ಷ್ವಾಕು ಕುಕ್ಷಿ ದಿ |
ಲೀಪ ಸಗರ ವಿಕುಕ್ಷಿ ಭಗೀರಥ |
ಭೂಪ ರಘು ಮೊದಲಾದ ನೃಪರು ಪ |
ರಂಪರೆಯೊಳಾಳಿರ್ದರು | ಕುಶಲದಿಂದ || ||೧೯||

ಮೇಲೆ ಕುಶ ಕೇಳಜಕುಮಾರ ಸು |
ಶೀಲ ದಶರಥ ನೃಪ ಲಲಾಮ ವಿ |
ಶಾಲ ಕೀರ್ತಿಗುಣಾಢ್ಯನೀ ಧರೆ |
ಪಾಲಿಸುತ್ತಿರುತಿರ್ದನು | ದಶರಥೇಂದ್ರ || ||೨೦||

**ವಾರ್ಧಕ**

ಲವನೆ ಕೇಳಿಂದ್ರಾದಿದಿಕ್ಪಾಲಕರು ವಾಣಿ
ಧವ ಫಣಿಪನಲ್ಲಿ ಸಹಿತಾಗಿ ಗಮಿಸುವದರಿಂ
ದವಗೆ ದಶರಥನೆಂಬ ಗುಣನಾಮ ಉಂಟಾಯ್ತು ಬಳಿಕ ಕೋಸಲದೇಶದ |
ಯುವತಿ ಕೌಸಲ್ಯೆ ಕೇಕಯದ ಕೈಕೇಯಿಯೆಂ
ಬವಳು ಮೇಣ್ಮಗಧದೇಶದ ಸತಿ ಸುಮಿತ್ರೆಯಿಂ
ತಿವರ ಪಾಣಿಗ್ರಹಣಮಂ ಗೈದು ಸುಖದಿಂದ ರಾಜ್ಯಮಂ ಪಾಲಿಸುತಿರೆ || ||೨೧||

**ಭಾಮಿನಿ**

ಒಂದು ದಿನ ದಿವಿಜೇಂದ್ರಚರರೈ
ತಂದು ಲೇಖನವಿತ್ತು ಪೇಳಿದ
ರಿಂದು ಶಂಬರದೈತ್ಯನುಪಟಳ ಪೆರ್ಚಿತಾಕ್ಷಣದಿ |
ಬಂದು ನೀ ಪರಿಹರಿಸಬೇಕೆನೆ
ಚಂದವಾಯ್ತೆಂದೆನುತ ಮೋಹದ
ಇಂದುಮುಖಿ ಕೈಕೆಯಳ ಮೊಗ ನೋಡುತ್ತ ನೃಪನುಡಿದ || ||೧೧||

**ರಾಗ ತೋಡಿ ಅಷ್ಟತಾಳ (ಚತುರಶ್ರ ಅಷ್ಟ)**

ಕೇಳ್ದೆಯೇನೆ ಸುಲಲಿತಾಂಗಿ | ಕೈಕೆ ಸುಗುಣಾಢ್ಯೆ ||
ಖೂಳದೈತ್ಯರಿರಿತಕಾಗಿ | ಕರೆದನೆಮ್ಮ ಸುರಪ || ||೧೩||

ಪೋಪುದಾದರೆನ್ನರಮಣ | ಪೋಗುವ ಸಂಗಡವೆ ||
ಆ ಪುರಂದರನ ಪಟ್ಟಣಕೆ | ತಾನು ಬಹೆ ನಿಮ್ಮೊಡನೆ || ||೧೪||

ಒಳ್ಳಿತಾಗಲದಕೇನೆಂದು | ವಲ್ಲಭೆಯ ರಥದಿ ||
ಕುಳ್ಳಿರಿಸಿಕೊಂಡು ನಡೆದ | ಕೂರ್ಮ ನಡುಗುವಂತೆ || ||೧೫||

**ಭಾಮಿನಿ**

ಹಾರಿದನು ರಥದೊಡನೆ ದಶರಥ |
ನಾರುಭಟಿಸುತ ಪೊಕ್ಕು ಶಕ್ರನ |
ಚಾರುಮನ್ನಣೆಗೊಂಡು ಶಂಬರಮುಖ್ಯ ದಿತಿಸುತರ ||
ತೋರುತೋರೆನಲಾಗ ಕೇಳಿದು |
ಭೂರಿವಿಕ್ರಮದಿಂದಲಸುರರು |
ಮೀರಿ ಬಂದಡಹಾಯ್ದು ನಿಂದರು ಸಮರಕನುವಾಗಿ || ||೧೬||

**ರಾಗ ಮಾರವಿ ಏಕತಾಳ**

ನೀನ್ಯಾರೆಲವೊ ನರಗುರಿ ನಮ್ಮಯ | ಸೇನೆಯ ಕೆಣಕಲಿಕೆ |
ದಾನವರೊಳು ತಾವ್ ಸಮರದೊಳೀಡೇ | ಮಾನವರ್ಸೆಣಸಲಿಕೆ || ||೧೭||

ಫಡ ಫಡ ತೊಲಗದಿರೆಲವೋ ಶಂಬರ | ದಡಿಗ ಖಳಾಧಮನೆ |
ತಡೆಯದೆ ನಿನ್ನಯ ತಲೆಯ ಚಂಡಾಡದೆ | ಬಿಡುವೆನೆ ಮದಾಂಧನೆ || ||೧೮||

ಮೋರೆಯೀಕ್ಷಿಸದೆ ರಣದೊಳು ಕಾದುವೆ | ವೀರನಹುದೊ ಮುದುಕ ||
ನಾರಿಗೆ ಗತಿಯೇನುಸುರದೆ ನಡೆ ನಡೆ | ಸಾರೊ ಭುವನಕೀಗ || | | ೧೯||

ದಿವಿಜರ ಬಾಯ್ಬಡಿದೆಣ್ಣದ ಹವಿಗಳ | ಸವಿ ಸವಿದುಂಡುದನು |
ತವಬಾಯಿಂದುಗುಳಿಸುವೆನು ನೋಡೆಂ | ದವನಿಪನುಸುರಿದನು || ||೨೦||

ತಪ್ಪಾಡಿದೆಯಾದರೆ ನಾಲಿಗೆ ಕೊ | ದಪ್ಪಳಿಸುವೆ ತಾಳು ||
ತಪ್ಪಿತೆನುತ ಶಚಿಯನು ಪಾದಕೆ ತಂ | ದೊಪ್ಪಿಸದಿರೆ ಬಿಡೆವು || ||೨೧||

ಎನುತೆನುತೀ ಪರಿ ಸಮಸಮ ಯುದ್ಧವ | ನೆಸಗಿ ಪರಾಕ್ರಮದಿ | |
ಅನಿಮಿಷರೆದೆ ಧಗಧಗಿಸಲು ಕಾದಿದ | ರನುಪಮ ವಿಕ್ರಮದಿ || ||೨೨||

**ವಾರ್ಧಕ**

ತರಳ ಕೇಳಾಹವದಿ ಭೂಮೀಶನುರವಣಿಸೆ
ದುರುಳರಾ ಕಾಲಕೇಯರ ಪುರಕೆ ಭರದೊಳುಂ
ಸರಿಯಲುಂ ಕಂಡಿವಂ ಬೆನ್ನಟ್ಟುತಿರೆ ಮೋಹದಂಧಕಾರದಿ ಸಿಲುಕಿತು |
ತೆರನ ಕಾಣದೆ ನೃಪಂ ಬಳಲಿ ಬೆಂಡಾಗಿ ನಿಂ
ದಿರಲು ಕತ್ತಲೆಯೊಳಾದಿವಿಜ ವೈರಿಗಳು ಬೊ
ಬ್ಬಿರಿದು ತಾವಾರ್ಭಟಿಸುತ್ಮೈಸಿಕೊಂಡಿರಲದಂ ಸಂಪಾತಿ ತಿಳಿದೆಂದನು || ||೨೩||

**ರಾಗ ಬೇಗಡೆ ಅಷ್ಟತಾಳ**

ಮೋಸವಾಯ್ತಿನ್ನೇನೆಂಬೆನೀ ಪರಿಯ |
ವಾಸವಾರ್ಜಿತ ನಮ್ಮ ಕರುಣದ ಸಿರಿಯ ||
ಮಾಸುವ ಕಾಲ ಬಂದೊದಗಿದೆ ಸಾಕು |
ಈ ಸಮಯದಿ ಸಹಾಯವ ಮಾಡಬೇಕು ||
ಕೇಳ್ದೆಯಾ | ಭೂಪ | ಕೇಳ್ದೆಯಾ || ||೨೪||

ಲಕ್ಷುಮಿಯರಸನ ಕಾರ್ಯಕೆ ಹಿತವೆ |
ಪೇಕ್ಷಿಸುವುದ ಕಂಡು ತನಗಿಂದು ಮತವೆ ||
ಲಕ್ಷವೆಂದು ಕಲಿ ಮನದಿ ಯೋಚಿಸುತ |
ಪಕ್ಷೀಂದ್ರ ಬಲದ ತೋಳದಂ ನೆಗಹಿಸುತ || ಕೇಳ್ದೆಯಾ || ||೨೫||

ತೋರಿದನನುಪಮ ರತ್ನದ ಪ್ರಭೆಯ |
ಮೀರಿತು ಸೂರ್ಯನ ಕಿನ್ನರ ಸಭೆಯ ||

ಘೋರನೆ ನಡನಡುಗುತ್ತಿರಲಾಗ |
ಧಾರಿಣಿಪತಿ ಮುಂದುವರಿದನು ಬೇಗ || ಕೇಳ್ದೆಯಾ || ||೩೬||

**ವಾರ್ಧಕ**

ಸಂಗರದಿ ದಶರಥಂ ಗುಡುಗಿ ರೌದ್ರಾವೇಶ
ಮಂಗೊಂಡು ಕಾದುತಿರಲಾಸಮಯದೋಳ್ ರಥದ
ಬೆಂಗಡೆಯ ಕೀಲುರಿದು ಗಾಲಿಯಂ ಕಳಚುವಂತಾಗಿ ನೃಪ ಕಾಣದಿರಲು |
ತುಂಗ ಕುಚಯುಗೆ ತನ್ನ ಕಡಗ ಕಂಕಣಗಳಿಂ
ಸಿಂಗರದ ಕರದೊಳ್ವರೂಥಮಂ ನಡರಿಸಲು
ಹಿಂಗದೆ ಧರಾಧಿಪಂ ಶಂಬರನ ಮುರಿದಟ್ಟಿ ದಿಗ್ವಿಜಯಮಂ ಪಡೆದನು || ||೩೭||

**ಭಾಮಿನಿ**

ಪಿಂತೆ ತಿರುಗಿದು ನೋಡೆ ತನ್ನಯ
ಕಾಂತೆಯಳ ಕೈಚಳಕವನು ಮಿಗೆ
ಸಂತಸಂಬಡುತಾಗ ಮುಂದಹ ದೈವಕೃತ್ಯವನು |
ತಾಂ ತಿಳಿಯದವಳೊಡನೆ ನುಡಿದನು
ದಂತಿಗಾಮಿನಿ ಪಿರಿದು ಮೆಚ್ಚಿದೆ
ನಿಂತು ಬೇಕಾದೆರೆಡು ವರಗಳನೀವೆ ನಿನಗೆಂದ || ||೩೮||

**ರಾಗ ಕೇದಾರಗೌಳ ಅಷ್ಟತಾಳ**

ಅರಸನ ನುಡಿಕೇಳ್ದು ಕೈಕೇಯಿ ದೇವಿಯು |
ಚರಣಕಾನತಳಾಗುತ್ತ ||
ವರಗಳಿನ್ಯಾಕೆ ಬೇಕೆಂಬಾಗ ಬೇಡುವೆ |
ನಿರಲಿ ನಿನ್ನ ಮೇಲೆಂದಳು || ||೩೯||

ಹೆಂಡತಿ ನುಡಿದಂದವನು ಕೇಳ್ದು ಹರುಷವ |
ಗೊಂಡವಳನು ತಕ್ಕೈಸಿ ||
ಚಂಡಸುರೌಘವ ಸಂತೈಸಿ ಪೊರಟನು |
ದ್ದಂಡ ಪರಾಕ್ರಮದಿ || ||೪೦||

ಸಂಪಾತಿಯನು ಕಂಡು ಸುಖಗೋಷ್ಠಿಯಿಂ ಸ್ನೇಹ |
ಸಂಪಾದಿಸುತ ಬಳಿಕ ||

ಗುಂಪಾದ ವಾದ್ಯನಿನಾದದೊಳ್ಬುರಕಾಗ |
ದಂಪತಿಗಳು ಬಂದರು || ||೪೧||

**ಕಂದ**

ಇತ್ತಲು ದಶಶಿರನೆಂಬ ಖ
ಳೋತ್ತಮನುಪಹತಿ ಸೈರಿಸಲಾರದೆ ಬಳಿಕಂ |
ಚಿತ್ತದಿ ದಿವಿಜರ್ಬಳಲುತ
ಬತ್ತಿದ ಮೊಗದಿಂದೈದಿ ಸುರೇಶನೊಳೆಂದರ್ || ||೪೨||

**ರಾಗ ಸುರುಟಿ ಏಕತಾಳ**

ಲಾಲಿಸು ದಿವಿಜೇಂದ್ರ | ಸುರಕುಲ |
ಪಾಲಕ ಗುಣಸಾಂದ್ರ || ಪ ||

ದಶಶಿರನೆಂಬವನು | ಬಾಧಿಸಿ |
ದೆಶೆಗೆಡಿಸೆಮ್ಮುವನು ||
ಶಶಿಸೂರ್ಯರ ಸಂಚಾರವ ನಿಲಿಸಿದ |
ಪಶುಪತಿಯೀ ಬಲ್ಲಾತನುಪದ್ರವ || ಲಾಲಿಸು || ||೪೩||

ಶಚಿಯರ ಸೆರೆವಿಡಿದು | ಕೊಂಡೈ |
ದತಿಶಯದಲಿ ಬಡಿದು ||
ಕ್ಷಿತಿಯ ಮಖಾದಿಗಳಪಹರಿಸುತ್ತಲಿ |
ಕ್ರತುಮುಖರೆಂಬೀ ಪೆಸರಡಗಿಸಿದರು || ||೪೪||

**ವಾರ್ಧಕ**

ಕೇಳಿದೈ ಕುಶಕುಮಾರಕನೆ ಭಯದಿಂದ ದಿವಿ
ಜಾಳಿ ಮೊರೆಯಿಡಲವರನೊಡಗೊಂಡು ವಾಗ್ದೇವಿ
ಯಾಳಿದನ ಬಳಿಗೈದಲಾತನಿವರಂ ಕಂಡು ಲಕ್ಷ್ಮೀನಿವಾಸನೊಡನೆ |
ಪೇಳಬೇಕೆನಲೈದಿ ಪಾಲ್ಗಡಲ ತಡಿಯೊಳೀ
ಪಾಳಯವು ನಿಂತು ಬಳಿಕಾರಂಭಿಸಿದರಂದು
ಘೋಳೆನುವ ಜಯರವಂ ಬ್ರಹ್ಮಾಂಡ ಭೇದಿಸುವ ತೆರದೊಳಾ ಕ್ಷಣದೊಳಂದು || ||೪೫||

**ಭಾಮಿನಿ**

ಏನಿದೇನದ್ಭುತವು ಮೇಘ
ಧ್ವಾನದೊಳು ಧ್ವನಿಕೇಳುತಿದೆ ಇಂ
ದೇನುಪದ್ರಗಳಡಗಿತೋ ಸುರನಿಕರಕೆಂದೆನುತ |
ಭಾನುಕೋಟಿ ಪ್ರಕಾಶನಾಕ್ಷಣ
ತಾನೆ ಹೊರಬಂದಾಲಿಸುತ ಸು
ಮ್ಮಾನದಿಂದಲಿ ಕಳುಹಿ ಗರುಡನನವರ ಕರೆಸಿದನು || ||೪೬||

**ಕಂದ**

ಬಂದಾ ಅಮರಸ್ತೋಮಕೆ
ಸಂದರುಶನಮಂ ನೀಡಲು ಸುಮನಸರುಗಳುಂ |
ಇಂದಿರೆಯರಸನ ಕಂಡಾ
ನಂದದಿ ಜಯ ಜಯ ರವದಿಂ ನುತಿಸಿದರಾಗಳ್ || ||೪೭||

**ರಾಗ ಮಧ್ಯಮಾವತಿ ಏಕತಾಳ**

ಪಾಲಿಸಬೇಕೆಮ್ಮ ಪರಮಪಾವನನೆ |
ಬಾಲ ಮುಕುಂದ ಕ್ಷೀರಾಬ್ಧಿಶಯನನೆ ||
ನಳಿನಸುಲೋಚನ ನರಕವಿಮೋಚನ |
ಖಳಕುಲದಹನ ಖಗಪತಿವಾಹನ || ಪಾಲಿಸ || ||೪೮||

ಭವ ಭಯ ವರ್ಜಿತ ಭಜಕಜನಾರ್ಚಿತ |
ರವಿಶತಸಂಕಾಶರಮೆಯಳ ಪ್ರಾಣೇಶ || ಪಾಲಿಸ || ||೪೯||

ನಿರುಪಮ ಚಾರಿತ್ರ ನಿಗಮ ಸಂತತ ಸ್ತೋತ್ರ |
ನಿರತ ನಿಜಾನಂದ ನಿರ್ಮಲ ನಿರ್ದ್ವಂದ್ವ || ಪಾಲಿಸ || ||೫೦||

**ವಾರ್ಧಕ**

ನೊಂದೆವೈ ದಶಕಂಠನುಪಹತಿಗಳಿಂದ ನಾವ್
ನಿಂದೆವೈ ಬಿಡದೆ ದೇಶಭ್ರಮಣೆಯೋಳ್ ಬಳಿಕ
ಸಂದೆವೈ ಕಡುದುರುಳನತ್ಯುಗ್ರ ಸೇವೆಯೊಳಗದನು ಸೈರಿಸಲಾರದೆ |
ಬಂದೆವೈ ದೇವರ ಪದಾಂಬುಜದೆಡೆಯೊಳಿಂತು
ನಿಂದೆವೈನತೆಯವಾಹನ ಜಗದ ವ್ಯಾಪಕನೆ
ತಂದೆ ವೈಭವದಿಂದ ದಯದೋರಿ ರಕ್ಷಿಸಲು ಬೇಕೆಂದನಬುಜೋದ್ಭವ || ||೫೧||

**ಕಂದ**

ಕಡುದೈನ್ಯದಿ ದಿವಿಜರ್ಮೊರೆ
ಯಿಡುವ ವಿಷಾದದ ವಾಕ್ಯವನಾಲಿಸಿ ಮುದದಿಂ |
ಕಡಲಾಳ್ದನು ಕೃಪೆಯಿಂದಲಿ
ಬಿಡದವರಿಂಗಭಯವ ಕೊಡುತೆಂದನು ಭರದೊಳ್ || ||೫೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಳಲಿದಿರಿ ಬಲುವಾಗಿ ಸಾಕಿ |
ನ್ನಳಲದಿರಿ ಬಿಡಿ ಚಿಂತೆ ಮುಂದಾ |
ಖಳನುಪದ್ರವ ನಿಲಿಸಿಕೊಡುವೆನು | ಇಳೆಯೊಳೆಲ್ಲ || ||೫೨||

ಕಿರಿದು ದಿನಕಾ ಜಗತಿಯೊಳಗವ |
ತರಿಸಿ ನರರೂಪಿನಲಿ ನಿಮ್ಮನು |
ಹರುಷಬಡಿಸುವೆ ನಂಬಿರೆನ್ನಯ | ಭರವಸೆಯನು || ||೫೪||

**ವಾರ್ಧಕ**

ಬಂದು ದಶಸ್ಯಂದನಗೆ ಕಂದ ತಾನೆಂದೆನಿಸಿ
ಇಂದು ಸುಮಗಂಧಿ ನೆವದಿಂದಲೀ ಬಂಧಿಸುತ
ನಿಂದಿಸುವ ಮಂದಖಳ ವೃಂದಮಂ ಸಮರದೊಳು ಕುಂದದೆಮ ಮಂದಿರದೊಳು |
ನಿಂದಿರಿಸಿ ಚಂದದೊಳು ಮುಂದೆಸೆವ(ಧುರದಿ) ದಶ
ಕಂಧರನ ನಂದನರ್ ಹೊಂದಿದ ಮದಾಂಧರಂ
ಬಂಧು ಸಂಮಂದಿಗರ ಮಂದಿ ತಮ್ಮಂದ್ಯರುಗಳಂದಮಂ ಕಂದಿಸುವೆನು || ||೫೫||

ಅಂಜದೇ ನೀವ್ ಪೋಗಿ ಧರೆಯೊಳ್ವಾನರರಾಗಿ
ಸಂಜನಿಸಿ ವನದೊಳಂ ಬೆಳೆದಿರ್ಪ ಫಲಗಳಂ
ಭುಂಜಿಸುತ ಮುದದಿಂದಲಿರಿ ಬಹೆನು ಭರದಿಂದ ಸಂದೇಹಮಿಲ್ಲೆನುತಲಿ |
ಕಂಜಲೋಚನನಭಯವಿತ್ತು ಪೇಳಿದ ವಿನಯ
ರಂಜಿತದ ನುಡಿಕೇಳ್ದು ಸುರರು ಧೈರ್ಯವ ತಾಳ್ದು
ಮಂಜುಳ ಶರೀರನಡಿಗೆರಗಿ ಸಂತಸದಿ ಗುಡಿಕಟ್ಟಿ ತಾವ್ ಬೀಳ್ಕೊಂಡರು || ||೫೬||

**ವಚನ** : ಈ ತೆರದಿಂ ಕೈಕೆ ಕೌಸಲ್ಯೆಸುಮಿತ್ರೆಯರು ಏನೆಂದರು ಎಂದರೆ –

**ರಾಗ ಸೌರಾಷ್ಟ್ರ ಅಷ್ಟತಾಳ**

ಅಂಗನಾಮಣಿ ಎನ್ನ ಅಂಗದ ವ್ಯಥೆಯನ್ನು |
ತಾಳಲಾರೆನು || ||೮೧||

ಅಡಿಯಿಡಲಳವಲ್ಲ ಮಡಿವರೆ ಮನಸ್ಸಿಲ್ಲ |
ತಾಳಲಾರೆನು || ||೮೨||

ಗಳಿಗೆ ಗಳಿಗೆಗೊಂದು ಅಲಗು ನೆಟ್ಟಂತಿದೆ |
ತಾಳಲಾರೆನು || ||೮೩||

ನಿನ್ನಂತೆ ಎನಗಾಯಿತಹುದೀಗ ಬಹುವ್ಯಥೆ |
ತಾಳಲಾರೆನು || ||೮೪||

ಉಂಡರುಬ್ಬಸ ಚೆಣ್ಣ ಗುಂಡು ಕಲ್ಲಿಟ್ಟಂತೆ |
ತಾಳಲಾರೆನು || ||೮೫||

ಒಬ್ಬರಂತೆನಗಲ್ಲ ಉಬ್ಬಸ ಘನವಮ್ಮ |
ತಾಳಲಾರೆನು || ||೮೬||

ಕ್ಷೀರ ಸಾಗರವಾಸ ನಾರಾಯಣ ದೇವೇಶ |
ರಕ್ಷಿಸೆಮ್ಮನು || ||೮೭||

ಎಂದು ಮೂವರು ಪೇಳಿದಂದವ ತಿಳಿದ ಗೋ |
ವಿಂದನಂದು || ||೮೮||

**ಶಾರ್ದೂಲವಿಕ್ರೀಡಿತ**

ಮಾಸೇ ಚೈತ್ರಸಿತಾರ್ಥ ರಮ್ಯನವಮ್ಯಾಂ ಮಧ್ಯಾಹ್ನ ಕಾಲಾಗಮೇ
ಮೇಷಾರ್ಕೇ ಸುಕುಳೀರ ಲಗ್ನದುದಯೇ ತಾರಾ ಪುನರ್ವಸುವಿನೊಳ್ |
ದೇಶಾಧೀಶ್ವರನಾದ ಪಂಕ್ತಿರಥನಿಂ ಕೌಸಲ್ಯಗರ್ಭಾಬ್ಧಿಯೊಳ್ |
ಶ್ರೀ ಸರ್ವೇಶ್ವರ ಮೋದದಿಂದ ಲೊಗೆದಂ ಲೋಕೈಕರಕ್ಷಾಮಣಿ || ||೮೯||

**ಕಂದ**

ವರಕೈಕೆ ಪಡೆದಳೊರ್ವನ
ಸರಸಿಜದಲನೇತ್ರೆ ಮಿತ್ರೆ ಬೆಸನಾದಳು ಇ |
ರ್ವರು ಸುಕುಮಾರರ ಲಗ್ನದಿ
ಧರಣೀಶಗೆ ತಂದುಕೊಟ್ಟರತಿಮುದದಿಂದಂ || ||೯೦||

**ರಾಗ ಕಲ್ಯಾಣಿ ಏಕತಾಳ**

ದಶರಥ ಭೂಪಗೆ | ಕೌಸಲ್ಯಾ ದೇವಿಯು |
ಶಿಶುವ ಕೈಯೊಳಗಿತ್ತ | ಳತಿ ಮೋಹದಿಂದ ||
ಎಸೆವ ಸಂತಸದಿಂದಾ | ಘ್ರಾಣಿಸಿ ರಾಮನೆಂ |
ದತಿಶಯ ಮೂರ್ತಿಯ | ಸತಿಗಿತ್ತನಾಗ || ||೯೧||

ತನ್ನ ಬಾಲನ ಕೊಟ್ಟ | ಳಿಂದೀವರಾಕ್ಷಿ ಸಂ |
ಪನ್ನಗೆ ಕೊಡಲಾತ | ಮನ್ನಿಸಿ ಭರತ ||
ರನ್ನನೆಂದುನ್ನತ | ನಾಮವ ವಿರಚಿಸಿ |
ಚೆನ್ನೆ ಕೈಕೆಗೆ ಕೊಟ್ಟು | ದನ್ನು ನೋಡಿದಳು || ||೯೨||

ಶಿಶುಗಳೆರಡ ತಂ | ದು ಸುಮಿತ್ರೆ ಕೊಡಲಾಗಿ |
ವಸುಧೇಶ ಲಕ್ಷ್ಮಣ | ಶತ್ರುಘ್ನರೆಂದು |
ಶಶಿಮುಖಿಗಿತ್ತಾಗ | ಮಂಗಲ ಘೋಷದಿ |
ವಸುಮತೀಸುರರ್ಗೆ ವಂ | ದಿಸುತಿದ್ದನಾಗ || ||೯೩||

**ವಚನ ||** ಆಗಳಾ ಮಂದಗಮನೆಯರು ಬಂದು ಜೋಗುಳವ ಪಾಡಿದರದೆಂತೆನೆ –

**ರಾಗ ಆಂದೋಳಿ ಅಷ್ಟತಾಳ**

ಅಂಗನಾಕುಲರ | ನ್ನೆಯರೆಲ್ಲ ಬಂದು |
ಮಂಗಲಕರ ಶುಭ | ಲಗ್ನದೊಳಂದು |
ಶೃಂಗಾರಮಾಗಿಹ | ತೊಟ್ಟಿಲ ತಂದು |
ಇಂಗಡಲರಸನ | ತೂಗಿದರಂದು || ಜೋ | ಜೋ || ||೯೪||

ಜೋಜೋ ದಶಶಿರ | ವೈರಿಮುರಾರಿ |
ಜೋಜೋ ಶ್ರೀರಾಮ | ಚಂದ್ರ ಉದಾರಿ |
ಜೋಜೋ ಇಂದ್ರಜಿ | ತುವಿನ ಸಂಹಾರಿ |
ಜೋಜೋ ಲಕ್ಷ್ಮಣ | ಶೇಷಾವತಾರಿ || ಜೋ | ಜೋ || ||೯೫||

ಜೋಜೋ ಕೈಕಾ | ದೇವಿಯ ಕಂದ |
ಜೋಜೋ ಭರತವೀರ | ಸದ್ಗುಣಸಾಂದ್ರ |
ಜೋಜೋ ಸುಮಿತ್ರಾ | ದೇವಿಯ ಕಂದ |
ಜೋಜೋ ಶತ್ರುಘ್ನ | ರವಿಕೋಟಿಸಾಂದ್ರ || ಜೋ | ಜೋ || ||೯೬||

**ಕಂದ**

ಸಿತಬೆದಿಗೆಯ ಚಂದ್ರನ ಪೋ
ಲುತ ಸುಂದರ ವಿಗ್ರಹದೊಳು ವರ್ಧಿಸುತಿರಲು |
ಪ್ರತಿವಿದ್ಯವ ಕಲಿತಿಹ ವರ
ಸುತರನ್ನೀಕ್ಷಿಸುತ ದಶರಥೇಂದ್ರಂ ಪೇಳ್ದಂ || ||೯೭||

**ರಾಗ ಕೇದಾರಗೌಳ ಝಂಪೆತಾಳ**

ಕಮಲದಳನಯನ ರಾಮ | ಇನ ಕುಲ |
ಕ್ಕಮಿತಸೌಭಾಗ್ಯಧಾಮ ||
ಕಡು ಮದ್ದು ಮೊಗದ ಬಾಲ | ಎತ್ತೆತ್ತ |
ನಡೆದು ದಣಿದೆಯೊ ಸುಶೀಲ || ||೯೮||

ತಮ್ಮ ಲಕ್ಷ್ಮಣನು ನಾನೂ | ಬೇಟೆಗೆ ಮ |
ಹನ್ಮಮತೆಯಲಿ ಪೋದೆವು ||
ಸಣ್ಣವರು ವಿಪಿನದೊಳಗೆ | ಇಬ್ಬರೇ |
ಮಿಣ್ಣನೈದುವರೆ ಹೀಗೆ || ||೯೯||

ಆನೆ ಕುದುರೆಗಳು ಸಹಿತ | ಆಯ್ದಿದೆವು |
ಕಾನನದಿ ಕೇಳು ತಾತ ||
ಸುರವಿರೋಧಿಗಳು ಕಂಡು | ಸೈರಿಸರು |
ತರವಲ್ಲ ಪೋಪುದಿಂದು || ||೧೦೦||

ಅರಿರಾಯರೆಮ್ಮ ಕಂಡು | ನಡನಡುಗಿ |
ಚರಣಕೆರಗಿದರು ಬಂದು |
ಇತ್ತ ಬಾರಯ್ಯ ಭರತ | ತಿರಿಗಿಯಾ |
ಡುತ್ತಿರುವುದ್ಯಾವನೀತ || ||೧೦೧||

ಅನುಜ ಶತ್ರುಹನು ನಾನೂ | ಬಿಲು ವಿದ್ಯ |
ವನು ಕಲಿಯುತಲೆ ಬಂದೆವು |
ತರವಲ್ಲವಪ್ಪಗಳಿರ | ವನದೊಳಗೆ |
ತಿರುಗದಿರಿ ಬಾಲಕರಿರ || ||೧೦೨||

**ಮಾಲಿನೀವೃತ್ತ**

ವರಸುತರೊಡನಾ ಭೂಪಾಲ ಮಾತಾಡುವಾಗ
ಗುರು ಕುಶಿಕಜನಂದ್ಯೈತಂದ ಮಾಂಗಲ್ಯದಿಂದ |
ಪರಮಪುರುಷನಂ ಕಂಡುತ್ತಮಾನಂದದಿಂದ
ಹರಸಲು ಧರಣೀಶಂ ರಾಮ ತಾಂ ವಂದಿಸಲ್ಕೆ || ||೧೦೩||

**ರಾಗ ವರಾಳಿ ಏಕತಾಳ**

ಋಷಿತಿಲಕಾಗ್ರಣಿ ವಂದನಂ |
ಕುಶಿಕ ನಂದನವರ ಕೌಶಿಕಮುನೇ || ಪಲ್ಲವಿ ||

ಸಾಕೇತಪುರ ನಿನ್ನ ಪಾದಸಂಗದಿ |
ಸಕಲರಘವ ಪರಿಹರಿಸಿತಲ್ಲ || ||೧೦೪||

ಕಂಗಳಿಗೆ ಮಹಾಸುಖವಾಯ್ತು | ಮುನಿ
ಪುಂಗವ ಕೇಳಯ್ಯ ನಿನ್ನ ಕಂಡ ಮಾತ್ರದಿ || ||೧೦೫||

ಪೂರ್ವಜನ್ಮದಿ ನರದೇವನಲ್ಲೋ |
ಸರ್ವೇಶ್ವರನ ಭಜಿಸಿ ಋಷಿಯಾದೆ || ||೧೦೬||

ಧನ್ಯ ನಾನೀಗ ವರಬ್ರಹ್ಮಋಷಿಯೆ |
ಎನ್ನನುದ್ಧರಿಸಯ್ಯ ಮುನಿರಾಯ || ||೧೦೭||

ಆನೆ ಕುದುರೆ ಮಂದಿ ಸೇನೆ ಎಲ್ಲ | ಈ
ಕ್ಷೋಣಿ ಕೂಡಿರುವ ಭಾಗ್ಯ ನಿನ್ನದಯ್ಯ || ||೧೦೮||
ಅರುಹು ನಿನ್ನ ಮನದಭಿಲಾಷೆಗಳ |
ತರಿಸಿ ಕೊಡುವೆನಯ್ಯ ಹರುಷದಿಂದ || ||೧೦೯||

**ರಾಗ ಯರಕಲಕಾಂಭೋಜಿ ಆದಿತಾಳ**

ಅಜನಂದನ ದಶರಥನೃಪತೇ | ನೀ |
ರಜನಯನ ಚಾರುಶೀಲ ರಿಪುಮಥನ || ಪಲ್ಲವಿ ||

ಎಲೆ ಭೂಪ ಏನೆಂಬೆ ಎನ್ನಭಿಲಾಷೆಗಳ |
ಸಲಿಸಿ ಕೊಡುವೆನೆಂದು ಪೇಳ್ದೆಯಲ್ಲ || ||೧೧೦||

ಪಿರಿದಾದ ಯಾಗವನ್ನು ಮಾಡಲೆಂದು ಸಕಲ |
ಪರಿಸೋಪಸ್ಕಾರಗಳ ಮಾಡಿಬಂದೆ || ||೧೧೧||

ಮತಿವಂತ ಪರಾಕ್ರಮಿಯಾದ ಧೀರ ನೀ |
ನತಿಸತ್ಯಸಂಧನಾಗಿರುವೆಯಲ್ಲ || ||೧೧೨||

ಸೋದರನಾಗಿರುತಿಹ ಲಕ್ಷ್ಮಣನ್ನ ಕೂಡಿ |
ಮೋದದಿ ರಾಮನ ಎನ್ನೊಡನೆ ಕಳುಹಿಸೊ || ||೧೧೩||

**ಮತ್ತೇಭವಿಕ್ರೀಡಿತ**

ವರಮೌನೀಶ್ವರನೆಂದ ಮಾತ ನರಪಂ ತಾ ಕೇಳುತಲೆ ಚಿಂತಿಸಿ
ಹರ ಮಾಹೇಶ್ವರನೆನ್ನ ಪುತ್ರರುಗಳಂ ಬಿಟ್ಟಿಂತು ನಾನಿಲ್ವೆನೋ |
ತರುಣಪ್ರಾಯದ ಕೋಮಲಾಂಗ ರಿವರಂ ಕಂಡೇಯ ಕೌಶಿಕಮುನೇ
ತರವೇನ್ನೈ ನಿಮಗಿಂಥ ಕಾರ್ಯ ಗುರುವೇ ಕೇಳೆಂದ ಧಾತ್ರೀಶ್ವರಂ || ||೧೧೪||

**ರಾಗ ಭೈರವಿ ಝಂಪೆತಾಳ**

ಅಮಲಗುಣಧಾಮ ಮುನಿ | ನಮಿಪೆ ನಾ ನಿನಗೆ || ಪಲ್ಲವಿ ||

ಸ್ವಾಮಿ ನಿಸ್ಪೃಹಮನದ | ಮುನಿಯೆ ನಮಿಸುವೆ ನಿನಗೆ |
ರಾಮನಗಲಿರುವಂಥ | ಮನಧೈರ್ಯವಿಲ್ಲ || ||೧೧೫||

ಷೋಡಶ ವಯಸ್ಸಾಗ | ಲಿಲ್ಲೆನ್ನ ಬಾಲರಿಗೆ |
ಕೂಡೆನ್ನ ಮಕ್ಕಳನು | ಕಳುಹಿಕೊಡಲಾರೆ || ||೧೧೬||

ರಕ್ಕಸರ ಕೊಲುವಂಥ | ರಣಸಮರ್ಥರೆ ಇವರು |
ಧಕ್ಕಡಿಗತನದ ಬಲು | ಕುಟಿಲರಲ್ಲಯ್ಯ || ||೧೧೭||

ರಾಕ್ಷಸರ ಯುದ್ಧಕ್ಕೆ | ಗಜತುರಗ ಸಹಿತಾಗಿ |
ಈ ಕ್ಷಣವೆ ಬರುವೆ ವಿ | ಶ್ವಾಮಿತ್ರ ಮುನಿಯೆ || ||೧೧೮||

**ಕೇಕಯವೃತ್ತ**

ದಶರಥ ನರಪಾಲ ಪೇಳ್ದುದಂ ಕೇಳುತಾಗ
ಎಸೆವರುಣ ಮುಖಾಕ್ರಾಂತಂ ತತ್ಸಭಾಮಧ್ಯದೊಳಗೆ |
ಉಸಿರಿಡುತ್ತಂ ಭುಗಿಭುಗಿಲೆನುತಾಚಾರ್ಯನನ್ನೀಕ್ಷಿಸುತ್ತಂ
ಕುಶಿಕಜನತಿಕೋಪಾರೂಢಂ ತಾನಾಗಿರ್ದ ಪೇಳ್ದಂ || ||೧೧೯||

**ರಾಗ ವರಾಳಿ ಏಕತಾಳ**

ಮಿತ್ರವಂಶಜಾತನಾದ | ಭೂಮಿಪಾಲ | ನೀನು |
ಸತ್ಯವಂತನೆಂದು ನಂಬಿ | ಬಂದೆನಲ್ಲ || ||೧೨೦||

ಬಂದಕ್ಷಣದಿ ಪೇಳ್ದ ಮಾತು | ನಿನ್ನೊಳಿಲ್ಲ | ಈಗ |
ಒಂದೇ ನಿಮಿಷ ಕಷ್ಟಮಾತು | ಬಂದಿತಲ್ಲ || ||೧೨೧||

ಸೂರ್ಯವಂಶ ಭೂಪರು ಹಿಂ | ದೇನು ಯೋಗ್ಯ | ನೀ ದು |
ಷ್ಕಾರ್ಯಕ್ಕೆ ಸೇರಿದ ಮೇಲೆ | ಸಾಕು ಭಾಗ್ಯ || ||೧೨೨||

ಬಂದ ದಾರಿಗೆ ಸುಂಕವಿಲ್ಲ | ಪೋಪೆ ಕೇಳು | ನಿನ್ನ |
ಕಂದರನ್ನು ಕೂಡಿ ಸುಖದಿ | ರಾಜ್ಯ ವಾಳು || ||೧೨೩||

**ಕಂದ**

ಮುನಿ ಕುಶಿಕಾಖ್ಯಂ ಪೇಳಿದ
ಘನ ರೌದ್ರದ ಮಾತ ಕೇಳಿ ಪದ್ಮಜ ತನಯಂ |
ತನುಮಧ್ಯದೊಳಾ ಋಷಿಯಂ
ವಿನಯದಿ ಸಂತೈಸುತಾಗ ಜನಪತಿಗೆಂದಂ || ||೧೨೪||

**ರಾಗ ಶಂಕರಾಭರಣ ಮಟ್ಟೆತಾಳ**

ಅಜಕುಮಾರ ಧೀರ ವೀರ | ಬಾಹುವಿಕ್ರಮ || ಪಲ್ಲವಿ ||

ಸುಜನರಕ್ಷ ಚಿಂತೆ ಬೇಡ | ಸೂರ್ಯವಂಶ ಭೂಮಿಪಾಲ |
ಭಜಕರಿಷ್ಟವೀವ ರಾಮ | ನನ್ನು ಕಳುಹಿಸು || ||೧೨೫||

ಮುನ್ನ ಕೊಡುವೆನೆಂದು ಹೇಳಿ | ಇನ್ನು ಇಲ್ಲವೆಂದುಸುರಲು |
ಧನ್ಯಶೀಲ ಧರ್ಮದ್ರೋಹ | ಬಾಹದಲ್ಲಯ್ಯ || ||೧೨೬||

ತನಯನಾದ ರಾಮಚಂದ್ರ | ನತಿಕಿಶೋರ ಮನುಜನಲ್ಲ |
ಮನದಿ ತಿಳಿಯೊ ಈತನೀಗ | ಗರುಡವಾಹನ || ||೧೨೭||

ಈ ತಪಸ್ವಿಯನ್ನು ನೆನೆಯ | ಲೆಲ್ಲ ಕಾರ್ಯ ಸಿದ್ಧಿಯಹುದು |
ಭೀತಿ ಇಲ್ಲದಂತೆ ರಾಮ | ನನ್ನು ಕಳುಹಿಸೊ || ||೧೨೮||

ತನಯ ಬಾರೊ ರಾಮಚಂದ್ರ | ವನಜನೇತ್ರ ಸುಗುಣಸಾಂದ್ರ |
ಮುನಿಕುಲೇಶ ಕರೆಯಬಂದ | ಪೋಗಬೇಕೆಲ || ||೧೨೯||

ಋಷಿಕುಲಾರ್ಯ ಕುಶಿಕತನಯ | ಅಸಮಧೈರ್ಯ ಯಜ್ಞಕಾರ್ಯ |
ಎಸಗು ಬೇಗ ಎನುತ ಸುತರ | ಬೀಳುಕೊಟ್ಟನು || ||೧೩೦||

ರಾಜ ತಿಲಕ ಹರ್ಷಪುಳಕ | ರಾಜಿಯಾಗಲಿಂದು ನಿನಗೆ |
ರಾಜ ರಾಮ ಲಕ್ಷ್ಮಣರನು | ಕೊಂಡುಪೋಪೆನೈ || ||೧೩೧||

**ಕಂದ**

ಧರಣಿಪಗೆ ಪೇಳಿ ಮಕ್ಕಳ
ಕರುಣದಿ ಕರಕೊಂಡು ಬರುತ ಮುನಿಕುಲ ತಿಲಕಂ |
ಪುರಮಂ ಕಳೆದೈದುತ ಬಾ
ಲರನೀಕ್ಷಿಸಿ ಮಾತನಾಡುತಿರ್ದಂ ಪಥದೊಳ್ || ||೧೩೨||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಶ್ರೀರಾಮ ಲಕ್ಷ್ಮಣ ದೇವೇಶ | ರಿರ |
ಕೇಳಿ ನಾ ಪೇಳುವ ವಚನವ ||
ನೀರಜ ಕೋಮಲ ಕಾಯರೆ | ಮುಂದೆ |
ದಾರಿ ಪಾಷಾಣವೆಗ್ಗಳವಯ್ಯ || ||೧೩೩||

ಬಳಲಿಕೆಯಾದರೆ ಪೇಳಿರೋ | ಮಂತ್ರ |
ಗಳ ಉಪದೇಶ ಮಾಡುವೆನಿಂದು ||
ನಲವೇರುವದು ಹಸಿವಾಗದು | ಇನ |
ಕುಲ ತಿಲಕಾಗ್ರಣಿಗಳಿರಿನ್ನು || ||೧೩೪||

ಕರುಣಿಸೊ ಮುನಿರಾಯ ಮಂತ್ರವ | ನಿನ್ನ |
ಕರುಣದಿ ಬಾಧೆಗಳಲಿಲ್ಲವೈ ||
ಗುರುವಾಗ ಕೊಟ್ಟನು ಮುದದಿಂದ | ಇರೆ |
ತರುಣ ನೋಡಿದನೊಂದು ಅಡವಿಯ || ||೧೩೫||

ವೃತ್ತಾಂತವೇನೀ ಕಾಡಾವುದು | ಮುನಿ |
ಪೋತ್ತಮ ಚಿತ್ರವಾಗಿದೆ ಇದು ||
ಧೂರ್ತೆ ರಕ್ಕಸಿಯೋರ್ವಳ್ ತಾಟಕಿ | ತಾಪ |
ಸೋತ್ತಮರನು ತಿಂಬಳ್ ಘಾತಕಿ || ||೧೩೬||

ಏಕೆ ದಾರಿಯ ಬಿಡಳೇನಯ್ಯ | ಮುನಿ |
ಆಕೆ ಜೀವಿಸುವಳಿನ್ನೇನಯ |
ಶ್ರೀಕರ ರಾಮ ಅವಳಕೊಂದು | ಮುಂದೆ |
ಲೋಕಕೆ ಕೀರ್ತಿಯಾಗಿರು ನಿಂದು || ||೧೩೭||

ಸ್ತ್ರೀಹತ್ಯೆ ಮಾಡೆ ಲೋಕದೊಳೆಲ್ಲ | ಎನ್ನ |
ದ್ರೋಹಿ ಎಂಬರು ಎನಗಿದು ಸಲ್ಲ |
ನೀ ಹರಿಯಲ್ಲವೆ ಭಾರ್ಗವ | ತಾಯ |
ಪ್ರಾಹರಿಸಿದ ಸುದ್ದಿಯರಿಯೆಯ || ||೧೩೮||

ತಂದೆ ಪೇಳಿದು ದಿಟವಾಯ್ತಯ್ಯ | ಈಗ |
ಕೊಂದು ಕೊಡುವೆ ತಾಳಿ ಮುನಿರಾಯ |
ಇಂದೆನ್ನ ಮೇಲೆ ದಯವ ಮಾಡು | ಎನು |
ತಂದುಸುರಲು ಆಶ್ಚರ್ಯಗಳಾಯ್ತು || ||೧೩೯||

**ಕೇಕಯವೃತ್ತ**

ನಿಟಿನಿಟಿಲೆನುತಾಗ ಘೋರ ರೂಪಿಂದ ಬೇಗ
ಅಟವಿಯೊಳಗಣ ಮಾರಿ ಬಂದಳಡ್ಡೈಸಿ ದಾರಿ |
ಅಟಕಟಿಸುತ ಭಾರಿ ಕಣ್ಣು ಕೆಂಗಿಡಿಯ ಕಾರಿ
ಕುಟಿಲತನ ವಿಕಾರಿ ತಾಟಕೀ ಎಂಬ ನಾರಿ || ||೧೪೦||

**ರಾಗ ಪಂತುರಾವಳಿ ಮಟ್ಟೆತಾಳ**

ಆರೆಲೋ ಮನುಜ ಇಲ್ಲಿ | ಅಂಜಿಕಿಲ್ಲದೆ | ಇಂಥ |
ಘೋರವಾದ ಎನ್ನ ವನಕೆ | ಬಂದು ಸಿಕ್ಕಿದೆ || ||೧೪೧||

ಸಿಕ್ಕಿದೆನೆಂದು ನೀ ಪೇಳ್ವ | ಪೌರುಷ ಸಾಕೆ | ಕಳ್ಳ |
ರಕ್ಕಸಿ ನೀನ್ಯಾರೆ ಅತ್ತ | ಸಾರೆಲೆ ಜೋಕೆ || ||೧೪೨||

ತಾಟಕಿ ನಾನೆನ್ನ ವನ | ನಿಮಗಿದುಸಲ್ಲ | ಎನ್ನ |
ಬೇಟೆಯ ಹುಲ್ಲೆಗಳಂತಾ | ದಿರಿ ನೀವೆಲ್ಲ || ||೧೪೩||

ನಿನ್ನ ಬೇಟೆ ಎಂಬುದಾವ | ಗಣ್ಯ ಕಾಣೆಲೆ | ಮೂಳಿ |
ಕುನ್ನಿಯಂತೆ ದಾರಿಯ ಬಿ | ಟ್ಟತ್ತ ಸಾರೆಲೆ || ||೧೪೪||

ಈಕ್ಷಣದಲ್ಲಿ ನಿನ್ನ ಮಾಂಸ | ಖಂಡವ ಬೇಗ | ನಾ |
ಭಕ್ಷಿಸುವೆನೆನುತ ಪಲ್ಲ | ತೋರಿದಳಾಗ || ||೧೪೫||

ಹಲ್ಲ ಕಂಡರಂಜುವನೇ | ರಾಮ ಕಾಣೆಲೆ | ನಿ |
ಮ್ಮೆಲ್ಲರ ವಂಶಕ್ಕೆ ಶೂಲ | ನಾಗಿರುವೆನೆಲೆ || ||೧೪೭||

ಕಲ್ಲು ಮರದ ಮಳೆಯಗರೆವೆ | ನೆನ್ನುತಲಂದು | ಅಸುರೆ |
ತಲ್ಲಣಿಸದೆ ಸಿಡಿಲಿನಂತೆ | ಹೊಡೆದಳು ಬಂದು || ||೧೪೭||

ರಾಘವಾ ಅವಳ ನೀ ಮಾ | ತಾಡಿಸ ಬೇಡ | ಅತಿ |
ಬೇಗ ಕೊಂದು ಕಾಲನ ವಶ | ಮಾಡೆಲೊ ಗಾಢ || ||೧೪೮||

**ರಾಗ ಮಾರವಿ ಮಟ್ಟೆ ತಾಳ**

ಘೋರ ರೂಪಿನಸುರೆ ಮದ | ವೇರಿ ಭುಜವನೊದರಿಸುತ್ತ |
ಮೂರು ಲೋಕ ನುಂಗ ಬಂದ | ಮಾರಿಯಂತಿರೆ ||
ಚೀರಿ ಬಾಯ ಬಿಟ್ಟು ಹಲ್ಲ | ತೋರಿ ಭಯವ ಬೀರಿ ಋಷಿಗೆ |
ಶೂರ ರಾಮಚಂದ್ರಗಿಟ್ಟ | ಳೊಂದು ಶೂಲವ || ||೧೪೯||

ಇಟ್ಟ ಶೂಲವನ್ನು ರಾಮ | ತಟ್ಟೆ ಬಿಲ್ಲ ಕೊಪ್ಪಿ ನಿಂದ |
ದಿಟ್ಟೆಗೊಂದು ಶರವನಾಗ | ಬಿಟ್ಟ ರೋಷದಿ ||೧೫೦||

ಕೆಟ್ಟ ತೊತ್ತೆ ಎನ್ನ ಕೂಡೆ | ಇಷ್ಟು ಶೌರ್ಯವೇಕೆನುತ್ತ |
ಅಟ್ಟೆ ಹಿಡಿದು ಬಡಿದಡೊಂದು | ರಟ್ಟೆ ಬೀಳಲು || ||೧೫೧||

ಎತ್ತಣಿಂದ ಬಂದೆ ನಿನ್ನ | ತುತ್ತ ಮಾಳ್ಪೆನೆನುತಲಾಗ |
ಮೃತ್ಯು ಬಾಯ ಬಿಟ್ಟವೋಲು | ಧೂರ್ತೆ ಗರ್ಜಿಸೆ ||೧೫೨||

ಚಿತ್ತದಲ್ಲಿ ರಾಮ ಕ್ರೋಧ | ವೆತ್ತು ಸುರರ ಹವಿಯನುಗುಳೆ |
ನುತ್ತ ಬಾಣದಿಂದ ಕೊರಳ | ಕತ್ತರಿಸಿದನು || ||೧೫೩||

**ಶಾರ್ದೂಲವಿಕ್ರೀಡಿತ**

ಶ್ರೀರಾಮಂ ಪಿಡಿದೆಚ್ಚ ದಿವ್ಯಶರದಿಂದಾ ಧೂರ್ತೆ ಯಮನಾಳ್ಗಳೊಳ್
ಸೇರಲ್ ದಿವ್ಯಸುವೃಷ್ಟಿ ಮಂಗಳಮಯಂ ಭೋರೆಂದುದಾಕಾಶದಿ |
ಸೌರಮ್ಯಾಂಗದಿನಾ ಸುರಾಂಗನೆಯರುಂ ಸಂಗೀತಮಂ ಪಾಡಲು
ಧೀರೋದಾರರನಾ ಕುಮಾರರುಗಳಂ ಮುನಿಕರೆದು ಮಾತಾಡಿದಂ ||೧೫೪||

**ರಾಗ ಕಾಂಭೋಜಿ ಮಟ್ಟೆತಾಳ**

ಇನಕುಲಾಬ್ಧಿಸೋಮ ರಾಮ | ದನುಜವೈರಿ ಸುಗುಣ ಧಾಮ |
ವನಜನೇತ್ರ ಬಹುನಿಸ್ಸೀಮ | ಮಾತ ಕೇಳಯ್ಯ ||೧೫೫||

ಇಂದಿನಿರುಳು ಇಲ್ಲಿ ನಾವು | ಚಂದದಿಂದ ಕಳೆವ ದಿನವ |
ಒಂದು ಕಂಟಕಂಗಳಿಲ್ಲ | ಮುಂದೆ ಬಾಲಕ ||೧೫೬||

ಬ್ರಹ್ಮದಂಡವಧಿಕ ಚಕ್ರ | ಧರ್ಮಪಾಶ ಕಾಲನಸ್ತ್ರ |
ನಿರ್ಮಲ ಸುವಾರುಣಾಸ್ತ್ರ | ಮಹೇಂದ್ರಾಸ್ತ್ರವು ||೧೫೭||

ಕೊಡುವೆನೈದು ಅಸ್ತ್ರಗಳನು | ಪೊಡವಿಪಾಲಕುವರ ಇಂದ್ರ |
ನೊಡನೆ ಕಾದಲಾತ ಹಿಂದೆ | ನಡೆದು ಪೋಪನು ||೧೫೮||

**ಕಂದ**

ಎನುತಾ ಮಂತ್ರಗಳೈದನು
ಮುನಿಪನವರ್ಗಿತ್ತನಂದು ಸಂತಸದಿಂದಂ |
ವನಮಂ ಕಳೆದಾಶ್ರಮಕೈ
ದಿನಿತಂ ರಘುಕುಲಜರಿಂಗೆ ನುಡಿಯುತ್ತಿರ್ದಂ || ||೧೫೯||

**ರಾಗ ಭೈರವಿ ಝಂಪೆತಾಳ**

ಶ್ರೀರಾಮ ಕೇಳಯ್ಯ | ಆಶ್ರಮದ ಸುತ್ತಲೂ |
ಆರೈದು ಕೊಳ್ಳಿರನು | ಜಾಗ್ರಜರು ಸತತ || ಪಲ್ಲವಿ ||

ಆರುದಿನಪರ್ಯಂತ | ಈ ಋಷಿಗಳೊಡಗೂಡಿ |
ಓರಂತೆ ಯಾಗವನು | ಒಡನೆ ರಚಿಸುವೆನು ||
ಶ್ರೀರಾಮ ಲಕ್ಷ್ಮಣರೆ | ಅರಿಗಜ ಮೃಗೇಂದ್ರರಿರ |
ಶೂರರೇ ಕೇಳಿರೆ | ನ್ನಯ ವಾಕ್ಯಗಳನು ||೧೬೦||

ಏಕಭಾವದಿ ತಂದ | ನೇಕ ವಸ್ತುವನಿಂದು |
ಶ್ರೀಕರದಿ ಯಜ್ಞವನು ಮಾಡುವೆನು ನಾನು ||
ಆ ಕುಠಾರರು ಬರಲು | ಬೇಕಾದ ಅಸ್ತ್ರದಿಂ |
ನಾ ಕೊಂದು ಕೊಡುವೆನೈ | ಕ್ಷಣದಿ ಮುನಿರಾಯ || ||೧೬೧||

ವೀರ ಲಕ್ಷ್ಮಣ ಸಮರ | ಶೂರ ಆ ದಿಕ್ಕಿನೊಳು |
ಸೇರಿ ಧನು ಶರವಿಡಿದು | ಭೂರಿ ರಾಕ್ಷಸರ ||
ಸಾರಿಯಲಿ ತ್ರಿಶಿರನನು | ದೂರ ಸೇರಿಸು ಧೀರ |
ಚಾರುಗುಣಗಂಭೀರ | ಮಾರನಾಕಾರ || ||೧೬೨||

**ಕೇಕಯವೃತ್ತ**

ಅನುಜನೊಡನೆ ರಾಮ ಮಾತನಾಡುತ್ತ ನಿಲಲು
ದನುಜರು ಭರದಿಂದೈ ತಂದು ತೂರಾಡುತಿರಲು |
ಮುನಿವರರು ರಾಮ ರಾಮ ಎಂದರಾ ಭೀತಿಯಿಂದ
ಅನುವರಿತು ರಾಕ್ಷಸರ ಶ್ರೀ ರಾಮು ಮಾರಾಂತುನಿಂದ || ||೧೬೩||

**ರಾಗ ಕೇದಾರಗೌಳ ಮಟ್ಟೆತಾಳ**

ಆರೆಲೋ ಮನುಜಾ ಬಂದವ | ನಾರೆಲೋ ಮನುಜಾ || ಪಲ್ಲವಿ ||

ವನದೊಳಧಿಕ ರಜನಿಚರರ | ಹೆಣಗಿ ಯುದ್ಧ ರಂಗದಲ್ಲಿ |
ಕಣನ ಜೈಸಲೆಂದು ದೃಢದ | ಮನವ ಮಾಡಿ ಇದಿರು ನಿಂತ |
ಮನುಜ ನಿನ್ನ ಪೆಸರದೇನೆಲಾ | ಸಂಗ್ರಾಮ ಬಿಟ್ಟು |
ವಿನಯದಿಂದ ಪಿಂತೆ ಸಾರೆಲಾ || ||೧೬೪||

ಮನುಜನಾದ ದಶರಥನ್ನ | ತನಯ ರಾಮನೆಂಬ ನಾಮ |
ಮುನಿಯ ಯಾಗವನ್ನು ಕಾಯ್ವ | ರಣ ಸಮರ್ಥನೆನ್ನ ಬರಿದೆ |
ಕೆಣಕಿ ನೀನು ಸಾಯಬೇಡೆಲಾ | ಶರಣಾಗಿ ಬೇಗ |
ಗುಣದಿ ಕಲಹ ಬಿಟ್ಟು ಪೋಗೆಲಾ || ||೧೬೫||

ಮನುಜನಾದ ದಶರಥನ್ನ | ತನಯನೆಂಬ ಹೆಮ್ಮೆಯಿಂದ |
ಮುನಿಯ ಮಾತ ಕೇಳಿ ಬಂದು | ಎನಗೆ ಗ್ರಾಸವಾದೆ ಭಳಿರೆ |
ತನುವಿನಾಸೆ ಬಿಟ್ಟು ಕಳೆ ಎಲಾ | ಬೆಂಬಲಕೆ ಬೇಗ |
ಜನಕನನ್ನು ಕರೆಸಿಕೊಳ್ಳೆಲಾ || ||೧೬೬||

ಎಷ್ಟು ಮಾತದೇತಕೆಂದು | ದುಷ್ಟಗೊಂದು ಶರವನೆಸೆದು |
ನೆಟ್ಟನಾ ಮಾರೀಚನನ್ನು | ಇಟ್ಟನಾ ಸಮುದ್ರದಲ್ಲಿ |
ಮತ್ತೆ ಒಬ್ಬ ದನುಜ ಬಂದನು | ಶ್ರೀರಾಮನೊಡನೆ |
ಉತ್ತರವನು ಹೇಳಿ ನಿಂದನು || ||೧೬೭||

ಅರೆಲೋ ಸುಬಾಹು ನಾ ಸು | ರಾರಿಯನ್ನು ಗೆಲುವನೆಂಬ |
ವೀರರನ್ನು ಬಡಿದು ತಿಂಬ | ಮಾರಿ, ಬೇಗ ಅತ್ತಸಾರು |
ರಾಮನೆಂಬ ಪೆಸರು ನಿಲ್ಲದು | ಎನ್ನ ಕೂಡೆ |
ರಾಮನೆಂಬ ಗರ್ವ ಸಲ್ಲದು || ||೧೭೮||

ಎನ್ನ ತಿಂಬ ಮಾರಿ ಯಾರೊ | ನಿನ್ನ ಕೊರಳ ಕೊಯ್ವೆನೀಗ |
ಕುನ್ನಿ ಸಾಯಬೇಡ ಹೋಗು | ಇನ್ನು ಬಾಣ ಎಸೆವೆ ನೋಡು |
ಕೇಳು ಪಾಪಿ ನೀಚ ರಾಕ್ಷಸ | ನಿನ್ನ ಕೊಂದ |
ಮೇಲೆ ಎನಗೆ ಪರಮಸಂತಸ || ||೧೭೯||

ಎನಗೆ ಬಾಣ ಎಸೆವೆನೆಂದು | ಮನುಜ ಪೇಳ್ವೆ ಸಾಕು ನಿನ್ನ |
ಕ್ಷಣಕೆ ಕೊರಳನರಿದು ಈ | ಧರಣಿಯೊಳಗೆ ಚೆಲ್ವೆನೀಗ |
ರಾಮನೆಂಬ ಗರ್ವ ಸಲ್ಲದು | ಎನ್ನ ಕೂಡೆ |
ರಾಮನೆಂಬ ಪೆಸರು ನಿಲ್ಲದು || ||೧೮೦||

ಧರಣಿಯಲ್ಲಿ ಎನ್ನ ಕೊರಳ | ನರಿವ ಧೀರನಹುದೆನುತ್ತ |
ಸರಳ ಬಿಟ್ಟು ರಕ್ಕಸನ್ನ | ಕೊರಳ ಕತ್ತರಿಸಿದನಾಗ |
ಮುನಿಗಳೆಲ್ಲ ಜಯಜಯೆಂದರು | ಯಜ್ಞದಲ್ಲಿ |
ದನುಜ ವೈರಿ ಜಯ ಜಯೆಂದರು || ||೧೮೧||

**ಶಾರ್ದೂಲವಿಕ್ರೀಡಿತ**

ಘೋರಾಕಾರಸುಬಾಹು ಬೀಳೆ ಮುನಿಪಂ ಸಂತೋಷಮಂ ತಾಳಿದಂ
ಭೋರೆಂದೆದ್ದು ಸುಘೋಷವೇದರವದಿಂ ತಾ ಯಜ್ಞಮಂ ನಡೆಸಿದಂ |
ಶ್ರೀರಾಮಂಗೆ ಸುರೇಂದ್ರಮುಖ್ಯರೆರಗುತ್ತಾನಂದದಿಂ ವಂದಿಸಲ್
ಧೀರಂಗಾ ಮುನಿರಾಜಮೌಳಿ ಜನಕಂ ಲೇಖಾರ್ಥಮಂ ಕಳುಹಿದಂ || ||೧೮೨||

**ರಾಗ ಘಂಟಾರವ ಝಂಪೆತಾಳ**

ಜನಕ ಕಳುಹಿದ ದೂತ | ವಿನಯದಿಂ ಬರಲಿತ್ತ |
ಮುನಿಕೌಶಿಕಗೆ ಕೊಟ್ಟ | ನಾ ಲೇಖನವನು || ||೧೮೩||

ಓಲೆಯನು ಕಂಡು ಮುನಿ | ಪಾಲ ತಾ ಹರ್ಷದಲಿ |
ಶ್ರೀಲೋಲ ರಾಮನೊಡ | ನಿದೆ ಬಂದೆ ಎಂದ || ||೧೮೪||

**ಕಂದ**

ಇಂತೆಂದಾ ಜನಕನ ಚರ
ನಂ ತಳುವದೆ ಕಳುಹಿ ಮೌನಿಕುಲ ತಿಲಕಂ ಶ್ರೀ |
ಕಾಂತಂ ರಾಮಂ ತನ್ನಯ
ಮುಂತೆಸೆದಿರೆ ನುಡಿಯುತಿರ್ದ ವಿಶ್ವಾಮಿತ್ರಂ || ||೧೭೫||

**ರಾಗ ಪಂತುವರಾಳಿ ಮಟ್ಟೆತಾಳ**

ರಾಮ ಇನಕುಲೇಶ ಬಾಲ | ವನಜಲೋಚನ |
ಇನ್ನಯೋಧ್ಯಾಪುರಕೆ ನಾವು | ಪೋಗಬೇಕೆಲೈ || ||೧೭೬||

ಜನಕರಾಜಧಾನಿಯಲ್ಲಿ | ಒಂದು ಯಜ್ಞವು |
ಮದನದಹನ ಧನುವ ನೋಡ | ಬಹುದು ಬಾಲಕ || | |೧೭೭||

ತ್ವರಿತದಲ್ಲಿ ಮುನಿಗಳೊಡನೆ | ನಾವು ಪೋಗುವ |
ಭರದೊಳಗ್ರ ಗಂಗೆಯನ್ನು | ಎಲ್ಲರ್ದಾಟುವ || ||೧೭೮||

**ಕೇಕಯವೃತ್ತ**

ಮುನಿವರನಿಂತೆಂದಾ ಮಾತ್ರದೊಳ್ ಗಂಗೆಯಲ್ಲಿ
ಘನ ಜಪತಪದಿಂದ ಇರುತಿರ್ದರಾ ಸಮಯದೊಳ್ |
ಜನಪ ಸುಮತಿರಾಜಂ ಬಂದವರ ಕಂಡು ಧೀರಂ
ವಿನುತರು ನಮಿಸುವಾಗ ಮುನಿಗೆ ತಾ ಪೇಳ್ದ ನಿಂತು || ||೧೭೯||

**ರಾಗ ಕಾಂಭೋಜಿ ಚೌತಾಳ ಮತ್ತು ತಿತ್ತಿತ್ತೈ**

ವಿಶ್ವಾಮಿತ್ರ ಮುನೀಂದ್ರ | ವರಗುಣಸಾಂದ್ರ || ಪಲ್ಲವಿ ||

ಇಂದು ನಮ್ಮಯ ಪುರಕೆ | ಬಂದ ಕಾರಣದಿಂದಾ |
ನಂದವಾಯಿತು ನಮಗೆ | ವಂದಿಸುವೆನು ನಿಮಗೆ || ||೧೮೦||

ಚೆಲುವ ಬಾಲರಿದಾರು | ಜಲರುಹಾಕ್ಷರು ಮತ್ತೆ |
ಬಲವೈರಿಸಮಬಲರು | ಕೋದಂಡಧರರಾಗಿಹರು || ||೧೮೧||

ಸುಮತಿಭೂಪತೇ ಕೇಳು | ಸದ್ಗುಣಧಾಮ || ಪಲ್ಲವಿ ||

ದಶರಥಸುತ ರಾಮ | ಅಸಮ ಸದ್ಗುಣಧಾಮ |
ರಸಿಕ ಲಕ್ಷ್ಮಣ ಕಾಣೊ | ಬಿಸರುಹಾಕ್ಷರು ಜಾಣ || ||೧೮೨||

ಎನ್ನ ಯಾಗರಕ್ಷಣೆಗೆ | ಮನ್ನಿಸಿ ಕರೆತಂದೆ |
ಪುಣ್ಯಜನ ಸುಬಾಹು | ವನ್ನು ಕೊಂದರಿವರು || ||೧೮೩||

**ಕೇಕಯವೃತ್ತ**

ವರಮುನಿ ಪೇಳೆ ಸುಮತಿರಾಜ ಸಂತೋಷದಿಂದ
ಚರಣಕೆ ನಮಿಸಿ ಪೂಜೆಮಾಡಿ ಸಲ್ಲಿಸುತ ನಿಲಲು |
ಪರಮಪುರುಷನಾದ ರಾಮನಂ ಕೂಡಿ ಬರಲು
ಹರುಷದಿ ಮುಂದಿರ್ಪ ವನವನುಂ ತೋರುತಿರ್ದಂ || ||೧೮೪||

**ರಾಗ ಘಂಟಾರವ ಝಂಪೆತಾಳ**

ಮುನಿಕುಲೋತ್ತಮ ಕೇಳು | ವನದೊಳತ್ಯಧಿಕವಿದು |
ಘನತರಾಶ್ರಮವಾವು | ದೆನಗೆ ಪೇಳಯ್ಯ || ||೧೮೫||

ಕೇಳು ರಾಘವ ವೀರ | ಹೇಳುವೆನು ನಿನಗೀಗ |
ಶ್ರೀಲೋಲ ಈ ವನದ | ಮೂಲ ಸಂಗತಿಯ || | |೧೮೬||

ಮುನ್ನ ಗೌತಮಮುನಿಪ | ತನ್ನರಸಿಯೊಂದಾಗಿ |
ಚೆನ್ನಾಗಿ ಇಲ್ಲಿರ್ದ | ರಧಿಕ ವಿಭವದಲಿ || ||೧೮೭||

ಸುರಪನ್ನೈತಂದು ಮುನಿ | ವರನಿಲ್ಲದಿಹ ಸಮಯ |
ವರಿತಹಲ್ಯೆಯ ರಮಿಸಿ | ದನು ಕಾಮುಕದಲಿ || ||೧೮೮||

ಮತ್ತಹಲ್ಯೆಗೆ ಶಾಪ | ವಿತ್ತಡರೆಯಾದಳಿವ |
ಳುತ್ತಮಪುರುಷ ಕೇಳು | ಚಿತ್ತಾವಧಾನ || ||೧೮೯||

ಇಂದು ನಿನ್ನಯ ಪಾದ | ಸೋಂಕಲವಳೇಳುವಳು |
ಎಂದಡಾ ರಾಮಚರ | ಣಸ್ಪರ್ಶವಾಗೆ || ||೧೯೦||

ಶ್ರೀ ಮುಕುಂದ ಮುರಾರಿ | ದಾಮೋದರಾ ಎನುತ |
ಭಾಮಿನಿಯಹಲ್ಯೆ ಬಂ | ದೆರಗಿದಳು ಪದಕೆ || ||೧೯೧||

ಇಂತೆಂದು ಹಲ ತೆರದಿ | ಕಾಂತೆ ಭಜಿಸುತ್ತಿರಲು |
ಸಂತಸದಿ ಗೌತಮ ಮು | ನೀಂದ್ರ ನಡೆತಂದ || ||೧೯೨||

**ರಾಗ ಯೆರುಕಲಕಾಂಭೋಜಿ ಏಕತಾಳ**

ಅಚ್ಯುತಾನಂತಾ ಗೋವಿಂದಾ | ನಾರಾಯಣಾ ವಾಸುದೇವಾ |
ಸಚ್ಚಿದಾನಂದಾ ಮುಕುಂದ | ಸಲಹೊ ನೀನಿಂದು || ಪಲ್ಲವಿ ||

ಈ ಕಲ್ಲಾಗಿ ಬಿದ್ದಹಲ್ಯೆ | ನಿನ್ನ ಪಾದಸಂಗದಿಂದ |
ಶೋಕಹೀನೆಯಾಗಿ ಬಂದ | ಳೆನ್ನ ಭಾರ್ಯೆಯು ||
ಶ್ರೀಕಮಲೆಯರಸ ನೀನು | ಲೋಕೇಶ ಎನ್ನರಸಿಯನ್ನು |
ನಾ ಕರೆದುಕೊಂಡುಪೋಪೆ | ಹೇ ಕೃಪಾನಿಧೇ || ||೧೯೩||

ಇನ್ನು ವಿಶ್ವಾಮಿತ್ರಮುನಿ | ಯನ್ನು ಕೂಡಿಕೊಂಡು ಬೇಗ |
ತನ್ನಗರಕೆ ಹೋಗಿರೆಂದು | ಬೀಳುಕೊಟ್ಟನು || ||೧೯೪||

**ಕೇಕಯವೃತ್ತ**

ವನಿತೆಯ ಕರಕೊಂಡು ಗೌತಮ ಮುನಿ ನಿಲಲತ್ತ
ಇನ ಕುಲಜರು ಸಹಿತ ವರವಿಶ್ವಾಮಿತ್ರರಂದು |
ಜನಕನಗರಕ್ಕೈತಂದರು ಸಂತೋಷದಿಂದ
ಜನಪನಿವರಂ ನೋಡಿ ಮೌನಿಯೊಳ್ ಪೇಳ್ದನಂದು || ||೧೯೫||

**ರಾಗ ಕಾಂಭೋಜಿ ಝಂಪೆತಾಳ**

ಸಾಧು ಶೀಲಾಗ್ರಣಿಯೆ | ಸಾಧು ಶೀಲ || ಪಲ್ಲವಿ ||

ವರಮುನಿಪ ತವಚರಣ | ದರುಶನದ ಫಲದೊಳಘ |
ಹರಿದು ಹೋಯಿತನೇಕ | ತಾಪವಿಂದೀಗ ||
ಚರಣ ನಿರ್ಮಲಕರವು | ಪರಮಮಂಗಲವಾಯ್ತು |
ಧರೆಯೊಳಗೆ ನಾಧನ್ಯ | ನಾದೆನಲ್ಲೊ | ಸ್ವಾಮಿ || ||೧೯೬||

ಬಾಲರಿವರಾರು ಮುನಿ | ಬಲವೈರಿಸಮಧೀರ |
ಶೀಲಸಂಪನ್ನರೈ | ಕೋದಂಡಧರರು ||
ಬಾಲರವಿಕೋಟಿತೇ | ಜಃಪುಂಜರಾಗಿಹರು |
ಪಾಲಿಸುವರಾವ ಜನ | ಜಾಲವನ್ನೀಗ || ||೧೯೭||

**ರಾಗ ಮುಖಾರಿ ಝಂಪೆತಾಳ**

ನೃಪತಿಮೌಲೇ | ಜನಕ | ನೃಪತಿಮೌಲೇ || ಪಲ್ಲವಿ ||

ದಶರಥನ ಸುತರಿವರು | ವಸುಮತೀಪತಿ ಕೇಳು |
ರಸಿಕರಿವರೆನ್ನ ಯ | ಜ್ಞದ ರಕ್ಷೆಗಾಗಿ |
ಕುಶಲದಿಂದಾಂ ಪೋಗಿ | ಕರೆತಂದ ಕಾರಣದಿ |
ನಿಶಿಚರರ ಕೊಂದು ಯಾ | ಗವ ಕಾಯ್ದ ರಾಮ || ||೧೯೮||

ಬರುವಾಗ ಸುಮತಿಭೂ | ಪಾಲ ಕಂಡನು ಮತ್ತೆ |
ವರಗೌತಮನ ಆಶ್ರ | ಮಕೆ ಬಂದೆವು |
ಅರೆಯಾಗಿ ಬಿದ್ದಹ | ಲ್ಯೆಗೆ ವಿಶಾಪವ ಮಾಡಿ |
ಕರೆದು ಗೌತಮಗಿತ್ತು | ಬಂದನೀ ಧೀರ || ||೧೯೯||

**ಕೇಕಯವೃತ್ತ**

ಕುಶಿಕಸುತನ ಮಾತಂ ಕೇಳುತಾ ರಾಜಮೌಳಿ
ದಶರಥಸುತರಿಂಗೆ ವಂದಿಸುತ್ತೆಂದನಾಗ |
ಋಷಿತಿಲಕನೆ ನೋಡಾ ಹಿಂದೆ ಪುತ್ರಾರ್ಥಿಯಾಗಿ
ಎಸಗಿದೆ ಕ್ರತುವೊಂದಾಶ್ಚರ್ಯಮಂ ಕಾಣಲಾಯ್ತು || ||೨೦೦||

**ರಾಗ ಭೈರವಿ ಝಂಪೆತಾಳ**

ಧರಣಿಯನು ಶೋಧಿಸು | ತ್ತಿರಲು ಕನ್ಯಾರತ್ನ |
ದೊರಕಲಾ ಸುರಮುನಿಪ | ಬಂದು ಮುದದಿಂದ ||
ವರಕುವರಿ ಸಿರಿದೇವಿ | ಹರಿಯೆ ಪತಿಯಾಗುವನು |
ಅರಿತು ಸಲಹೋ ಎಂದು | ಮುನಿ ಪೋದನಂದು || ||೨೦೧||

ಇರಲು ಯವ್ವನದೋರೆ | ಸಿರಿಸೀತೆಗಾ ಸ್ವಯಂ |
ವರ ಮಾಡಲೆಂದು ನಾ | ಪುರವ ರಚಿಸುವೆನು ||
ದೊರೆ ದೊರೆಗಳೆಲ್ಲರಿಗೆ | ಬರೆಸಿದೆನು ಓಲೆಯನು |
ಕರೆಯಲಟ್ಟಿದೆ ನಿಮ್ಮ | ಕರುಣಿಸೈ ನಮ್ಮ || ||೨೦೨||

**ಕಂದ**

ಇಂತೆಂದು ಜನಕರಾಯಂ
ಸಂತೋಷದಿ ಪೇಳುತಿರಲು ದೇಶಾಧಿಪರ |
ತಿಂಥಿಣಿ ಬರಲಾ ಸಮಯದೊ
ಳಂತರವರಿತವರವರನು ಮನ್ನಿಸುತಿರ್ದಂ || ||೨೦೩||

**ರಾಗ ಯೆರುಕಲಕಾಂಭೋಜಿ ಏಕತಾಳ**

ಬಂದಿರೇನ್ನೈ | ನಡೆ | ತಂದಿರೇನ್ನೈ || ಪಲ್ಲವಿ ||

ಅಂಗದ ಭೂಪಾಲ ನಮೋ | ವಂಗದೇಶಾಧೀಶ ನಮೋ |
ಬಂಗಾಳದ ರಾಯಗೆ ಕ | ಳಿಂಗಗೆ ನಮೋ ||
ಮಂಗಲಾಕಾರ ಕಾಂಭೋಜೋ | ತ್ತುಂಗ ಕಾಶೀರಾಜ ನಮೋ |
ಸಿಂಗಳದ ರಾಯಗೆ ಮಾ | ತಂಗಗೆ ನಮೋ || ||೨೦೪||

ಸೌರಾಷ್ಟ್ರ ಬರ್ಬರ ದೇಶ | ಧೀರಪಾಂಡ್ಯ ಕೇಕಯರ್ಗೆ |
ಗೋರಾಷ್ಟ್ರ ಹಮ್ಮಿರರಿಂಗೆ | ಹೇರಳ ನಮೋ || ||೨೦೫||

**ವಾರ್ಧಕ**

ಜನಕಭೂಪತಿ ಬಂದ ನೃಪರ ಮನ್ನಿಸುತ ಶಿವ
ಧನುವನಿಲ್ಲಿಗೆ ತನ್ನಿರೆಂದೆನುತ್ತಲಿ ಪೇಳ
ಲನಿತರಲಿ ಚರರು ತೀವ್ರದಲಿ ಚಾಪವ ಹೊತ್ತು ತರಲೊಡನೆ ಮಿಥಿಲೇಂದ್ರನು |
ಅನುಜಕುಶಧ್ವಜನೊಡನೆ ಸೀತೆಯಂ ಸಿಂಗರಿಸಿ
ಘನಬೇಗದಿಂದ ಕರೆತರುವದೆನಲ್ಕೆದೆ ಭೂ
ತನುಜೆಯಂ ಶೃಂಗಾರವೆಸಗಿ ಕರಕೊಂಡಾಗ ನಡೆತಂದರಾಸಭೆಯೊಳು || ||೨೦೬||

**ರಾಗ ಪಂತುವರಾಳಿ ರೂಪಕತಾಳ (ಚರಿತೆ)**

ಇಂತು ಶೃಂಗಾರವಾ | ಗಿಹ ಸೀತಾದೇವಿಯ |
ದಂತಿಯೇರಿಸಿ ನಡೆತಂದು ||
ಕಾಂತೆ ನೋಡಿತ್ತ ಭೂ | ಪಾಲರ ಪಂಕ್ತಿಯ |
ನಿಂತು ನೋಡೆಲೆ ಸುರಸಭೆಯ || ||೨೦೭||

ವರಹಂಸೆಯನ್ನೇರಿ | ಪರಮೇಷ್ಠಿ ಬಂದಿಹ |
ಪರಶಿವನ್ನೆದನೆ ನೋಡೆ ||
ಕರಿಯೇರಿ ಸುರಪನ್ನೈ | ತಂದನೆರಳೆಯೇರ್ದು |
ಸರಿವನಲನನು ನೋಡೆಂದ || ||೨೦೮||

ಉರುಪರಾಕ್ರಮಿ ಕೋಣ | ವಾಹನದಿಂದ ಬಂ |
ದಿರುವಾತನಿವ ದಂಡಧಾರ ||

ನಿರುತಿ ವರುಣರೆಲ್ಲ | ಸಂತೋಷದಿಂದ ಕು |
ಳ್ಳಿರುವರ ನೋಡೆಲೆ ಬಾಲೆ || ||೧೦೯||

ದಿಕ್ಕಿನ ಪತಿಗಳ | ನೀಕ್ಷಿಸೆನಲು ನಸು |
ನಕ್ಕಳು ಜನಕನ ಪುತ್ರಿ ||
ಮಕ್ಕಳಾಟಿಕೆ ಯೇಕೆ | ಬೊಮ್ಮನೆನಗೆ ಮಗ |
ಮುಕ್ಕಣ್ಣ ಸಖನೆನ್ನ ಪತಿಗೆ || ||೧೧೦||

ಸುರರು ಕಿನ್ನರರೆಲ್ಲ | ನರರು ಕೀಟಕರೆನ್ನ |
ಅರಸರಾಗುವ ಮಾತದೇನು ||
ಉರಗನ ಹಾಸುಗೆ | ಯಾದ ದಯಾನಿಧಿ |
ಹರಿಯೆನ್ನ ರಮಣ ಕೇಳಯ್ಯ || ||೧೧೧||

**ವಚನ ||** ಈ ರೀತಿಯಿಂದ ಜಾನಕಿ ಪೇಳ್ದು ಪಿಂತಿರುಗಿ ಸತಿಯರಂ
ಸೇರಿ ಇರಲಾಗಿ ಆ ವೇಳ್ಯದೊಳ್ ಇತ್ತಲಾಗಿ
ಭೂಪಾಲಕರು ಮಾತಾಡುತಿರ್ದರದೆಂತೆನೆ –

**ರಾಗ ಘಂಟಾರವ ಏಕತಾಳ**

ಯಾಕಯ್ಯಾ ನೀವೇಳಿ | ಬಿಡಿ | ಸಾಕಯ್ಯ ನೀವೇಳಿ || ಪಲ್ಲವಿ ||

ಬೇಕಿಲ್ಲವು ನಮ | ಗೀಕನ್ನಿಕೆಯ ತೋಟಿ || ||೧೧೨||
ಪಿತ್ತವೇರಿ ಕಣ್ | ಗತ್ತಲೆ ಬರುತಿದೆ | ಯಾಕಯ್ಯಾ || ||೧೧೩||
ಸಂದು ಶೂಲೆ ನಮ | ಗೆಂದೆಂದಿಗಾಗದು || ಸಾಕಯ್ಯ || ||೧೧೪||
ಸತ್ತ ಸುದ್ದಿಗಿ | ನ್ನುತ್ತರವೇನಿದೆ || ಯಾಕಯ್ಯಾ || ||೧೧೫||
ತಾಯ ಹಾಲು ಎನ್ನ | ಬಾಯಿಗೆ ಬರುತಿದೆ || ಸಾಕಯ್ಯಾ || ||೧೧೬||

**ವಚನ ||** ಆಗಲಾ ಸಭೆಯೊಳ್ ಆ ಹರಧನುಸ್ಸನ್ನೆತ್ತುವ ಮಹಾ ಪರಾಕ್ರಮಶಾಲಿಗೆ ಸೀತಾ
ದೇವಿಯು ಪುಷ್ಪಮಾಲಿಕೆಯನ್ನು ಹಾಕುವಂಥವಳಾಗುವಳೆಂದು ಜನಕರಾಯಂ ನುಡಿಯುತ್ತಿರಲಾಗಿ –

**ರಾಗ ಘಂಟಾರವ ಏಕತಾಳ**

ಅಂಗದ ಭೂಮಿಪಾಲ | ಬಂದ ಆಗಲ್ಲೆ ನಿಂದ |
ಮುಂಗೈಯ ಬಳೆ ತಿದ್ದಿಕೊಂಡ ||
ಗಂಗಾಧರನಾ ಚಾಪವನೆತ್ತಲು | ತುಂಗವಿಕ್ರಮನು ಭಂಗದಿ ಪೋದ || ||೧೧೭||

ಗೋಟದ ರಾಯ ಮುಂದೆ | ಬಂದ ಆಗಲ್ಲೆ ನಿಂದ |
ಸೂಟಿಯೊಳ್ ಚಾಪವನೆತ್ತಲೆಂದಾ ||
ಸಾಟಿಯೋಗದೆ ಮುಂದೋಟವೆ ಸರಿಯೆಂದು | ದಾಟಿ ಧನುವ
ವಂದಿಸುತ್ತಿದ್ದನಾಗ || ||೧೦೮||

ಕೇರಳದರಸ ನಡೆ | ತಂದ ಕಡು ಪಂಥ |
ದೋರುತ್ತ ಚಾಪವ ಹೊದ್ದಿ ನಿಂದ ||
ಮಾರಾರಿಯ ಬಿಲ್ಲ ಸಾರಿ ಪಿಡಿದು ರಕ್ತ | ಕಾರಿದಾಕ್ಷಣ ಸಾರಿದ ಹಿಂದೆ || ||೧೦೯||

**ಕಂದ**

ಈ ತೆರದೊಳು ಭೂಪಾಲ
ವ್ರಾತ [ವು ಮುಂದೊತ್ತಿ ಬಂದು] ಮುಟ್ಟುತ ಧನುವಂ |
ಸೋತರು ಕೆಲವರು ಚಾಪದ
ಮಾತಿನ್ನೇಕೆಂದು ಹಿಂದೆ ಶರಣೆನುತಿರ್ದರ್ || ||೧೧೦||

**ವಚನ ||** ಆ ವೇಳ್ಯದೊಳು ಲಂಕಾಧಿಪತಿ ರಾವಣೇಶ್ವರನು ಮುಂದೆ ಬಂದನದೆಂತೆನೆ –

**ಕೇಕಯ ವೃತ್ತ**

ದೆಸೆ ದೆಸೆ ನಡುಗಲ್ಕೆ ಬಂದು ಮಾರ್ಗಸ್ಥನಾಗಿ
ಅಸುರ ಬಲವ ಕೂಡಿಕೊಂಡು ಸಂತೋಷದಿಂದ |
ದಶಶಿರಗಳ ತೋರಿಸುತ್ತ ಆ ಸಭಾಮಧ್ಯದಲ್ಲಿ
ಅಸುರನು ನಡೆತಂದಾ ಧನುವ ತಾ ಕಂಡು ನಿಂದ || ||೧೧೧||

**ರಾಗ ಕೇದಾರಗೌಳ ಪಂಚಘಾತ ಮಟ್ಟೆತಾಳ**

ಅಸುರ ಬಿಲ್ಲ ಹಿಡಿದು ಮತ್ತೆ | ವಸುಧೆಯಲ್ಲಿ ಮಂಡಿ ಹಾಕಿ |
ಅಸಮಸಾಹಸದಲಿ ಎತ್ತ | ಲಾಗ ಸೀತೆ ನೋಡಿ ಚಿಂ |
ತಿಸುತ ಮನದಿ ಬಾಡುತಿರ್ದಳು | ಜನಕರಾಯ |
ನುಸುರದಿರ್ದ ದುಗುಡ ಭರದೊಳು || ||೧೧೨||

ಮತ್ತೆ ಸಾಹಸಿತ್ವದೊಳಗೆ | ಎತ್ತಿ ಧನುವ ಸತ್ವದಿಂದ |
ನೆತ್ತಿಯಲ್ಲಿರಿಸಿಕೊಳಲು | ರಕ್ತಕಾರಿ ಧರೆಗೆ ಬೀಳೆ |
ದೈತ್ಯರೆಲ್ಲ ಭೀತಿಗೊಂಡರು | ಅಂಬರದೊಳಾ |
ದಿತ್ಯರೆಲ್ಲ ನಾಚಿಕೊಂಡರು || ||೧೧೩||

ಬಿದ್ದು ಧರೆಯಿಂದೆದ್ದು ನಾಚು | ತಿದ್ದ ರಾವಣನ್ನ ನೋಡಿ |
ಮದ್ದಿದೀಗಲೆಂದು ಸೀತೆ | ಹೊದ್ದಿದಧಿಕ ಹರ್ಷದಿಂದ |
ಬುದ್ಧಿಯೊಳ್ಳಿತಾಯಿತೆಂದಳು | ಅಸುರನನ್ನು |
ಲುಬ್ಧನೆಂದು ಬೈದು ನಿಂದಳು || ||೧೧೪||

ಬಿದ್ದ ಭರಕೆ ಧರಣಿ ತಗ್ಗ | ಲೊದ್ದು ಹೂಂಕರಿಸಿ ಖಳನು |
ಎದ್ದು ಬಹಳ ಭಂಗದಿಂದ | ಸಾಧ್ಯವೆಂದು ಭಾಷೆ ಮಾಡಿ |
ಎದ್ದುಹೋದ ನಿಜ ನಿವಾಸಕೆ | ಮಿಥಿಲೇಂದ್ರನಾಗ |
ಹೊದ್ದಿದನು ಸಂತೋಷ ನಿಮಿಷಕೆ || ||೧೧೫||

**ರಾಗ ಢವಳಾರ ಏಕತಾಳ**

ವರಮಹಾಲಕ್ಷ್ಮಿವಿಲಾಸನೆ ಜಯ ಜಯ |
ನಿರತ ಸುಧಾಬ್ಧಿಯ ವಾಸನೆ ಜಯಜಯ |
ಸುರಮುನಿಮಾನಸಹಂಸನೆ ಜಯ ಜಯ |
ದುರಿತಕುಲದ ವಿಧ್ವಂಸನೆ ಜಯ ಜಯ |
ಪರಮ ಪುರೂಷನೆ ಹಸೆಗೇಳೂ || ||೨೨೮||

ಅನುಪಮಸದ್ಗುಣ ಸಾಂದ್ರ ಪರಾಕು |
ಇನಕುಲವಾರಿಧಿ ಚಂದ್ರ ಪರಾಕು |
ದನುಜಾಧಮ ಕುಲಶಿಕ್ಷಪರಾಕು |
ವಿನುತಾನತಜನರಕ್ಷ ಪರಾಕು |
ವಿನಯದಿ ರಾಮ ಹಸೆಗೇಳು || ||೨೨೯||

ಕುಶಿಕಸುತಾಧ್ವರಪಾಲನ ಧೀರ |
ಶಶಿಮುಖಿಯಹಲ್ಯಾ ಶಾಪವಿದೂರ |
ದಶರಥತನುಜ ಜನಕಜಾಪ್ರೀತ |
ಪಶುಪತಿಚಾಪವಿನಾಶ ವಿಖ್ಯಾತ ||
ದಶಕಂಠವೈರಿ ಹಸೆಗೇಳೂ || ||೨೪೦||

ಮುತ್ತಿನ ಹಸೆಯಲ್ಲಿ | ಪತ್ತಿಸಿ ವಧುವರರ |
ಸುತ್ತಲು ನೆರೆದಾ | ಮುತ್ತೈದೆಯರು |
ಸುತ್ತಲು ನೆರೆದಾ ಮುತ್ತೈದೆಯರು ನಿಂತು
ಮೊತ್ತಾಗಿ ಸೇಸೆ ತಳಿದರು || ಶೋಭಾನೇ || ||೨೪೧||

ಫಲಿರೆಂಬ ಗೆಜ್ಜೆಗಳು | ನಲಿವ ಮೊಲೆಗಟ್ಟುಗಳು |
ಬಲಿದ ಜವ್ವನದಾ | ಚಲುವೆಯರು |
ಬಲಿದ ಜವ್ವನದಿಂದ | ಚಲುವಸ್ತ್ರೀಯರು ಮುಕ್ತಾ |
ಫಲದಲಿ ಸೇಸೇ ತಳಿದರು || ಶೋಭಾನೆ || ||೩೪೧||

**ಮಂಗಲಾಷ್ಟಕ**

ರಾಮಂಸೂರ್ಯಕುಲಾಂಬುಧೌ ಹಿಮಕರಂ ರಾಜೀವನೇತ್ರಂ ಹರಿಂ
ಮೌನೀಕೌಶಿಕ ಯಜ್ಞಪಾಲನಕರಂ ಹತ್ವಾಮಹಾ ತಾಟಕಾಂ |
ಮಾರಾರೀಧನು ಖಂಡನಂ ರಘುವರಂ ಕೋದಂಡ ದೀಕ್ಷಾಗುರುಂ
ಕೌಸಲ್ಯಾನಂದವಿವರ್ಧನಂ ಗುಣನಿಧಿಂ ಕುರ್ಯಾತ್ಸದಾ ಮಂಗಲಂ || ||೩೪೩||

ವೃತ್ತಾಕಾರ ಮುಖಾಂಬುಜೇ ಗುಣಯುತೇ ಚಿತ್ರಾಂಬರಾಲಂಕೃತೇ
ಕಂದರ್ಪೋಪಮ ಸುಂದರೇ ಸುಲಲಿತೇ ವಕ್ಷೋದ್ಭವಂ ಶೋಭಿತೇ |
ನಾಗಾಭೂಷಣಭೂಷಿತೇ ನಿರುಪಮೇ ಕಂಕಂಜ ಪಾತ್ರಾಕೃತೇ
ಸೀತಾನಾಮವಿರಾಜಿತೇಶುಭಕರೇ ಕುರ್ಯಾತ್ಸದಾಮಂಗಲಂ || ||೩೪೪||

**ಕಂದ**

ಇಂತೀ ಪರಿಧಿಯೊಳ್ ವಿಪ್ರರು
ಸಂತಸದಿಂ ಮಂಗಲಾಷ್ಟಕವ ತಾವ್ ಪೇಳಲ್ |
ಕಾಂತೆಯರಾ ಬಳಿಕಂ ಭೂ
ಕಾಂತನ ಸುತರಿಗೆ ತಂದೆತ್ತಿದರಾರತಿಯಂ || ||೩೪೫||

**ಶೋಭಾನೆ ಪದ ಧ್ರುವತಾಳ**

ಶಂಖಿನಿಯರು ನವರತ್ನಗಳಾ |
ಲಂಕರದಿಂದಲಿಕುಚ ಭರದಿ |
ಕುಂಕುಮದಾರತಿಯಾ ಹವಣಿಸಿ |
ಹವಣಿಸಿ ತಂದಾಗ ವಿಲಾಸದಿ |
ಬಿಂಕದೊಳೊಂದೂ ಬೆಳಗಿರೆ || ಶೋಭಾನೆ || ||೩೪೬||

ಪದುಮಿನಿಯರು ನೋಟದ ವಿಟರನು |
ಮೆದೆಗೆಡಿಸುತ ಮೋಹನ ಕರದೊಳು |
ಪದುಮದಾರತೀಯ ಬೇಳಗಿರೇ || ಶೋಭಾನೆ || ೩೪೭||

ಈತೆರದೊಳು ನಾನಾಸತಿಯರು |
ಭೂತಳದೊಳಗಚ್ಚರಿಯೆನಿಸುವ |
ರೀತಿಯೊಳಾರತಿಗಳಾ |
ಆರತಿಗಳಾ ತಾ ವಧುವರರಿಗೆ |
ಪ್ರೀತಿಯೊಳಗೆತ್ತೀ ನಲಿದರೂ || ಶೋಭಾನೆ || ||೩೪೮||

**ಕಂದ**

ಇಂತೀ ವಿಭವದೊಳೊಲಿದಾ
ಕಾಂತೆಯರಾರತಿಯಕ್ಷತೆಯಾಗಲ್ ಮುದದಿಂ |
ಬಂದಾಕ್ಷಣದೊಳ್ ಭೂಸುರ
ಸಂತತಿಯಿಂ ದಕ್ಷಿಣೆಗೆನುತಾ ಸಭೆಯೊಳಗಂ || ||೩೪೯||

**ರಾಗ ಭೈರವಿ ಆದಿತಾಳ**

ಕೈಯಲ್ಲಿ ದಂಟೆ ಪಿಡಿದು ಕಾಲನಡುಗಿಸುತ್ತಾ |
ಮೈಯೆಲ್ಲ ಬಳುಕುವಂತಾ |
ಮುದುಕರು ಕೆಮ್ಮುತ್ತ |
ಸಯ್ಯನೆ ನುಗ್ಗುವಂತಾ |
ಸಾಮರ್ಥ್ಯದವರು |
ಹೊಲನಿಕ್ಕಿಬಂದು ಹೊಕ್ಕರ್ಕರ್ನಾಟರೂ || ||೩೫೦||

ಭಾಪೂರಹುವಾ ಹೈಬೃಡ್ನೆ ಕುನ್ರ ಜಗ್ಗ |
ಕಹಾಕರ ಬೃಡಕೋದನಾ ಲೇಕೋ |
ಜಾವನುತ್ತ ಹಿಂದುಸ್ಥಾನದ |
ವಿಪ್ರರ್ಬಂದರ್ಮಾತಾಡುತ್ತಾ || ||೩೫೧||

ಬಾಯಿಲಿ ಹುಲಿ ಹೊತ್ತಿ ಬಾಹಿರದೀ ಸತನಾಯಿ |
ಕಾಯವಿದ್ಯಮಾನತಿಜಾ ಕಳತಿತೆತಾಹಿ |
ದಾಯಿಗ ಬಂದು ಹ್ಯಾಜಾದಕ್ಷಣ ದ್ಯಾವೆನುತ್ತಾ |
ವೋರಂತೆ ಮಹರಾಷ್ಟ್ರದ ವಿಪ್ರರ್ಬಂದರ್ಮೊತ್ತಾ || ||೩೫೨||

ನಾವೆಲ್ಲ ಬಾಹೆ ಮೊದಲು ನಮ್ಮರೆಲ್ಲಿಹಳೆ |
ಠಾವಿಲ್ಲಿ ಕೊಡ್ಬಾಳೆ ಗಂಟೆಳುಹಲಿಕ್ಕೆ ಪೇಳೇ |

ಧಾವಲ್ತೋಸೀ ನಾನಿಂನ ದೇವರವೆನ್ನುತವರು |
ಕೋವಿದರ್ಬಂದರಾಗ ದೇಶಸ್ಥ ಬುಧರು || ||೩೫೩||

ಉಣಿಪುನೆಂಟಪೇಕ್ಷೋಮಂಪೆರಾವನ್ ಮಾಣಿಲು ಕೇಣೇ |
ಪಣವು ದಕ್ಷಿಣೆಯರಡಾ ಕಲಹೊಮಾಂಪೊರಿಂಚ ಪಂಣೇ |
ಗಣಿತಶಾಸ್ತ್ರೊ ತರ್ಕೊಮೀಮಾಂಸೆಂಟು ಬರೊಡು ಯೆಂಕುಳಿದಿರು |
ಸೊಣ್ಪೊಫಳಿಗೆಗ್ ಝುಡಿತ್ ಪಂಬೆ ಯೆನುತ ತುಳುವ ದ್ವಿಜರು || ||೩೫೪||

ನಿಂಗೊ ದೊಡ್ಡು ಪದ್ಯಕ್ಕೊನೀವಲ್ಲಿ ಪೋಗೀ |
ಯೆಂಗೊಕ್ಕೆ ದಕ್ಷಿಣೆಯ ಕೊಡಿಸಿ ಮುಂದಾಗಿ |
ಅಂಗಳವನು ಮಾಣಿ ದಾಂಟಲು ಯಿಂಬಿಲ್ಲ |
ಹೀಗೆಂಬ ಹೈಗ ವಿಪ್ರರ್ಬಂದು ನೆರದರಲ್ಲೇ || ||೩೫೫||

ತೆಕ್ಕಡ ಪಳಫೆಚ ದಕ್ಷಿಣವಾಂತು ಹಳ್ಳಿ |
ಪೊಕ್ಕಡೆ ಹಡಲ್ಯಾತ ವಾಟರೊಂದು ಪಳ್ಳಿ |
ಚುಕ್ಕನುವಚ್ಚನಾಸಿ ಚೊಯ್ಯಯೆನುತೆಂದು |
ತಕ್ಕಷ್ಟು ಕೊಂಕಣ ವಿಪ್ರರ್ಬಂದರಂದು || ||೩೫೬||

**ವಾರ್ಧಕ**

ಕುವರ ಕೇಳಾಮೇಲೆ ದಕ್ಷಿಣೆಯ ಪೊತ್ತು ಭೂ
ದಿವಿಜರ್ ದಣಿದರ್ ಯಾಚಕಿಗಳ ದರಿದ್ರಮಂ
ಸವೆದುದಿತ್ತಂಡದಿಂ ನೃಪರಿತ್ತ ಧನಕನಕವಸ್ತು ಭೂದಾನದಿಂದ |
ದಿವಸ ನಾಲ್ಕೈದರೊಳಗಾಹ ಕೃತ್ಯಂ ನಡೆಸು
ತವಭೃತ ಸ್ನಾನಮಂ ಮುಗಿಯೆ ಬಳಿಕಖಿಳನೆರೆ
ದವನಿಪರ ತರತಮವನರಿತು ಮನ್ನಿಸಿದರುಡುಗೊರೆಯುಚಿತದಿಂ ಭೂಪರು || ||೩೫೭||

ಭರದಿ ಬಾಣಸಿನ ಗೃಹದೊಳಗಡುಗೆಯಂ ಗೈಸಿ |
ತರತರದೊಳೆಡೆಹಯ್ಕ ಶಾಲ್ಯೋಗರಂ ಸಾರು |
ಪರಮಾನ್ನ ಘೃತಸೂಪ ಮೊದಲಾದ ಪರಿಕರದ ಸಾಂಬರೇ ಆಂಬೊಡೆಗಳ |
ಮೆರವೆತಾಳ್ಳ ಕೋಸಂಬರೀ ಪಳದ್ಯಾಶೀ |
ಕರಣೆಗುಡಿ ಪಾಪಡೆಗಳ್ ಮಂಡಿಗೆಗಳ್ಮೊದಲಾದ |
ಪರಿಪರಿಯ ಭಕ್ಷ್ಯಭೋಜ್ಯಂಗಳಿಂ ಮಧುಶರ್ಕರಂಗಳಂ ಬಡಿಸಿರ್ದರೂ || ||೩೫೮||

**ರಾಗ ಕೇದಾರಗೌಳ ಅಷ್ಟತಾಳ**

ಉಂಡೆದ್ದ ಜನರು ಕೈತೊಳೆಯುತ್ತಲಿರಲು |
ದ್ದಂಡ ಭಾನಸದೊಳೋರ್ವ |
ಚಂಡವಿಪ್ರನು ಬಲುಬರಡನು ತಾ ಬಾಗಿ |
ಕೊಂಡು ಕೈತೊಳೆಯುತಿರೆ || ||೨೫೯||

ಬಂದಲ್ಲಿಗಾಗಿ ತಾ ನಸುನಗುತಲಿ ನಿಂತು |
ಮಂಥರೆ ಬಳಿಕವನ |
ಹಿಂದಣ ಕಟಿಸೂತ್ರ ಕವುಪೀನ ಸಹಿತೆಳ |
ತಂದು ನಗ್ನವಗೈದಳು || ||೨೬೦||

ನೋಡಿದು ಮೊರೆಯಿಡುತಲಿ ವೃದ್ಧ ವಿಪ್ರನು |
ಘಾಡದಿ ತನಗಾಕೆಯು ||
ಮಾಡಿರ್ದುದವಮಾನ ರಾಘವಗೊರೆಯಲಾ |
ಖೋಡಿಯನೆಳತರಿಸೀ || ||೨೬೧||

ಬಿಡಿಸಲಾಕೆಯ ಬಲು ರೋಷದಿ ಕನಲುತ್ತ |
ನುಡಿದಳು ರಘುಜನಿಗೆ ||
ಫಡ ನಿನಗೇನು ಪ್ರಯತ್ನದೊಳಾದರು |
ಅಡವಿಯ ಸೇರಿಸದೇ || ||೨೬೨||

ಬಿಡುವವಳಲ್ಲೆಂದು ಶಪಥವ ಗೈದೊಡ |
ನೊಡನೆ ಪೋಗಲು ಬಳಿಕ ||
ತಡೆಯದೆಲ್ಲರನು ಮನ್ನಿಸಿದನು ಭೂಮೀಶ |
ರುಡುಗೊರೆಯುಚಿತವಿತ್ತು || ||೨೬೩||

**ವಾರ್ಧಕ**

ಆದರಿಸಿದಾಮೇಲೆ ಮದುವಣಿಗರಂ ಜನಕ
ಭೂಧನ ಮದೇಭರಥಹಯಕೈದು ರತ್ನೋತ್ಕ
ರಾದಿಗಳ ಕಾಂತಾಜನಂಯೆಸೆವ ಗೋಮಹಿಷಿ ಸಹಿತ ಬಳುವಳಿಯನಿತ್ತು |
ಮೇದಿನಿಸುತಾತ್ಮಜನೆ ಕೇಳು ದಶರಥನ ಭಾ
ಗ್ಯೋದಯಕ್ಕೆಣೆಯುಂಟೆ ಪರಿಣಯಾಂತರದೊಳೊಲಿ
ದಾ ಧರಿತ್ರೀಶ ತತ್ಪುರದಿಂದ ಪೊರವಂಟನಖಿಳ ವೈಭವದಿಂದಲಿ || ||೨೬೪||

**ರಾಗ ಆಹೇರಿ ಝಂಪೆತಾಳ**

ಭರದೊಳೈತಂದರಾಗ | ಶೋಭಿಸುವ |
ತರತರದ ವಾದ್ಯರವದಿಂದ ಬೇಗ || ಪ ||

ಕರಿರಥಹಯಾದಿಗಳ | ನೆರವಿಯೆಂದೆಡೆವಿಡದೆ |
ಪರಿಪರಿಯ ಛತ್ರಚಾ | ಮರ ಪತಾಕೆಗಳುಲಿಯೆ |
ತರುಣಿಯರ ಗಡಣಕೂಡಿ | ರಾಜಕುವ |
ರರು ಸಹಿತ ಪಯಣಮಂ ಮಾಡೀ || ||೩೬೫||

ಜನಪನೃಪ ಕಳುಹಲಿಕೆ | ವಿನಯದಿಂ ಬರಲಾಗ |
ಅನುಸರಿಸಿ ನಡೆದರೇ | ನೆನುವೆ ಕೆಂಧೂಳೆದ್ದು |
ದಿನಪರಥವಡರುವಂತೆ | ಭಾರ್ಗವನು |
ವನದೊಳಗೆ ಕೇಳ್ದನಂತೆ || ||೩೬೬||

**ವಾರ್ಧಕ**

ಬಿಗಿದ ಜಡೆ ರುದ್ರಾಕ್ಷೆ ಪದ್ಮಮಾಲಿಕೆಯ ಪುಲಿ
ದೊಗಲುಡಿಗೆ ಭಸ್ಮಲೇಪನ ನಾಮ ತ್ರೈಪುಂಡ್ರ
ಪೆಗಲೇರಿಸಿದ ಬಾಣದಿಂ ಪರಮ ಶಾರ್ಙ್ಗಮಂ ನಿರತ ದಕ್ಷಿಣಹಸ್ತದೀ |
ಝುಗಝುಗಿಸುತಿಹ ಪರಶುಧರಿಸಿ ಶರಜಾಲಂಗ
ಳೊಗುಮಿಗೆಯ ತಾಮಸದ ಪುಂಜದಿಂದೆಸವ ಕಲಿ
ಭೃಗುರಾಮನತ್ಯಧಿಕ ರೋಷದಿಂದೆದ್ದು ಘುಡುಘುಡಿಸುತ್ತಲಿಂತೆಂದನು || ||೩೬೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನಿದೇನಾಶ್ಚರಿಯವಿಂದಿಗೆ |
ಹಾನಿಗೈದಿಹೆ ಪಾರ್ಥಿವರಕುಲ |
ಜಾಣರಾರುಳಿದವರು ಯೆನ್ನಯ | ಬಾಣಕಡಸಿ || ||೩೬೮||

ಧರೆಯನಿಪ್ಪತ್ತೊಂದು ಬಾರಿ ಕ |
ಡೋರದಿಂದರಿಭಟೆಯ ಗೆಲಿದಿಹೆ |
ಮರೆಯೊಳಡಗಿಹವಾತತಿಯ ಸಂ | ಹರಿಸದಿರೆನು || | | ೩೬೯||

ಭಾಷೆಗೊಟ್ಟಿಹೆ ಹಿಂದೆ ಜನನಿಗೆ |
ದ್ವೇಷಿ ಕರರಕುತದೊಳು ಜನಕನ |
ಶೇಷಕರ್ಮವನಡೆಸಿ ಪಿತನಿಗೆ | ತೋಷವೀವೇ || ||೩೭೦||

ಎಂದು ಶಪಥವ ಗೈದು ಕ್ಷತ್ರಿಯ |
ರೊಂದನುಳಿಯದೆ ಕುಂದಿಸಿದೆ ತಾ |
ಮುಂದನರಿಯದೆ ಪಥದಿ ಬಹರಾ | ರೆಂದು ನೋಳ್ಪೆ || ||೩೭೧||

ಎನುತ ಪರಶುವ ಧರಿಸಿ ರೋಷದಿ |
ವನದ ಹೊರವಾಗಿಲಲಿ ಸಿಂಹ |
ಧ್ವನಿಯದೋರುತ ಕನಲಿ ನೋಡಿದ | ದಿನಪಕುಲರ || ||೩೭೨||

ಉಬ್ಬಿರೋಷಾವೇಶದಲಿ ರಿಪು |
ಗುಬ್ಬಸದ ಕೊಡಲಿಯನು ಧರಿಸುತ |
ದಿಬ್ಬಣಿಗರೊಳಪೊಕ್ಕು ಸವರಿದ | ಅಬ್ಬರಿಸುತಾ || ||೩೭೩||

**ಭಾಮಿನಿ**

ಸೇನೆ ಹಿಮ್ಮೆಟ್ಟಿದುದು ಮುಂದ್ವರಿ
ವಾನೆ ಕುದುರೆಗಳೋಡಿನಿಂದಿದ
ಏನನೆಂಬೆನು ರಥಿಕರಕ್ರಾಂತವನು ನಿಮಿಷದಲಿ |
ಆ ನೆರೆದ ಜನರೆಲ್ಲ ಕಂದಿದ
ಮಾನರಾಗಲು ಕಂಡು ದಶರಥ
ಸೂನು ರಘುಕುಲವರಿಯ ನಗುತಿಂತೆಂದನವನೊಡನೆ || ||೩೭೪||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಆರೆಲೋ ನೀನೀಗ ಬಂದವಾ | ಪೋಪ | ದಾರಿಯ ತಡೆದಡ್ಡನಿಂದವಾ ||
ಚೋರನೊ ದೈತ್ಯನೊ ಪೇಳೆನ್ನ | ಕೂಡೆ | ಪಾರುಪತ್ಯಗಳೆಲ್ಲ ಬಿಡು ನಿನ್ನ || ||೩೭೫||

ಎನಲು ಕೇಳಿದು ಭೃಗುಜಾತನು | ಬಲು | ಕನಲುತ್ತ ಪೇಳ್ದೊಂದು ಮಾತನು ||
ಜನಪರ ಕೊಲುವ ಮನೋರಥ | ಬಿಟ್ಟ | ರಿನಿತು ಆಡುವೆ ನೀನು ಬಲು ಮಾತಾ || ||೩೭೬||

ಆಹಹಾ ಸರ್ವಸಂಗ ತ್ಯಜಿಸಿದು | ಮೇಲೆ | ವಿಹಿತವೆ ಸಮರವೆಸಗುವುದು ||
ಸಹಸವಿದೆಲ್ಲೆಂದು ರಘುಜನು | ಗಹ | ಗಹಿಸಲು ಕಾಣುತ್ತ ಭೃಗುಜನು || ||೩೭೭||

ತರಳ ನೀನೇನೆಂದೆ ರಾಘವ | ಎನ್ನ | ಸೆರಗನೆ ಬಿಡು ನಿನ್ನ ಲಾಘವ ||
ಮುರಿದೊಂದು ಕ್ಷಣದಲಿ ಕೊಡುವೆನು | ತಾ | ತರಹರಿಸಲು ರಾಮ ಬಿಡುವೆನು || ||೩೭೮||

ಎಸೆದ ಶರವ ರಾಮ ತರಿವುತ್ತ | ಅತಿ | ಕುಶಲದಿ ಸಮರ ಬೇಡೆನ್ನುತ್ತ ||
ಮಸೆದಂಬುಗಳ ತೆಗೆದೆಸೆಯುತ್ತ | ತಾ | ಬಿಸಜಾಕ್ಷಗೆಂದ ಭೃಗು ಕನಲುತ್ತಾ || ||೩೭೯||

**ರಾಗ ಮಾರವಿ ಏಕತಾಳ**

ಸಾಸಿರ ಕರಗಳ ಧರಿಸಿಹ ಕಾರ್ತ | ವೀರ್ಯ್ಯಾರ್ಜುನನನು ರಣದಿ ||
ನಾಶಗೊಳಿಸಿ ಲೋಕೇಶರ ಶಿರಗಳ | ನಾ ಸವರಿದೆ ಕೇಳ್ಭರದಿ || ||೩೮೦||

ಕ್ಷತ್ರಿ ಕುಲಾಂತಕನೆನಿಸಿಧರಿತ್ರಿಯೊಳ್ | ಶತ್ರುಗಳಾಗಿಹರಾ ||
ಪುತ್ರಮಿತ್ರರಿಗೆಮಧಾತ್ರಿಯ ತೋರಿದ | ಸತ್ತ್ವವನರಿಯೆಯೆಲಾ || ||೩೮೧||

ಮಲಗಿಹ ಉರಗನ ಯೆಬ್ಬಿಸಿ ಕೆಣಕಲು | ಸುಲಭವೆ ಕೇಳ್ಮರುಳೇ ||
ತಲೆಯನು ಕಾಯ್ವವರ್‍ಯ್ಯಾರೆಂದೆನುತಲಿ | ಕೋಲ್ಮಳೆ ಸುರಿಸಿದನು || | | ೩೮೨||

ಉರಿಯನುಗುಳಿ ಬಹ ಶರಗಳ ಕಾಣುತ | ತ್ವರಿತದಿ ರಘುಪತಿಯು ||
ಪರಿಹರಿಸುತಲಾತನ ಬಲುಶರಗಳ | ತರಿದೆಂದನು ಜವದಿ || ||೩೮೩||

ಬೊಪ್ಪನಿಗಾಗಿ ನೀ ಗೈದ ಪ್ರತಿಜ್ಞೆಗೆ | ಮುಪ್ಪುಗೊಳಿಪೆ ರಣದಿ ||
ತಪ್ಪದೆಯೆನ್ನೊಳಗಿದಿರಾಗೆನುತಲಿ | ಕ್ಷಿಪ್ರದಿ ಶರವೆಸೆದ || ||೩೮೪||

**ಭಾಮಿನಿ**

ರಾಮಶರವೈತಂದು ಮುನಿಜನ
ಕೋಮಲಾಂಗದ ಮೇಲೆ ನಾಟಲು
ತಾ ಮನದಿ ಕಳವಳಿಸಿ ಭೂಮಿಯೊಳೊರಗಿ ಚೇತರಿಸಿ |
ಕಾಮಪಿತನೊಳು ತಿರುಗಿ ರೋಷದಿ
ಭೀಮ ವಿಕ್ರಮ ನಿಲಲು ಸಮರಕೆ
ಆ ಮಹಾ ರಘುತಿಲಕ ಸಾಮದೊಳೆಂದನವನೊಡನೆ || ||೩೮೫||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಮುನಿಕುಲಜಾತಯೆನ್ನಯ |
ಕಲಹದಲಿ ನೀನುಳಿಯ ಬಲ್ಲೆಯ |
ನಿಲದೆ ಧರೆಗುರುಳೆದ್ದು ಸೋಲುವ | ಛಲವಿದ್ಯಾಕೆ || ||೩೮೬||

ಎನ್ನ ಶರಕೆ ಶಿರವನೀಯದೆ |
ಯಿನ್ನು ಕಲಹದಿ ನೀನು ಸುಮ್ಮನೆ |
ಭಿನ್ನಬಿಡದೆ ನೀ ವನಕೆ ಪೋಗಿ | ನೆನ್ನಲುಸುರ್ದ || ||೩೮೭||

ಸಾಕೆಲವೊ ಬಲು ಗರುವದದ್ರಿಯ |
ನೂಕೆಜರಿವೆನು ಸಮರಮಧ್ಯದಿ |
ಶೋಕಗೊಳಿಸುವೆ ಜೋಕೆಯೆನೆ ಪೊಸ | ಸಾಯಕವನು || ||೩೮೮||

ಕಿಡಿಗೆದರಿ ಬಿಡುತಾಗಲೆಂದನು |
ನುಡಿಗಳೀದೇನ್ವಲವು ತಾಳಿಕೊ |
ಕಡೆಯ ಕಾಲವಿದೆಂದು ಭೋ | ರ್ಗುಡಿಸುತೆ ಸದಾ || ||೩೮೯||

ಹೂಂಕರಿಸಿ ಬಹ ವಾಮಹಸ್ತವ |
ಪಂಕಜಾಕ್ಷನು ತರಿವುತಾತನ |
ಬಿಂಕ ಮುರಿವಂದದಲಿ ರೋಷ ಕ | ಳಂಕವೆಸೆದ || ||೩೯೦||

ಏನನುಸುರುವೆ ರಾಮಶರದಲಿ |
ಹಾನಿಯಾದುದು ಭೃಗುಜ ಧರಿಸಿದ |
ಬಾಣ ಚಾಪಾದ್ಯಖಿಳ ಆಯುಧ | ಕಾಣದಾಯ್ತು || ||೩೯೧||

**ವಾರ್ಧಕ**

ಅಹಿಯು ಭೋರ್ಗರೆವಂತೆ ಗರ್ಜಿಸುತ ಕಾರ್ಮುಕ
ಕ್ಕಹಿಸಿ ಶರಮಂ ಪೂಡಲನ್ನೆಗಂ ಜಮದಗ್ನ
ಗ್ರಹಿಸಿದಂ ಇವನ ಕೆಣಕಿದರೆನ್ನ ಬಾಳ್ವೆಗವಸಾನ (ನಿಶ್ಚಯವದೆಂದು |
ಗ್ರಹಿಸುತಂ ಗುಣಗಳನು ಕವಲು ಮನವಂ ಬಿಟ್ಟು
ಅಹಿತಭಾವವತೊರೆದು ಹೃದಯಾಂತರಾಳದಿಂ
ಮಹತುಚಿಚ್ಚೇತನಕೆ ವಂದಿಸುತ ಪೇಳಿದಂ ಶ್ರೀರಾಮಚಂದ್ರನಿಂಗೆ ||) ||೩೯೨||

**ರಾಗ ಭೈರವಿ ಝಂಪೆತಾಳ**

ಯಾರ ತನಯನು ನೀನು | ಊರ್ಯಾವುದಯ್ಯ ಪೇಳ್ |
ಧೀರತನಕೆಣೆಯಿಲ್ಲ | ಧಾರುಣಿಯೊಳ್ನಿನಗೆ || ||೩೯೩||

ನಿನ್ನ ನೆಲೆಯನು ಎನಗೆ | ಇನ್ನು ನೀ ಪೇಳಿದರೆ |
ಮನ್ನಿಸುತ ನಾ ಪೋಪೆ | ಯೆನ್ನ ಪಿತನಾಣೆ || ||೩೯೪||

ಇಂತೆಂಬ ಭಾರ್ಗವಗೆ | ಕಂತುಪಿತ ನಗುತೆಂದ |
ಸಂತಸದಯೋಧ್ಯಪುರ | ಕಾಂತ ದಶರಥಗೆ || ||೩೯೫||

ಬಾಲಕರು ನಾಲ್ವರೊಳು | ಹಿರಿಯಾತನಾ ರಾಮ |
ಶೀಲ ಕೌಶಿಕನೆಜ್ಞ | ಪಾಲಿಸೆಂದೆನುತಾ || ||೩೯೬||

ಪಿತನನುಜ್ಞೆಯ ಕೇಳಿ | ಮತಿವಂತನೊಡನೈದಿ |
ಅತಿಕ್ರೂರ ದಾನವರ | ಹತಿಸಿ ಮಖಗೈಸಿ || ||೩೯೭||

ಈ ತೆರದಿಯಿರಲಿಲ್ಲಿ | ಸೀತಾ ಸ್ವಯಂವರಕೆ |
ಧಾತ್ರಿಪತಿ ಲಿಖಿತವನು | ಕೌಶಿಕಗೆ ಬರೆಯೆ || ||೩೯೮||

ಪೋಗಬೇಕೆಂದು ಮುನಿ | ಯಾಗ ನೇಮಿಸೆ ಪೋಗಿ |
ಭಾರ್ಗವನ ಚಾಪಕನು | ವಾಗಿ ಪಿಡಿದೆತ್ತಿ || ||೩೯೯||

ವರಿಸಿ ಜನಕಜೆಯ ಸ್ವಯಂ | ವರವ ಪೂರೈಸುತಲೆ |
ವರನಗರಿಗೈಯ್ದುವೆವು | ಹರುಷದೊಳಗೆಲ್ಲ || ||೪೦೦||

**ಭಾಮಿನಿ**

ಇನಿತು ಭಾರ್ಗವ ರಾಮನಿಗೆ ತಾ
ಜನಪ ದಶರಥಸೂನು ರಾಮನೀ
ತನು ನಯದೊಳೇ ತತ್ವಮಾಗಲು ಬಳಿಕ ಕಾರ್ಮುಕಕೆ |
ಘನದೊಳೇರಿಸಿ ಪಿಡಿದ ಸರಳಿಂ
ಗನುವದೇನೆನೆ ಭೃಗುಜ ನುಡಿದನು
ವಿನಯದಿಂ ಲಕ್ಷ್ಯವನು ತೋರುವೆನೆನುತಲಿಂತೆಂದ || ||೪೦೧||

**ರಾಗ ತೋಡಿ ಚೌತಾಳ**

ಜಯತು ಜಾನಕಿ ಕಾಂತ | ಜಯತು ಸದ್ಗುಣವಂತ |
ಜಯತು ಕೃಪಾಕರ | ಜಯ ಭವಭಯ ದೂರ || ||೪೦೨||

ದುರುಳನೋರುವಯೆನ್ನ | ಕೊರೆವನಾಭಿಯ ಮುಂನ |
ಹರಿಸಲರಿಯೆನವನ | ಕರುಣದಿ ರಕ್ಷಿಸೊಯೆನ್ನ || ||೪೦೩||

ಜಾಣ ನಿನ್ನಯ ಬಾಣ | ಕಾಣದೆ ಮರಣ |
ಕ್ಷೋಣಿಯೊಳವಗಿಲ್ಲ | ವಾಣಿರಮಣ ಬಲ್ಲ || ||೪೦೪||

ಧುರದಿ ಪಿಡಿದಶರವ | ದುರುಳನಿರುವ ತಾವ |
ಭರದೊಳೆಸೆದು ಶಿರ | ತರಿಯಲಾಗದೆ ದೇವ || ||೪೦೫||

ಮಿಕ್ಕ ಮಾತೇನೆನ್ನ | ಹೆಗಲಿಗೇ ಬಾಣ |
ಫಕ್ಕನೆ ಬಿಡಲು ಖಳ | ಮುಕ್ಕುವ ಮಣ್ಣ || ||೪೦೬||

**ಕಂದ**

ಎನೆ ಕೇಳ್ದಾಗಲೆ ಹೊಕ್ಕಳೊ |
ಳನುಸರಿಸಿದುಕೊಂಡಿಹ ಮಣಿವಾಣ್ಯನಿಶಾಟಂ |
ತನಗಿಂದಂತಕನೊದಗಿದ
ನೆನುತಾರ್ಭಟಿಸುತ ಬೊಬ್ಬಿರಿದಿಳಿದೈತಂದಂ || ||೪೦೭||

**ರಾಗ ಶಂಕರಾಭರಣ ಮಟ್ಟೆತಾಳ**

ಆರೊ ನೀನು ಮನುಜ ನಿನ್ನ | ಭೂರಿ ವಿಕ್ರಮಂಗಳನ್ನು |
ತೋರುತೆಮ್ಮ ಮೇಲೆ ರಣ ವಿ | ಚಾರ ತೊಡಗಿದು || ||೪೦೮||

ಸೇರಿಸುಖದೊಳಿರ್ದ ಠಾವಿ | ಗೇರಿಸಿದೆ ಪ್ರತಾಪದಸ್ತ್ರ |
ವೀರನಹುದೊ ಭಳಿರೆನುತ್ತ | ಲಾರು ಭಟಿಸಲು || ||೪೦೯||

ನೋಡಿರಘುಜನೆಂದನೆಲವೋ | ಮೂಢದನುಜ ಕೇಳು ನಿನ್ನ |
ಖೋಡಿತನಗಳೀಗಲೆನ್ನ | ಕೂಡೆ ಸಲುವುದೆ || ||೪೧೦||

ಮೋಡಿಯಿಂದ ಭೃಗುಜನಾಭಿ | ತೋಡಿ ವಾಸವನ್ನು ಗೈದ |
ಪಾಡಿದೊಳ್ಳಿತೆನುತ ರಘುಜ | ಹೂಡಿದಸ್ತ್ರವ || ||೪೧೧||

ಬಿಡಲು ಖಳನ ಕಂಠವನ್ನು | ಕಡಿದು ಭೂಮಿಗುರುಳೆ ಬಳಿಕ |
ಕಡುವಿಚಿತ್ರಗೊಂಡು ಭೃಗುಜ | ನೊಡನೆರಾಮನು || ||೪೧೨||

ಧಡಿಗನೀತನ್ಯಾರು ನಿ | ಮ್ಮೊಡಲೊಳೆಂತು ಸೇರ್ದನೆನಲು |
ತಡೆಯದಾಗ ಪರಶುರಾಮ | ನುಡಿದ ಹರುಷದಿ || ||೪೧೩||

ಚದುರ ರಾಮ ಕೇಳು ವನದೊ | ಳೊದಗಿ ತಪವಗೈವ ಸಮಯ |
ಕಿದಿರು ದೈನ್ಯದಿಂದಲೋರ್ವ | ಮುದುಕ ಪಾರ್ವನು || ||೪೧೪||

ಉದರಸಲಹುದೆನೆ ಪೈತೃಕ | ವದನು ತಿಳಿಯದೆನುತಲವಗೆ ||
ಮುದದಿ ಭಾಷೆಯನ್ನು ಬಳಿಕ | ಬುಧನು ಪೇಳ್ದನು || ||೪೧೫||

**ವಾರ್ಧಕ**

ರಕ್ಕಸರ ಬಾಧೆಯಿಂದೈತಂದು ನಿಮ್ಮ ಮರೆ
ಹೊಕ್ಕೆ ಬೆನ್ನಟ್ಟಿ ದನುಜರ್ಬರುವರದರಿಂದ
ಪೊಕ್ಕುಳೊಳಗಿರಿಸೆನ್ನ ಕಾಯಬೇಕೆಂದವಂ ಪೇಳಲಾ ನುಡಿ ಕೇಳುತಾ |
ಬೆಕ್ಕಸಂ ಬೆರಗಾಗಿ ನಿನಗೆಂತು ನಾಭಿಯೊಳ್
ಸಿಕ್ಕಿಕೊಂಡಿರಲಿ ದಾನವರು ಬರಲವರಿಂಗೆ
ರಕ್ಕಸರ ಸದೆಬಡಿವೆ ನೀನೆನ್ನ ಮುಂದೆ ಕುಳ್ಳಿರ್ಪುದೆನಲತಿ ಮರುಗುತಾ || ||೪೧೬||

ಒಕ್ಕರದಿ ಬಲುದೈನ್ಯಮಂಗೊಳಲ್ ನುಡಿಗೆಡದೆ
ಕಕ್ಕುಲತೆಯಿಂದ ನಾಭಿಯೊಳಿಟ್ಟು ಕೊಂಡವ
ರ್ಕಕ್ಕುರಿಸಿ ಪಳುಗಿನಂದದಿ ಕರೆಯುತಿರ್ದನೇವೇಳ್ವೆ ಸೈರಿಸಲಾರದೆ |
ಮಿಕ್ಕಿದುರಿಯಿಂ ನೋಡಲಾಸುರಾಕೃತಿ ಕಂಡು
ತಿಕ್ಕಿ ಬಿಸುಡುವರೆ ತಾ ಮೊದಲಿತ್ತ ಭಾಷೆಯೊಳ್
ಸಿಕ್ಕಿರ್ದರಿಂದ ಕೊಲ್ಲುವರೆನ್ನ ಮನಸಿನೊಳ್ಬಳಲಿದೆನಿಷ್ಟು ದಿವಸ || ||೪೧೭||

**ಭಾಮಿನಿ**

ಇನ್ನು ಪೇಳುವದೇನು ರಾಘವ
ನಿನ್ನ ದಯದಿಂದೀ ಖಳಾಧಮ
ನುನ್ನತದ ಬಾಧೆಗಳು ಪರಿಹರವಾಯಿತಿಂದಿನೊಳು |
ಮುಂದೆ ನಿನ್ನಂಗನೆಯ ನೆವನದಿ
ಮಂದಮತಿ ದಾನವರ ಕುಲಗಳ
ನೊಂದಿಸುತ ಈ ಧರೆಯ ಭಾರವ ಕಳೆವ ವಹಿಲದಲಿ || ||೪೧೮||

**ವಾರ್ಧಕ**

ಸುರರ ದೂರಂ ಕೇಳ್ದು ಪಯಶರಧಿಯಿಂದೆದ್ದು
ಧರಣಿಪತಿ ದಶರಥನ ತರಳ ತಾನೆಂದೆನಿಸಿ
ತರುಣಿಯಳ ನೆವದಿಂದ ದಶಕಂಧರಾದ್ಯರಂ ಜಯಿಪನಿವನೆಂದು ಮನದಿ |
ಗ್ರಹಿಸಿ ಬಳಿಕರಿಭಾವಮಂ ಬಿಟ್ಟು ಸಂತಸದ

ಲಹರಿಯಿಂ ಕೊಂಡಾಡಿ ನಿಜಧನುವನಿತ್ತು ಮುಂ
ದಹಿತರಂ ಗೆಲ್ದು ದಿಗ್ವಿಜಯಮಂ ಪಡೆಯೆಂದು ವಹಿಸುತಾಶ್ರಮಕೆ ಬಂದಾ || ||೪೧೯||

**ರಾಗ ಕೇದಾರಗೌಳ ಅಷ್ಟತಾಳ**

ಅಸಮಬಾಲರು ಕೇಳಿರಾಮೇಲೆ ದಶರಥ | ವಸುಮತೀಶನ ಪಾಳ್ಯದಿ ||
ಪಸರಿಸಿತೇನೆಂಬೆ ತೋಷದ ರಭಸವು | ಮಸಗಿದಂಬುಧಿಯವೋಲು || ||೪೨೦||

ಬಳಿಕ ವಿದೇಹ ನೃಪಾಲನು ಮಿಥಿಳೆಗೆ | ಕಳುಹಿಸಿಕೊಟ್ಟ ಮುಂದೇ ||
ಘಳಿಲನೆ ನಡೆತಂದು ಭರದೊಳಯೋಧ್ಯಾ | ಪೊಳಲಿಗೈತಂದನಾಗ || ||೪೨೧||

**ವಾರ್ಧಕ**

ಅರರೆ ದಿಬ್ಬಣ ಬಂದಿತೆಂದು ನಗರದೊಳೆಲ್ಲ
ಕುರುಜ ಮೇರುವೆ ಮಕರ ತೋರಣಗಳಿಂದಲಂ
ಕರಿಸಿ ನರನಾರಿಯರ್ಕಲಶ ಕನ್ನಡಿ ಸೇಸೆ ಮುತ್ತಿನಾರತಿಯಗೊಂಡು |
ನೆರೆದೊಂದುಗೂಡುತುತ್ಸವದೊಳಿದಿರ್ಗೊಳಲು ಬಂ
ದರಮನೆಯ ಪೊಕ್ಕು ಮನೆದಿಬ್ಬಣಂಗಾಯಲಕೆ
ಹರುಷದಿಂ ಭೂಸುತೆಯ ಸಮ್ಮೇಳದಿಂದಿರ್ದನಾ ರಾಘವಂ ಪುರದೊಳು || ||೪೨೨||

**ಮಂಗಳ ಪದ**

**ರಾಗ ಆರಭಿ ಏಕತಾಳ**

ಕ್ಷೀರ ಶರಧಿಯೊಳಗಾಳ್ದವಗೆ | ಭೂ | ಭಾರಪಹಾರವ ಗೈದವಗೇ |
ಮಾರಮಣಿಯಮನರಂನನಿಗೆ | ಚಲ್ವ | ಮಾರಜನಕನಿಗೆ ಮಧುರಿಪುಗೆ ||
ಮಂಗಳಂ ಜಯ ಮಂಗಳಂ || ||೪೨೩||

ದಶರಥಸುತ ತಾನಾದವಗೆ | ಮುನಿ | ಕುಶಿಕಜನೆಜ್ಞವ ಕಾಯ್ದವಗೆ |
ಪಶುಪತಿಚಾಪವ ಗೆಲಿದವಗೇ | ದುಷ್ಟ | ದಶಮುಖವೈರಿಗೆ ರವಿಕುಲಗೇ ||
ಮಂಗಳಂ ಜಯ ಮಂಗಳಂ || ||೪೨೪||

ಕಾಮಿನಿ ಸೀತೆಯ ವರಿಸಿದಗೇ | ಭೃಗು | ರಾಮನ ಗರ್ವವ ನಿಲಿಸಿದಗೆ |
ಪ್ರೇಮದಿ ಭಕ್ತರ ಸಲಹುವಗೇ | ವರ | ಕ್ಷೇಮಪುರೇಶಗೆ ರಘುಪತಿಗೆ ||
ಮಂಗಳಂ ಜಯ ಮಂಗಳಂ || ||೪೨೫||

**ಭಾಮಿನಿ**

ಇಂತು ಧರಣಿಯ ಮೇಲೆ ಕಮಲಾ
ಕಾಂತ ತಾನು ಮನುಷ್ಯರೂಪವ
ನಾಂತು ರಾಮಾಖ್ಯದೊಳು ನಟಿಸಿದ ಚರಿತವನು ಬಿಡದೆ |
ಪಿಂತೆವಿಡಿದಾನಿಲ್ಲಿಗೀ ಪರಿ
ಯಂತೆ ವಿಸ್ತರಿಸಿದೆನು ಲಾಲಿಸಿ
ಸಂತಸವಬಡುವರಿಗೆ ಕ್ಷೇಮಪುರೇಶ ಸಲಹುವನು || ||೪೧೬||

**|| ಪುತ್ರಕಾಮೇಷ್ಟಿ – ಸೀತಾಸ್ವಯಂವರ ಪ್ರಸಂಗ ಮುಗಿದುದು ||**

# ೧. ಶ್ರೀರಾಮ ಪಟ್ಟಾಭಿಷೇಕ

**ಪಾತ್ರಗಳು**

ದಶರಥ
ಸುಮಂತ್ರ
ವಸಿಷ್ಠಮುನಿ
ರಾಮ
ಲಕ್ಷ್ಮಣ
ಭರತ
ಗುಹ
ದೂಷಣಾಸುರ
ತ್ರಿಶಿರ
ರಾಕ್ಷಸಭಟರು
ಋಷಿಗಳು
ಪುರಜನರು
ಕೇಕಯ ರಾಜ
ಕೌಸಲ್ಯೆ
ಕೈಕೆ
ಸುಮಿತ್ರೆ
ಮಂಥರೆ
ಯಕ್ಷಗಾನ

**ಶಾರ್ದೂಲವಿಕ್ರೀಡಿತ**

ಶ್ರೀರಾಮಂ ಸುರಮೌಳಿವಂದಿತಪದಂ ಖದ್ಯೋತವಂಶೋದ್ಭವಂ
ಪಾರಾವಾರ ಗಭೀರಮಾದಿಪುರುಷಂ ತ್ರೈಲೋಕ್ಯನಾಥಂ ಪ್ರಭುಂ |
ಮಾರೀಚಾದಿ ಮಹಾಸುರೌಘಮಥನಂ ಮಾಂಗಲ್ಯರೂಪಾನ್ವಿತಂ
ಕಾರುಣ್ಯಾಂಬುಧಿಜಾನಕೀಸತಿಪದಂ ಧ್ಯಾಯಾಮಿ ಚಿತ್ತೇ ಸದಾ || ||೧||

**ರಾಗ ನಾಟಿ ಝಂಪೆತಾಳ**

ಜಯ ಜಾನಕೀಕಾಂತ | ಜಯ ಸಕಲ ವೇದಾಂತ |
ಜಯತು ಮಂಗಳರೂಪ | ಜಯ ಸುಪ್ರತಾಪ || ಪಲ್ಲವಿ ||

ದಶರತಾತ್ಮಜವೀರ | ದಶಕಂಠಸಂಹಾರ |
ಪಶುಪತೀಶ್ವರಮಿತ್ರ | ಪಾವನಚರಿತ್ರ ||
ಕುಸುಮುಬಾಣಸ್ವರೂಪ | ಕುಶಲಕೀರ್ತಿಕಲಾಪ |
ಅಸಮರಾಕ್ಷಸಶಿಕ್ಷ | ಅಂಬುಜದಳಾಕ್ಷ || ||೨||

ಸಾಮಗಾನವಿಲೋಲ | ಭಕ್ತಜನಪರಿಪಾಲ |
ಕಾಮಿತಾರ್ಥವಿಧಾತ | ಕೀರ್ತಿವಿಖ್ಯಾತ ||
ಸೋಮಸೂರ್ಯಪ್ರಕಾಶ | ಸರ್ವಲೋಕಾಧೀಶ |
ಶ್ರೀಮಹಾರಘುವೀರ | ಸಿಂಧುಗಂಭೀರ || ||೩||

ಸಕಲಶಾಸ್ತ್ರವಿಚಾರ | ಶರಣಜನಮಂದಾರ |
ವಿಕಸಿತಾಂಬುಜವದನ | ವಿಶ್ವಮಯಸದನ ||
ಸುಕೃತಮೋಕ್ಷವಿಲಾಸ | ಸಾಕೇತಪುರವಾಸ |
ಭಕುತವತ್ಸಲರಾಮ | ಭಳಿರೆ ನಸ್ಸೀಮ || ||೪||

**ಮತ್ತೇಭವಿಕ್ರೀಡಿತ**

ಹರಿಗಂಭೀರ ಗಣಾಧಿಪಂಗೆ ಶಿವಗಂ ಗೌರೀಂದಿರಾವಾಣಿಗಂ
ಕರುಣಾಕಾರ ವಸಿಷ್ಠನಾರದರಿಗಂ ಸಾಕ್ಷಾತ ಸದ್ಗುರುವಿಗಂ |
ಪರಮೇಷ್ಠ್ಯಾ ದಿ ಮುನೀಂದ್ರದೇವತತಿಗಂ ಸಾತ್ವೀಕಸನ್ಮಾರ್ಗಿಗಂ
ಪರಮೋಲ್ಲಾಸದೊಳೆಲ್ಲರಿಂಗೆರಗುತೀ ಕೃತಿ ಪೇಳ್ವೆ ಸಂತೋಷದಿಂ || ||೫||

**ಶಾರ್ದೂಲವಿಕ್ರೀಡಿತ**

ಧಾತ್ರೀಗುತ್ತಮ ಕಣ್ವನಾಮ ಪುರದೀ ನಿಂತಿರ್ದ ಶ್ರೀಕೃಷ್ಣನಾ
ತತ್ಪಾದಾಂಬುಜ ದಿವ್ಯನಾಮವರದಿಂದೀ ಪಾರ್ವತೀನಂದನಂ |

ಬತ್ತೀಸಾಕೃತಿ ತಾಳರಾಗವಿಧದಿಂ ರಾಮಾಯಣಂ ಪೇಳ್ವುದಾ
ಭಕ್ತಿಧ್ಯಾನದಿ ಕೇಳ್ದು ಪುಣ್ಯಕಥೆಯಂ ಸಂತೋಷಮಂ ಮಾಳ್ಪುದು || ||೬||

**ದ್ವಿಪದಿ**

ವಾಲ್ಮೀಕಿ ಮಾಮುನಿಪನೊಲಿದು ಕುಶಲವರ್ಗೆ |
ರಾಮಾಯಣಾಮೃತವ ಪೇಳುತಿರಲವರ್ಗೆ || ||೭||

ಮುನಿರಾಯ ಕೇಳಯ್ಯ ಮೊದಲೆಂದ ಕಥೆಯ |
ಮನಸಿನಲಿ ಗ್ರಹಿಸಿದೆವು ಮತ್ತೆ ಸಂಗತಿಯ || ||೮||

ಸೀತಾಸ್ವಯಂವರದ ಮುಂದೆ ಮತ್ತೇನು |
ತಾತನಾಜ್ಞೆಯ ರಘುಜ ತಾಳ್ದ ಪರಿಗಳನು || ||೯||

ರಾಮಲಕ್ಷ್ಮಣರೇಕೆ ರಾಜ್ಯವನು ಬಿಟ್ಟು |
ಗ್ರಾಮ ಭೂಮಿಯನೆಲ್ಲ ಭರತನಿಗೆ ಕೊಟ್ಟು || ||೧೦||

ಕಾನನಾಂತರದಿ ದಿನ ಕಳೆದರವರೆಂತು |
ಜಾನಕಿಯುಸಹಿತ ಘೋರಡವಿಯಲಿ ನಿಂತು || ||೧೧||

ದುರುಳೆ ಶೂರ್ಪನಖಿಗಪಮಾನವದು ಹೇಗೆ |
ಖರದೂಷಣಾದಿಗಳ ತರಿದ ಬಗೆ ಹೇಗೆ || ||೧೨||

ಪೇಳಬೇಕೆಮಗೆನುತ ಪಾದಕಭಿನಮಿಸಿ |
ಕೇಳಿದರು ಬಾಲಕರು ಬಹುದೈನ್ಯವೆರಸಿ || ||೧೩||

ತರಳರಾಡಿದ ನುಡಿಗೆ ಮುನಿಪ ನಸುನಗುತ
ಎರಡುಕೈ ದಣಿಯಲಪ್ಪಿದನು ಭಳಿರೆನುತ || ||೧೪||

ಅರುಹುವೆನು ನಿಮಗೆ ಮುಂದಾದ ಕಾರಣವ |
ತರಳರಿರ ಕೇಳಿರೈ ತಿಳಿದು ಓರಣವ || ||೧೫||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ವೀರದಶರಥ ನೃಪತಿ ಇನಕುಲ |
ವಾರಿಧಿಗೆ ಪ್ರತಿ ಚಂದ್ರನು |

ಧಾರಿಣಿಯನಾಳ್ದಿರಲು ಕುಶಿಕ ಕು |
ಮಾರಕನು ಕರೆದೊಯ್ಯಲು | ಯಜ್ಞಕೆಂದು || ||೧೬||

ಮುನಿಯ ಯಾಗವ ಕಾಯ್ದು ರಾಘವ |
ಜನಕರಾಯನ ಧನುವನೆತ್ತಿಯೆ |
ಜನಕಜೆಯು ಸಹಿತಾಗಯೋಧ್ಯೆಗೆ |
ಘನಪರಾಕ್ರಮಿ ಬಂದನು | ಚಂದದಿಂದ || ||೧೭||

ಒಂದು ದಿನ ಕೇಕಯದ ರಾಜನ |
ಕಂದನೊರ್ವ ನೃಪಾಲನು |
ಬಂದಯೋಧ್ಯಾಪುರಕೆ ಭಕ್ತಿಯೊ |
ಳಂಘ್ರಿಗೆರಗಲು ಕಂಡನು | ದಶರಥೇಂದ್ರ || ||೧೮||

**ರಾಗ ಘಂಟಾರವ ಝಂಪೆತಾಳ**

ಜಯಜಯ ಮಹೀಪತೇ | ದಶರಥ ನೃಪಾಲ || ಪಲ್ಲವಿ ||

ಕ್ಷೇಮವೇನ್ನೃಪತಿಲಕ | ಪರಿವಾರಗಳಿಗೆಲ್ಲ |
ರಾಮ ಲಕ್ಷ್ಮಣರುಗಳು | ಬಂದರೇ ಪುರಕೆ || ||೧೯||

ತಂದೆ ಕಳುಹಿದರಿಂದ | ಬಂದೆನಿಲ್ಲಿಗೆ ನಿಮ್ಮ |
ಕಂದ ಭರತ ಶತ್ರುಘ್ನ | ರಿಂದೊಯ್ಯಲೆನುತ || ||೨೦||

ಶಾಸ್ತ್ರ ವಿದ್ಯಾಭ್ಯಾಸ | ವನು ಕಲಿಸಿದಾ ಮೇಲೆ |
ಪುತ್ರರನುಕರೆದು ತಂ | ದೊಪ್ಪಿಸುವೆನೆಂದ || ||೨೧||

**ಶಾರ್ದೂಲವಿಕ್ರೀಡಿತ**

ಎಂದಾ ರಾಯನ ಮಾತಕೇಳ್ದು ನೃಪತೀ ಸಂದೇಹವಂ ಮಾಡುತಾ
ಇಂದೀ ಬಾಲರ ಬುದ್ಧಿಸಾಲದವರಂ ಬಿಟ್ಟೆಂತು ನಾನಿಲ್ವೆನೋ |
ಕಂದರ್ಪೋಪಮರೂಪರಿಬ್ಬರುಗಳಂ ತಾನಪ್ಪಿ ಮುದ್ದಾಡುತಾ
ಒಂದಾಗಿರ್ವರು ವಿದ್ಯೆಯಂ ಪಠಿಸಬೇಕೆಂದಾಗಳಿಂತೆಂದನು || ||೨೨||

**ರಾಗ ತೋಡಿ ಏಕತಾಳ**

ಪುತ್ರನೀ ಬಾರೊ ಭರತ | ಶತ್ರುಘ್ನ ನೀನಿತ್ತ |
ಅರ್ತಿಯಿಂದ ಕೇಳಿ ಕಾರ್ಯ | ದುತ್ತಮಂಗಳನ್ನು || ||೨೩||

ಕೇಕಯ ನೃಪಾಲ ನಿಮ್ಮ | ಕಾಣಬೇಕೆಂದೆನುತ |
ಬೇಕಾದಂಥ ವಸ್ತುಗಳ | ತಾ ಕಳುಹಿಸಿಹನು || ||೧೪||

ಪೋಗಿ ಬೇಗ ಬನ್ನಿರೆನ್ನು | ತ್ತಾಗ ಮಕ್ಕಳನ್ನು |
ಬೇಗದಿಂದ ಕಳುಹಿಸಿದ | ನಾಗ ಧರಣೀಪಾಲ || ||೧೫||

**ಕಂದ**

ಬಾಲಕರಿರ್ವರನಾ ಭೂ
ಪಾಲನ ಕೈಗೆತ್ತಿ ಕೊಟ್ಟನುಡುಗೊರೆ ಸಹಿತಾ |
ಶೀಲರ್ನಡೆಯಲ್ಕಂದಾ
ವೇಳೆಯೊಳೇ ಕಾರ್ಯವೊಂದ ಮಂತ್ರಿಗೆ ಪೇಳ್ದಂ || ||೧೬||

**ರಾಗ ರೇಗುಪ್ತಿ ಝಂಪೆತಾಳ**

ಮಂತ್ರಿ ಮಹಾವೀರ ಸು | ಮಂತ್ರ ಬಹುಧೀರ |
ಅಂತರಂಗದಿ ಪೇಳ್ವೆ | ನೀಂ ತಿಳಿದು ಪೇಳು || ||೧೭||

ಒಡಲು ನೆಲೆಯೆಂದು ಬಹು | ಕಾಲ ಪರ್ಯಂತ |
ಪೊಡವಿಯಾಳಿದೆನಿನ್ನು | ಕಡುವೃದ್ಧನಾದೆ || ||೧೮||

ಪೊಡವಿಯನು ರಾಘವಗೆ | ಕೊಡುವೆ ನಾನದಕೆ |
ಪೊಡವಿಪತಿಗಳ ಕರೆಸು | ಪುರವ ಶೃಂಗರಿಸು || ||೧೯||

ಇಂತಾ ವಸಿಷ್ಠಮುನಿ | ಮಂತ್ರಿಯರ ಕೂಡೆ |
ಅಂತರಂಗದಿ ದಶರ | ಥೇಂದ್ರ ಮಾತಾಡೆ || ||೨೦||

**ರಾಗ ಪುನ್ನಾಗ ಅಷ್ಟತಾಳ**

ನಾಳೆ ರಾಮಚಂದ್ರಗಭಿ | ಷೇಕವದಾಗುವದೆಂದು |
ಕೇಳಿದಳು ಮರೆಯಲ್ಲಿ ನಿಂದು | ಮಂಥರೆ ಪೋಗಿ |
ಪೇಳಿದಳು ಕೈಕೆಯೊಳಿಂತೆಂದು || ||೨೧||

**ರಾಗ ಕಾಂಭೋಜಿ ಏಕತಾಳ, ತಿತ್ತಿತ್ತೈ**

ಬಾಲೆ ಕೇಳ್ಪೂಮಾಲೆ ಚಾರು | ಶೀಲೆ ಇಂದು ನಿನ್ನ ಕಾಂತ |
ಭೂಲೋಕವ ರಾಮನಿಗೆ | ಪಾಲಿಸಬೇಕೆಂದು ಹೀಗೆ || ||೨೨||

ಮಂತ್ರಿ ವಸಿಷ್ಠರ ಕೂಡೆ | ಅಂತರಂಗದಲಿ ಮಾತಾಡೆ |
ನಿಂತು ಕೇಳಿರುವೆನಾ ಮಾತ | ಕಾಂತೆ ಕೇಳಿದಾವನೀತ || ||೩೩||

ಮಂಥರೆ ಕೇಳೊಳ್ಳಿತಾಯ್ತು | ಚಂದವಾಯಿತದಕಿನ್ನೇನು |
ಕಂದ ರಾಮಚಂದ್ರನ ಆ | ನಂದವ ನೋಡುವ ನಾಳೆ || ||೩೪||

**ರಾಗ ಕಲ್ಯಾಣಿ ಏಕತಾಳ**

ಧರಣಿಯಾಧಿಪತಿತ್ವ | ರಾಮಗಾದರೆ ನಿನ್ನ |
ಭರತಗಾತನಲಿ ಚಾ | ಕರಿಯಹುದಮ್ಮ || ಪಲ್ಲವಿ ||

ತರುಣಿ ಜಾನಕಿ ಪಟ್ಟ | ದರಸಿಯಾಗುವಳು ನೀ |
ನಿರತ ಸೇವಕವೃತ್ತಿ | ಪರಿಚಾರಿಯಾದೆ || ||೩೫||

ಆಡಿಕೊಂಡರೆ ಮುನ್ನ | ಚಾಡಿಯೆಂಬರು ಎನ್ನ |
ನಾಡ ಮಾಡತಲ್ಲ ನೀ | ನೋಡಿಕೋ ಮನದಿ || ||೩೬||

**ರಾಗ ಘಂಟಾರವ ಏಕತಾಳ**

ಈ ಮಾತಾಡುವರೆ ಕೇಳಿ | ಏ ಹುಚ್ಚು ಮೂಳಿ |
ಕಾಮಿನಿಯರೊಳ್ನಿವಾಳಿ ||
ರಾಮನು ಹಿರಿಯವನಾದ ಮೇಲೆ ಈ |
ಸೀಮೆಯ ಭರತನಾಳುವುದಿದು ಲೋಕಕೆ |
ಸರಿಯೆ | ಗುಣ | ಮೆರೆಯೆ | ಹೊಸ | ಪರಿಯೆ | ನೀನೇನರಿಯೆ || ||೩೭||

ಮಕ್ಕಳು ನಾಲ್ವರೊಳಗೆ | ತಮ್ಮೊಳು ಭೇದ |
ವಿಕ್ಕಿ ನಡೆವರೆ ಹೀಗೆ ||
ಇಕ್ಕೆಲ್ಲದವರಿದ ಕೇಳ್ದರೆ ನಿನ್ನಯ |
ಸೊಕ್ಕ ಮುರಿದು ಬಾ ಹೊಯ್ವರು ಸುಮ್ಮನೆ |
ಹೋಗೆ | ಮುದಿ | ಗೂಗೆ | ಸತ್ತ | ಹಾಗೆ | ಚಾಡಿಯೆ ಹೀಗೆ || ||೩೮||

**ಕಂದ**

ಸೊಕ್ಕಿದ ಹೆಣ್ಣೆಂದಿವಳಂ
ಜಕ್ಕುಲಿಸಿಯೆ ಹೋಗು ನಾಯಿ ಸುಮ್ಮನೆ ಎನಲಾ |

ಹೊಕ್ಕಳು ಹೃದಯವ ಮಾಯಾ
ರಕ್ಕಸಿ ಕದಡಿದಳು ಕೈಕೆಯಂತಃಕರಣಂ || ||೩೯||

**ರಾಗ ಕಾಂಭೋಜಿ ಏಕತಾಳ**

ಸಖಿ ನೀ ಪೇಳಿದ ಮಾತು | ಸಕಲವು ಲೇಸಾಯ್ತು |
ಯುಕುತಿ ಏನಿದಕಿನ್ನು | ಎನ್ನೊಳ್ ಪೇಳು ಕಂಡುದನ್ನು || ||೪೦||

ಎಂದರೆ ಆ ಮಾತ ಕೇಳಿ | ಮಂಥರೆ ಧೈರ್ಯವ ತಾಳಿ |
ಮಂದಗಜಗಮನೆ ಕೇ | ಳೊಂದು ಯುಕ್ತಿಯುಂಟದಕೆ || ||೪೧||

ಹಿಂದೆ ಮೆಚ್ಚಿ ನಿನಗೆ ಆ ನ | ರೇಂದ್ರ ಕೊಟ್ಟ ಮಾತೆರಡ |
ಇಂದು ಕೇಳು ಕೊಟ್ಟಮೇಲೆ | ಮುಂದೆ ಹೇಳು ಕಾರ್ಯ ಬಾಲೆ || ||೪೨||

ಈರೇಳು ವರ್ಷ ರಾಮ | ಆರಣ್ಯದೊಳಿರಬೇಕು |
ಧಾರಿಣಿಯ ನಿನ್ನ ಪುತ್ರ | ಭರತನಿಗೆ ಕಟ್ಟಬೇಕು || ||೪೩||

ಎಂದು ಕೇಳು ಕಾಂತನೊಳು | ಸಂದೇಹವ ಮಾಡಬೇಡ |
ಮುಂದೆ ಕಾರ್ಯವೆಲ್ಲ ಲೇಸು | ಇಂದೀವರಾಕ್ಷಿ ಲಾಲಿಸು || ||೪೪||

**ರಾಗ ಶಂಕರಾಭರಣ ತ್ರಿವುಡೆತಾಳ**

ಸುತಗೆ ಪಟ್ಟವ ಕಟ್ಟಬೇಕೆಂಬ |
ಮತದೊಳಂದೂ ಕೈಕೇಯಿ |
ಅತಿಶಯದ ಛಲದಿಂದ ತೆಗೆದಾ | ಭರಣಗಳನು || ||೪೫||

ತೊಟ್ಟ ತೊಡಿಗೆಗಳೆಲ್ಲವನು ತೆಗೆ |
ದಿಟ್ಟು ಕಡೆಗಾ ಮಾನಿನಿ |
ಇಟ್ಟ ಕಸ್ತುರಿ ತಿಲಕವನು ಕೈ | ಗೊಟ್ಟು ಕೆದರಿ || ||೪೬||

ಮಾಸಿದೊಸನವ ಮುಸುಕಿ ಮಂಚದಿ |
ಹಾಸಿದುದನೇ ಪಸರಿಸಿ |
ಶ್ರೀ ಸದಾಶಿವ ನೀನೆ ಗತಿಯೆಂದು | ಮರುಗುತಿಹಳು || ||೪೭||

ಬಣ್ಣಗುಂದಿದಳಬಲೆ ಬಲುಬಲು |
ಕ್ಲೇಶದಿಂದಾ ಕರಗುತ |
ಕಣ್ಣ ನೀರನು ತುಂಬಿ ದುಗುಡದಿ | ಪವಡಿಸಿದಳು || ||೪೮||

**ವಚನ ||** ಇತ್ತಲಾ ಕೈಕೆ ಮಹಾಕ್ಲೇಶದಿಂ ಚಿಂತಿಸುತ್ತಿರಲಾಗಿ ಅತ್ತಲಾ ಪಟ್ಟಾಭಿಷೇಕಕ್ಕೆ ಸಕಲ ಸನ್ನಾಹವಂ ಮಾಡಿದರದೆಂತೆನೆ –

**ಚರಿತೆ (ಸಾಂಗತ್ಯ) ರೂಪಕತಾಳ**

ಪಟ್ಟಾಭಿಷೇಕವ ಮಾಡಬೇಕೆನುತಲೆ |
ಪಟ್ಟಣ ಶೃಂಗರಿಸಲ್ಕೆ ||
ಸೃಷ್ಟಿಪಾಲಕನ ಅಪ್ಪಣೆಯಿಂದ ಕರೆಸಿದ |
ರಷ್ಟದಿಕ್ಕಿಂದ ಚಿತ್ರಕರ || ||೪೯||

ಬಣ್ಣಗಾರರು ಬಂದು ನೆರೆದರು ಆಮೇಲೆ |
ಮಣ್ಣಿನೊಡ್ಡರ ಕರೆಸಿದರು ||
ಚಿನ್ನದ ಕೆಲಸ ಕೆತ್ತಿಗೆಯ ಪಾಂಚಾಲರು |
ಹನ್ನೊಂದು ನೂರು ಕೂಡಿದರು || ||೫೦||

ಅಗೆದು ಪೆಟ್ಟಿಸಿದರು ನೆಲಗಳ ಸಮನಾಗಿ |
ಜಗಲಿ ಗೋಡೆಗಳ ಸಾರಣೆಯ ||
ಸೊಗಸಾದ ಚಪ್ಪರ ಮೇಲುಗಟ್ಟುಗಳಿಂದ |
ನಗರವ ಶೃಂಗರಿಸಿದರು || ||೫೧||

ಮುತ್ತಿನುಪ್ಪರಿಗೆ ಚಾವಡಿ ಕೋಣೆ ಚೌಕಿಯ |
ಸುತ್ತಲು ಬಿಗಿದ ಪಚ್ಚೆಗಳ ||
ಪುತ್ಥಳಿ ಬೊಂಬೆ ಬಾಗಿಲ ದಾರಂದದ ಮನೆ |
ಹತ್ತು ಸಾವಿರವ ಮಾಡಿದರು || ||೫೨||

ತೋರಣ ಕುರುಜು ಮೇರುವೆ ತೋಟ ಕೆರೆಭಾವಿ |
ಕೇರಿಕೇರಿಯ ಮನೆ ಮನೆಯ ||
ಭೇರಿ ಡಮಾಮಿ ಮದ್ದಳೆ ತಾಳ ಗತಿಯಿಂದ |
ಸಾರಿ ಡಂಗುರವ ಹೊಯ್ಸಿದರು || ||೫೩||

ಅಷ್ಟದಿಕ್ಕಿನೊಳಿರ್ದ ಅರಸು ಬಲ್ಲಾಳರ್ಗೆ |
ಕಟ್ಟಿದರುಡುಗೊರೆಗಳನು ||
ಪಟ್ಟಾಭಿಷೇಕಕ್ಕೆ ಪಯಣದಿ ಬರಲೆಂದು |
ಸೃಷ್ಟಿಪಾಲಕ ಕಳುಹಿದನು || ||೫೪||

ಛಪ್ಪನ್ನ ದೇಶದ ಭೂಮಿಪಾಲರು ನಡೆ |
ತಪ್ಪ ಸಂಭ್ರಮವೇನನೆಂಬೆ ||
ಇಪ್ಪತ್ತು ಲಕ್ಷಾನೆ ಕುದುರೆ ದಂಡಿಗೆಯಿಂದ |
ಒಪ್ಪಿದರಂದು ಸಂದಣಿಸಿ || ||೫೫||

ವಸುಧಾಪಾಲಕರೆಲ್ಲ ತೆರಳಿ ಬಂದವರನ್ನು |
ದಶರಥ ನೃಪನಿದಿರ್ಗೊಂಡು ||
ಎಸೆವ ಬಿಡಾರವಿತ್ತವರವರಿಗೆ ತಕ್ಕ |
ಉಪಚಾರಂಗಳನು ಮಾಡಿಸಿದ || ||೫೬||

**ವಾರ್ಧಕ**

ಕುಶನೆ ಕೇಳಿಂತಯೋಧ್ಯಾಪುರದ ಸಂಭ್ರಮವ
ವಶವಲ್ಲ ಹೇಳಿ ತುದಿಗಾಣಿಸುವಡರಿದೆಮಗೆ
ಪಸರಿಸಿತು ಮಂದಿ ಕುದುರೆಗಳ ಸಂದಣಿಯಿಂದ ನಾನಾರವಂಗಳಿಂದ ||
ವಸುಧೆ ಹಿಗ್ಗಿದಳು ಕೆಂಧೂಳೆದ್ದು ನಭಗಳಂ
ಮುಸುಕಿ ದಿಗ್ಗಜ ಬೆದರೆ ಕೂರ್ಮನೆದೆಗೆಟ್ಟ ಫಣಿ
ಕುಸಿದ ಸುರರಾಕಾಶದಲ್ಲಿ ಜಯಜಯಯೆಂದು ದೇವದುಂದುಭಿ ಮೊಳಗಿತು || ||೫೭||

**ರಾಗ ಭೈರವಿ ಝಂಪೆತಾಳ**

ಪನ್ನೀರ ರಾಮನಿಗೆ | ಪಂಕಜಾಕ್ಷಿಯರೆರೆದು |
ಚಿನ್ನಗಳ ತೊಡಿಸಿದರು | ಚಿನ್ಮಯಾತ್ಮಕಗೆ || ||೫೮||

ಅಗರು ಚಂದನ ಗಂಧ | ಕಸ್ತೂರಿ ಲೇಪನವ |
ಸೊಗಸಾಗಿ ರಚಿಸಿದರು | ಶೃಂಗಾರವಾಗಿ || ||೫೯||

ಸಿಂಹಾಸನವನೇರು | ಶ್ರೀರಾಮ ನೀನೆನುತ |
ಬ್ರಾಹ್ಮಣರು ಪರಸಿದರು | ಬಹಳ ಬಗೆಯಿಂದ || ||೬೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸೃಷ್ಟಿಯಧಿಪತಿತನಕೆ ಜನರೊಡ |
ಬಟ್ಟು ಚಿನ್ನದ ಕಲಶದಲ್ಲಿ ವ |
ಸಿಷ್ಠ ಮುನಿ ಮಂತ್ರೋದಕಕೆ ಕೈ | ಗೊಟ್ಟು ನಿಂದ || ||೬೧||

ಮೊಳಗಿದವು ಬಹುವಾದ್ಯ ತಿಂಥಿಣಿ |
ಗಳ ರವಂಗಳ ಮೇಳದಿಂದಾ |
ನಳಿನಲೋಚನನೆದ್ದು ಗುರುವಿಗೆ | ಕರವ ಮುಗಿದ || ||೬೧||

ಸುರವರರು ಕೊಂಡಾಡೆ ಗಾಯಕ |
ರಿರದೆ ಗೀತವ ಪಾಡೆ ನಾಟ್ಯದ |
ತರುಣಿಯರು ಕುಣಿದಾಡೆ ವಾದ್ಯಗ | ಳ್ಮೊರೆಯೆ ಕೂಡೆ || ||೬೨||

**ಭಾಮಿನಿ**

ಜನಕಜನನಿಯರಿಂಗೆ ರಾಘವ
ನನುನಯದಿ ಕೈಮುಗಿದು ತನ್ನಯ
ಮನೆಯ ದೈವವ ಬೇಡಿ ಗುರುಹಿರಿಯರಿಗೆ ತಲೆವಾಗಿ |
ನೆನಸಿ ಪೊಡಮಟ್ಟನು ಸುಮಿತ್ರೆಯ
ಜನನಿ ಕೈಕೆಯ ಕಾಣದಿರೆ ಲ
ಕ್ಷ್ಮಣನನೀಕ್ಷಿಸಿ ತಂದೆ ದಶರಥರಾಯಗಿಂತೆಂದ || ||೬೪||

**ರಾಗ ಭೈರವಿ ಝಂಪೆತಾಳ**

ಜನಕ ಕಿರುಜನನಿಯಹ | ವನಜಮುಖಿ ಕೈಕೆ ಈ |
ಜನರ ಸಭೆಯೊಳಗೆಲ್ಲಿ | ಕಾಣೆನಾನವಳ || ||೬೫||

ಏಕೆ ಭರತನ ಮಾತೆ | ಈ ಕಡೆಗೆ ಬರಲಿಲ್ಲ |
ನೀ ಕರೆದುತಾರನುಜ | ಲಕ್ಷ್ಮಣನೆ ವೀರ || ||೬೬||

ತಿಳಿಯಲಿಲ್ಲವೆ ಮೊದಲೆ | ತಾಯಿ ಕೈಕಾದೇವಿ |
ಬಲುಬೇಗ ಕರಕೊಂಡು | ಬಾರಯ್ಯ ತಮ್ಮ || ||೬೭||

**ರಾಗ ಸೌರಾಷ್ಟ್ರ ಮಟ್ಟೆತಾಳ**

ಎನಲು ಲಕ್ಷ್ಮಣ | ಘನದಿ ಬಂದನು |
ಜನನಿಯಾಗಿಹ | ಕೈಕೆಯಲ್ಲಿಗೆ || ||೬೮||

ಜಯಜಯಾ ಮಹಾ | ಕಮಲಲೋಚನೆ |
ಭಯ ನಿವಾರಿಣೀ | ಭಾಗ್ಯಶಾಲಿನಿ || ||೬೯||

ಚಿಂತೆ ಏಕವ್ವ | ನಿಮ್ಮ ಮನಸಿಗೆ |
ಸಂತಸದಿಂದ | ಅಣ್ಣ ರಾಮಗೆ || ||೭೦||

ಪೊಡವಿಪತಿತನ | ಕೊಡುವ ಭೂಪತಿ |
ತಡೆಯದಲ್ಲಿಗೆ | ತೆರಳಿ ಶೀಘ್ರದಿ || ||೭೧||

ಭೂಮಿಪಾಲರು | ಸಹಿತ ಕಾವರು |
ಭಾಮಿನೀಮಣೀ | ಭ್ರಮರಕುಮತಳೆ || ||೭೨||

ಲಗ್ನಕೈದಿದೆ | ಶೀಘ್ರದಿಂದಲೆ |
ವಿಘ್ನವಾಗಿದೆ | ನೀವು ಬಾರದೆ || ||೭೩||

ಅಗ್ರಗಣ್ಯನು | ಅಣ್ಣ ರಾಘವ |
ವ್ಯಗ್ರನಾಗುವ | ಪೋಗದಿದ್ದರೆ || ||೭೪||

**ರಾಗ ಪಂತುವರಾಳಿ ತ್ರಿವುಡೆ(ಧ್ರುವ)ತಾಳ**

ಲಕ್ಷ್ಮಣ ಮಹಾ ವೀರ | ನಿನ್ನೊಳಾಡುವದೇನು |
ಲಕ್ಷವಾದರು ಬಾರೆ | ಕಾರಣ ಬೇರೆ || ||೭೫||

ಹುಡುಗ ನೀನರಿಯೆ ಹೋ | ಗತಿ ಬೇಗದಲಿ ನಮ್ಮ |
ಪೊಡವಿಪಾಲಕನಿಲ್ಲಿ | ಬರಲು ಹೇಳಯ್ಯ || ||೭೬||

ತಡವ ಮಾಡುವುದೇಕೆ | ತರಳ ಪೋಗುವುದಕ್ಕೆ |
ನಡೆ ನಡೆ ಬರಲೆನ್ನ | ಕಾಂತ ಮೋಹನ್ನ || ||೭೭||

ಎನಲು ಲಕ್ಷ್ಮಣನಂದು | ಘನ ಬೇಗದಲಿ ಬಂದು |
ಜನಕನಿದಿರಲಿ ನಿಂದು | ಸಭೆಯೊಳಿಂತೆಂದ || ||೭೮||

**ರಾಗ ಕಲ್ಯಾಣಿ ಏಕತಾಳ**

ರಾಘವ ಬಿನ್ನಹ | ಕೈಕಾ ದೇವಿಯ ಮನ |
ದಾಗಮ ಬೇರಿದೆ | ಹೋಗಿ ನೋಡಿದೆನು || ಪಲ್ಲವಿ ||

ಬಾಗಿಲುಗಳನೆಲ್ಲ | ಹಾಕಿ ಮಂಚದ ಮೇಲೆ |
ರೋಗ ಬಂದವರಂತೆ | ಬಹಳ ದುಃಖದಲಿ || ||೭೯||

ಮಲಗಿದಿರೇಕೆಂದು | ಮಾತನಾಡಿಸಿದರೂ |
ಒಳವ ಎನ್ನೊಳು ಪೇಳ | ಲಿಲ್ಲ ಆ ಜನನಿ || ||೮೦||

ದಶರಥ ಪಿತನೊಳು | ಮಾತುಗಳುಂಟಂತೆ |
ವಸುಧೇಶನನು ಬರ | ಹೇಳ್ದಳಾ ಕಾಂತೆ || ||೮೧||

ಲಕ್ಷ್ಮಣನಿಂತೆಂದು | ಪೇಳೆ ಭೂಪಾಲಕ |
ಆ ಕ್ಷಣದಲಿ ಬಂದು | ಕೈಕೆಯ ಕಂಡ || ||೮೨||

**ರಾಗ ತೋಡಿ ಏಕತಾಳ**

ಏನಾಯಿತಂಬುಜನೇತ್ರೆ | ಮಾನಿನಿಯರ ಮೌಲೇ |
ನೀನೇಕೆ ಚಿಂತಿಸುತಿರ್ಪೆ | ಪೇಳಬೇಕಿಂದೆನಗೆ || ಪಲ್ಲವಿ ||

ಆನನವೇಕೆ ಬಾಡಿತು | ಅಂಬುಜದಳಾಕ್ಷಿ |
ಈ ನಿರೋಧಗಳಿಂದೇಕೆ | ಕೋಮಲಾಂಗಿ ಪೇಳೆ || ||೮೩||

ವಲ್ಲಭ ಕೇಳೆನ್ನ ಮನ | ದಲ್ಲಿರುವ ಕ್ಲೇಶ |
ಎಲ್ಲವ ನೀನ್ನೊಡನೆ ಪೇಳ್ವೆ | ಕಲ್ಯಾಣಾಂಗ ಕೇಳು || ||೮೪||

ಪಿಂತೆ ನೀ ಕೊಟ್ಟ ಮಾತೆರ | ಡುಂಟು ನಿನ್ನ ಮೇಲೆ |
ಸಂತೋಷವ ಮಾಡಿಕೊಡು | ಸಂದೇಹವಬಿಟ್ಟು || ||೮೫||

ಕಾಂತೆ ಕೇಳಿಷ್ಟೊಂದು ಮಾತಿ | ಗಿಂಥದೊಂದು ಸಿಟ್ಟೇ |
ಅಂತರಂಗ ಶುದ್ಧವಾಗಿ | ಬೇಡಿಕೊ ನಾ ಕೊಟ್ಟೆ || ||೮೬||

ನೇಮವೆಂದೆನುತ್ತ ಕೈಯ | ಮೇಲೆ ಕೈಯ ತಟ್ಟು |
ಕಾಮರೂಪ ಸಿದ್ಧವೆಂದು | ಕೊರಳ ನೀನು ಮುಟ್ಟು || ||೮೭||

ಅಂಬುಜಲೋಚನೆ ಇನಿ | ತೆಂಬ ಮಾತ ಕೇಳಿ |
ಕುಂಭಿನೀಪಾಲಕ ಕೈಕೆಗೆ | ನಂಬುಗೆಯ ಕೊಟ್ಟ || ||೮೮||

**ವಚನ ||** ಇಂತಾ ದಶರಥಂ ದೃಢನಂಬುಗೆಯಂ ಕೊಡಲಾಗಿ ಕೈಕೆಯು
ಸಂತೋಷ ಮನಸ್ಸಿನಿಂದ ಏನೆಂದಳು ಎಂದರೆ –
ಭೂಮಿಯ ನೀನೆನ್ನ ಪುತ್ರ | ಭರತನಿಂಗೆ ಕೊಟ್ಟು |
ರಾಮಚಂದ್ರನನ್ನೀಹೊತ್ತೇ | ವನವಾಸಕ್ಕೆ ಅಟ್ಟು || ||೮೯||

**ವಾರ್ಧಕ**

ಕುಶನೆ ಕೇಳಿಂತು ಮನುಜರು ನೆನೆದುದೊಂದು ವಿಧಿ
ವಶದೊಳೊಂದಾಯ್ತು ಮಿರುವರಾರು ಕಲ್ಪಿತವ
ವಸುಧೇಶ ಕೊಟ್ಟ ನಂಬುಗೆಗೆ ಮೂರ್ಛಿತನಾಗಿ ಹಮ್ಮೈಸಿ ಬಿದ್ದಿರ್ದನು |
ಉಸುರಲಾರದೆ ಮೂರುಗಳಿಗೆ ಪರ್ಯಂತ ತನು
ವಶವಿಲ್ಲದಂತಾಯ್ತು ಸರ್ವೇಂದ್ರಿಯಂಗಳುಂ
ಬಿಸಜಲೋಚನೆ ಕೈಕೆಯಿಯನೋಡಿ ದೈನ್ಯದಿಂ ದಶರಥೇಂದ್ರಂ ಪೇಳ್ದನು || ||೯೦||

**ರಾಗ ನೀಲಾಂಬರಿ ಝಂಪೆತಾಳ**

ಕಂಬುಕಂಠಿನಿ ಚಾರುಶೀಲೆ | ಕಮಲಮುಖಿ |
ಕುಂಭಕುಚೆ ಪುತ್ಥಳಿಯ ಬೊಂಬೆ ಪ್ರತಿರಂಭೆ || ಪಲ್ಲವಿ ||

ಮಕ್ಕಳಿಲ್ಲದೆ ಬಹಳ ಕಾಲ | ನಾನಿರಲು |
ದುಃಖದೊಳಗಾಗ ಮುನಿ ಪಾಲ | ಬಂದೆನಗೆ |
ಅಕ್ಕರಿಂದುಪದೇಶವಿತ್ತನಿದು ಮೂಲ || ||೯೧||

ಕ್ರತುಮುಖದಿ ಪಡೆದ ಸುಕುಮಾರ | ರೂಪಿನಲಿ |
ರತಿಪತಿಯ ಪೋಲ್ವ ರಘುವೀರ | ಆರಣ್ಯ |
ಗತಿಯೊಳಿರತಕ್ಕವನೆ ಶ್ರುತಿವಚನದೂರ || ||೯೨||

ಅರೆನಿಮಿಷ ಮಾತ್ರ ರಾಘವನ | ನಾ ಬಿಟ್ಟು |
ಇರಲಾರೆನಯ್ಯೊ ಮೋಹನನ | ಇನ್ನೆಂತು |
ಕರೆದು ವಿಪಿನಕೆ ಕಳುಹಲೀಗ ಸಣ್ಣವನ || ||೯೩||

**ಮತ್ತೇಭವಿಕ್ರೀಡಿತ**

ಛಲದಿಂ ಕೈಕೆ ಇರುತ್ತಿರಲ್ ದಶರಥಂ ಶೋಕಾಬ್ಧಿಯಿಂದಾಳುತಂ
ಸಲೆ ಹೃತ್ಪಂಕಜ ಬಾಡಿತುಗ್ರಹತಿಯೊಳ್ ಕಣ್ಣೊಳ್ ಜಲಂ ಸೂಸುತ |
ಕಳುಹಲ್ ಕಂದನನಿಲ್ಲಿ ಬೇಗ ಬರಲೆಂದಾ ವಾಕ್ಯಮಂ ಕೇಳುತ
ಖಳಸಂಹಾರಕುಲಾಬ್ಧಿಚಂದ್ರ ಬಳಿಗಂ ಬಂದಾಗಳಿಂತೆಂದನು || ||೯೪||

**(ರಾಮನ ಪ್ರವೇಶ)**

**ರಾಗ ತೋಡಿ ಅಷ್ಟತಾಳ**

ತಾತ ನಿಮಗೀಗ ಬಂದು | ದೇತರ ಚಿಂತೆ |
ಭೂತಳದೊಳಿದ್ದಂಥಾದ್ದ | ನಾ ತರುವೆ ನಿಮ್ಮ ಮನದ |
ಭೂತನಾಥನಡ್ಡಬಂದ | ರಾತುಕೊಂಬೆನು ತಾನೆಂದ || ಪಲ್ಲವಿ ||

ಅಷ್ಟದಿಕ್ಪಾಲಕರ ಕೂಡೆ | ಕಷ್ಟ ಬಂದರಂಜೆ ನಾನು |
ಸೃಷ್ಟಿಗೀಶ ನಿಮ್ಮ ಮನದ | ಭೀಷ್ಟವ ಪೇಳಿ ಸುಳ್ಳಲ್ಲ || ||೯೫||

ದೇಶದೇಶದರಸರ್ಗೆಲ್ಲ | ಬೇಸರಿಕೆ ಪುಟ್ಟಿತಲ್ಲ |
ಈಸುದಿನವಿಲ್ಲದಪ | ಹಾಸದ ಮಾತು ಬಂತಲ್ಲ || ||೯೬||

ಅಲ್ಲಿ ಕೂಡಿದವರೆಲ್ಲ | ಸೊಲ್ಲಿಸುತ್ತ ನಗುವರಲ್ಲ |
ಎಲ್ಲ ರಾಯರೂ ಸಾಗುವ | ರಲ್ಲ ಬುದ್ಧಿವಂತರೆಂದು || ||೯೭||

**ವಚನ ||** ಇಂತೆಂಬ ಮಗನ ಮಾತಿಗೆ ದಶರಥನು ಉತ್ತರಮಂ ಕೊಡದೆ ಸುಮ್ಮನೆ ಅಳುತ್ತಿರಲು ಕೈಕೇಯಿ ಏನೆಂದಳು ಎಂದರೆ –

**ರಾಗ ಶಂಕರಾಭರಣ ತ್ರಿವುಡೆತಾಳ**

ಕೇಳು ರಾಘವ ನಿನ್ನ ಪಿತ ಮಾ |
ತಾಡದಿರುವಾ ಪರಿಯನು |
ಪೇಳುವೆನು ಸಿಟ್ಟಾಗದಿರು ಇನ | ವಂಶಜಾತ || ||೯೮||

ಭರತಗಿತ್ತನು ರಾಜ್ಯವೆಲ್ಲವ |
ಧರಣಿಪಾಲನು ನಿನ್ನನು |
ಕರೆದು ಗಹನಕೆ ಕಳುಹಲಾರದೆ | ಮರುಗುತಿಹನು || ||೯೯||

ಇನ್ನು ಯೋಚನೆ ಏಕೆ ರಾಘವ |
ಚಿಂತೆ ಬೇಡವು ದಿಟವಿದು |
ಮುನ್ನ ನೀನಾರಣ್ಯವಾಸಕೆ | ಪಯಣವಾಗು || ||೧೦೦||

**ರಾಗ ಬಿಲಹರಿ ಏಕತಾಳ**

ಲೇಸನಾಡಿದೆಯವ್ವ | ಈ ಸ್ವಲ್ಪ ಕೆಲಸಕ್ಕೆ |
ಈಸು ಚಿಂತೆಗಳೇಕೆ | ಹೇ ಸುಗುಣಾಢ್ಯೆ ||
ಏಸು ದಿನಾರಣ್ಯ | ವಾಸದೊಳಿರಬೇಕು |
ಆ ಸುದ್ದಿಯೆನಗೀಯೆ | ಹೇ ಶಶಿವದನೆ || ||೧೦೧||

ಈರೇಳು ವರುಷ ನೀ | ಸೇರಿ ಅರಣ್ಯವ |
ಬಾರಾಯೋಧ್ಯೆಗೆ ಮತ್ತೆ | ಶ್ರೀರಾಮಚಂದ್ರ ||
ಬೇರೇನು ಸಂದೇಹ | ಇದರೊಳು ಮಾಡಬೇಡ |
ಸಾರು ತಂದೆಯ ಮನಸು | ಈ ರೀತಿ ಎನಲು || ||೧೦೨||

ಜನಕ ನೀವ್ ಚಿಂತಿಸ | ದಿರಿ ಕೈಕಾದೇವಿಯ |
ಮನಸಿನ ವ್ರತವನು | ಸಲಿಸಿ ಬರುವೆನು ||
ಎನುತ ಕೈಮುಗಿದ ಬಾ | ಲನ ಕಂಡು ದಶರಥ |
ಮನಕರಗಲು ಚಿಂತಾ | ಮನದೊಳಿಂತೆಂದ || ||೧೦೩||

ಸಣ್ಣವ ನೀನೆಂತಾ | ರಣ್ಯದೊಳಿರುವೆಯೊ |
ಪುಣ್ಯ ಹೀನನಾನೆಂದ | ಕಣ್ಣನೀರಿಂದ ||
ಚಿಣ್ಣನನಪ್ಪಿ ಮು | ದ್ದಿಸಿ ದಶರಥ ಬಲು |
ಬಣ್ಣಿಸಿ ಮರುಗಿ ಕಾ | ರ್ಪಣ್ಯದೊಳ್ಬಿಡದೆ || ||೧೦೪||

ದುಷ್ಟಾತ್ಮ ನಾನಯ್ಯೊ | ಏಕೆನ್ನ ಜಠರದಿ |
ಪುಟ್ಟಿದೆ ರಾಮಚಂದ್ರ | ರವಿಕೋಟಿಸಾಂದ್ರ ||
ಎಷ್ಟು ಹೇಳಿದರೇನು | ವಿಧಿ ಫಣೆಯೊಳು ಬರೆ |
ದಿಟ್ಟುದಲ್ಲದೆ ಇವಳ | ನಿಷ್ಠುರವಲ್ಲ || ||೧೦೫||

ತಂದೆ ನೀವೇಕೆನ್ನ | ನೆನೆದು ಮರುಗುವಿರಿ |
ಕಂದರ್ಪಾಂತಕನಾಣೆ | ಭಯವಿಲ್ಲ ತನಗೆ ||
ಮುಂದೆ ರಾಜ್ಯವನೆಲ್ಲ | ಭರತಗೆಕೊಟ್ಟು ನೀವ್ |
ಚಂದದಿ ಸುಖವಾಗಿ | ರೆಂದು ಕೈಮುಗಿದ || ||೧೦೬||

ವಂದಿಸಿ ಜನಕನ | ಬಳಿಯಿಂದ ಶ್ರೀರಾಮ |
ಬಂದ ತನ್ನರಮನೆ | ಗಂದು ಶೀಘ್ರದಲಿ ||
ಅಂದಾ ಕೌಸಲ್ಯಾದೇವಿ | ಗೆರಗಿ ಬಿನ್ನೈಸಿದ |
ತಂದೆ ಕೈಕೆಯ ಮಾತ | ನೊಂದೂ ಮರೆಯದೆ || ||೧೦೭||

**ಚರಿತೆ (ಸಾಂಗತ್ಯ) ತೋಡಿ ರೂಪಕತಾಳ**
ಶರಣಮ್ಮ ತಾಯೆ ನಾನಿಂದು ಕೈಕೆಯ ಮನ |
ದ್ಧರಕೆಗೋಸುಗ ಒಂದು ಕಾರ್ಯ ||
ಮರುಗದಿರೀರೇಳು ವರ್ಷ ಅರಣ್ಯದಿ |
ಚರಿಸಿ ಬರುವೆ ನಿಮ್ಮ ಬಳಿಗೆ || ||೧೦೮||

ಧರಣಿಪಾಲಕ ಭಾಷೆ ಕೊಟ್ಟ ಕಾರಣದಿಂದ |
ಭರತಗಾಯಿತು ರಾಜ್ಯವೆಲ್ಲ ||
ವರ ಕೈಕಾಮ್ಮನ ಮನವ ಮೆಚ್ಚಿಸಿಕೊಂಡು |
ಸ್ಥಿರವಾಗಿ ಬಾಳಿ ನೀವೆಲ್ಲ || ||೧೦೯||

ನೀಡಿರಪ್ಪಣೆಯನ್ನು ಸತ್ಯವಿದ್ದರೆ ಕಾಡು |
ನಾಡಾಗಿ ಮನಕೆ ರಂಜಿಪುದು ||
ಬೇಡ ಮತ್ತೊಂದು ಯೋಚನೆ ಪುಣ್ಯವಿದ್ದರೆ |
ನೋಡುವೆ ನಿಮ್ಮ ಪಾದವನು || ||೧೧೦||

ನುಡಿದ ಮಾತನು ಕೇಳಿ ಸಿಡಿಲೆರಗಿದಂದದಿ |
ಮಡದಿ ಮೂರ್ಛಿತೆಯಾದಳಾಗ ||
ಬಿಡಲಾರದಪ್ಪಿ ಮುದ್ದಿಸಿ ತನ್ನ ಕುವರನ |
ತಡವರಿಸುತ್ತೆಂದಳಾ ಜನನಿ || ||೧೧೧||

**ರಾಗ ನೀಲಾಂಬರಿಗೌಳ ಏಕತಾಳ**

ಏನು ಬುದ್ಧಿ ನೆನೆದೆಯಯ್ಯೊ | ರಾಮ ರಾಮ |
ನೀ | ಎನ್ನ ಕೊಂದು |
ಕಾನನಕ್ಕೆ ಮತ್ತೆ ಹೋಗೊ | ರಾಮ ರಾಮ ||
ದಾನವರು ತಿನ್ನರೇನೊ | ರಾಮ ರಾಮ |
ನಿನ್ನ | ಕೈವಿಡಿದ |
ಮಾನಿನಿಗಿನ್ನೇನು ಗತಿಯೊ | ರಾಮ ರಾಮ || ||೧೧೨||

ಒಂದು ಗಳಿಗೆ ನಿನ್ನ ಬಿಟ್ಟು | ರಾಮ ರಾಮ |
ಇರ | ಲಾರದಾ ನ |
ರೇಂದ್ರನೇನು ಭ್ರಾಂತನಾದ | ರಾಮ ರಾಮ ||
ಇಂದು ಕೈಕೆಯೇ ಬೇಕಾಯ್ತೆ | ರಾಮ ರಾಮ |
ಹಾ | ಗಾದರು ನಿ |
ನ್ನಿಂದ ಕೈಕೆಗೇನು ಬಾಧೆ | ರಾಮ ರಾಮ || ||೧೧೩||

ಭರತನಾಳಲಯ್ಯೊ ರಾಜ್ಯ | ರಾಮ ರಾಮ |
ನಾವ್ | ಬಡವರಂತೆ |
ಶರೀರಮಾತ್ರವಾಗಿರುವ | ರಾಮ ರಾಮ ||
ತರವಲ್ಲ ಪೋಗುವದಿಂತು | ರಾಮ ರಾಮ |

ಸೀ | ತಾಂಗನೆ ಬಲು |
ಕರಗಿ ಸೊರಗಿ ಮರುಗದಿಹಳೆ | ರಾಮ ರಾಮ || ||೧೧೪||

ಒಂದು ಎರಡು ದಿವಸವಲ್ಲ | ರಾಮ ರಾಮ |
ಈ | ರೇಳು ವರ್ಷ |
ಎಂದಿಗೆ ತೀರುವದಯ್ಯೊ | ರಾಮರಾಮ ||
ತಂದು ಕಂಡವರ ಮಗಳ | ರಾಮ ರಾಮ |
ನಂ | ಬಿಸಿಯವರ |
ನಿಂದು ಕೊರಳ ಕೊಯ್ವುದೇನೊ | ರಾಮ ರಾಮ || ||೧೧೫||

**ರಾಗ ಕೇದಾರಗೌಳ ಅಷ್ಟತಾಳ**

ಕಣ್ಣನೀರಬುಧಿಯೊಳಾಳುವ ಜನನಿಯ |
ಪುಣ್ಯಪುರುಷ ನೋಡುತ್ತ ||
ಬಣ್ಣಗಾರಿಕೆಯಲ್ಲ ತಾಯ್ತಂದೆಯರ ಮಾತ |
ನುಣ್ಣಗಳೆಯಬಾರದು || ||೧೧೬||

ಜಾನಕಿ ಲಕ್ಷ್ಮಣರರಿಯರು ಬುದ್ಧಿಯ |
ನೀನಿದ್ದು ತಿಳುಹಿಸಮ್ಮ |
ತಾವ್ ನೊಂದುಕೊಂಬರರಿತರೆ ಪೋಗುವ ಸುದ್ದಿ |
ನೀನಾಗಿ ಅರುಹಬೇಡ || ||೧೧೭||

ಧಾರಿಣೀಪತಿ ಮುಪ್ಪಿನವನು ಲಕ್ಷ್ಮಣ ಬಾಲ |
ನಾರಿ ಸಣ್ಣವಳು ಸೀತೆ ||
ಬೇರೆ ಬೇರವರ ರಕ್ಷಿಸಿಕೊಳ್ಳೆನುತ ಬಿಲ್ಲ |
ನೂರಿ ಕೈಮುಗಿದು ನಿಂದ || ||೧೧೮||

**ವಾರ್ಧಕ**

ತರಳನಾರಣ್ಯವಾಸವ ಕೇಳಿ ಕೌಸಲ್ಯೆ
ತರಹರಿಸಲಾರದಾದಿತ್ಯನುರುತರಕಿರಣ
ದುರಿಯೊಳಗೆ ಬಾಡಿದೆಳಲತೆಯಂತೆ ಮೊಗಕುಂದಿ ದೆಸೆದೆಸೆಗೆ ಬಾಯ್ಬಿಡುತಲಿ |
ಪರಿಪರಿಯ ದುಃಖದಲಿ ಮರುಗುತಿಹ ಜನನಿಗು
ತ್ತರವಿತ್ತು ಕೈಕೆಯಾ ಹರಕೆಯಂ ಕೈಕೊಂಡು
ಪೊರಮಡಲು ದೂರದಿಂ ಕಂಡು ಜಾನಕಿ ಪತಿಯ ಸೆರಗ ಪಿಡಿದಿಂತೆಂದಳು || ||೧೧೯||

**ರಾಗ ಸಾವೇರಿ ತ್ರಿವುಡೆ ಅಷ್ಟತಾಳ**

ರಘುವೀರ ನೀ ಎನ್ನನಗಲಿ ಪೋಗುವೆಯಾ | ಈ |
ಜಗದೊಳೆನ್ನನು ಬಿಟ್ಟು ಕೊರಳಕೊಯ್ಯುವೆಯ ||
ಅಗಜೆಯರಸನ ಬಿಲ್ಲತ್ತಿದಂದಿಂದ |
ನ್ನಗಣಿತಾಶ್ರಯ ಬಿಟ್ಟು ಇರಲಿಲ್ಲವಯ್ಯ ||
ಪೋಗುವುದುಚಿತವೇನೈ | ನೀನೆನ್ನಗಲಿ |
ಪೋಗುವುದುಚಿತವೇನೈ || ||೧೨೦||

ಕಳಕೀರವಾಣಿ ಕೇಳ್ ಕಾಂತೆ | ಮಮ ಪ್ರಿಯೆ |
ಸುಲಲಿತಮಂಜುಳಕರರೂಪೆ ||
ನಳಿನಲೋಚನೆ ಬಹೆ ಕಿರಿದು ದಿನಕಿಲ್ಲಿಹೆ |
ಬಳಲಬೇಡವೆ ಕಾಮನರಗಿಣಿಯೆ
ಸುಮ್ಮನೆ ಮರುಗದಿರೆ | ಜಾನಕಿ ನೀನು |
ಸುಮ್ಮನೆ ಮರುಗದಿರೆ || ||೧೨೧||

ತರವಲ್ಲ ನಿನ್ನನೊಂದರೆನಿಮಿಷವೂ ಬಿಟ್ಟು |
ಇರಲಾರೆ ಕಾಂತಶಿರೋಮಣಿಯೆ ||
ಕರವ ಮುಗಿವೆನೆನ್ನ ಕರೆದೊಯ್ಯೊ ಮೋಹನ್ನ |
ಕರುಣಸಾಗರಸ್ವಾಮಿ ಭಕುತಸುಪ್ರೇಮಿ || ಪೋಗುವ || ||೧೨೨||

ಛಲವೇನೆ ನಿನಗಿಲ್ಲಿ ಇರು ಎಂದರೆನ್ನೊಳು |
ನಳಿನಾಕ್ಷಿ ನೀ ಬಂದು ಬಳಲಲೇಕೆ ||
ಬಲುಕಾಡಿನೊಳುದಿನ ಕಳೆವದು ಬಲುಘನ |
ಖಳರ ಊರದು ಕಾಣೆ ಕಾಂತೆ ನಿನ್ನಾಣೆ || ಸುಮ್ಮನೆ || ||೧೨೩||

ಬಿಸಜಾಕ್ಷ ಎನ್ನ ವಂಚಿಸಿ ಪೋದೆಯಾದರೆ |
ವಿಷವ ಕುಡಿದು ಸಾವುದಲ್ಲದೆ ಬೇರೆ ||
ಹುಸಿದರೆ ನಿನ್ನಾಣೆ ಜನಕನ ಪದದಾಣೆ |
ದಶರಥ ನೃಪನಾಣೆ ಅಸುರವೈರಿ || ಪೋಗುವ || ||೧೨೪||

**ವಾರ್ಧಕ**

ಬೇಡವೆಂದಾ ಮಾತ ಕೇಳದುರೆ ಬಿದ್ದು ಹೊರ
ಳಾಡಿ ಸೆರಗಂ ಬಿಡದೆ ಬಳಲುತಿಹ ಜಾನಕಿಯ

ನೋಡಿ ರಾಘವನೊಡಂಬಡಿಸುತಿಹ ವಾರ್ತೆಯಂ ನಾಡಜನರಿಂದ ಕೇಳ್ದು |
ರೂಢಿಪಾಲಕರಾಮ ರಾಜ್ಯಮಂ ಬಿಟ್ಟೆನ್ನ
ಜೋಡಗಲಿ ಪೋಪನೆಂಬುದನರಿತು ಲಕ್ಷ್ಮಣಂ
ಕೇಡಾದಳೀ ಕೈಕೆ ಎಂದು ಬಂದಗ್ರಜನ ಕೂಡೆ ಬಳಿಕಿಂತೆಂದನು || ||೧೨೫||

**ರಾಗ ಮರವಿ ಮಟ್ಟೆತಾಳ**

ಅಣ್ಣದೇವ ನೀನಯ್ದುವದೆಲ್ಲಿ |
ಪುಣ್ಯವಾರಿಧೇ ಪುರುಷರತ್ನವೆ || ||೧೨೬||

ಇನಕುಲೇಂದ್ರನೆ | ಏನು ಭಾವನೆ |
ಮನಸಿದೇನಯ್ಯ | ಮನಸಿಜನಯ್ಯ || ||೧೨೭||

ಪೊಡವಿ ಕೈಕೆಗೆ | ಮಾರಿಹೋಯಿತೆ |
ದೃಢವ ಪಾಲಿಸೊ | ದುಷ್ಟಮರ್ದನ || ||೧೨೮||

**ರಾಗ ಕಾಂಭೋಜಿ ಏಕತಾಳ**

ತಮ್ಮ ಇನಿತೇಕೊ ಕೋಪ | ಸುಮ್ಮನೆ ಇರಪ್ಪ |
ಸಮ್ಮತವಲ್ಲವಿದು ಸತ್ಯ | ಧರ್ಮವ ಮಿರುವದು || ||೧೨೯||

ತಾತನು ಪೇಳಿದ್ದುದೊಂದು | ಮಾತ ಮಿರಲಿಂದು |
ಪಾತಕ ಹೊದ್ದುವದಯ್ಯ | ನೀ ತಿಳಿದು ನೋಡು || ||೧೩೦||

ನಾರಿ ಜಾನಕಿಯ ಸಹಿತ | ಅರಣ್ಯದೊಳಿದ್ದು |
ಈರೇಳು ವರ್ಷದ ಮೇಲೆ | ಊರಿಗೆ ಬರುವೆನು || ||೧೩೧||

**ರಾಗ ಪಂತುವರಾಳಿ ಪಂಚಘಾತಮಟ್ಟೆತಾಳ**

ರಾಘವ ನೀನಿಂದು ವನಕೆ | ಪೋಗುವದೇ ಬದ್ಧವಾದರೆ |
ಈಗ ನಾನೂ ಸಹಿತ ಬರುವೆ | ಪೋಗುವ ಮೂವರು || ||೧೩೨||

ವನಜನಯನ ನಿನ್ನಬಿಟ್ಟು | ದಿನವ ಕಳೆಯಲಾರೆ ನಾನು |
ಅನುಜನಾದರೆನ್ನಕೂಡಿ | ವನಕೆ ಪೋಗೆಲೊ || ||೧೩೩||

ಮೇದಿನೀಶ ರಾಮನಿನ್ನ | ಪಾದಕಮಲವನ್ನು ಬಿಟ್ಟು |
ಮೇದಿನಿಯೊಳಿರೆನು ತಾಯ | ಪಾದದಾಣೆಗು || ||೧೩೪||

ಎನುತ ಲಕ್ಷ್ಮಣನು ಬಂದು | ಧನುಶರಗಳ ತೆಗೆದುಕೊಂಡು |
ಜನನಿಯಂಘ್ರಿಗೆರಗಿ ಪೇಳ್ದ | ಮನದೊಳಿದ್ದುದ || ||೧೩೫||

ಅಮ್ಮ ರಾಮಚಂದ್ರನು ಸೀ | ತಮ್ಮನವರ ಕೂಡಿಕೊಂಡು |
ನಿರ್ಮಲದೊಳು ವನಕೆ ಪೋಪ | ನಂತೆ ಶೀಘ್ರದಿ || ||೧೩೬||

ಕಳೆಯಲಾರೆ ಬಿಟ್ಟು ದಿನವ | ನಳಿನನೇತ್ರನೆರಡು ಪದವ |
ತಿಳುಹಿ ರಾಮನೊಡನೆ ಮಾತೆ | ಕಳುಹು ಎನ್ನನೂ || ||೧೩೭||

**ರಾಗ ನವರೋಜು ಮಟ್ಟೆತಾಳ**

ಲೇಸು ಮಗನೆ | ರಾಮ ವನಕೆ | ಪೋಪನಾದರೆ |
ಐಸೆ ಕಾರ್ಯ | ವಿದು ಮುಹೂರ್ತ | ಬೇಸರಿಲ್ಲದೆ || ||೧೩೮||

ದೃಢಮನಸ್ಸಿ | ನಲ್ಲಿ ರಾಮ | ನೊಡನೆ ಪೋಗೆಲೊ |
ಅಡವಿಯೇ | ರಾಜ್ಯ ನಾಲ್ಕು | ಕಡೆಯೊಳಾಹುದು || ||೧೩೯||

ಸೀತೆಯನ್ನು | ಮನದಿ ಎನ್ನ | ರೀತಿ ನೋಡಿಕೊ |
ತಾತ ರಾಮ | ಚಂದ್ರನೆಂದು | ಮಾತನಾಡಿಕೊ || ||೧೪೦||

**ಕಂದ**

ಕಂದಗೆ ಬುದ್ಧಿಯ ಪೇಳ್ದಾ
ಚಂದ್ರಾನನೆ ಬೇಗ ರಾಮನಲ್ಲಿಗೆ ಬಂದು |
ನಿಂದಿರ್ದಾಕೆಯ ಕಾಣುತ
ವಂದಿಸೆ ರಾಘವನೊಳೆಂದಳಂಬುಜನಯನೆ || ||೧೪೧||

**ರಾಗ ಕಾಂಭೋಜಿ ಏಕತಾಳ**

ಧಾರಿಣಿಯಧಿಪತಿತ್ವ | ಭರತಗಿತ್ತು ನೀನೀಗ |
ನಾರಿ ಜಾನಕಿಯ ಸಹಿತ | ಆರಣ್ಯಕೆ ಪೋಗುವೆಯ || ||೧೪೨||

ಲಕ್ಷ್ಮಣ ನೀನನ್ನ ಬಿಟ್ಟು ಒಂ | ದೇ ಕ್ಷಣವೂ ನಿಲುವನಲ್ಲ |
ರಕ್ಷಿಸಿಕೊ ನೀ ಪೋದಲ್ಲಿ | ಅಕ್ಷಯ ಆಯುಷ್ಯವಿರಲಿ || ||೧೪೩||

ಸ್ವಸ್ತಿಯಾಗಲೆಂದು ತನ್ನ | ಪುತ್ರನಾದ ಲಕ್ಷ್ಮಣನ್ನ |
ಭಕ್ತಿಯಿಂದ ಶ್ರೀರಾಮನ | ಹಸ್ತದೊಳಿತ್ತಳು ಮಗನ || ||೧೪೪||

**ವಚನ ||** ಇಂತು ಸುಮಿತ್ರೆಯಂ ಬೀಳ್ಕೊಂಡು ಜಾನಕೀಲಕ್ಷ್ಮಣರನೊಡಗೊಂಡು ಪಿತನಾದ ದಶರಥನ ಬಳಿಗಂ ಬಂದು ರಾಮನು ಏನೆಂದನು ಎಂದರೆ –

**ರಾಗ ಘಂಟಾರವ ಏಕ (ಝಂಪೆ)ತಾಳ**

ತಾತ ಬಿನ್ನಹ ಎನ್ನ | ಮಾತ ಲಾಲಿಸಬೇಕು || ಪಲ್ಲವಿ ||

ನಾರಿ ಜಾನಕಿ ತಮ್ಮ | ಲಕ್ಷ್ಮಣ ಸಹಿತಾಗಿ |
ಆರಣ್ಯದೊಳಿರುವೆವೆಂ | ದಳುತಲೈದಾರೆ || ||೧೪೫||

ಏನು ಮಾಡುವುದು ವಿಧಿ | ಬರೆದುದಾಯಿತು ಮುಂದೆ |
ನೀನು ಸುಖದೊಳಿರೈ | ಧಾರಿಣೀಪಾಲ || ||೧೪೬||

**ವಚನ ||** ಇಂತು ರಾಮ ಪೇಳಲಾಗಿ ದಶರಥನು ಮನನೊಂದುಕೊಂಡವನಾಗಿ ಏನೆಂದನು ಎಂದರೆ –

**ರಾಗ ನೀಲಾಂಬರಿ ತ್ರಿವುಡೆತಾಳ**

ರಾಘವ ವಿಪಿನಕ್ಕೆ ಜಾನಕಿ | ಸಹಿ |
ತೀಗಲೀ ಲಕ್ಷ್ಮಣ ಮೊದಲಾಗಿ ||
ಹೀಗೆ ಮೂವರು ನೀವು ಮಾತಾಡಿ | ಕೊಂಡು |
ಪೋಗುವದಡವಿಗೆ ಬದ್ಧವೆ || ||೧೪೭||

ಕಾಡಿನೊಳಗೆ ಬಲು ಮೃಗಗಳು | ನಿಮ್ಮ |
ಪೀಡಿಸದಿರುವವೆ ನೀ ಪೇಳು ||
ಗಾಢರಕ್ಕಸರಿಪ್ಪ ಠಾವಲ್ಲಿ | ಸೀತೆ |
ನೋಡಿ ಅಂಜದೆ ತಾನೆಂತಿಹಳಲ್ಲಿ || ||೧೪೮||

ಹಸಿವಾಗಲಡವಿಯೊಳೇನುಂಟು | ನಿದ್ರೆ |
ಮುಸುಕೆ ಕಾಡೊಳು ಮಲಗುವಿರೆಂತು ||
ಬಿಸಿಲು ಮಳೆಯನೆಂತು ತಡೆವಿರಿ | ಹಾಲು |
ಮೊಸರು ಬೆಣ್ಣೆಯನೆಂತು ಬಿಡುವಿರಿ || ||೧೪೯||

ಸಾವಕಾಲಕೆ ಕಂಡೆ ಭಾಗ್ಯವ | ಕೊಟ್ಟ |
ದೇವರಿಂದೆನಗೆ ಅಯೋಗ್ಯವ ||
ಯಾವ ಮುಹೂರ್ತಕೀ ಕೈಕೆಯ | ತಂದೆ |
ಜೀವಕ್ಕೆ ಮುತ್ತಾದಳೀಕೆಯ || ||೧೫೦||

**ಚರಿತೆ (ಸಾಂಗತ್ಯ) ರೂಪಕತಾಳ**

ವನವಾಸಕೆಯ್ದಿ ಬರುವೆವೆಂದು ಮೂವರು |
ಜನಕನ ಪಾದಕ್ಕೆ ನಮಿಸಿ ||
ವನಿತೆಕೈಕಾದೇವಿಗಭಿವಂದಿಸಲು ಕಂಡು |
ಮನದೊಳಿದ್ದುದನರುಹಿದಳು || ||೧೫೧||

ಆರಣ್ಯದೆಡೆಗೆ ಶೃಂಗಾರವಲ್ಲೆನುತ ಭಂ |
ಗಾರವಸ್ತುವನೆಲ್ಲ ಕಳಚಿ ||
ಬೇರೆ ಬೇರವರಿಗೆ ವಿಂಗಡಿಸುತ ಮತ್ತೆ |
ನಾರಿನಂಬರ ಕೊಟ್ಟಳಾಗ || ||೧೫೨||

ಪಟ್ಟೆಸೀರೆಯ ಬಿಚ್ಚಿ ಚೆನ್ನವ ತೆಗೆದಾಕೆ |
ಕೊಟ್ಟ ವಲ್ಕಲವ ಕಾಣುತ್ತ ||
ಸೃಷ್ಟಿದೇವಿಯೆ ನೀ ನೋಡೆಂದು ಕಂಬನಿದುಂಬಿ |
ಉಟ್ಟಳು ಜನಕನ ಪುತ್ರಿ || ||೧೫೩||

## ೩. ಪಂಚವಟಿ

**ಪಾತ್ರಗಳು**

ರಾಮ

ಲಕ್ಷ್ಮಣ

ಸೀತೆ

ಮುನಿಗಳು

ಅಗಸ್ತ್ಯ

ಶೂರ್ಪಣಖೆ

ಮಾಯಾಶೂರ್ಪಣಖೆ

ಖರ

ದೂಷಣ

ತ್ರಿಶಿರ

**ರಾಗ ತೋಡಿ ಏಕತಾಳ**

ಅಂಜಬೇಡೆಲೆ ಸೀತೆ | ಮಿಥಿಲೇಂದ್ರಕುಲಜಾತೆ |
ಭಂಜಿಸುವೆ ರಾಕ್ಷಸಿಯ | ಕುಂಜರಗಮನೆ || ||೫೯||

ಕಣ್ಣ ಮುಚ್ಚಿಕೊ ನೀನು | ಕಂಡರಂಜವೆಯವಳ |
ಹೆಣ್ಣುಮೂಳಿಯ ಕೊಂದು | ಮಣ್ಣುಗೂಡಿಸುವೆ || ||೬೦||

ಎಂದು ಧೈರ್ಯವ ಪೇಳೆ | ಬಂದು ರಾಮನ ದೂರ |
ದಿಂದ ನೋಡಿದಳುಸುರೆ | ಚಂದವಾಗಿರಲು || ||೬೧||

ಕಂಡರೆ ಮದನನಂಥ | ಗಂಡುಸಾಗಿರುವನೀತ |
ಕೊಂಡೊಯ್ದು ಮನೆಗೆನ್ನ | ಗಂಡನಂ ಮಾಳ್ಪೆ || ||೬೨||

**ದ್ವಿಪದಿ**

ಎನುತ ಮನದೊಳಗಿಂತು ಯೋಚನೆಯ ಮಾಡಿ
ಘನವಾದ ದೇಹವನು ಕುನಿಸಿ ಮರೆಮಾಡಿ || ||೬೩||

ಮಾಯಕದ ರೂಪದಲಿ ಮತ್ತೊಂದು ಬಗೆಯ
ಕಾಯವನು ಧರಿಸಿದಳು ಕಪಟದಾಕೃತಿಯ || ||೬೪||

ಹದಿನಾರು ವತ್ಸರದ ಹೆಣ್ಣಾದಳವಳು
ಮುದದಿಂದ ಶೃಂಗಾರವಾಗಿ ಮತ್ತವಳು || ||೬೫||

ಪೂಗೋಲನುರುಪಟ್ಟದಾನೆಯಂದದಲಿ
ರಾಘವನ ಬಳಿಗೆ ನಡೆತಂದಳೊಲವಿನಲಿ || ||೬೬||

ಕರವಮುಗಿದಳು ಬಳಿಕ ಕಂಡು ರಘುಪತಿಯ
ಅರುಹಿದಳು ಕಾರ್ಯಗಳ ಅಂತರಸ್ಥಿತಿಯ || ||೬೭||

**ರಾಗ ಗೌಳ ಆದಿತಾಳ (ಚೌತಾಳ)**

ನೀ ಗುಣನಿಧಿಯೆಂದು | ನಿನ್ನ ಸೇರಿದೆ ಬಂದು || ಪಲ್ಲವಿ ||

ಅತಿಕುಲವತಿ ನಾನು | ಪೃಥಿವಿಪಾಲಕ ನೀನು |
ರತಿದೇವಿಗೆಣೆ ನಾನು | ಮನ್ಮಥ ನೀನು || ||೬೮||

ಸರಸಿಜಾಂಬಕಿ ನಾನು | ತರಣಿಪ್ರಕಾಶ ನೀನು |
ವರ ಬಿಂಬಾಧರೆ ನಾನು | ಅರಗಿಣಿನೀನು || ||೬೯||

ಕವಲು ಮನವ ಬಿಟ್ಟು | ತವಕದಿ ದಯವಿಟ್ಟು |
ಸವಿದಂಬುಲವ ನೀಡು | ಸರಸ ಮಾತಾಡು || ||೭೦||

ಎಲ್ಲಿ ನೋಡಿದರೆನ | ಗಿಲ್ಲ ಒಪ್ಪುವ ಜನ |
ಬಲ್ಲತನದಿನೆರೆಯೊ | ಬಲುಬೇಗ ಕರೆಯೊ || ||೭೧||

**ರಾಗ ಕಾಂಭೋಜಿ ಏಕತಾಳ**

ಮದನನ ಪಟ್ಟದರಾಣಿ | ಮೊದಲೆ ಬಂದುದಿಲ್ಲ ||
ಚದುರೆ ಸಣ್ಣವಳೊಬ್ಬಳ | ಮದುವೆಯಾದೆನಲ್ಲ || ||೭೨||

ಒಂದು ಚೂರಿಗೆರಡು ಒರೆ | ಹೊಂದುವುದೆ ಪೇಳು ||
ಮಂದಗಮನೆ ಪೇಳ್ವೆ ನಿನಗಿ | ನ್ನೊಂದು ಯತುನ ಕೇಳು || ||೭೩||

ನಮ್ಮಿಂದ ನೂರ್ಮಡಿಗೆ ಚೆಲುವ | ತಮ್ಮನಿಗೆ ಪ್ರಾಯ ||
ಗಮ್ಮನೆ ನೀ ಹೋಗಿ ತೋರು | ನಿನ್ನಲ್ಲಿದ್ದುಪಾಯ || ||೭೪||

ವಂಚನೆಯಿಲ್ಲದೆ ಪೋಗು | ಚಂಚಲಾಕ್ಷಿ ಬೇಗ ||
ಪಂಚಬಾಣನುರುಬೆಯಿಂದ | ಮುಂಚೆ ಕೂಡುವನೀಗ || ||೭೫||

**ರಾಗ ಗೌಳೀಪಂತು ರೂಪಕತಾಳ**

ಚಂದ | ದಿಂದ ಬಂದಳಬ್ಜಲೋಚನೆ | ರಾಮ |
ಚಂದ್ರ ಹೇಳಿದಂಥ ಮಾತಿ | ನಂದವನ್ನು ಬಣ್ಣಿಸುತ್ತ || ಪಲ್ಲವಿ ||

ಕನ್ನಡಿಯನು ತೆಗೆದು ನೋಡುತ | ಮೊಗವು |
ಚೆನ್ನವಿಹುದೆಂದತಿ ನೆಗಾಡುತ | ಮತ್ತೆ |
ತನ್ನೊಳ್ ತಾನೆ ಮಾತನಾಡುತ | ತನಗೆ |
ಕನ್ನೆಯರೊಳಗೆಣೆಯಿಲ್ಲೆನ್ನುತ || ಭರ || ||೭೬||

ಕುರುಳ ಕೈಬೆರಳಿಂದ ತಿದ್ದುತ | ಪುಷ್ಪರಸದ |
ಪರಿಮಳದೊಳೋಲಾಡುತ | ಮುಂದು |
ವರಿದ ತಿಲಕ ಸೆರಗಿಂದೊರಸುತ | ನೋಡಿ |
ತರಳ ಲಕ್ಷ್ಮಣನೆಡೆಯ ಹೊದ್ದುತ || ಭರ || ||೭೭||

**ರಾಗ ಮಿಶ್ರತೋಡಿ ಅಷ್ಟತಾಳ**

ಕಾಮಸನ್ನಿಭ ಮಾತ ಕೇಳು | ಪೇಳಿ |
ರಾಮ ಕಳುಹಿದನಿಂದಿನೊಳು |
ನಾ ಮನವಿಟ್ಟು ಕೃಪಾಳು | ನಿನ್ನೊಳ್ |
ಕಾಮಿಸಿ ಬಂದೆ ಮೋಹದೊಳು | ಇನ್ನು |
ತಾಮಸಗೊಳದಿರು ತಾಳಲಾರೆನು ಸು |
ಪ್ರೇಮದಿಂದಲೆ ಕೂಡು ಸರಸಮಾತಾಡು || ||೭೮||

ನೆರೆ ಮನಸೆನ್ನಮೇಲಿಟ್ಟು | ಇಕ್ಕೊ |
ಗುರುಕುಚವೆರಡ ನೀ ಮುಟ್ಟು |
ತೆರೆದ ಚೆಂದುಟಿಗೆ ಬಾಯಿಟ್ಟು | ಚ |
ಪ್ಪರಿಸಿ ಸುರತಸುಖ ಕೊಟ್ಟು | ಎನ್ನ |
ವಿರಹವ ನಿಲಿಸು ಕಾತರವನ್ನೆ ಮರೆಸು ಕಣ್ |
ದೆರೆದೆನ್ನ ನೋಡು ಕಾರುಣ್ಯದಿಂದಲೆ ಕೂಡು || ||೭೯||

**ರಾಗ ಮಿಶ್ರಬಿಲಹರಿ ಅಷ್ಟತಾಳ**

ಮಂದಗಮನೆ ಇಂಥಸುದ್ದಿ | ಯೊಂದನೆನ್ನೊಳಾಡದಿರು |
ಮುಂದೆ ಬ್ರಹ್ಮಚಾರಿ ನಾ ಕಾಣೆ |
ಬಂದದಾರಿಗೆ ಸುಂಕವಿಲ್ಲ | ತಂದರಣ್ಣನ ಗುರುತವನ್ನು |
ಚೆಂದದಿಂ ಕೂಡುವೆನೆಂದನು || ||೮೦||

ಭಂಡುಮಾತನಾಡುತಿದ್ದಿ | ಕಂಡರತಿ ಚೆಲುವೆ ನಿನ್ನ |
ಗಂಡನಾರು ದೇಶವಾವುದು |
ಪುಂಡರೀಕಲೋಚನೆ ಭೂ | ಮಂಡಲೇಶ ರಾಮದೇವರ |
ಕಂಡುದೆಲ್ಲಿ ಪೋಗು ಸುಮ್ಮನೆ || ||೮೧||

ಎಂದ ಮಾತ ಕೇಳಿ ಧೈರ್ಯ | ಗುಂದಿ ಕೋಪಾಕ್ರಾಂತಳಾಗಿ |
ಬಂದಳು ಶ್ರೀ ರಾಮನಲ್ಲಿಗೆ |
ಚಂದವಾಯ್ತು ರಾಘವಾ ನಿ | ನ್ನಿಂದ ಬುದ್ಧಿವಂತ ತಮ್ಮ |
ನೆಂದರೆ ಜಾನಕಿ ನಕ್ಕಳು || ||೮೨||

**ರಾಗ ಶಂಕರಾಭರಣ ಮಿಶ್ರ ಅಷ್ಟತಾಳ**

ಏಕಪತ್ನಿಯ ವ್ರತ ನಿನಗೆ | ಬ್ರಹ್ಮ |
ಚಾರಿತ್ವ ಸಾಕಾರಿಸುತಿದೆ ತಮ್ಮನಿಗೆ |

ಬೇಕಂತೆ ಗುರುತವಾತನಿಗೆ | ಪಾಲಿಸಯ್ಯ ವಿ |
ವೇಕದಿಂದನುಜ ಲಕ್ಷ್ಮಣಗೆ || ||೮೩||

ನಗೆಗೇಡ ಮಾಡಿದಿರಲ್ಲ | ಸುಮ್ಮನೆ ಬಂದು |
ಹಗುರವಾದೆನು ನಿಮಗೆಲ್ಲ |
ಹಗರಣ ಗೆಯ್ವುದು ಸಲ್ಲ | ಎನ್ನ ವಂಚಿಸಿ |
ಮಿಗುವರಿವುದು ಸಮವಲ್ಲ || ||೮೪||

ಚದುರೆ ಬಾ ಬಾರೆಂದು ಕರೆದು | ರಾಮನಂಬಿನ |
ತುದಿಯೊಳ್ ಮೂಗನು ಕೊಯ್ಯಲು ಬರೆದು |
ಒದಗಿ ತೋರಿಸು ಬೆನ್ನ ಸರಿದು | ಈ ಕುರುಹ ನೋ |
ದಿದರೆ ಕೂಡುವ ನಲಿನಲಿದು || ||೮೫||

ಎಂದ ಮಾತನು ಕೇಳಿ ಕಡೆಗೆ | ನಲ |
ವಿಂದ ಬಂದಳು ತಮ್ಮನೆಡೆಗೆ |
ವಂದಿಸಿದಳು ಪಾದದೆಡೆಗೆ | ಬೆನ್ನ ನೋಡು ನೋ |
ಡೆಂದು ರಕ್ಕಸಿ ಪೇಳ್ದ ನುಡಿಗೆ || ||೮೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಣ್ಣನಾಜ್ಞೆಯ ನೋಡಿ ಲಕ್ಷ್ಮಣ |
ತನ್ನ ಮನದಲಿ ತಾನೆ ನಗುತಲಿ |
ಕನ್ನೆ ಪ್ರಾಯದ ಚದುರೆ ಬಾ ಮೋ | ಹನ್ನಕಾರಿ || ||೮೭||

ಇತ್ತ ಬಾರೆಂದೆನುತ ಹಸ್ತವ |
ನೆತ್ತಿ ತವಕದೊಳೆರಡು ಮೊಲೆಗಳ |
ನೊತ್ತಿ ಎಳೆದಾ ಖಡುಗದಿಂದಲಿ | ಕತ್ತರಿಸಿದ || ||೮೮||

ಕೆತ್ತಿದನು ನಾಸಿಕವನುದ್ದಕೆ |
ರಕ್ತಮಾಂಸಗಳುದಿರೆ ಭರದಲಿ |
ಮತ್ತೆ ಕೂಗಿದಳಸುರೆ ಶರಧಿಯೆ | ಬತ್ತುವಂತೆ || ||೮೯||

ನೋಡುವಳು ಮಾಂಸಗಳ ಮೊಲೆಯೀ |
ಡಾಡುವಳು ಬಾಯ್ದೆಗೆದಸುರೆ ಹೊರ |
ಳಾಡುವಳು ಮನದೊಳಗೆ ಜಾನಕಿ | ನೋಡಿ ಬೆದರೆ || ||೯೦||

**ರಾಗ ಮಾರವಿ ಮಟ್ಟೆತಾಳ**

ರಾಘವಾ ಲೇಸು ಲೇಸಾಯಿ | ತೀಗ ನೀಮಾಡಿರುವ ಮೋಸ |
ಆಗಲಾಗಲದಕೇನೀಗ | ತಾಳು ತಾಳಯ್ಯ || ||೯೧||

ಎನ್ನಗ್ರಜರಿಂಗಿದನೆಂದು | ನಿನ್ನ ಸತಿಯಳನ್ನು ತಂದು |
ಬನ್ನಬಡಿಸದಿದ್ದರೆ ನಾ | ಹೆಣ್ಣಿನ ಕುಲವೆ || ||೯೨||

ಎತ್ತ ಹೋದರತ್ತ ಬಿಡದೆ | ಮತ್ತೆ ನಿನ್ನ ಹೆಂಡತಿಯ |
ಎತ್ತಿಕೊಂಡೊಯ್ಯದಿದ್ದರೆ ನಾ | ಹೊತ್ತದ್ದು ಮೊಲೆಯೆ || | | ೯೩||

ಸೃಷ್ಟಿ ಈರೇಳರೊಳು ಬ | ಚ್ಚಿಟ್ಟುಕೊಂಡಿದ್ದರೂ ಅವಳ |
ಬಿಟ್ಟು ಹೋದೆನಾದರೆ ನಾ | ನುಟ್ಟಿದ್ದು ಸೀರೆಯೆ || ||೯೪||

**ವಾರ್ಧಕ**

ಪಂಥಗಳನಾಡಿ ಮೊಲೆಮೂಗಿನುರಿಗೌಷಧಿಯ
ಮಂತ್ರಗಳನೆಸಗಿ ಭೋರೆಂದಾರ್ದು ಕನಲಿ ತ
ನ್ನಂತರಂಗದೊಳು ಪಗೆವಿಡಿದು ನಾನಾ ಪರಿಯ ಚಿಂತಿಸುತ ನಡೆತಂದಳು |
ಎಂತಾದಡಾಗಲಾ ರಾಮಲಕ್ಷ್ಮಣರ್ಗೆ ಕೇ
ಡಂ ತಾರದಿರೆನೆಂದು ಶೀಘ್ರದಿಂದಯ್ದಿ ವೃ
ತ್ತಾಂತಮಂ ಖರದೂಷಣಾದಿಗಳ ಮುಂದೆ ತಾ ನಿಂತುಕೊಂಡಿಂತೆಂದಳು || ||೯೫||

**ರಾಗ ತೋಡಿಮಿಶ್ರ ನೀಲಾಂಬರಿ ಏಕತಾಳ**

ಅಣ್ಣ ಕೇಳಿಂತೆನಗಾದುದೇ | ಈ ಮಾನಭಂಗ |
ಹೆಣ್ಣುಜನ್ಮಕೊದಗಿ ಪೋದುದೇ ||
ಕಣ್ಣಾರೆ ನೀ ನೋಡಬಾರದೆ | ಎನ್ನಯ ಮೆಯ್ಯ |
ಬಣ್ಣವು ಕಂಗಳಿಗೆ ತೋರದೆ || ||೯೬||

ದಶರಥರಾಯನ ಮಕ್ಕಳಂತೆ | ಇಬ್ಬರು ತಮ್ಮ |
ವಸುಧೆಯನ್ನು ಬಿಟ್ಟಿಹರಂತೆ ||
ಅಸಮ ಸಾಹಸಿಗಳಂತೆ | ಏನೆಂದು ನಾ ವ |
ರ್ಣಿಸುವೆನಯ್ಯೊ ರಾಘವನ ಕಾಂತೆ || ||೯೭||

ತಮ್ಮನಾದ ಲಕ್ಷ್ಮಣನು ತಾನು | ಎನ್ನೆರಡೂ ಕುಚವ |
ಸುಮ್ಮನೀಗ ಕೊಯ್ದುಬಿಟ್ಟನು |
ಹೆಮ್ಮೆಯಿಂದ ಮೂಗ ತರಿದನು | ಎನ್ನಗ್ರಜರು |
ನಿಮ್ಮಂಥವರಿದ್ದೂ ಹೀಗಾದೆನು || ||೯೮||

ಪುಂಡರೀಕನೇತ್ರೆಯೊರ್ವಳು | ರಾಮಚಂದ್ರಗೆ |
ಹೆಂಡತಿಯಾಗಿರುವವಳು ||
ಕಂಡರೆ ರಂಭೆಯಂತಿರ್ಪಳು | ಬೇಗದಿ ಕದ್ದು |
ಕೊಂಡು ಬಂದರೆ ನಿನಗಾಪಳು || ||೯೯||

**ರಾಗ ಭೈರವಿ ಝಂಪೆತಾಳ**

ದುರುಳೆಯಾಡಿದ ನುಡಿಯ | ದುಷ್ಟಖರ ಕೇಳುತ್ತ |
ಶಿರವ ತೂಗಿದನಂದು | ಹರಹರಾಯೆಂದು || ||೧೦೦||

ತಂಗಿಗೀಪರಿ ಮಾನ | ಭಂಗವೆಸಗಿದ ಮೇಲೆ |
ವಿಂಗಡದೆ ನಾವಿದ್ದು | ಇನ್ನೇನು ಫಲವು || ||೧೦೧||

ಅಸುರರೊಳಗಾರಿಹರು | ಅಸಮಸಾಹಸರೆಂದು |
ಕುಶಲದೊಳು ಕರೆದೆಂದ | ತ್ರಿಶಿರನೆಂಬವನ || ||೧೦೨||

ರಾಮಲಕ್ಷ್ಮಣರ ನಿ | ರ್ನಾಮವೆಸಗುತ ರಣದಿ |
ಕಾಮಿನಿಯ ತಾರೆಂದ | ಕಡುತವಕದಿಂದ || ||೧೦೩||

**ಕಂದ**

ಅಗ್ರಜನಾಡಿದ ಮಾತಿಗೆ
ಉಗ್ರಾಂತದಿ ತ್ರಿಶಿರನಾಗ ಚಾಪವ ಕೊಂಡುಂ |
ಶೀಘ್ರದಿ ಬಂದಾವನದೊಳು
ಭೋರ್ಗರೆಯುತ ಪರ್ಣಶಾಲೆಯಡೆಗೈತಂದಂ || ||೧೦೪||

**ರಾಗ ಮಾರವಿ ಮಟ್ಟೆತಾಳ**

ಆರೆಲೋ ಮುಂದಿರುವ ಧೀರನೇ | ಸಂಗ್ರಾಮಶೂರ |
ನಾರೆಲೋ ಮುಂದಿರುವ ಧೀರನೆ || ಪಲ್ಲವಿ ||

ಮೂರು ತಲೆಯ ನೋಡೊ ಯೆನ್ನ | ಶೂರತನವು ಬೇಡ ನಿನ್ನ |
ಬೇರುಸಹಿತ ಕಡಿದು ಕೊಚ್ಚಿ | ನೂರು ಚೂರು ಮಾಳ್ಪೆನೀಗ || ||೧೦೫||

ತಂಗಿಯಾದ ಶೂರ್ಪಣಖೆಯ | ಹೆಂಗುಸೆಂದು ನೋಡದವಳ |
ತುಂಗಕುಚವ ಕೊಯ್ದು ನಾಸಿ | ಕಂಗಳನ್ನೆ ತರಿದ ಮೂಢ || ||೧೦೬||

ಪುಂಡುಹುಡುಗ ಲಕ್ಷ್ಮಣನ | ಕಂಡಮಾತ್ರದಲ್ಲಿ ಮುನ್ನ |
ಖಂಡಖಂಡವಾಗಿ ಕಡಿದು | ಕೆಂಡದಲ್ಲಿ ಸುಟ್ಟು ತಿನುವೆ || ||೧೦೭||

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಈ ಪರಿಯಲಿ ಭಾಷೆಗಳನು | ಭೂಪನೊಡನೆ ಪೇಳಿ ಕೈಯ |
ಚಾಪವನ್ನು ನೆಗಹಿಶರವ | ತಾಪದಿಂದ ಬಿಡಲು ರಾಮ |
ಮಾಪುಗೆಯ್ದು ತಿರುಗಿ ನೋಡಿದ | ಬಳಿಕ ಸುಪ್ರ |
ತಾಪದಿಂದ ಶರವ ಹೂಡಿದ | ದನುಜರೊಡನಾ |
ಟೋಪದಿಂದ ಯುದ್ಧ ಮಾಡಿದ ||
ಆರೆಲೋ ಮದಾಂಧವೀರನೆ || ||೧೦೮||

ಜಡಿದು ಚಾಪದಿಂದ ಬಾಣ | ಬಿಡಲು ಗಿರಿಗಳದಿರುವಂತೆ |
ನಡುಗೆ ಮುನಿಗಳಸುರಗಂಜಿ | ಧಡಿಗ ದೈತ್ಯನಾರಭಟೆಗೆ |
ಮಡದಿ ಬಾಯ ಬಿಡುತಲಿರ್ದಳು | ಲಕ್ಷ್ಮಣಾಖ್ಯ |
ನೆಡೆಗೆ ಬೇಗದಿಂದ ಸಾರ್ದಳು | ಧುರವ ಕಾಣು |
ತೊಡನೆ ಮನದಿ ಬೆದರುತಿರ್ದಳು ||
ಏನನೆಂಬೆನಂದಿನಾಹವ || ||೧೦೯||

ದುಷ್ಟ ದನುಜನೊಡನೆ ತಾನಿ | ನ್ನೆಷ್ಟು ಕಾದಲೆನುತ ಶರವ |
ಬಿಟ್ಟು ರಾಮ ಕಣನೊಳಿ | ದ್ದಷ್ಟು ಬಲವನೆಲ್ಲ ಯಮನ |
ಪಟ್ಟಣಕ್ಕೆ ಸೇರಿಸಿರ್ದನು | ಜನಕ ಸುತೆಯ |
ನೆಟ್ಟ ಭಯವ ಹಾರಿಸಿರ್ದನು | ಮಡಿದ ಹೆಣನ |
ಬೆಟ್ಟ ಸತಿಗೆ ತೋರಿಸಿರ್ದನು ||
ಪೇಳಲೇನು ರಣಚರಿತ್ರವ || ||೧೧೦||

ಈಸು ಬಲವನೆಲ್ಲ ಸವರಿ | ದಾ ಸಾಮರ್ಥ್ಯಗಳ ಕೇಳಿ |
ಮೋಸಗತಿಯೊಳಿವರ ಗೆಲ್ವ | ಭಾಷೆಯನ್ನು ಹೂಡಿ ಬಂದ |
ದೂಷಣಾಸುರನ್ನ ಮಡುಹಿದ | ಅವನ ತಲೆಯ |

ಗಾಸಿಮಾಡಿ ಧರೆಗೆ ಕೆಡಹಿದ | ರಘುಜ ಮಹೋ |
ಲ್ಲಾಸದಿಂದ ಶರವ ತುಡುಕಿದ ||
ಒರೆಯಲೇನು ಧುರದ ಭಂಗವ | | | |೧೧೧||

**ವಾರ್ಧಕ**

ತ್ರಿಶಿರಮೊದಲಾಗಿ ದೂಷಣ ಭಂಡ ಸಹಿತ ರಾ
ಕ್ಷಸರೆಲ್ಲ ಬಂದು ಕಾಳೆಗಗೊಟ್ಟು ಮಡಿಯೆ ನಾ
ಲ್ದೆಸೆ ತುಂಬುವಂತೆ ಮಾರ್ಬಲವೆರಸಿ ಬಂದು ಖರನೆಂಬಸುರನಿದಿರಾದನು |
ಮಸೆದಲಗು ಕಣೆಯ ಕಂಪಣ ಶೂಲ ಖಡ್ಗ ಪೆ
ರ್ಮುಸಲ ಮುದ್ಗರ ಪಿಂಡಿವಾಳ ಪಟ್ಟಸವೆಂಬ
ಪೆಸರಾಯುಧಂಗಳಂ ತೆಗೆದು ಮುಂದಿಳುಹಿಯಾರ್ಭಟಿಸಿದಂ ರೋಷದಿಂದ || | |೧೧೨||

**ರಾಗ ಶಂಕರಾಭರಣ ಮಟ್ಟೆತಾಳ**

ಘೋರ ರೂಪಿನಿಂದ ಖರನು | ಭಾರಿಶರವನೆಸೆಯಲದನು |
ವೀರ ರಾಘವಾಂಕ ಕಡಿದು | ವಾರಣಿಸಿದನು ||
ಬೇರೆ ಮತ್ತೊಂದು ಬಗೆಯ | ಭಾರಿ ಬಾಣವೆಸೆಯಲದರ |
ಬೇರ ಕಡಿದು ಬಿಸುಟ ರಾಮ | ಧಾರಿಣಿಯಲಿ || ||೧೧೩||

ಭೋರ್ಗುಡಿಸುತ ಖರನು ಬಹಳ | ಉಗ್ರದಿಂದಲಾರ್ಭಟಿಸಲು |
ಸ್ವರ್ಗಲೋಕ ಸಹಿತಲಿಳೆಯ | ಗರ್ಭ ನಡುಗಿತು ||
ಅರ್ಗಳಾಸ್ತ್ರ ಪಿಂಡಿವಾಳ | ಮುದ್ಗರ ಮೃಸುಂಡಿಗಳನು |
ದೀರ್ಘದಿಂದ ಬಿಡಲು ದನುಜ | ಭಾರ್ಗವಾರಿಗೆ || ||೧೧೪||

ತಂಡ ತಂಡದಾಯುಧಗಳ | ತುಂಡು ತುಂಡು ಮಾಡಿ ರಾಮ |
ಕೆಂಡ ಕಣ್ಣೊಳುದಿರೆ ಕೋಪ | ಗೊಂಡು ಜರೆಯುತ ||
ಗಂಡುಸಹುದೊ ಭಳಿರೆ ನಿನ್ನ | ಕಂಡೆ ಶೌರ್ಯಗಳನು ಮುನ್ನ |
ಭಂಡ ಫಡ ಫಡೆನುತ ಧನುವ | ಖಂಡಿಸಿರ್ದನು || ||೧೧೫||

ಬಿಟ್ಟು ಚಾಪವನ್ನು ಖರನು | ಮುಷ್ಟಿಯಿಂದ ತಿವಿಯೆ ರಾಮ |
ಹೊಟ್ಟೆಯೂರಿ ಬಿದ್ದ ಸೀತೆ | ನಟ್ಟನಡುಗಲು ||
ಕೆಟ್ಟೆನೆಂದು ಬೆದರುತಿರ್ದ | ಳಷ್ಟರೊಳಗೆ ಎದ್ದು ರಾಮ |
ದುಷ್ಟನಿಗ್ರಹಕ್ಕೆ ಮನವ | ಕೊಟ್ಟನಾಗಲೇ || ||೧೧೬||

ಮತ್ತೆ ತೆಗೆದು ಮೂಲಶರವ | ಶಕ್ತಿಯಿಂದ ತೊಡಿಸಿ ತಿರುವ |
ನೆತ್ತಿ ಸೆಳೆದು ಬಿಡಲು ಬೆದರಿ | ತಾ ತ್ರಿಲೋಕವು ||
ಮೃತ್ಯುಬಾಯಿದೆರೆದ ತೆರದಿ | ಸುತ್ತಿಶರವು ಹೂಂಕರಿಸುತ |
ಮಸ್ತಕಕ್ಕೆ ತಗಲಿ ಕೊರಳ | ಕತ್ತರಿಸಿದುದು || ||೧೧೭||

**ಮತ್ತೇಭವಿಕ್ರೀಡಿತ**

ಇನವಂಶಾಂಬುಧಿಚಂದ್ರ ರಾಘವ ಮಹಾರಕ್ಷೌಘಮಂ ಕೊಲ್ಲಲುಂ
ಮನಸಂತೋಷದೊಳಿರ್ದರಿತ್ತಲು ಮಹಾಮೌನೀಜನಂ ತೋಷದಿ |
ಅನುವಂ ಕಂಡುರೆ ದೇವದುಂದುಭಿಗಳುಂ ಧ್ವನಿಗೆಯ್ಯಲಾಕಾಶದಿ
ಇನಿತಾನಂದದಿ ಮಂಗಳೋತ್ಸವ ಮಹಾ ಶ್ರೀರಾಮನಿಂಗಾದುದು || ||೧೧೮||

**ರಾಗ ರೇಗುಪ್ತಿ ಏಕತಾಳ**

ಜಯ ರಾಘವೇಂದ್ರ | ಶ್ರೀರಾಮಚಂದ್ರ |
ಜಯ ಜಯತು ರಾಘವೇಂದ್ರ || ಪಲ್ಲವಿ ||

ಶರಧಿತನುಜೆಯರ | ಸಾ ಜನರಂಜನ |
ಉರಗಶಯನ ಪಂ | ಕಜನಾಭ |
ವರಅಹಲ್ಯಾಸತಿ | ಪಾಪವಿಮೋಚನ |
ದುರಿತದುರ್ಗಸಂ | ತರಣಗುಣ || ||೧೧೯||

ಕೌಸಲ್ಯಾಹೃದ | ಯಾಬ್ಧಿ ಚಂದ್ರ ಇನ |
ವಂಶರತ್ನ ತಾಟ | ಕೀಹರಣ |
ವಿಶ್ವರೂಪ ವಿ | ಶ್ವಾತ್ಮಕ ನರಹರಿ |
ವಿಶ್ವವಂದ್ಯ ಬಹು | ವಿಶ್ವಮಯ || ||೧೨೦||

ಸಾಕೇತಾಗ್ರಣಿ | ಸರ್ವೋತ್ತಮ ಸುರ |
ಲೋಕನಾಥ ಮಂ | ಗಲರೂಪ || ||೧೨೧||

**ರಾಗ ಧವಳಾರ (ಸೌರಾಷ್ಟ್ರ) ಏಕತಾಳ**

ಮಂಗಲಂ | ಶ್ರೀರಾಮ ಚಂದ್ರನಿಗೆ || ಪಲ್ಲವಿ ||

ಹೃದಯಕಮಲವೆಂಬ | ಹರಿವಾಣದೊಳು ದಿವ್ಯ |
ಸದಮಲ ಭಕ್ತಿರ | ಸದ ತೈಲದಿ |

ಪದುಮನಾಭನ ನಾಮ | ವೆಂಬ ಜ್ಯೋತಿಯ ತಂದು |
ಮುದದಿಂದ ಜ್ಞಾನದಾ | ರತಿಯೆತ್ತಿರೇ || ಮಂಗಲಂ || ||೧೨೨||

ದಶರಥನುದರದಿ | ಜನಿಸಿ ವಿಶ್ವಾಮಿತ್ರ |
ಋಷಿಯ ಮಾತಿನಲಿ ತಾ | ಟಕಿಯ ಕೊಂದು |
ಪಶುಪತಿಧನುವೆತ್ತಿ | ಪರಶುರಾಮನ ಗೆದ್ದ |
ವಸುಧಾಪಾಲಕನಿಗಾ | ರತಿಯೆತ್ತಿರೇ || ಮಂಗಲಂ || ||೧೨೩||

ಪಿತನ ವಾಕ್ಯವ ಕೇಳಿ | ಸೌಮಿತ್ರಿಯೊಡಗೂಡಿ |
ಸತಿಸಹಿತವೆ ಪಂಚ | ವಟಿಗೆ ಬಂದು |
ಖತಿಯಿಂದ ಖರದೂಷ | ಣರ ಕೊಂದು ಶರಣ ಸಂ |
ತತಿಯ ರಕ್ಷಿಸಿದಂಗಾ | ರತಿಯೆತ್ತಿರೆ || ಮಂಗಲಂ || ||೧೨೪||

ಸಾಕೇತ ಪುರವಾಸ ಸರ್ವಲೋಕಾಧೀಶ |
ಮಾಕಾಂತಮಹಿಮ ಮಂ | ಗಲರೂಪಗೆ |
ಲೋಕೇಶಜನಕ ಮೂ | ಲೋಕವಂದಿತನಿಗೆ |
ಸಾಕಾರಮೂರ್ತಿಗಾ | ರತಿಯೆತ್ತಿರೇ || ಮಂಗಲಂ || ||೧೨೫||

**ವಾರ್ಧಕ**

ಬಾಲಕರು ಕೇಳಿಂತು ಪಂಚವಟ್ಯದ ವನದಿ
ಖೂಳ ಖರದೂಷಣರ ಸಂಹರಿಸಿಯಾ ವನವ
ಪಾಳುಮಾಡುತವೆ ಋಷಿಗಳಿಗೆ ಮತ್ತಾವನದಿ ಕಾಲೋಚಿತಂ ಗೆಯ್ದುರು |
ಮೇಲಲ್ಲಿ ಲವಕುಶರ ಕೂಡೆ ವಾಲ್ಮೀಕಿಮುನಿ
ಪೇಳಿದೀ ಸಂಧಿಯ ಪ್ರಸಂಗವನು ಧರೆಯೊಳಗೆ
ಹೇಳಿ ಕೇಳುವರನುಂ ಕಣ್ವಪುರದೊಡೆಯ ಗೋಪಾಲ ರಕ್ಷಿಸುವ ಬಿಡದೆ || ||೧೨೬||

**|| ಗೋಪಾಲಕೃಷ್ಣಾಯ ನಮಃ ||**

|| ಪಂಚವಟಿ ಪ್ರಸಂಗ ಮುಗಿದುದು ||

**ವಾರ್ಧಕ**

ಭರತ ಚತುರಂಗ ಸೇನೆಯನೆಲ್ಲ ಕರಕೊಂಡು
ಸಿರಿರಾಮಚಂದ್ರಗಭಿವಂದಿಸುತ ತಿರುಗಿದಂ
ವರಮಾತೆಯರ ಸಹಿತ ಗಂಗಾನದಿಯ ದಾಂಟಿ ಪುರಕೆ ಕಳುಹಿಸುತೆಲ್ಲರ |
ಇರಿಸಿ ನಿಜ ಪಟ್ಟಣಕೆ ಶತ್ರುಘ್ನನಂ ತಾನು
ಕರುಣಾಳು ಶ್ರೀರಾಮನಂಘ್ರಿಯಂ ಧ್ಯಾನಿಸುತ
ಇರಲು ನಂದಿಗ್ರಾಮದೊಳಗಿತ್ತ ರಾಮ ಮುನಿವರರ ಕೂಡಿಂತೆಂದನು || ||೧||

**ರಾಗ ಶಂಕರಾಭರಣ ರೂಪಕತಾಳ**

ಬಂದು ಬಹಳ ದಿವಸ ನಮ್ಮ | ಸಲಹಿಕೊಂಡಿರಿ |
ಇಂದು ಪರ್ಯಂತ ನಮ್ಮ | ನುಳುಹಿಸಿಕೊಂಡಿರಿ || ||೨||

ಮುಂದೆ ಪೋಪೆವಿನ್ನು ನಾವು | ಕಳುಹಿ ನಮ್ಮನ್ನು |
ಒಂದು ದಿನವೂ ಮರೆವುದಿಲ್ಲ | ಮುಂದೆ ನಿಮ್ಮನು || ||೩||

ದಂಡಕಾರಣ್ಯದೆಡೆಗೆ | ದಾರಿಯಾವುದು |
ಹಿಂಡು ಮುನಿಗಳಿಪ್ಪ ವನದ | ತಂಡವಾವುದು || ||೪||

ಎನುತ ರಾಮ ಕೈಯ ಮುಗಿದು | ಕೇಳ್ದ ಮಾತಿಗೆ |
ಮುನಿಗಳೆಲ್ಲ ಗುರುತವನ್ನು | ಪೇಳ್ದರಾತಗೆ || ||೫||

ಮುಂದೆ ರಾಮ ನಡುವೆ ಸೀತೆ | ಹಿಂದೆ ಲಕ್ಷ್ಮಣ |
ಒಂದೆ ಮತದಿ ಚಿತ್ರಕೂಟ | ದಿಂದ ಪೊರಟರು || ||೬||

ಬನ್ನಬಡಿಸಿ ಶಂಬುಕಾಸು | ರನ್ನ ಗೆಲಿದರು |
ಬಿನ್ನವಿಸುವ ಋಷಿಗಳಾಶ್ರ | ಮವನು ಕಳೆದರು || ||೭||

**ವಾರ್ಧಕ**

ಗಿರಿಸರಸಿ ಕಾನನಂಗಳೊಳು ಗುಹೆ ಕಲ್ಲಿನೊಳು
ತೆರಳಿ ಬಂದವರು ಬಹುದಿವಸ ಉಪವಾಸದಿಂ
ದಿರಲು ಚಳಿಗಾಳಿ ಬಿಸಿಲ್ ಬೇಸರಿಕೆಯೆಣ್ಣೆ ನೀರಿಲ್ಲದಾಸರಿನಟ್ಟುಳಿ |
ಬರದ ನಿದ್ರೆಯ ರಾಕ್ಷಸರ್ಕಳಾರ್ಭಟೆ ಕೂಡೆ
ಪಿರಿದಾದ ಸಿಂಹಶಾರ್ದೂಲಗರ್ಜನೆಯ ನಿ
ಷ್ಠುರಕೆ ಬಸವಳಿದೊಂದು ದಿನ ತನ್ನ ಕಾಂತಂಗೆ ಧರಣಿನಂದನೆ ನುಡಿದಳು || ||೮||

**ರಾಗ ಘಂಟಾರವ ಏಕತಾಳ**

ಕಾಂತ ರಾಮಚಂದ್ರದೇವ | ಚಿಂತೆ ಹೆಚ್ಚಿತೆನ್ನ ಜೀವ |
ಅಂತರಿಸಲಾರೆನೀಗ | ಇಂತು ಪೋಪುದೇಕೊ ಬೇಗ || ||೯||

ನಡೆಯಲಾರೆನಯ್ಯೊ ಮುಂದೆ | ಅಡವಿಯಲ್ಲೊ ನೋಡು ಹಿಂದೆ |
ನಡುಗುತಿದೆನ್ನ ಕೈಕಾಲು | ಒಡೆದುದೇತಕಯ್ಯೋ ಹೇಳು || ||೧೦||

ಜನಕರಾಯನನು ಕಾಣದೆ | ಮನಸು ಬಹಳ ಕರಗುತಿದೆ |
ಕನಸಿನಲ್ಲಿ ಕಂಡೆ ತಾಯ | ನೆನಸಿ ಬಡವಾದೆ ಪ್ರೀಯ || ||೧೧||

**ವಾರ್ಧಕ**

ಬಸವಳಿದು ಸೀತೆ ಮೈಗುಂದಿ ಕಾಲೊಡೆದು ನೆರೆ
ಬಸಿವರುಣಧಾರೆಯಲಿ ಬಟ್ಟೆ ಕೆಸರಾಯ್ತು ಮಾ
ತುಸುರಲಾರದೆ ಬಿದ್ದಳಬುಜಾಕ್ಷಿ ತಲೆತಿರುಗಿ ಕಣ್ಣಾಲಿ ಮೇಲೊತ್ತಿತು ||
ಕುಶನೆ ಕೇಳಿದನು ಲಕ್ಷ್ಮಣ ಕಂಡು ರಾಮನೊಡ
ನುಸುರೆ ರಘುಕುಲ ತಿಲಕ ಕಮಲದೆಲೆಯಲಿ ನೀರ
ಪಸರಿಸುತ ಕಣ್ಣಿಗೊತ್ತ್ಯಮೃತಹಸ್ತದಿ ತನುವ ತಡವರಿಸುತಿಂತೆಂದನು || ||೧೨||

**ರಾಗ ವರಾಳಿ ಆದಿತಾಳ**

ದೃಷ್ಟಿಸಿ ನೋಡಿದೆಯೇನೊ | ತಮ್ಮಾ ತಮ್ಮಾ || ಜಾನಕಿ ಬಂದು |
ಕಷ್ಟ ಬಟ್ಟಳಲ್ಲೊ ಬರಿದೆ | ತಮ್ಮಾ ತಮ್ಮಾ ||
ಹೊಟ್ಟೆಗನ್ನವಿಲ್ಲದೆ ನಡೆದು | ತಮ್ಮಾ ತಮ್ಮಾ || ಅದರಿಂದ ಕಂ |
ಗೆಟ್ಟು ಮೂರ್ಛೆಹೋದಳಲ್ಲೊ | ತಮ್ಮಾ ತಮ್ಮಾ || ||೧೩||

ಜನಕನುದರದಲ್ಲಿ ಜನಿಸಿ | ತಮ್ಮಾ ತಮ್ಮಾ | ಎನ್ನ ಕೈವಿಡಿದು |
ಇನಿತು ಭಾಗ್ಯ ಉಂಡಳಲ್ಲೊ | ತಮ್ಮಾ ತಮ್ಮಾ ||
ಘನತೆಯಿಲ್ಲ ಇನ್ನಿವಳಿಂದ | ತಮ್ಮಾ ತಮ್ಮಾ | ಅಯೋಧ್ಯೆಯಲ್ಲಿ |
ವನಿತೆಯನ್ನು ಬಿಟ್ಟು ಬಾರೊ | ತಮ್ಮಾ ತಮ್ಮಾ || ||೧೪||

**ರಾಗ ಪಂತುವರಾಳಿ (ಪಂಚಘಾತ) ಮಟ್ಟೆತಾಳ**

ರಘುಕುಲೇಂದ್ರ ರಾಮ ನಿನ್ನ | ಅಗಣಿತಾಶ್ರಯವ ಬಿಟ್ಟು |
ಅಗಲಲಾರೆ ನಿಮಿಷ ತವ | ಪಾದದಾಣೆಗೊ || ||೧೫||

ನೀರ ನಿನ್ನನಿಲ್ಲಿ ಬಿಟ್ಟು | ಊರೊಳೇನು ಭಾಗ್ಯವುಣಲಿ |
ಬೇರೆ ಮತಗಳಿಲ್ಲವಯ್ಯ | ನೀರಜೇಕ್ಷಣ || ||೧೬||

ಎನಲು ಸೀತೆ ರಾಮನತ್ರಿ | ಮುನಿಪನಾಶ್ರಮಕ್ಕೆ ಬರಲು |
ಘನವಿವೇಕದಿಂದ ತಿಳಿದು | ಧರ್ಮಶಾಸ್ತ್ರವ || ||೧೭||

ಅನಸೂಯಾದೇವಿ ಭೂ | ಷಣವ ಕೊಡಲು ತೆಗೆದುಕೊಂಡು |
ಮನದ ಹರುಷದಿಂದಲಲ್ಲಿ | ದಿನವ ಕಳೆದರು || ||೧೮||

**ವಾರ್ಧಕ**

ತಿಂಗಳತ್ರಿಯ ಮುನಿಪನಾಶ್ರಮದೊಳಿರ್ದು ರಘು
ಪುಂಗವಂ ಬಳಿಕೆದ್ದನಲ್ಲಿಂದ ಮುಂದೆ ಕರು
ಣಂಗಳಿಂ ಜಮದಗ್ನಿಯಂ ಕಂಡು ಖಳವಿರಾಧನ ಮುರಿದು ಮಾರ್ಗದೊಳಗೆ |
ಕಂಗೊಳಿಪ ದಂಡಕಾರಣ್ಯಕೈತಂದು ಶರ
ಭಂಗಋಷಿಯಂ ಕಂಡು ಮೈತ್ರಾವರುಣಿಯಲ್ಲಿ
ಸಂಗಡಿಸಿ ಮೂವತ್ತು ದಿವಸ ಬಳಿ ಕೈ ತಂದು ಕುಂಭಸಂಭವನಲ್ಲಿಗೆ || ||೧೯||

**ರಾಗ ಕಾಂಭೋಜಿ ಏಕತಾಳ**

ರಾಮ ಹರೇ | ರಘು | ರಾಮ ಹರೇ |
ಭೂಮಿಪಾಲಕ ಚಾರು | ಶೀಲ ಸಜ್ಜನಪಾಲ || ಪಲ್ಲವಿ ||

ಖರದೂಷಣ ದಶ | ಶಿರ ಮುಂತಾದಸುರರ |
ಶಿರವ ಕತ್ತರಿಸುವ | ಶರವಿದೇ ಸಹಜ || ||೨೦||

**ಕಂದ**

ಚಾಪವ ಕೊಟ್ಟ ಮುನೀಂದ್ರಗೆ
ಭೂಪಾಲಕ ಕೈಯ ಮುಗಿದು ಪೊರಟಲ್ಲಿಂದಂ |
ಈ ಪರಿ ವನಗಳ ಕಾಣುತ
ತಾಪಸರಂ ಮನ್ನಿಸುತ್ತ ಸೀತೆಗೆ ಪೇಳ್ದಂ || ||೨೧||

**ದ್ವಿಪದಿ**

ಕಂಡೆಯಾ ಜನಕಸುತೆ ಕಡುವಿಚಿತ್ರಗಳ
ದಂಡಕಾ ವನದೊಳಿಹ ಸಕಲವಸ್ತುಗಳ || ||೨೨||

ಇದೆ ಲವಂಗ ವಿಳಂಗ ಕುರವಕವು ಬದರಿ
ಇದೆ ಕಕ್ಕೆ ಕಲಗು ಕಮ್ಮರ ಕಡಿಕು ಕದಳಿ || ||೧೩||

ಆಲ ಲಂಬಟೆ ಕಣಿಲು ಬೆಟ್ಟು ಬೊಬ್ಬುಳಿಯು
ಸಾಲ ಕಿತ್ತಿಳೆ ಪನಸ ಬಿಲ್ವ ಸಮಿಧೆಗಳು ||೧೪||

ತೂಗುತಿಹ ಚೂತಫಲವಿದೆ ಸುತ್ತಮುತ್ತ
ಪೂಗ ಪುನ್ನಾಗ ಕಲ್ಲರಳಿಯಶ್ವತ್ಥ || ||೧೫||

ಇದೆ ತವಸೆ ತಡಸೆ ತಂಡಸಿಲೆ ರೆಂಜೆಗಳು
ಇದಕೊ ರುದ್ರಾಕ್ಷಿ ಖರ್ಜೂರ ಬೆಳಲೆಗಳು ||೧೬||

ಬಿದಿರು ಬಿಲವಟ್ಟಾಲ ಬೀಜಪುರ ಮತ್ತಿ
ಇದೆ ನೆಲ್ಲಿ ಮಧುಕ ಮಾದಳ ಮರುಗ ಇತ್ತಿ || ||೧೭||

ಕಲ್ಲತ್ತಿ ಕದವು ಕಾಲತಿ ಕಟ್ಟು ಸೋದಿ
ಬೆಲ್ಲವತ್ತವು ಕಪಿತ ಸುರಹೊನ್ನೆ ಬೋದಿ || ||೧೮||

ಚಿತ್ತವರೆ ಯಣಿಲೆ ಮುಳುಮುತ್ತುಗಾದಿಗಳ
ಮತ್ತೆ ನೋಡಿಲ್ಲಿರುವ ಕರ್ಣಿಕಾರಗಳ || ||೧೯||

ಹಿಂತಾಳ ಹಾಲೆ ಹಿಪ್ಪಲಿ ಹುಗಿಲು ಹಗುಳ
ಮುಂತಾದ ಮಿಕ್ಕುಳ್ಳ ಗುಗ್ಗುಳಾದಿಗಳ || ||೨೦||

ಕಲ್ಲರಳಿ ಕರ್ಪೂರ ಕೊಡಸಿಗೆಯು ಮೊದಲ
ವೆಲ್ಲ ತರ ವೃಕ್ಷಗಳ ಕಂಡೆಯಾ ಬದಲ || ||೨೦||

ಕಡವು ಕಾತರು ಜಾಲಿ ಕೈಸೋರೆ ಬೇಲ
ಗಿಡಗಳು ಕಪಿತ್ಥ ಸುರಹೊನ್ನೆಗಳ ಸಾಲ || ||೨೧||

ಚಾರು ಜಂಬೀರ ವರನಾಗಚಂಪಕವ
ಗೇರು ಗಾವಟೆ ಚಳ್ಳೆ ತಿಲಕ ತರುಕುಲವ || ||೨೨||

ಇದೆ ಬಾಗೆ ಸೀಗೆ ಮೊದಲಾದ ತರುಚಯವ
ಸುದತಿಮಣಿ ನೋಡಿತ್ತ ವನದ ಸಂಭ್ರಮವ || ||೨೪||

ಹರಿ ಕ್ರೋಢ ಖಡ್ಗಿಯ ಕರಂಗಿ ಕಡಸಗಳ
ಶರಭ ಶಾರ್ದೂಲ ಸಾರಂಗ ಕರಡಿಗಳ || ||೩೬||

ಕಾಡಾನೆ ಕಾಳ್ಕೋಣ ಕಾಡೆಮ್ಮೆಗಳನು
ಕಾಳ್ನಾಯಿ ಕಾಡ್ಕೋಳಿ ಕಾಳ್ಬೆಕ್ಕುಗಳನು || ||೩೯||

ಚಾತಕ್ಕಿ ಬೋಳಕ್ಕಿ ಜಕ್ಕವಕ್ಕಿಗಳ
ನೂತನ ಕಳಿಂಗ ಗೊರವಂಕ ಗುಬ್ಬಿಗಳ || ||೩೭||

ಕೋಡಗಗಳುರಿಗಣ್ಣ ಜಂಬುಕಾದಿಗಳ
ಕಾಡೊಳೋಡಾಡುತಿಹ ಮೂಷಿಕಾದಿಗಳ || ||೩೮||

ಕಸ್ತೂರಿಮೃಗ ಚಮರಿ ಗರಗ ಮತ್ತಿರವ
ಇತ್ತನೋಡ್ ಮುಂಗುಲಿಯ ಚಂದದಾನನವ || ||೩೯||

ಶುಕಪಿಕಂಗಳ ಕೇಳು ನುಡಿಯ ಗಾನಗಳ
ನಿಖಿಲ ವನದಲಿ ನೋಡು ಸಕಲ ವಸ್ತುಗಳ || ||೪೦||

ಇಂತೆಂದು ತೋರಿಸುತ ನಡೆತಂದರಂದು
ಕಾಂತೆ ಜಾನಕಿಸಹಿತ ಪಂಚವಟಿಗಂದು || ||೪೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೋಡಿ ನಿರ್ಮಲ ಜಲಸಮೀಪದಿ |
ಮಾಡಿಕೊಂಡರು ಪರ್ಣಶಾಲೆಯ |
ರೂಢಿಪಾಲರು ಪಂಚವಟ್ಯದ | ಕಾಡಿನೊಳಗೆ || ||೪೨||

ವನದ ಫಲಗಳ ಕೊಯ್ದು ಲಕ್ಷ್ಮಣ |
ದಿನದಿನವರಿಗೆ ತಂದುಕೊಡುವನು |
ವನದೊಳತಿಸುಖದಿಂದ ಕಳೆದರು | ದಿನವ ಕೆಲವು || ||೪೩||

ಒಂದು ದಿನ ಅಲ್ಲಿರುವ ಋಷಿಗಳು |
ಬಂದು ರಾಮನ ಚರಣಕೆರಗುತ |
ಲೆಂದರಾ ರಾಕ್ಷಸರ ಕೃತ ನಿ | ರ್ಬಂಧಗಳನು || ||೪೪||

**ರಾಗ ಘರಜು ಅಷ್ಟತಾಳ**

ಚಿತ್ತೈಸಯ್ಯ ರಾಮ ನಿನ್ನೆ | ಘೋರ ದನುಜನೊಬ್ಬ ಬಂದು |
ವ್ಯರ್ಥ ವಂಚಿಸುತ್ತ ನಮ್ಮ ನು | ಯಜ್ಞಶಾಲೆಯ |
ಕಿತ್ತು ಬೀಸಾಡಿ ಪೋದನು || ||೪೫||

ಮತ್ತೊಬ್ಬ ಖಳನು ದೂರ | ನಿತ್ತುಕೊಂಡು ಕಲ್ಲಲಿಟ್ಟು |
ಹತ್ತುಗಾಯವ ಮಾಡಿದ | ಮೂಗಿಂದ ಬಹ |
ನೆತ್ತರ ನೀನು ನೋಡಿದ್ಯಾ || ||೪೬||

ಭಂಡ ದೈತ್ಯರಿಬ್ಬರು ಮುಂ | ಕೊಂಡು ಬಂದು ನಮ್ಮ ಯಜ್ಞ |
ಕುಂಡಕೆಂಜಲನಿಟ್ಟರು | ವ್ಯಾಘ್ರಚರ್ಮವ |
ಕೊಂಡು ಕೂಡೆ ಓಡಿಪೋದರು || ||೪೭||

ಮೂರು ಮಂಡೆಯವನೊಬ್ಬ | ಘೋರದಾನವ ಬಂದು |
ನಾರುವಸ್ತ್ರವ ಸೆಳೆದ | ಜಪಗಳ ಮಾಳ್ಪ |
ಹಾರವ ಕಡಿದೋಡಿದ || ||೪೮||

**ವಾರ್ಧಕ**

ಎಂದು ಹುಯ್ಲಿಟ್ಟ ಋಷಿಗಳ ಮಾತ ಕೇಳ್ದು ರಘು
ನಂದನನು ನಸುನಗುತ ಬೆದರದಿರಿ ರಕ್ಕಸರ
ಕೊಂದು ಕೊಡುವೆನು ತಾಳಿ ಕಿರಿದು ದಿನದೊಳಗೆ ತಾನೆಂದೊಡಂಬಡಿಸಿ ಬಳಿಕ |
ಹಿಂದೆ ಕಳುಹಿದನವರ ಸಂತಯ್ಸಿ, ಮುನಿವಧುಗ
ಳೆಂದ ಮಾತನು ನೆನೆದು ಜನಕಸುತೆ ಭೀತಿಯಲಿ
ನೊಂದುಕೊಂಡವಳಾಗಿ ಭಯದಿಂದ ಕಾಂತನೊಳು ಕರವ ಮುಗಿದಿಂತೆಂದಳು || ||೪೯||

**ರಾಗ ಎರುಕಲಕಾಂಭೋಜಿ ಏಕತಾಳ**

ವನಜಲೋಚನ ಕೇಳ್ ಮುಂದೆ |
ಘನವಾದ ಘೋರಡವಿಯಂತೆ |
ಅನುವಿಲ್ಲದ ಗಹ್ವರವಂತೆ | ಅಲ್ಲಿ ರಕ್ಕಸರು |
ಮನೆ ಮಾಡಿಕೊಂಡಿಹರಂತೆ | ಹಿಂದೆ ಅನೇಕ |
ವನಿತೆಯರ ನೊಯ್ದಿಹರಂತೆ | ಈ ವಿಪಿನದೊಳಿರುವದು ಕಷ್ಟ ರಾಘವ || ||೫೦||

ರಾತ್ರಿಂಚರನಾಥನಾಗಿ |
ಮತ್ತೊಬ್ಬ ಖಳನಿರುವನಂತೆ |
ಮಸ್ತಕಂಗಳು ಹತ್ತುಂಟಂತೆ | ಆ ಮೇಲವಗೆ |

ಹಸ್ತಂಗಳಿಪ್ಪತ್ತುಂಟಂತೆ | ಹಣ್ಣುಗಳೆಂಬ |
ಪಿತ್ತ ತಲೆಗೇರಿಹುದಂತೆ | ಈ ವಿಪಿನದೊಳಿರುವುದು ಕಷ್ಟ ರಾಘವ || ||೫೧||

**ವಾರ್ಧಕ**

ಅಗ್ಗಳದ ದನುಜರಟ್ಟುಳಿಯನಾಲಿಸಿ ರಾಮ
ಶೀಘ್ರದಿಂ ಜನಕನಂದನೆಗೆ ಧೈರ್ಯವ ಪೇಳಿ
ಉಗ್ರಶರಚಾಪಮಂ ಕೊಂಡು ಮನದೊಳಗೆ ಶೌರ್ಯಾಗ್ನಿಯಂ ಪ್ರಜ್ವಲಿಸಲು |
ಘೋರ್ಗರೆವ ರಕ್ಕಸರ ದಂಡು ಬಾಯ್ಬಿಟ್ಟೊದರೆ
ನಿರ್ಘೋಷದಬ್ಬರದ ಗಮಕದಾರ್ಭಟೆಯ ಸಿಡಿ
ಲೊಗ್ಗರದ ಬೊಬ್ಬೆಯಿಂ ಶೂರ್ಪಣಖೆ ಬಂದಳಾ ಕಾನನಕೆ ಕುಲಗೇಡಿಯು || ||೫೨||

**ರಾಗ ಕಲ್ಯಾಣಿ ಅಷ್ಟತಾಳ**

ಆರೆಲೋ ಮನುಜ | ಈ ವನದೊಳಿಪ್ಪ | ನಾರೆಲೋ ಮನುಜ || ಪಲ್ಲವಿ ||

ಬಾರಿ ಬಾರಿಗೆ ಮೆಯ್ಯ ವಾಸನೆ | ಬೀರುತಿದೆ ಪೊಸ ಗಮರು ನಿಶಿಚರ |
ವೀರರೆಲ್ಲರು ಬನ್ನಿ ನಮ್ಮಯ | ಪಾರಣೆಗೆ ತುತ್ತಾಗಿ ಬಂದವ |
ನಾರೆಲೋ ಮನುಜ || ||೫೩||

ಇಷ್ಟು ಕಾಲದೊಳೊಬ್ಬರಿಲ್ಲಿಗೆ | ಥಟ್ಟನೇ ತನಗಂಜಿ ಬಾರರು |
ದಿಟ್ಟರಿವರಿಂದಾರು ನೋಳ್ಪಡೆ | ದೃಷ್ಟಿಗೋಚರವಿಲ್ಲ ಬಂದವ ||
ನಾರೆಲೋ ಮನುಜ || ||೫೪||

ಖಂಡ ಖಂಡವ ಬೇರೆ ಬೇರೆ | ತುಂಡು ತುಂಡಾಗೆಸಗಿ ನುಂಗುವೆ |
ಕೆಂಡದಲೆ ಸುಟ್ಟವರೆಲುಬುಗಳ | ನುಂಡು ತೇಗುವೆನೀಗ ಬಂದವ ||
ನಾರೆಲೋ ಮನುಜ || ||೫೫||

**ಮತ್ತೇಭವಿಕ್ರೀಡಿತ**

ಇತಿಯಾ ರಾಕ್ಷಸಿ ಭೀಕರಾಕೃತಿಯೊಳುಂ ಕೂಗಿಟ್ಟು ಬಂದಿರ್ದಡಾ
ಪೃಥಿವೀ ತಗ್ಗಿತು ಪರ್ವತಂಗಳದಿರಲ್ ನಾಲ್ದೆಸೆಗಳಂಜುತ್ತಲೇ |
ಅತಿವೇಗಂ ರಘುವೀರ ಚಾಪಶರಮಂ ಪಿಡಿಯಲ್ಕೆ ಕಂಡಾಗಲೂ
ಮಿಥಿಲೇಂದ್ರಾಕುಲಜಾತೆಯಂಜಿ ಬಳಿಕಂ ತಾ ಕಾಂತಗಿಂತೆಂದಳುಂ || ||೫೬||

**ರಾಗ : ಘಂಟಾರವ ತ್ರಿವುಡೆತಾಳ**

ರಾಘವ ನೀ ಎನ್ನ ಬಿಟ್ಟು | ಪೋಗದಿರಯ್ಯ |
ಈಗ ಬಂದಳಾ ರಾಕ್ಷಸಿ | ಕೂಗುತಾಳೆ ಆರ್ಭಟಿಸಿ || ಪಲ್ಲವಿ ||

ಲಕ್ಷ್ಮಣ ತಾನೆಲ್ಲಿದ್ದಾನೊ | ರಾಕ್ಷಸಿಯ ಕಂಡನೇನೊ |
ದಾಕ್ಷಿಣ್ಯವಿಲ್ಲದೆ ನಮ್ಮ | ಭಕ್ಷಿಸುವಳು ನೋಡು ನೀನು || ||೫೭||

ವ್ಯರ್ಥವಾಗಿ ಬಂದೆವು ಮುನಿ | ಪೋತ್ತಮರ ಮಾತ ಮೀರಿ |
ಮೃತ್ಯು ಮುಂದೆ ಬಂದಳ್ ಮಾರಿ | ತುತ್ತುಗೊಂಬಳೊಂದೇ ಸಾರಿ || ||೫೮||

**ಭಾಮಿನಿ**

ಗುರು ವಸಿಷ್ಠಾದ್ಯಖಿಲ ಹಿರಿಯರ
ಚರಣಕಭಿವಂದಿಸುತ ಮೂವರು
ವರಮಹಾಮಂದಿರವ ಹೊರಟರು ಪೂರ್ವಮುಖವಾಗಿ |
ಕರದೊಳಗೆ ಬಿಲ್‌ಬಾಣ ಗಜರಥ
ತುರಗ ಸಂದಣಿಯಿಂದ, ಲೋಕದ
ನೆರವಣಿಯ ನಾರಿಯರು ನೆರೆದಿಂತೆಂದರೊಳಗೊಳಗೆ || ||೧೫೪||

**ರಾಗ ಆನಂದಭೈರವಿ ಆದಿತಾಳ**

ಅಕ್ಕ ನೋಡಿಂಥ ಬಾಲರ | ದೇಶಾಧಿಪ ವ |
ನಕ್ಕೆ ಕಳುಹುವನಲ್ಲೆ ||
ಮುಕ್ಕಣ್ಣ ಶಿವನೆ ಬಲ್ಲ | ಕೈಕೆ ತಾನಿಂಥ |
ಮಕ್ಕಳ ಹೆರಲಿಲ್ಲವೆ || ||೧೫೫||

ಹದಿನಾಲ್ಕು ವರುಷ ಬಿಟ್ಟು | ಕೌಸಲ್ಯಾದೇವಿ |
ಗೆದೆಯೆಂತು ನಿಲ್ವುದವ್ವ ||
ಮದನಕೋಟಿಸ್ವರೂಪ | ಲಕ್ಷ್ಮಣ ನೋಡೆ |
ಮದುಮಗನಂತಿರುವ || ||೧೫೬||

ಎಲ್ಲರಂತಲ್ಲವೆ ಜೀವ | ಸುಮಿತ್ರೆಗೇನು |
ಕಲ್ಲೆದೆಯಾಯಿತವ್ವ ||
ಫುಲ್ಲಲೋಚನೆ ಸೀತೆಯ | ತಾಯ್ತಂದೆಯರು |
ಎಲ್ಲಿಹರೇನಾಹರೊ || ||೧೫೭||

ಎಷ್ಟು ತಪವ ಗೈದರು | ಇಂಥಾಚೆಲ್ವರು |
ಪುಟ್ಟುವರೇನೆಯಕ್ಕ ||
ಸೃಷ್ಟಿಗೆ ಸೂರ್ಯರಲ್ಲೆ | ಹೀಗಾದ ಮೇಲೆ |
ಕೆಟ್ಟಿತಯೋಧ್ಯಾಪುರ || ||೧೫೮||

**ರಾಗ ಕಾಪಿ ಅಷ್ಟತಾಳ**

ಬಂದರು ರಾಮ ಲಕ್ಷ್ಮಣರು | ಆನೆ |
ಮಂದಿ ಕುದುರೆ ತೇರು ಸಂಗಡ ಬರಲು || ಪಲ್ಲವಿ ||

ಕೇರಿ ಕೇರಿಗಳೆಲ್ಲ ಕಳೆದು | ತಮ್ಮ |
ಊರು ತಾಯ್ತಂದೆಯ ಹಂಬಲ ತೊರೆದು |
ಏರುಕಂಬನಿ ಧರೆಗಿಳಿದು | ಮುಂದೆ |
ಸೇರಿಪ್ಪ ಸಂಸಾರ ಬಂಧನ ಹರಿದು || ||೧೫೯||

ಮಾತಾಪಿತರ ಮೊಗ ನೋಡಿ | ಸುಮ್ಮ |
ನೇತಕೆ ಕ್ಲೇಶವೆಂದೆನುತ ಮಾತಾಡಿ |
ಪ್ರೀತಿಯಿಂದವರ ಕೊಂಡಾಡಿ | ನಾನಾ |
ರೀತಿಯಿಂದೆಲ್ಲರೊಳಪ್ಪಣೆ ಬೇಡಿ || ||೧೬೦||

**ಭಾಮಿನಿ**

ಊರ ಹೊರವಂಟವರು ಗಂಗಾ
ತೀರಪರ್ಯಂತರದಿ ನಿಂತಾ
ಬೇರೆ ಬೇರೆಲ್ಲರಿಗೆ ಕರಗಳ ಮುಗಿದು ಬೀಳ್ಕೊಂಡು |
ಸಾರೆ ನದಿಯನು ಮಂತ್ರಿಸಹ ರಥ
ವೇರಿ ನಡೆದರು ಮುಂದೆ ಪಯಣದಿ
ಮೂರುದಿನ, ತಡೆನಿಂದು ರಾಮ ಸುಮಂತ್ರಗಿಂತೆಂದ || ||೧೬೧||

**ರಾಗ ನೀಲಾಂಬರಿ ಅಷ್ಟತಾಳ**

ಮಂತ್ರೀಶ ಕೇಳಯ್ಯ ನಿನ್ನೊಳು | ಪೇಳು |
ವಂಥದೇನುಂಟು ಬಲ್ಲವನೊಳು ||
ಚಿಂತಿಪ್ಪ ಜನಕ ಮುಪ್ಪಿನ ಕಾಲ | ಎಂದು |
ನೀಂ ತಿಳಿದೆಲ್ಲರ ಸಲಹಯ್ಯ || ||೧೬೨||

ಭರತಶತ್ರುಘ್ನರು ಬರಲಿಲ್ಲ | ಬೇಗ |
ಕರೆಸಿಕೊಳ್ಳಲಿ ಹೇಳು ಧರಣೀಶ |
ವರಜನನಿಯರು ಚಿಂತಿಸುವರು | ಭರತ |
ಗರುಹು ಚಂದದಿ ನೋಡಿ ಸಲಹಲಿ || ||೧೬೩||

ಮನಸಿನೊಳಗೆ ಭೇದವೆಣಿಸದೆ | ನಾ ಬಾ |
ಹನಕ ಒಕ್ಕಲುಗಳ ದಣಿಸದೆ |
ಘನತೆಗೆ ಕಡಿಮೆ ಎಂದೆನಿಸದೆ | ಧರ್ಮ |
ವೆನಿಸಿ ರಕ್ಷಿಸಹೇಳು ಭರತಗೆ || ||೧೬೪||

**ರಾಗ ಘರಜು ಏಕತಾಳ**

ಈ ತೆರದಲಿ ಮಂತ್ರಿಯ ಕಳುಹಿಸಿ ರಘು |
ನಾಥ ಮುಂದಡಿಯಿಡಲು |
ಸೀತಾದೇವಿಯು ಲಕ್ಷ್ಮಣ ಸಹ ಬರು |
ವಾತನ ಗುಹನು ಕಂಡು || ||೧೬೫||

ನೂತನವಿದು ದಶರಥನಣುಗರು ಬಹ |
ರೀತಿಯ ನೆರೆ ತಿಳಿದು ||
ಪ್ರೀತಿಯ ಕಾಣಿಕೆಯಿತ್ತಡಿಗೆರಗುತ |
ಮಾತಾಡಿಸುತೆಂದ || ||೧೬೬||

**ರಾಗ ಆಹೇರಿ ಮಟ್ಟೆತಾಳ**

ಎನ್ನಯ ಕುಲದೇವೇಶ | ರಾಮಚಂದ್ರ | ಪಾದ |
ವನ್ನು ಕಂಡು ಧನ್ಯನಾದೆ | ರಾಮಚಂದ್ರ ||
ಮನ್ನರಧಿಪತಿ ನೀನು | ರಾಮಚಂದ್ರ | ರಾಜ್ಯ |
ವನ್ನುಬಿಟ್ಟು ಪೋಪುದೇನು | ರಾಮಚಂದ್ರ || ||೧೬೭||

ಶರಣ ಗುಹನೆ ಬಾಬಾ ಯಾ | ರರಿಯದಂದದಿ | ನಮ್ಮ |
ಭರದಿ ಮೂವರನ್ನು ನದಿಯ | ಕರೆಗೆ ದಾಟಿಸೊ ||
ತರಣಿಯುದಯವಾದರಿಲ್ಲಿ | ದ್ದವರು ಕಂಡರೆ | ಸುಮ್ಮ |
ನಿರದೆಮಾಳ್ಪರು ಛಲವ | ಬರುವೆವೆಂಬರು || ||೧೬೮||

ಕಂಜದಳನೇತ್ರೆ ಸೀತೆ | ರಾಮಚಂದ್ರ | ಕಣ್ಗೆ|
ರಂಜಿಪ ಲಕ್ಷ್ಮಣನು ಸಹ | ರಾಮಚಂದ್ರ ||

ಸಂಜೆಯಾಯಿತೀಹೊತ್ತು | ರಾಮಚಂದ್ರ | ನಾಳೆ |
ಮುಂಜಾನೆ ಎದ್ದು ಪೋಗಿ | ರಾಮಚಂದ್ರ || ||೧೭೯ | |

**ವಾರ್ಧಕ**

ಗುಹನಿಂತು ಪ್ರಾರ್ಥನೆಯ ಮಾಡಿ ತಾ ಸಕಲ ಸ
ನ್ನಹವ ಕೊಟ್ಟಲ್ಲಿದ್ದರಾದಿವಸ ರಾತ್ರಿಯಲಿ
ಬಹು ಮುಂಚಿತಾಗಿ ಮರುದಿನ ಎದ್ದು ಬಂದು ಭಾರದ್ವಾಜನಂ ಕಂಡರು |
ವಿಹಿತ ಮಾರ್ಗದಲಿ ತಪಸಿರುವ ಮುನಿಗೆರಗಿದಡೆ
ಬಹುಮಾನದಿಂ ಪರಸಿ ಮನ್ನಿಸಿದನಿವರುಗಳ
ಅಹುದು ಇನಕುಲದರಸುಗಳು ನೀವು ಬಂದ ಹದನೇನೆಂದು ಬೆಸಗೊಂಡನು || ||೧೮೦||

**ರಾಗ ಘಂಟಾರವ ಝಂಪೆತಾಳ**

ದಶರಥ ನೃಪಾಲನೊಳು | ವಸುಧೆಯನು ಬೇಡಿ ಪೊರ |
ಡಿಸಿದಳೆಮ್ಮನು ಕೈಕೆ | ಕೇಳಯ್ಯ ಮುನಿಪ || ||೧೮೧||

ಬೇಡವೆಂದರೆ ಮಾತ | ಕೇಳದೀ ಜಾನಕಿಯು |
ಕೂಡಿ ಬಂದಳು ಅಳುತ | ಕಾಡೊಳಿರಲೆಂದು || ||೧೮೨||

ಯಾರು ಪೇಳ್ದರು ಮಾತ | ಮೀರಿ ಲಕ್ಷಣನೀತ |
ಸೇರಿ ಬಂದನು ವನವ | ಸುಖವೆಂದೆನುತ್ತ || ||೧೮೩||

ಈರೇಳು ವರ್ಷ ನಮ್ಮ | ಗಾರಣ್ಯದೊಳಗಿಹರೆ |
ತೋರಿಕೊಡಿ ಸುಸ್ಥಳವ | ಕಾರುಣ್ಯದಿಂದ || ||೧೮೪||

ಎನಲು ರಾಘವ ಕೇಳು | ಮುಂದಿರುವ ಪರ್ವತಕೆ |
ದನುಜರಟ್ಟುಳಿಯಿಲ್ಲ | ಭಯವಿಲ್ಲವಯ್ಯ || ||೧೮೫||

ದಿನದಿನಕೆ ಬೇಕಾದ | ಫಲಗಳಿವೆಯದರೊಳಗೆ |
ಅನುಮಾನ ಬೇಡ ಇರಿ | ಮನಶುದ್ಧವಾಗಿ || ||೧೮೭||

ಚಿತ್ರಮಯರಾಗಿರುವ | ಚಿತ್ರಮೂರುತಿಗಳನು |
ಚಿತ್ರಕೂಟಕೆ ಮುನಿಪ | ಕಳುಹಿಸಿದನಂದು || ||೧೮೮||

ಚಿತ್ರಮಯವೆಸೆವ ನವ | ಚಿತ್ರವನಗಳ ನೋಡಿ |
ಚಿತ್ತಶುದ್ಧಿಯೊಳಲ್ಲಿ | ಇರುತಿರ್ದರವರು || ||೧೮೯||

**ವಾರ್ಧಕ**

ಮತ್ತೆ ಬಹು ರಮ್ಯತರ ವನಗಿರಿಯ ಸೌಭಾಗ್ಯ
ಚಿತ್ರಕೂಟದೊಳಿರ್ದವರರಿತ್ತ ದಶರಥನೃ
ಪೋತ್ತಮನು ಕೌಸಲ್ಯೆಯರಮನೆಗೆ ಬಂದು ನಿಜಪುತ್ರರಂ ನೆನೆನೆನೆಯುತ |
ಚಿತ್ತದಲಿ ಕಡುನೊಂದು ಚಿಂತಿಸುವ ವೇಳೆಯಲಿ
ಹತ್ತಿರಕೆ ನಡೆತಂದ ಮಂತ್ರೀಶನಂ ಕಂಡು
ಉತ್ತರವ ಬೆಸಗೊಂಡನೆಲ್ಲಿಪರ್ಯಂತೆನ್ನ ಪುತ್ರರೈದಿದರೆನ್ನುತ || ||೧೭೯||

**ರಾಗ ಘಂಟಾರವ ಝಂಪೆತಾಳ**

ಮಂತ್ರಿ ಮಮ ಬಾಲಕರ | ನೆಲ್ಲಿ ಬಿಟ್ಟು ಬಂದೆ |
ಕಾಂತೆ ಜಾನಕಿ ನಡೆದು | ಪೋದಳೇ ಮುಂದೆ || ||೧೮೦||

ಬರುವ ಸಮಯಕೆ ರಾಮ | ಕರೆದುದೇತಕೆ ನಿನ್ನ |
ಬರುವೆನೆಂದನೆ ಹಂಬ | ಲವ ತೊರೆದನೇನ್ನೈ || ||೧೮೧||

ಈಸು ಭಾಗ್ಯವನೆಲ್ಲ | ಬಿಟ್ಟೆನ್ನಣುಗರು ವನ |
ವಾಸಕೈದಿದರಲ್ಲೊ | ಅಯ್ಯಯ್ಯೋವಿಧಿಯೆ || ||೧೮೨||

ತರಹರಿಸುತಿದೆ ಪ್ರಾಣ | ತಾನುಳಿವಪಾಡಿಲ್ಲ |
ಕರೆಸು ಭರತನ ಮಂತ್ರಿ | ಚಾರಕರ ಕಳುಹು || ||೧೮೩||

ಅರೆನಿಮಿಷಮಾತ್ರ ಯುಗ | ವಾಗುತಿದೆ ಎನಗೀಗ |
ತರುಣಿಯರ ಮೂವರನು | ಕರೆಸಯ್ಯ ಬೇಗ || ||೧೮೪||

**ರಾಗ ವರಾಳಿ ಏಕತಾಳ**

ಎಂದಿನಂತೇಕೆ ಬಾರ | ರಾಮಚಂದ್ರ | ಕಣ್ಣ |
ಮುಂದೆ ಸುಳಿದಾಡಲೊಲ್ಲ | ರಾಮಚಂದ್ರ || ||೧೮೫||

ಬಿಲ್ಲುವಿದ್ಯೆಗಳ ತೋರೋ | ರಾಮಚಂದ್ರ | ಹಿಂದೆ |
ನಿಲ್ಲುವ ಲಕ್ಷ್ಮಣನ ಕಾಣೆ | ರಾಮಚಂದ್ರ || ||೧೮೬||

ಎಲ್ಲಿಗೆ ಪೋದಳೊ ಸೀತೆ | ರಾಮಚಂದ್ರ | ನ |
ಮ್ಮೆಲ್ಲರ ಬಿಟ್ಟು ನೀ ಪೋದೆ | ರಾಮಚಂದ್ರ || ||೧೮೭||

**ರಾಗ ಆನಂದ ನೀಲಾಂಬರಿ ಆದಿತಾಳ**

ಏಕೆ ನಿಂತಿರುವೆ ಮಂತ್ರಿ | ಬುದ್ದಿಗಳೆಲ್ಲ |
ಆ ಕಡೆಗಾಯಿತಲ್ಲ ||
ಕೌಸಲ್ಯೆಯೆಲ್ಲಿದ್ದಾಳೆ | ಕರೆಸು ಮಂತ್ರಿ |
ಕೈಕೆಯೂ ಬರಲಿ ಹೇಳು || ||೧೮೮||

ಭರತ ಶತ್ರುಘ್ನರ ಕರೆಯ | ಹೋದವರಾರು |
ಬರುತಾರೊ ಇಲ್ಲವೇನೊ ||
ಗುರು ತಾನೆಲ್ಲಿಗೆ ಪೋದನು | ಕರೆಸಯ್ಯ ಬೇಗ |
ಅರಿತ ಶಾಸ್ತ್ರದ ವಿಪ್ರರ || ||೧೮೯||

ಮೇಲುಶ್ವಾಸ ಉಕ್ಕಿತಲ್ಲಾ | ಇಂಥ ವೇಳ್ಯಕ್ಕೆ |
ಬಾಲಕರೊಬ್ಬರೂ ಇಲ್ಲ ||
ಮೇಲಾದ ಮಂತ್ರಿಗಳ | ಕರೆಸಯ್ಯ ಮತ್ತೆ |
ನಾಲ್ವರು ಕರಣಿಕರ || ||೧೯೦||

ಬಾಲರೆಲ್ಲರು ಮಕ್ಕಳು | ಬುದ್ಧಿಯ ಹೇಳಿ |
ಪಾಲಿಸು ರಾಜ್ಯವೆಲ್ಲ ||
ಬ್ಹಾಳ ಠಾಣ್ಯ ರಾವುತರು | ಅವರಿಗೆ ತಕ್ಕ |
ಹೇಳಿ ಕೇಳಿಸಿ ಪಾಲಿಸೋ || ||೧೯೧||

ರಾಮ ಲಕ್ಷ್ಮಣರರಿಯರು | ಅವರುಬಂದ |
ರಾಮೂಲವಾಗಿ ಪೇಳು ||
ರಾಮ ರಾಮಾ ಶ್ರೀರಾಮಾ | ರಾಜೀವನೇತ್ರ |
ನಾರಾಯಣಾ ನಾರಾಯಣ || ||೧೯೨||

**ವಾರ್ಧಕ**

ಧಾರಿಣೀಪತಿ ಮಾತುಮಾತಾಡಿದಂತೆಯೆದೆ
ಯಾರಿ ಕಣ್ಮುಚ್ಚಿ ನಾಲಗೆ ಸೆಳೆದು ದಂತದಡಿ
ಯಾರಿದುವು ರಕ್ತದೋಸರಣಿಗಳ್ ಶ್ವಾಸಸಂಚಾರವಿಲ್ಲದೆ ಹೋಯಿತು ||
ಮೂರು ಮಂದಿಯು ಪಟ್ಟದರಸಿಯರು ಕೇಳುತ್ತ
ಹೇರಾಳ ದುಃಖದಲಿ ಮೊರೆಯಿಡುತ ಬಂದು ಬಳಿ
ಕೂರ ಜನಮಧ್ಯದಲಿ ಬಾಯ್ಬಿಡುತ ಹಲುಬಿದರು ಪತಿಯಳಿದ ಕ್ಲೇಶದಿಂದ || ||೧೯೩||

**ರಾಗ ವರಾಳಿ ಏಕತಾಳ**

ಕಾಂತನೇಕೆ ಮಾತನಾಡ | ನಯ್ಯಯ್ಯೋ | ಈತ |
ಗಿಂಥ ಮರಣ ಬಂದಿತೇತ | ಕಯ್ಯಯ್ಯೋ ||
ಕಂತು ರೂಪಿನಂಥ ದೇಹ | ವಯ್ಯಯ್ಯೊ | ನಮ್ಮೊ |
ಳಂತರಂಗವಂಥ ಮೋಹ | ವಯ್ಯಯ್ಯೋ || ||೧೯೪||

ಕಣ್ಣು ಮೇಲಕುಪ್ಪರಿಸಿ | ತಯ್ಯಯ್ಯೋ | ಅಗ್ರ |
ಗಣ್ಯನೆಚ್ಚರಳಿದನಲ್ಲೊ | ಅಯ್ಯಯ್ಯೊ ||
ಪುಣ್ಯವ ಏನೆಂದು ಹೇಳ | ಲಯ್ಯಯ್ಯೋ | ಮೈಯ |
ಬಣ್ಣಗುಂದಿ ತಣ್ಣಗಾಯಿ | ತಯ್ಯಯ್ಯೋ || ||೧೯೫||

ಕಾರಣವೇನೆಂದು ತಿಳಿಯ | ದಯ್ಯಯ್ಯೋ | ಸುಕು |
ಮಾರರೊಬ್ಬರಿಲ್ಲದಾಗ | ಅಯ್ಯಯ್ಯೋ ||
ಧಾರಿಣಿಪಾಲಕನಿಂತು | ಅಯ್ಯಯ್ಯೋ | ನಮ್ಮ |
ಗಾರು ಮಾಡಿ ಪೋದನಲ್ಲೋ | ಅಯ್ಯಯ್ಯೋ || ||೧೯೬||

**ಕಂದ**

ಕಾಂತನ ಮೈಯಲಿ ಬಿದ್ದಾ
ಕಾಂತೆಯರಿಂತಳಲುತಿರಲು ಬಂದಾ ಮುನಿಪಂ |
ಸಂತಯ್ಸಲು ಬೇಕೆನ್ನುತ
ಚಿಂತಿಸುತಿಹ ಬಾಲೆಯರ್ಗೆ ನಯದಿಂ ಪೇಳ್ದಂ || ||೧೯೭||

**ಚರಿತೆ (ಸಾಂಗತ್ಯ) ರಾಗ ಆನಂದಭೈರವಿ ರೂಪಕ ತಾಳ**

ಬಾಲೆಯರಿರ ಕೇಳಿ ಬಲುಕ್ಲೇಶದಿಂದ ನೀವ್ |
ಗೋಳಿಟ್ಟು ಮೊರೆಯಿಡಲೇಕೆ ||
ಕೇಳಿದ ಜನರು ಮತ್ತೇನ ಪೇಳುವರು ಭೂ |
ಪಾಲರಿಗಿದುಯೋಗ್ಯವಲ್ಲ || ||೧೯೮||

ಹೆಮ್ಮಕ್ಕಳಿರ ನೀವು ಕೂಗಿಯಾಡಿದರಿಂದ |
ಬ್ರಹ್ಮನ ಲಿಖಿತ ತಪ್ಪುವುದೇ ||
ಕರ್ಮಬಂಧಗಳು ಕಟ್ಟೈಳೆವಾಗ ಮಿಕ್ಕಾದ |
ಧರ್ಮದೈವಗಳು ರಕ್ಷಿಪವೇ || ||೧೯೯||

ಗಾಳಿ ಸಿಡಿಲು ಮಳೆ ಹೊಯ್ಯಬೇಡೆಂದು ಕೈ |
ತೋಳನೆತ್ತಿದರೆ ನಿಲ್ಲುವುದೆ ||
ಬಾಲಕರಿಲ್ಲದ ವೇಳೆಯೆಂದರೆ ಯಮ |
ನಾಳುಗಳದರ ಕೇಳುವರೇ || ||೨೦೦||

ನೆಲೆಯಲ್ಲ ತನುವಿದು ಮಳೆಗಾಲದಲಿ ತುಂಬಿ |
ದ್ಹೊಳೆಯಲ್ಲಿ ನೆರೆಪುಟ್ಟುವಂತೆ ||
ನಳಿನಸಂಭವ ಬರೆದಾ ದಿನ ಸಂದರೆ |
ಉಳಿವವೇ ನಿಮಿಷ ಪ್ರಾಣಿಗಳು || ||೨೦೧||

ಈ ತೆರೆದೊಳು ನಾನಾ ನೀತಿಯ ಪೇಳ್ದಾಸು |
ನೀತೆಯರನ್ನೊಡಂಬಡಿಸಿ ||
ಭೂತಳಾಧಿಪನ ತೈಲದೊಳಿಟ್ಟು ಭರತನಿ |
ದ್ದಾ ತಾವಿಗೋಲೆಯಟ್ಟಿದನು || ||೨೦೨||

ಬಂದನು ಭರತನಾಕ್ಷಣದಿ ನೋಡುತಲಿದ |
ರಂದವೇನೆಂದು ಕೇಳಿದರೆ ||
ಒಂದುಳಿಯದೆ ಮುನಿ ಪೇಳ್ದರೆ ಧರೆಗೆ ಹಾ |
ಯೆಂದು ಮೂರ್ಛಿತನಾಗುತೆದ್ದ || ||೨೦೩||

ಪ್ರಳಯಕಾಲದ ರುದ್ರನಂತೆದ್ದಾರ್ಭಟಿಸಿ ಕಂ |
ಗಳ ಮೇಲೆ ಕಿಡಿಗೆದರಿದನು ||
ಹೊಳೆವ ಖಡ್ಗವ ಕೊಂಡು ಮಾತೆಯ ಕಡಿವೆನೆಂ |
ದಿಳಿಯೆ ಸುಮಂತ್ರ ಬೋಧಿಸಿದ || ||೨೦೪||

**ರಾಗ ಭೈರವಿ ಝಂಪೆತಾಳ**

ಎನಗಾಗಿ ಶ್ರೀರಾಮ | ವನಕೆ ತೆರಳಿದ ಮೇಲೆ |
ಅನುಮಾನವೇನೆನ್ನ | ಜನನಿಯೇ ಇವಳು || ||೨೦೫||

ಈ ನರೇಂದ್ರನು ತೀರಿ | ಹೋದ ಮೇಲೆನಗಾಗಿ |
ನಾನೆಂತುಮೊಗದೋರ್ಪೆ | ದಾನವಾಂತಕಗೆ || ||೨೦೬||

ಕಣ್ಣನೀರನು ತುಂಬಿ | ಕರಗಿ ಭರತನು ಮನದಿ |
ಎಣ್ಣಿಸಿದನೊಂದು ಅರೆ | ಗಳಿಗೆ ಪರ್ಯಂತ || ||೨೦೭||

ಕೌಸಲ್ಯೆಯರ ದುಃಖ | ಕಾಂಬುದಕೆ ಮುನ್ನವೇ |
ಲೇಸೆನಗೆ ಸಾವುದೆಂ | ದೇ ತಿಳಿದನಂದು || ||೧೦೮||

ಅಗ್ರಜನ ಪೊರಡಿಸಿದ | ಅ ದೋಷ ಪಿತೃವಧೆಯು |
ಅಗ್ನಿಯೊಳಗಲ್ಲದೇ | ಪೋಗವಿನ್ನಗಲಿ || ||೧೦೯||

ಹೀಗೆಂದು ಭರತನಣಿ | ಯಾಗೆ ಕಂಡು ಸುಮಂತ್ರ |
ರಾಘವನು ಪೇಳ್ದ ಮಾ | ತಾಗ ಪೇಳಿದನು || ||೧೧೦||

ರೂಢಿಪಾಲಕನ ತನು | ಸಂಸ್ಕಾರ ಕರ್ಮವನು |
ಮಾಡಿದಾಕ್ಷಣದೊಳಗೆ | ಭರತ ಹೊರವಂಟ || ||೧೧೧||

**ಶಾರ್ದೂಲವಿಕ್ರೀಡಿತ**

ನಾನಾ ಸೈನ್ಯವ ಕೂಡಿಕೊಂಡು ಪುರಕಂ ಶತ್ರುಘ್ನನಂ ನಿಲ್ಲಿಸೀ
ಕಾಣಲ್ ಬೇಕು ನರೇಂದ್ರ ಪಾದಯುಗಮೆಂದಾ ನದಿಗಳಂ ದಾಂಟುತಂ |
ತಾನುಂ ಮೂವರು ಜನನಿಯರ್ ಸಹಿತಲೈತಂದಾತನಂ ಕಾಣುತ
ಏನೆಂದಾರದೆ ಕೋಪದಿಂ ರಘುಜಗಾ ಸೌಮಿತ್ರಿಯಿಂತೆಂದನು || ||೧೧೨||

**ರಾಗ ಶಂಕರಾಭರಣ ಮಟ್ಟೆತಾಳ**

ಅಣ್ಣ ನೋಡು ಭರತ ರಾಜ್ಯ | ತನ್ನದಾಯಿತೆಂಬ ಗರ್ವ |
ವನ್ನು ತೋರಬಂದ ನಮ್ಮ | ಕಣ್ಣಿನೆದುರಿಗೆ || ||೧೧೩||

ಮಿಣ್ಣಗಿರಿ ನೀವ್ ನೇರಳೆ | ಹಣ್ಣು ಕುರುಕಿದಂತೆ ಬಲವ |
ಬನ್ನಬಡಿಸಿಬಿಡುವ ಕ್ಷಣಕೆ | ನಿನ್ನ ಕರುಣದಿ || ||೧೧೪||

ಸುಮ್ಮನಿರ್ಪೆ ಭರತ ಬರುವ | ಧರ್ಮವನ್ನು ಅರಿಯೆ ನೀನು |
ಹೆಮ್ಮೆಗಾರನಲ್ಲ ಗುಣದಿ | ನಮ್ಮ ಸಹಜನು || ||೧೧೫||

ಎಂದು ತಮ್ಮೊಳಾಡುತಿರಲು | ಬಂದು ಭರತ ರಥವನಿಳಿದು |
ನಿಂದು ರಾಮಚಂದ್ರನಡಿಗೆ | ವಂದಿಸಿರ್ದನು || ||೧೧೬||

ಪಾದಕೆರಗಿದನುಜನಂ ವಿ | ನೋದದಿಂದಲಪ್ಪಿ ಬಳಿಕ |
ಆದರಿಸುತ ನುಡಿದ ತನ್ನ | ಸೋದರನೊಳು || ||೧೧೭||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದೆಯಾ ಇನವಂಶವಾರಿಧಿ | ಚಂದ್ರ ನಾ ಬರುವಾಗ ನಿನ್ನೊಡ |
ನೆಂದುದಿಲ್ಲವೆನುತ್ತ ಮನದಲಿ | ನೊಂದೆಯೇನೈ || ||೧೧೮||

ಎಂದು ಬಂದೆಯಯೋಧ್ಯಪುರಕಿದ | ನೆಂದು ಕೇಳಿದೆ ನಮ್ಮ ವಾರ್ತೆಯ |
ಎಂದು ಪೊರಟೆರಿ ಜನನಿಯರು ಸಹ | ಮಂದಿರವನು || ||೧೧೯||

ಕ್ಷೇಮವೇ ದಶರಥಪಿತಗೆ ಪರಿ | ಣಾಮವೇ ಶತ್ರುಘ್ನ ಮೊದಲಾ |
ದಾಮಹಾ ಪ್ರಜೆಗಳಿಗೆ ಕುಶಲವೆ | ಸೀಮೆಯೊಳಗೆ || ||೨೨೦||

ಏನು ಮುಖದಲಿ ಕಾಂತಿ ತಗ್ಗಿತು | ನೀನು ಜನನಿಯರೊಡನೆ ನಾವಿಹ |
ಕಾನನಾಂತಕೆ ಬಂದುದೇತಕೆ | ಮಾನನಿಧಿಯೆ || ||೨೨೧||

**ರಾಗ ಪಂತುವರಾಳಿ (ಪಂಚಘಾತ) ಮಟ್ಟೆತಾಳ**

ಜಯ ಜಯ ಶ್ರೀ ರಾಮಚಂದ್ರ |
ಜಯ ಜಯ ರವಿ ಕೋಟಿ ಸಾಂದ್ರ |
ಜಯ ಜಯ ಭಾನುಕುಲೇಂದ್ರ |
ಜಯತು ಜಯ ಉಪೇಂದ್ರ || ಪಲ್ಲವಿ ||

ಅಣ್ಣಾಶ್ರಿತಪೋಷ ಕೇಳು | ನಿನ್ನನು ಕಳುಹಿಸಿದ ಮೇಲೆ |
ಅನ್ನವುಣದೆ ಎಂಟು ದಿನಕೆ | ಇನ್ನು ನಾನು ಹೇಳಬೇಕೆ || ||೨೨೨||

ಇನಕುಲೇಶನಿಂದಿಗೆ ಮೂ | ರ್ದಿನವಾಯ್ತು ನೀನಿಲ್ಲದೆ |
ಮನಕರಗುತ ಕ್ಲೇಶದಿ ಸುರ | ಪನ ಪುರಕೈದಿದನು || ||೨೨೩||

**ವಾರ್ಧಕ**

ಇಂತೆಂದು ಭರತನಾಡಿದ ನುಡಿಯ ಕೇಳ್ದು ಬಲು
ಚಿಂತಾಸಮುದ್ರದೊಳಗಾಳ್ದು ಲಕ್ಷ್ಮಣ ಮೂರ್ಛೆ
ಯಂ ತಾಳ್ದ ಶಿವ ಶಿವಾಯೆನುತಲಂಗನೆ ಧರೆಗೆ ಹಮ್ಮಯ್ಸಿ ಬಿದ್ದಳಾಗ ||
ಇಂತು ಮಾಡಿತೆ ದೈವ ಇನಕುಲದ ಸೌಭಾಗ್ಯ
ಚಿಂತಾಮಣಿಯ ಬೆಳಕು ತಗ್ಗಿತೇ ಹರಹರಾ
ಯೆಂತಿರ್ದಡೇನಿನ್ನು ಎನುತ ಕಂಬನಿದುಂಬಿ ಕಾಂತೆ ಜಾನಕಿ ನುಡಿದಳು || ||೨೨೪||

**ನೀಲಾಂಬರಿ ರೂಪಕತಾಳ (ಚತುರಶ್ರ ಅಷ್ಟ)**

ಇನ್ನಾರೆನ್ನನು ಗುಣದಲಿ | ಮನ್ನಿಸಿ ಮನ್ನಿಸಿ ಕರೆವರು |
ಕಣ್ಣಲಿ ಕಾಣದೆ ಹೋಯಿತೆ | ಪುಣ್ಯವೆ ಹಾ ವಿಧಿಯೇ || ||೧೧೫||

ಮಾವನ ಗುಣ ವರ್ಣಿಸುವಡೆ | ಸಾವಿರ ಬಾಯಿರಬೇಕು |
ಯಾವರಿಗಿಂಥಾ ಮನಸಿದೆ | ದೇವರಿಗೆ ಸಮಾನ || ||೧೧೬||

ಎಷ್ಟರ ಸಂಕಟಪಟ್ಟನೊ | ಮಕ್ಕಳ ನೋಡುವೆನೆನುತಲಿ |
ಎಷ್ಟೆಮ್ಮನು ಕರೆಕರೆದು | ಬಿಟ್ಟನೊ ಪ್ರಾಣವನು || ||೧೧೭||

ಒಂದೇ ದಿನವಾದರೂ ಮನ | ನೊಂದೆನ್ನೊಳು ನುಡಿದರಿಯನು |
ತಂದೆತಾಯ್ಗಳಾರಾದರು | ಬಂದಪರೇ ಹೀಗೆ || ||೧೧೮||

ಹೊತ್ತಲ್ಲದ ಹೊತ್ತಿನಲಿ ನೃ | ಪೋತ್ತಮನಳಿದನೆ ಹಾಯೆನು |
ತತ್ತೆಯ ಮೊಗ ನೋಡುತ ಬಲು | ಅತ್ತಳು ಜನಕಸುತೆ || ||೧೧೯||

ಒದಗುವರಾಪತ್ತಿಗೆಂದು | ಮದುವೆಯ ಮಾಡಿದ ಮಗನಿಗೆ |
ತುದಿಗಾಲಕೆ ನಾವಿದ್ದಿ | ಲ್ಲದಹಾಗಾಯ್ತಲ್ಲ || ||೧೨೦||

**ವಾರ್ಧಕ**

ಪೋದ ಮಾವನ ಗುಣವನಭಿವರ್ಣಿಸುತ ಸೀತೆ
ಪಾದದಡಿಯಲಿ ಬಿದ್ದು ಹೊರಳುತಿರೆ ಕೌಸಲ್ಯೆ
ಮೇದಿನೀಸುತೆಯ ತೆಗೆದಪ್ಪಿ ಮೆಯ್ಯೊರಸಿ ಕಣ್ಣೀರ ಸೆರಗಿಂದ ತೊಡೆದು |
ಆದರಿಸುತವರು ಮೂವರು ಜನನಿಯರು ಸಹಿತ
ಪೋದರಾ ನದಿಯೆಡೆಗೆ ಗುರುಮುಖದಿ ಸ್ನಾನಕ
ರ್ಮಾದಿಗಳ ರಚಿಸಿದರು ಮುನಿಗಳಂ ಕರೆಸಿ ಬಹು ವಿಧಿವಿಹಿತಮಾರ್ಗದಿಂದ || ||೧೨೧||

ವೇದೋಕ್ತಮಂತ್ರದಿಂದಪರ ಕರ್ಮಂಗಳಂ
ಸಾಧಿಸಿಯೆ ದಾನದಕ್ಷಿಣೆ ಹೋಮ ನೇಮದಿಂ
ಮೇದನೀಶಗೆ ಸ್ವರ್ಗಮಂಗೊಳಿಸಿ ಸಕಲ ಪಿತೃಜನವ ಸಂತುಷ್ಟಿಗೊಳಿಸಿ |
ಆ ದಿವಸ ಉಪವಾಸದೊಳಗಿರ್ದು ಮರುದಿನದೊ
ಳಾದಯಾಂಬುಧಿ ರಾಮ ಕೌಸಲೆ ಸುಮಿತ್ರೆಯರ
ಪಾದಕೆರಗುತ ಸಕಲಮುನಿಜನರ ಮುಂದೆ ಧೈರ್ಯೋದ್ದಾಮನಿಂತೆಂದನು || ||೧೨೨||

**ರಾಗ ತೋಡಿ ಏಕತಾಳ**

ಬಂದುದು ಲೇಸಾಯಿತು ನೀವು | ಹೀಗಾದ ಮೇಲೆ |
ನೊಂದು ಮಾಳ್ಪುದಿನ್ನೇನು ನಾವು ||
ಎಂದಿಗಾದರೊಂದು ದಿನ ಸಿದ್ಧ | ಈ ದೇಹನಾಶ |
ಹೊಂದದೆ ನಿಲ್ಲದಿದು ಬದ್ಧ || ||೨೩೩||

ನೋವು ತೋಷವೆಂಬುವದೆಲ್ಲ | ಸಂಸಾರಿಗಳಿ |
ಗಾವರಿಗಾದರೂ ಉಂಟಲ್ಲ ||
ಸಾವು ಹುಟ್ಟು ಸುಖದುಃಖವೆಲ್ಲ | ಅರಿಯದ ಹಾಗೆ |
ನೀವು ಚಿಂತಿಸುವಿರಲ್ಲ || ||೨೩೪||

ಭರತನ ಮಾತೊಂದ ಮೀರದೆ | ಸೂರ್ಯವಂಶದ |
ದೊರೆತನಕ್ಕೆ ಕುಂದು ತಾರದೆ ||
ಅರಿತು ದಾನ ಧರ್ಮಂಗಳಲ್ಲಿ | ಕಡಿಮೆಯಿಲ್ಲದೆ |
ಸಿರಿತನದಿಂದಾಳಿ ನೀವೆಲ್ಲಿ || ||೨೩೫||

ತೆರಳಿ ನೀವೆಲ್ಲ ಊರಿಗೆ | ನಾ ಬಹೆನೆಂದು |
ವರುಷ ಈರೇಳರ ಮೇಲಲ್ಲಿಗೆ ||
ತರಳ ಶತ್ರುಘ್ನನೂ ನೀನೂ | ಒಂದೇ ಬುದ್ಧಿಯೊ |
ಳಿರುತ ರಾಜ್ಯವಾಳು ನೀನು || ||೨೩೬||

ಕಂದ ಪೋಗಯೋಧ್ಯಾನಗರಕ್ಕೆ | ಆನೆ ಕುದುರೆ |
ಮಂದಿರಾಜ್ಯವನಾಳುವುದಕ್ಕೆ ||
ಅಂದಿನ ದಿನಕೆ ನಾನು ಲಕ್ಷ್ಮಣ | ಜಾನಕಿ ಸಹಿತ |
ಬಂದೇನು ಪಟ್ಟಣಕ್ಕೆ ತತ್ಕ್ಷಣ || ||೨೩೭||

**ವಚನ** || ಇಂತೆಂದು ಶ್ರೀರಾಮದೇವರು ಕೌಸಲ್ಯೆ ಸುಮಿತ್ರೆ ಮೊದಲಾದಂಥವರನ್ನೊಡಂ
ಬಡಿಸಲಾಗಿ ಭರತನು ಏನೆಂದನು ಎಂದರೆ –

**ರಾಗ ಕೇದಾರಗೌಳ ಅಷ್ಟತಾಳ**

ಅಣ್ಣ ನೀವ್ ಮೂವರಾರಣ್ಯದೊಳಿರುವಾಗ |
ಬಣ್ಣವೆ ತನಗೆ ರಾಜ್ಯ ||
ಪುಣ್ಯಪುರುಷ ನಿನ್ನ ಪಾದವ ಬಿಡೆನೆಂದು |
ಕಣ್ಣನೀರನು ತುಂಬಿದ || ||೨೩೮||

ಹೆಮ್ಮಕ್ಕಳೊಳಗೆ ಗಯ್ಯಾಳಿ ಕೈಕಾದೇವಿ |
ಯಮ್ಮನಾಡಿದ ಮಾತಿಗೆ ||
ಸುಮ್ಮನೆ ರಾಜ್ಯವ ಬಿಡುವುದು ನೀತಿಯೆ |
ನಿಮ್ಮ ಮನಕೆ ಸರಿಯೆ || ||೧೩೯||

ನಿರ್ಮಲದೊಳು ಜ್ಯೇಷ್ಠಸುತನಿರಲಾತನ |
ತಮ್ಮಗೆ ರಾಜ್ಯವುಂಟೇ ||
ಸನ್ಮತವಲ್ಲದಿದ್ದರೆ ನಾ ಅಯೋಧ್ಯೆಗೆ |
ಜನ್ಮಾಂತರಕೂ ಪೋಗೆನು || ||೧೪೦||

ಕೋಪಿಸಿಕೊಂಡು ನೀವ್ ಜರೆದರೆ ದೃಢವಾಗಿ |
ಪೋಪೆ ಮತ್ತೊಂದೂರಿಗೆ ||
ಭೂಪ ನಿನ್ನಂತರಂಗವೆ ಸಾಕ್ಷಿಯಿದಕೆಂದು |
ತಾಪದಿ ನಿಂತಿರ್ದನು || ||೧೪೧||

**ಕಂದ**

ಎಂದಾ ಭರತನ ಮಾತಿಗೆ
ಅಂದೆಲ್ಲರು ಬದ್ಧವೆಂದು ಕರಗಳ ಮುಗಿಯಲ್ |
ಬಂದಾ ಕೈಕಾ ದೇವಿಯು
ಚಂದದಿ ರಾಮನೊಡನೆಂದಳೊಂದುತ್ತರಮಂ || ||೧೪೨||

**ರಾಗ ಕಾಂಭೋಜಿ ಏಕತಾಳ**

ಮಂಥರೆಯ ಮಾತ ಕೇಳಿ | ಮಂದಬುದ್ಧಿಯಿಂದ ನಾನು |
ಎಂದ ಮಾತಂತರಂಗಕ್ಕೆ | ತಂದುಕೊಳ್ಳಬೇಡ ರಾಮ || ||೧೪೩||

ಬಂದಯೋಧ್ಯಾಪುರಕೆ ತ | ಮ್ಮಂದ್ಯರನ್ನು ಕೂಡಿಕೊಂಡು ||
ಇಂದು ರಾಜ್ಯವಾಳು ನೀನು | ಎಂದೊಡಂಬಡಿಸಿದಳು || ||೧೪೪||

ಇಂತೆಂದು ಕೇಯಿಯ ಮಾತಿಗೆ ಶ್ರೀರಾಮನು ಉತ್ತರವಂ ಕೊಡದೆ ಭರತ
ನೊಡನೆ ಏನೆಂದನು ಎಂದರೆ –

**ರಾಗ ಘಂಟಾರವ ಝಂಪೆತಾಳ**

ತಮ್ಮ ಕೇಳಿನಕುಲದ | ರಾಯರಲಿ ಜನಿಸಿರ್ದು |
ಧರ್ಮವೇ ಸತ್ಯವನು | ಬಿಟ್ಟು ನಡೆಯುವುದು || ||೨೪೫||

ಪಿತನ ವಾಕ್ಯವ ಮೀರಿ | ಪಿಂತೆ ನಡೆದವರುಂಟೆ |
ಅತಿರೇಕವಿದು ಲೋಕ | ಕತಿಚೋದ್ಯವಯ್ಯ || ||೨೪೬||

ಹದಿನಾಲ್ಕು ವತ್ಸರದ | ತುದಿಯ ಮರುದಿವಸ ಬಂ |
ದೊದಗುವೆನು ಪಟ್ಟಣಕೆ | ಇದು ಕಪಟವಲ್ಲ || ||೨೪೭||

ಅನಿತುದಿನ ರಾಜ್ಯವನು | ಆಳಿಕೊಂಡಿರು ನೀನು |
ಮನಸಿನೊಳು ಅನುಮಾನ | ಮತ್ತೇನೂ ಬೇಡ || ||೨೪೮||

ಎನ್ನೊಡನೆ ಜನಿಸಿರ್ದ | ತಮ್ಮನಾದರೆ ನೀನು |
ಎನ್ನ ಮಾತನು ಕೇಳು | ಎರಡಿಲ್ಲದಾಳು || ||೨೪೯||

**ಕಂದ**

ಈ ಪರಿಯಿಂದಂ ತಮ್ಮನ
ಭೂಪಾಲಕನೊಡಬಡಿಸಲು ಬಳಿಕಾ ಭರತಂ |
ಕೋಪಿಸಿಕೊಂಡಗ್ರಜನೊಳ್
ಚಾಪವ ಕೈಗೆತ್ತಿಕೊಂಡು ಮತ್ತಿಂತೆಂದಂ ||೨೫೦||

**ರಾಗ ಘಂಟಾರವ ಝಂಪೆತಾಳ**

ಅಣ್ಣ ಕೇಳಿರೇಳು | ವತ್ಸರದ ಮರುದಿವಸ |
ಉಣ್ಣದಿಹೆನೊಂಭತ್ತು | ಗಳಿಗೆ ಪರ್ಯಂತ || ||೨೫೧||

ಅಗ್ರಜರು ನೀವಷ್ಟ | ರೊಳು ಬಾರದಿದ್ದರೆ |
ಅಗ್ನಿಕುಂಡದೊಳಿಳಿವೆ | ನಿಮ್ಮಪದದಾಣೆ || ||೨೫೨||

ಮರೆತು ಹೋಗದೆ ದಿವಸ | ಅರಿತುಕೋ ಲಕ್ಷ್ಮಣಾ |
ಶರತುದಿಯಲೀಗ ಬರೆ | ದಿರಿಸೊಂದುಕಡೆಯ || ||೨೫೩||

ಸೇವೆಗೆನ್ನುತ ತನ್ನ | ಪಾವನಾಂಘ್ರಿಯೊಳಿದ್ದ |
ಹಾವುಗೆಯ ಕೈಲಿಟ್ಟು | ಹರಸಿ ಬೀಳ್ಕೊಟ್ಟ || ||೨೫೪||

**|| ಶ್ರೀರಾಮ ಪಟ್ಟಾಭಿಷೇಕ ಮುಗಿದುದು ||**

# ೪. ಸೀತಾಪಹಾರ - ಪಾತ್ರಗಳು

ರಾಮ

ಸೀತೆ

ಲಕ್ಷ್ಮಣ

ರಾವಣ

ಶೂರ್ಪಣಖಿ

ಮಾರೀಚ

ರಾವಣಸನ್ಯಾಸಿ

ಜಟಾಯು

ಮಾಯಾಮೃಗ

ಕಬಂಧ

ಮಂಡೋದರಿ

ಅಯೋಮುಖಿ

ಶಬರಿ

**ವಾರ್ಧಕ**

ಮುನಿಪ ಕೇಳೈ ಮುಂದೆ ರಾಮಲಕ್ಷ್ಮಣರುಗಳು
ಘನ ಪಂಚವಟಿಯೊಳಂದೇನ ಮಾಡಿದರು ಶೂ
ರ್ಪಣಖಿ ಮತ್ತೇನಾದಳೆಂಬ ವಿವರವ ನಮ್ಮ ಮನ ತಿಳಿಯಲರುಹೆನ್ನುತ |
ತನಯರಿರ್ವರು ಕರವ ಮುಗಿದು ಬೆಸಗೊಳಲು ಮುನಿ
ವಿನಯದಿಂ ಬಾಲಕರ ತೆಗೆದಪ್ಪಿ ಮನ್ನಿಸುತ
ಗುಣದಿಂದ ಪೇಳಿದಂ ಮುಂದಣ ಪ್ರಸಂಗವಂ ವನಜನಾಭನ ಚರಿತವ || ||೧||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ತನಯರು ಕೇಳಿ ದೃಢದೊಳಿಂದು | ಶೂ |
ರ್ಪಣಖಿ ತನ್ನಂತರಂಗದಿ ನೊಂದು ||
ಇನಿತಾದ ವೃತ್ತಾಂತಗಳನಂದು | ರಾ |
ವಣಗೆ ತಾ ಪೋಗಿ ಪೇಳುವೆನೆಂದು || ||೨||

ಮಂಡೆ ಮಂಡೆಯ ಹೊಡಕೊಳ್ಳುತ್ತ | ನಡೆ |
ಗೊಂಡು ಕಣ್ಣಲಿ ನೀರ ಸುರಿಸುತ್ತ ||

ಕೆಂಡದಂದದಿ ರೌದ್ರ ತಾಳುತ್ತ | ಕಂಡ |
ಕಂಡಸುರರಿಗಿದ ಹೇಳುತ್ತ || ||೩||

ರಾಘವ ಮಾಡಿದ ಮಾಟಕ್ಕೆ | ತಮ್ಮ |
ಲಕ್ಷ್ಮಣ ನೋಡಿದ ನೋಟಕ್ಕೆ ||
ಮೂಗು ಮೊಲೆಯ ಕೊಯ್ದ ಕೋಪಕ್ಕೆ | ತಾನು |
ಬೇಗ ಸಾಗುವೆ ಲಂಕಾ ದ್ವೀಪಕ್ಕೆ || ||೪||

ಹೀಗೆಂದು ತನಗೆ ತಾನೆಂದಳೊ | ತೆಂಕ |
ಸಾಗರ ತಟದಲ್ಲಿ ನಿಂದಳೊ ||
ಹೇಗೆ ದಾಟುತ ಪಾಪಿ ಬಂದಳೊ | ತಾ |
ನಾಗಿ ಲಂಕೆಗೆ ಕೇಡ ತಂದಳೋ || ||೫||

**ಭಾಮಿನಿ**

ಲವನೆ ಕೇಳ್ ಸುರನರಭುಜಂಗಮ
ಭುವನದಲ್ಲಣ ದಶವದನನು
ತ್ಸವದೊಳೊಡ್ಡೋಲಗದೊಳಿದ್ದನು ಬಹಳ ವಿಭವದಲಿ |
ಪವನ ಶಿಖಿ ಯಮ ನಿಋತಿ ಹರಿ ವೈ
ಶ್ರವಣ ವರುಣಾದಿಗಳು ಬೆಸಸೇ
ನೆವಗೆ ತವಗೆನುತಿದ್ದರಿದ್ದೆಸೆಯಲಿ ದಶಾನನ || ||೬||

ಅಣುಗಕೇಳಾ ಸಮಯದಲಿ ನೆರೆ
ಹಣಿದ ಮೂಗಿನ ಹರಿದ ತುಟಿಗಳ
ಜುಣುಗುಕಿವಿಗಳ ಜರಿದಹುಣ್ಣಿನ ಕೊರೆದಕದವುಗಳ |
ವ್ರಣದ ದುರ್ಗಂಧದ ಮಹಾಭೀ
ಷಣದ ರಕ್ಕಸಿ ಬಂದಳಾ ರಾ
ವಣನ ರಚಿತ ಸಭಾಂತರಾಳಕೆ ಮೃತ್ಯುರೂಪಿನಲಿ || ||೭||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ದಶಕಂಠನನುಜೆಯ ಕಂಡನು | ಕಾಣು |
ತಸುರ ಚಿತ್ತದಿ ಭ್ರಮೆಗೊಂಡನು ||
ಎಸೆವ ಓಲಗವ ಬೀಳ್ಕೊಂಡನು | ಅತಿ |
ಕುಶಲದಿಂದೊಳಗೆದ್ದು ಬಂದನು || ||೮||

ತಂಗಿಯ ಕರೆದು ಮಾತಾಡಿದ | ಮಾನ |
ಭಂಗದ ಪರಿಯೆಲ್ಲ ಕೇಳಿದ ||
ಹಿಂಗದೆ ರೌದ್ರವ ತಾಳಿದ | ಅಂತ |
ರಂಗವದೇನೆಂದು ಕೇಳಿದ || ||೯||

**ದ್ವಿಪದಿ**

ಏನು ಹೊಡೆಯಿತು ಮಾರಿ ತಂಗಿ ನಿನಗೆನುತ
ದಾನವರ ಅರಸ ಬೆಸಗೊಂಡ ನಸುನಗುತ || ||೧೦||

ಊನವನು ತಂದೆ ಖಳವಂಶಕ್ಕೆ ನೀನು
ಮಾನಭಂಗವನೆಸಗಿದವನ ಪೆಸರೇನು || ||೧೧||

**ರಾಗ ಕಾಂಭೋಜಿ ಝಂಪೆತಾಳ**

ಕೇಳಣ್ಣ ನಿನ್ನೊಳೀ ಮಾನಭಂಗದ ಪರಿಯ |
ಪೇಳಲೇನಿನ್ನು ಧರೆಯೊಳಗೆ ||
ಬಾಳಿರುವೆನೆಂತಕಟ ಸಂಭವಿಸಿದಪಹಾಸ್ಯ |
ದೂಳಿಗವನೊರೆವೆ ವಿಸ್ತರದಿ ||೧೨||

ದಶರಥನ ಸುತರಾದ ರಾಮಲಕ್ಷ್ಮಣರೆಂಬ |
ಪೆಸರುಳ್ಳ ವೀರರಿಬ್ಬರಿಗೆ ||
ವಸುಧೆಯೊಳಗಿದಿರಿಲ್ಲ ನೋಡಿದರೆ ಬಾಲಕರು |
ಅಸಮ ಸಾಹಸರು ಕೇಳಣ್ಣ || ||೧೩||

ರಾಮನೆಂಬಾತನಿಗೆ ರಾಜಿಸುವಳೊರ್ವ ಸತಿ |
ಕಾಮನರಗಿಣಿಯಂತೆ ತರುಣಿ ||
ಕಾಮಿನಿಯ ಕಂಡು ಮರುಳಾಗದವರಾರುಂಟು |
ಭೂಮಿಯೊಳು ಜೋಡಿಲ್ಲವಳಿಗೆ || ||೧೪||

ನಾಗವೇಣಿಯ ಕಂಡು ಸೈರಿಸದೆ ಮನಸು ನಿನ |
ಗಾಗಿ ಕೈಯಿಕ್ಕಿದೆನು ಸತಿಗೆ ||
ಆಗ ಲಕ್ಷ್ಮಣನೆಂಬ ಹುಡುಗನೆನ್ನೆರಡು ಮೊಲೆ |
ಮೂಗು ಸಹ ಕೊಯ್ದು ಕಡುಧೀರ || ||೧೫||

ತರಿದ ಗಾಯವದುರಿಯ ತಾಳಲಾರದೆ ನಮ್ಮ |
ಖರದೂಷಣರ ಸ್ಥಾನಕಯ್ದಿ ||
ಇರದೆ ಸಂಗತಿಯರುಹೆ ಗಜರಥಾದಿಗಳಿಂದ |
ಭರದಿ ಮುತ್ತಿದರೆ ರಾಘವನ || ||೧೬||

ಖರದೂಷಣಾದಿಗಳ ಸಂಹರಿಸಿ ಪಂಚವಟಿ |
ವರದಂಡಕಾರಣ್ಯದೆಡೆಯ ||
ಸ್ಥಿರವಾಗಿ ನೆಲಸಿರ್ದ ನಮ್ಮವರನೆಲ್ಲ ಯಮ |
ಪುರಕೆ ಕಳುಹಿಸಿದನಾ ರಾಮ || ||೧೭||

ದಾನವರ ಸಂಹರಿಸಿ ನಮ್ಮವರ ಹೊಳಲೆಲ್ಲ |
ದಾನಗಳ ಕೊಟ್ಟ ಋಷಿಗಳಿಗೆ ||
ಏನು ಹೋದರೂ ಹೋಗಲೆಂತಾದಡಾಗಲಾ |
ಮಾನಿನಿಯ ತರಬೇಕು ಸಿದ್ಧ || ||೧೮||

**ರಾಗ ಸಾರಂಗ ಅಷ್ಟತಾಳ**

ಅಂಥಾ ಚೆಲುವೆಯೇನೆ | ಜಾನಕಿ ದೇವಿ |
ಅಂಥಾ ಚೆಲುವೆಯೇನೆ || ಪಲ್ಲವಿ ||

ಅಂಥ ಚೆಲುವೆಯೇನೆ ಕಾಂತೆ ಜಾನಕೀದೇವಿ |
ಕಾಂತೆಯರೊಳು ಮಂಡೋದರಿಗಿಂತ ಸೊಬಗೇನೆ || ||೧೯||

ಕಣ್ಣುಗಳೆಂತಿಹವು | ಅವಳಮೆಯ್ಯ |
ಬಣ್ಣವದೆಂತಿಹುದು ||
ರನ್ನ ಕೆತ್ತಿದನಡು ಸಣ್ಣವಾಗಿಹುದೇನೆ |
ಮನ್ಮಥನರಗಿಣಿಯಂತೆ ತೋರುವಳೇನೆ || ||೨೦||

**ರಾಗ ಬೇಗಡೆ ತ್ರಿವುಡೆತಾಳ**

ತರಬೇಕು ತರುಣಿಯಳ | ಕಾಮನ ಮುಂಗ |
ಯ್ಯರಗಿಣಿಯಂತಿಹಳ ||
ಸ್ಮರನ ಸಿಂಗಾಡಿ ಪುರ್ಬಿನ ನೀರೆ ಮಲ್ಲಿಗೆ |
ಪರಿಮಳಿಸುವ ಮೆಯ್ಯ ವರಕರಿಗಮನೆಯ || || ೨೧||

ಪನ್ನಗನಿಭವೇಣಿಯ | ಪಂಕಜದೆಸ |
ಳ್ಗಣ್ಣ ಕನ್ನಡ ಜಾಣೆಯ ||
ಹೊನ್ನ ಪುತ್ಥಳಿ ಬೊಂಬೆಯಂಥ ರಾಮನ ಕಯ್ಯ |
ಕನ್ನಡಿ ಕದಪಿನ ಕಡುಸುಪ್ರವೀಣೆಯ || ತರಬೇಕು || ||೧೧||

ಕಿರುನಗೆ ಮೊಗದೋಜೆಯ | ಲಾ |
ವಣ್ಯಭಾಸ್ಕರಕೋಟಿ ನಿಭತೇಜೆಯ ||
ವರಕುಂಭಕುಚೆಯ ಸರೋಜಗಂಧಿನಿಯ ಕೇ |
ಸರಿಮಧ್ಯೆ ಮರಿಶುಕವಚನೆ ಶುಭಾಂಗಿಯ || ತರಬೇಕು || ||೧೨||

**ಕಂದ**

ತಂಗಿಯ ಸವಿನುಡಿಯಂ ಕೇ
ಳ್ದಂಗಜಶರತಾಗಿ ರಾವಣಂ ಭ್ರಮೆಗೊಂಡಂ |
ಅಂಗನೆ ಮಂಡೋದರಿಗೀ
ಸಂಗತಿಯರುಹಲ್ಕೆ ಪೋಗಿ ತಾ ಕರೆದೆಂದಂ || ||೧೪||

**ರಾಗ ಘಂಟಾರವ ಝಂಪೆತಾಳ**

ಬಾರೆ ಮೋಹನಾಕಾರೆ | ನಾರೀಶಿರೋರನ್ನೆ |
ನೀರೆ ಮಂಡೋದರಿಯೆ | ಕೇಳೊಂದು ನುಡಿಯ || ||೧೫||

ಜನಕನಂದನೆಯಂತೆ | ಸೀತೆಯೆಂಬವಳಂತೆ |
ಘನಸೊಬಗಿನವಳಂತೆ | ರಾಘವನ ಕಾಂತೆ || ||೧೬||

ತರಲು ಪೋಪೆನು ನಾನು | ತಂದರಾಕೆಯು ನೀನು |
ಎರಕವಾಗಿರುವ ಬಗೆ | ಪೇಳಬೇಕೆನಗೆ || ||೧೭||

ಎನಲಾಗ ಕೇಳಿ ಕಾಂ | ತನನು ಬಿಗಿಯಪ್ಪಿ ಮಯ |
ತನುಜೆ ನುಡಿದಳು ಬೇಗ | ದನುಜಪತಿಯೊಡನೆ || ||೧೮||

**ರಾಗ ಆಹೇರಿ ಅಷ್ಟತಾಳ**

ತರವಲ್ಲ | ಕಾಂತ | ತರವಲ್ಲ || ಪಲ್ಲವಿ ||
ತರವಲ್ಲವಿದು ಲೋಕ | ಮಾತೆ ಜಾನಕಿಯ |
ತರುವೆನೆಂದೆನುತ ಪೋ | ಗುವುದು ಆ ಸತಿಯ || ಅನುಪಲ್ಲವಿ ||

ನಾರಾಯಣಸ್ವಾಮಿ | ಆ ರಾಮಚಂದ್ರ |
ಚಾರುಲಕ್ಷ್ಮಣನೆಂಬಾ | ತನೆ ಉರಗೇಂದ್ರ |
ನಾರೀ ಜಾನಕಿಯೆಂಬ | ಳಾಕೆ ಲಕ್ಷ್ಮೀದೇವಿ |
ಧಾರಿಣಿಯೊಳಗವ | ತರಿಸಿದರೀ ಸಾರಿ || ತರವಲ್ಲ || ||೧೯||

ಕುಲವೆ ಸಂಹಾರವಾ | ಗುವ ಕಾಲ ಬಂತು |
ಇಳೆಯೊಳ್ ಬಾಳಿರುವಂಥ | ಋಣವೆಲ್ಲ ಸಂತು |
ಇಳೆಯ ನಂದನೆ ಸಿಕ್ಕ | ಳೇತಕೀ ಭ್ರಾಂತು |
ಉಳಿಯದು ಪ್ರಾಣ ನಾ | ಸಾರಿದೆನಿಂತು || ತರವಲ್ಲ || ||೨೦||

ಖರದೂಷಣಾದ್ಯರು | ಬಡವರೆ ನೋಡು |
ನೆರೆ ಮುಂದೆ ಬಾಳುವ | ದರಿತು ಮಾತಾಡು |
ಕರವ ಮುಗಿದು ಬೇ | ಡುವೆ ದಯೆ ಮಾಡು |
ತರುಣಿಯ ತಳ್ಳಿಗ್ಹೋ | ದರೆ ಬಂತು ಕೇಡು || ತರವಲ್ಲ || ||೨೧||

**ರಾಗ ಶಂಕರಾಭರಣ ಏಕತಾಳ**

ವಲ್ಲಭೆ ನೀನಿಂಥ ಮಾತ | ನೆನ್ನೊಳು ಪೇಳುವರೇನೆ |
ಹುಲ್ಲೆ ಘೋರ ಸಿಂಹವನ್ನು | ಕೊಲ್ಲುವದುಂಟೆ || ||೨೨||

ಎಳ್ಳಿನಷ್ಟು ಕಿಚ್ಚು ಮನೆಗ | ಳೆಲ್ಲ ಸುಡದೆ ಬಿಡುವುದುಂಟೆ |
ಒಳ್ಳಿತಲ್ಲ ಬುದ್ಧಿ ಬರಿದೆ | ಕೆಡಬೇಡ ಕಾಂತ || ||೨೩||

ಮಾನಿನಿ ಕೇಳಿಲಿಗಳು ಮ | ದ್ದಾನೆಯ ಸಂಹರಿಸಲುಂಟೆ |
ದಾನವರಿಗೂ ಮಾನವರಿಗೂ | ಸಮವೇನೆ ಕಾಂತೆ || ||೨೪||

ಕಾಣದೆ ಕುಣಿಯೊಳು ಬಿದ್ದ | ಡಾನೆಯಾದರೇನು ಕಡೆಗೆ |
ಶ್ವಾನಗಿಂತ ಕಡೆಯಲ್ಲವೆ | ನೀ ನೋಡು ಕಾಂತ || ||೨೫||

ಕಿಚ್ಚಿಗಿರುವೆ ಮುತ್ತಲುಂಟೆ | ಬಚ್ಚಲೂ ಮಾಳಿಗೆಯೂ ಸರಿಯೆ |
ಹೆಚ್ಚುಕಡಿಮೆಯಿಲ್ಲವೇನೆ | ಅಮೃತ ಗರಳವೇ || ||೨೬||

ಮೆಚ್ಚಿ ಪರರ ಪೆಣ್ಗೆಮನಸು | ಹುಚ್ಚಾದಾತಗಮೃತ ವಿಷವು |
ಕಿಚ್ಚು ನೀರೊಳುರಿವುದುಂಟೆ | ಹೆಚ್ಚೇನು ಕಾಂತ || ||೨೭||

ಈರೇಳು ಲೋಕದೊಳಗುಳ್ಳ | ಪಾರುಪತ್ಯವೆನಗಿದ್ದಂತೆ |
ನಾರಿ ಹುಲುಮನುಜರ್ಗೆಲ್ಲ | ನಾನಂಜುವೆನೇನೇ || ||೩೮||

ಬೇರು ಕಡಿದ ಮೇಲೆ ವೃಕ್ಷ | ಜಾರದೆ ನಿಲ್ಲುವದುಂಟೆ |
ಮಾರಿಬಡಿವ ವೇಳ್ಯಕ್ಕಾರೂ | ಬಾರರು ಕಾಂತ || ||೩೯||

ಬಂದದ್ದೆಲ್ಲಾ ಬರಲದರಿಂದ | ಮಂದಗಮನೆ ಸೀತೆಯನ್ನು |
ತಂದಲ್ಲದೆ ಬಿಡೆನು ಕಾಣೆ | ಚಂದಿರವದನೆ || ||೪೦||

ತಂದೆತಾಯ್ಗಳಾಣೆ ನಿಮಗೆ | ತಂದರೆ ಜಾನಕಿಯ ಮನೆಗೆ |
ಕುಂದುವದೈಶ್ವರ್ಯವೆಲ್ಲ | ಮುಂದೆನ್ನ ರಮಣ || ||೪೧||

**ಕಂದ**

ಕೋವಿದ ನೀತಿಯ ಮಾತಂ
ಭಾವಕಿ ತಾ ತಿಳಿಯಪೇಳ್ದೊಡಂಬಡಿಸಿದೊಡಂ |
ರಾವಣ ಕೇಳದೆ ತನ್ನಯ
ಮಾವಂ ಮಾರೀಚನಿದ್ದ ವನಕೈತಂದಂ || ||೪೨||

**ರಾಗ ಕೇದಾರಗೌಳ ಆದಿತಾಳ**

ಮಾರೀಚನಿಶಾಚರ ಸಂತತ |
ವೀರಮನೋಹರ ವಿಕ್ರಮಶೌರ್ಯ ||
ಮಾರಾಂಗಶರೀರಮನೋಹರ |
ಕಾರುಣ್ಯ ಸಮುದ್ರಗಂಭೀರ || ||೪೩||

ದಶರಥನ ಸುತರಿಬ್ಬರು ಹುಡುಗರು |
ವಸುಧೆಯೊಳತಿ ಶೋಭಿಪರಂತೆ ||
ಕುಶಲದಿ ಖರ ದೂಷಣ ತ್ರಿಶಿರರ |
ಪೆಸರಡಗಿಸಿ ಮೆರೆದಿಹರಂತೆ || ||೪೪||

ರಾಘವನೆಂಬಾತನಿಗೊರ್ವಳು ಸತಿ |
ನಾಗಕನ್ನಿಕೆಯ ಪೋಲುವಳಂತೆ ||
ಪೋಗುವೆ ನಾ ತರುವುದಕೇ ಪೊಂಮೃಗ |
ವಾಗಿಯೆ ನೀ ನಲಿದಾಡಬೇಕಲ್ಲಿ || ||೪೫||

**ರಾಗ ಮಧ್ಯಮಾವತಿ ಏಕತಾಳ**

ರಾವಣ ನೀ ಬಲು ಸಾಹಸಿಯಯ್ಯ |
ದೇವರ್ಕಳ ದೇವನು ಶ್ರೀರಾಮ ||
ಕೇವಲ ನರಜನ್ಮದಿ ಜನಿಸೀಪರಿ |
ಭೂವಲಯದಿ ತಿರುಗಾಡುವನವನು || ||೪೭||

ತತ್ಕಾಂತೆಯ ತಂದರೆ ವಂಶಕ್ಕೆ ಮ |
ಹತ್ಕಂಟಕವಲ್ಲದೆ ಸುಖವೆ ||
ತತ್ಸಂಗತಿ ಬೇಡಾ ನಿದಾನಿಸು |
ಮತ್ಕಿಂಚಿತ ಮಾತನು ನೀ ಕೇಳು || ||೪೭||

**ರಾಗ ಮಾರವಿ ಏಕತಾಳ**

ಸಾಕೆಲವೊ ಬಲ್ಲೆನು ನಾನು |
ಏಕವರನು ಕೊಂಡಾಡುವೆಯಾ |
ನಾ ಕೊಲ್ಲುವೆ ನೀ ಪೋಗದಿರೆ | ಎನೆ |
ತಾ ಕೈಮುಗಿದ್ಯೆದುವೆನೆಂದ || ||೪೮||

**ರಾಗ ಪಂತುವರಾಳಿ ಅಷ್ಟತಾಳ**

ಪೋಗುವೆ | ದಮ್ಮಯ್ಯ | ಪೋಗುವೆ || ಪಲ್ಲವಿ ||
ನಿನ್ನ ಕೈಯಪೆಟ್ಟ ತಿಂದು ಸಾವುದರಿಂದ |
ನರಕವೇ ಸಾಧ್ಯವಹುದು ತನಗಿಂದು ||
ರಾಮನ ಬಾಣದೊಳಸುವ ನೀಗಿದರೆ ನಾ |
ನೀರೇಳು ಲೋಕದ ಮೋಕ್ಷವ ಪಡೆವೆ || ಪೋಗುವೆ || ||೪೯||

**ಭಾಮಿನಿ**

ಆದಡೆಲವೋ ಕೇಳು ತೋರ್ಪೀ
ರಯ್ದು ತಲೆಗಳ ಬೈತಿಡುತ ಬಲು
ಕಯ್ದುಗಳ ಬಿಸುಟಡಗಿಸೀ ರಾಕ್ಷಸ ಕಳೇಬರವ |
ಐದೆ ತಾಪಸ ವೇಷವನು ಬಳಿ
ಕಯ್ದು ಪರವನಿತಾ ವ್ಯಸನಿಗಳಿ
ಗಾದ ಪರಿಯನು ಹೊರುವ ಪಾಪಕೆ ಹೊರಗು ತಾನೆಂದ || ||೫೦||

**ರಾಗ ಪುನ್ನಾಗ ಅಷ್ಟತಾಳ**

ಅಡವಿಯೊಳಗೆ ರಾಮ | ನಿರುವ ಸುದ್ದಿಯ ಕೇಳಿ |
ಕಡುಚೆಲುವಿನ ಮೃಗ ಬಂತೋ ||
ತಂದಾನ ತಾನೆ ತಂದನಾನಾ || ||೫೦||

ನೋಡಿ ಜಾನಕಿ ಭ್ರಮೆ | ಗೂಡಿ ತನ್ನರಸನ |
ಬೇಡಿ ಕಾಡಲು ಮೃಗ | ಬಂತೋ ಓ ಓ ||
ತಂದಾನ ತಾನೇ ತಂದನಾನಾ || ||೫೧||

**ಶಾರ್ದೂಲವಿಕ್ರೀಡಿತ**

ಮಾರೀಚಂ ಮೃಗವಾಗಿ ಪಂಚವಟಿಗಂ ಬಂದಾಗಲೋಲಾಡಲುಂ
ಸೌರಮ್ಯಾತಿಶಯಪ್ರಧಾನಕರಮಂ ಕಂಡಾಗಳಾ ಜಾನಕೀ |
ಚೋರತ್ವಂಗಳ ಮಾಯದಾಕೃತಿಯಿದೆಂದಾಕಾಂತೆ ತಾ ಕಾಣದೆ
ಭೂರೀ ವಿಸ್ಮಿತೆಯಾಗಿ ಕಾಂತನೊಡನಂ ತಾ ದೈನ್ಯದಿಂತೆಂದಳು || ||೫೨||

**ರಾಗ ಪುನ್ನಾಗವರಾಳಿ ಏಕತಾಳ**

ನೋಡಿದೆಯಾ | ರಾಮ | ನೋಡಿದೆಯಾ || ಪಲ್ಲವಿ ||

ದೊಡ್ಡ | ಕಾಡಿನಿಂದಲೋಡಿಬಂದು | ಆಡುವಂಥ ಪೊಂಮಿಗವ || ಅನುಪಲ್ಲವಿ ||

ಚೆನ್ನದ ಹಾಗಿರುವ ಮೆಯ್ಯ | ಬಣ್ಣದ ಸುತ್ತಲೂ ಪಂಚ |
ವರ್ಣದ ರೇಖೆಗಳು ಬಂದ | ಚೆಂದವ ನೋಡು ||
ಸಣ್ಣ ಸಣ್ಣ ಕಾಲಬೆರಳು | ಸಾಲಿನುಗುರು ಭಾವಂಗಳ |
ತನ್ನಂಗ ದಿನ್ನಂಗ ಧಿಕ್ಕಿಟ | ತೋಯೆಂದು ಕುಣಿವ ಮೃಗವ || ||೫೪||

ಜಗದೇಕವೀರನೆ ಕಯ್ಯ | ಮುಗಿದು ಬೇಡುವೆ ದಮ್ಮಯ್ಯ |
ಹಗಲೂ ಯಿರುಳೂ ಕುಣಿಸಿಕೊಂಡು | ಸೊಗದಿಂದಿರ್ಪೆನು ||
ಸುಗುಣ ನಿನಗೆ ನಾ ಬೇಕೆಂಬ | ಬಗೆಯೊಳು ಸ್ನೇಹವಿದ್ದ |
ರಗಲಿ ಓಡಿಹೋಗುವ ಮುನ್ನ | ಮೃಗವ ಹಿಡಿದು ತಾ ಮೋಹನ್ನ || ||೫೫||

**ರಾಗ ಕೇದಾರಗೌಳ ಅಷ್ಟತಾಳ**

ಅರಸಿ ನೀ ಸುಮ್ಮನೆ ಭ್ರಮೆಗೊಳ್ಳಬೇಡವೆ |
ಸರಸದ ಮೃಗವಲ್ಲವೆ ||

ಸರಸಿಜಾಂಬಕಿ ನಿನ್ನ ಮರುಳು ಮಾಡಲು ಬಂದ |
ದುರುಳರ ಕಪಟ ಕಾಣೆ || ||೫೬||

ಕಪಟದಾಕೃತಿಯೆಂದು ಕಾಂತ ನೀ ಯೆನ್ನ ಚಾ |
ಳಿಪುದೆಲ್ಲ ಬಲ್ಲೆ ನಾನು ||
ಅಪರೂಪವಿದೆ ಕಂಡು ಬಯಸಿದರೆನಗೊಂದು |
ಉಪಕಾರ ಮಾಡೊ ನೀನು || ||೫೭||

ನಾಡಮಾತಲ್ಲ ರಾಕ್ಷಸರು ಮಾಯಕದಿ ಬಂ |
ದಾಡುವ ನಾಟ್ಯ ಕಾಣೆ ||
ಬೇಡ ಸುಮ್ಮನೆ ಕಡ್ಡಿ ಮುರಿದು ಸಾರಿದೆನತ್ತ |
ನೋಡಬೇಡವೆ ಯೆನ್ನಾಣೆ || ||೫೮||

ಕಾಡಿನ ಮೃಗದಿಂದ ಕೇಡು ಬಂತಾದರೆ |
ನೋಡಿಕೊಂಬೆನು ಬಂದುದ ||
ನೋಡದಿದ್ದರೆ ಒಂದು ಕ್ಷಣ ಜೀವ ನಿಲ್ಲದು |
ಬೇಡಿಕೊಂಬೆನು ನಿನ್ನನು || ||೫೯||

ಕೆಟ್ಟ ಮೇಲೇ ಬುದ್ಧಿ ಬರುವುದು ನೀ ಗಂಟ |
ಕಟ್ಟಿಕೊ ಸೆರಗಿನಲಿ ||
ದಿಟ್ಟೆ ಹೆಂಗುಸು ಇವಳಾಡುವ ಮಾತಿಗೆ |
ಲಕ್ಷ್ಮಣ ಸಾಕ್ಷಿ ನೀನು || ||೬೦||

ಎಷ್ಟು ಚಾಳಿಸಿದರು ನಾನೀ ಮಾತನು ಕೇಳಿ |
ಬಿಟ್ಟವಳಲ್ಲ ನಿನ್ನ ||
ಸಿಟ್ಟು ಬಂದರು ಬರಲಿದ ತಾರದಿದ್ದರೆ |
ಬಿಟ್ಟಪೆ ಪ್ರಾಣವನ್ನು || ||೬೧||

**ಭಾಮಿನಿ**

ಚಂಚಲಾಕ್ಷಿಯೆ ಕೇಳರಣ್ಯದಿ
ಸಂಚರಿಪ ಮೃಗಕಂಬನೆಸೆದರೆ
ಪಂಚತುವವಯ್ದಿದರೆ ಮಾಡುವುದೇನು ನೀನದನು |
ಪಂಚಬಾಣನ ಪಿತನೆ ಕೇಳಸು

ವಂಚಿಸುತ ಮಿಗ ಮಡಿದುದಾದರೆ
ಕಂಚುಕವ ರಚಿಸುವೆನು ಚರ್ಮವ ತೆಗೆದು ಪ್ರೀತಿಯಲಿ || ||೬೨||

**ರಾಗ ನೀಲಾಂಬರಿ ಝಂಪೆತಾಳ**

ಅನುಜ ಲಕ್ಷ್ಮಣ | ಜನಕನಂದನೆ |
ಮೃಗಮನೋಚಿತೆ | ಯಾದಳಲ್ಲಯ್ಯ || ||೬೩||

ತರಲು ಪೋಪೆನಾ | ಬರುವ ತನಕನೀ |
ಧರಣಿಜಾತೆಯ | ಕಾಯ್ದುಕೊಳ್ಳಯ್ಯ || ||೬೪||

ಅಗ್ರಜಾ ವೀರ | ಈ | ಸ್ವಲ್ಪ ಕೆಲಸಕೆ |
ವ್ಯಗ್ರದಿಂದ ನೀ | ತೆರಳಲೇತಕೆ || ||೬೫||

ಶೀಘ್ರದಿಂದೆನ್ನ | ಕಳುಹಬಾರದೆ | ಅ |
ಭ್ಯಗ್ರದಿಂದ ನಾ | ಕೊಂಡು ಬರುವೆನು || ||೬೬||

ಆಗದಾಗದು | ನಿನ್ನ ಕೈಯಲ್ಲಿ |
ಸಾಗದಾ ಮೃಗ | ಕಪಟವಿದ್ಯೆಯು || ||೬೭||

ಎಷ್ಟು ದಿವಸಕೆ | ಬರುವೆ ರಾಘವ |
ಸೃಷ್ಟಿಜಾತೆಯು | ನಾನು ಒಬ್ಬನೆ || ||೬೮||

ನಿಮಿಷಮಾತ್ರಕೆ | ಬರುವೆ ಲಕ್ಷ್ಮಣ |
ಅನಕ ಸೀತೆಯ | ನೀ | ಕಾಯ್ದುಕೊಳ್ಳಯ್ಯ || ||೬೯||

**ವಾರ್ಧಕ**

ಎನುತ ತಮ್ಮಗೆ ಬುದ್ಧಿಯಂಪೇಳಿಯಾ ಕ್ಷಣವೆ
ಕನಕ ಮೃಗಮಂ ರಾಮ ಬೆಂಬತ್ತೆ ವೇಗದೊಳು
ಘನತರದ ಘೋರಡವಿಗಯ್ದಿತಾ ದನುಜಮೃಗ ರಾಘವಂ ಕೋಪದಿಂದ |
ದಣಿದು ಶರವಂ ಬಿಡಲು ಹಾ ಲಕ್ಷ್ಮಣಾಯೆಂದು
ದನಿಗೆಯ್ದು ಮಾರೀಚ ಪ್ರಾಣವಂ ಬಿಡಲಾಗಿ
ವನಿತೆ ಜಾನಕಿ ಕೇಳ್ದು ರಾಮನೇ ನಿಜವೆಂದು ಮೈದುನನೊಳಿಂತೆಂದಳು || ||೭೦||

**ರಾಗ ತೋಡಿ ಏಕತಾಳ**

ಮುಗುದ ಕೇಳಿದೆನಯ್ಯ ಮೃಗವಲ್ಲ ರಾಕ್ಷಸರು |
ರಘುವೀರನನು ಹೋ ಹೋ ಕೊಲ್ಲುವರೇನೈ ||
ಜಗದೇಕವೀರ ಕೂಗುವ ಧ್ವನಿ ಕೇಳಿತು |
ಮಿಗುವರಿಯಿತು ಕಾರ್ಯ ಸಹಜ ಸೌಮಿತ್ರಿ ||
ನೋಡಿ ಬಾರಯ್ಯ ಪೋಗಿ | ಏನಾಯಿತೆಂದು || ||೭೧||

ರಾಮನ ಧ್ವನಿಯಲ್ಲ ಜಾನಕಿ ನೀ ಕೇಳು |
ಯಾಮಿನೀಚರರವಸಾನಕಾಲದಲಿ |
ತಾಮಸದಿಂದತ್ತುದಲ್ಲದೆ ಸಂಗ್ರಾಮ |
ಭೀಮನ ದನುಜರು ಕೊಲ್ಲುವುದುಂಟೆ ||
ಬರಿದೆ ಚಿಂತಿಸಬೇಡವೆ | ಜಾನಕೀದೇವಿ || ||೭೨||

ಎಷ್ಟು ಪೇಳಿದರು ನೀ ಯೆನ್ನರಸನ ಧ್ವನಿ |
ಯಷ್ಟಕ್ಕೂ ನಾನದನರಿಯದಳೇನೋ ||
ಸೃಷ್ಟಿಪಾಲನ ಪ್ರಾಣದಟ್ಟುಳಿಗೊದಗದೆ
ಬಿಟ್ಟು ಸುಮ್ಮನೆ ಹಾಳು ನೆವನವಿದೇಕಯ್ಯ ||
ನೋಡಿ ಬಾರಯ್ಯ ಪೋಗಿ | ಏನಾಯಿತೆಂದು || ||೭೩||

**ರಾಗ ಸೌರಾಷ್ಟ್ರ ರೂಪಕತಾಳ**

ದೇವಿ ಕೇಳ್ ದೃಢ | ರಾಮಚಂದ್ರನು |
ದೇವತಾಂಶಸಂ | ಭೂತನಲ್ಲವೆ ||
ಆ ವಿಭು ಮಹಾ ಸ್ವ | ತಂತ್ರಮೂರ್ತಿಯ |
ಆವನಾದರೂ | ಕೊಲ್ಲಲಾಪನೆ || ||೭೪||

ಏನು ಲಕ್ಷ್ಮಣ | ಮನದ ಸಂಶಯ |
ಆ ನರೇಂದ್ರಗೆ | ಪ್ರಾಣಸಂಕಟ ||
ನೀನು ಸುಮ್ಮನೆ | ತಡವ ಮಾಡದೆ |
ಪ್ರಾಣನಾಥನ | ನೋಡಿಬಾರಯ್ಯ || ||೭೫||

ತಾಯೆ ಕೇಳವ್ವ | ರಾಕ್ಷಸರ್ಕಳ |
ಮಾಯವಲ್ಲದೆ | ರಾಮನೇನಲ್ಲ ||
ಈಯರಣ್ಯದಿ | ನಿನ್ನ | ಬಿಟ್ಟು ಹೋದರೆ |
ಕಾಯಜೋಪಮ | ಕೋಪಿಸುವ ನಿಜ || ||೭೬||

ಬಾಲಕ ನಿನ್ನ | ಭಾವವೇನಯ್ಯ |
ಶ್ರೀಲಲಾಮ ತಾ | ನಳಿದ ಮೇಲೆನ್ನ ||
ಆಳುವೆನೆಂಬ | ಆಸೆಯಿಂದಲಿ |
ಆಲಸ್ಯದಿಂದ | ನೀ | ಕುಳಿತೆ ನಿಶ್ಚಯ || ||೭೭||

**ವಾರ್ಧಕ**

ಕಾಮಿನಿಯ ಕಠಿಣತರ ವಾಕ್ಯಮಂ ಕೇಳ್ದು ಶ್ರೀ
ರಾಮ ರಾಮಾಯೆಂದು ಕರ್ಣವೆರಡಂ ಮುಚ್ಚಿ
ಭೂಮಿಯೊಳಗೇಳಾಜ್ಞೆಯಂ ಬರೆದಿದಂ ಮಿರಿ ಮುಂದಡಿಯನಿಡದಿರೆಂದು ||
ಸೋಮಾರ್ಕಭೂಮಿದೇವಿಯ ಸಾಕ್ಷಿಯಾಗಿಟ್ಟು
ತಾ ಮನದಿ ನೊಂದುಕೊಂಡಾಕ್ಷಣದೊಳಯ್ದಿದಂ
ರಾಮಚಂದ್ರನ ಪಾದದೆಡೆಗಿತ್ತಲಾದ ವೃತ್ತಾಂತಂಗಳಂ ಲಾಲಿಸಿ || ||೭೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದೇವ ಲಕ್ಷ್ಮಣನಿಂತು ಮಣಿದಾ |
ದೇವಿಯಳ ಬಳಿಯಿಂದ ಪೊರಡಲು |
ದೇವತೆಗಳಿಗೆ ಸೆರೆಯ ಬಿಡುವಾ | ಕಾಲಬಂತು || ||೭೯||

ಕಾವಿ ವಸನದ ಕೈಯ ಜಪಸರ |
ಕೋವಿ ದಂಡ ಕಮಂಡಲುಗಳಿಂ |
ರಾವಣನು ಸನ್ಯಾಸಿವೇಷವ | ತಾಳಿ ಬಂದ || ||೮೦||

**ರಾಗ ಪಂತುವರಾಳಿ ಅಷ್ಟತಾಳ**

ಭಿಕ್ಷೆಯ ನೀಡೇ ದೇವಿ | ಸನ್ಯಾಸಿಗೆ |
ಭಿಕ್ಷೆಯ ನೀಡೇ ದೇವಿ || ಪಲ್ಲವಿ ||

ಕುಕ್ಷಿಗಾಧಾರವಿಲ್ಲದೆ ದೇಶ ದೇಶ ಪ್ರ |
ದಕ್ಷಿಣೆ ಗೆಯ್ದಿಲ್ಲಿ ಬಂದೆ ಕಾಣಮ್ಮ || ||೮೧||

ಆವ ದೇಶವು ನಿಮಗಾವ ರಾಜ್ಯವು ಅಮ್ಮ |
ಈ ವಿಪಿನದೊಳೊಬ್ಬಳಿರುವೆ ಯೇಕಮ್ಮ || ||೮೨||

ಸುರರೊ ಕಿನ್ನರರೊ ಭೂಸುರರೊ ದಾನವರೊ ಯೆಂ |
ದರಿಯದೆ ನಾ ಕೇಳ್ವ ಪರಿಯು ಕಾಣಮ್ಮ || ||೮೩||

**ಚರಿತೆ (ಸಾಂಗತ್ಯ) ರಾಗ ಪಂತುವರಾಳಿ ಅಷ್ಟತಾಳ**

ಲೇಸಾಯಿತಯ್ಯ ಸನ್ಯಾಸಿ ತವ ಚರಣಕ್ಕೆ |
ಸಾಸಿರ ಶರಣೆಂಬೆ ನಾನು ||
ಬೇಸರಟ್ಟಿತು ನಿಮ್ಮ ಪಾದದರ್ಶನದಿ ಸಂ |
ತೋಷವಾಯಿತು ಎನ್ನ ಮನಕೆ || ||೮೪||

ದೇಶಾಯೋಧ್ಯಾಪುರ ವಾಸಿಗಳೈ ನಾವು |
ಆ ಸೂರ್ಯವಂಶದರಸರು ||
ವಾಸಿಪಂಥದ ಮೇಲೆ ಅನುಜನ ಸಹಿತಿಲ್ಲಿ |
ವಾಸವಾಗಿಹನೆನ್ನ ರಮಣ || ||೮೫||

ಕಂಡೊಂದು ಮೃಗವನಾ ಬಯಸಿದಡದನಿನ್ನು |
ಕೊಂಡುಬರಲು ರಾಮ ಪೋದ ||
ಪುಂಡರೀಕಾಕ್ಷ ಬಾರದೆ ಹೊತ್ತಾದುದರಿಂದ |
ಅಂಡಲೆಯುತ ತಮ್ಮ ನಡೆದ || ||೮೬||

ಅಡುಗೆ ಊಟಗಳೆಂಬ ಗೊಡವೆಯು ನಮಗಿಲ್ಲ |
ಅಡವಿಯ ಫಲಾಹಾರದೊಳಗೆ ||
ಕೊಡುವೆನೆಂದರೆ ತಮ್ಮನಾಜ್ಞೆ ಯ ಮೀರಿ ಮುಂ |
ದಡಿಯಿಡ ಬೇಡವೆಂದಿಹನು || ||೮೭||

**ರಾಗ ಸಾವೇರಿ ಅಷ್ಟತಾಳ**

ಅದನಾದರು ಕೊಡಬಾರದೆ | ಬಲು |
ಹಸಿತೃಷೆಯಿಂದ ದಣಿದು ಬಂದಂತ ಸನ್ಯಾಸಿಗೆ || ಪಲ್ಲವಿ ||

ನೆವನ ಹೇಳುವುದೇತಕೆ | ನಾ ದೇಹಿಯೆಂ |
ದರೆ ನಾಸ್ತಿಯೆನಬಹುದೆ ||
ಶಿವನಾಣೆ ಮೂರು ದಿನದೊಳೇನೊಂದಾಹಾ |
ರವಗೊಳ್ಳದಿಲ್ಲಿಗಿಂದೇ | ಹಸಿದು ಬಂದೆ || ||೮೮||

ಧರ್ಮವುಳ್ಳವರು ನೀವು | ದಾಕ್ಷಿಣ್ಯ ಸ |
ದ್ಧರ್ಮದಿ ನಡೆವವರು ||
ಮರ್ಮವಿಡಿದು ನಾವು ಶಪಿಸಿ ಪೋದರೆ ವಂಶ |
ನಿರ್ಮೂಲವಹುದು ಕಾಣೆ | ಈಶ್ವರನಾಣೆ || ||೮೯||

ದನುಜರಟ್ಟುಳಿ ಬಾಧೆಗೆ | ಅಂಬಿನ ತುದಿ |
ಮೊನೆಯಲ್ಲಿ ಬರೆದ ಹೀಗೆ ||
ಎನಿತು ಬಂದವರಿಗೆ ಭಿಕ್ಷವ ಕೊಡಬೇಡೆಂ |
ದೆನುತ ಪೇಳಿದ ಮಾತುಂಟೇ | ರಾಮನಕಾಂತೆ || ||೯೦||

**ವಾರ್ಧಕ**

ನಾನಾ ಪ್ರಕಾರದಲಿ ಖಳ ಕಪಟವಂ ನುಡಿದು
ಮಾನಿನಿಯ ಮನದ ಸಂಶಯ ನಿವೃತ್ತಿಯ ಮಾಡೆ
ಏನು ಬಂದರು ಬರಲಿಯೆಂದಾಜ್ಞೆಯಂದಾಂಟುತವನಿಸುತೆ ನಡೆತಂದಳು ||
ದಾನವನು ತನಗೆ ಸಿಕ್ಕಿದಳೆಂದು ನೆನೆಸುತ್ತ
ಲಾನಿತಂಬೆಯ ರಥದಿ ಕುಳ್ಳಿರಿಸುತ್ಯೆದಿದಂ
ಭಾನುಮಾರ್ಗದಿ ಪೋಪ ವೇಳೆಯೊಳು ಮೊರೆಯಿಟ್ಟಳಾ ಸೀತೆ ನೆಲನದುರಲು || ||೯೧||

**ರಾಗ ಬಿಲಹರಿ ಅಷ್ಟತಾಳ**

ವಿಪಿನದೊಳಿರಲು ನಾನಿಂದು | ಒಬ್ಬ |
ಕಪಟದ ಯತಿ ನಡೆತಂದು |
ಗುಪಿತದೊಳೊಯ್ವ ಹಾಯೆಂದು | ವರ |
ಚಪಲಾಕ್ಷಿ ಕೂಗಿದಳಂದು || ||೯೨||

ಧರಣೀದೇವತೆಗಳಿರ | ಹೇ |
ತರಣಿನಭಶಶಿಗಳಿರ |
ಹರ ಸರಸಿಜಭವಗಳಿರಾ | ಹೇ |
ಸುರಮುನಿಗಂಧರ್ವರಿರ || ||೯೩||

ದಶರಥಭೂಪನ ಸೊಸೆಯ | ವರ |
ಬಿಸಜಾಕ್ಷ ರಾಮನರಸಿಯ |
ಅಸುರ ಕದ್ದೊಯ್ವ ಜಾನಕಿಯ | ವಂ |
ದಿಸುವೆ ಬಿಡಿಸಿರೀ ಸತಿಯ || ||೯೪||

**ರಾಗ ಸೌರಾಷ್ಟ್ರ ಅಷ್ಟತಾಳ**

ಹೆಣ್ಣು ಜನ್ಮವೆ ಸಾಕು ಎನ ಕಂಡು ಮರೆಯಿರೊ | ರಾಮ ರಾಮ |
ಬಂದು | ಕಣ್ಣಾರೆ ಕಾಣಬಾರದೆ ಯೆನ್ನ ವಿಧಿಯ ಶ್ರೀ | ರಾಮ ರಾಮ || ||೯೫||

ಜನಕರಾಯಗೆ ಮಗಳಾಗಿ ನಾ ಜನಿಸಿದೆ | ರಾಮ ರಾಮ |
ವರ | ವನಜಾಕ್ಷಿ ಭೂಮಿದೇವಿಗೆ ಮಗಳಾಗಿಹೆ | ರಾಮ ರಾಮ || ||೯೬||

ಪೊಡವಿಯಾಳುವೆನೆಂದು ದೃಢವಾಗಿ ನಂಬಿದೆ | ರಾಮ ರಾಮ |
ಕಾ | ರಡವಿಯೆ ಗತಿಯೆಂದು ಬರೆದನಂಬುಜಭವ | ರಾಮ ರಾಮ || ||೯೭||

ನಡೆದು ಬಂತೈ ಕೇಡು ಕಪಟದ ಮೃಗವಾಗಿ | ರಾಮ ರಾಮ |
ಈ | ಕೆಡುವ ಕಾಲಕ್ಕದ ನಾಕಂಡು ಬಯಸಿದೆ | ರಾಮ ರಾಮ || ||೯೮||

ತರಲು ಮುಂದರಿವಾಗ ದಂಡಕ ವನದಲ್ಲಿ | ರಾಮ ರಾಮ |
ತಾ | ಬರೆದ ಮಯ್ದುನನೇಳು ಗೆರೆಗಳ ದಾಂಟಿದೆ | ರಾಮ ರಾಮ || ||೯೯||

**ವಾರ್ಧಕ**

ಪರಿಪರಿಯ ದುಃಖದಲಿ ಮರುಗಿ ಬಾಯ್ಬಿಡುತ ಕೇ
ಸರಿಯ ವಶವಾದ ಮೃಗದಂತೆ ಮಿಡುಕುತ್ತಲಾ
ಧರಣಿನಂದನೆ ಕಠಿಣಮಾಗಿ ಕನಿಕರ ದೀರ್ಘಸ್ವರದಿಂದ ಕೂಗುತಿರಲು |
ಶರಣರೊಳು ಶ್ರೇಷ್ಠ ಸಾಧುಗಳರಸ ಬಲುಧೀರ
ವರ ಪಕ್ಷಿರಾಜ ಸನ್ಮಾರ್ಗಸಂಚರಣ ಸ
ತ್ವರಮ ಕರುಣಾಶರಧಿಯಹ ಜಟಾಯುವು ಬಂದು ದನುಜನಂ ತಡೆದೆಂದನು || ||೧೦೦||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲ್ಲಿಗೆ ಒಯ್ವೆಯೊ ಸೀತೆಯ | ಬಿಡು |
ಕಳ್ಳ ರಕ್ಕಸ ಜಗನ್ಮಾತೆಯ ||
ಒಳ್ಳಿತೆ ನಿನಗೀ ರೀತಿಯ | ಕಂಡೆ |
ನೆಲ್ಲ ನಾ ನಿನ್ನ ವಿಘಾತಿಯ || ||೧೦೧||

ದಾರಿಯ ಬಿಟ್ಟತ್ತ ಕಡೆಸಾರು | ಇಂಥ |
ಪಾರುಪತ್ಯಗಳ ಕೊಟ್ಟವರಾರು ||

ಗಾರುಗೆಡುತ ಪೆಟ್ಟ ತಿನಬೇಡ | ಕೈ |
ಮೀರಿತು ಎನ್ನದೆಂದೆನಬೇಡ || ||೧೦೨||

ಕಳ್ಳರು ಕದ್ದುಕೊಂಡೊಯ್ವಾಗ | ಕೇಳ್ದು |
ದುಳ್ಳ ವಿಚಾರವಿಂದೆನಗೀಗ ||
ಒಳ್ಳೆ ಮಾತಿನ ಮೇಲೆ ಬಿಡು ನೀನು | ಬಿಟ್ಟು |
ಕಳ್ಳ ರಕ್ಕಸ ಅತ್ತ ನಡೆ ನೀನು || ||೧೦೩||

ಸತ್ತ ಪ್ರಾಣಿಗಳ ತಿಂಬಾತಗೆ | ಇಂಥ |
ಧೂರ್ತದುರ್ವಚನಗಳೇತಕೆ ||
ಮತ್ತೆ ದಾರಿಯ ಬಿಟ್ಟು ಸುಮ್ಮನೆ | ಹೋ |
ಗತ್ತತ್ತ ನಡೆ ನಡೆ ಗಮ್ಮನೆ || ||೧೦೪||

ಭಕ್ಷಿಸದನಕ ಹೋಗೆನು ನಿನ್ನ | ಯೆಂದು |
ಪಕ್ಷೀಂದ್ರ ಹೊಡೆದ ಪೆಟ್ಟಿಗೆ ಮುನ್ನ ||
ರಾಕ್ಷಸನದ ಕಂಡು ಬೆದರಿದ | ಇಪ್ಪ |
ತ್ತಕ್ಷಿಗಳೊಳು ಕಿಡಿಗೆದರಿದ || ||೧೦೫||

ಬಾಣವ ಖಗಪತಿಗೆಸೆದನು | ಪಕ್ಷಿ |
ತ್ರಾಣದಿಂದದನು ಖಂಡಿಸಿದನು |
ಕಾಣುತ್ತ ಗದೆಯ ಬಿಸಾಡಿದ | ಹಕ್ಕಿ |
ಕೇಣದಿಂದಲೆ ತುಂಡು ಮಾಡಿದ || ||೧೦೬||

ಅಬ್ಬರಿಸುತ ಎನ್ನ ತಿರಿಹಿದ | ರಕ್ತ |
ಕೊಬ್ಬಿ ಕೈಮುಷ್ಟಿಯೊಳೆರಗಿದ ||
ಇಬ್ಬರು ಸರಿ ನಾವು ಶಕ್ತಿಗೆ | ಕಾದ |
ಲೊಬ್ಬರು ಬೇರೊಂದು ಯುಕ್ತಿಗೆ || ||೧೦೭||

ಮರ್ಮವ ತಿಳಿದು ಕಾದುವ ನಾವು | ಸತ್ಯ |
ಧರ್ಮ ಮಾರ್ಗದಲಿ ಬಾರದು ನೋವು ||
ಶರ್ಮವಿಡಿದು ಕಾದಿದೆವಲ್ಲ | ನಮ |
ಗೊಮ್ಮೆ ಸೋಲ್ ಗೆಲವು ಕಾಣಿಸಲಿಲ್ಲ || ||೧೦೮||

ಎನ್ನಸು ಉಂಗುಷ್ಠದೆಡೆಯಲ್ಲಿ | ಹಕ್ಕಿ |
ನಿನ್ನ ಪ್ರಾಣವದಾವ ಕಡೆಯಲ್ಲಿ ||

ಮುನ್ನ ತಾ ಕಪಟವೆಂದರಿಯದೆ | ಪಕ್ಷಿ |
ತನ್ನದೆಂದನು ಸತ್ಯ ಮರೆಯದೆ || ||೧೦೯||

ಹಕ್ಕಿಪಕ್ಕಿಯ ಪಕ್ಷಿ ಜಾತಿಗೆ | ಪ್ರಾಣ |
ರೆಕ್ಕೆಯೊಳಿಹುದೆಂದನಾತಗೆ ||
ರಕ್ಕಸನದ ಕೇಳಿ ಗ್ರಹಿಸಿದ | ಪಕ್ಷಿ |
ಸಿಕ್ಕಿದನೆಂದ್ಧರುಷತಾಳಿದ || ||೧೧೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾಯಕದ ನುಡಿಯೆಂದು ತಿಳಿಯದೆ |
ಕಾಯಮರ್ಮವನುಸುರೆ ರಾಕ್ಷಸ |
ರಾಯ ಬಡಿಯಲುಬಿದ್ದನಾಗ ಜ | ಟಾಯು ಶರಣ || ||೧೧೧||

ಆಹ ಕೆಟ್ಟೆನು ಕೆಟ್ಟೆನಕಟೀ |
ಕಾಯದುಷ್ಕೃತ ಫಲವೊ ನಾನೀ |
ರಾವಣನ ಕರಹತಿಯೊಳಳಿವರೆ | ಹಾ ವಿಧಾತ || ||೧೧೨||

ಎಂದು ಮರುಗುತ ನಯನವಾರಿಯೊ |
ಳಂದು ಮಿಡಿದಂಘ್ರಿಯಲಿ ಹೊರಳಲು |
ಮಂದಗಮನೆಯು ನುಡಿದಳಾ ವಿಹ | ಗೇಂದ್ರಗಂದು || ||೧೧೩||

ವರವ ಕೊಟ್ಟಳು ಸೀತೆ ರಾಮನ |
ಚರಣವನು ಕಂಡರುಹುವನಕವು |
ಮರಣವಿಲ್ಲೆನೆ ದುರುಳ ಕೊಂಡಂ | ಬರದಿ ನಡೆದ || ||೧೧೪||

**ಕಂದ**

ದುರುಳಂ ಮಾಯದಿ ಸೀತಾ
ತರುಣಿಯನಪಹರಿಸುತೊಡನೆ ಗಗನಾಂತರದೊಳ್ |
ಶರಧಿಯ ದಾಂಟುತ ಲಂಕಾ
ಪುರಕಯ್ದಲು ಲಕ್ಷ್ಮಣ ಬಂದಗ್ರಜಗೆಂದಂ || ||೧೧೫||

**ರಾಗ ಘಂಟಾರವ ಝಂಪೆತಾಳ**

ರಾಘವ ಸಾಕೇತಪತೆ | ಕೇಳ್‌ಕಮಲನೇತ್ರ || ಪಲ್ಲವಿ ||

ನೀ ಮಿಗವ ಬೆಂಬತ್ತಿ | ಪೋದಮೇಲೆನ್ನೊಡನೆ |
ಆ ಮಹಾ ಜನಕಸುತೆ | ಅಸುರನುಲಿ ಕೇಳ್ದು || ||೧೧೬||

ಕಠಿಣತರ ಮಾತುಗಳ | ಕಾಂತೆ ಪೇಳ್ದುದರಿಂದ |
ಅಟವಿಗೆಯ್ತಂದೆನೈ | ನಿನ್ನರಸಿ ಕೊಳುತ || ||೧೧೭||

ಅಂಜುವಳು ಜನಕಸುತೆ | ಯೊಬ್ಬಳೇ ವನದೊಳಗೆ |
ಕಂಜಸಖ ಕುಲಜಾತ | ಕೀರ್ತಿವಿಖ್ಯಾತ || ||೧೧೮||

ಎನುತ ಪೇಳ್ದುದ ಕೇಳಿ | ಘನಮಹಿಮನಿಂತೆಂದ |
ಅನುಜ ಲಕ್ಷ್ಮಣ ವೀರ | ಪೋಗಬೇಕಯ್ಯ || ||೧೧೯||

**ವಾರ್ಧಕ**

ಮೃಗವ ಕೊಂದಾ ದಶರಥಾತ್ಮಜರು ಬದಲೊಂದು
ಮೃಗವ ನಿರ್ಮಿಸಿಕೊಂಡು ಜಾನಕಿಗೆ ಕೊಡಲೆಂದು
ಮಿಗೆ ವಹಿಲದಿಂ ಬಂದು ಪರ್ಣಶಾಲೆಯಲಿ ನೋಡಿದರೆ ಸತಿಯಿಲ್ಲದಿರಲು |
ಹಗಲು ಕತ್ತಲೆಯಾಯ್ತು ಸಿಡಿಲೆರಗಿದಂತೆ ನಾ
ಲಗೆ ಸೆಳೆದುದೆದೆಯಾರಿ ಲಕ್ಷ್ಮಣಂ ನಡುಗಿ ಕೈ
ಮುಗಿದು ನಿಂದಿರೆ ಸೀತೆಯೇನಾದಳೆಂದು ಚಿಂತಿಸುತನುಜನೊಡನೆಂದನು || ||೧೨೦||

**ರಾಗ ಸೌರಾಷ್ಟ್ರ ಮಟ್ಟೆತಾಳ**

ಸಹಜ ಲಕ್ಷ್ಮಣ | ಸರಸಿಜೇಕ್ಷಣ |
ಮಹಿತಳಾಸುತೆ | ಮಂಜುಳಾಕಾರೆ |
ವಿಹಿತಭಾಷಿಣಿ | ಹಿಮಕರಾನನೆ |
ಗಹನದಿ ಬಿಟ್ಟು | ಮೋಸವಾಯಿತು || ||೧೨೧||

ಎತ್ತಹೋದಳೊ | ಏನನಾದಳೊ |
ಮತ್ತಕಾಶಿನಿ | ಮಂದಗಾಮಿನಿ |
ಪೃಥ್ವಿಜಾತೆಯ | ಕಾಣದೆನ್ನಯ |
ಚಿತ್ತಚಂತಲ | ವಾಯಿತಲ್ಲಯ್ಯ || ||೧೨೨||

**ರಾಗ ಕಾಂಭೋಜಿ ಝಂಪೆತಾಳ**

ಅಡವಿ ಗಿಡ ಮರ ಕಲ್ಲುಗಳು ನೋಡಲರಸಿನದ |
ಪುಡಿಯಂತೆ ತೋರುತಿದೆ ತಮ್ಮ ||
ಒಡಲೊಳುರಿ ತಾಪ ಬೇರ್ವಿಡಿದು ಜಠರಾಗ್ನಿಯಲಿ |
ನಡುಗುತಿದೆ ಕೈಕಾಲು ತಮ್ಮ || ||೧೨೩||

ನುಡಿವೆನೆಂದರೆ ಗಂಟಲೆಡೆಗೆ ಕರವೆರಡೊತ್ತಿ |
ಪಿಡಿದಂತೆ ನೋಯುತಿದೆ ತಮ್ಮ ||
ಮಡದಿ ಜಾನಕಿಯೆಂಬ ರತುನವನು ಕಾಣದಡಿ |
ಯಿಡಲಾರೆನಯ್ಯಯ್ಯೊ ತಮ್ಮ || ||೧೨೪||

ತಂದೆತಾಯ್ಗಳ ಬಂಧು ಬಳಗವೆಲ್ಲವ ಬಿಟ್ಟು |
ಒಂದೇ ಮನಸ್ಸಿನಲಿ ತಮ್ಮ ||
ಎಂದಿಗಾದರು ಎನ್ನ ಪಾದವೇ ಗತಿಯೆಂದು |
ಹೊಂದಿಕೊಂಡಿರ್ದಳೈ ತಮ್ಮ || ||೧೨೫||

ಮುಂದುವರಿಯಿತು ಕಾರ್ಯ ಕಪಟಮೃಗ ವ್ಯಸನದಲಿ |
ಬಂದು ಕೇಡಾಯ್ತಲ್ಲ ತಮ್ಮ ||
ಇಂದು ನೀ ಏನ ಪೇಳಿದರು ರಾಕ್ಷಸರ ನಿ |
ರ್ಬಂಧಕ್ಕೆ ಸಿಕ್ಕಿದಳು ತಮ್ಮ || ||೧೨೬||

ಹಾಳುಬದುಕಿಗೆ ಹೋಗುವಾಗಲೇ ನಿನ್ನೊಡನೆ |
ಹೇಳಲಿಲ್ಲವೆ ಮೊದಲೆ ತಮ್ಮ ||
ಕೀಳು ಮೇಲರಿಯದೆನ್ನಯ ಸತಿಯ ಬಿರುನುಡಿಯ |
ಕೇಳಿ ನೀ ಬರಬಹುದೆ ತಮ್ಮ || ||೧೨೭||

ಏಳು ಜನ್ಮಾಂತರದಿ ತಪವ ಗೈದರು ಇಂಥ |
ಬಾಲೆ ಕೈಸೇರುವಳೆ ತಮ್ಮ ||
ಖೂಳ ರಕ್ಕಸರ ನಿರ್ಬಂಧ ದುಃಖವನೆಂತು |
ತಾಳುವಳು ದಿನದಿನದಿ ತಮ್ಮ || ||೧೨೮||

**ರಾಗ ಕೇದಾರಗೌಳ ಮಟ್ಟೆತಾಳ**

ಅಗ್ರಜಾ ಮಹಾಪರಾಕ್ರಮ | ಧೀರ ವೀರ || ಪಲ್ಲವಿ ||

ಪುಂಡರೀಕವದನ ಸುಪ್ರ | ಚಂಡಸಾಹಸಾಗ್ರಗಣ್ಯ |
ಕುಂಡಲೀಂದ್ರಶಯನ ಭೂ | ಮಂಡಲಾಧಿನಾಯಕ ವರ |

ಖಂಡಪರಶುಮಿತ್ರರಾಜಿತ | ಸಕಲ ಬ್ರ |
ಹ್ಮಾಂಡ ಸರ್ವಲೋಕಪೂಜಿತ | ನಿರುತ ಮಾ |
ರ್ತಂಡಕೋಟಿತೇಜಭ್ರಾಜಿತ | ಧೀರ ವೀರ || ||೧೨೯||

ಲೋಕಮಾತೆ ಸೀತೆ ಸಪ್ತ | ಲೋಕ ಮಧ್ಯಲೋಕ ಶಿವನ |
ಲೋಕ ಬ್ರಹ್ಮಲೋಕ ವಿಷ್ಣು | ಲೋಕದಲ್ಲಿದ್ದರೆಯೂ |
ನಾ ಕರೆದುಕೊಂಡು ಬರುವೆನು | ನಿನ್ನ ಪಾದ |
ದಾಕಮಲದೆಡೆಗೆ ತೋರ್ವೆನು | ಇದಕೆ ಚಿಂತೆ |
ಏಕೆ ಧೈರ್ಯವಾಗಿರ್ರೈ ನೀನು | ಧೀರ ವೀರ || ||೧೩೦||

ಎಂದು ಲಕ್ಷ್ಮಣಾಂಕ ಕೋಪ | ದಿಂದ ಧನುಶರಗಳ ಪಿಡಿದು |
ವಂದಿಸುತ್ತಲಣ್ಣನಡಿಗೆ | ಮುಂದೆ ಪರ್ಣಶಾಲೆಯಿಂದ |
ಬಂದು ಪೊರಡಲಾಗ ಕಾಣುತ | ರಾಮಭದ್ರ |
ನಂದು ವತ್ಸ ನಿಲು ನಿಲೆನ್ನುತ | ಸಂತೈಸಿ ನಡೆದ |
ರೊಂದೆ ಮನದಿ | ಸತಿಯನರಸುತ || ||೧೩೧||

**ರಾಗ ಕೇದಾರಗೌಳ ಝಂಪೆತಾಳ**

[ಇದು ಸಮಯವಲ್ಲ ತಮ್ಮಾ | ನೀ ಪೋಪ |
ಹದನವೇನಯ್ಯ ಧರ್ಮ |
ಮೊದಲೆ ಜಾನಕಿಯನಗಲಿ | ಮನದೊಳಗೆ |
ಕುದಿಯುತಿದೆ | ವಿರಹದಲ್ಲಿ || ||೧೩೨||

ಈ ಸಮಯದೊಳಗೆನ್ನನು | ನೀ ಬಿಟ್ಟು |
ಬೇಸರದೆ ಪೋಪುದೇನು |
ಆಸೆ ಇನ್ನೇನು ತನಗೆ | ಎಲೊ ತಮ್ಮ |
ರೋಷ ಬೇಡಿನಿತು ನಿನಗೆ || ||೧೩೩||

**ದ್ವಿಪದಿ**

ರಾಮಲಕ್ಷ್ಮಣರುಗಳು ಘನಪರಾಕ್ರಮರು
ಆ ಮಹಾಪಂಚವಟಿಯಿಂದ ತೆರಳಿದರು || ||೧೩೪||

ಕಾನನಾಂತರದಿ ತಪಸಿರುವ ಋಷಿಗಳನು
ಜ್ಞಾನಶರಧಿಗಳೆನಿಪ ಋಷಿಪತ್ನಿಯರನು || ||೧೩೫||

ಕಾಣುತಲೆ ಬೆಸಗೊಳುತ ಕಂಡ ಖಗಮೃಗವ
ಮಾನಿನಿಯ ಕೇಳಿದರು ಮತ್ತೆ ಕೌತುಕವ || ||೧೩೬||

ಹುಲಿ ಕರಡಿ ಸಿಂಹ ಶಾರ್ದೂಲಗಳ ನೋಡಿ
ಕಳವಳಿಸದತಿಧೈರ್ಯದಿಂದ ಮಾತಾಡಿ || ||೧೩೭||

ಅರಸಂಚೆ ನವಿಲು ಕೋಗಿಲೆ ಚಕೋರಗಳ
ಹರಿಯುತಿಹ ನದಿಗಳನು ದಾಟಿದರು ಬಹಳ || ||೧೩೮||

ನಾನಾ ಪ್ರಕಾರದಲಿ ಅರಸಿ ನಡೆತಂದು
ಆ ನರೇಶ್ವರರು ಘೋರಡವಿಯಲಿ ಸಂದು || ||೧೩೯||

ದೂರ ಪಥದಲಿ ನಡೆದು ದಣಿದುದತಿ ಕಾಯ
ದಾರಿಯಲಿ ಕಂಡರಾ ಮಲಗಿದ ಜಟಾಯ || ||೧೪೦||

ಈತ ನಮ್ಮಯ್ಯನಿಗೆ ಸಖನರುಣತನುಜ
ಮಾತನಾಡಿಸು ತಮ್ಮ ಸಂಪಾತಿಗನುಜ || ||೧೪೧||

ಆರಿಂದ ಬಂತು ನಿನಗೀ ಮರಣದೊಸೆಗೆ
ಕಾರಣವ ನಮಗೆ ತಿಳುಹೆಂದು ದಯವೆಸಗೆ || ||೧೪೨||

ಕಾರಣಿಕರಿಂತು ಕೇಳಿದರು ಸವಿಮಾತ
ಶ್ರೀರಾಮನೇ ಎಂದು ನೆರೆ ತಿಳಿದನಾತ || ||೧೪೩||

**ರಾಗ ತೋಡಿ ಅಷ್ಟತಾಳ**

ಪಾಲಯ ರಘುವೀರ | ಪರಮಪವಿತ್ರ |
ಮೂಲೋಕದೊಡೆಯನೆ | ಕೇಳು ಬಿನ್ನಪವ || ಪಲ್ಲವಿ ||

ಖೂಳ ರಾವಣ ಕದ್ದು | ಕೊಂಡು ಜಾನಕಿಯನ್ನು |
ಮೇಲುಮಾರ್ಗದಿ ಪೋಪ | ವೇಳ್ಯದಿ ನಾನು |
ಬಾಲೆ ಕೂಗುವ ಧ್ವನಿ | ಕೇಳಿ ರಾವಣನೊಳು |
ಕಾಳಗಕಿದಿರಾಗಿ | ಕಾದಿದೆ ಪೋಗಿ || ||೧೪೪||

ಮುಂಚೆ ಸಂಗರದಲಿ | ಗೆದ್ದೆ ನಾನಾಮೇಲೆ |
ವಂಚನೆಯಿಂದೆನ್ನ | ಕೊಂದ ರಾಜೇಂದ್ರ ||

ಪಂಚಪ್ರಾಣಗಳಡ | ಗುವ ತೆರನಾಗೆ ಅರ |
ಸಂಚೆಗಮನೆ ಇದ | ನೆಲ್ಲವನೋಡಿ || ||೧೪೫||

ತರುಣಿ ಜಾನಕಿ ನಿಮ | ಗರುಹಬೇಕೆನಲು ನಾ |
ನರಳುತ್ತಲಿಹೆನಿಷ್ಟು | ದಿನ ಪರಿಯಂತ |
ಕರುಣವಿದ್ದಿರಲೆಂದು | ಚರಣದೆಡೆಗೆ ಬಿದ್ದು |
ಮರಣವಿಟ್ಟ ಜಟಾಯು | ಶರಣರ ಶ್ರೇಷ್ಠ || ||೧೪೬||

**ಕಂದ**

ಸುರಪುರಕಯ್ದಿದ ಖಗಪತಿ
ವರಪಿತಗೆ ಸಮಾನನೆಂದು ತಿಳಿದು ಸಂಸ್ಕಾರವನುಂ |
ವಿರಚಿಸಿ ಮತ್ತಾ ಸೀತೆಯು
ದುರುಳನ ವಶವಾದಳೆಂಬ ಭ್ರಮೆಯೊಳಗೆಂದಂ || ||೧೪೭||

**ರಾಗ ರೇಗುಪ್ತಿ ಏಕತಾಳ**

ಸ್ಮರನರಗಿಣಿ ಸತಿಯರ ಶಿರೋಮಣಿ ದಶ |
ಶಿರನ ವಶವಾದಳ್ಯೆ ತಮ್ಮ ||
ದುರುಳ ಬಾಧಿಸುವ ನಿರ್ಬಂಧಕ್ಕೆ ತಾ ಮೆಯ್ಯ |
ಗುರಿಯಾಗಿಸುವಳಲ್ಲೊ ತಮ್ಮ || ||೧೪೮||

ಹರಿಣದ ನೆವದಿಂದಲೆನ್ನ ಕಳುಹಿ ನಿನ್ನ |
ಭರದಿಂದಟ್ಟಿದಳಲ್ಲೊತಮ್ಮ ||
ತರುಣಿಯರಂತರಂಗದ ನಿಜವಾರಿಗೂ |
ಅರಿವಡಸಾಧ್ಯವ್ಯೆ ತಮ್ಮ || ||೧೪೯||

ತಾನೇ ಬಯಸಿ ಪೋದಳೋ ಬಲಾತ್ಕಾರದಿಂ |
ದಾನವನೊಯ್ದನೊ ತಮ್ಮ ||
ಏನೆಂದು ತಿಳಿಯಲಾರದು ಅಂತರಂಗಕೆ |
ಮಾನಿನಿಯ ಮನಸ್ಸು ತಮ್ಮ || ||೧೫೦||

ಮೂಢ ರಕ್ಕಸ ತನ್ನ ಭ್ರಮೆಯಿಂದಲಾಕೆಗೆ |
ಮಾಡದಿರ್ಪನೆ ಹಾನಿ ತಮ್ಮ ||
ಕಾಡಿನೊಳಗೆ ತಿಳಿಗೇಡಿಂದ ಸತಿಯ ಹೋ |
ಗಾಡಿಕೊಂಡಂತಾಯ್ತು ತಮ್ಮ || ||೧೫೧||

ರಾವಣನೆಂಬ ನಿಶಾಚರನಿರುವಂಥ |
ಠಾವನರಿಯೆವಲ್ಲೊ ತಮ್ಮ ||
ಈ ವಿಪಿನದಿ ಸುತ್ತಿ ದಣಿದೆವಲ್ಲದೆ ಮುಂದೆ |
ಜೀವವುಳಿಯದಲ್ಲೊ ತಮ್ಮ || ||೧೫೨||

**ವಾರ್ಧಕ**

ರಘುವೀರ ಕೇಳಂಬುನಿಧಿ ಮೇರೆದಪ್ಪಿದರು
ಹಗಲರಸನಿರುಳುದಿಸಿ ಬೆಳಗಿದರು ಜನಕಜೆಯ
ಉಗುರೆಡೆಗೆ ಕಲ್ಮಷಂ ಸೋಂಕುವುದೆ ಕಪಟಲಂಡಿಗಳ ದುರ್ನುಡಿಯೇತಕೆ |
ಹಗರಣವ ಬಿಡು ಮುಂದೆ ನಡೆಯೆಂಬ ತನ್ನ ತ
ಮ್ಮಗೆ ಮೆಚ್ಚಿ ನಡೆತಪ್ಪ ವೇಳೆಯೊಳ್ ಮಾರ್ಗದಲಿ
ಪಗೆತನದಿ ಬಾಯ್ಬಿಡುತಲೊದರುತ್ತ ಶೂರ್ಪಣಖೆಮಗಳಯೋಮುಖಿ ಕಂಡಳು || ||೧೫೩||

**ರಾಗ ದೇಶಿ ಅಷ್ಟತಾಳ**

ತಿನಿಸು ಸಿಕ್ಕಿತುಯೆನಗೊಂದು | ಔ |
ತಣವ ಮಾಡುವೆ ಬಂಧು ಬಳಗಕ್ಕೆ ಇಂದು || ಪಲ್ಲವಿ ||

ಮನುಜರ ಮಾಂಸವ ಮೆಲದೆ | ಬಹು |
ದಿನ ವಾಯಿತದರಿಂದ ತೊಡುವೆದ್ದು ನವೆದೆ ||
ಮನೆಗೊಯ್ವೆನಿವರನ್ನು ಕೊಲದೆ | ಭೂತ |
ಗಣಗಳಿಗುಣಬಡಿಸುವೆ ರಕ್ತ ಕೊಳದೆ || ||೧೫೪||

ಎದೆಯ ಗುಂಡಿಗೆಯನ್ನ ಮುರಿದು | ತು |
ಪ್ಪದಲಿ ಜಾಳಿಸುತ ಯೆಣ್ಣೆಯಲಿಕ್ಕಿ ಹುರಿದು ||
ಬದಿಯೆಲುಬುಗಳ ಗುದ್ದ್ಯರೆದು | ಎನ್ನ |
ಮದುವೆಯಾದವನ ಸಂಗಡ ತಿಂಬೆ ನೆರೆದು || ||೧೫೫||

ಗಂಟಲ ಮುರಿದಿವರುಗಳ | ಮಾಂಸ |
ದೆಂಟು ಬಗೆಯಲೆಸಗುವೆನು ಶಾಕಗಳ ||
ಪಂಟಿಗೆ ಸೊಗಸು ಚರ್ಮಗಳ | ಎನ್ನ |
ನೆಂಟರಿಷ್ಟರಿಗಿಕ್ಕುವೆನು ಶಾಕಾದಿಗಳ || ||೧೫೬||

ತಿಂಬೆನೆನುತ ಬಾಯಕಳೆದು | ಬಂದ |
ಳೆಂಬುದ ಲಕ್ಷ್ಮಣ ಮನದಲ್ಲಿ ತಿಳಿದು ||

ಅಂಬ ಬಿಲ್ಲಿನೊಳಿಟ್ಟು ಸೆಳೆದು | ಕೊಲ್ವೆ |
ನೆಂಬಷ್ಟರೊಳು ರಾಮ ನಿಲಿಸಿದನೊಲಿದು || ||೧೫೭||

ಕೊಲಬಾರದಯ್ಯ ಈ ಹೆಣ್ಣ | ಕೊಂದು |
ಫಲವೇನು ಸ್ತ್ರೀಹತ್ಯೆಯೊಳಗಿಲ್ಲ ಬಣ್ಣ ||
ಕಳವು ತಪ್ಪಿದರೆ ಸಾಕಣ್ಣ | ಹೀಗೆಂ |
ದೊಳಗನುಜಂಗೆ ಸೂಚನೆಗೆಯ್ದ ಕಣ್ಣ || ||೧೫೮||

ತಾಟಕಿಯನು ಹೀಗೆ ಹಿಂದೆ | ನೀಮ |
ಹಾಟೋಪದೊಳಗೇಕೆ ಸಮರದಿ ಕೊಂದೆ ||
ಸೂಟಿಯಿಂ ಬಪ್ಪಳು ಮುಂದೆ | ಇಂಥ |
ನಾಟಕತನದ ಮಾತೆನ್ನೊಳೇಕೆಂದೆ || ||೧೫೯||

ಗಾಧಿಸುತನ ಮಾತಿನಿಂದ | ನಾ |
ನಾದುರಾತ್ಮೆಯ ಭೇದಿಸಿದೆನೆಲೆ ಕಂದ ||
ಈ ದುಷ್ಟೆಯಳನದರಿಂದ | ಮಾನ |
ಭೇದಿಸಿ ಜತನದಿಂ ನೀ ಕಳುಹೆಂದ || ||೧೬೦||

**ವಾರ್ಧಕ**

ಅಣ್ಣನಂತರ್ಭಾವವರಿತು ಲಕ್ಷ್ಮಣನವಳ
ಉನ್ನತದ ಕುಚವೆರಡ ತರಿದು ನಾಸಿಕವ ಚೈ
ತನ್ಯದಿಂ ಕತ್ತರಿಸಲಾಗಧೋಮುಖಿದನುಜೆ ತನ್ನ ತಾಯಂ ಪೋಲ್ದಳು |
ಬನ್ನ ಬಡುತವಳು ಸಾಗಿದಳು ಮೊರೆಯಿಡುತಲಿವ
ರನ್ನು ಬಯ್ಯುತ್ತ ಸಲೆ ರಾಮಲಕ್ಷ್ಮಣರುಗಳು
ಇನ್ನು ಮುಂದೊತ್ತಿಬರೆ ಖಳಕಬಂಧನ ಕರಗಳನ್ನು ಕತ್ತರಿಸಲಾಗಿ || ೧೬೧ ||

**ರಾಗ ಶಂಕರಾಭರಣ ಏಕತಾಳ**

ಜಯ ಜಯ ಶ್ರೀ ರಾಮಚಂದ್ರ | ಜಾನಕೀಶ ಸುಗುಣಸಾಂದ್ರ |
ಮಾಯಾಮೋಹ ರಹಿತ ಶುಭ | ಕಾಯ ಪಾಹಿ ಮಾಂ || ಪಲ್ಲವಿ ||

ಹಿಂದಕೆ ದನುವೆಂಬ ಪೆಸರ | ಗಂಧರ್ವೇಶನಯ್ಯ ನಾನು |
ಅಂದಿಗಾ ದೂರ್ವಾಸಮುನಿಯು | ತಂದ ಶಾಪದಿ || ||೧೬೨||

ಬಂದೆನೀ ರಾಕ್ಷಸರ ಜನ್ಮ | ಕಿಂದ್ರ ವಜ್ರದಿಂದ ಶಿರವ |
ನಂದು ತರಿದ ಮೇಲೆ ಕ | ಬಂಧನಾದೆನು || ||೧೬೩||

ಇಂದು ಶಾಪಮುಕ್ತವಾಯ್ತು | ಬಂದುದಕೆ ನಿಮಗೆ ನಮೋಸ್ತು |
ಮುಂದೆ ಶಬರಿ ಪೇಳ್ವಳ್ ಪೋಗಿ | ರೆಂದ ಗಂಧರ್ವ || ||೧೬೪||

**ಕಂದ**

ಕರುಣಿಸಿ ಮುಂದೆಯ್ತರಲಾ
ವರಶಬರಿಯು ಭಕ್ತಿಯಿಂದಲಾ ರಘುಪತಿಯಾ |
ಚರಣಕೆ ನಮಿಸುತಲಂದಾ
ಗುರುಭಾವದೊಳಂಬುಜಾಕ್ಷಿ ಬಲು ನುತಿಸಿದಳು || ||೧೬೫||

**ರಾಗ ರೇಗುಪ್ತಿ ಏಕತಾಳ**

ಪಾಲಯ ಮಾಂ ಪಾಹಿ ರಾಮ | ಸಮರನಿಸ್ಸೀಮ || ಪಲ್ಲವಿ ||

ಕಾಲಭಯನಾಶ ಶ್ರೀ | ಲೋಲ ವೈಕುಂಠಾಧೀಶ || ಅನುಪಲ್ಲವಿ | |

ದುರ್ಜನರ ವಿಘಾತ | ಸಜ್ಜನರ ಸಂಪ್ರೀತ |
ನಿರ್ಜರಗಣವಂದಿತ | ಗರ್ಜನ ಸಿಂಧುಸಮೇತ || ||೧೬೬||

ಅಂಗಜಕೋಟಿಲಾವಣ್ಯ | ಆಶ್ರಿತಜನವರೇಣ್ಯ |
ತುಂಗವಿಕ್ರಮಕಾರುಣ್ಯ | ಸಂಗೀತಲೋಲಾಗ್ರಗಣ್ಯ || ||೧೬೭||

ಮುಂದೆ ಪಂಪೆಯೊಳ್ಮರುತ | ನಂದನನಿಂ ಭಾನುಜಾತ |
ನಿಂದ ರಾವಣನ್ನ ಕೊಲಿಸಿ | ಬಂದಪಳ್ಕೆ ನಿನ್ನರಸಿ || ||೧೬೮||

**ರಾಗ ನವರೋಜು ಆದಿತಾಳ**

ಮಧುರತರಾಂಬುಜವದನೇ | ಮದಗಜಸನ್ನಿಭಗಮನೇ |
ಪದುಮದಳಾಯತನಯನೇ | ಪರಮಪತಿವ್ರತೆ ಶಬರೀ || ||೧೬೯||

ಪಂಚವಟೀ ವನದೊಳಗೆ | ಮಮ ರಮಣೀ ಜನಕಸುತೆ |
ವಂಚನೆಯಿಂ ಕದ್ದವಳ | ನೊಯ್ದಿಹ ರಾವಣ ಖೂಳ || ||೧೭೦||

ಸೀತೆಯ ಕಾಣದರಿಂದ | ಅರಸುತ ಬಂದೆ ಕಬಂಧ |
ರೀತಿಯ ಪೇಳಲು ನಮಗೆ | ಬಂದೆವು ನಾವ್ ನಿನ್ನೆಡೆಗೆ || ||೧೭೧||

ದಾರಿಯದಾವುದು ತರುಣಿ | ತೋರಿಕೊಡೆ ನಾರೀಮಣಿ |
ಚಾರು ಸರೋವರದೆಡೆಗೆ | ಪೋಗಲುಬೇಕೀಗೆಮಗೆ || ||೧೭೨||

ರಾಘವಕೇಳೀ ಪಥದಿ | ಸಾಗಿದರಾ ಸುರವನದಿ |
ಮೇಗೆ ಸರೋವರವಿಹುದು | ತೋರುವುದೇ ಪಂಪೆಯದು || ||೧೭೩||

**ವಾರ್ಧಕ**

ಕರವ ಮುಗಿದಿಂತೆಂದ ಶಬರಿಗೊಲಿದಾರಾಮ
ಕರುಣಿಸುವ ಸದ್ಗತಿಯ ಮುಂಚೆ ಪಂಪಾಸರೋ
ವರದೆಡೆಗೆ ಬಂದು ಮಜ್ಜನವೆಸಗಿ ಕಮಲವನು ತರುಣಿಯೆಂದೇ ಭ್ರಮಿಸುತ ||
ಸ್ಮರನ ಬಾಣದ ವೇಧೆಯಿಂದ ಸಂತಪಿಸುತ್ತ
ಮರೆದು ನಿಜದೇಹವಂ ಬಳಿಯೊಳಿಹ ನಿಜಸಹೋ
ದರನೊಳುರೆ ಚಿತ್ತಚಾಂಚಲ್ಯದಿಂದುಸುರಿದಂ ಮನಬಂದ ತೆರದಿಂದಲಿ || ||೧೭೪||

**ರಾಗ ನವರೋಜು ಆದಿತಾಳ**

ಜಲಜದಳಾಯತನಯನೇ | ಜಲಜಮುಖಿ ಮಹೀತನುಜೆ |
ಜಲದೊಳಗೇತಕೆ ಬಂದು | ನೆಲಸಿಹಳ್ಕೆ ಸತಿಯಿಂದು || ||೧೭೫||

ಜನಕಸುತೆ ಜನರಹಿತೆ | ಮನಸಿಜಮೋಹನರುಚಿರೆ |
ಕನಕಮಯಾ ತನುಪುಳಕೆ | ಮುನಿನಮಿತೇ ಮಮವನಿತೆ || ||೧೭೬||

ನಾರಿಯ ಕೈಗಳ ನೋಡು | ತೋರುತಿದೆ ಕುಚವೆರಡು |
ನೀರೊಳಗೇತಕೆ ಬಂದು | ಸೇರಿಹಳ್ಕೆ ಸತಿಯಿಂದು || ||೧೭೭||

ಮಾನಿನಿಯಂಜುವಳೆಂದು | ಮಾನದಿ ಕಾದಿರುಯೆಂದು ||
ನಾನಿನಗಾಡಿದ ನುಡಿಯ | ಆನದೆ ಬಂದೆನ್ನೆಡೆಯ || ||೧೭೮||

ಕಡುಕಮಲ ಸಖಕಿರಣ | ಸುಡುತಿದೆ ಮೈಯಾವರಣ ||
ಗಿಡಮರನ ತಂಪಿನೊಳೊ | ಯ್ದಿಡು ಯೆನ್ನ ಮಮ ಸಹಜ || ||೧೭೯||

**ರಾಗ ಮೋಹನ ತ್ರಿವುಡೆತಾಳ**

ರಘುವೀರಾಂಬುಜವದನ | ಈ ಮರಳು ಮಾ |
ತಿಗೆ ಯೇನಂಬೆನು ಸುಜಾಣ || ಪಲ್ಲವಿ ||

ಇರುಳು ಮೂಡುವನೆ ಸೂರ್ಯ | ನೋಡಲು ಚಂದ್ರ |
ಕಿರಣವಲ್ಲವೆ ಅಣ್ಣಯ್ಯ ||
ಸರಸಿಜದರಳಲ್ಲವೇ | ನೀರೊಳು ಸೀತೆ |
ಇರುವುದುಂಟೇ ರಾಘವ || ||೧೮೦||

**|| ಸೀತಾಪಹಾರ ಪ್ರಸಂಗ ಮುಗಿದುದು ||**

## ೫. ವಾಲಿಸಂಹಾರ ಪಾತ್ರಗಳು

ರಾಮ
ಲಕ್ಷ್ಮಣ
ಸುಗ್ರೀವ
ಹನುಮಂತ
ಜಾಂಬವ
ಬಾಲಬ್ರಹ್ಮಚಾರಿ
ವಾಲಿ
ತಾರೆ
ಅಂಗದ
ನಳ
ನೀಲ
ಕಪಿಗಳು

**ವಾರ್ಧಕ**

ಇರದೆ ಮೃದುವಚನದಿಂದಗ್ರಜನ ತಾಪಮಂ
ಪರಿಹರಿಸಿ ಲಕ್ಷ್ಮಣಂ ಸರ್ವೋಪಚಾರದಿಂ
ಸರಸಿಜದ ದಳಗಳಿಂ ತಣ್ಣೀರಹನಿಗಳಂ ತಳಿದು ಚೇತನಗೊಳಿಸಲು |
ತರುನೆಳಲನಾಂತಿರಲು ಋಷ್ಯಮೂಕದೊಳಿರ್ಪ
ತರಣಿಸುತ ಸುಗ್ರೀವ ಕಂಡು ವಾಲಿಯ ಭಯದಿ
ಸರಸಿಜೋದ್ಭವಸುತಾದಿಗಳ ಹತ್ತಿರಕೆ ಕರೆದಾಗಲವರೊಡನೆಂದನು || ||೧||

**ರಾಗ ಮಧ್ಯಮಾವತಿ ಏಕತಾಳ**

ವಾನರೇಶ್ವರರೆಲ್ಲರು ಕೇಳಿ |
ಏನು ಸೋಜಿಗವೆಂದು ತನಗೀಗ ಪೇಳಿ || ಪಲ್ಲವಿ ||

ತರಣಿಪ್ರಕಾಶದಿಂ ಪಂಪಾತೀರಕೆ ಬಂದ |
ಲ್ಲಿರುವಂಥ ವೀರರ್ ಯಾರೆಂದು ನೋಡಿ ||
ದುರುಳನಗ್ರಜನು ಸಂಹರಿಸಬೇಕೆನುತೆನ್ನ |
ಕರೆಸಿ ತಾನಿವರನು ಕಳುಹಿಸಿರುವನೊ || ||೨||

ವೈರಿಗಳಾಗಲಿವರು ಹಿತರಾಗಲಿ |
ಮಾರುತಾತ್ಮಜ ನೀನು ಪೋಗಿಬಾರಯ್ಯ ||
ಬೇರೊಂದು ರೂಪಿನಿಂದಿವರಿರ್ಪ ಬಳಿಗಯ್ದಿ |
ಕಾರಣೀಕರ ಕಂಡು ಕರೆತಾ ಶೀಘ್ರದಲಿ || ||೩||

**ವಾರ್ಧಕ**

ಸಾರತರಮಾಗಿ ಸುಗ್ರೀವ ಪೇಳಿದ ಮಾತ
ನೋರಂತೆ ಕೇಳುತಾ ಕ್ಷಣದೊಳಲ್ಲಿಂ ಜಿಗಿದು
ಹಾರಿ ನಿಜರೂಪಮಂ ಬಿಟ್ಟು ಬಾಲಬ್ರಹ್ಮಚಾರಿವೇಷವತಾಳುತ |
ವೀರರೆಡೆಯಂ ಸಾರ್ದು ವಿನಯದಿಂ ವಂದಿಸುತ
ಶೂರ ರಘುಕುಲವನಧಿರಾಕಾನಿಶಾಕರರ
ಯಾರು ನೀವೆಲ್ಲಿಗಯ್ದುವಿರೆಂದು ಬೆಸಗೊಂಡನಪ್ರತಿಮ ಮರುತಾತ್ಮಜ || ||೪||

**ರಾಗ ಗೌಳಮಲಹರಿ (ದೇಶಿ) ಏಕತಾಳ**

ಯಾವಲ್ಲಿಂದ ಬಂದಿರಯ್ಯ | ನೀವು ಬಾಲಕರಿರ |
ಯಾವಲ್ಲಿಗೆ ಪಯಣವಯ್ಯ | ಜಾಣ ಬಾಲಕರಿರ || ||೫||

ಊರಾವುದು ತಂದೆತಾಯ್ಗ | ಳಾರು ಬಾಲಕರಿರ | ನಿಮ್ಮ |
ಘೋರಡವಿಗೆ ಕಳುಹಿಸಿದವರು | ಯಾರು ಬಾಲಕರಿರ || ||೬||

ಪೆಸರದೇನು ನಾಚದೆನ್ನೊಳ್ | ಉಸುರಿ ಬಾಲಕರಿರ | ನೀವು |
ಋಷಿಗಳಂತೆ ವೇಷದಿ ಸಾ | ಹಸದ ಬಾಲಕರಿರ || ||೭||

ಕಾನನ ಕಾನನ ಹುಡುಕುವ | ದೇನು ಬಾಲಕರಿರ | ಸುಂದ |
ರಾನನ ಬಾಡಿರುವುದೇಕೆ | ಜಾಣ ಬಾಲಕರಿರ || ||೮||

**ರಾಗ ಕೇದಾರಗೌಳ ಅಷ್ಟತಾಳ**

ಧರೆಯೊಳತ್ಯಧಿಕವೆಂದೆನಿಪಯೋಧ್ಯಾಪುರ |
ದರಸನ ಸುತರು ನಾವು ||
ವರಪಿತನಾಜ್ಞೆಯಂತಡವಿಯೊಳ್ಪದಿನಾಲ್ಕು |
ವರುಷವಿರಲು ಬಂದೆವು || ||೯||

ಹಿರಿಯಾತ ನಾ ರಾಮ ತಮ್ಮ ಲಕ್ಷ್ಮಣನೀತ |
ಭರತ ಶತ್ರುಹರೀರ್ವರು ||
ಇರುವರೂರೊಳಗನುಜಾತರೆನ್ನಯ ಮೋಹ |
ದರಸಿ ಜಾನಕಿಯೆಂಬಳು || ||೧೦||

ದುರುಳ ರಾವಣ ನಾವಿಲ್ಲದ ವೇಳ್ಯದಿ ಸೀತಾ |
ತರುಣಿಯನೊಯ್ದನೆಂದು ||
ಶರಣ ಜಟಾಯು ಪೇಳ್ದುದರಿಂದ ನಾವಿಲ್ಲಿ |
ಗರಸಿಕೊಂಡಯ್ತಂದೆವು || ||೧೧||

ತೋರುವ ಗಿರಿಯಾವುದದರೊಳಗಿರುವವ |
ನಾರು ನಿನ್ನಯ ಪೆಸರು ||
ಭೋರನೆ ತಿಳುಹೆನಲತಿಭಕ್ತಿಭಾವದಿ |
ಮಾರುತಾತ್ಮಜನೆಂದುನು || ||೧೨||

**ರಾಗ ಧನ್ಯಾಸಿ ಅಷ್ಟತಾಳ**

ಪಾಹಿಪಂಕಜದಳಲೋಚನ | ಮುಕ್ತಿಂ |
ದೇಹ್ಯಹಲ್ಯಾಶಾಪಮೋಚನ |
ಮಹಾಂತಗುಣನಿಧಿ | ಮಹಿಮ ಸಜ್ಜನಪಾಲ || ||೧೩||

ಅಂಗಜಪಿತ ಪಾಪನಾಶನ | ಬಾಣ |
ಭಂಗ ಉತ್ತಮ ಗರುಡಾಸನ |
ಸಂಗರಹಿತ ದೇವೋ | ತ್ತುಂಗ ನೀಲನಿಭಾಂಗ || | |೧೪||

ಲೋಕನಾಯಕ ಸದ್ವಿಚಾರಣ | ಕರು |
ಣಾಕರ ದುರಿತಸಂಹಾರಣ ||
ಸಾಕೇತಪುರವಾಸ | ಶರಣು ರಾಮಚಂದ್ರೇಶ || ||೧೫||

**ಭಾಮಿನಿ**

ಜೀಯ ನೀವೀಗೆಂದ ವಾನರ
ರಾಯ ಸಚಿವರು ನಾವು ನಮ್ಮಯ
ತಾಯಿ ತಂಗಿ ತದೀಯ ಕಪಿಕುಲಸಾರ್ವಭೌಮಂಗೆ |
ವಾಯುವೆನ್ನಯ ತಾತನೆನ್ನಭಿ
ಧೇಯ ಹನುಮನುಯೆಂದು ಮಿಕ್ಕಿನ
ಮಾಯೆಯವರಾವಲ್ಲೆನುತ ನುತಿಸಿದನು ಪದಕೆರಗಿ || ||೧೬||

**ರಾಗ ಮೆಚ್ಚುಗೌಳ ಅಷ್ಟತಾಳ**

ಮರುಳು ಮಾತೆನ್ನೊಡೆನುಸುರುವದೇತಕೊ |
ತೆರಳತ್ತ ಬ್ರಹ್ಮಚಾರಿ ||
ಮರುತಸಂಜಾತನ ಬಗೆಯ ಕೇಳಿರುವೆ ಭೀ |
ಕರಕಳೇವರನಾತನು | ಹನುಮಂತನು || ||೧೭||

ನಿಜವೇಷವಿದೆ ನೋಡು ಹನುಮಂತ ನಾ ನಿನ್ನ |
ಭಜಕನಾಗಿರುವೆನಯ್ಯ ||
ಅಜಸುರಾದಿಗಳು ಪೂಜಿಸುವಂಥ ಪಾದದ |
ನಿಜಭಕ್ತಿ ನೀಡೋ ರಾಮ | ಸಮರನಿಸ್ಸೀಮ || ||೧೮||

ಸಾಕಯ್ಯ ಬೆಳೆದುದು ಭೂವ್ಯೋಮ ಪಾತಾಳ |
ಲೋಕವ ನಡುಗಿಸಿದೆ ||
ಹೇ ಕಪಿವರ ಮೊದಲಂದವ ಧರಿಸು ವಿ |
ವೇಕದ ಮತಿಯಿದೆಂತು | ನಿನಗೆ ಬಂತು || ||೧೯||

ಹಿಂದೆ ಬಾಲ್ಯದೊಳೆನ್ನ ಮಾತೆಯಂಜನೆದೇವಿ |
ಯೆಂದ ಉಪದೇಶದಲಿ ||
ಸಂದರ್ಶನದಿ ಜನ್ಮ ಸಫಲವಾಯಿತು ದಯ |
ದಿಂದೊಲಿದಿಷ್ಟವೀಯೋ | ನೀ ಕಾಯೋ || ||೨೦||

ಸುಗ್ರೀವನೆಂಬ ಮರ್ಕಟರಾಜ ತವ ಪದಾ |
ನುಗ್ರಹ ಬಯಸಿಹನು ||
ಅಗ್ರಜ ವಾಲಿಯ ಭಯದೊಳಗೀ ಪರ್ವ |
ತಾಗ್ರದೊಳಿಹನು ದಯ | ಮಾಡಬೇಕಯ್ಯ || ||೨೧||

ಮಾರುತಾತ್ಮಜ ನಿನ್ನ ಸಂಗತಿಗಳನು ವಿ |
ಚಾರಿಸಲೇಕರಿತೆ ||
ತೋರಿಬೇಗದೊಳೀಗ ಸಖ್ಯವ ಮಾಡಿಸು |
ಸಾರಸಸಖಸುತನ | ಸುಗ್ರೀವನ || ||೧೧||

ಉಗ್ರಗಭಸ್ತಿ ಸಂಜಾತನು ತವಪಾದಾ |
ನುಗ್ರಹ ಬಯಸಿಹನು ||
ಅಗ್ರಜ ವಾಲಿಯ ಭಯದಿಂದಲೀ ಪರ್ವ |
ತಾಗ್ರದಿ ನೆಲಸಿರುವ | ನಾವ್ ಪೋಗುವ || ||೧೨||

**ಕಂದ**

ಈ ಪರಿಯುಸಿರುತ ಮಾರುತಿ
ಭೂಪಾಲರ ನಿಜ ಪೆಗಲಿನೊಳೇರಿಸುತಲ್ಲಿಂ |
ದಾಪರ್ವತಕವದಿರ ಪ್ರ
ತಾಪವನುಸಿರಿದನಂದಾ ಭಾಸ್ಕರಸುತಗಂ || ||೧೪||

**ರಾಗ ಘಂಟಾರವ ರೂಪಕತಾಳ**

ಭಾನುನಂದನ | ವಾನರೇಶ್ವರ |
ನೀನು ಲಾಲಿಸು | ಮಾನಸವಿಟ್ಟು || ಪಲ್ಲವಿ ||

ರಾಮನೀತನು | ರಾಜೀವಾಕ್ಷನು |
ಭೂಮಿಪಾಲನು | ಭಾನುವಂಶನು || ||೧೫||

ಸಾಕೇತಾಧಿಪ | ನಾದ ದಶರಥ |
ನಾ ಕುಮಾರರು | ರಾಮ ಲಕ್ಷ್ಮಣ || ||೧೬||

ಮಾತೆಕೈಕೆಯ | ಮಾತಿಗೋಸುಗ |
ಈತ ರಾಘವ | ಸೀತೆಯೂ ಸಹ || ||೧೭||

ಧಾರಿಣೀಪತಿ | ಧರ್ಮಮಾರ್ಗದಿ |
ಘೋರಡವಿಯಲಿ | ವಾಸಿಸುತ್ತಿರೆ || ||೧೮||

ಪಂಚವಟಿಯೊಳು | ಪೋಗಿ ರಾವಣ |
ವಂಚನೆಯಿಂದ | ಒಯ್ದು ಸೀತೆಯ || ||೧೯||

ಕೊಂಡುಪೋದರೆ | ಕಾಡು ದಾರಿಯ |
ಕಂಡುಕೊಳ್ಳುತ್ತೈ | ತಂದರಿಲ್ಲಿಗೆ || ||೨೦||

ಕಾರಣೀಕರು | ಕಂಡರಿರ್ವರು |
ಸೂರಿಯಾತ್ಮಜ | ಸುಲಭರಲ್ಲಯ್ಯ || ||೨೧||

**ರಾಗ ಘಂಟಾರವ ಅಷ್ಟತಾಳ**

ರಾಮ ಹರೇ ರಾಮ | ರಾಮ ಹರೇ ರಾಮ |
ರಾಮ ಹರೇ ಪಾಹಿ | ರಾಮ ಹರೇ ||ಪಲ್ಲವಿ ||

ಭೀಮಪರಾಕ್ರಮ ಭಕ್ತರಕ್ಷಾಮಣಿ |
ಕೋಮಲರೂಪಹರೇ || ಅನುಪಲ್ಲವಿ ||

ಇಕ್ಷ್ವಾಕುವಂಶದ ಭೂಮಿಪಾಲರು ಧರ್ಮ |
ರಕ್ಷಕರಧಿಕರಲ್ಲೈ | ಮಮಾ |
ಪೇಕ್ಷೆಯೊಂದುಂಟದ ಕೇಳಿ ನೀ ನ್ಯಾಯವ |
ನೀಕ್ಷಿಸಿ ಸಲಹಬೇಕು || ||೨೨||

ಅಗ್ರಜ ವಾಲಿ ಪರಾಕ್ರಮದಿಂದೆನ್ನ |
ನಿಗ್ರಹಿಸಲು ಬಗೆದು | ತಾ ಮ |
ಹೋಗ್ರದೆ ಹೊರಗಟ್ಟಿ ಕೂಡಿಕೊಂಡಿರುವ ಪಾ |
ಣಿಗ್ರಹದ ಸತಿಯ || ||೨೩||

ಶೌರ್ಯಬಲಾನ್ವಿತನಾತನ ಭಯಕಾಗಿ |
ಸೂರ್ಯನಪ್ಪಣೆಯಿಂದಲಿ | ಮುನಿ |
ವರ್ಯ ಮಾತಂಗ ಶಾಪವಿದ್ದುದರಿಂದ |
ಧೈರ್ಯದಿಂದಿರುವೆನಿಲ್ಲಿ || ||೨೪||

ರಾವಣನೆಂಬ ನಿಶಾಚರನನು ಹಿಂದೆ |
ಕೋವಿದ ಹಿಡಿದು ತಂದು | ತಾರಾ |
ದೇವಿಯ ಮಗನ ತೊಟ್ಟಲಿಗೆ ಕಟ್ಟಿದ ವಾಲಿ |
ದೇವೇಂದ್ರಸುಕುಮಾರನು || ||೨೫| |

ದೇವತೆಗಳು ಸಹಿತಂಜುವರಣ್ಣನ |
ಠೀವಿ ಪರಾಕ್ರಮಕೆ | ರಾಮು |

ದೇವ ನಾವಿಬ್ಬರು ಜೋಡಾದೆವೀ ವಾಲಿ |
ರಾವಣರಿಂದ ಹೀಗೆ || ||೩೬||

ಕಣ್ಣಾರೆ ಕಂಡರೆ ಬಿಡುವೆನೆ ಸೀತೆಯ |
ಎನ್ನ ಮನಃಪ್ರೀತೆಯ | ನಿನ್ನ |
ಅಣ್ಣನ ಪಾಡೇನು ವಾಲಿಯ ಕೊಂದೀಗ |
ಮಣ್ಣಗೂಡಿಸುವೆನೆಂದ || ||೩೭||

ಜಾಣ ನೀನಾದರೆ ನೋಡು ಕೈಯೊಳಗಿದ್ದ |
ಬಾಣಜಾತಂಗಳನು | ವಾಲಿ |
ಪ್ರಾಣವ ಕೊಂಡೊಂದು ನಿಮಿಷದಿ ನಿನ್ನಯ |
ರಾಣಿಯ ನಿನಗೀವೆನು || ||೩೮||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಅಮಮ ವಾಲಿಯ ರಾಮಕೊಂದರೆ | ಸತಿ |
ರುಮೆಯ ಬಿಡಿಸಿ ನೀನು ತಂದರೆ ||
ನಿಮಿಷದೊಳೀ ಸೇನೆ ಸಹ ಬಂದು | ಪಾದ |
ಕಮಲದ ಸೇವೆ ಮಾಡುವೆ ನಿಂದು || ||೩೯||

ನುಡಿದ ಮಾತಿಗೆ ಎಡರಿಲ್ಲದೇ | ಇಕ್ಕೋ |
ಕೊಡುವೆ ನಂಬುಗೆ ಮಾತಷ್ಟಲ್ಲದೆ ||
ಬಿಡದೆ ಕೈತಟ್ಟುತೊಬ್ಬೊಬ್ಬರು | ಒಂದೇ |
ದೃಢಮನದವರಾದರಿಬ್ಬರೂ || ||೪೦||

ಕನ್ನೆಯನಸುರ ಕದ್ದೊಯ್ವಾಗ | ತನ್ನ |
ಚಿನ್ನಗಳೆಲ್ಲವ ತೆಗೆದಾಗ ||
ಎನ್ನ ಪರ್ವತಕಿಟ್ಟಳದ ನಾನು | ಕಟ್ಟಿ |
ಚೆನ್ನಾಗಿಟ್ಟಿರುವೆ ನೋಡಿದ ನೀನು || ||೪೧||

ಎಂದು ಸರ್ವಾಭರಣಗಳನ್ನು | ಬೇಗ |
ತಂದು ಕೈಯಲಿ ಕೊಟ್ಟರದರನ್ನು ||
ಇಂದಿರೆಯರಸ ತಾ ನೋಡಿದ | ಮನ |
ನೊಂದುಕೊಂಡತಿ ಚಿಂತೆ ಮಾಡಿದ || ||೪೨||

**ರಾಗ ನೀಲಾಂಬರಿ ಆದಿತಾಳ**

ಕಂಜಾನನೆ ಕಲಕೀರವಾಣಿ | ಸಂಜೀವನೆ ಸರಸಕಲಾಪೆ ||
ಮಂಜುಳತರಂಗಿಣಿ ಮನೋಹರೆ | ಕುಂಜರಗಮನೆ ಸುನಿಧಾನೆ || ||೪೩||

ಫಣಿವೇಣಿಯ ಕುಚಗಳ ಮಧ್ಯದಿ | ಕುಣಿದಾಡುವ ಸರವಿದೆ ಸಹಜ |
ಮಣಿಕಂಕಣ ಮುದ್ರಿಕೆಗಳ ಸರ | ಪಣಿಯಂದವ ಬಣ್ಣಿಸಲೇಸೈ || ||೪೪||

ಲೋಲಾಕ್ಷಿಯ ಕರ್ಣದೊಳೊಪ್ಪುವ | ಓಲೆಯೊಳಿರಿಸಿದ ಮೌಕ್ತಿಕವು ||
ಬಾಲಾರ್ಕನ ಜರೆಯುವ ಮೂಗುತಿಗಿಟ್ಟ | ನೀಲದ ಹರಳಿದಕೋ ಸಹಜಾತ || ||೪೫||

ನೋಡುವರಾಭರಣವ ಸಹಜನೆ | ಚೂಡಾಮಣಿ ನಾಸ್ತಿ ಇದರೊಳಗೆ ||
ಮೂಢಾತ್ಮಕನೊಯ್ವಂಜಿಕೆಗೆ ಬೀ | ಸಾಡಿದಳೆಲ್ಲಿಯೊ ಎನಲೆಂದ || ||೪೬||

ಕಾಲುಂಗುರ ಬಲ್ಲೆನು ಹೊರತಾಗಿ | ಮೇಲಾದಾಭರಣವನರಿಯೆ ||
ನೀಲಾಳಕಿಯ ನಿರ್ಮಲಗುಣವ | ಪೇಳೀಪರಿ ನೀ ಚಿಂತಿಸಲೇಕೆ || ||೪೭||

**ವಾರ್ಧಕ**

ಇನಸುತನು ಕೊಟ್ಟ ಸರ್ವಾಭರಣವಂ ಕಂಡು
ಮನಸಿನಲಿ ಕಡುನೊಂದು ಚಿಂತಿಸುವ ಮತ್ತೊಡನೆ
ಕನಸ ಕಂಡೆಚ್ಚರಿಕೆದೋರ್ವಂತೆ ಕ್ಲೇಶಂಗಳಂ ಮರೆತನಾಕ್ಷಣದೊಳು |
ಜನಕನಂದನೆಗಿಡುವ ಪುಣ್ಯಫಲವಿರಲು ಬರು
ವನಕ ತೆಗೆದಿರಿಸು ಸುಗ್ರೀವ ನೀನಿನ್ನು ಸುರ
ಪನಸುತನ ಸಂಗರಕೆ ಬರಹೇಳೆನಲು ಶಕ್ತಿ ಪರಿಕಿಸಲು ಮನದಂದನು || ||೪೮||

**ರಾಗ ಮಾರವಿ ಝಂಪೆತಾಳ**

ರಾಘವ ಮಹಾವೀರ ಕೇಳು ಸುವಿಚಾರ |
ಈಗೆನ್ನ ಸಂಶಯವ ಪರಿಹರಿಸು ಪೂರ || ಪಲ್ಲವಿ ||

ದುಂದುಭಿಯ ಒಡಲಧರೆ | ಯಿಂದಲಮರೇಂದ್ರಸುತ |
ನೊಂದು ಮೊಳವನು ಸಹಸ | ದಿಂದಲೆತ್ತುವನು ||
ಇಂದು ನೀನೆತ್ತಿದರೆ ಸಂದೇಹ ಪೋಗಿ ಬಳಿ |
ಕೊಂದೆ ಮತದಿಂದಲಿಹೆ | ನೆಂದು ಪೇಳಿದನು || ||೪೯||

ಕಾಲತುದಿಯಿಂದ ಮೂ | ರೇಳು ಯೋಜನ ಬಿಸುಟ |
ಮೇಲೆ ತಾಳೆಯ ಮರಗ | ಳೇಳ ಕಡಿದಿಡಲು ||

ಶ್ರೀಲೋಲ ಶರಣೆಂದು | ಕಾಲಿಗೆರಗಲು ರವಿಜ |
ವಾಲಿಯನು ರಣಕೆ ಬರ | ಹೇಳೆಂದ ರಾಮ || ||೫೦||

ರಘುವರನ ಸಾಹಸವ | ಮಿಗೆ ಕಂಡು ಸುಗ್ರೀವ |
ನಗಲಿ ಭಯವನು ಕೀಶ | ರುಗಳೊಡನೆ ಬಂದು ||
ಜಗಳಕಣ್ಣನ ಕರೆಯ | ಲಗಣಿತಪರಾಕ್ರಮದಿ |
ಹಗರಣಕ್ಕೊದಗಿ ತ | ಮ್ಮಗೆ ನುಡಿದ ವಾಲಿ || ||೫೧||

**ರಾಗ ಶಂಕರಭರಣ ಮಟ್ಟೆತಾಳ**

ಭಾನುತನುಜ ಭಳಿರೆಯನುಜ | ಬಂದೆಯಾ ಮಮ |
ಏನು ಧೈರ್ಯದಿಂದ ಕರೆದೆ | ಎಲೊ ಪರಾಕ್ರಮ || ||೫೨||

ಮಾನಿನಿಯನು ಬಿಡುವುದಕ್ಕೆ | ಮನಸು ಬಾರದೆ |
ನೀನು ಕೆಡುವೆ ನೀತಿಯಲ್ಲ | ನಿನಗೆ ಸಾರಿದೆ || ||೫೩||

ನಾನು ಸತಿಯ ಕೊಡೆನು ಜವದಿ | ಮರಳಿ ಪೋಗೆಲಾ ||
ನೀನು ಹಿಂದೆ ಪಡೆದ ಭಂಗ | ವೆಲ್ಲ ಮರೆತೆಲಾ || ||೫೪||

ಅಣಕವಲ್ಲ ಮೊದಲಿನಂತೆ | ಅಣ್ಣ ರಣದೊಳು |
ಸೆಣಸಿ ನೋಡು ಸಲುಗೆಯಿಂದ | ಶೌರ್ಯಗುಣದೊಳು || ||೫೫||

ಎಂದ ಮಾತ ಕೇಳಿ ಕೋಪ | ದಿಂದಲನುಜಗೆ |
ಒಂದು ಗಿರಿಯ ಕಳಚಿ ಬಿಸುಟ | ನಂದು ರವಿಜಗೆ || ||೫೬||

ಬರುವ ಗಿರಿಯ ತಡೆದು ದೊಡ್ಡ | ಪರುವತಂಗಳ |
ಸುರಪನಣುಗನಂಗಕಿಟ್ಟ | ತರತರಂಗಳ || ||೫೭||

ಮರ ಮರಂಗಳುಭಯ ಬಲದೊ | ಳುರುಳ್ವ ಗಿರಿಗಳ |
ಮೊರೆವ ರಭಸಕಮರರಂಜು | ತಿರುವ ಪರಿಗಳ || ||೫೮||

ಅದ್ರಿ ವೃಕ್ಷವೆಲ್ಲ ತೀರಿ | ತಿಬ್ಬರಿದಿರಲಿ |
ಗುದ್ದುತೊಡನೆ ಕಯ್ಯ ಕಾಲಿಂ | ದೊದ್ದು ಭರದಲಿ || ||೫೯||

ಉರಕೆ ಮುಷ್ಟಿಯಿಂದ ತಿವಿದ | ಭರದ ಪೆಟ್ಟಿಗೆ |
ತಿರುಗೆ ತಲೆಯು ಭಾನುತನುಜ | ನೊರಗೆ ಸೃಷ್ಟಿಗೆ || ||೬೦||

ಬೀಳಲನುಜನಂಗಕೆರಡು | ಕಾಲಲೊದ್ದನು |
ಮೂಳ ಹೋಗು ಸಾಯೆನುತ್ತ | ವಾಲಿ ನಡೆದನು || ||೬೧||

ಹೋದನಣ್ಣನೆಂದು ತಿಳಿವು | ತಾಧರಿಸಿದನು |
ಕ್ರೋಧದಿಂ ಧರಾಧಿಪತಿಯ | ಮೂದಲಿಸಿದನು || ||೬೨||

**ರಾಗ ಘಂಟಾರವ ರೂಪಕತಾಳ**

ವಿಶ್ವನಾಯಕ | ನಿನ್ನ ವಾಕ್ಯವ |
ವಿಶ್ವಾಸವೆಂದು | ನಂಬಿದೆನಿಂದು || ಪಲ್ಲವಿ ||

ಎನ್ನವೈರಿಯ | ಮುಂದೆ ನಿಲ್ಲಿಸಿ |
ಕಣ್ಣಲಿ ಕಂಡೆ | ಚೆನ್ನವಾಗಿಯೆ ||
ಇನ್ನು ಸಾಕಯ್ಯ | ನಿನ್ನ ತಳ್ಳಿಯು |
ಮನ್ನರಾಧಿಪ | ಮಂಜುಳಾಕಾರ || ||೬೩||

ಸೂರ್ಯವಂಶದ | ರಾಯರಾಡಿದ |
ಕಾರ್ಯ ತಪ್ಪದು | ಕಪಟವಲ್ಲಿದು ||
ಧೈರ್ಯತಾಳಯ್ಯ | ಸೂರ್ಯನಂದನ |
ಕಾರ್ಯವೆಸಗಲು | ಮೋಸವಾಯಿತು || ||೬೪||

ವಾಲಿಯ ನಿನ್ನ | ಕಾಣಲಿರ್ವರ |
ಆಳುಭೇದವೆ | ತಿಳಿಯದಾಯಿತು ||
ನಿನ್ನ ಮೋಸದಿ | ಕೊಲಲು ಲೋಕದಿ |
ಎನ್ನ ನಿಂದಿಸಿ | ಜರೆವರಲ್ಲಯ್ಯ || ||೬೫||

ಬಾಲಕ ಗಜ | ಪುಷ್ಪದಾ ನಿಜ |
ಮಾಲೆ ಇಟ್ಟರೆ | ಇವನ ಕೊರಳಿಗೆ ||
ಮಲ್ಲ ಸಾಹಸ | ವಾಲಿಯನ್ನು ನಾ |
ಕೊಲ್ವೆನೀಕ್ಷಣ | ಇಲ್ಲ ಸಂಶಯ || ||೬೬||

ಮಗಧಜಾತೆಯ | ಮಗನು ನೀತಿಯ |
ಬಗೆದು ಮಾಲೆಯ | ನಿಟ್ಟ ರವಿಜಗೆ ||
ತರಣಿನಂದನ | ತೆರಳು ಇನ್ನು ನೀ |
ಧುರಕೆ ವಾಲಿಯ | ಕರೆದು ಬಾರಯ್ಯ || ||೬೭||

**ಶಾರ್ದೂಲವಿಕ್ರೀಡಿತ**

ಶ್ರೀರಾಮಾಖ್ಯನ ಮಾತ ಕೇಳ್ದು ರವಿಜಂ ಸದ್ಧೈರ್ಯದಿಂದಾಕ್ಷಣಂ
ಶೂರತ್ವಂಗಳ ತೋರ್ಪೆನೆಂದು ಬರುತಾ ಕಿಷ್ಕಿಂಧದ ದ್ವಾರದಿಂ |
ಘೋರಾಕಾರದಿ ಕೂಗಲಾ ಸುರಪಜಂ ಕೋಪಾಗ್ನಿಯಿಂದೇಳಲು
ತಾರಾದೇವಿ ವಿವೇಕದಿಂದ ತಡೆದೂ ತತ್ಕಾಂತಗಿಂತೆಂದಳು || ||೭೮||

**ರಾಗ ಎರುಕಲ ಕಾಂಭೋಜಿ ಏಕತಾಳ**

ನೀತಿಯಲ್ಲ ಪೋಪುದಿಂದು | ನೀ ಕೇಳು ಮತ್ಪ್ರಾಣಕಾಂತ || ಪಲ್ಲವಿ ||

ಜಾತನಂಗದ ಪೇಳ್ದೊಂದು | ಮಾತ ಕೇಳಿದೆ ನಾನಿಂದು || ಅನುಪಲ್ಲವಿ ||

ಪುಂಡರೀಕನೇತ್ರನು ಮಾ | ರ್ತಂಡಜಾತ ಸುಗ್ರೀವನು |
ಕಂಡು ತಮ್ಮೊಳಂತರಂಗ | ಗೊಂಡೇಕಾಂತದಿ ||
ಚಂಡವಿಕ್ರಮ ರಾಮನ | ಹೆಂಡತಿಯನಾ ರಾವಣ |
ಕೊಂಡುಪೋದನಾ ರಕ್ಕಸನ | ಖಂಡಿಸಲಾಗಿ || ||೭೯||

ನಿನ್ನ ಕೊಂದಾತ ಸತಿ | ಯನ್ನು ಬಿಡಿಸಿ ಕೊಡುವೆನೆಂದು |
ಮನ್ನರಾಧಿಪತಿಯು ಸತ್ಯ | ವನ್ನಿತ್ತನಂತೆ ||
ನಿನ್ನ ತಮ್ಮ ಸೀತಾದೇವಿ | ಯನ್ನು ತರುವ ಬಗೆಗಾಗಿ |
ತನ್ನ ಕಪಿಸೇನೆ ಸಹಿತ | ಸನ್ನಹವಾಗಿ || ||೮೦||

ಬಂದು ರಾಮಸೇವೆ ಮಾಳ್ಪೆ | ನೆಂದು ಭಾಷೆ ಕೊಟ್ಟನಂತೆ |
ಸಂದೇಹವಿಲ್ಲದೆ ತಮ್ಮೊ | ಳೊಂದಾದರಂತೆ ||
ದುಂದುಭಿಯ ಕಾಯವ ಕಾ | ಲಿಂದ ಚಿಮ್ಮಿ ಯೋಜನಕ್ಕೆ |
ಬಂದು ಬೀಳಲಾಮೇಲೆ ಕೇ | ಳೊಂದು ಕಾರ್ಯವ || ||೮೧||

ಏಳು ತಾಳವೃಕ್ಷವನ್ನು | ಸೀಳುಮಾಡಿ ಈಗ ನಿಮ್ಮ |
ಮೇಲೆ ಕೂಡಿ ಬಪ್ಪರಂತೆ | ಕಾಳಗಕ್ಕೆಂದು ||
ನಾಳೆ ನೋಡಿಕೊಂಬ ಯುದ್ಧ | ವೇಳೆಯಲ್ಲವೆನುತಲವನ |
ಕಾಲ ಮೇಲೆ ಬಿದ್ದು ತಾರೆ | ಹೇಳಿಕೊಂಡಳು || ||೮೨||

**ರಾಗ ಪಂತುವರಾಳಿ ಅಷ್ಟತಾಳ**

ಚಿತ್ರತರಾಂಗಿ ಕೇಳ್ಬಾಲೆ | ಚಿತ್ರವಾಯ್ತು ನಿನ್ನ ಮಾತು |
ಮಿತ್ರಜಾತಂಗಂಜಿ ನಡೆವ | ವರ್ತಮಾನವುಂಟೆ ಕಾಂತೆ || ||೭೩||

ಧಾತ್ರಿಯೊಳೆನ್ನಧಟಿಗೆ ತ್ರಿ | ಮೂರ್ತಿಗಳಂಜುವರ್ರೈಸೆ |
ಮತ್ತೆ ರಾಮಗೀಮರೆಂಬ | ಮರ್ತ್ಯರಿಂದಲೇನಪ್ಪುದೆ || ||೭೪||

ಚಿತ್ತದಲ್ಲಿ ಶಂಕೆ ಬೇಡ | ಮತ್ತೆ ನೋಡೆನ್ನ ಕೈವಾಡ |
ಅತ್ತ ಹೋಗು ತಡೆಯಬೇಡ | ಮತ್ತಕಾಶಿನಿಯೆ ಗಾಢ || ||೭೫||

**ಭಾಮಿನಿ**

ಪುರವಮುತ್ತಿರೆ ವೈರಿಸೇನೆಯು
ಶರಭಶತಬಲಿ ಗಜಗವಯ ಸಂ
ಗರ ಭಯಂಕರ ಸುಮುಖ ದುರ್ಮುಖ ಗಂಧಮಾದನರ |
ಜರಿಯಗೆಡಹುತ ಅಂಗದನ ಪುರ
ಕಿರಿಸಿ ಭೀಕರಗಜ ಸುಷೇಣರ
ನೆರವಿಯಲಿ ನಡೆತಂದು ರವಿಜನ ತಡೆದನಾ ವಾಲಿ || ||೭೬||

**ರಾಗ ಮಾರವಿ ಝಂಪೆತಾಳ**

ಮತ್ತು ಮತ್ತೆನ್ನೊಡನೆ | ನಿತ್ತುಕೊಂಡೀ ರಣದೊ |
ಳುತ್ತರವ ಕೊಡುವೆ ಬಲು | ಧೂರ್ತ ಸುಗ್ರೀವ || ||೭೭||

ಧೂರ್ತನಲ್ಲದೊಡನುಜ | ಪತ್ನಿಯನು ಸೆರೆವಿಡಿದು |
ರಕ್ತಮದದಿಂದ ಕೊಡ | ದಿರ್ಪೆಯಾ ವಾಲಿ || ||೭೮||

ತಮ್ಮನೆಂಬುದರಿಂದ | ಧರ್ಮವರಿತೀಗ ಬಿಡೆ |
ಶರ್ಮವಿಡಿದೀ ಪರಿಯ | ಹೆಮ್ಮೆ ಬಂತಲ್ಲ || ||೭೯||

ಹೆಮ್ಮೆಯಲ್ಲದಡಿನಿತು | ದುರ್ಮಾರ್ಗಿಯಾಗಿ ದು |
ಷ್ಕರ್ಮಗತಿ ನಡೆಸುವುದು | ಧರ್ಮವೇನಣ್ಣ || ||೮೦||

ಮೊದಲೈದು ಬಾರಿ ನೋ | ಡಿದೆ ನಿನ್ನ ಶೌರ್ಯವನು |
ಅದ ಮರೆತು ಮತ್ತೆ ಬಂ | ದಿದಿರಾದೆ ಕಳ್ಳ || | |೮೧||

ಇದನೋಡು ಹೊಸಪರಿಯ | ಕದನಕೌಶಲಗಳನು |
ತುದಿಗಾಲ ನಿನಗೆ ಬಂ | ದೊದಗಿತೆಂದರಿಯ || ||೮೨||

ಬಾಯಿಂದ ಬಂದುದನು | ಬಗುಳಿ ನೀನೆನ್ನೊಡನೆ |
ಸಾಯದಿರು ಪೆಟ್ಟಿನಲಿ | ಸಟೆಯಲ್ಲ ತಮ್ಮ || ||೮೩||

ನ್ಯಾಯವುಸಿರಿದ ಮಾತು | ನಡತೆ ತಪ್ಪಿದ ಮೇಲೆ |
ನಾಯಿಂದ ಕಡೆಯಾಗಿ | ಬಗುಳುವುದೆ ಸಹಜ || ||೮೪||

ಹೆಚ್ಚು ಮಾತುಗಳೇಕೆ | ಎಚ್ಚರಿತುಕೊಳ್ಳೆನುತ |
ಕಿಚ್ಚಿನಂದದ ಕಣೆಯ | ನೆಚ್ಚನಾ ವಾಲಿ || ||೮೫||

ಚಚ್ಚರದಿ ಬಪ್ಪ ಪೊಸ | ಪೊಚ್ಚ ಕಣೆಗಳನೆಲ್ಲ |
ನುಚ್ಚುನುರಿಗೆಯ್ದು ಖತಿ | ಪೆಚ್ಚಿ ಸುಗ್ರೀವ || ||೮೬||

**ರಾಗ ಪಂಚಾಗತಿ ಮಟ್ಟೆತಾಳ**

ಜಾಣನಹುದೊ ಭಳಿರೆ ತಮ್ಮ | ತ್ರಾಣವನ್ನು ಕಂಡೆನೀಗ |
ಆನಲಾಪಡಿದರ ಕೊಳ್ಳೊ | ಮಾಣದದ್ರಿಯ ||
ಮಾಣದಿಟ್ಟ ಗಿರಿಯ ತಡೆದು | ಕಾಣುವಂತೆ ಮರನ ಕೊಂಬ |
ಭಾನುಸುತನು ಬಿಸುಟ ಸುರಪ | ಸೂನುವಿದಿರಿಗೆ || ||೮೭||

ಬರುವ ಗಿರಿಯ ಕಂಡು ವಾಲಿ | ಕರದಿ ಪಿಡಿದು ಮುರಿವುತದನು |
ತಿರುಪಿ ಬಿಸುಟ ಕೋಪದಿಂದ | ತರಣಿತನುಜಗೆ ||
ಭರಿತರೋಷದಿಂದಲದನು | ಮುರಿದು ಗರ್ಜಿಸುತ್ತ ದೊಡ್ಡ |
ಪರುವತವನು ಬಿಸುಟನಿಂದ್ರ | ತರಳನಿದಿರಿಗೆ || | |೮೮||

ತಂಡತಂಡದದ್ರಿಗಳನು | ಕೊಂಡುಕೊಂಡು ಬಿಸುಡುತಿರಲು |
ಚೆಂಡಿನಾಟವಾಯಿತಮರ | ತಂಡ ಬೆದರಲು ||
ಹಿಂಡು ಹಿಂಡು ಮರನಕಿತ್ತು | ಕೊಂಡು ತಂದು ಕೊಡುವರ್ ಮತ್ತು |
ದಂಡಗಯ್ಯೊಳಿಡಲು ಸಮರ | ದಿಂಡುಗೆಟ್ಟಿತು || ||೮೯||

ಅಷ್ಟದೆಸೆಯೊಳಿರುವ ವೃಕ್ಷ | ಬೆಟ್ಟವೆಲ್ಲತೀರಲಾಗ |
ಜಟ್ಟಿಗಾಳಗಕ್ಕೆ ಬೆದರಿ | ತಷ್ಟ ದಿಗ್ಗಜ ||
ಪೆಟ್ಟು ಪೆಟ್ಟಿಗೊಮ್ಮೆಕೂಗು | ತಟ್ಟಿ ಹಿಡಿದು ಬಡಿದು ಸದೆದು |
ಮುಷ್ಟಿಯುದ್ಧದಲ್ಲಿ ಹೆಣಗು | ತೊಟ್ಟಯಿಸಿದರು || ||೯೦||

ಇಂತು ಹೆಣಗುತವರು ಮನದಿ | ಪಂಥವಿಡಿದು ಕಾದುತಿರಲು |
ಅಂತರಂಗದೊಳಗೆ ರವಿಜ | ಚಿಂತಿಸಿರ್ದನು ||

ಅಂತ್ಯಕಾಲ ಶಣನಿಂಗೆ | ಬಂತೆನುತ್ತ ಬಗೆದು ರಾಮ |
ನಿಂತುಕೊಂಡು ಧನುವ ಮರೆಯೊಳ್ | ಸಂತವಿಸಿದನು || ||೬೧||

ರಾಮು ಶರವ ಪೂಡಿ ಸು | ತ್ರಾಮನಣುಗನಂಗಕೆಸೆಯೆ |
ಭೂಮಿಗೊಡನೆ ಬಿದ್ದ ಕೀಶ | ಸ್ತೋಮದೊಡೆಯನು ||
ಆ ಮಹಾಂತ ರಾಮ ಶರವ | ವಾಮಹಸ್ತದಲ್ಲಿ ಪಿಡಿದು |
ಭೂಮಿಪಾಲನೊಡನೆ ನುಡಿದ | ನೇಮದಿಂದಲಿ || ||೬೨||

ಬೋಧೆಯಿಂದ ಸಮರದೊಳಗೆ | ಸೋದರನ್ನ ಮೊಗವನೋಡಿ |
ಕ್ರೋಧದಿಂದ ಜರೆಯಿತಿವರ | ಮೂದಲಿಸಿದನು ||
ಏ ದುರಾತ್ಮ ಕಪಟವಿದ್ಯ | ಸಾಧಿಸಿದೆಲ ಭಳಿರೆ ಯೆಂ |
ತಾದರೂ ಕೀರ್ತಿ ಬಂತು | ಮೇದಿನಿಯೊಳು || ||೬೩||

**ಭಾಮಿನಿ**

ನೋಡಿದನು ಮುರಿದವನಿಪನನ
ಲ್ಲಾಡಿದನು ತುದಿಬೆರಳನಹುದೈ
ಖೋಡಿಯಿಲ್ಲದ ಖರೆಯನಹೆ ಖದ್ಯೋತವಂಶದಲಿ |
ಪಾಡಗಾಣೆನು ನಿನಗೆ ಸುರನರ
ಗೂಢಪದರೊಗ್ಗಿನಲಿ ಹುಸಿದಡೆ
ಕೂಡಿಕೊಂಡಯ್ತಂದು ಕೊಲಿಸಿದ ತಮ್ಮನಾಣೆಂದ || ||೬೪||

**ರಾಗ ಮಾರವಿ ಅಷ್ಟತಾಳ**

ಜಾಣನಹುದಹುದೋ | ಸಂಗರಕತಿ |
ತ್ರಾಣ ನಹುದಹುದೊ ||
ಕ್ಷೋಣಿಯೊಳ್ ನಿನಗೆಣೆ | ಗಾಣೆ ಪರಾಕ್ರಮಿ || ಜಾಣ || ಪಲ್ಲವಿ ||

ಇನ ವಂಶದರಸುಗಳೊಳಗೆ | ಹಿಂದೆ |
ಜನಿಸಿದವರು ನಿನ್ನ ಕೆಳಗೆ ||
ಘನಚೋರತನದ ಶಿಖಂಡಿ ವಿದ್ಯೆಯನೆಷ್ಟು |
ದಿನ ಸಾಧಿಸಿದೆಯೊ ನೀನು | ಲಂಡಿಗಳ ದು |
ರ್ಗುಣವ ಕೈಗೊಂಡೆಯೇನು | ನಿನ್ನಂಥ ಕು |
ಜನರಿಲ್ಲ ಸಾಕ್ಷಿಗಿನ್ನು | ರಾಘವ ಬಲು || ಜಾಣ || ||೬೫||

ಗಂಡನಿಲ್ಲದ ಹೆಂಗಳಂತೆ | ನಾಚಿ |
ಕೊಂಡು ನೀ ಮರೆಯಲ್ಲಿ ನಿಂತೆ ||
ಹೆಂಡತಿಗಾಗಿ ಕಂಡವರ ಮಾತಿನ ಮೇಲೆ |
ಭಂಡಾಟಗಳ ಮಾಡಿದೆ | ಹಸ್ತದಲಿ ಬಿಲ್ |
ಗೊಂಡು ಬಾಣವ ಪೂಡಿದೆ | ಜೋಡಾಗಿರ್ದ |
ಗಂಡುಸುತನ ನೋಡಿದೆ | ರಾಘವ ಬಲು || ಜಾಣ || ||೯೭||

ಲೇಸಾಯಿತಯ್ಯ ನಿನ್ನಂಗ | ಇನ್ನು |
ಏಸು ಪೇಳುವರೆ ಪ್ರಸಂಗ ||
ಮೋಸದೊಳೆನ್ನ ತರಿದೆ ನಿನಗಿದರಿಂದ |
ಲೇಸು ಕೀರ್ತಿಗಳು ಬಂತು | ಕಾಯದೊಳಿದ್ದ |
ಪಾಶದಾಶೆಗಳು ಸಂತು | ಮತ್ಸರವೆಂಬ |
ವಾಸಿಪಂಥಗಳಿನ್ನೆಂತು | ರಾಘವ ಬಲು || ಜಾಣ || ||೯೭||

**ಭಾಮಿನಿ**

ವಾಲಿಯಂಗದ ಶರವಿಡಿದು ಭೂ
ಪಾಲಕನ ಮೂದಲಿಸೆ ವಾನರ
ಜಾಲದೋಸರಿಕೆಯಲಿ ತಾರಾದೇವಿ ನಡೆತಂದು |
ಬಾಲನಂದಗದಸಹಿತ ರಮಣನ
ಮೇಲೆ ಬಿದ್ದಳುತಿರಲು ನತಜನ
ಪಾಲ ಸಂತೈಸುತ್ತ ಬಳಿಕಿಂತೆಂದನವನೊಡನೆ || ||೯೮||

**ರಾಗ ಮಧ್ಯಮಾವತಿ ಏಕತಾಳ**

ವಾನರರಧಿಪನೆ ಕೇಳೆನ್ನ ಮಾತ |
ನೀನೆನ್ನ ಜರೆವುದೇಕಿಂದ್ರಜಾತ ||
ದಾನವರುಗಳ ದುಷ್ಟರ ತಲೆ ತರಿದು |
ಕ್ಷೋಣೀಭಾರವನಿಳುಹುವದೆಮ್ಮ ಬಿರುದು || ||೯೯||

ನ್ಯಾಯವೆ ತಮ್ಮನ ಸತಿಯ ಮುಟ್ಟುವದು |
ಹೇಯವಾದುದರಿಂದ ದೋಷ ತಟ್ಟಿದುದು ||
ಪ್ರಾಯಶ್ಚಿತ್ತಗಳಿದು ಪರದೋಷಗಳಿಗೆ |
ಕಾಯಖಂಡನವೆಂಬ ನಿಜಮಾತಿನೊಳಗೆ || ೧೦೦||

ಮುಂದಿನ್ನು ಬದುಕಬೇಕೆಂಬಾಸೆಯುಂಟೇ |
ಹಿಂದೆ ಕರೆವೆ ಬಾಣವದು ನೋಯದಂತೆ ||
ಒಂದೇ ಬುದ್ಧಿಯೊಳೆಲ್ಲ ಸತ್ಯವ ಬಿಡದೆ |
ಚಂದವಾಗಿರುವುದು ಸರ್ವರೂ ಕಡೆಗೆ || ||೧೦೦||

**ವಚನ ||** ಇಂತೆಂದು ಶ್ರೀರಾಮದೇವರು ಅಪ್ಪಣೆಯಂ ಕೊಡಲಾಗಿ ಆಗ ವಾಲಿಯು ಈತನು ಸಾಕ್ಷಾತ್ ನಾಯಾಯಣನೆಂದೇ ತಿಳಿದು ಇವನ ಬಾಣದಿಂ ಮರಣವಿಟ್ಟರೆ ತನಗೆ ಸಾಲೋಕ್ಯ ಮುಕ್ತಿಯಂ ಪಾಲಿಸುವನೆಂದು ನಿಶ್ಚಯಿಸಿ ಆ ಸ್ವಾಮಿಯೊಡನೆ ಬಿನ್ನವಿಸುತಿರ್ದನದೆಂತೆನೆ –

**ರಾಗ ಆಹೇರಿ ಆದಿತಾಳ**

ಜಯ ಜಯ ರಾಮ ಹರೇ | ಸೀತಾಪತೇ ||
ಜಯ ಜಯ ರಾಮ ಹರೇ || ಪ ||

ವಿಕಸಿತಾಂಬುಜದಳಲೋಚನ | ಪಾಪನಾಶನ |
ಸಕಲಾಭರಣ ವಿಭೂಷಣ || ಜಯ ಜಯರಾಮ ಹರೇ || ||೧೦೧||

ದುರ್ಜನಜನಸಂಹಾರಣ | ಸದ್ವಿಚಾರಣ |
ಸಜ್ಜನಜನಪರಿಪಾಲನ || ಜಯ ಜಯ || ||೧೦೨||

ಕಂಜಬಾಂಧವಕುಲಶೇಖರ | ಮಂಜುಳಾಕರ |
ಕುಂಜರವರದನೆ ಶ್ರೀಕರ || ಜಯ ಜಯ || ||೧೦೪||

**ರಾಗ ಕಾಪಿ ಏಕತಾಳ**

ಕರುಣವಿದ್ದರೆ ಸಾಕು | ನಿನ್ನ ಪಾದದ |
ಕರುಣವಿದ್ದರೆ ಸಾಕು || ಪಲ್ಲವಿ ||

ಪರಿಪೂರ್ಣವಾಗಿ ಪಾಲಿಸಿಕೊಳ್ಳಬೇಕೆಂಬ || ಅನುಪಲ್ಲವಿ ||

ಮೂರು ದಿನದ ಈ ಸಂ | ಸಾರ ಶಾಶ್ವತವಲ್ಲ |
ಘೋರದುಃಖಗಳ ಸಂ | ಹಾರ ಮಾಡುವದೊಂದು || ಕರುಣ || ||೧೦೫||

ಭೂತಪಂಚಕ ದೇಹ | ಏತಕಿಷ್ಟರ ಮೋಹ |
ಚೇತನಾತ್ಮಕ ನಿನ್ನ | ಮೂರ್ತಿಪದಾಂಬುಜದ || ಕರುಣ || ||೧೦೬||

ತಂದೆ ತಾಯಿಗಳೆಂಬು | ದೊಂದು ಸ್ವಪ್ನವಿಚಾರ |
ಎಂದೂ ನಿನ್ನ ಪದಾರ | ವಿಂದ ಪೂಜಿಸುವಂಥ || ಕರುಣ || ||೧೦೭||

**ರಾಗ ಆನಂದಭೈರವಿ ಏಕತಾಳ**

ರಾಮ ನಿನ್ನ ಬಾಣ ತಾಗಿದ | ಮೇಲಿನ್ನುಂಟೆ |
ಭೂಮಿಯೊಳಾಸೆ ಯೆನಗೆ ||
ಕಾಮಿತ ಬೇರಿಲ್ಲ ಚಿತ್ತದಿ | ಮುಕ್ತಿಯನಿತ್ತು |
ಪ್ರೇಮದಿ ರಕ್ಷಿಸೆನ್ನನು || ||೧೦೮||

ಇತ್ತ ಬಾ ತಮ್ಮ ಸುಗ್ರೀವ | ಕಿಷ್ಕಿಂಧ ಪಾರು |
ಪತ್ಯವ ಪಾಲಿಸಯ್ಯ ||
ಸತ್ಯವಂತೆ ಈ ತಾರೆಯ | ಮಾನವ ಕಾಯ್ದು |
ಸ್ವಸ್ಥದಿ ಲಾಲಿಸಯ್ಯ || ||೧೦೯||

ಬಾಲ ಬುದ್ಧಿಯನರಿಯ | ಈ ಅಂಗದನ |
ಮೇಲೆ ಕಟಾಕ್ಷವಿರಲಯ್ಯ ||
ಮೇಲಾದ ಕಪಿವೀರರು | ನಮ್ಮ ನಂಬಿಷ್ಟು |
ಕಾಲವಿದ್ದಂಥವರು || ||೧೧೦||

ಕಷ್ಟವ ಮಾಡಿಕೊಳ್ಳದೆ | ಸಜ್ಜನರೊಳು |
ದುಷ್ಟನೆನಿಸಿಕೊಳ್ಳದೆ ||
ಅಷ್ಟಸೌಭಾಗ್ಯದಿಂದಲಿ | ಕಿಷ್ಕಿಂಧ ರಾಜ್ಯ |
ಪಟ್ಟವಾಳಿರು ಸುಖದಿ || ||೧೧೧||

ಭರತ ಶತ್ರುಘ್ನರಂದದಿ | ಶ್ರೀರಾಮ ನಮ್ಮ |
ತರಳ ಸುಗ್ರೀವರಲ್ಲಿ ||
ನಿರತ ಕಟಾಕ್ಷವಿರಲಿ | ಈ ವಂಶದವರಲಿ |
ಕರುಣಿಸಿ ಮುಕ್ತಿಂ ದೇಹಿ || ||೧೧೨||

ಶ್ರೀರಾಮ ರಾಮ ರಾಮ | ರಾಜೀವ ನೇತ್ರ |
ನಾರಾಯಣ ನಾರಾಯಣ || ||೧೧೩||

**ವಾರ್ಧಕ**

ಬಾಣವನು ಸೆಳೆದು ತೆಗೆದಾಕ್ಷಣವೆ ನೋಡಿದರೆ
ಪ್ರಾಣಹಾರಿದುದಿಂದ್ರಸುತಗೆ ಸೂರ್ಯಾತ್ಮಜಂ
ಕಾಣುತಣ್ಣನ ಶರೀರದ ಮೇಲೆ ಬಿದ್ದವನ ಗುಣಗಳಂ ಕೊಂಡಾಡುತ |
ಕೇಣವಿಲ್ಲದೆ ಕ್ಲೇಶದಿಂದಳುವ ವೇಳೆಯಲಿ
ಕ್ಷೋಣಿಪತಿ ದಯದಿ ಸಂತವಿಸೆ ಕೀಶಾಧಿಪನ
ರಾಣಿ ತಾರಾದೇವಿಗೋಳಿಟ್ಟು ಮರುಗಿದಳು ಕಲ್ಮರಂ ಕರಗುವಂತೆ || ||೧೧೪||

**ರಾಗ ನೀಲಾಂಬರಿ ರೂಪಕತಾಳ**

ಏತಕೆ ಮಲಗಿದೆ ಧರೆಯೊಳು | ಕೋತಿಕುಲಾಧಿಪ ಏಳೈ |
ಖಾತಿಯಿದೇಕೆನ್ನೊಳು ಮೃದು | ಮಾತಾಡತಿ ದಯದಿ || ಪ||

ಇರಿದರೊ ಸುರಧೇನುವ ನೆರೆ | ಮುರಿದರೊ ಸುರಕುಜವನು ಶಿಖಿ |
ಗುರಿದರೆ ಕಾಮಿತರತ್ನವ | ಹರಹರ ಕಾಂತನನು ||
ತರಿದೆಯ ರಾಘವದೇವನೆ | ಕರುಣಾಕರ ನೀನೆನ್ನುವ |
ಬಿರುದೆತ್ತಡಗಿಸಿದೆಯೋ ನಾ | ಧರಣಿಯೊಳೆಂತಿಹೆನು || ||೧೧೫||

ಆಯಿತೆ ಸಂತಸ ರಾಜ್ಯ | ಶ್ರೀಯ ವಿನೋದವು ಮದನನ |
ಬೀಯಕೆ ಕೊಲಿಸಿದೆ ಪತಿಯನು | ತೋಯಜಸಖಸುತನೆ ||
ಪ್ರೀಯದೊಳರ್ಯಮ ಧರೆ ಚಂ | ದ್ರಾಯತ ಕೀರ್ತಿಯಧರಿಸಿದೆ |
ದಾಯಿಗರೊಳಗುತ್ತಮ ಮನ | ದಾಯತ ತೀರಿದುದೆ || ||೧೧೬||

ಕಂದನೆ ನಿನ್ನನು ಕರುಣದಿ | ತಂದೆಯು ಕೊಟ್ಟಿಹನ್ಯಾರಿಗೆ |
ಮುಂದೆಮಗಾರೈ ಗತಿಯೇ | ನೆಂದಿಹ ನಿನ್ನೊಡನೆ ||
ಸಂದುದು ಋಣ ಪಿತನದು ಬಲು | ಚಂದದಿ ಸಲಹುವರಾರೈ |
ಮುಂದೆಮ್ಮನು ಕೃಪೆಯಲಿ ಹಾ | ಯೆಂದೆನುತಳಲಿದಳು || ||೧೧೭||

**ರಾಗ ಮೋಹನ ಏಕತಾಳ**

ಅಳುವುದೇತಕೆ ನೀ ತಾರೆ | ನಿನ್ನಯ ಮನ |
ದೊಳು ಧೈರ್ಯ ತಾಳು ನೀರೆ ||
ನೆಲೆಯಲ್ಲ ಸಂಸಾರವೆಂಬುದು ಮೊದಲೆ ನೀ |
ತಿಳಿದಿಪ್ಪ ಕಾರ್ಯ ಕಾಣೆ | ಕೇಳೆಲೆ ಜಾಣೆ || ||೧೧೮||

ಬಾಲ ನೀ ಮುರುಗದಿರು | ಲಕ್ಷ್ಮಣನಂತೆ |
ಪಾಲಿಸಿಕೊಂಬೆ ಸೇರು ||

ವಾಲಿನಂದನ ಹಿಡಿ ಕೊಡುವೆ ನಂಬುಗೆಯನ್ನು |
ಜಾಲಮಾತಲ್ಲವೆನ್ನ | ನಂಬಿರು ಮುನ್ನ || ||೧೧೯||

ತರಣಿನಂದನ ಸುಗ್ರೀವ | ತಾರಾದೇವಿ |
ಗರುಹು ನೀನತಿಧೈರ್ಯವ ||
ಧರೆಯೊಳು ಸುಜನರೀ ದೇವಿಯ ನಾಮವ |
ಸ್ಮರಿಸಿಕೊಂಡಿರಲು ಮೋಕ್ಷ | ವೆಂಬ ಕಟಾಕ್ಷ || ||೧೨೦||

**ವಾರ್ಧಕ**

ಅರಸು ಮಕ್ಕಳು ಕೇಳಿ ನಿಮ್ಮ ಪಿತನೀರೀತಿ
ವರ ಪತಿವ್ರತೆಸುತರ ಸಂತಯ್ಸುತಂದು ವಾ
ನರಶಾಸ್ತ್ರವಿಧಿಯಿಂದ ವಾಲಿಗಾಗುವ ಶೇಷಕರ್ಮಂಗಳಂ ವಿರಚಿಸಿ ||
ಸುರರು ಮುನಿಗಳು ಸಿದ್ಧ ಸಾಧ್ಯ ಗಂಧರ್ವ ಕಿ
ನ್ನರ ಕಿಂಪುರುಷರು ರಾಘವಸಹಿತ ಕಿಷ್ಕಿಂಧ
ಪುರಕೆಯಧಿಪತಿಯಾಗಿ ಸುಗ್ರೀವನಂ ಮಾಡಿದರು ಶಾಸ್ತ್ರವಿಧಿಗಳಿಂದ || ||೧೨೧||

**ರಾಗ ಧವಳಾರ ತ್ರಿವುಡೆತಾಳ (ಧ್ರುವತಾಳ)**

ನಾಕವನಾ | ಳುವ ದೇ | ವತೆಗಳು |
ಶ್ರೀಕರ ಸು | ಗ್ರೀವನ | ಹರಸುತ |
ಈ ಕಪಿಗಳಿ | ಗೆ _ | ಲ್ಲ _ | ಅರ _ | ಸಾ _ | ಗು_ |
ಅರಸಾಗೆಂ | ದೆನುತಲಿ | ಹರಸುತ |
ಶ್ರೀಕರಾ | ಕ್ಷತೆ | ಯ _ | ತಳಿ _ | ದ _ | ರು _ || ||೧೨೨||

ಗುಪಿತದೊಳನು | ಗಾಲ ವ | ನದೊಳಿಹ |
ತಪಸಿಗಳೈ | ತಂದು ಸು | ಗ್ರೀವನ |
ಕಪಿನಾಯಕ | ರಿಗೆ | ಲ್ಲ _ | ಅರ _ ಸಾ _ | ಗು _ |
ಅರಸಾಗೆಂ | ದೆನುತಲೆ | ಹರಸುತ |
ಅಪರಿಮಿತಾ | ಕ್ಷತೆ | ಯ _ | ತಳಿ _ | ದ _ | ರು _ || ||೧೨೩||

ಅಂಬರದಲಿ | ಚರಿಸುವ | ನಾರದ |
ತುಂಬುರರ | ಯ್ತಂದು ಸು | ಗ್ರೀವನ |
ಜಾಂಬವ ಮೊದ | ಲಾ _ | ದ _ | ಕಪಿ _ | ಗ_ | ಳ _ |

ಕಪಿಗಳಿಗರ | ಸಾಗೆಂ | ದೆನುತಲೆ |
ಸಂಭ್ರಮದ | ಕ್ಷತೆ | ಯ _ | ತಳಿ _ | ದ _ | ರು _ || ||೧೨೪||

**ವಾರ್ಧಿಕ**

ತರಳ ಕೇಳಿಪ್ಪತ್ತಯಿದು ದಿನಕೆ ಕಿಷ್ಕಿಂಧ
ಪರುವತದಿ ನಿಲಲು ಮಳೆಗಾಲ ಬಂತೆಂದು ವಾ
ನರಸೈನ್ಯಮಂ ಕಳುಹಿ ನಾಲ್ಕು ತಿಂಗಳ ಮೇಲೆ ಬರುವ ತಹಗಳನೆ ಮಾಡಿ ||
ತರಣಿನಂದನನ ಬೀಳ್ಕೊಟ್ಟು ರಘುರಾಮ ಸೋ
ದರಸಹಿತ ಶ್ರವಣಪರ್ವತಕೆ ನಡೆತಂದಲ್ಲಿ
ಇರುವರೆಂಬಲ್ಲಿಗಾಯಿತು ಸಂಧಿ ಕಣ್ವಪುರ ಕೃಷ್ಣನ ಕಟಾಕ್ಷದಿಂದ || ||೧೨೫||

**|| ವಾಲಿಸಂಹಾರ ಪ್ರಸಂಗ ಮುಗಿದುದು ||**

## ೬. ಉಂಗುರ ಸಂಧಿ (ಚೂಡಾಮಣಿ) - ಪಾತ್ರಗಳು

ರಾಮ
ಲಕ್ಷ್ಮಣ
ಸುಗ್ರೀವ
ಹನುಮಂತ
ಜಾಂಬವ
ಅಂಗದ
ಕಪಿಗಳು
ಈಶ್ವರ
ಪಾರ್ವತಿ
ಬ್ರಹ್ಮ
ತೃಣಬಿಂದುಮುನಿ
ಸಂಪಾತಿ
ರಾವಣ
ಶೃಂಗಾರರಾವಣ
ಪ್ರಹಸ್ತ
ಇಂದ್ರಜಿತು
ವಿಭೀಷಣ

ಇತರ ರಾಕ್ಷಸರು

ಸೀತೆ

ತಾರೆ

ಸ್ವಯಂಪ್ರಭೆ

ಸರಮೆ

ತ್ರಿಜಟೆ

ಅನುಕೂಲನಾರಿಯರು

**ವಾರ್ಧಕ**

ಕುಶನೆ ಕೇಳ್ ವಾಲಿಯಂ ಸಂಹರಿಸಿ ಕಿಷ್ಕಿಂಧ
ದೆಸೆಯಾಧಿಪತ್ಯಮಂ ಸುಗ್ರೀವನಿಂಗಿತ್ತು
ಕುಶಲದಿಂ ಶ್ರವಣಪರ್ವತಕೆ ನಡೆತಂದಲ್ಲಿ ಮಳೆಗಾಲವಂ ಕಳೆದರು |
ವಸುಧೆಪಾಲಕನೊಂದು ದಿನ ತನ್ನ ಮನದಿ ಚಿಂ
ತಿಸುತ ಜನಕಾತ್ಮಜೆಯ ನೆನೆನೆನೆದು ದುಃಖಿಸುತ
ವಿಸರಿಸುವ ಸ್ಮೈರಣೆಯೊಳಂತರಂಗದಿ ಕರೆದು ಸೌಮಿತ್ರಿಗಿಂತೆಂದನು || ||೧||

**ರಾಗ ಮಧ್ಯಮಾವತಿ ಏಕತಾಳ**

ಪೋಗೋ ಸೌಮಿತ್ರಿ ಸುಗ್ರೀವ ಬರಲಿಲ್ಲ |
ಬೇಗದಿಂದಲೆ ಕರಕೊಂಡುಬಾರಯ್ಯ ||
ನಾಗಸನ್ನಿಭವೇಣಿಯ ರತಿ ಸುಖ |
ಭೋಗದಿಂದೆಮ್ಮನು ಮರೆತನೊ ರವಿಜಾತ || ||೨||

ತನ್ನ ಕಾರ್ಯಗಳಾಗುವ ಪರ್ಯಂತ ತಾ |
ನಿನ್ನನೆ ನೀನೆಯೆಂದೆನುತ ಮತ್ತೆ |
ಕನ್ನೆ ರಾಜ್ಯವು ತನ್ನ ತನಗೆ ಸಿಕ್ಕಿದ ಮೇಲೆ |
ಇನ್ನು ಹಂಗೇನೆಂದು ಮರೆತನೊ ರವಿಜಾತ || ||೩||

**ರಾಗ ಸೌರಾಷ್ಟ್ರ ರೂಪಕತಾಳ**

ಅಗ್ರಜ ವೀರ | ಅಣ್ಣ ವಾಲಿಯ |
ನಿಗ್ರಹಿಸಿದೆ | ನೀರಜಾಂಬಕ ||
ಸುಗ್ರೀವಂಗೆ ನಾ | ಸಾಲದಾಪೆನೆ |
ಉಗ್ರಮೂರುತಿ | ಕಳುಹು ಯೆನ್ನನೆ || ||೪||

**ರಾಗ ಮಧ್ಯಮಾವತಿ ಏಕತಾಳ**

ಕಾರ್ಯಸಂಗ್ರಹವಾಗಬೇಕವನಿಂದ |
ಶೌರ್ಯ ಬೇಡವೊ ಶಾಂತಚಿತ್ತದಿ ಪೋಗಿ ||
ಸೂರ್ಯನಂದನನೊಳು ಸೂಚನೆಯನು ಗೆಯ್ದು |
ಧೈರ್ಯಮಾನಿಯನಿಲ್ಲಿ ಕರಕೊಂಡು ಬಾ ಬೇಗ || ||೫||

**ಶಾರ್ದೂಲವಿಕ್ರೀಡಿತ**

ಇಂತೆಂದಗ್ರಜ ನೇಮವಂ ಕೊಡಲದಂ ಕೈಕೊಂಡು ತದ್ವಾಕ್ಯಮಂ
ಶಾಂತಾಕಾರನ ದಿವ್ಯಪಾದಯುಗಳಕ್ಕಭಿವಂದಿಸುತ್ತಾ ಕ್ಷಣಂ |
ಮಂತ್ರಾಸ್ತ್ರಂ ಘನಚಾಪ ಹಸ್ತದಿ ಬರಲ್ ಕಂಡಾಗ ತತ್ಕೋಪಮಂ |
ಕಾಂತಾರತ್ನಮೆನಿಪ್ಪ ತಾರೆ ಪೊಗುಳುತ್ತಿಂತೆಂದಳಾ ವೀರಗಂ || ||೬||

**ರಾಗ ಮಧುಮಾಧವಿ ಏಕತಾಳ**

ದಶರಥಸುತ ವೀರ ಧರಣಿಪಾಲಗಂಭೀರ |
ಕುಸುಮಸಾಯಕರೂಪ ಕೀರ್ತಿಕಲಾಪ || ಪಲ್ಲವಿ ||

ಧರಣಿಯಾಳುವ ಮಹಾದೊರೆಗಳು ನೀವು |
ಮರಮರ ಚರಿಪ ವಾನರರಲ್ಲೆ ನಾವು ||
ಸರಿಯೆ ನಿಮ್ಮವರಿಗೆ ಶಾಂತನಾಗಯ್ಯ |
ತರಣಿನಂದನನೊಳು ಕೋಪವೇಕಯ್ಯ || ||೭||

ಹಿಮಕರಮುಖಿ ಕೇಳು ತಾರೆ ಸುನೀತೆ |
ಕಮಲಲೋಚನೆ ಪುಣ್ಯನಾಮೆ ವಿಖ್ಯಾತೆ ||
ಅಮರಾದಿಗಳು ಮೆಚ್ಚರಾಡಿ ತಪ್ಪಿದರೆ |
ಕಮಲನೇತ್ರನ ಕೂಡೆ ಕಪಟವಾಡುವರೆ || ||೮||

ಮಳೆಗಾಲವನು ದಾಟಿ ಬರುವೆನೆಂದೆನುತ |
ಇಳೆಯ ಪಾಲಕಗೆಂದು ಬಂದವನೀತ ||
ಅಳಿವ ಕಾಯದೊಳಿಂದು ಆಡಿ ತಪ್ಪಿದರೆ |
ಉಳಿವುದೆ ಕುಲಕೀರ್ತಿ ನೀ ಕೇಳು ತಾರೆ || ||೯||

ಪರದೇಶದೊಳಗಿದ್ದ ಕಪಿಗಳನೆಲ್ಲ |
ಕರೆಸಿಕೊಂಬುದಕಿಷ್ಟು ತಡವಾಯಿತಲ್ಲ ||

ಇರಬೇಕು ದಯೆಯೆಂದು ಇನಜನ ತಂದು |
ಚರಣಕೊಪ್ಪಿಸಿದಳು ಚಪಲಾಕ್ಷಿಯಂದು || ||೧೦||

**ವಾರ್ಧಕ**

ಗುಣದಿಂದೊಡಂಬಡಿಸಿ ಕೋಪಮಂ ತಣಿಸಿ ಲ
ಕ್ಷ್ಮಣನ ಕಾಣಿಸಲೆಂದು ಸುಗ್ರೀವ ತನ್ನ ಕಪಿ
ಗಣಸಹಿತಲೊಡಗೂಡಿ ಶೀಘ್ರದಿಂ ಪೊರವಂಟು ನಡೆತಂದರಾಕ್ಷಣದಲಿ |
ಹನುಮ ಜಾಂಬವ ಸುಷೇಣಾಂಗದಂ ನಳ ನೀಲ
ರಣಪರಾಕ್ರಮಿ ಗವಯ ದ್ವಿವಿದ ಮೊದಲಾದ ಸಂ
ದಣಿಸಹಿತ ಬಂದು ರಾಮನ ಚರಣಕೆರಗಿ ಲಕ್ಷ್ಮಣನಣ್ಣಗಿಂತೆಂದನು || ||೧೧||

**ರಾಗ ಕಾಂಭೋಜಿ ಏಕತಾಳ**

ಅಗ್ರಜಾ ಮಹಾನುಭಾವ | ಆಲಿಸೆನ್ನ ಬಿನ್ನಪವ |
ಸುಗ್ರೀವ ನಿನ್ನೆ ನಾನಲ್ಲಿ | ಪೋಗುವಂಥ ವೇಳೆಯಲ್ಲಿ || ||೧೨||

ಅಗ್ರಗಣ್ಯರೆಲ್ಲ ಕೂಡಿ | ಕೊಂಡು ತಮ್ಮೊಳು ಮಾತಾಡಿ |
ಶೀಘ್ರದಿಂದ ಬರಬೇಕೆಂದು | ಪಯಣಕನುವಾಗಿದ್ದರೆಂದು || ||೧೩||

ತಪ್ಪುವಾತನಲ್ಲ ಮಾತ | ತಮ್ಮವರೆಲ್ಲರ ಕರೆಸಿ |
ಒಪ್ಪವಿಟ್ಟುಕೊಂಬುದಕ್ಕೆ | ಇಷ್ಟು ತಡವಾಯಿತಂತೆ || ||೧೪||

**ಕಂದ**

ಅನುಜನ ವಾಕ್ಯವ ಕೇಳ್ದಾ
ವನಜಾಂಬಕ ಚಿತ್ತವಿಟ್ಟು ಸಂತೋಷದೊಳುಂ |
ಜನಕನ ಮಗಳನ್ನರಸಲು
ಅನುವೆಂತುಟೊ ನೋಡಿರೆಂದ ಸುಗ್ರೀವನೊಳುಂ || ||೧೫||

**ರಾಗ ಅಹೇರಿ (ಆಹರಿ) ಏಕತಾಳ**

ಭೂಮಿಪಾಲಶಿಖಾಮಣಿ ರಾಮಚಂದ್ರ | ದೇವ |
ತಾಮರಸನಯನ ಸಾಧು ಸುಗುಣಸಾಂದ್ರ ||
ಭೂಮಿಜಾತೆ ನಾಲ್ಕುದಿಶೆಯಲ್ಲಿದ್ದರೂ | ನಿಮ್ಮ |
ಕೋಮಲಾಂಗಿಯ ಪಾದದೆಡೆಗೆ ತಂದು ತೋರ್ಪೆವು || ||೧೬||

ಫುಲ್ಲನೇತ್ರೆ ಬ್ರಹ್ಮಲೋಕದಲ್ಲಿದ್ದರೂ | ನಿಮ್ಮ |
ವಲ್ಲಭೆ ಕೈಲಾಸಶಿಖರದಲ್ಲಿದ್ದರೂ ||
ಬಲ್ಲಿದ ವೈಕುಂಠಭವನದಲ್ಲಿದ್ದರೂ | ಇವ |
ರೆಲ್ಲರನ್ನು ಕಳುಹಿ ಸುದ್ದಿ ತರಿಸದುಳಿಯೆನು || ||೧೭||

**ವಚನ ||** ಇಂತೆಂದು ಶ್ರೀರಘುವರಂಗೆ ಬಿನ್ನಹವಂ ಗೆಯ್ದು ಕಪಿವೀರರಂ ಹತ್ತಿರ ಕರೆದು  ಏನೆಂದನು ಎಂದರೆ _

**ರಾಗ ಕಾಂಭೋಜಿ ಏಕತಾಳ**

ವಾನರರೇ ಕೇಳಿರೆಲ್ಲ ಎನ್ನ ಮಾತನು |
ಜಾನಕೀದೇವಿಯನರಸಿ | ಕಾಣಬೇಕು ನೀವೆಲ್ಲರೂ || ಪಲ್ಲವಿ ||

ಉತ್ತರದೇಶಕೆ ಪೂರ್ವ | ಪಶ್ಚಿಮ ದಕ್ಷಿಣ ನಾಲ್ಕು |
ದಿಕ್ಕಿನೊಳು ದಶಾಸ್ಯನಿಪ್ಪ | ವರ್ತಮಾನ ಪೇಳಿರಯ್ಯ || ||೧೮||

ಅಷ್ಟದಿಕ್ಪಾಲಕರಿರುವ | ಪಟ್ಟಣದೊಳಿರಲು ಸೋಹ |
ದೃಷ್ಟಿಯಿಂದ ನೋಡಿ ಬಂದು | ಸೃಷ್ಟೀಶಂಗೆ ಪೇಳಿರಿಂದು || ||೧೯||

ಅಂಗದನು ಜಾಂಬವಂತ | ವಾಯುಸುತ ಹನೂಮಂತ |
ವಿಂಗಡದಿ ದೇಶಾದಿ ದೇ | ಶಂಗಳನ್ನು ತಿರಿದು ತಿರಗಿ || ||೨೦||

ತಿಂಗಳ ದಿನದೊಳು ರಾಮ | ನಂಗನೆಯಿದ್ದ ನಿದಾನ |
ವಿಂಗಡಿಸದಿದ್ದರೆ ನಾ | ಭಂಗಿಸುವೆ ನಿಮ್ಮನೆಲ್ಲ || ||೨೧||

**ಕಂದ**

ಇಂತಾ ಸಮಯದಿ ರಾಘವ
ನಂತರ್ಯದಿ ಕರೆದು ಪೇಳಿ ಕಿವಿಮಾತಿನೊಳ್ಹನು |
ಮಂತನ ಕಯ್ಯೊಳಗುಂಗುರ
ಮಂ ತಾನಿರಿಸುತ್ತ ಸೀತೆಕುರುಹಂ ಪೇಳ್ದಂ || ||೨೨||

**ರಾಗ ಕೇದಾರಗೌಳ ಅಷ್ಟತಾಳ**

ಭಾನುನಂದನನೆಂದ ಬಹಳ ಕಟ್ಟಾಜ್ಞೆಯ |
ವಾನರೇಶ್ವರರು ಕೇಳಿ ||
ದಾನವಾಂತಕನಂಘ್ರಿಗೆರಗಿ ತಮ್ಮೊಳಗಿದ್ದ |
ಸೇನೆಯ ವಿಂಗಡಿಸಿ || ||೨೩||

ಜಾನಕಿಯಮ್ಮನವರನು ಕದ್ದೊಯ್ದ ದ |
ಶಾನನನಾರೆನ್ನುತ ||
ನಾಮುನ್ನ ತಾಮುನ್ನೆಂದೆನುತ ಪಶ್ಚಿಮಕೆ ಸು |
ಷೇಣ ಚಾಲ್ವರಿದು ಬಂದ || ||೧೪||

ನಳ ನೀಲ ಗವಯ ಗವಾಕ್ಷ ಕೇಸರಿ ಶತ |
ಬಲ ಮುಂತಾದವರೆಲ್ಲರು ||
ಇಳೆಯನಂದನೆಯನ್ನು ಬಿಡದೆ ಮೂಡಣ ದಿಕ್ಕಿ |
ನೊಳು ಹುಡುಕಾಡಿದರು || ||೧೫||

ಇಳವರ್ತ ಬದರಿಕ ಕೇತುಮಾಲಾಖ್ಯ ಭೂ |
ತಳ ನವಖಂಡದೊಳು |
ಇಳೆಯ ಪರ್ವತಗಳ ಸಂದು ಮೂಲೆಯನೆಲ್ಲ |
ಸುಳಿದಾಡುತ್ತೈತಂದರು || ||೧೬||

ವರುಣ ವಾಯವ್ಯ ಕುಬೇರ ಈಶಾನರ |
ಪುರವನೊಂದುಳಿಯದಂತೆ |
ಧರಣಿನಂದನೆಯ ಸೋವರಸುತ್ತ ಕೇದಾರ |
ಗಿರಿಯ ಮೇಲಯ್ತಂದರು || ||೧೭||

ದಿಕ್ಕು ದಿಕ್ಕಿನೊಳಿಪ್ಪ ಅರಸುಬಲ್ಲಾಳರ |
ಸೊಕ್ಕನೆ ಮುರಿದಿಕ್ಕುತ್ತ ||
ಒಕ್ಕಲೊಂದುಳಿಯದೆ ಮನೆಮನೆಯಲಿ ಕಳ್ಳ |
ರಕ್ಕಸನನು ಕೇಳುತ್ತ || ||೧೮||

ಮಕ್ಕಳು ಹಿರಿಯರು ಜವ್ವನರಾ ಹೆಣ್ಣು |
ಮಕ್ಕಳೊಳ್ಬೆಸಗೊಳುತ್ತ |
ಅಕ್ಕರಿಂದಲೆ ಕಂಡುದಿಲ್ಲೆಂದು ಆಣೆಯ |
ತೆಕ್ಕೊಂಡರವರ ಕಯ್ಯ || ||೧೯||

ಪೂರ್ವ ಪಶ್ಚಿಮ ಉತ್ತರಾದಿ ದೇಶವನಾಳ್ವ |
ಊರ್ವಿಪಾಲಕರ ಕಯ್ಯ ||
ಸರ್ವಥಾ ದಶಕಂಠನಿಲ್ಲೆಂಬ ಓಲೆಯ |
ಗರ್ವದಿ ಬರೆಸಿಕೊಂಡು || ||೨೦||

ನಿರ್ವಹಿಸಿದರು ಪಾತಾಳಲೋಕಂಗಳೊ |
ಳಿರುವರ ಬೆಸಗೊಳ್ಳುತ್ತ ||
ಉರ್ವಿಯ ರಚಿಸಿದಾತನ ಕಂಡು ಕೈಲಾಸ |
ಪರ್ವತಕಡರಿದರು || ||೩೧||

ಪಾರ್ವತೀರಮಣನ ದರುಶನಕವನೆಂದೂ |
ಬರುವನೆಂಬುದನು ಕೇಳಿ |
ಶರ್ವನ ಹಿಡಿದು ರಾವಣನ ತೋರೆನಲವ |
ರಿರ್ವರೂ ನಸುನಕ್ಕರು || ||೩೨||

**ವಚನ ||** ಅಗಳಾ ಸದಾಶಿವನು ಬಲಿಮುಖರ ಪರಾಕ್ರಮಕ್ಕೆ ಮೆಚ್ಚಿದವನಾಗಿ ಪಾರ್ವತೀದೇವಿಯೊಡನೆ ಏನೆಂದನು ಎಂದರೆ

**ರಾಗ ಸೌರಾಷ್ಟ್ರ ಅಷ್ಟತಾಳ**

ಕಂಡೆಯಾ ಗಿರಿಜಾತೆ ಕಪಿಗಳ ಸಾಹಸ |
ಕಂಡೆಯೇನೆ | ವರ |
ಪುಂಡರೀಕಾಕ್ಷ ಶ್ರೀರಾಮಚಾರಿತ್ರವ |
ಕಂಡೆಯೇನೆ || ||೩೩||

ಶಿರ ಮೊಗ ಹಣೆ ಹುಬ್ಬುಗಳು ಗಂಟಿಕ್ಕಿರುವುದ |
ಕಂಡೆಯೇನೆ | ಬಲು |
ಉರುತರಕೋಪಾಟೋಪದಿ ಹಲ್ಲ ಕಿರಿವುದ |
ಕಂಡೆಯೇನೆ || ||೩೪||

ದಶಕಂಠನನು ತೋರಿಸೆಂದೆಮ್ಮ ತಡೆವುದ |
ಕಂಡೆಯೇನೆ | ಮತ್ತೆ |
ಅಸುರ ರಾವಣನೆಲ್ಲಿ ತೋರೆಂಬ ಗರ್ವವ |
ಕಂಡೆಯೇನೆ || ||೩೫||

**ವಚನ ||** ಇಂತೆಂದು ಪಾರ್ವತಿಗೆ ಪೇಳ್ದು ಮತ್ತಾ ಕಪಿನಾಯಕರೊಡನೆ ಏನೆಂದನು ಎಂದರೆ _

**ಸಾಂಗತ್ಯ ರಾಗ ಪಂತುವರಾಳಿ ರೂಪಕತಾಳ**

ಕಪಿನಾಯಕರು ಕೇಳಿ ನಾನೆಂಬಮಾತನು |
ಗುಪಿತವಲ್ಲಿದು ವೇದ ವಚನ ||

ಚಪಲನೇತ್ರೆಯನೊಯ್ದ ಖೂಳ ರಾವಣನ ಕಂ |
ಡಪರಿಲ್ಲ ನಮ್ಮ ಪರ್ವತದಿ || ||೩೬||

ನಿಪುಣರು ನೀವು ಸುಮ್ಮನೆ ಬಳಲುವದಿನ್ನು |
ಗುಪಿತದಿ ಹನುಮಂತ ಮುಂದೆ ||
ತಪನಕುಲೇಶನ ರಾಣಿ ಜಾನಕಿಯ ಕಂ |
ಡಪನಿದು ಪುಸಿಯಲ್ಲ ಮಾತು || ||೩೭||

ಭಾಳಲೋಚನನೆಂದ ನುಡಿಯನು ಕಪಿಗಳು |
ಕೇಳುತೆಲ್ಲರು ಕಯ್ಯ ಮುಗಿದು ||
ಬೀಳುಗೊಂಡಲ್ಲಿಂದ ನಡೆತಂದು ರವಿಜಗೆ |
ಪೇಳಿದರೀ ವೃತ್ತಾಂತಗಳ || ||೩೮||

**ರಾಗ ಭೈರವಿ ಝಂಪೆತಾಳ**

ಪಾತಾಳದೊಳಗಿಲ್ಲ | ಬ್ರಹ್ಮಲೋಕದೊಳಿಲ್ಲ |
ಆತ ದಶಕಂಠ ಕೈ | ಲಾಸದೊಳಗಿಲ್ಲ || ||೩೯||

ನವಖಂಡ ಭೂತಳವ | ನಾವ್ ತಿರಿಗಿ ನೋಡಿದೆವು |
ಭುವನದೊಳಗಾರೂ ಕಂ | ಡವರಿಲ್ಲವಂತೆ || ||೪೦||

ಭೂಲೋಕದರಸುಗಳು | ಬರೆದ ಬಿನ್ನೊತ್ತಲೆಯ |
ಓಲೆಗಳ ಮುಂದಿರಿಸಿ ಕೈಮುಗಿದರವರು || ||೪೧||

ಓಲೆಗಳ ತೆಗೆತೆಗೆದು | ವಾಚಿಸುತ ಮನದೊಳಗೆ |
ಭಾಳ ಚಿಂತೆಯ ತಾಳ್ದು | ಭಯಗೊಳುತಲಿರ್ದ || ||೪೨||

**ವಾರ್ಧಕ**

ಲವನೆ ಕೇಳಿಂತು ಸೀತೆಯನರಸಲೆಯ್ದಿ ಬಂ
ದವರ ನುಡಿಕೇಳಿ ಚಿಂತಿಸುತಲಿರಲತ್ತ ಪೋ
ದವರು ಮೂವರು ವಾಲಿಸುತ ಹನುಮ ಮೊದಲಾಗಿ ಉಳಿದ ಕಪಿಸೇನೆ ಸಹಿತ |
ತವಕದಲಿ ದಕ್ಷಿಣಕೆ ಮುಖವಾಗಿ ಬಹಳ ದೇ
ಶವ ಕಳೆದು ನಡೆತಂದರಲ್ಲಲ್ಲಿ ಹುಡುಕುತ್ತ
ಭುವನದೊಳಗತಿ ಪುಣ್ಯಕ್ಷೇತ್ರ ಬ್ರಹ್ಮಾಲಯಂಗಳ ಕಂಡು ನೆರೆನಮಿಸುತ || ||೪೩||

**ರಾಗ ತುಜಾವಂತು ಅಷ್ಟತಾಳ**

ಬಂದರು | ನಡೆ | ತಂದರು || ರಾಮ |
ಚಂದ್ರನ ಕಾಂತೆಯ ಕುರುಹ | ನೊಂದೊಂದನೆ ಬೆಸಗೊಳ್ಳುತ್ತ || ಪಲ್ಲವಿ ||

ಬಲು ಬಲು ದೇಶಗಳ ದಾಟಿ | ಬಳಲಿ ಬಂದರವರೀ ಪಾಟಿ |
ಹಲವು ಪರ್ವತಂಗಳ ಕಾ | ನನಗಳನೆ ಹುಡುಕಾಡುತ್ತ ||
ತೆಲುಗರಣ್ಯ ಪಾಂಡ್ಯರಾಜ್ಯ | ಮಲೆಯಾಳ ತುಳುವರ ಸೀಮೆ ||
ಗಳಲಿ ದಶಕಂಠ ಸೀತಾ | ಲಲನೆಯರ ಬೆಸಗೊಳ್ಳುತ್ತ || ||೪೪||

ಈ ತೆರದಲಿ ಬ್ರಹ್ಮ ಕ್ಷತ್ರ | ನೀತಿವಂತ ವೈಶ್ಯಶೂದ್ರ |
ನೂತನ ಪಂಚಾಲ ನಾನಾ | ಜಾತಿಯವರ ಮನೆಗಳಲ್ಲಿ ||
ರೀತಿಯರಿತುಕೊಂಡು ಬಹಳ | ನೀತಿಯಿಂದ ನುಡಿಸುತ ಪ್ರ |
ಖ್ಯಾತರು ನಡೆತಂದರವನೀ | ಜಾತೆಯನ್ನು ಬೆಸಗೊಳುತ್ತ || ||೪೫||

**ರಾಗ ಕಾಂಭೋಜಿ ಝಂಪೆತಾಳ**

ಈ ಕಡೆಯ ತಿರಿತಿರಿಗಿ ಅಲ್ಲಿ ಕಂಡರು ಕಪಟ |
ದಾಕೃತಿಯೊಳೆಸೆವ ಸರಸಿಯನು ||
ತಾವ್ಮುಡಿವೆವೆಂದು ಜಲದಾಸೆಯಿಂದಿಳಿಯೆ ಮಯ |
ಲೋಕವದು ಕಣ್ಗೆ ರಂಜಿಸಿತು || ||೪೬||

ಯಾರ ಪಟ್ಟಣಗಳಿವು ನೋಡಿದರೆ ಕಣ್ಗೆ ವಿ |
ಸ್ತಾರವಾಗಿದೆ ಚೆಲ್ವ ನಗರ ||
ಶ್ರೀರಾಮನರಸಿ ಜಾನಕಿಯ ಕದ್ದೊಯ್ದಸುರ |
ಚೋರನನು ಹುಡುಕಬೇಕಿಲ್ಲಿ || ||೪೭||

ಬಾಗಿಲನು ದಾಟಿಯೊಳ ಬಂದು ನೋಡಿದರೆ ಸೊಗ |
ಸಾಗಿರುವ ರಾಜಬೀದಿಗಳ ||
ನಾಗಸುರ ನರಲೋಕದಿಂದಲತಿಶಯವಿದನು |
ಹೇಗೆ ನಿರ್ಮಿಸಿದ ಮಯ ರಾಮಾ || ||೪೮||

ಉಪ್ಪರಿಗೆಕೋಣೆ ನಡುಮನೆ ಚೌಕಿ ಮಾಳಿಗೆಯ |
ಚಪ್ಪರದ ಚಾವಡಿಯ ಬೆಳಕ ||
ಇಪ್ಪತ್ತನಾಲ್ಕು ಕಂಭದ ನಡುವೆ ಮಂಟಪಗ |
ಳೊಪ್ಪುತಿದೆ ನೋಡಲಾಶ್ಚರ್ಯ || ||೪೯||

ಕಟ್ವಾಣಿ ಮುತ್ತುಗಳ ಕೆತ್ತಿಸಿದ ಕಂಭಗಳ |
ಮುಟ್ಟಿದರೆ ಹೊವ ಬೊಂಬೆಗಳ ||
ಕಟ್ಟಿರುವ ವಜ್ರವೈಡೂರ್ಯ ಗೋಮೇದಿಕದ |
ಕಟ್ಟೆಗಳ ಜಗಲಿ ಗೋಡೆಗಳ || ||೫೦||

ಯಾರ ಮನೆಯೊಳಗೆ ನೋಡಿದರೆ ನವರತ್ನಗಳ |
ತೋರಣದ ಮೇಲುಗಟ್ಟುಗಳಾ ||
ಊರೂರು ಮನೆಮನೆಯ ಕೇರಿಕೇರಿಯೊಳೆಲ್ಲ |
ನಾರಿ ಜಾನಕಿಯ ಹುಡುಕಿದರು || ||೫೧||

ಎಲ್ಲಿ ನೋಡಿದರು ಜಾನಕಿಯ ಕಂಡಿಹೆನೆಂಬ |
ರಿಲ್ಲದಾಯ್ತಾ ಗುಹಾಂತರದಿ ||
ಬಲ್ಲಿದ ಕಪೀಶ್ವರರು ಬಂದ ದಾರಿಯ ತಪ್ಪಿ |
ಅಲ್ಲಲ್ಲಿ ತೊಳಲಾಡಿ ತಿರಿದು || ||೫೨||

ಮೋಸವಾಯಿತು ಹೊಲಬ ತಪ್ಪಿದೆವು ಮಯನಿರ್ಮಿ |
ತಾಸರೋವರದೆಡೆಗೆ ಬಂದು ||
ಈಸು ದಿನ ದಣಿದೆವೆಂದೆನುತ ಬಳಿಕಲ್ಲಿ ಕಂ |
ಡಾ ಸ್ವಯಂಪ್ರಭೆಯ ನುಡಿಸಿದರು || ||೫೩||

**ರಾಗ ಕೇತಾರಗೌಳ ಅಷ್ಟತಾಳ**

ನಳಿನಾಯತಾಂಬಕಿ ನಿಲ್ಲೊಂದು ನಿಮಿಷವೆ |
ನ್ನೊಳು ಮಾತನಾಡಬಲೆ ||
ಇಳೆಗೆ ಪೋಗುವ ದಾರಿ ಯಾವುದೆಂದರಿಯದೆ |
ಹೊಲಬದಪ್ಪಿರುವೆವಲ್ಲೆ || ||೫೪||

ಬಲುದಿನವಾಯಿತು ಬಂದಿಲ್ಲಿ ನಾವೀಗ |
ಹೊಳಲ ಸಂಚರಿಸುವಲ್ಲಿ ||
ಹೊಲಬದಪ್ಪಿದೆವೊಬ್ಬ ದೂತನ ಕೊಟ್ಟೆಮ್ಮ |
ಇಳೆಯತ್ತ ಕಳುಹು ಬಾಲೆ || ||೫೫||

ಜಾಂಬವಂತನ ನುಡಿ ಕೇಳಿ ಸ್ವಯಂಪ್ರಭೆ |
ಸಂಭ್ರಮದಲಿ ನಗುತ ||

ಡಂಭಕತನದಲಿ ಹಾಸ್ಯವ ಮಾಡಿದ |
ಳಂಬುಜದಳನಯನೆ || ||೫೬||

ತರುಣಿಯ ನುಡಿಗೆ ಕೋಪಿಸಿ ಹನುಮಂತ ಭೀ |
ಕರರೂಪನಾಗೆ ಕಂಡು ||
ಶರಣೆಂದು ಪೊಗಳಿ ಕಾಣಿಕೆಯಿತ್ತು ತಾ ಬಂದು |
ಧರಣಿಯ ತೋರ್ದಳಂದು || ||೫೭||

**ವಾರ್ಧಕ**

ಈ ರೀತಿಯಿಂದ ಸ್ವಯಂಪ್ರಭಾನಗರವಂ
ಮೀರಿ ಬಳಿಕಲ್ಲಿಂದ ನಡೆತಂದರಂದು ಕಾ
ವೇರಿಯಮ್ಮನ ತೀರ ಬಳಿವಿಡಿದು ಬಂದಾ ಮೃಕಂಡುಮುನಿಗಭಿವಂದಿಸಿ |
ಸಾರಿದರು ತೆಂಕಮುಖವಾಗಿ ಬಳಿಕಲ್ಲಿರುವ
ವೀರಮುನಿ ಕಣ್ವನಾಶ್ರಮಕೆ ನಡೆತಂದಡವ
ನಾರು ನೀವೆಲ್ಲಿಗೈಯ್ದುವರೆಂದು ಕೇಳೆ ಜಾಂಬವನವನೊಳಿಂತೆಂದನು || ||೫೮||

**ರಾಗ ಭೈರವಿ ಝಂಪೆತಾಳ**

ದಶರಥನ ಸುತನರಸಿ | ಸೀತಾಂಗನಾಮಣಿಯ |
ದಶಕಂಠನೆಂಬುಸುರ | ಕದ್ದೊಯ್ದನಂತೆ ||
ಬಿಸಜಸಖಸುತನಾದ | ಸುಗ್ರೀವನೆಮ್ಮೊಡನೆ |
ಬೆಸಸಿ ಕಳುಹಿದನವಳ | ಹುಡುಕಬೇಕಂತೆ || ||೫೯||

ದೇಶ ದೇಶವ ತೊಳಲಿ | ದಣಿದೆವಲ್ಲದೆ ನಮಗೆ |
ಆ ಸೀತೆ ಕಣ್ಗೆ ಗೋ | ಚರಿಸಲಿಲ್ಲಯ್ಯ ||
ಮಾಸವೊಂದರೊಳೆಮಗೆ | ಹೋಗದಿದ್ದರೆ ಕಡೆಗೆ |
ಘಾಸಿಮಾಡುವ ನಮ್ಮ | ಭಾನುತನುಜಾತ || ||೬೦||

ಎತ್ತ ಪೋಗುವದೆಂದು | ಎಮಗೆ ತಿಳಿಯದೆ ನಿಮ್ಮ |
ಹತ್ತಿರಕೆ ಬಂದೆವಾವ್ | ಕಡುತವಕದಿಂದ ||
ಚಿತ್ತದಲಿ ತಿಳಿದು ದಯ | ವಿತ್ತು ನಮ್ಮಿಳಿವಿಗೊಂ |
ದುತ್ತರವ ಕೊಡಬೇಕು | ಉತ್ತಮ ಮುನೀಂದ್ರ || ||೬೧||

ಇವರ ನುಡಿ ಕೇಳ್ದು ಮುನಿ | ಈ ದಾರಿಯಲಿ ಪೋಗಿ |
ಶಿವನು ದಯೆ ಮಾಡುವನು | ಶೀಘ್ರದಿಂ ನಿಮಗೆ ||

ಅವನಿಜೆಯ ದರುಶನವು | ಆಗುವುದು ನಿಮಗೆಂದು |
ಬಹುಮಾನದಲಿ ಹರಸಿ | ಕಳುಹಿಸಿದನವರ || ||೬೨||

**ರಾಗ ಮಾರವಿ ಏಕತಾಳ**

ಮುಂದೆ ನಡೆದು ಮಲಯಾಚಲದೆಡೆಗ | ಯ್ತಂದರು ಕಪಿವರರು ||
ಒಂದೇ ಬುದ್ಧಿಯೊಳಗೆ ಯೋಚಿಸಿದರು | ಮುಂದೇನ್ ಗತಿಯೆನುತ || ||೬೩||

ಇಂದಿಗೆ ದಿನ ಮೂರುಳಿದುವು ಭಾಸ್ಕರ | ನಂದನನಪ್ಪಣೆಗೆ ||
ಮಂದಗಮನೆಯನು ಕಾಣದೆ ಪೋದರೆ | ಕೊಂದಲ್ಲದೆ ಬಿಡನು || ||೬೪||

ವಚನ || ಇಂತೆಂದು ಒಬ್ಬೊಬ್ಬರು ಪ್ರಸಂಗಿಸಲಾಗಿ ಆಗಲಾ ಅಂಗದನು ಏನೆಂದನು ಎಂದರೆ –

**ರಾಗ ತೋಡಿ (ಸಾಂಗತ್ಯ ) ರೂಪಕತಾಳ**

ಹಿಂದೆ ನಮ್ಮಯ್ಯಗೂ ಭಾನುನಂದನನಿಗೂ |
ಒಂದಲ್ಲ ಮನಸು ತಮ್ಮೊಳಗೆ ||
ಅಂದಿನ ಹಗೆ ಬಿಡದೀಗ ಸೀತೆಯ ಕಂಡು |
ದಿಲ್ಲೆಂದರೇನ ಮಾಡುವನೊ || ||೬೫||

ಅಲ್ಲಿ ಆತನ ಕಯ್ಯ ಕೊಲಿಸಿಕೊಂಬುದಕಿಂತ |
ಇಲ್ಲಿಯೇ ಉಪವಾಸ ಬಿದ್ದು ||
ಇಲ್ಲ ಈ ಪ್ರಾಣವೆಂದೆನಿಪುದೇ ಲೇಸೆಂದು |
ಎಲ್ಲರ ಮುಂದೆ ಪೇಳಿದನು || ||೬೬||

ಅಂಗದನಿಂತೆಂದ ಮಾತ ಕೇಳುತ ಕಪಿ |
ಪುಂಗವ ಪರಮೇಷ್ಠಿಸುತನು ||
ಮಂಗಳ ಮಹಿಮ ಶ್ರೀ ರಾಮಚಂದ್ರನು ನಮ್ಮ |
ಭಂಗಿಸುವುದಕೊಪ್ಪುಗೊಡನು || ||೬೭||

ಕೊಂದರೂ ಕೊಲಲಿ ಕಾಯ್ದರೆ ಕಾಯಲಾ ರಾಮ |
ಚಂದ್ರನ ಪಾದದ ಬಳಿಯ ||
ಹಿಂದೆ ಜಟಾಯು ಪ್ರಾಣವ ಬಿಟ್ಟು ಸುರಪನ |
ಮಂದಿರ ಸೇರ್ದುದನರಿಯಾ || ||೬೮||

ಈ ತೆರದೊಳು ತಮ್ಮೊಳೊಂದೊಂದಾಲೋಚನೆ |
ಮಾತಾಡುತ್ತಿರುವ ವೇಳೆಯೊಳು ||
ಆತ ಜಟಾಯುವಿನಣ್ಣನೆಂದೆನಿಪ ಸಂ |
ಪಾತಿ ಬಂದಿವರ ಕೇಳಿದನು || ||೬೯||

**ರಾಗ ತೋಡಿ ಅಷ್ಟತಾಳ**

ಯಾರಯ್ಯ | ನೀವು | ಯಾರಯ್ಯ || ಪಲ್ಲವಿ ||

ಯಾರಯ್ಯ ನೀವೆಲ್ಲರೊಟ್ಟಾಗಿ ಸೇರಿ ಈ |
ಘೋರ ಕಾನನದೊಳು ಸುಮ್ಮನೆ ಕುಳಿತಿರ್ಪು | ದಾರಯ್ಯಾ || ಅನುಪಲ್ಲವಿ ||

ದಶರಥಸುತ ರಾಮನೆಂಬಾತನಾರು |
ಪುಸಿಯಲ್ಲ ಭಾನುನಂದನನೆಂದರೆಲ್ಲಿ ||
ದಶಕಂಠ ಜನಕನಂದನೆ ಸುದ್ದಿಯೇನು |
ವಶವಿಲ್ಲದಿನಿತು ಚಿಂತಿಸುವುದಿನ್ನೇನು || ||೭೦||

ತಮ್ಮ ತಾನೆನಗೆ ಜಟಾಯುವೆಂಬಾತ |
ನಿರ್ಮಲದಲಿ ಸತ್ತನೆಂದೆಂಬ ಮಾತ ||
ನಿಮ್ಮೊಳೆಂದವರಾರು ಅದ ಕೇಳ್ದುದೆಲ್ಲ |
ಒಮ್ಮೆಗೆನ್ನೊಡನೆ ವಿಸ್ತರಿಸಬೇಕಲ್ಲ || ||೭೧||

ವಸುಧೆಗುತ್ತಮವಾದಯೋಧ್ಯಾಪಟ್ಟಣದಿ |
ದಶರಥನೃಪನೆಂಬ ಧರಣಿಪಾಲಕಗೆ ||
ಕುಸುಮಗಂಧಿಯರು ಮೂವರು ಹೆಂಡಿರೊಳಗೆ |
ಅಸಮಸಾಹಸರು ನಾಲ್ವರು ಮಕ್ಕಳವಗೆ || ||೭೨||

ಪಿತನ ವಾಕ್ಯವ ಕೇಳಿ ಶ್ರೀರಾಮಚಂದ್ರ |
ಸತಿ ಸಹಿತಲೆ ಪಂಚವಟಿಯೊಳಿರೆ ಮುನ್ನ ||
ಕಪಟದಿ ದಶಕಂಠ ಕದ್ದೊಯ್ದ ಸತಿಯ |
ಚಪಲನೇತ್ರೆಯು ಕೂಗುತಿರಲು ದುಸ್ಥಿತಿಯ || ||೭೩||

ಮಡದಿಯ ಧ್ವನಿ ಕೇಳಿ ಮತ್ತಾ ಜಟಾಯು |
ತಡೆದು ಮಾರ್ಗದಿ ಹೋಗಗೊಡದೆ ಶುಭಕಾಯ ||
ಹೊಡೆದಾಡುತಿರೆ ಬಹು ಕಾಲಪರ್ಯಂತ |
ಕಡೆಗೆ ಮೋಸದೊಳವನ ಕೊಂದ ದಶಕಂಠ || ||೭೪||

ಕಾಮಿನಿ ವರವಿತ್ತ ಬಗೆಯಿಂದ ಶರಣ |
ರಾಮನ ಚರಣದೆಡೆಯೊಳಾಯ್ತು ಮರಣ ||
ಆಮೇಲೆ ನಮ್ಮರಸಿನ ಸ್ನೇಹ ಬಳಸಿ |
ಕಾಮಸನ್ನಿಭ ಇಂದ್ರಸುತನ ಸಂಹರಿಸಿ || ||೭೫||

ಸೇನಾಧಿಪತ್ಯವ ಸುಗ್ರೀವಂಗಿತ್ತು |
ಜಾನಕಿಯರಸಲೆಮಗೆ ವೀಳ್ಯವಿತ್ತು ||
ನಾನಾರಾಜ್ಯದೊಳೆಲ್ಲಿ ಹುಡುಕಿದರಿಲ್ಲ |
ಏನ ಮಾಡುವುದೆಂದೆಮಗೆ ಕಾಂಬುದಿಲ್ಲ || ||೭೬||

**ವಾರ್ಧಕ**

ಸಿರಿರಾಮಚಾರಿತ್ರಮಂ ಕೇಳ್ದು ಹಿಂದೆ ರವಿ
ಕಿರಣದುರಿಯಲಿ ಬೆಂದ ಗರಿ ಮತ್ತೆ ಮೂಡಿದವು
ಎರಡು ಪಕ್ಕದೊಳಿವರನೆಲ್ಲರಂ ಕುಳ್ಳಿರಿಸಿ ಶರಧಿತಡಿಯೊಳಗಿಳುಹುತ |
ಬೆರಳ ಸನ್ನೆಯಲಿ ತೋರಿಸಿದು ಲಂಕಾದ್ವೀಪ
ಪುರವದಲ್ಲಿಹುದೆಂದು ತೆರಳೆ ಸಂಪಾತಿ ಭೋ
ರ್ಗರೆವ ಶರಧಿಯ ಕಂಡು ಕಪಿನಾಯಕರಿಗೆ ವಾನರ ಶ್ರೇಷ್ಠನಿಂತೆಂದನು || ||೭೭||

**ರಾಗ ದ್ವಿಜಾವಂತಿ ಏಕತಾಳ**

ಕಂಡಿರೇ | ನೀವು | ಕಂಡಿರೇ ||
ಕಂಡಿರೇ ಸಮುದ್ರರಾಜ |
ಕೆಂಡದಂತುಬ್ಬಳಿಸುವುದ || ಪಲ್ಲವಿ ||

ಧರೆಯ ಪುಣ್ಯನದಿಗಳನ್ನು |
ಕರೆಸಿ ಬೆರಸಿಕೊಂಡುಬ್ಬಿಕೊಬ್ಬಿ |
ಮೊರೆವುದ | ಭೋ | ರ್ಗರೆವುದ || ||೭೮||

ಅಂಬರಕ್ಕೆ ಹಾರಿ ಮಗುಚಿ |
ಲಂಘಿಸುವುದಬ್ಬರ ಹೆಚ್ಚಿ |
ತೆರೆಗಳ | ಬಹು | ನೊರೆಗಳ || ||೭೯||

ಅಗಣಿತ ಪರ್ವತಂಗಳ |
ಮಿಗುವರಿವಂಥ ಮೀನ್ಗಳ |
ಹೊಳೆವುದ | ಬಾಯ | ಕಳೆವುದ || ||೮೦||

ಹೇಗೆ ದಾಂಟುವದೆಲ್ಲ |
ನಾಗಶಯನ ಬಲ್ಲ |
ತಿಳಿಯದು | ಪ್ರಾಣ | ಉಳಿಯದು || ||೮೧||

**ವಚನ ||** ಇಂತೆಂದು ಜಾಂಬವನ ವಚನಮಂ ಕೇಳ್ದು ಹನುಮಂತನು ಏನೆಂದನು ಎಂದರೆ –

**ರಾಗ ಕೇತಾರಗೌಳ ಝಂಪೆತಾಳ**

ಇದಕೆ ಚಿಂತೆಗಳೇಕೆ ನಿಮಗೆ | ಸ್ವಾಮಿ |
ಪದುಮನಾಭನ ಕರುಣವಿಲ್ಲವೇ ನಮಗೆ || ಪಲ್ಲವಿ ||

ಜಾಂಬವನ ನುಡಿಕೇಳಿ ಬೆದರದುಬ್ಬೇರಿದನು |
ಜಂಭಾರಿಸುತತನಯ ನುಡಿದನೀ ಪಾಡೇನು |
ಕುಂಭಿನಿಯ ಕಿತ್ತು ಕಡೆಗಿರಿಸಹೇಳಿದರು ರವಿ |
ಬಿಂಬವನೆ ತುಡುಕಹೇಳಿದರೂ | ಸಮರ |
ಡೊಂಬಿಯಲಿ ಕಾಲಭೈರವನ ಕೆಡಹುವೆವು || ||೮೨||

ಹಾರುವೆವು ಶರಧಿಯನು ಅರೆನಿಮಿಷದೊಳಗೆ ಎದೆ |
ಹೋರುವೆವು ರಾವಣನ ಹತ್ತು ಶಿರಗಳ ದೆಸೆಗೆ |
ಬೀರುವೆವು ಶಾಕಿನೀ ಡಾಕಿನಿಯರ್ಗೌತಣವ |
ತೋರುವೆವು ರಕ್ತದೋಕುಳಿಯ | ಹಿಂದೆ |
ಸಾರುವೆವು ಕಂಡು ಕೈಮುಗಿದು ಜಾನಕಿಯ || ||೮೩||

ಶಿವನ ಕೈಲಾಸದಿಂದೋಡಿಸಲ್ ಪೇಳ್ ಕಮಲ |
ಭವನ ಪಟ್ಟವ ಕಿತ್ತು ಬದಲೊಬ್ಬಗಿರಿಸುವೆವು |
ದಿವಿಜಾಧಿಪತಿಯ ಇಂದ್ರತ್ವವನ್ನು ಕಳೆಯೆನ್ನು |
ಜವನ ಹೆಡ ಮುಡಿಕಟ್ಟಲೆನ್ನು | ಮಹಾ |
ರ್ಣವವ ದಾಟುವದಾವ ಗಣನೆ ನಮಗಿನ್ನು || ||೮೪||

**ವಚನ ||** ಇಂತೆಂಬ ಅಂಗದಾದಿ ಪುಂಡಕಪಿಗಳೊಬ್ಬೊಬ್ಬರ ಪರಾಕ್ರಮವಂ ಕೇಳ್ದಾ
ಜಾಂಬವರು ಹನುಮಂತನೊಡನೆ ಏನೆಂದರು ಎಂದರೆ –

**ರಾಗ ಮಧ್ಯಮಾವತಿ ಅಷ್ಟತಾಳ**

ನೀನೆ ಕಲಿ ಹನುಮ | ನಮ್ಮವರೊಳು |
ನೀನೇ ಕಲಿ ಹನುಮ || ಪಲ್ಲವಿ ||

ನೀನೇ ಕಲಿಯು ನಮ್ಮ ವಾನರರೊಳಗೆಲ್ಲ |
ಸಾನಂದದಿಂದ ಸಾಗರವ ದಾಟುವುದಕ್ಕೆ || ||೮೫||

ಬಣಗುರಕ್ಕಸ ರಾ | ವಣನ ಪಟ್ಟಣವೆಲ್ಲ |
ಅಣುರೂಪಿನಲಿ ಮನೆ | ಮನೆಯ ಹುಡುಕಲಿಕ್ಕೆ || ||೮೬||

ಕೊಂಕದೆ ಕೊನರದೆ | ಲಂಕೆಯೊಳ್ಸಿಲುಕದೆ |
ಪಂಕಜಮುಖಿ ಸೀತೆ | ಯಂ ಕಂಡುಬರಲಿಕ್ಕೆ || ||೮೭||

ಕೆಟ್ಟರಕ್ಕಸರಡ್ಡ | ಗಟ್ಟಿ ಬಂದವರನ್ನು |
ಕುಟ್ಟಿ ಲಂಕಾಪಟ್ಣ | ಸುಟ್ಟು ಬರುವುದಕ್ಕೆ || ||೮೮||

**ವಾರ್ಧಕ**

ಎಂದ ಜಾಂಬವರ ನುಡಿಕೇಳ್ದು ಬೊಬ್ಬಿರಿದು ಅಜ
ನಂದನಗೆ ಕೈ ಮುಗಿಯುತಾಕ್ಷಣವೆ ಚಿಗಿದಾ ಮ
ಹೇಂದ್ರಪರ್ವತವೇರಿ ನಾಲ್ದೆಸೆಯ ನೋಡಿದಂ ಸಿಂಧು ಭೋರ್ಗುಡಿಸುತಿಹುದ |
ಇಂದುಶೇಖರ ಕಮಲಬಂಧುವಿಂದ್ರಾದಿ ಸುರ
ವೃಂದ ಶಾರದೆ ಗೌರಿ ಗಣಪ ಮೊದಲಾಗಿ ರಘು
ನಂದನನ ಧ್ಯಾನಿಸುತ ಪುಟನೆಗೆದು ಹಾರಿದಂ ಮೂಲೋಕ ತಲ್ಲಣಿಸಲು || ||೮೯||

ಒದೆದು ಗಗನಾಂಗಣಕೆ ಲಂಘಿಸುವ ಭರಕಾಗ
ಹದಿನಾಲ್ಕು ಲೋಕವಲ್ಲಾಡಿದುದು ನೆಲವದಿರಿ
ತುದಧಿ ಕಂಪಿಸಿತಷ್ಟಗಜ ಕೂರ್ಮ ಫಣಿರಾಜ ಮೊದಲಾದರೆದೆಗೆಟ್ಟರು |
ಬೆದರಿದರು ಸುರರು, ಮಾಯಕದಿಂದ ನಿರ್ಮಿಸಿದ
ಸುದತಿ ಬಂದಡ್ಡಗಟ್ಟಿದಡವಳ ಸದೆಬಡಿದು
ಉದರದೊಳಹೊಕ್ಕು ಛಾಯೆಯ ಸೀಳಿ ಮುಂದಿರುವ ಮೈನಾಕನಂ ಮನ್ನಿಸಿ || ||೯೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹಾರಿದನು ಲಂಕೆಯನು ಬಿಟ್ಟೇ |
ಳ್ನೂರು ಯೋಜನ ಮುಂದೆಯೆಡದಲಿ |
ಸಾರಿದನು ತೃಣಬಿಂದು ಮುನಿಪನ | ಶಾಲೆಯೆಡೆಗೆ || ||೯೧||

ಊರ ಹೊಲಬನು ತಿಳಿಯದಲ್ಲಿ ವಿ |
ಚಾರಿಸಲು ಬೇಕೆನುತ ಮುನಿಯ ಪ |
ದಾರವಿಂದಕೆ ಕೈಯ ಮುಗಿದನು | ವೀರ ಹನುಮ || ||೯೨||

ಮಾತನಾಡಿಸಿಕೊಂಬೆನೆನುತಲಿ |
ಮತ್ತೆ ಸ್ತುತಿಸಿದ ಬಹಳ ದೈನ್ಯದಿ |
ವಾತಸಂಭವ ನುಡಿದನಾ ಮುನಿ | ನಾಥಗಂದು || | | ೯೩||

**ರಾಗ ಭೈರವಿ ಝಂಪೆತಾಳ**

ಯಾವ ದೇಶಂಗಳಿವು | ಯಾವ ರಾಜ್ಯಾಂಗಳಿವು |
ನೀವಿಲ್ಲಿ ನೆಲೆಯಾಗಿ | ಇನ್ನೆಷ್ಟು ವರುಷ || ||೯೪||

ರಾವಣೇಶ್ವರನೆಂಬ | ರಕ್ಕಸನ ಪುರವೆಲ್ಲಿ |
ಯಾವ ದಿಕ್ಕಿನೊಳಿಹುದು | ಲಂಕಾಧಿನಗರ || ||೯೫||

ಕಾರ್ಯವುಂಟೆಮಗಲ್ಲಿ | ಕಳ್ಳರಕ್ಕಸನಲ್ಲಿ |
ತೋರಿಕೊಟ್ಟರೆ ತಿಳಿದು | ಬಹುಪುಣ್ಯಬಹುದು || | | ೯೬||

**ವಚನ ||** ಇಂತೆಂದು ಮುನಿಯ ಪಾದಕ್ಕೆ ಸಾಷ್ಟಾಂಗವಂದನೆಯಂ ಮಾಡಿ ಹೇಳಿಕೊಂಬಂಥಾ ಹನುಮಂತನ ಭಕ್ತಿಯಂ ಕಂಡು, ಈತನು ಮಹಾಸ್ವಾಮಿಕಾರ್ಯಸಂಗ್ರಹಿ, ಪರೋಪಕಾರಿ, ಅತಿಧೈರ್ಯಮಾನಿ, ಶರಣಶ್ರೇಷ್ಠನೆಂದು ತಿಳಿದು, ಈತನ ಸತ್ತ್ವವಂ ಪರೀಕ್ಷಿಸಬೇಕೆಂದು ಕಣ್ತೆರೆದು ಕಟಾಕ್ಷದಿಂ ನೋಡಿ ಹನುಮಂತನ ಕೂಡೆ ಆ ಮುನಿಶ್ರೇಷ್ಠ ಏನೆಂದನು ಎಂದರೆ –

**ರಾಗ ಆನಂದನೀಲಾಂಬರಿ ರೂಪಕತಾಳ**

ಕುರುಡನ ಕೈಗೆ ಕನ್ನಡಿಯೇಕೆ ಬಧಿರಗೆ |
ವರಸಂಗೀತಗಳ ಮಾತೇಕೆ ||
ಎರಡೂ ಕಾಲಿಲ್ಲದ ಹೆಳವಗೆ ಯಾತ್ರೆಯ |
ತಿರುಗಾಡುವ ಸುದ್ದಿಯೇಕೆ || ||೯೭||

ಮರಮರ ಚರಿಪ ವಾನರ ನಿನಗಾ ಲಂಕಾ |
ಪುರದರಸಿನ ಸುದ್ದಿಯೇಕೆ ||
ತಿರಿದುಂಬಾತನ ಮನ ಪಲ್ಲಕಿಯೇರುವ |
ತೆರನಂತಾಯಿತು ನಿನ್ನ ಮನಸು || ||೯೮||

ಏಳು ಸುತ್ತಿನ ಕೋಟೆ ಕಣಿವೆ ಹೆಜ್ಜರಿ ಸುತ್ತ |
ಕಾಳರಕ್ಕಸರ ಕಾಲಾಟ ||
ಮೇಲಾದ ಬ್ರಹ್ಮರಾಕ್ಷಸ ಭೂತಗಣಗಳ |
ಜಾಲವು ನುಸಿಹೋಗಗೊಡವು || ||೯೯||

ಮುನಿರಾಯ ಕೇಳಯ್ಯ ಹಿಂದು ಮುಂದಾದರೂ |
ತನುವಿದುಯೆನಗೆ ಶಾಶ್ವತವೇ |
ವನಜಸಂಭವ ಹಣೆಯೊಳು ಬರೆದಿಟ್ಟಂಥಾ |
ದ್ದನು ಮೀರಲಳವೆ ಜೀವರಿಗೆ || ||೧೦೦||

ಸ್ವಾಮಿಕಾರ್ಯದ ಮೇಲೆ ಸತ್ತರೆ ನೆನಸಿದ |
ಕಾಮಿತ ಕೈಲಾಸವಹುದು ||
ಆ ಮಾತು ನಿಮಗೇಕೆ ದಶಕಂಠನಿರುವಂಥ |
ಸೀಮೆ ತೋರಿಸಿದರೆ ಸಾಕು || ||೧೦೧||

**ರಾಗ ಘಂಟಾರವ (ದೇಶಿ) ಅಷ್ಟತಾಳ**

ಕಪಿವರಾ ವೀರ ಕೇಳೆನ್ನ ಮಾತ |
ಗುಪಿತದಿಂ ಬಹುಕಾಲವಾಯಿತು | ತಪವ ಮಾಡುವೆವಿಲ್ಲಿ ನಾವ್ || ||೧೦೨||

ತಲೆಯಿಂದ ಜಡೆಯಿಳಿದು ಪಾತಾಳಕ್ಕೆ |
ಬೆಳಸುಕೊಂಡಿದೆ ಬೇರುವರಿದಿದೆ | ಎಳಸಲಾರದು ಶಕ್ತಿಗೆ | ||೧೦೩||

ವೃದ್ಧರು ನಾವು ಏಳಲಾರೆವು ನಮ್ಮ |
ಉದ್ದ ನೆಗಹಲು ರಾವಣೇಶ್ವರ | ನಿದ್ದ ಠಾವನು ತೋರ್ಪೆವು || ||೧೦೪||

ಎಂಬ ಮಾತಿಗೆ ಎರಡೂ ತೋಳ್ವಿಡಿದಿತ್ತಿ |
ಅಂಬರಕೆ ನೆಗಹಲ್ಕೆ ಕಮಲಜ | ಶಂಭು ತಾ ಬೆರಗಾಗಲು || ||೧೦೫||

ತೋರೆಲಾ ಮುನಿ ಲಂಕಾಪಟ್ಟಣವನ್ನು |
ಹಾರಿದನು ಹನುಮಂತ ಲಂಕೆಯ | ನೇರಿದನು ಮಹಾದುರ್ಗವ || ||೧೦೬||

ನಿಲ್ಲೆಲೋ ಕಪಿಯೆನುತ ಬಾಗಿಲ ಬಳಿ |
ಯಲ್ಲಿ ತಡೆವಾ ಖುಲ್ಲ ರಕ್ಕಸ | ರೆಲ್ಲರನು ಸದೆಬಡಿಯುತ || ||೧೦೭||

ಹೊಕ್ಕನಾ ಲಂಕಾ ಪಟ್ಟಣದೊಳಗುಳ್ಳ |
ರಕ್ಕಸರು ಘೋರಿಡುವ ನಿದ್ರೆಯ | ಗಕ್ಕಸದ ಭರವೀಕ್ಷಿಸಿ || ||೧೦೮||

ಅಲ್ಲಲ್ಲಿ ರಾತ್ರಿ ತಿರುಗಾಡತಿಹ ವೇಳೆ |
ಯಲ್ಲಿ ಲಂಕಿಣಿಯೆಂಬ ದಾನವಿ | ಬಲ್ಲಿದಾತನ ತಡೆದಳು || ||೧೦೯||

**ರಾಗ ಮಾರವಿ ಅಷ್ಟತಾಳ ದ್ರುತ**

ಮಧ್ಯರಾತ್ರಿ ಕಾಲದಲ್ಲಿ | ಮಾತನಾಡದೆ ಸುಮ್ಮನೆ |
ಎದ್ದು ತಿರುಗಾಡುವಾತ | ನಾರೆಲೋ ಕಪಿ || ||೧೧೦||

ನಿದ್ದೆಯಿಲ್ಲ ಕಾಣೆಯೆನಗೆ | ನೀನು ಭೂತಂಗಳ ಹಾಗೆ |
ಉದ್ದುರುಟುತನವದೇಕೆ | ಯಾರೆ ರಾಕ್ಷಸಿ || ||೧೧೧||

ಭದ್ರ ಎನ್ನ ಕಾವಲಿಲ್ಲಿ | ಲಂಕಿಣಿಯೆಂಬಾಕೆ ನಾನು |
ಕ್ಷುದ್ರ ಕಳ್ಳ ಎನ್ನ ಕೈಗೆ | ಸಿಕ್ಕಿದೆಯಲ್ಲ || ||೧೧೨||

ಕಳ್ಳನಲ್ಲ ಕಾಣೆ ನಾನು | ಕಾಂತೆ ರಾಕ್ಷಸಿ ಕೇಳ್ ನೀನು |
ಒಳ್ಳೆ ವಾಯು ಪುತ್ರ ಹನುಮಂ | ತೆನ್ನ ಪೆಸರದು || ||೧೧೩||

ಹನುಮಂತನಾದರೇನು | ಕಣ್ಣು ಮೂರುಂಟೇನೊ ನಿನಗೆ |
ಇನ್ನು ನಾ ಬಿಟ್ಟೇನೆ ನಿನ್ನ | ತಿನ್ನದುಳಿವೆನೆ || ||೧೧೪||

ಎನ್ನ ಪಂಥ ನೋಡು ನಿನ್ನ | ಮಣ್ಣ ಮುಕ್ಕಿಸುವೆ ಮುನ್ನ |
ಹೆಣ್ಣು ಮೂಳಿ ದಾರಿಯ ಬಿ | ಟ್ಟತ್ತ ಸಾರೆಲೇ || ||೧೧೫||

ವಾಯುಪುತ್ರ ನೋಡು ಯೆನ್ನ | ಬಾಯೊಳಿದ್ದ ಪಲ್ಗಳನ್ನು |
ನೋಯದೆ ನುಂಗುವೆ ನಿನ್ನ | ಮಾತು ಬೇರುಂಟೇ || ||೧೧೬||

ನಾಯಿಗಳ ಹಾಗೊಂದೊಂದ | ಬಾಯಿಬಗುಳಿ ಪೆಟ್ಟತಿಂದು |
ಸಾಯಬೇಡತ್ತತ್ತ ತೊಲಗೆ | ಹೇಯ ರಾಕ್ಷಸಿ || ||೧೧೭||

ಇಷ್ಟು ಪಂಥವಾದ ಮೇಲೆ | ಬಿಟ್ಟು ನಿನ್ನ ನಾ ಪೋದರೆ |
ಕಷ್ಟವೆಂದು ಕೈಯೊಳೊಂದು | ಪೆಟ್ಟನಿಟ್ಟಳು || ||೧೧೮||

ಕಟ್ಟಮೂಳಿಯೆಂದು ಹನುಮ | ಮುಷ್ಟಿಯಿಂದ ತಿವಿಯಲವಳು |
ರಟ್ಟೆ ಮುರಿದು ಬಿದ್ದಳು ಹೆ | ಬ್ಬೆಟ್ಟದಂದದಿ || ||೧೧೯||

**ವಾರ್ಧಕ**

ಹಲವು ಪರಿಯಲಿ ಕಾದಿ ದಣಿದು ಲಂಕಾಲಕ್ಷ್ಮಿ
ತೊಲಗಿದಳು ರಾವಣಗೆ ಬಂತು ಕೀಳ್ದೆಸೆಯೆನುತ
ಬಳಿಕ ಹನುಮಂತನಣುರೂಪಿನಿಂದಲ್ಲಲ್ಲಿ ಸುಳಿದಾಡಿ ಹುಡುಕುತಿರಲು |
ಬಲವಂತ ನಿದ್ರೆಯಲಿ ಗೋರಿಡುತ ಮೆಯ್ಮರೆದು |
ಮಲಗಿರ್ದ ಕುಂಭಕರ್ಣನ ಸುಯ್ಲೊಳಗೆ ಸಿಕ್ಕಿ
ಸುಳಿ ಸುಳಿದು ವಜ್ರಕಂಬಕೆ ಬಡಿದು ಅಲ್ಲಿಂದ ಪೊರವಂಟು ದಣಿದನಂದು || ||೧೨೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹತ್ತಿ ನೋಡಿದ ಗೋಪುರಂಗಳ |
ಸುತ್ತಿ ದಣಿದನು ಕೋಟೆಕೊತ್ತಳ |
ಪೃಥ್ವಿಜಾತೆಯ ಕಾಣದಿರೆ ಬೇ | ಸತ್ತ ಹನುಮ || ||೧೨೧||

ಮಾಣದಯ್ತಂದಲ್ಲಿ ಸೆರೆಮನೆ |
ಕೋಣೆಗಳ ಬೀಯಗದ ಮುದ್ರೆಯ |
ತ್ರಾಣದಲಿ ಕಿತ್ತೊಳಗೆ ಹೊಕ್ಕನು | ಜಾಣ ಹನುಮ || ||೧೨೨||

ಲೆಕ್ಕವಿಲ್ಲದ ಠಾಣೆ ಠಾಣೆಗ |
ಳಿಕ್ಕೆ ಹುಲಿಮುಖ ಗೋಪುರಂಗಳ |
ಮಿಕ್ಕ ಮಾಳಿಗೆಗಳೊಳು ಮೆಲ್ಲನೆ | ಹೊಕ್ಕು ಕಂಡ || ||೧೨೩||

ಜೋಲು ಕೂದಲ ಕಾಲನಿಗಳದ |
ತೋಳತೆಕ್ಕೆಯೊಳಾರ್ದು ಮಲಗಿದ |
ಖೂಳ ರಕ್ಕಸರನ್ನು ಕಾಣುತ | ಗೋಳುಗುಟ್ಟಿ || ||೧೨೪||

ರಾಕ್ಷಸರ ಮನೆ ಮನೆಗಳೆಸೆವ ಗ |
ವಾಕ್ಷದೊಳಗೊಳಹೊಕ್ಕು ಬಂದನು |
ಸೂಕ್ಷ್ಮದಲಿ ಮಲಗಿರುವ ದನುಜರ | ನೀಕ್ಷಿಸುತಲೇ || ||೧೨೫||

ಮುಸುಡ ಸರಿಸಕೆ ಬಂದು ಮೋರೆಯ |
ಮುಸುಕುಗಳ ತೆಗೆತೆಗೆದು ಬೆಳಗುವ |
ಮಿಸುನಿಯುಂಗುರದಿಂದ ಕಾಂಬನು | ಕುಶಲದಿಂದ || ||೧೨೬||

ಹರಿಗೆಯಮರಿಸಿದಂಥ ಕಂಗಳ |
ಕರಿಯ ತುಟಿಗಳ ಬಿರಿದ ಕೋರೆಯ |
ತೆರೆದ ಬಾಯ್ಗಳ ಸುರಿವ ಜೊಲ್ಲಿನ | ಹರಿಬ ಕಂಡ || ||೧೨೭||

ನರರ ತೊಗಲಿನ ಮಂಚದಲಿ ತಲೆ |
ಗಿರಿಸಿದಾನೆಯ ಹೆಗಲ್ಗಳಲಿ ಮರೆ |
ದೊರಗಿದಸುರರ ಕಂಡು ಹೇಸಿದ | ನಿರುಳು ಹನುಮ || ||೧೨೮||

ಹಟ್ಟಿಯಲಿ ನೋಡಿದನು ಕರುಗಳ |
ಕಟ್ಟುವದರೊಳಗರಸಿ ಬಚ್ಚಲು |
ಕೊಟ್ಟಿಗೆಗಳೊಳು ಸಹಿತ ಹುಡುಕಿದ | ಸೃಷ್ಟಿಸುತೆಯ || ||೧೨೯||

ತ್ರಿಣಯಸಖ ಮಧುಸೂದನಾಚ್ಯುತ |
ವನಜಲೋಚನನೆಂಬ ಜಪಗಳ |
ನೆಣಿಪ ಶರಣಶ್ರೇಷ್ಠನ ವಿಭೀ | ಷಣನ ಕಂಡ || ||೧೩೦||

ಇಲ್ಲಿ ನೋಡಿದರೀತ ರಕ್ಕಸ |
ನಲ್ಲ ಗುಣವಿದೆಯೆನುತಿರಲು ಮ |
ತ್ತಲ್ಲಿ ಕಂಡನು ರಾವಣೇಂದ್ರನ | ವಲ್ಲಭೆಯನು || ||೧೩೧||

**ರಾಗ ಮಧ್ಯಮಾವತಿ ಏಕತಾಳ**

ಸೆಜ್ಜೆಯ ಗೃಹದಲಿ ಸಲಿಗೆಮಂಚದಲಿ |
ಪಜ್ವಳಿಸುವ ದೀಪವೆರಡು ಥಟ್ಟಿನಲಿ |
ವಜ್ರದ ಹರಳ ಕೆತ್ತಿದ ಪರ್ಯಂಕದಲಿ |
ಸಜ್ಜುಗೊಂಡಿಹಸುಪ್ಪತ್ತಿಗೆಯ ಹಾಸಿನಲಿ || ||೧೩೨||

ದಶಕಂಠನಿರಲು ನಿದ್ರೆಯ ಭಾರದಲಿ |
ಶಶಿಮುಖಿ ಮಂಡೋದರಿಯ ಸಮೇಳದಲಿ |
ಕುಸುಮ ಗಂಧಿಯರು ಸಾವಿರದ ಸಂಖ್ಯೆಯಲಿ |
ಅಸುರನ ತೆಕ್ಕೆಯೊಳಿರೆ ಸಮ್ಮೋಹದಲಿ || ||೧೩೩||

ಹತ್ತು ತಲೆಯ ನೋಡಿದರೆ ಬೆರಗಾಗಿ |
ಹತ್ತಿರ ಬಂದಿಣುಕುತ ನಸುಬಾಗಿ |
ಸುತ್ತಲಿರುವ ಸತಿಯನು ಲೇಸಾಗಿ |
ಮತ್ತೆ ಕಾಣುತ ತಿರಿಗಿದ ತಲೆವಾಗಿ || ||೧೩೪||

ಜಾನಕೀದೇವಿಯನಿದರೊಳಗರಸಿ |
ಕಾಣಬೇಕೆನುತ ತನ್ನೊಳಗೆ ನಿಶ್ಚೈಸಿ |
ಠಾಣದೀವಿಗೆಯ ಜ್ಯೋತಿಗಳನೆ ತಣಿಸಿ |
ಮಾಣಿಕ್ಯದಂಥ ಉಂಗುರವನ್ನೆ ಹೊಳೆಸಿ || ||೧೩೫||

ಮೆಲ್ಲನೆ ಒಂದೊಂದೇ ಹೆಜ್ಜೆಯನಿಡುತ |
ಫುಲ್ಲಲೋಚನೆಯರ ಮೊಗನೋಡಿಕೊಳುತ |
ಗುಲ್ಲು ಮಾಡದೆ ಪರಾಂಬರಿಸುವೆನೆನುತ |
ಕಳ್ಳನಂದದಿ ಕಾಂತೆಯರೊಳಗರಸುತ || ||೧೩೬||

ಮುಂದೆ ಕಂಡರೆ ರಾವಣೇಂದ್ರನ ಮಡದಿ |
ಚಂದವಾಗಿರಲು ಚಿಂತಿಸಿದನು ಮನದಿ |
ಮಂದಗಮನೆ ಸೀತೆಯೆಂಬ ಕಾತರದಿ |
ಕಂದಿ ಕುಂದುತ ಭ್ರಮೆಗೊಂಡ ತತ್ ಕ್ಷಣದಿ || ||೧೩೭||

**ದ್ವಿಪದಿ**

ಬಲುದೋಷಕೊಳಗಾದ ಪಾಪಿದಶಕಂಠ
ಮಲಗಿದಾತನು, ಇವಳು ವೈದೇಹಿ ತಾನೆ || ||೧೩೮||

ಕಲೆಯಾಯ್ತು ರಾಘವಗೆ ಕಾಂತೆಯಿವಳಿಂದ
ಗೆಲವಿಲ್ಲ ಮುಂದೆಮಗೆ ದಣಿವುದಿದು ವ್ಯರ್ಥ || ||೧೩೯||

ವರಪತಿವ್ರತೆಯೆಂಬ ಬಿರುದ ನೆರೆ ತೊರೆದು
ಮರುಳಾದಳೀತನಿಗೆ ತನ್ನವರ ಮರೆದು || ||೧೪೦||

ಇವಳಿಗೋಸುಗ ವಾಲಿ ಸಂಹಾರವಾದ
ಇವಳ ದೆಸೆಯಿಂ ಜಟಾಯುವು ಮೋಕ್ಷಕಾದ || ||೧೪೧||

ದಾನವನ ಸಂಹರಿಸಿ ದಾಟಿದರೆ ಮುಂದೆ
ಏನೆಂದು ಹೇಳುವನೊ ಎನ್ನೊಡೆಯ ರಾಮ || ||೧೪೨||

ತರಹರಿಸಿ ಮನದೊಳಗೆ ತನ್ನೊಡೆಯ ರಾಮ
ಕುರುಹುಗಳ ಪೇಳ್ದೆಡೆಯ ಕಂಡನಾ ಹನುಮ || ||೧೪೩||

ಪದುಮರೇಖೆಗಳಿಲ್ಲ ಪಾದದಲಿ ಮುಂದೆ
ವಿಧವತ್ವ ತೋರುತಿದೆ ಹೆಡತಲೆಯ ಹಿಂದೆ || ||೧೪೪||

ಮತ್ಸ್ಯಲಾಂಛನ ನೋಡೆ ಬಲ ತೊಡೆಯೊಳಿಲ್ಲ |
ಅಚ್ಯುತನ ಸತಿಯಿವಳು ಸರ್ವಥಾ ಅಲ್ಲ || ||೧೪೫||

ಇವಳು ಜಾನಕಿಯಲ್ಲವೆಂದು ನಿಶ್ಚಯ್ಸಿ
ತವಕದಲಿ ಹೊರವಂಟ ಭೂಸುತೆಯನರಸಿ || ||೧೪೬||

ನವರತ್ನಭಿತ್ತಿಗಳ ಕನಕನಿರ್ಮಿತದ
ಭವನಗಳ ಒಳಪೊಕ್ಕು ನೋಡಿ ಸನ್ಮತದ || ||೧೪೭||

ಸುಳಿ ಸುಳಿದು ನೆರೆದಣಿದು ಪಟ್ಟಣವನೆಲ್ಲ
ನಳಿನಲೋಚನೆ ಸೀತೆಯನು ಕಂಡುದಿಲ್ಲ || ||೧೪೮||

ಮನೆಮನೆಯ ದಾಟಿ ತಾ ಮತ್ತಲ್ಲಿ ಬಂದ
ದನುಜನುಜನುಪ್ಪರಿಗೆಯಾ ಮೇಲೇರಿ ನಿಂದ || ||೧೪೯||

ಅರಸಿಕೊಳಲಿದರೊಳಗೆ ಶ್ರೀರಾಮನೆಂದೇ
ಪುರವನೇ ಕಿತ್ತಿರಿಸುವೆನು ಕಣ್ಣ ಮುಂದೆ || ||೧೫೦||

ಹೀಗೆಂದು ಮನದೊಳಗೆ ಹನುಮ ನಿಶ್ಚೈಸೆ
ಹಾಗೆ ತ್ರಿಕುಟಾಚಲಕೆ ಬಾಲವನು ಬಳಸಿ || || ೧೫೧||

ಆ ಸಮಯದಲಿ ಗಗನ ವಾಕ್ಯವನೆ ಕೇಳ್ದು
ಬೀಸುತಿಹ ಮಾರುತನ ವಾಸನೆಯ ತಾಳ್ದು ||೧೫೨||

ವನವದೊಂದಿರುವುದೆಂದಾರಯ್ಸಿ ನುಡಿಯ
ಅನುಸರಿಸಿ ನೋಡುವೆನು ಎನುತಲಾ ಕಡೆಯ ||೧೫೩||

ಹಾರಿದಬ್ಬರಕೆ ನೆಲವದಿರಿತುರವಣೆಗೆ
ಜಾರಿದುವು ಮಣಿಖಚಿತ ಭವನದುಪ್ಪರಿಗೆ ||೧೫೪||

ಮೆಲ್ಲನುದ್ಯಾನಕ್ಕೆ ಮಗುಳೆ ನಡೆತಂದ
ಫುಲ್ಲನೇತ್ರೆಯಶೋಕವನದೊಳಿರಲಂದಾ ||೧೫೫||

ಶಿಂಶುಪದ ಮರನಡಿಯ ಕುಳಿತು ರಾಘವನ
ಚಿಂತಿಸುವ ಜಾನಕಿಯ ಕಂಡನಾ ಹನುಮ ||೧೫೬||

**ರಾಗ ಎರುಕಲಕಾಂಭೋಜಿ ಅಷ್ಟತಾಳ**

ಜಯ ಜಯ ತ್ರೈಲೋಕ್ಯ ಮಾತೆ ವಿಖ್ಯಾತೆ |
ಜಯ ಜಯ ಸೀತೆ ಭೂಜಾತೆ || ಪಲ್ಲವಿ ||

ಜಯ ಜಯ ಶಕ್ತಿಸ್ವರೂಪೆ ಕೀರ್ತಿಕಲಾಪೆ |
ಜಯ ಜಯ ಪುಣ್ಯಶರಣ್ಯೆ || ಅನುಪಲ್ಲವಿ ||

ಇವಳೀಗ ರಾಮನ ಕಾಂತೆ ಸದ್ಗುಣವಂತೆ |
ಇವಳು ಸಜ್ಜನಪಾಲೆ ಶೀಲೆ ||
ಇವಳು ಬ್ರಹ್ಮಾದಿ ಸುರೌಘವಂದಿತೆ ಮಾತೆ |
ಇವಳು ರಾಮನ ಪ್ರೀತೆ ಸೀತೆ ||೧೫೭||

ಧರಣಿನಂದನೆಯೊಳು ದೋಷವನೆಣಿಸಿದೆ |
ದುರುಳ ರಾವಣನ ಕಂಡಲ್ಲಿ ||
ಕರವೆರಡಲಿ ಬಾಯ ಹೊಯ್ದು ತಪ್ಪಾಯ್ತೆಂದು |
ಶಿರವ ಬಾಗಿದ ರಾಮಾಯೆಂದು ||೧೫೮||

**ವಚನ ||** ಇಂತೆಂದು ಅಶೋಕವನದಲ್ಲಿ ಏಕೋಭಾವದಿಂದ ಚಿಂತಿಸುತ್ತಾ ರಾಮಧ್ಯಾನದಲ್ಲಿರುವಂಥ ಸೀತಾದೇವಿಯನ್ನು ಕಂಡು ಹನುಮಂತನು ಅನೇಕ ಸ್ತೋತ್ರವಂ ಮಾಡಿ ಆ ವೃಕ್ಷವೊಂದನ್ನೇರಿ ಸುಮ್ಮನೇ ಕುಳಿತಿರಲು, ಮರುದಿವಸ ಅಸ್ತಮಾನವಾಗಲು, ಅತ್ತಲಾ ರಾವಣನು ಸರ್ವಾಭರಣಾಲಂಕಾರಯುಕ್ತನಾಗಿ ಬೊಂಬಾಳ ದೀವಿಗೆಯೊಡನೆ ಆ ವನಾಂತರಕಂ ಬಂದು ಆಕೆಯ ಸಮೀಪದಲ್ಲಿರುವಂಥ ಸರಮೆತ್ರಿಜಟೆಯರ ಕೂಡೆ ಜಾನಕಿಯ ಅಂತರ್ಭಾವವೇನೆಂದು ಕೇಳಲು ಅವರು ಏನೆಂದರು ಎಂದರೆ –

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧರಣಿಸುತೆಗಾ ರಾಮಚಂದ್ರನ |
ಸ್ಮರಣೆಯೇ ಹೊರತಾಗಿ ಮನದಲಿ |
ಬರಿದೆ ಮತ್ತೊಂದಿಲ್ಲ ಯೋಚನೆ | ಇರುಳುಹಗಲು ||೧೫೯||

ಬೆಕ್ಕುಗಳಿಗೂ ಕೋಡು ಬಂದರು |
ಸಕ್ಕರೆಯು ಕಹಿಯಾಗಿ ಸಂದರು |
ಮಿಕ್ಕುಮಾತಿದು ನಿನಗೆ ಜಾನಕಿ | ಸಿಕ್ಕಳಯ್ಯ ||೧೬೦||

ಪರ್ವತವ ನೊಣ ನುಂಗಿತಾದರು |
ಇರುವೆ ಶರಧಿಯ ಕುಡಿದುಹೋದರು
ಸರ್ವಥಾ ಜಾನಕಿಯನೊಲಿಸಲು | ಸಾಧ್ಯವಿಲ್ಲ || ||೧೬೧||

ಕಾಗೆ ತಾ ಬಿಳುಪಾಗಿ ಹೋದರು |
ನಾಗರನ ಹಲ್ಲಮೃತವಾದರು |
ಆ ಗರುವೆ ಮಾಯಕದ ನುಡಿಗೊಳ | ಗಾಗಳಯ್ಯ || ||೧೬೨||

ಕಲ್ಲೊಳಂಬುಜವರಳಿತಾದರು |
ಮಲ್ಲಿಗೆಯು ದುರ್ಗಂಧವಾದರು |
ಎಳ್ಳನಿತು ಬೇಡಾಸೆ ನಿನಗಹ | ಳಲ್ಲ ಸೀತೆ || ||೧೬೩||

ಚಂದನವು ಉಷ್ಣಕರವಾದರು |
ಚಂದಿರನು ಬಿಸಿಲಾಗಿ ಕಾದರು |
ಎಂದಿಗಾದರು ನಿನಗವಳು ಮನ | ಹೊಂದಳಯ್ಯ || ||೧೬೪||

ಗಿಳಿಗೆ ಲವಣವೆ ಪಥ್ಯವಾದರು |
ಅಳಿಗೆ ತಾವರೆ ಸೇರದ್ಹೋದರು |
ನಳಿನಲೋಚನೆ ಸೀತೆ ನಿನಗಹ | ಒಲವ ಕಾಣೆ || ||೧೬೫||

ದಕ್ಷಿಣದಿ ರವಿಯುದಿಸಿ ನಿಂದರು |
ವೃಕ್ಷಗಳು ಸಂಚರಿಸಿ ಬಂದರು |
ಲಕ್ಷ್ಮಣಾಗ್ರಜ ಸತಿಯನೊಲಿಸಲು | ಶಕ್ಯವಲ್ಲ || ||೧೬೬||

ಗೋವು ವ್ಯಾಘ್ರನ ಮುರಿದು ತಿಂದರು |
ಹಾವು ಗರುಡನ ಹಾರಿ ಕೊಂದರು |
ದೇವಿ ಜಾನಕಿ ಸಿಕ್ಕಳೆಂದೇ | ಭಾವವಿರಲಿ || ||೧೬೭||

**ವಚನ ||** ಇಂತೆಂದು ಸರಮೆ ತ್ರಿಜಟೆಯರು ಪೇಳಲಾಗಿ ರಾವಣನು ತನ್ನ ಅನುಕೂಲಕ್ಕೆ ತಕ್ಕ ವ್ಯವಹರಿಸುವಂಥ ರಾಕ್ಷಸಸ್ತ್ರೀಯರಂ ಕರೆದು ಅನೇಕ ರತ್ನಾಭರಣಗಳ ಪೆಟ್ಟಿಗೆಯಂ ಮುಂದಿರಿಸಿ, ನಾನಾ ಯತ್ನದಿಂದ ಒಡಂಬಡಿಸಿರೆಂದು ಕಳುಹಿಸಲಾಗಿ ಅವರು ಜಾನಕಿಯೆಡೆಗಂ ಬಂದು ಏನೆಂದರು ಎಂದರೆ –

**ರಾಗ ಕಾಂಭೋಜಿ ಏಕತಾಳ**

ದಾನವೇಂದ್ರನ ಕೊಡಲಿ | ನ್ನೇನು ಸಂದೇಹ || ಪಲ್ಲವಿ ||

ಜಾನಕಿ ಸುಮ್ಮನೆ ಅನು | ಮಾನವೇತಕಮ್ಮ ಹೇಳು || ದಾನ ||
ರಾಮನೆಂಬ ಧ್ಯಾನ ಬಿಟ್ಟು | ಬೇಗ ನಾನಾಭರಣವಿಟ್ಟು |
ರಾವಣನೊಳು ಪ್ರೇಮವಿಟ್ಟು | ಕಣ್ಣಿಗೆ ಕಾಡಿಗೆಯನಿಟ್ಟು || ದಾನ || ||೧೭೮||

ಕನ್ನಡಿಯ ನೋಡಿಕೊಳ್ಳೆ | ಕಣ್ಣಿಗೆ ಕಪ್ಪಿಟ್ಟುಕೊಳ್ಳೆ |
ಪನ್ನೀರಿಕ್ಕೊ ಗಂಧದ ಕ | ಮೈಣ್ಣೆಯ ಲೇಪನ ಕೊಳ್ಳೆ || ||೧೭೯||

ಪಟ್ಟೆಯ ಸೀರೆಯನುಟ್ಟು | ಪಚ್ಚೆಯ ಕುಪ್ಪಸ ತೊಟ್ಟು |
ಕಟ್ಟಿ ತುಂಬಿಗುರುಳ ಮೇ | ಲಿಟ್ಟು ನಾನಾ ಪುಷ್ಪಂಗಳ || ||೧೮೦||

**ವಚನ ||** ಇಂತೀ ಸತಿಯರು ನಾನಾ ಯತ್ನದಿಂದೊಡಂಬಡಿಸಲಾಗಿ ಆ ಸೀತಾಂಗನೆಯಾದಡೆ ಕಣ್ಣಂ ತೆರೆಯದೆ ಸುಮ್ಮನೇ ಇರಲಾಗಿ, ಅವರು ನಾಚಿಕೊಂಡು ರಾವಣಗೆ ಆ ವೃತ್ತಾಂತಮಂ ಪೇಳಲಾಗಿ ಆತನು ತಾನೇ ಮಾತನಾಡಿಸಿ ನೋಳ್ಪೆನೆಂಬ ಆಭಿಲಾಷೆಯಿಂದ ಅತಿದೈನ್ಯದಿಂದ ಸನಿಹಕ್ಕೆ ಬಂದು ಏನೆಂದನು ಎಂದರೆ –

**ರಾಗ ಘಂಟಾರವ ಆದಿತಾಳ**

ಮಾರನಸ್ತ್ರ ತಾಗಿ ಬಿಗು | ವೇರಿತಲ್ಲೆ ಬಾಲೆ |
ನಾರಿ ಎನ್ನ ಮೇಲೆ ದಯವ | ದೋರೆ ನೀ ದಮ್ಮಯ್ಯ || ಪಲ್ಲವಿ ||

ಇಪ್ಪತ್ತೂ ತೋಳಲ್ಲಿ ತೆಗೆ | ದಪ್ಪಿಕೊಂಬುದಕ್ಕೆ |
ಅಲ್ಪ ಮನಸಲ್ಲ ಕೇಳೆ | ಕರ್ಪೂರಸುಗಂಧಿ || ||೧೮೧||

ಚಪ್ಪರ ಮಂಚದ ಮೇಲೆ | ಚಂದದ ಉಯ್ಯಾಲೆ |
ದರ್ಪಕನಾಟದಿ ನಿನ್ನ | ದಣಿಸುವೆ ನಾ ಮುನ್ನ || ||೧೮೨||

ದೇವತೆಗಳೊಳ್ಗಂಧರ್ವ | ದೇವ ಸ್ತ್ರೀಯರೆಲ್ಲ |
ದೇವೇಂದ್ರ ಮುಂತಾಗಿ ಎನ್ನ | ಸೇವೆ ಮಾಳ್ಪರಲ್ಲ || ||೧೮೩||

ಸೃಷ್ಟಿ ಈರೇಳರೊಳೆಲ್ಲ | ಶ್ರೇಷ್ಠನಹೆ ಜಾಣೆ |
ಪಟ್ಟದ ರಾಣಿತ್ವ ನಿನಗೆ | ಕೊಟ್ಟು ಬಾಳ್ವೆ ಕಾಣೆ || ||೧೮೪||

**ರಾಗ ಸಾವೇರಿ ಆದಿತಾಳ**

ಮಾತಾಡಬಾರದೇನೆ | ಸುಜಾಣೆ |
ಮಾತನಾಡಬಾರದೇನೆ || ಪಲ್ಲವಿ ||

ಮಾತನಾಡಬಾರದೇನೆ | ಸೀತಾದೇವಿ ಎನ್ನೊಡನೆ |
ಪ್ರೀತಿಯಿಂದ ಸೋತು ಬಂದ | ನೀತನೆಂಬ ಕರುಣದಿಂದ || ಅನುಪಲ್ಲವಿ ||

ಕಾಮಿನಿ ನಿನ್ನನ್ನು ಕಂಡು | ಕಾಮನು ದಂಡೆತ್ತಿ ಬಂದು |
ಸಾವಧಾನದಿ ಬಿಲ್ಗೊಂಡು |
ಪ್ರೇಮದಿತೆಬ್ಬು ಸದ್ದು ಮಾಡಿದ || ಎನ್ನೆದೆಗಿಡುವ
ಸಾಮರ್ಥ್ಯದ ಗುರಿಯ ನೋಡಿದ || ತೆಬ್ಬ ಝೇಂಕರಿಸಿ
ಆ ಮಹಾಪೂಶರವ ಪೂಡಿದ || ಬಿಡಲೆನಗೆ ತಾಗಿ
ನಾ ಮೂರ್ಛಿತನಾಗಿ ಬಿದ್ದೆನಲ್ಲೆ | ವಿರಹವೆಗ್ಗಳಿಸಿ
ಕಾಮುಕನಾಗಿ ನಾ ಬಂದೆನಿಲ್ಲೆ | ಇದಕೌಷಧಿಯ
ಕೋಮಲಶರೀರೆ ನೀನೆಬಲ್ಲೆ | ನಿನ್ನನು ಬಿಡಲೊಲ್ಲೆ ||
ಭೂಮಿಯಿಳಿಹ ಬೇ | ಕಾಗುವ ವಸ್ತುವ |
ಪ್ರೇಮದಿ ತರಿಸಿ ಕೊಡಿಸುವೆ ||
ಹೇಮಾಂಬರಗಳನುಡಿಸುವೆ |
ಸೋಮಾಭರಣವ ತೊಡಿಸುವೆ |
ಈ ಮನವಿದ್ದಂ | ತಾ ಮನಸಾದರೆ |
ಪ್ರೇಮದೊಳನುದಿನ | ಕ್ಷೇಮದೊಳಿರುವೆ || ||೧೭೫||

ಕಣ್ಗೆ ನಿದ್ರೆ ಬಾರದು ಬಾ | ಯ್ಗನ್ನವು ಸೇರದು ಕಾಂತೆ
ನಿನ್ನಯ ಹಂಬಲಿನಿಂದ ||
ಎನ್ನಯ ಜೀವವುಳಿಯದೊಮ್ಮೆಗೆ || ಮಾತನಾಡಿಕೊಂಬ
ಕನ್ಯೆ ನೀ ಬೇಗೆದ್ದು ಬಾ ಸುಮ್ಮಗೆ || ಸಕಲೈಶ್ವರ್ಯ
ವೆನ್ನಲ್ಲಿ ಕೈಸೇರಿತು ಘಮ್ಮಗೆ || ತನಗೆ ಕುಂಭ
ಕರ್ಣನೆಂಭ ಶೌರ್ಯವಂತನನುಜ || ಇಂದ್ರನ ಜಯಿಸಿ
ಬನ್ನಬಡಿಸಿದಂಥವನೆನ್ನ ತನುಜ || ರಾಮನೆಂಬಾತ
ಗಣ್ಯನಲ್ಲ ನೋಡಲೊಬ್ಬ ಮನುಜ || ಸುರನರಫಣಿ ದನುಜ
ಕನ್ಯೆಯರೆಲ್ಲರು ಕಾದಿಹರನುದಿನ |
ನಿನ್ನಯ ಸೇವೆಯೊಳಿರುವರು ||
ಮನ್ನಿಸಿ ಕರೆದರೆ ಬರುವರು ||
ಕನ್ನಡಿ ಕಲಶವ ತರುವರು ||
ಹೆಣ್ಣಿಗು ಹೊನ್ನಿಗು | ಮಣ್ಣಿಗು ಬಯಸುವ |
ರೆನ್ನಲ್ಲಿಹ ಸಂ | ಪನ್ನರ ನೋಡೆ || ಮಾತ || ||೧೭೬||

ಹಗಲಿರುಳು ಕೈಯೊಳ್ ನಿನ್ನ | ಬಿಗಿಯಪ್ಪಿಕೊಂಬೆ ನಾ ಮುನ್ನ |
ಬಗೆ ಬಗೆ ಕಾಮನ ಕಲೆಯ ||
ಸೊಗಸಾಗಿ ತೋರುತ್ತ ಮುದ್ದಾಡುವೆ || ಕರ್ಪೂರ ವೀಳ್ಯ
ಜಗಿದು ಸವಿತಾಂಬೂಲವ ನೀಡುವೆ | ಹೆಚ್ಚಿನ ಮೋಹದ
ಬಗೆಯಿಂದ ಮುತ್ತ ಬೇಡುವೆ || ಕುಚಕೆ ನಾ ಚ
ಳ್ಳುಗುರನಿಟ್ಟು ಒರೆಸಿಲಲ್ಲೆಗರೆವೆ | ಮಲ್ಲಿಗೆಯರ
ಳುಗಳ ತಲೆಗೆ ಮುಡಿಸಿ ಮೋಹವೆರೆವೆ | ಎಂದೆಂದೂ ಬಿಡದೆ
ಮಿಗಿಲಾದೈಶ್ವರ್ಯದಿ ನೀ ಸತತ ಮೆರೆವೆ | ಅರಿತವಳಿಂಗೇನೊರೆವೆ ||
ದುಗುಡದೊಳನುದಿನ ರಾಮನೆಂಬ ಹುಲು
ಹಗುರ ಮನುಜನ ನೆನೆವುದು ||
ಅಗಣಿತ ಭಾಗ್ಯವ ತೊರೆವುದು ||
ಮಿಗಿಲೇ ಯೋಚಿಸು ನಿನಗಿದು ||
ನಗೆಮೊಗನೆಗಹುತ | ಲೊಗುಮಿಗೆ ಹರುಷದಿ
ನಗರಕೆ ಬಾರೆಲೆ | ಸುಗುಣಾನ್ವಿತೆಯೇ || ||೧೭೭||

**ವಾರ್ಧಕ**

ಕುಶನೆ ಕೇಳ್ ರಾವಣನ ಮಾತು ಜಾನಕಿಗೆ ಕ
ರ್ಕಶವಾಗಿ ಕಿವಿಗೆ ನಾಟಿದವು ಕಣ್ಣಲಿ ಕಿಡಿಯ
ಮಸಗಿ ಕೈಯೊಳು ತೃಣವ ಮುರಿದಿಕ್ಕಿ ಬಣಗುರಕ್ಕಸಗವನಿಸುತೆ ನುಡಿದಳು |
ಪಿಸುಣರೊಳು ಬಣಗು ರಣಹೇಡಿ ಚಂಡಾಲ ದು
ರ್ವ್ಯಸನಿ ದುರಹಂಕಾರಿ ದುರ್ಜನದುರಾಚಾರಿ
ಅಸುರರೊಳಗಧಮನೇ ನೀಚ ನಾಯಿ ಗುಲಾಮ ಅತ್ತತ್ತ ನಡೆಯೆಂದಳು || ||೧೭೮||

**ವಚನ ||** ಇಂತು ಈ ರೀತಿಯಿಂದ ದಶಾಸ್ಯನಂ ಬಯ್ದು ಸರಮೆಯೊಡನೆ ಏನೆಂದಳು ಎಂದರೆ –

**ರಾಗ ಸಾವೇರಿ ಏಕತಾಳ**

ಸರಮೇ ನೀ ಸಾಕ್ಷಿಯಾಗಿರು | ಈ ಮಾತಿಗೆಲ್ಲ |
ಸರಮೆ ನೀ ಸಾಕ್ಷಿಯಾಗಿರು || ಪಲ್ಲವಿ ||

ದುರುಳ ತಾನುತ್ತಮನಂತೆ | ಸುರರಿಗೆಲ್ಲ ಶ್ರೇಷ್ಠನಂತೆ |
ಧುರದೊಳಧಿಕ ಶೌರ್ಯನಂತೆ | ನಿರತ ಸರ್ವೈಶ್ವರ್ಯನಂತೆ || ||೧೭೯||

ಬಲ್ಲಿದನಾದರೆ ಶಿವನ | ಬಿಲ್ಲನೇಕೆತ್ತದೆ ಪೋದ |
ಕಲ್ಲೆದೆಯಾದರೆ ತೊಟ್ಟಿ | ಲಲ್ಲಿ ಕಟ್ಟಿಸಿಕೊಂಬನೆ || ||೧೮೦||

ಅಂದೇ ರಾಮಚಂದ್ರನ ಕಣ್ಣ | ಮುಂದೆ ತಾರದೇತಕೆನ್ನ |
ಹಂದೆಯಂತೆ ಕದ್ದುಕೊಂಡು | ಬಂದುದೇತಕಮ್ಮ ಹೇಳು || ||೧೮೧||

ಘೋರದೈತ್ಯ ಪಾಪಿ ಪರರ | ನಾರಿಯೊಳಿಂತಾದಮೇಲೆ |
ನೂರು ಜನ್ಮದಲ್ಲಿ ನರಕ | ಸೇರದಿರನು ಸುಳ್ಳಲ್ಲಮ್ಮ || ||೧೮೨||

ಕಾಣಬಹುದಿನ್ನು ಖಳನ | ಗೋಣ ಮುರಿದಿಕ್ಕಿ ಯಮನ |
ಠಾಣೆಯಕಟ್ಟಿದ ಮೇಲೆ | ರಾಣಿಯ ಮಾಳ್ಪ ಶ್ರೀರಾಮ || ||೧೮೩||

ಕೆಟ್ಟ ಮೂಳನಿವನ ತಲೆಯ | ಕುಟ್ಟಿ ಕಾಲಿಂದೊದ್ದು ಕಡೆಯೊ |
ಳಿಟ್ಟ ಮೇಲೆಯೆನ್ನ ರಾಮ | ಪಟ್ಟದ ರಾಣಿಯ ಮಾಳ್ಪ || ||೧೮೪||

**ವಾರ್ಧಕ**

ಕರುಳು ಕತ್ತರಿಸಿ ಜಾನಕಿಯ ವಚನಾಸ್ತ್ರದಲಿ
ದುರುಳ ರಾವಣ ಕೋಪದಿಂದ ಖಡ್ಗವ ಕೊಂಡು
ತರಳೆಯಂ ಕಡಿದು ಬಿಸುಡುವೆನೆಂದು ಬರುತಿರಲು ವರಪತಿವ್ರತೆಯಲ್ಲಿಗೆ |
ಅರಿತಳಿಂಗಿತವ ಮಂಡೋದರಿ ಜವದಿ ಬಂದು
ಕರವ ಪಿಡಿದೊಡಬಡಿಸಿ ಪತಿಯ ತನ್ನರಮನೆಗೆ
ಕರೆದೊಯ್ದಳಿತ್ತ ಜಾನಕಿ ಕ್ಲೇಶದಿಂದಳುತ ಸರಮೆಯೊಡನಿಂತೆಂದಳು || ||೧೮೫||

**ರಾಗ ನೀಲಾಂಬರಿ ರೂಪಕ ತಾಳ**

ಕಂಡೆಯಾ ಸರಮೆ ದಾನವ ಬಂದು ದಿನದಿನ |
ದಂಡಿಸುತಿರುವಂಥ ಪರಿಯ ||
ಭಂಡ ರಕ್ಕಸನ ಪಟ್ಟಣದಿ ಬಾಳ್ವುದರಿಂದ |
ಕೆಂಡಕೆ ಬೀಳ್ವುದೇ ಲೇಸು || ||೧೮೬||

ಇಂದು ಬರುವ ನಾಳೆ ಬರುವನು ಶ್ರೀರಾಮ |
ನೆಂದಾಸೆ ಮಾಡಿದೆ ನಾನು ||
ಇಂದಿಗೆ ದಿನವಿಷ್ಟು ಸಂದರೂ ರಘುಕುಲ |
ಚಂದ್ರನ ದರ್ಶನವಿಲ್ಲ || ||೧೮೭||

ಪೂರ್ವ ಜನ್ಮದೊಳೇಸು ಪಾಪ ಮಾಡಿದ್ದೆನೊ |
ದುರ್ವ್ಯಥೆಯೊಳು ಸಿಕ್ಕಿ ದಣಿದೆ ||
ಸರ್ವಥಾ ಇನ್ನಾಸೆ ತೀರಿತೆನಗೆ ಮುಂದೆ |
ಉರ್ವಿಯೊಳ್ಬಾಳಿರ್ಪೆನೆಂಬ || ||೧೮೮||

ಎಲ್ಲಿಯಾ ರಾಮ ಇನ್ನೆಲ್ಲಿಯಾ ಲಕ್ಷ್ಮಣ |
ಎಲ್ಲಿರ್ಪುದೀ ಲಂಕಾನಗರ ||
ಇಲ್ಲಿಗೆ ಬಂದೆನ್ನ ಸೋವನೆಂಬುದು ಸ್ವಪ್ನ |
ದಲ್ಲಿಯೂ ನಿಜವಲ್ಲ ಮಾತು || ||೧೮೯||

ಎಂತಿರ್ಪ್ಪರವರು ಹೀಗೆಂಬ ವಾರ್ತೆಗಳನ್ನು |
ಕಾಂತೆ ಪೇಳುವರಿಲ್ಲದಾಯ್ತು |
ಇಂಥ ನಿರ್ಬಂಧ ಯಾತನೆ ಯಾವ ಸತಿಗೂ ಜ |
ನ್ಮಾಂತರಕೂ ಬೇಡ ಕೇಳಮ್ಮ || ||೧೯೦||

ನಿನ್ನ ಮಾತಿನ ಮೇಲೆ ನೀರೆ ನಾಕಾದಿರ್ದೆ |
ಎನ್ನವರಡಿಯ ಮೈಸಿರಿಯ ||
ಅನ್ಯಾಯವಿದು ಮುಂದೆ ಇನ್ನೂ ಬಾಳಿರುವುದು |
ಮನ್ನಿಸಿ ಕೊಡು ಘೋರ ವಿಷವ || ||೧೯೧||

ಆರು ತಿಂಗಳು ದಿನದಾರಭ್ಯ ನೀವೆನ್ನ |
ಸೇರಿ ದಣಿದಿರೆನಗಾಗಿ ||
ಯಾರು ಹೇಳಿದರಿನ್ನು ಕೇಳೆ ಮಾತುಗಳನ್ನು |
ಸೇರಿತು ಮರಣ ಬಂದಡಸಿ || ||೧೯೨||

ಆಸೆ ನಿರಾಸೆಯಾಯಿತು ಮುಂದೆ ಬಾಳ್ವಭಿ |
ಲಾಷೆಯಿನ್ನಿಲ್ಲ ನೋಡಿದರೆ ||
ಕೇಶವಾದರು ಕೊರಳಿಗೆ ಸುತ್ತಿ ಪ್ರಾಣವ |
ಘಾಸಿ ಮಾಡುವೆನಮ್ಮ ತ್ರಿಜಟೆ || ||೧೯೩||

ಪ್ರಾಣದಾಸೆಯ ಬಿಟ್ಟಳೆಂಬುದನರಿತ ಆ |
ಕ್ಷೋಣಿನಂದನೆ ಕೈಯ ಪಿಡಿದು ||
ಏಣಾಕ್ಷಿ ತ್ರಿಜಟೆ ಪೇಳಿದಳಂತರಂಗದಿ |
ಕಾಣಿಸಿದಂದಿನ ಕನಸ || ||೧೯೪||

**ರಾಗ ತೋಡಿ (ವರಾಳಿ) ಏಕತಾಳ**

ಕಂಡೆನೀ ರೀತಿ ನಿದ್ರೆ | ಯೊಳ್ ಕೇಳ್ ಕಮಲಾಕ್ಷೀ || ಪಲ್ಲವಿ ||

ಪುಂಡರೀಕನೇತ್ರನೂ ಮಾ | ರ್ತಂಡಜಾತ ಸುಗ್ರೀವನೂ |
ಹಿಂಡುಕಪಿಗಳನ್ನು ಕೂಡಿ | ಕೊಂಡು ಬಂದರೆಂಬುದನ್ನು || ಕಂಡೆ || ||೧೯೫||

ಹತ್ತು ತಲೆಯಾತ ತಾನು | ರಕ್ತವಸ್ತ್ರಗಳನುಟ್ಟು |
ಕತ್ತೆಯನೇರಿ ದಕ್ಷಿಣ | ಯಾತ್ರೆಗಾಗಿ ಪೋಪುದನ್ನು || ಕಂಡೆ || ||೧೯೬||

ಅಂಗನೆ ಮಂಡೋದರಿ ಕ | ರ್ಣಂಗಳೋಲೆ ಮೂಗುತಿಯ |
ಮಂಗಲಸೂತ್ರವ ಹರಿದು | ಕಂಗಳೊಳ್ನೀರಿಳಿಯುತಿಹುದ || ಕಂಡೆ || ||೧೯೭||

ಅಷ್ಟಭಾಗ್ಯವೆಲ್ಲ ಹೋಗಿ | ದುಷ್ಟರು ಸಂಹಾರವಾಗಿ |
ಥಟ್ಟನೆ ವಿಭೀಷಣ ಈ | ಪಟ್ಟಣವಾಳ್ವ ಸ್ವಪ್ನವ || ಕಂಡೆ || ||೧೯೮||

ಶುಂಡಾಲಗಮನೆ ನಿಮ್ಮ ಗಂಡನಾದ ರಾಮಚಂದ್ರ |
ಕೊಂಡುಪೋಗಿ ನಿಮ್ಮನು ಭೂ | ಮಂಡಲವಾಳ್ವನೆಂಬಂಥ || ಕಂಡೆ || ||೧೯೯||

**ವಾರ್ಧಕ**

ಮನಸಿನಲಿ ಕಡುನೊಂದು ಚಿಂತಿಸುವ ಜಾನಕಿಗೆ
ಕನಸಿನೊಳವಂ ಪೇಳ್ದೊಡಂಬಡಿಸೆ ತ್ರಿಜಟೆ, ಮರ
ಗೊನೆಯೊಳಿದ್ದೆಲ್ಲವಂ ಕೇಳ್ದು ಹನುಮಂತ ಶ್ರೀರಾಮರಾಮಾ ಎನ್ನುತ |
ಇನಕುಲದ ಸೌಭಾಗ್ಯಚಿಂತಾಮಣಿಗೆ ತಕ್ಕ
ವನಿತೆಯಹುದೆಂದು ಕೊಂಡಾಡಿ ಜನಕಾತ್ಮಜೆಯ
ಮನದೊಳಗೆ ತಾನೆ ತನ್ನೊಳು ಮಾತನಾಡಿದನು ಜಾನಕಿಯು ಕೇಳುವಂತೆ || ||೨೦೦||

**ರಾಗ ಕೇದಾರಗೌಳ ಅಷ್ಟತಾಳ**

ನಳಿನಲೋಚನೆ ಕೇಳು ರಾಮಚಂದ್ರನು ಎನ್ನ |
ಕಳುಹಲಿಲ್ಲಿಗೆ ಬಂದೆನು |
ಗೆಲವಿನಿಂದಿಹ ತಮ್ಮ ಲಕ್ಷ್ಮಣ ಸಹ ನಿಮ್ಮ |
ಬಳಿ ಪೋಗಿ ಬಾರೆನುತ || ||೨೦೧||

ಕುವಲಯಾಂಬಕ ರಾಮ ಸುಗ್ರೀವ ಸಹಿತ ಪ್ರ |
ಸ್ರವಣ ಪರ್ವತದೊಳಿಹ |

ಎವೆಮಾತ್ರದಲಿ ನಿಮ್ಮ ಸ್ಮರಣೆಯಲ್ಲದೆ ಬೇರೆ |
ವಿವರ ಕಾಣಿಸದೆನಗೆ || ||೧೦೧||

**ಕಂದ**

ಮರಗೊಂಬಿನೊಳಿಂತೆಂದಾ
ಸಿರಿವಾಕ್ಯವಕೇಳ್ದು ಸೀತೆ ಮೊಗ ನೆಗಹುತ್ತಂ |
ದುರುಳರ ಮಾಯಕವೆಂದೇ
ತಿರುಹಲು, ಹನುಮಂತನಿಳಿದು ನಮಿಸುತ್ತೆಂದಂ || ||೧೦೩||

**ರಾಗ ಸೌರಾಷ್ಟ್ರ ಅಷ್ಟತಾಳ**

ಮಂಗಲಮಹಿಮ ರಾಮನ ಪಾದದೆಡೆಯಿಂದ |
ಬಂದೆನಮ್ಮ | ಕೋಮ |
ಲಾಂಗ ಲಕ್ಷ್ಮಣದೇವ ಕಳುಹಿಸಿದ ಬಗೆಯಿಂದ |
ಬಂದೆನಮ್ಮ || ||೧೦೪||

ವಾತಸಂಭವ ಎನ್ನ ಮಾತೆ ಅಂಜನೆ ದೇವಿ |
ಬಂದೆನಮ್ಮ | ಭಾನು |
ಜಾತ ಎನ್ನೊಡೆಯ ಸಂಪ್ರೀತಿಯಿಂ ಕಳುಹಲು |
ಬಂದೆನಮ್ಮ || ||೧೦೫||

ಬಲುಬಲು ದೇಶವ ಕಳೆದೆಲ್ಲ ಹುಡುಕುತ್ತ |
ಬಂದೆನಮ್ಮ | ಇನ್ನು |
ಹಲವು ಮಾತೇಕೆ ಸಾಗರವ ಲಂಘಿಸುತಿತ್ತ |
ಬಂದೆನಮ್ಮ || ||೧೦೬||

**ಕಂದ**

ಎಂದಾ ಹನುಮನ ಮಾತಿಗೆ
ಚಂದ್ರಾನನೆ ಕಪಟವೆಂದು ಸುಮ್ಮನೆಯಿರಲಾ |
ಹಿಂದಾಗಿದ್ದುದನರುಹಿದ
ಡಿಂದರಿವಳೊ ಎಂಬ ಭ್ರಮೆಗೆ ಮತ್ತಿಂತೆಂದಂ || ||೧೦೭||

**ರಾಗ ಕಾಂಭೋಜಿ (ಶಂಕರಾಭರಣ) ಏಕತಾಳ**

ಚಿತ್ತಯಿಸಿ ದೇವಿ ನಿಮ್ಮ | ವರ್ತಮಾನವೆಲ್ಲ ಪೇಳ್ವೆ |
ಸತ್ಯವೊ ಅಸತ್ಯವೊ | ನೀವೇ ಬಲ್ಲಿರಿ || ಪಲ್ಲವಿ ||

ಧಾತ್ರಿಯೊಳಯೋಧ್ಯೆಯಲ್ಲಿ | ಪೃಥ್ವಿಪಾಲ ದಶರಥಂಗೆ |
ಸ್ವಸ್ತ್ರೀಯರು ಮೂವರು ಪ | ತ್ನಿಯರಹುದೆ ||
ಸತ್ವದಲ್ಲಿ ನಿಮ್ಮನು ಬಿ | ಲ್ಲೆತ್ತಿ ಜ್ಯೇಷ್ಠನಾದ ರಾಮ |
ಅರ್ತಿಲಿ ತಾ ಮಿಥಿಲೆಯಿಂದ | ತಂದುದಹುದೆ || ||೧೦೮||

ಜನಕನ ಮಾತಿಂಗೋಸುಗ | ದಿನಕರವಂಶಾಬ್ಧಿಚಂದ್ರ |
ಘನತರವಾಗಿರುವ ಘೋರ | ವನಕೆ ಬರುವಾಗ ||
ಮನಸು ಸೊರಗಿ ನೀವು ಲ | ಕ್ಷ್ಮಣನು ಸಹಿತ ಮೂವರು |
ನೆಲಸಿದಂಥ ಪಂಚವಟೀ | ವನಸಮೀಪದಿ || ||೧೦೯||

ತರಿದು ಮೂಗ ರಕ್ಕಸಿಯ | ಖರದೂಷಣಾದ್ಯರ ಶಿರವ |
ಮರೆಸಿ ಬಂದ ಮೃಗವ ಕಂಡ | ಚ್ಚರಿಯದಿ ನೀವು ||
ತರಬೇಕೆಂದು ಪೇಳೆ ರಾಮ | ತೆರಳಿದಾಗಲಾ ರಾವಣ |
ಭರದಿಂದೆತ್ತಿ ನಿಮ್ಮನು ಅಂ | ಬರದ ಮಾರ್ಗದಿ || ||೧೧೦||

ಕರಗಿ ಸೊರಗಿ ಭಯದಿ ನೀವು | ಮರುಗುವಂಥ ಧ್ವನಿಯ ಕೇಳಿ |
ತ್ವರಿತದಿ ಬಂದಾ ಜಟಾಯು | ಭರಿತ ಶೌರ್ಯದಿ ||
ದುರಳಗಡ್ಡಗಟ್ಟಲಾಯ್ತು | ಸ್ಥಿರವನಿತ್ತ ಮೇಲಾಗಿಹ |
ಪರಿಯನೊರೆವೆ ಲಾಲಿಸಮ್ಮ | ಕರುಣವನಿಟ್ಟು || ||೧೧೧||

**ರಾಗ ಕೇದಾರಗೌಳ ಅಷ್ಟತಾಳ**

ಕುಂಜರಗಮನೆ ಕೇಳಾಮೇಲೆ ಶ್ರೀರಾಮು |
ಕಂಜದಳಾಯತಾಕ್ಷ ||
ಮಂಜುಳಕಾಯ ಲಕ್ಷ್ಮಣ ಸಹ ಖಗಕುಲ |
ಸಂಜೀವನನು ಕಂಡರು || ||೧೧೨||

ಅಂಜದೆ ನಿಮ್ಮ ರಾವಣ ಕೊಂಡು ಬಂದುದ |
ಮಂಜುಳಾಂಗರು ಕೇಳುತ್ತ ||
ನಂಜಾಯಿತಮೃತವೆಂದೆನುತಲೆ ಮರುದಿನ |
ಮುಂಜಾನೆ ಹೊರವಂಟರು || ||೧೧೩||

ಚಂದ್ರಗೆ ರಾಹು ಸೋಂಕಿದ ಹಾಗೆ ಶ್ರೀರಾಮ |
ಚಂದ್ರ ಲಕ್ಷ್ಮಣರಿರ್ವರು ||
ಒಂದೊಂದು ಕಡೆ ನಿಮ್ಮನರಸುತ್ತ ಬಂದು ಕ |
ಬಂಧನ ಪರಿಹರಿಸಿ || ||೨೧೪||

ಮುಂದೆಯ್ದಿ ಶಬರಿಗೆ ವರವಿತ್ತು ಸುಗ್ರೀವ |
ವೃಂದವ ಸಂತಯಿಸಿ ||
ಇಂದ್ರಜ ವಾಲಿಯ ಭಯದಿಂದ ಸುಗ್ರೀವ |
ನೊಂದುಕೊಂಡಿರ್ಪಾಗಲು || ||೨೧೫||

ಶರವೇದಮೂರ್ತಿಗಳವರು ಪಂಪಾಸರೋ |
ವರದೆಡೆಗೆಯ್ತುರಲು ||
ತರಣಿನಂದನ ಕಂಡು ಕರೆಸಲವರು ಋಷ್ಯ |
ಗಿರಿಯ ಮೇಲಕೆ ಬಂದರು || ||೨೧೬||

ತಾಳೆಯ ಮರನೇಳ ತರಿದು ದುಂದುಭಿಯಟ್ಟೆ |
ಕಾಲಿಂದೊದ್ದೆಸೆದ ಮೇಲೆ ||
ವಾಲಿಯ ಕೊಂದು ಸುಗ್ರೀವಗೆ ಪಟ್ಟವ |
ಪಾಲಿಸಿ ನಮ್ಮೊಡನೆ || ||೨೧೭||

ಕಾಲವೇಳೆಯಲಿ ನಿಮ್ಮರಸಬೇಕೆನುತ ಭೂ |
ಪಾಲನಪ್ಪಣೆಯ ಕೊಟ್ಟ ||
ಏಳು ಮತ್ತೆಪ್ಪತ್ತು ಕೋಟಿ ನಾಯಕರು ಈ |
ರೇಳು ಲೋಕವ ತೊಳಲಿ || ||೨೧೮||

ಲೋಲಲೋಚನೆ ಸ್ವಯಂಪ್ರಭೆಯ ಪಟ್ಟಣದಿಂದ |
ಮೇಲೆ ಬಂದಲ್ಲಿ ಮತ್ತೆ ||
ಕೇಳಿ ಸಂಪಾತಿ ತೋರಿಸಿದ ಕಾರಣದಿಂದ |
ಬಾಲೆ ಇಲ್ಲಿಗೆ ಬಂದೆನು || ||೨೧೯||

ಮೇಲಾದ ಕಪಿಗಳು ಶರಧಿಯ ತಡಿಯಲ್ಲಿ |
ಬಾಳ ಚಿಂತಿಸುತಿಪ್ಪರು ||
ಜಾಲಮಾತಲ್ಲ ಜಾನಕಿ ಕೇಳೆಂದೆನುತಲೆ |
ಕಾಲಮೇಲಕೆ ಬಿದ್ದನು || ||೨೨೦||

**ವಾರ್ಧಕ**

ಕೇಳುತಾಕ್ಷಣ ಕಣ್ಣೊಳಶ್ರುಗಳು ಜಾರಿದವು
ಹೂಳಿದಂತಸ್ತಾಪ ಶೋಕಜಲಮಯ ಶರಧಿ
ಗಾಳಿಗೊಡ್ಡಿದ ದೀಪದಿಂದ ತಲ್ಲಣಿಸಿ ರೋಮಾಳಿ ನೆಟ್ಟಗೆ ನಿಂತುದು |
ಬೀಳುಗೊಂಡುದು ಮನದ ಸಂಶಯವದರ್ಧ, ಬಲ
ಗಾಲ ತೊಡೆಯಲಿ ಮಚ್ಚೆವುಂಟಂತೆನಲ್ ನಾಲ್ಕು
ಪಾಲೊಳೊಂದುಳಿಯೆ ಚಂಚಲ ಕುರುಹುಗಳ ಬಳಿಕ ನೀಲಕುಂತಳೆಗೆಂದನು || ||೧೧೧||

**ರಾಗ ಘೂರ್ಜರ ಅಷ್ಟತಾಳ**

ಚಿತ್ರಕೂಟದಲ್ಲಿ ನೀವು ಜಲಕ್ರೀಡೆಯಾಡುವಾಗ |
ಎತ್ತಿ ಮುಂಗಯ್ಯಲಿ ನಿಮ್ಮ | ಬೀಸಾಡಲು |
ಅತ್ತದ್ದು ಸರಿಯೇನಮ್ಮ | ||೧೧೨||

ಮತ್ತೊಂದು ಗುರುತ ಕೇಳತ್ರಿಮುನೀಂದ್ರನ |
ಪತ್ನಿಯಾದನಸೂಯಾದೇವಿ | ಭೂಷಣವ ತಂ |
ದಿತ್ತುದು ಸರಿಯೇನಮ್ಮ || ||೧೧೩||

ಇನ್ನೊಂದು ಕುರುಹ ಕೇಳು ದಂಡಕವೆನಿಸುವಾ |
ರಣ್ಯದೊಳಗಸ್ತ್ಯಮುನಿ | ಚಾಪವನಿತ್ತು |
ಮನ್ನಿಸಿದ್ದಹುದೇನಮ್ಮ || ||೧೧೪||

ಅಂಗನೆ ಕೇಳೀ ಮಾತೆಲ್ಲ ಸುಳ್ಳಾದರೆ |
ಮಂಗಳಮಹಿಮ ರಾಮ | ಕಿರಿಬೆರಳಿಗಿ |
ಟ್ಟುಂಗುರವಹುದೇನಮ್ಮ || ||೧೧೫||

**ಶಾರ್ದೂಲವಿಕ್ರೀಡಿತ**

ಶ್ರೀರಾಮಂ ಕರಕಂಜದಂಗುಲಿಯೊಳಾಗಿಟ್ಟಿರ್ದ ಮುದ್ರಾಂಕಮಂ
ನಾರೀ ಜಾನಕಿ ಕಂಡು ವಿಸ್ಮಿತದೊಳಂ ಕಂಗಳ್ಗದನ್ನೊತ್ತುತ |
ಹೇರಾಳಾ ಸ್ರುತಶೋಕಬಿಂದುಜಲದಿಂ ಸರ್ವಾಂಗಮುಂ ತೋಯಲು
ಕಾರುಣ್ಯಾಂಬುಧಿ ರಾಮ ರಾಮ ಯೆನುತಂ ಸದ್ಭಾವದಿಂತೆಂದಳು || ||೧೧೬||

**ರಾಗ ನೀಲಾಂಬರಿ (ಧ್ರುವ) ತ್ರಿವುಡೆತಾಳ**

ಹರಿಣಾಂಕನಿಭಾನನ ಪೂರ್ಣ |
ಹರಿಶೋಭಿತ ಹರಿರಿಪುಗಮನ ||
ಹರಿವಂಶಜ ಕೀರ್ತಿವಿಶಾಲ |
ಹರಿ ಮಂಜುಳಕಾಯ ಮತ್ಪ್ರಿಯ || ||೧೧೭||

ಪರಮೇಶ್ವರ ಪಂಕಜಲೋಚನ |
ಪರಮಾನಂದ ಪರಮ ಪಾವನ |
ಸುರಸೇವ್ಯ ಭೂಸುರ ಭಾವಿತ |
ನಿರತಾಸುರಕುಲಸಂಹರಣ || ||೧೧೮||

ರಘುಕುಲಪುಂಗವ ರಾಜೇಶ್ವರ |
ಜಗದಾತ್ಮಕ ಜಗದಭಿರಾಮ |
ಸುಗುಣಾಬ್ಧಿ ಸುರಮುನಿ ಸೇವಿತ |
ಅಗಜಾಪತಿ ಪ್ರಿಯಸೋದರ್ಯ || ||೧೧೯||

**ಶಾರ್ದೂಲವಿಕ್ರೀಡಿತ**

ಎಂದಾ ರಾಮನ ಮುದ್ರೆಯುಂಗುರವ ತನ್ನಂಗಯ್ಯೊಳಿಟ್ಟೀಕ್ಷಿಸಿ
ಸೌಂದರ್ಯಾತ್ಮನ ದಿವ್ಯಮೂರ್ತಿಯದರೊಳ್ ಕಂಡಂತೆ ಕೊಂಡಾಡುತ |
ಕಂದಿರ್ಪಾನನಪಂಕಜಕ್ಕೆ ರವಿ ತಾ ಬಂದಂತೆ ಸಂತೋಷದಿಂ
ಮುಂದಾ ರಾಮನ ಕ್ಷೇಮವಾರ್ತೆಗಳನುಂ ಕೇಳುತ್ತ ನಿಂತಿರ್ದಳು || ||೧೨೦||

**ರಾಗ ವೃಂದಾವನಸಾರಂಗ ಅಷ್ಟತಾಳ**

ಕ್ಷೇಮವೇ ಹನುಮ | ನಮ್ಮವರಿಗೆ | ಕ್ಷೇಮವೇ ಹನುಮ || ಪಲ್ಲವಿ ||

ರಾಮ ಲಕ್ಷ್ಮಣರು ರಾಜ್ಯದಲಿ ಸುಸ್ಥಿರವಾಗಿ || ಅನುಪಲ್ಲವಿ ||

ಮದನನಂಗವ ಪೋಲ್ವ ರಾಮ | ತಮ್ಮ |
ಚದುರ ಲಕ್ಷ್ಮಣನು ನಿಸ್ಸೀಮ ||
ಮೊದಲಿನಂಗದ ಕಾಂತಿ ಕಳವಳಿಸುತ ಮತ್ತೆ |
ಹದಗುಂದಲಿಲ್ಲವಲ್ಲ | ಎನ್ನೊಳು ಮೋಹ |
ವದು ಕಂದಲಿಲ್ಲವಲ್ಲ | ನೀ ಬರುವ ದಿ |
ನದೊಳಗೆಂತಿರ್ದರೆಲ್ಲ | ನಮ್ಮವರಿಗೆ || ಕ್ಷೇಮ || ||೧೨೧||

ದಶಕಂಠ ಕಳವಿನೊಳ್ತಂದ | ಯಾರಿ |
ಗುಸುರುವೆನಧಿಕ ನಿರ್ಬಂಧ ||
ಪಶುಪತಿಯೊಬ್ಬನೆ ಬಲ್ಲನಲ್ಲದೆ ಬೇರಿ |
ನ್ನುಸುರುವೆನಾರ್ಗೆ ನಾನು | ಇನ್ನೊಮ್ಮೆ ಜೀ |
ವಿಸುವಂಗ ಕಾಣೆನಿನ್ನು | ನೋಡಿದೆಯಾ ರಾ |
ಕ್ಷಸ ಮಾಳ್ಪ ಬಗೆಗಳನ್ನು | ನಮ್ಮವರಿಗೆ || ಕ್ಷೇಮವೇ || ||೧೩೧||

ಭೂತಳದೊಳಗೆ ಯೆನ್ನಂಥ | ಕಡು |
ಪಾತಕರುಂಟೆ ಹನುಮಂತ ||
ಮಾತಾ ಪಿತರ ಬಂಧುಬಳಗವೆಲ್ಲವ ಬಿಟ್ಟು |
ಈ ತೆರನಾದೆನಲ್ಲ | ರಾಕ್ಷಸರ ವಿ |
ಘಾತಿಯ ಕಂಡೆಯಲ್ಲ | ಯೆನ್ನಯ ಪ್ರಾಣ |
ನಾಥನನಗಲ್ದೆನಲ್ಲಾ | ನಮ್ಮವರಿಗೆ || ಕ್ಷೇಮವೇ || ||೧೩೩||

**ವಚನ ||** ಇಂತೆಂದು ಜಾನಕಿ ನುಡಿಯಲಾಗಿ ರಾಮಸೇವಕನಾದ ಹನುಮಂತ ತಾನೇನೆಂದನು ಎಂದರೆ –

**ರಾಗ ಸಾರಂಗ ಅಷ್ಟತಾಳ**

ಮನಸನೇನೆಂಬೆನಮ್ಮ | ಯಾವಾಗಲೂ |
ನೆನಸುವ ಗುಣದಿ ನಿಮ್ಮ ||
ಕನಸು ಮನಸಿನಲ್ಲಿ ಹಗಲಿರುಳೆನ್ನದೆ |
ಘನಚಿಂತೆಯಿಂದಿರ್ಪುದ | ಪೇಳುವೆನದ || ||೧೩೪||

ಅನ್ನಾಹಾರವನೊಲ್ಲನು | ಯಾರೊಡನೆಯೂ |
ಮನ್ನಿಸಿ ಮಾತನಾಡನು ||
ಕಣ್ಣಿಗೆ ನಿದ್ರೆ ಬಾರದೆ ಕಂಡ ಕಡೆಯಲ್ಲಿ |
ಬನ್ನ ಬಟ್ಟಡವಿಯೊಳಲೆದಿರ್ಪುದಲ್ಲದೆ || ||೧೩೫||

ಅನುಜ ಲಕ್ಷ್ಮಣನು ತಾನು | ಅಂತರಂಗದಿ |
ಕನಲಿ ಕಂಗೆಡುವುದನು ||
ಮನಕೆ ಮನವೆ ಸಾಕ್ಷಿಯಲ್ಲದೆ ಬೇರಿನ್ನು |
ಘನತೆಯ ನೀವ್ಯಾವ ಗುಣವ ವರ್ಣಿಸುವುದು || ||೧೩೬||

ತರಣೀನಂದನನೂ ತಾನೂ | ಏಕಾಂತದಿ |
ಕರೆದು ಈ ಗುರುತವನು ||

ಒರೆದು ರಾಘವ ಕಯ್ಯೊಳಿತ್ತ ಮುದ್ರಿಕೆಯನ್ನು |
ಬರುವ ದಿನದ ಸುದ್ದಿ ಇದು ಮತ್ತೆ ಬೇರೇನು || ||೧೩೭||

ತಿಂಗಳ ದಿವಸದಲಿ | ಸುದ್ದಿಯ ತಹು |
ದೆಂಬ ತಹಂಗಳಲಿ ||
ಉಂಗುರ ಕೈಗಿತ್ತು ಕಳುಹಿದ ಮೇಲೆ ಕೇ |
ಳಂಗನೆ ನಾನಿತ್ತ ಬಂದ ಪರಿಗಳನು || ||೧೩೮||

**ರಾಗ ಘಂಟಾರವ ಝಂಪೆತಾಳ**

ನಾಳೆ ಸಂಜೆಗೆ ಪೋಗಿ | ಪೇಳದಿದ್ದರೆ ಸುದ್ದಿ |
ನಾಲಿಗೆಯ ಕೊಯ್ಸುವದೆ | ನಮ್ಮೊಡೆಯನಾಜ್ಞೆ || ||೧೩೯||

ಗುರುತವನು ಕೇಳಿದರೆ | ಏನೆಂಬೆ ರಾಘವಗೆ |
ಅರಿತು ಯೆನ್ನೊಳು ಪೇಳು | ಅಂತರಂಗದಲಿ || ||೧೪೦||

**ಕಂದ**

ಹನುಮನ ಕಯ್ಯಲಿ ಚೂಡಾ
ಮಣಿಯಂ ತಾನೀವುತ್ತಲೆ ಭರವಸದಿಂದಂ |
ಮನಸಿನೊಳಿದ್ದುದನೆಲ್ಲವ
ನೆನಸುತಲಾ ಕಾಂತೆ ಪೇಳ್ದಳಂಜನೆಸುತಗಂ || ||೧೪೧||

**ರಾಗ ಆನಂದಭೈರವಿ ಅಷ್ಟತಾಳ**

ಏಸುದಿನ ಬೇಕೆನ್ನ ಪ್ರಾ | ಣೇಶನ ಕಾಂಬುದಕಿನ್ನು |
ಬೇಸರಿಕೆಯೆಂಬುದೇನ | ಹೇಳಲಿ | ಎಂತು | ತಾಳಲಿ || ||೧೪೨||

ಬೇಟೆಗಾರನಿಟ್ಟ ಬಲೆಯ | ಕೋಟಲೆಗೆ ಸಿಕ್ಕಿದ ಹುಲ್ಲೆ |
ಯಾಟದಂತೆ ಕಣ್ಣು ಕಣ್ಣು | ಬಿಡುವೆನು | ಎಂತು | ತಡೆವೆನು || ||೧೪೩||

ಬೆಕ್ಕಿಗಂಜಿ ಪಂಜರದಿ | ಸಿಕ್ಕಿದರಗಿಣಿಯಂತೆ |
ರಕ್ಕಸನಟ್ಟುಳಿಗಾಗಿ | ಬೆಂದೆನು | ಕಡು | ನೊಂದೆನು || ||೧೪೪||

ಗರುಡನ ಬಾಯೊಳಗೆ ಸಿಕ್ಕಿ | ದುರಗನಾಯಾಸದಿ ಸುಕ್ಕಿ |
ಸುರುಟಿದ ಹಾಗಾಯಿತೆನ್ನ | ಬಾಳುವೆ | ಏನ | ಹೇಳುವೆ || ||೧೪೫||

ಕಾಗೆಹಿಂಡಿನೊಳಗೆ ಸಿಕ್ಕಿ | ಕೋಗಿಲೆ ಬಾಯ್ ಬಿಡುವತೆರದೊ |
ಳೀಗ ಪಾಪಿ ಬಾಧೆಯಿಂದ | ನಿಲ್ಲೆನು | ತನುವ | ನೊಲ್ಲೆನು || ||೧೪೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದೇವಿ ಚಿಂತಿಸಬೇಡ ರಾಘವ |
ದೇವನನು ಕರಕೊಂಡು ಬಂದೀ |
ರಾವಣನ ಸಂಹರಿಸದಿದ್ದರೆ | ಸೇವಿಯಲ್ಲ || ||೧೪೭||

ಎಂಟು ದಿವಸದಿ ನೋಡಿರೀ ದಶ |
ಕಂಠನಿಗೆ ಮದ್ದರೆಯದಿರೆ ವೈ |
ಕುಂಠವಲ್ಲಭ ರಾಮಚಂದ್ರನ | ಬಂಟನಲ್ಲ || ||೧೪೮||

ಚಿಂತೆ ಯೇತಕೆ ನಿಮಗು ರಾಮಗು |
ಅಂತರಂಗೊಂದೆನಿಸದಿದ್ದರೆ |
ಪಂಥ ಕೇಳಿದು ಮುಂದೆ ನಾ ಹನು | ಮಂತನಲ್ಲ || ||೧೪೯||

**ಕಂದ**

ಪಂಥದಿ ಬಲು ಧೈರ್ಯಂಗಳ
ನಂತರಿಸದೆ ಪೇಳ್ದು ದೇವಿಯಪ್ಪಣೆಯೆನಲಾ |
ಚಿಂತೆಯ ತಾಳುತ್ತತಿಹನು
ಮಂತನ ಬಿಡಲಾರದೊರೆದಳಂಬುಜನಯನೆ || ||೧೫೦||

**ರಾಗ ದೇಶಿ ಅಷ್ಟತಾಳ**

ದಿಟವೇನೋ ನೀನು ಕಡೆಗೆಂದ ಮಾತು |
ಸಟೆಯಾಗದಲ್ಲ ರಾಘವನಿಲ್ಲಿ ಬರುವುದು || ಪಲ್ಲವಿ ||

ಹಂಬಲಿಸುತ ಹಗಲಿರುಳು ನಾ ಬಲು ಚಿಂತೆ |
ಯೆಂಬ ಕತ್ತಲೆಯೊಳಗಿರೆ ನಿನ್ನ ನುಡಿ ರವಿ |
ಬಿಂಬ ಕಂಡಂತಾಯಿತು | ದುಃಖಗಳ ಕ |
ದಂಬವೆಲ್ಲವು ಹೋಯಿತು | ಸಾವಿರವೆಂದು |
ನಂಬಿಕೊಂಡಿರುವೆ ಹೀಗೆಂದು ಲೇಸಾಯಿತು || ||೧೫೧||

ನೆರೆಬೆಳಗಾದರೆ ಮಲಗಿರ್ಪಖಳರು ನಿ |
ನ್ನರಿತುಕೊಂಡೊಯ್ದು ಸಾವಿರ ನಿರ್ಬಂಧವ ಮಾಡಿ |
ಸೆರೆಮನೆಯೊಳಗಿಟ್ವಾರು || ಅಲ್ಲದಡೆ ನಿ |
ಷ್ಠುರದಿ ನಿಗಳವಿಕ್ಕ್ಯಾರು | ಮತ್ತೆನ್ನನೀ |
ಸರಮೆ ತ್ರಿಜಟೆಯರೆಚ್ಚರಿಸಿ ಪೇಳಿದರು || ||೧೫೧||

**ಕಂದ**

ತಪ್ಪದೆ ಬಹು ಧೈರ್ಯಂಗಳ
ನೊಪ್ಪದಿ ಪೇಳುತಿರೆ ದೇವಿಯಪ್ಪಣೆ ಕೊಡಲುಂ |
ಧೊಪ್ಪನೆ ಪೊರಡುತ ರಾವಣ
ಗಿಪ್ಪ ಮಹೋದ್ಯಾನವನವ ಕಂಡನು ಹನುಮಂ || | | ೧೫೩||

**ದ್ವಿಪದಿ**

ಅಹಹ ಈ ವನ ನೋಡದವ ಮನುಜನಲ್ಲ |
ಬಹು ರಮ್ಯತರವಾದ ವನಸಿರಿಯನೆಲ್ಲ || ||೧೫೪||

ತೋಟ ವನಕೆರೆ ಬಾವಿ ತೆಂಗು ದಾಳಿಂಬ |
ಮೀಟಾದ ಮಾವು ಪಲಸಿನ ಸಾಲ್ಕದಂಬ || ||೧೫೫||

ಜಂಬುನೇರಳೆ ಮಾದ ಕದಳಿ ದ್ರಾಕ್ಷೆಗಳ |
ನಿಂಬೆ ಕಿತ್ತಳೆ ಬಿಲ್ವ ಖರ್ಜುರಾದಿಗಳ || ||೧೫೭||

ಜಾಜಿ ಮಲ್ಲಿಗೆ ಚಂಪಕಾದಿ ಪುಷ್ಪಗಳ |
ರಾಜಿಸುವ ಪೂಗ ಪುನ್ನಾಗ ಚೇದಿಗಳ || ||೧೫೭||

ಪಾರಿಜಾತಾಂಭೋಜ ಪೊಸತು ನೆಯ್ದಿಲೆಯ |
ಭೂರಿಸೌರಮ್ಯ ಗಿಳಿ ಹಂಸ ಕೋಗಿಲೆಯ || ||೧೫೮||

ಇಂದ್ರ ಪುರದೊಳಗೆಸೆಯುತಿರುವ ನಂದನವ |
ಚಂದದಿಂ ಸರಿಮಿಗಿಲೆನಿಪ್ಪ ಭೂವನವ || ||೧೫೯||

**ರಾಗ ಕುರಂಜಿ ಅಷ್ಟತಾಳ**

ಸಿಕ್ಕಿದುದೆನಗೊಂದು ತೋಟ | ಕಳ್ಳ |
ರಕ್ಕಸರಿಹರೊಂದು ಕಾಟ ||

ಮುಕ್ಕುವೆನಿದರೊಳಗಿದ್ದ ಪಣ್ಗಳನೆಂದು |
ಮಿಕ್ಕಿಮೀರುವ ಭೋರಿಡುತಕಿರಿ |
ಕಿಕ್ಕಿರೀಕಿರಿಗುಟ್ಟುತ್ತ || ||೨೬೦||

ಮರದಿಂದ ಮರಕೆ ಲಂಘಿಸಿದ | ಮಲ |
ಗಿರುವ ರಾಕ್ಷಸರ ಭಂಗಿಸಿದ ||
ಪರಿಪರಿ ಬಗೆಯ ಪಣ್ಗಳ ಕೊಯ್ದು ತಿಂದು ತಾ |
ಬರಿಯ ಗೊಂಚಲ ಮರದ ಕೊಂಬನು |
ಮುರಿಮುರಿದು ಬೀಸಾಡಿದ || ||೨೬೧||

ಬಾಳೆಯ ಗಿಡವೆಲ್ಲ ಹರಿದ | ರಸ |
ದಾಳಿ ಕಬ್ಬುಗಳ ಚಪ್ಪರಿದ ||
ಹೇಳಿ ನಿಮ್ಮಪ್ಪ ರಾವಣನ ಕೂಡೆನುತಲಿ |
ಧೂಳಿಪಟಲವ ಮಾಡಿ ವನವನು |
ಹಾಳುಗೆಡವಿದ ನಿಮಿಷದಿ || ||೨೬೨||

ಹೂವಿನ ಸಸಿಯೆಲ್ಲ ಕಿತ್ತ | ಕೊಳನ |
ತಾವರೆಗಳ ಕಲಕುತ್ತ ||
ಕಾವಲು ಮಲಗಿದ್ದ ಜಂಬುಮಾಲಿಯ ಗುದ್ದಿ |
ಜೀವ ಮಾತ್ರವನುಳುಹಿ ಕಳುಹಿದ |
ರಾವಣೇಶ್ವರನಲ್ಲಿಗೆ || ||೨೬೩||

ಅಕ್ಷ ಕುಮಾರನ ಬಡಿದ | ಕಳ್ಳ |
ರಾಕ್ಷಸರ್ಕಳ ಮಂಡೆಯೊಡೆದ ||
ಆ ಕ್ಷಣದಲಿ ಶಕ್ರಜಿತು ಬಲು ಬೆಡಗಿಂದ |
ಲಕ್ಷಗಜರಥ ತುರಗಸಹ ಬಂ |
ದೀಕ್ಷಿಸಿದ ಹನುಮಂತನ || ||೨೬೪||

**ವಾರ್ಧಕ**

ಕೊಲ್ಲು ಕಡಿ ತಿವಿ ಕುಟ್ಟು ಇರಿ ಬಾಣ ತೊಡು ಕಪಿಯ
ಹಲ್ಲ ಮುರಿ ಹಾಯ್ಕು ಹೊ ಕರುಳನುಗಿ ಬಗಿ ತಿನ್ನು
ಬಿಲ್ಲಿನಲಿ ಸೆಳೆ ಖಡ್ಗ ಕುಂತ ತೋಮರ ಪರಶು ಗದೆ ಕಣೆಯ ಕಂಪನಗಳು |
ಚೆಲ್ಲಬಡಿ ಕೆಡಹು ಹಾಯ್ಕೆನುತ ಶಸ್ತ್ರಗಳ ಬಿಡ

ಲಲ್ಲಿಗಲ್ಲಿಗೆ ಮುರಿದುವಲ್ಲದೇ ಹನುಮನದ
ಹುಲ್ಲಕಡ್ಡಿಗೆ ಬಗೆಯದಿರೆ ಇಂದ್ರಜಿತು ಬಳಿಕ ಎಲ್ಲರೊಡನಿಂತೆಂದನು || ||೨೩೫||

**ರಾಗ ಆಹೇರಿ (ಪಂತುವರಾಳಿ) ಅಷ್ಟತಾಳ**

ಸಾಕು ಬಿಡಿ ಬಿಡಿ ಸಾಯದೀ ಕಪಿ ಸುಮ್ಮ |
ನೇಕೆ ದಣಿದುಕೊಂಬಿರಿ || ಪಲ್ಲವಿ ||

ಅಂಬು ಕೊಳ್ಳದು ಬಾಣ ತಾಗದು ಬರಿಯ ಬಾಯ್ |
ಡಂಭಕಕ್ಕಿದು ಬೆದರದು ಕಾಣಿರೊ ||
ಕುಂಭಕರ್ಣನ ವಜ್ರ ರಥದಮೇಲೇರಿಸಿ |
ಕುಂಭಿನೀಪತಿಯಲ್ಲಿ ಗೊರೆಂದನು || ||೨೩೬||

ಅತ್ತಲು ಕಪಿ ಮೆಯ್ಯನೊಲೆದ ಕಾರಣದಿಂದ |
ಹತ್ತು ಸಾವಿರ ರಾಕ್ಷಸರು ಸತ್ತರು ||
ಒತ್ತಿ ಕುಂಭಸ್ಥಳ ಒಡೆದಾನೆ ಮಡಿದಂಥ |
ವಿಸ್ತಾರಗಳ ಶಕ್ರಜಿತು ನೋಡುತ್ತ || ||೨೩೭||

ಪೆಟ್ಟಿಗಂಜುವುದಲ್ಲಾಸಾಧ್ಯವೆತ್ತುವುದಕ್ಕೆ |
ಬೆಟ್ಟದ ಹಾಗಿದು ಬೆಳಕೊಂಡಿದೆ ||
ಕಟ್ಟಿಗೆಗಳ ತಂದೊಟ್ಟೆ ಬೆಂಕಿಯನಿಟ್ಟು |
ಸುಟ್ಟು ಬೂದಿಯಮಾಡಿರೋ ಯೆಂದನು || ||೨೩೮||

ನಗರವ ದಹಿಸುವಡಿದುವೆ ಮದ್ದೆಂದು ನಾ |
ಲಗೆ ಬಿಚ್ಚಿ ಬೆದರುವಂದದಿ ಕಾಣಿಸಿ ||
ಅಗಣಿತ ರಾಕ್ಷಸರುಗಳು ಖೋಖೋ ಯೆಂದು |
ನಗುವಂತೆ ರಥದ ಮೇಲಕೆ ಬಿದ್ದನು || ||೨೩೯||

**ಭಾಮಿನಿ**

ಕೆಲರು ಹಿಡಿದರು ಮಿಣಿಗಳಲಿ ಕೆಲ
ಕೆಲರುಡಿವ ಸರಪಣಿಗಳಲಿ ಬಲು
ಖಳರು ಅಚ್ಚಿನ ಕೊಂಬಿನಲಿ ಕೋಲಿನಲಿ ಕೀಲಿನಲಿ |
ಕೆಲರು ಅಶ್ವಾಳಿಗಳ ಗಳದಲಿ
ಕೆಲರು ವಜ್ರದ ಭಂಡಿಯಲಿ ಗಜ
ವೆಳೆದವಾ ಸುಂಡಿಲಲಿ ಖಳ ಹೆಮ್ಮಾರು ಕೈಗಳಲಿ || ||೨೪೦||

**ರಾಗ ಶಂಕರಾಭರಣ (ಕುರಂಜಿ) ಅಷ್ಟತಾಳ**

ಎಳೆದರು ರಥದಿ ವಾನರನ | ಬಲು |
ಬಲವಂತ ವೃಕ್ಷಸಂಚರನ |
ಛಲದಂಕನಿಭಶುಭಾಕರನ | ಮದ |
ಖಳಕುಲ ತಿಮಿರಭಾಸ್ಕರನ | ದಾರಿ |
ಯಲಿ ಹೋಗುವ ಮಾರಿಯನು ಕಟ್ಟಿತಂದು ಊ |
ರೊಳಗೆ ಬಿಟ್ಟಂತೆ ವೆಗ್ಗಳ ಪರಾಕ್ರಮನ || ||೨೭೦||

ಇತ್ತಡಿಯೊಳು ಮದ್ದಾನೆಗಳು | ಬಲು |
ಶಕ್ತಿಯಿಂದೆಳೆವ ಕೋಣಗಳು |
ಸುತ್ತಲು ಬಿಗಿದ ನೇಣುಗಳು | ಭೋರೆ |
ನುತ್ತ ಭೋರ್ಗರೆವ ವಾದ್ಯಗಳು | ಕೇ |
ಳುತ್ತಲಂಬರದೊಳು ನಿಂದು ನೋಡುವ ಸುರ |
ಮೊತ್ತವು ಕಂಡಂಜುವಂತೆ ಸಂಭ್ರಮದೊಳು | ಎಳೆದರು || ||೨೭೨||

ಮೇರುಪರ್ವತದ ಹಾಗಿರುವ | ಕಪಿ |
ವೀರನನೊಯ್ದು ಭೀಕರವ |
ಬಾರಿಬಾರಿಗೆ ಧ್ವನಿಗರೆವ | ಹತ್ತು |
ನೂರು ಸಾವಿರ ಭೇರಿ ಮೊರೆವ | ಮುಂದೆ |
ಕಾರಣವರಿತವರ್ನಾರೀಪುರುಷರು ಆ |
ಊರಿಂದೊಕ್ಕಲು ಬಿಟ್ಟು ಸೇರಿ ಮತ್ತೊಂದೂರ || ಎಳೆದರು || ||೨೭೩||

ಈ ವಿಭವದೊಳೆಳೆತಂದು | ಬಂದು |
ರಾವಣನಿದಿರಲಿ ನಿಂದು |
ದೇವೇಂದ್ರಜಿತು ತಂದೆಗಂದು | ಪೇಳ್ದ |
ಸೇವೆ ಇಂದಿಗೆ ಸಂದಿತೆಂದು | ಕಪಿ |
ಭಾವವ ನೋಡುತ್ತ ಠೀವಿಯ ಕಪಿಯೆಂದು |
ರಾವಣ ಕಡೆಮಂತ್ರಿ ಹನುಮನೊಳಿಂತೆಂದ || ||೨೭೪||

**ರಾಗ ಪಂತುವರಾಳಿ ಏಕತಾಳ**

ಯಾವ ದೇಶದಿಂದ ಬಂದೆ | ವೀರ ಕಪಿರಾಯ | ಮುಂದೆ |
ಯಾವಲ್ಲಿಗೆ ಪಯಣವಯ್ಯ | ಜಾಣ ಕಪಿರಾಯ || ಪಲ್ಲವಿ ||

ಹೆತ್ತ ತಾಯಿ ತಂದೆ ಯಾರೊ | ಇತ್ತ ಬಂದುದೇಕೆ ನೀನು |
ಕಿತ್ತು ವನವ ಕೆಡಿಸಿದಂಥ ಕಾರಣವೇನು ||
ಹತ್ತುಸಾವಿರ ರಾಕ್ಷಸರ ಅಕ್ಷಕುಮಾರರನ್ನು |
ಮೊತ್ತ ಸಹಿತ ಕೊಂದುದೇಕೆ | ಉತ್ತರವೇನಯ್ಯ || ||೨೭೫||

ಅರಮನೆ ಆಸ್ಥಾನವೆಂಬ | ಮರಿಯಾದೆಯನರಿಯದೆ ಈ |
ಪರಿಯ ಗರ್ವದಿಂದ ಕುಳ್ಳಿರುವದೇತಕೋ ||
ದೊರೆಗಳಪ್ಪಣೆಯಿಂದ ನಾ | ಇರದೆ ಕೇಳುವುದೀ ಮಾತು |
ಮರುಳುತನವ ಬಿಟ್ಟು ಎನ್ನೊಳರುಹು ಕಾರ್ಯವ || ||೨೭೬||

**ರಾಗ ಮಧ್ಯಮಾವತಿ ಆದಿತಾಳ**

ದಶಕಂಠನೆಂಬಾತ ನಾರು | ತೋರಬೇಕಯ್ಯ |
ಉಸುರುವೆನೆಲ್ಲ ನಿಮ್ಮೊಳು | ಕಾರ್ಯದಂತರ್ಯ || ಪಲ್ಲವಿ ||

ಜಗದೊಳು ಜನಕನ | ಮಗಳು ಸೀತೆಯ ಹತ್ತು |
ಮೊಗದಾತ ಕದ್ದು ತಂ | ದಿರುವನಂತೆ ||
ಜಗದೇಕವೀರ ರಾ | ಘವ ನೋಡಿ ಬರಲೆನ್ನ |
ಮಿಗೆ ಹರುಷದಿ ಕಳು | ಹಲು ಬಂದೆ ನಾನು || ||೨೭೭||

ಬೇಹಿನ ಚರರನ್ನು | ಬೆದರಿಸಿ ಕೊಲುವದು |
ಯಾವ ರಾಜ್ಯದ ರಾಜ | ನೀತಿಯಿದು ||
ನಾವು ಮಾಡಿರುವ ತ | ಪ್ಪೇನು ಕಟ್ಟುವುದಕ್ಕೆ |
ನೋವು ವೆಗ್ಗಳ ಮಾತು | ಬಾರದಯ್ಯ || ||೨೭೮||

ಬೇಡವೆಂದರೆ ಮಾತ | ಕೇಳದೆ ಎನಗಿಂಥ |
ಕೇಡುಮಾಡಿದ್ದೆನ್ನ | ಬಾಲವೈಸೆ ||
ರೂಢಿಪಾಲಕನುದ್ಯಾ | ನವನಿಂದು ನಿರ್ಮೂಲ |
ಮಾಡಿ ರಾಕ್ಷಸರನ್ನು | ಕೊಂದ ಪಾಪಿಯದು || ||೨೭೯||

**ವಾರ್ಧಕ**

ಮಾತಿನಲಿ ಜಾಣ ಕಪಿ ನೋಡಿದರೆ ಬಲವಂತ
ನೀತನಿಚ್ಛೆಯ ಬಾಲವಲ್ಲ ಗಡಯಿದರ ಸ
ತ್ತ್ವಾತಿಶಯವಸ್ತ್ರದಿಂ ಸುತ್ತಿ ಸುಡಬೇಕೆಂದು ದಶಕಂಠ ಕೋಪದಿಂದ |
ದೂತರಿಗೆ ನೇಮವಂ ಕೊಡಲಾಗ ಮನೆಮನೆಯ

ಪೀತಾಂಬರಾದಿಗಳ ಸಹ ತಂದು ಸುತ್ತಿದರು
ಆತುರದೊಳೆಣ್ಣೆಯೊಳಗದ್ದಿ ಕಿಚ್ಚಿಕ್ಕಿದರೆ ಜ್ಯೋತಿರ್ಮಯೋಕ್ತ ವಾಯ್ತು || ||೧೮೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಾಲತುದಿಯಲಿ ಮೊಳೆತು ರಂಜಿಸಿ |
ಮೇಲುವಾಯ್ದುದು ನಾಲ್ಕು ದೆಸೆಯಲಿ |
ಕಾಳಭೈರವ ಮುಖದ ವಹ್ನಿ | ಜ್ವಾಲೆಯಂತೆ || ||೧೮೧||

ಕೋವಿದರ ಮನೆ ಗೋಪುರಂಗಳ |
ನಾವಿಧದ ಚಾವಡಿಯ ಚೌಕಿಯ |
ರಾವಣನ ಕೊನೆ ಮೀಸೆಸಹಿತಲೆ | ಹೋಮಿಸಿದನು || ||೧೮೨||

ಹಾರಿದನು ಬಳಿಕುಪ್ಪರಿಗೆಗಳ |
ಕೇರಿಕೇರಿಯ ಜನರ ಮನೆಗಳ |
ತೋರಿದನು ಕೊಟ್ಟಗ್ನಿಗೌತಣ | ವೀರಹನುಮ || ||೧೮೩||

ಕರಗಿದವು ನವರತ್ನಖಚಿತದ |
ನೆರವಿಗಳ ಬೊಂಬೆಗಳು ಸಹಿತಲೆ |
ಪರಿಪರಿಯ ನೂತನದ ಪೀತಾಂ | ಬರಗಳೆಲ್ಲ || ||೧೮೪||

ಆ ಸುಲಂಕಾನಗರದೊಳಗೆ ವಿ |
ಭೀಷಣನ ಮನೆ ಹೊರತು ಅಗ್ನಿಯ |
ರಾಸಿಯಾದುದು ಪುರದ ರಚನೆಯ | ಮೀಸಲಳಿದು || ||೧೮೫||

**ವಾರ್ಧಕ**

ಕೆಡಿಸಿದಂ ನಂದನವ ನಗರವಂ ಬಾಲದಲಿ
ಸುಡಿಸಿ ಚೂಡಾಮಣಿಯ ಸಹಿತ ಹಾರಿದ ತಿರಿಗಿ
ಕಡಲೊಳದ್ದಿಯೆ ಕಿಚ್ಚ ನಂದಿಸುತ ಕಪಿಸೇನೆಯೆಡೆಗೆ ನಡೆತಂದು ಬಳಿಕ |
ನುಡಿದ ಲಂಕೆಯ ಪಾರುಪತ್ಯಮಂ ಎಲ್ಲವರು
ನಡೆದುದಿಂದಿನ ದಿವಸ ಉಳಿದೆವೆಂದೆನುತ ಜಗ
ದೊಡೆಯ ರಘುಪತಿಗೆ ಕಾಣಿಸಿಕೊಂಡು ಹನುಮಂತ ಪೊಡೆಮಟ್ಟು ಬಿನ್ನೈಸಿದ || ||೧೮೬||

**ರಾಗ ರೇಗುಪ್ತಿ ಅಷ್ಟತಾಳ**

ರಾಘವ ಸ್ವಾಮಿ ಲಾಲಿಸಿ ಕೇಳು ಪ್ರೇಮಿ |
ಈಗ ನಾವೆಲ್ಲ ಪೋಗಿ ದಣಿದಂಥ ಬಗೆಯನು || ಪಲ್ಲವಿ ||

ದೇಶ ವಿದೇಶವ ತೊಳಲಿ ಬಳಲಿ ಬಳಿ |
ಕಾ ಸ್ವಯಂಪ್ರಭೆಯ ಪಟ್ಟಣದಿ ಸುತ್ತಿ |
ಬೇಸತ್ತು ಕಣ್ವಮುನ್ಯಾಶ್ರಮವನು ದಾಟಿ |
ಆ ಶರಧಿಯ ತಡಿ ಯೋಚಿಸುತ್ತಿರುವಾಗ | ||೧೮೭||

ಶರಣ ಸಂಪಾತಿ ಲಂಕಾಪುರ ವೀಥಿಯ |
ಬೆರಳ ಸನ್ನೆಯಲಿ ತೋರಿಸಿದ ಮೇಲೆ |
ಶರಧಿಯ ದಾಂಟಿ ಲಂಕಾಪುರ ದ್ವಾರದಿ |
ಇರುಳು ಲಂಕಿಣಿಯ ಸಂಹರಿಸಿದ ಬಗೆಯನು || ||೧೮೮||

ಕುಂಭಕರ್ಣನ ಶ್ವಾಸದೊಳು ಸಿಕ್ಕಿಕೊಂಡೊಜ್ರ |
ಕಂಭಕ್ಕೆ ಬಡಿದು ಪೇಚಾಡಿ ಮತ್ತೆ |
ಹಂಬಲಿಸುತ ಹಗಲಿರುಳಶೋಕಾವನದಿ |
ಕುಂಭಿನೀತನುಜೆಯ ಕಂಡು ಕೈಮುಗಿದೆನು || ||೧೮೯||

ಅರಿತು ನಿಮ್ಮಪ್ಪಣೆ ಗುರುತವೆಲ್ಲವ ಪೇಳಿ |
ಕರತಲದೊಳಗೆ ಉಂಗುರವ ಕೊಟ್ಟೆ ||
ಬರುವೆನೆಂಟೇದಿನಕ್ಕೆ ಕರಕೊಂಡು ನಿಮ್ಮನೆಂ |
ದುರುತರದೊಳಗೆ ಭಾಷೆ ಕೊಟ್ಟು ಬಂದೆನು ಸ್ವಾಮಿ || ||೧೯೦||

ಬಳಿಕುದ್ಯಾನದಿ ಫಲಾಹಾರವ ಮಾಳ್ಪಾಗ |
ಖಳರೆನ್ನ ಹೆಡಗೈಯ ಬಿಗಿದರಯ್ಯ |
ಹಲವು ಶಸ್ತ್ರವ ಬಿಟ್ಟು ಕನಲಿ ಬಾಲವ ಸುಟ್ಟು |
ಉಳಿದು ಜೀವ ಮಾತ್ರ ಬಳಲಿ ಬಂದೆನು ದೇವ || ||೧೯೧||

**ಭಾಮಿನಿ**

ಅಣಿಯರಿತು ಬಿನ್ನೈಸಿ ಶೌರ್ಯಾ
ಗ್ರಣಿಯ ಪಾದಕೆ ನಮಿಸಿ ಚೂಡಾ
ಮಣಿಯ ಕೈಯಲ್ಲಿ ಕೊಡಲು ಜಯ ಜಯವೆಂದಿತಮರಗಣ |
ತ್ರಿಣಯಸಖ ಬೆರಗಾಗೆ ಕಪಿಸಂ

ದಣಿಯ ಮಧ್ಯದೊಳೆಸೆಯುತಿಹ ದಿನ
ಮಣಿಯಸುತ ಮೊದಲಾಗಿ ಸ್ತುತಿಸಿದರಂದು ರಾಘವನ || ||೨೯೨||

**ರಾಗ ಧವಳಾರ ಏಕತಾಳ**

ಜಯ ಜಯ ರಘುಕುಲನಂದನ |
ಭಯನಿವಾರಣ ಸುರವಂದನ || ಪಲ್ಲವಿ ||

ಅಂಬುಜಲೋಚನ ಅಘಕುಲನಾಶನ |
ಕಂಬುಕಂಧರ ಕಮನೀಯಕರ |
ತುಂಬುರುನಾರದ ಗೀತವಿನೋದ ತ್ರಿ |
ಯಂಬಕಸಖ ಹರಿ ನಮೋ ನಮೋ || ||೨೯೩||

ಭಾಸುರಭೂಷಣ ಬಹುಮುನಿ ಪೋಷಣ |
ದೂಷಣಖಳಕುಲ ನಾಶ ವಿಭೋ |
ಶ್ರೀಶ ಪರಮಗರುಡಾಸನ ಸರ್ವಲೋ |
ಕೇಶ ಜಾನಕೀಪತಿ ನಮೋ ನಮೋ || ||೨೯೪||

ಭಕ್ತವತ್ಸಲ ಭವರೋಗ ಸಂಹಾರಣ |
ಮುಕ್ತಿದಾಯಕ ಮಂಗಲಮಹಿಮ |
ಉತ್ತಮಪುರುಷ ಸಾಕೇತಪಟ್ಟಣವಾಸ |
ಪೃಥ್ವೀಪಾಲಕ ರಾಮ ನಮೋ ನಮೋ || ||೨೯೫||

**ವಾರ್ಧಕ**

ಅರಸುಮಕ್ಕಳು ಕೇಳಿ, ಆಗ ಚೂಡಾಮಣಿಯ
ಮರುತಸುತ ರಾಮಚಂದ್ರನ ಕೈಯ ಕೊಟ್ಟಲ್ಲಿ
ಭರಿತವಾಯಿತು ಸಂಧಿಯೆಂದು ವಾಲ್ಮೀಕಿಮುನಿವರನುಸುರ್ದ ಪುಣ್ಯಕಥೆಯ |
ಅರಿತು ಹೇಳುವ ಕೇಳ್ವ ಪುಣ್ಯವಂತರಿಗೆ ಬಹ
ದುರಿತಗಳ ಪರಿಹರಿಸಿ ಸಂತೋಷದಲಿ ಕಣ್ವ
ಪುರದೊಡೆಯ ಶ್ರೀಕೃಷ್ಣ ಸಕಲಭಾಗ್ಯವನಿತ್ತು ಪೊರೆವನನುಗಾಲ ಬಿಡದೆ || ||೨೯೬||

**|| ಉಂಗುರಸಂಧಿ ಪ್ರಸಂಗ ಮುಗಿದುದು ||**

# ೭. ಸೇತು ಬಂಧನ (ವಿಭೀಷಣ ನೀತಿ) - ಪಾತ್ರಗಳು

ರಾಮ
ಲಕ್ಷ್ಮಣ
ಹನುಮಂತ
ಸುಗ್ರೀವ
ಜಾಂಬವ
ಅಂಗದ
ನಳ
ನೀಲ
ಗವಾಕ್ಷ
ವರುಣ
ಈಶ್ವರ
ಬ್ರಹ್ಮ
ನಾರದ
ರಾವಣ
ವಿಭೀಷಣ
ಇಂದ್ರಜಿತು
ಶುಕ
ಸಾರಣ
ನೀಲನಾಯಕ
ಮೇನಕೆ
ಕೈಕಸೆ
ವರುಣ ಸ್ತ್ರೀಯರು

**ಮತ್ತೇಭವಿಕ್ರೀಡಿತ**

ಘನವಾಲ್ಮೀಕಿಮುನೀಂದ್ರಪಾದಯುಗಕಂ ಬೀಳುತ್ತಲಾ ಬಾಲರೂ
ಮನಸಂತೋಷದಿ ಸೇತುಬಂಧನಗಳಂ ಪ್ರಾರಂಭ ಸಂಪೂರ್ಣಮಂ |
ವನಸಂಚಾರಿಗಳೆಂತು ದಾಂಟಿದರದಂ ಶ್ರೀರಾಮಚಾರಿತ್ರಮಂ
ಇನಿತಾನಂದದಿ ಕೇಳ್ವೆವೆಂಬ ಸುತರಂ ಕೊಂಡಾಡುತಿಂತೆಂದನು || ||೧||

**ಸಾಂಗತ್ಯ (ಚರಿತೆ) ರಾಗ ತೋಡಿ ರೂಪಕತಾಳ**

ತನಯರು ಕೇಳಿ ರಾಘವನು ಕೈಯಲಿ ಚೂಡಾ |
ಮಣಿಯನು ಕೊಂಡು ದುಃಖಿಸುತ ||
ವನಿತೆಯ ಮೇಲಿದ್ದ ಮಮಕಾರದಿಂದಲಾ |
ದಿನಕರ ತನುಜಗಿಂತೆಂದ || ||೨||

**ರಾಗ ಭೈರವಿ ಝಂಪೆತಾಳ**

ಅತಿಶಯದ ಸಾಗರದ | ಮಥನದೊಳು ಜನಿಸಿ ಸುರ |
ಪತಿಯಿಂದ ಬಂತು ಮಣಿ | ಜನಕ ಭೂವರಗೆ || ||೩||

ಮಗಳ ವೈವಾಹದಲಿ | ವಶವಾಯಿತೆಮ್ಮೊಡನೆ |
ತೆಗೆದು ಸಲೆ ಮೋಹದಲಿ | ಕೊಟ್ಟೆ ನಾ ಸತಿಗೆ || ||೪||

ಏನುಪಾಯದೊಳಿದನು | ಉಳುಹಿಕೊಂಡಳೊ ಕಾಣೆ |
ಮಾನಿನೀಮಣಿಯು ಸಲೆ | ಜಾಣೆಯಹುದಹುದು || ||೫||

ಎಂದಿಗಾದರು ಸತಿಗೆ | ಭೋಗಿಸುವ ಫಲವಿರಲು |
ಅಂದು ಪರಿಯಂತ ತೆಗೆ | ದಿರಿಸೊ ನೀ ತಮ್ಮ || ||೬||

ಮರುತಸುತ ನಮಗಾಗಿ | ಮಾಡಿದತಿಸಾಹಸಕೆ |
ಮರೆಯದುಪಕಾರವಿದ | ಕೇನಿತ್ತರಹುದು || ||೭||

ಧರ್ಮಶಾಶ್ವತವಾಗಿ | ಧಾರೆಯೆರೆದೆವು ಬರುವ |
ಬ್ರಹ್ಮಪದವಿಯ ಭಾಗ್ಯ | ಹನುಮಂತಗಿಂದು || ||೮||

**ವಾರ್ಧಕ**

ಮರುತನಂದನಗಾಯಿತಜನ ಸಂಪದವೆಂದು
ಸುರಪಾಲ ಮುಂತಾದ ಸುರರೆಲ್ಲ ಜಯವೆನುತ
ಸುರಿದರಂಬರದಿಂದ ಪೂಮಳೆಯ ದೇವದುಂದುಭಿ ಮೊಳಗಿತಾಕಾಶದಿ |
ಕರಿ ತುರಗ ರಥ ಪಾದಚಾರಿಗಳು ತಾವೆ ವಾ
ನರರೊಬ್ಬರೊಬ್ಬರೊಳಗಾಯ್ತು ಚತುರಂಗ ಮಾ
ರ್ಬಲ ಮಾರ್ಗಶಿರ ಶುದ್ಧದಷ್ಟಮಿಯೊಳೆಲ್ಲರುಂ ಹೊರಪಯಣಮಂ ಗೈದರು || ||೯||

**ರಾಗ ಕೇದಾರಗೌಳ ಅಷ್ಟತಾಳ**

ವರಶ್ರವಣಾದ್ರಿಯಿಂದೆದ್ದು ಬಂದಾಸುರ|
ಗಿರಿಯೊಳು ನೆಲೆಸಿದರು ||
ಮರುದಿನ ಮೇಚಕ ಪರ್ವತದಿಂದೆದ್ದು |
ಬರುತಿರ್ದುದು ಕಟಕ || ||೧೦||

ಅಲ್ಲಿಂದ ಮಲಯಾಚಲಕಾಗಿ ದಿನ ನಾಲ್ಕ |
ರಲ್ಲಿ ಸಾಗರ ತಡಿಗೆ ||
ಎಲ್ಲರೂ ಬಂದುದ ಕಾಣುತೋಡಿದರು ಮ |
ತ್ತಲ್ಲಿದ್ದ ದಾನವರು || ||೧೧||

**ವಾರ್ಧಕ**

ಧಾಳಿವರಿದೈತಂದು ಗಂಧಮಾದನ ಗಿರಿಯ
ಮೂಲದೆಡೆಯಲಿ ರಾಮ ಸೈನ್ಯಮಂ ಕೆದರೆ, ಕಪಿ
ಪಾಳೆಯವ ಕಂಡಂಜಿ ಕಾವಲಿಹ ರಾಕ್ಷಸರು ಬೀಳುತೇಳುತ ನಡೆದರು |
ಓಲಗದೊಳಿರುವ ದಶಕಂಠನಂಘ್ರಿಗೆ ಮಣಿದು
ನೀಲನಾಯಕನಂಜುತಂಜುತಳುಕುತ ಬೆದರಿ
ದಾಲಿಗಳ ನೀರೊರೆಸಿ ಗದ್ಗದಸ್ವರದಿಂದ ಪೇಳಿದನು ದನುಜೇಂದ್ರಗೆ || ||೧೨||

**ರಾಗ ಕಾಂಭೋಜಿ ಅಷ್ಟತಾಳ**

ದಂಡು ಬಂತಯ್ಯಾ ರಾಘವನ | ನಾವು |
ಕಂಡೆವು ದಳವಾಯಿ ಸುಗ್ರೀವನ |
ತಂಡತಂಡದೊಳೆಪ್ಪತ್ತೇಳು ಕೋಟಿಯ ಕೈಯ |
ತುಂಡುಮರಗಳ ಗುಂಡುಗಿರಿಗಳ | ಹಿಂಡುಹಿಂಡಿನ ಕಪಿಗಳ || ||೧೩||

ದಿನಕರವಂಶಲಲಾಮ | ರಾಮ |
ನನುಜ ಲಕ್ಷ್ಮಣನು ನಿಸ್ಸೀಮ ||
ಧನುಶರಗಳ ಕೊಂಡು | ದನುಜರ ವಧೆಗೆಂದು |
ಘನಪರಾಕ್ರಮಿ ವೀರಸುಗ್ರೀ | ವನ ಮಹಾಬಲ ಕೂಡಿದ || ||೧೪||

ಕರಿರಥ ತುರಗ ಕಾಲಾಳು | ತಾವೇ |
ಪರಿವಾರಾಗಿಹರಯ್ಯ ಕೇಳು |
ಕರಡಿ ಸಿಂಗಳಿಕ ವಾ | ನರ ಮುಸು ಕೆಂಜಣಿಲ್ |
ಮರಿಗಳೈದವೆ ಕೆಲವು ಬಿಳುಪಾ | ಗಿರುವ ಮುದಿಮುದಿ ಕಪಿಗಳು || ||೧೫||

ಕೇಳಿದ ದಶಕಂಠ ನುಡಿಯ | ರಾಮ |
ಪಾಳ್ಯ ಸಮುದ್ರದ ತಡಿಯ ||
ಓಲಗದೊಳು ಕುಳಿ | ತೆಲ್ಲರ ಕರೆಸಿದ |
ಕಾಳಗಕೆ ಸನ್ನಾಹದಿಂ ಬರ | ಹೇಳಿದನು ಖಳ ಕೋಟಿಯ || ||೧೬||

**ರಾಗ ಭೈರವಿ ತ್ರಿವುಡೆತಾಳ**

ನೀಲನಾಯಕನೆಂದವಾರ್ತೆಯ |
ಲಾಲಿಸುತ ನೆರೆ ಕೇಳಿದ ||
ಕಾಲಭೈರವನಂತೆ ರೋಷದ |
ಮೇಲೆ ಧೈರ್ಯವ ತಾಳಿದ ||
ಕಾಲರಕ್ಕಸ ದಿಗುತಟದ ಬೇ |
ತಾಳರನು ಬರಹೇಳಿದ ||
ಸಾಲುಸಾಲೀರೇಳು ಲೋಕಕೆ |
ಓಲೆತಾಳೆಯ ಬರೆಸಿದಾಗಲೆ ||
ಬಂದರಾಗ | ಖಳರೈ | ತಂದರಾಗ || ಪಲ್ಲವಿ || ||೧೭||

ಕೋಟಿ ದಾನವರುಗಳ ಶರಧಿಯ |
ದಾಟದಂದದಿ ನಿಲಿಸಿದ ||
ಕೋಟೆಯದ ಹೊರವಳಯ ಸುತ್ತಲು |
ನೀಟಿನಲಿ ಕಣಿಯಗೆಸಿದ ||
ಪಾಟಿಯಲಿ ರಣಭೂಮಿಗಖಿಲ ಸ |
ಲೂಟಿಯಂಕವ ಸುಳಿಸಿದ ||
ಕಾಟಕತ ಕೈಯಸ್ತ್ರಶಸ್ತ್ರದ |
ಕೋಟಲೆಗೆ ಛಲವೆಳಸಿತಾಗಲೆ ||
ಬಂದರಾಗ | ಖಳರೈ | ತಂದರಾಗ || ||೧೮||

**ಕಂದ**

ಅಂದಿನ ಓಲಗದೆಡೆಗೈ
ತಂದಗ್ರಜಗೆರಗಲಾ ವಿಭೀಷಣದೇವಂ |
ಬಂದಾರಾಮನ ವಾರ್ತೆಯ
ನಂದರುಹಲು ಕೇಳ್ದು ರಾಜನೀತಿಯ ಪೇಳ್ದಂ || ||೧೯||

**ರಾಗ ಬೇಗಡೆ ಅಷ್ಟತಾಳ**

ಕೇಳಿದೆಯಾ | ಅಣ್ಣ | ಕೇಳಿದೆಯಾ || ಪಲ್ಲವಿ || ರಾಮ |
ಪಾಳ್ಯ ಗೂಡಿ ನಮ್ಮೊಡನೆ | ಕಾಳಗಕ್ಕೆ ಬಂದ ಪರಿಯ || ಅನುಪಲ್ಲವಿ ||

ಬಾಲವುಳ್ಳ ಕಪಿಗಳೆಪ್ಪ | ತ್ತೇಳು ಕೋಟಿಯಂತೆ ಕೆಲವು |
ನೀಲ ಕೆಂಪು ಬಿಳಿದು ಮತ್ತೆ | ಬಾಲಕರಂತೆ |
ಮೇಲೆ ಸುಗ್ರೀವನೆಂಬಾತ | ಪಾಲಿಸುವನರಸನಂತೆ |
ನೀಲನೆಂಬನಿವರಿಗೆಲ್ಲ | ಪಾಳ್ಯದ ನಾಯಕನಂತೆ | ಕೇಳಿದೆಯಾ || ||೧೦||

**ರಾಗ ಕಾಪಿ ಅಷ್ಟತಾಳ**

ಇನ್ನಾದರು ಬಿಡು ಬಿಡು ನಿನ್ನ ಛಲವ |
ಮೊನ್ನೆ ಹೇಳಿದ ಮಾತು ನಿಜವಾಯಿತಲ್ಲ || ಪಲ್ಲವಿ ||

ಮೊದಲು ಪಟ್ಟಣವನಗ್ನಿಗೆ ಕೊಟ್ಟ ಕಪಿಯಂಥ |
ಅದುಭುತ ವೀರ ವಾನರಸೈನ್ಯವೈತಂದು |
ಕೆದರಿತು ಪಾಳ್ಯವಂತೆ | ಈಚೆಗೆ ದಾಟು |
ವುದಕಲ್ವ ವೇಳ್ಯವಂತೆ | ಎಚ್ಚರಿತುಕೊಂ |
ಬುದಕೀಗ ಸಮಯ ಬಂದಿದೆ ಮುನ್ನಿನಂತೆ || ||೧೦||

ಅಣ್ಣ ಕೇಳೀ ರಾಮಚಂದ್ರನೀ ಭೂಮಿಯ |
ತಿಣ್ಣವಿಳುಹಲಾಗಿ ಅವತರಿಸಿದನೊಂದು |
ಹೆಣ್ಣ ನೆವನ ಹಿಡಿದು | ನಮ್ಮೆಲ್ಲರ |
ಮಣ್ಣಿಗಿಕ್ಕುವ ಬಡಿದು | ಈ ಕಾರ್ಯದೊ |
ಳುಣ್ಣದುರಿವುದುಚಿತಗಳಲ್ಲ ತಿಳಿದು || | | ೧೧||

ಜಾರೆಯೆ ಜಾನಕಿ ಸಾಕ್ಷಾಲ್ಲಕ್ಷುಮಿದೇವಿ |
ನಾರಾಯಣ ರಾಮಚಂದ್ರ ಮಾಶೇಷಾವ |
ತಾರಿ ಲಕ್ಷ್ಮಣರು ಬಂದು | ದೇವತೆಗಳ |
ದೂರಿಗೋಸ್ಕರದೊಳಿಂದು | ನಮ್ಮಂತಕ |
ನೂರಿಗಟ್ಟದೆ ಬಿಡರರಿತುಕೊ ಮುಂದು || ||೧೨||

**ರಾಗ ತೋಡಿ ಅಷ್ಟತಾಳ**

ಏನೆಂದೇ | ತಮ್ಮ | ಏನೆಂದೆ || ಪಲ್ಲವಿ ||
ಏನೆಂದೇ ತಮ್ಮ ಏತಕೆ ಮರುಳಾದೆ |
ದಾನವರುಗಳ ಶಕ್ತಿಯನು ನೀನರಿಯದೆ || ಅನುಪಲ್ಲವಿ ||

ದನುಜರ ಸೈನ್ಯ ಲಂಕಾದುರ್ಗವೆಮಗೆ |
ಅನುಜಗೆ ಸರಿ ಯಾರು ಕುಂಭಕರ್ಣನಿಗೆ |
ಧನಪತಿ ಜ್ಯೇಷ್ಠ ತಾನೈಶ್ವರ್ಯದೊಳಗೆ |
ಘನಪರಾಕ್ರಮಿ ಶಕ್ರಜಿತು ಕಂದನೆನಗೆ || ಏನೆಂದೇ || ||೧೪||

ಈರೇಳು ಜಗದೊಡೆತನ ನಮಗುಂಟು |
ಮಾರವೈರಿಯ ಭಕ್ತಿ ಮನದಿ ಬೇರುಂಟು |
ಸೇರಿಪ್ಪ ದಿಕ್ಪಾಲರೊಳೆ ನಮ್ಮ ನಂಟು |
ಬೇರಿನ್ನು ಯೋಚಿಸಲಿದರೊಳೇನುಂಟು | ಏನೆಂದೇ || ||೧೫||

ಸೀತೆಯ ನಾ ಬಿಟ್ಟುಕೊಟ್ಟರೆ ಹಿಂದೆ |
ಪೇತುಗನೆಂದೆಂಬ ಪೆಸರಿಡು ಮುಂದೆ |
ಮಾತಿಲಿ ಬೆದರಿಸಿ ಬಿಡಿಸಲು ನಮ್ಮ |
ತಾತನಿಂದಾಗದು ಛೀ ಹೋಗೋ ತಮ್ಮ || ಏನೆಂದೇ || ||೧೬||

ಆತನಿಗುಪಕಾರವೆಂಬಡೆ ನಿನ್ನ |
ತಾತನೊ ತಮ್ಮನೊ ಮಗನೊ ಮೈದುನನೊ |
ಕೋತಿಗಳರಸನ ಕೊಂಡಾಡುವುದಕೆ |
ಸೀತೆಯ ನೆಂಟನೋ ಬಳಿಯ ದಾಯಾದಿಯೋ || ಏನೆಂದೇ || ||೧೭||

**ರಾಗ ಕಾಪಿ ಅಷ್ಟತಾಳ**

ನೀನೇಕೆ ಮರುಳಪ್ಪುದಣ್ಣ | ಇನ್ನು |
ಜಾನಕಿಯನು ಬಿಟ್ಟುಕೊಡುವುದೆ ಬಣ್ಣ || ಪಲ್ಲವಿ ||

ಕೊಬ್ಬಿದುನ್ಮದವೆಲ್ಲ ಬಿಡುಗು | ಕಪಿ |
ಮಾರ್ಬಲಗಳು ಬಂದು ಮಂಡೆಯ ಬಡಿಗು ||
ಪರ್ಬಿ ಪಟ್ಟಣವೆಲ್ಲ ಸುಡುಗು | ಜಗ |
ದಬ್ಬೆ ಜಾನಕಿಯಿಂದ ಸೌಭಾಗ್ಯ ಕೆಡುಗು || ನೀನೇಕೆ || ||೧೮||

ಸೀತಾದೇವಿಯ ಕರಕೊಣಕು | ಒಳ್ಳೆ |
ಜಾತಿಮಾಣಿಕ್ಯ ಮುತ್ತುಗಳ ತೆಕ್ಕೊಣಕು ||
ಈ ತಪ್ಪ ಪಾಲಿಸೆಂದೆನಕು | ರಘು |
ನಾಥಸ್ವಾಮಿಯ ಪಾದಗಳ ಕಟ್ಟಿಕೊಣಕು || ನೀನೇಕೆ || ||೧೯||

ರಾಮಚಂದ್ರಗೆ ಪೊಡಮಡುವೊ | ನಮ್ಮ |
ಸೀಮೆಯ ಒಡೆಯಂಗೆ ಕಪ್ಪವ ಕೊಡುವೊ ||
ಕಾಮುಕತನವೆಲ್ಲ ಬಿಡುವೊ | ರಾಮ |
ಸ್ವಾಮಿಯ ಮನದೊಲವಿದ್ದಂತೆ ನಡವೊ || ನೀನೇಕೆ || ||೩೦||

**ರಾಗ ಘಂಟಾರವ ಝಂಪೆತಾಳ**

ತಮ್ಮನ ಸ್ವರೂಪಕ್ಕೆ | ತಕ್ಕ ಮಾತಾಡಿದನು |
ಅಮ್ಮ ಕೈಕಸೆಗಾಗಿ | ಒಮ್ಮೆ ಸೈರಿಸಿದೆ || ||೩೧||

ಅಮಮ ಸಗರಾನ್ವಯನ | ಮಮಕಾರವುಳ್ಳಾತ |
ನಮಗೆ ಬುದ್ಧಿಯ ಸಾರ | ಲಿವನೆಷ್ಟರವನು || ||೩೨||

ಜೋಡಾಗಿ ಜನಿಸಿರ್ದ | ಜಾಣ್ಮೆಗಳ ಬಗೆ ಬೇರೆ |
ಹೇಡಿತನದುದಯ ಕೈ | ಗೂಡಿತನುಜನಿಗೆ || ||೩೩||

ಆ ಕಪಿಗಳುಗ್ರಭಯ | ಸೋಕಿತೀ ಪಿಸುಣನಿಗೆ |
ಈ ಕುಟಿಲತನ ಬೇಡ | ಸಾಕು ನಡೆ ಗಾಢ || ||೩೪||

ಗಂಡುಸಲ್ಲವರ ಭಯ | ಗೊಂಡೆಯಾದರೆ ನಿನ್ನ |
ಹೆಂಡತಿಯ ಕೊಟ್ಟು ಬೀ | ಳ್ಕೊಂಡು ಬಾ ಮನೆಗೆ || ||೩೫||

ನಿಷ್ಠೂರಗಳ ಮಾತ | ನೀನೊಂದನಾಡಿದರೆ |
ಪೆಟ್ಟಾಗದಿರದಿನ್ನು | ಒಡೆದಪುದು ಬೆನ್ನು || ||೩೬||

ಬಂಟತನ ಮರ್ಯಾದೆ | ಜಾಣ್ಮೆಗಳ ಬಗೆ ಬೇರೆ |
ಶುಂಠರಿಗೆ ದೊರಕುವುದೆ | ಶೂರತನದೊಸಗೆ || ||೩೭||

ಇಂದ್ರಜಿತು ನಿನ್ನ ಕಿರಿ | ತಂದೆಯಾಡಿದ ಮಾತು |
ಬಂದುದೇ ಮನಕೆ ಪೇ | ಳೆಂದು ಬೆಸಗೊಂಡ || ||೩೮||

**ರಾಗ ಪಂತುವರಾಳಿ ರೂಪಕತಾಳ**

ತಂದೆ ಕೇಳೈ ಪರಸತಿಯರ ವಂಚಿಸಿ |
ತಂದುದನ್ಯಾಯ ರಾಜಸಕೆ ||
ಮುಂದಿನ್ನು ಬೆದರುತ್ತ ಬಿಟ್ಟೆವಾದರೆ ನಮ್ಮ |
ನಿಂದಿಸುವರು ಲೋಕದೊಳಗೆ || ||೩೯||

ಸಿಂಧುವನುತ್ತರಿಸುವಡೆ ಕೂಡದು ಬಲ |
ಬಂದರೆ ಬರಲಿ ರಾಘವನ ||
ತಂದೆಯ ತಂದೆಗಸಾಧ್ಯ ಜಾನಕಿಯನ್ನು |
ಹಿಂದಕ್ಕೆ ಒಯ್ಯುದಂತಿರಲಿ || ||೪೦||

ಹಿರಿದಾದ ವನವ ಸಂಚರಿಸುವ ಕಪಿಗಳ |
ಕರಕೊಂಡು ಬಂದು ರಾಕ್ಷಸರ ||
ಧುರದೊಳೆಚ್ಚಾಡಿ ಸೋಲಿಸುವನೆಂಬಾ ಮಾತಂ |
ತಿರಲಿ ಏ ಚಿಕ್ಕಯ್ಯನವರೆ || ||೪೧||

ಎಂದಾ ಪೌರುಷದ ಮಾತನು ಕೇಳಿ ಭುಗಿ ಭುಗಿ |
ಲೆಂದು ಕೋಪಿಸಿ ವಿಭೀಷಣನು ||
ಹಿಂದೊಂದು ಕಪಿ ನಡೆತಂದಾಗೋಡಿಸಿದಂಥ |
ಕಂದ ನೀನಲ್ಲದಿನ್ನಾರು || ||೪೨||

ಅಣ್ಣ ಕೇಳೀತಗಳೆಂದ ಮಾತಿನ ಮೇಲೆ |
ಮಣ್ಣ ಕೂಡುವ ಪಂತಿ ನಮಗೆ ||
ಹೆಣ್ಣು ಸಿಕ್ಕುವಡಲ್ಲ ಬಯಲಭ್ರಾಂತುಗಳಿಂದ |
ಉಣ್ಣದುರಿಯಬೇಡ ಬರಿದೆ || ||೪೩||

ಜನಕನ ನಗರದೊಳಾದವಮಾನವ ||
ಮನಸಿಲಿಕ್ಕದೆಹೋದೆ ಹಿಂದೆ ||
ಘನ ಕುಂಭಕುಚ ಮೂಗ ಕೊಯ್ಸಿಕೊಂಡಂಥ ಶೂ |
ರ್ಪಣಖೆ ಏನಾದಳೆಂದರಿಯ || ||೪೪||

ಅಲ್ಪದಾನವರೆ ದೂಷಣ ಖರ ತ್ರಿಶಿರರು |
ಸ್ವಲ್ಪನೆ ಮಾವ ಮಾರೀಚ ||
ಅಪ್ರಯೋಜಕನಾಗಿ ಕೆಡಬೇಡ ಸೀತೆಯ |
ನೊಪ್ಪಿಸಿಕೊಡು ಬಾ ರಾಮನಿಗೆ || ||೪೫||

ಒಟ್ಟಾದ ಕಪಿಗಳು ಮೃಗವೆಂದು ನಂಬಿ ನೀ |
ಕೆಟ್ಟೆ ನಾ ಸಾರಿ ಹೇಳಿದೆನು ||
ಕಟ್ಟಾಳುತನವಿದು ಸಮಯ ಜಾನಕಿಯನ್ನು |
ಕೊಟ್ಟು ಬಾ ರಾಮಚಂದ್ರನಿಗೆ || ||೪೬||

ಸ್ವಲ್ಪಕಾರ್ಯಕ್ಕಾಗಿ ಸುಮ್ಮನೆ ತ್ರೈಜಗ |
ದಪ್ಪ ರಾಮನೊಳೇಕೆ ಕಲಹ ||
ತಪ್ಪಾಯಿತೆಂದರೆ ತರಣಿವಂಶಜರಿಗೆ |
ಒಪ್ಪುಕೊಂಬುದು ವಂಶ ಬಿರುದು || ||೪೭||

ಪರನಾರಿಗಳುಪಿದ ಪಾತಕಿಗಳ ಭೂಮಿ |
ಹೊರದು ಎಂಬುದು ವೇದ ಸಿದ್ಧ ||
ನರಕದೊಳಿಳುಹುವರಲ್ಲಿ ಎಂಬುದನು ನೀ |
ನರಿತು ಜಾನಕಿಯನ್ನು ಕಳುಹೋ || ||೪೮||

ನಿನಗೆ ನಾಚಿಕೆಯಾದರೆನಗಾದರರುಹಯ್ಯ |
ವನದೊಳಿದ್ದವಳ ಕೊಂಡೊಯ್ದು ||
ಇನಕುಲಾಧಿಪಗಿತ್ತು ಈಗ ನಮ್ಮೊಳು ಮನ |
ಮುನಿಸಿಲ್ಲದಂತೆ ಮಾಡುವೆನು || ||೪೯||

**ಭಾಮಿನಿ**

ಸಾಕು ಸಾಕೀ ಸಭೆಯೊಳಗೆ ಕುಳಿ |
ತೀ ಕುಟಿಲತನವೆಂಬ ಕಪಿಗ್ರಹ
ಸೋಕಿದೀ ಚಂಡಾಲಹೇಡಿಯ ನೂಕಿರೆಂದೆನಲು ||
ನೂಕಲೇತಕೆ ಚರರು ನಾವೇ |
ನೂಕಿಕೊಂಬೆವೆನುತ್ತ ಕಂಗಳ |
ಲೌಕಿದುದಕದ ಶರಣ ಬಂದನು ಮಾತೆಯಿದ್ದಡೆಗೆ || ||೫೦||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ಅಮ್ಮ ಕೇಳಣ್ಣನ ದೆಸೆಯಿಂದ ಖಳವಂಶ |
ನಿರ್ಮೂಲವಹ ದಿನ ಬಂತು ||
ಸುಮ್ಮನೆ ಮಧುಬಿಂದು ಕಲಹ ಬೇಡೆಂದರೆ |
ಧರ್ಮಕ್ಕೆ ಮನಸೊಡಂಬಡದು || ||೫೧||

ಸಾಕ್ಷಾತ್ ಹರಿ ರಾಮಚಂದ್ರ ಜಾನಕಿ ಮಹಾ |
ಲಕ್ಷ್ಮೀ ದೇವಿಯೆಂಬುದರಿತು ||
ರಾಕ್ಷಸಾರಿಯ ಕೂಡೆ ಕಲಹ ಬೇಡೆಂದರು |
ಪೇಕ್ಷಿಸಿ ಕಳೆದ ವಾಕ್ಯಗಳ || ||೫೨||

ನಗರವ ಸುಟ್ಟಂಥ ಮೊಗವುಳ್ಳ ಕಪಿಗಳು |
ಅಗಣಿತವಾಗಿ ಕೂಡಿಹವು ||
ಜಗದ ದೈವದಕೂಡೆ ಕಲಹ ಬೇಡೆಂದರೆ |
ಜಗಳಕ್ಕೊಡ್ಡಿಹನು ಮಾರ್ಬಲವ || ||೫೩||

ಇದಿರಾಗಿ ರಾಮಬಾಣದಲಿ ಸಾವುದರಿಂದ |
ಮೊದಲಾಗಿ ಪೋಪೆ ರಾಘವನ ||
ಪದಕಮಲವ ಸೇರಿ ಪಡೆದು ಕಾರುಣ್ಯವ |
ಬದುಕುವೆ ಪಾಲಿಸಪ್ಪಣೆಯ || ||೫೪||

ಇಂತೆಂಬ ಮಗನ ಮಾತಿಗೆ ಕೈಕಸಾದೇವಿ |
ಸಂತಾಪ ಒಡಲೊಳುಪ್ಪಿರಿದು ||
ಅಂತರಂಗದಿ ಬಂದು ದಶಕಂಠನಿದಿರಲಿ |
ನಿಂತುಕೊಂಡಬಲೆ ಪೇಳಿದಳು || ||೫೫||

**ರಾಗ ಶಂಕರಾಭರಣ ತ್ರಿವುಡೆತಾಳ**

ಕಂದ ನಿನಗೀ ಕುಟಿಲತನಗಳು |
ಬಂದುದೇಕೆ ಸೀತೆಯ |
ತಂದು ಕುಲಕಪಕೀರ್ತಿ ನಮ್ಮನು | ಹೊಂದಿದುದಕೆ || ||೫೬||

ಬಿಟ್ಟುಕೊಡು ಜಾನಕಿಯನೆಂದರೆ |
ಸಿಟ್ಟು ಮಾಡಿ ತಮ್ಮನ |
ಕಷ್ಟದಲಿ ಕಳುಹುವರೆ ನಾನಿ | ದ್ದಷ್ಟು ದಿನಕೆ || ||೫೭||

ಪರರ ಸತಿಯನು ಬಯಸುವಾತನೆ |
ಭಾಗ್ಯಹೀನನು ದೈವದ |
ಕರುಣೆ ತಪ್ಪದೆ ಮಾಣದನಿತರ | ಹೊರದು ಭೂಮಿ || ||೫೮||

ಬಾಹದಕೆ ಮೊದಲಾಗಿ ಸೀತೆಯ |
ಕಳುಹಿಕೊಟ್ಟು ರಾಮನ |
ಸ್ನೇಹದಲಿ ಸುಖ ಬಾಳು ತಮ್ಮನ | ಕೂಡಿಕೊಂಡು || ||೫೯||

**ವಾರ್ಧಕ**

ಕ್ಷಿತಿಜೆಯನು ಬಿಡಹೇಳ್ದ ಜನನಿಯಾ ನುಡಿಗೆ ಖಳ
ಖತಿಗೊಳಲು, ತನ್ನ ಪೂರ್ವದ ಮಂತ್ರಿಗಳು ಸಹಿತ
ರಥವೇರಿ ಮುಂದಪ್ಪ ಕಾರಣಂಗಳ ತಿಳಿದು ವರವಿಭೀಷಣದೇವನು ||
ರಥವಿಡಿದು ಭಾನುಮಾರ್ಗವನಡರುತಗ್ರಜನ |
ಜೊತೆಯ ಬಿಡಲಾರದಣ್ಣನ ದೂರದಿಂ ಕರೆದು
ಅತಿವಿವೇಕದ ಮಾತ ಕಡೆಗೊಂದನೆಂಬೆ ಕೋಪಿತನಾದಡಾಗಲೆಂದ || ||೬೦||

**ರಾಗ ಸೌರಾಷ್ಟ್ರ ಅಷ್ಟತಾಳ**

ಕಂಡದ್ದು ನುಡಿದರೆ ಕೋಪ ವೆಗ್ಗಳಿಸುವ |
ದಣ್ಣದೇವ | ತನ್ನ |
ಮಂಡೆ ಘಟ್ಟೆನುತಲಿ ಮರಕೆ ಜೆಪ್ಪುವದುಂಟೆ |
ಅಣ್ಣದೇವ || ||೬೧||

ರೋಗಿಗೆ ಮದ್ದು ಬಾಯಿಗೆ ಸೊಗಸಪ್ಪುದೆ
ಅಣ್ಣದೇವ | ನಿನ |
ಗೀಗೆನ್ನ ನುಡಿ ವಿಷವಾಗಿ ಸಂಭವಿಸಿತೆ |
ಅಣ್ಣದೇವ || ||೬೨||

ಎಚ್ಚರಿತಿರುವರೆ ಸಮಯ ಬಂದೊದಗಿದೆ |
ಅಣ್ಣದೇವ | ಇಂಥ |
ಹುಚ್ಚು ಬುದ್ಧಿಯಲಿ ನೀ ಸಂದು ತಾ ಕೆಡಬೇಡ |
ಅಣ್ಣದೇವ || ||೬೩||

ಅಪ್ಪಡೆ ನಿನಗೆ ನಾಚಿಕೆಯೆನಗರುಹಯ್ಯ |
ಅಣ್ಣದೇವ | ನಾ ಕೊಂ |
ಡೊಪ್ಪಿಸಿಬರುವೆ ರಾಮನಿಗೆ ಜಾನಕಿಯನ್ನು |
ಅಣ್ಣದೇವ || ||೬೪||

ಧೂರ್ತರ ಮತ ನಿನಗಾಯ್ತೆಷ್ಟ ಪೇಳ್ದರೂ |
ಅಣ್ಣದೇವ | ಪುರು |
ಷಾರ್ಥವಿವಿಲ್ಲದೆ ವಂಶಕೆ ನೀರ ಕೊಡಿಸಿದೆ |
ಅಣ್ಣದೇವ || ||೬೫||

ದಾಶರಥಿಯ ಕೂಡೆ ಕಲಹ ಬೇಡೆಂದರೆ |
ಅಣ್ಣದೇವ | ವಿ |
ನಾಶಕಾಲಕೆ ಬುದ್ಧಿ ವಿಪರೀತವಾಯಿತೆ |
ಅಣ್ಣದೇವ || | | ೬೬||

ಲೇಸು ಬಾರದು ನಿನಗಿದರಿಂದ ತಿಳಿದುಕೊ |
ಅಣ್ಣದೇವ | ಬೇಡ |
ನಾ ಸಾರಿದೆ ಗಂಟ ಕಟ್ಟಿಕೊ ಸೆರಗಿಲಿ |
ಅಣ್ಣದೇವ || ||೬೭||

**ವಾರ್ಧಕ**

ಕೂಗಿ ಗಗನದೊಳು ನಿಂದಗ್ರಜಗೆ ನೀತಿಯಂ
ಬೇಗದಲಿ ಪೇಳೆ ಖಳನಾಜ್ಞೆಯಿಂ ಪಟುಭಟರು
ತಾಗಿದರು ಖಡ್ಗ ತೋಮರ ಕುಂತ ಮೊದಲಾದ ನಾನಾವಿಧಾಸ್ತ್ರಗಳಲಿ |
ಭಾಗವತಜನಪರುಷ ಬಲುಭಟರ ನುಗ್ಗರೆದು
ಸಾಗರವನುತ್ತರಿಸಿ ಕಪಿಸೈನ್ಯಮಂ ಕಂಡು
ರಾಘವ ಪರಾಕು ಜಯ ಚಿತ್ತಾವಧಾನವೆಂಬಾಗ ರಥವಂ ಕಂಡರು || ||೬೮||

**ರಾಗ ಕಾಂಭೋಜಿ ಝಂಪೆತಾಳ**

ಆರಿವನು ಗಗನದಲಿ ಕೈ ಮುಗಿದು ನುತಿಗೆಯ್ವ |
ಶ್ರೀರಾಮ ಶರಣೆಂಬ ಶರಣ ||
ಮಾರುತಜ ನೀ ಹೋಗಿ ನೋಡಿ ಬಾರೆಂದೆನುತ |
ವೀರ ಸುಗ್ರೀವ ಕಳುಹಿದನು || ||೬೯||

ಬಂದು ಮಾತಾಡಿಸಿದ ನಾ ವಿಭೀಷಣನ ದಶ |
ಕಂಧರನ ಕಲಹಕಾರಣವ ||
ಹೊಂದಿಕೆಯ ತಿಳಿದು ರಘುಪತಿಗೆ ಸೂಚನೆಗೈಯ |
ಲಂದು ಪೊಡಮಡುತ ನಡೆತಂದ || ||೭೦||

**ರಾಗ ಭೈರವಿ ತ್ರಿವುಡೆತಾಳ**

ರಾಮ ರಾಮ | ದಶರಥ | ರಾಮ ರಾಮ || ಪಲ್ಲವಿ ||

ಕಾಮಪಿತಕಮಲಾಕ್ಷಸಾಗರ | ಭೀಮಬಲ ನಿಸ್ಸೀಮ ಸೀತಾ || ರಾಮ || ಅನುಪಲ್ಲವಿ ||

ವೀರವಿತರಣ ವಿಜಯ ಸದ್ಗುಣ
ಸಾರವರ ಕೇಯೂರಕಂಕಣ |
ಹಾರ ಶರಧಿಗಭೀರ ಖಳಸಂ |
ಹಾರ ಮತಿವಿಸ್ತಾರ ನತಮಂ |
ದಾರ ಶಾಸ್ತ್ರವಿಚಾರ ಧರ್ಮೋ |
ದ್ಧಾರ ನಿಗಮವಿದೂರ ನಿತ್ಯವಿ |
ಚಾರ ಶುಭದಯಸಾರ ಪಾರಾ |
ವಾರ ಕರುಣಾಪಾರ ಶ್ರೀ ರಘು | ರಾಮ ರಾಮ || ||೭೧||

ತಂದೆಯಾಡಿದ ಮಾತಿಗೋಸುಗ |
ಬಂದೆ ಪಂಚವಟಿಪ್ರದೇಶದಿ |
ನಿಂದೆ ಖರದೂಷಣರ ರಣದಲಿ |
ಕೊಂದೆ ಮಾಯಾಹರಿಣವನು ಎಸೆ |
ದಂದೆ ಸೀತೆಯನೊಯ್ದ ರಾವಣ |
ನೆಂದು ಬಿನ್ನೈಸಿದ ಜಟಾಯುವ |
ನಂದು ಕಾಯ್ದ ಮಹಾತ್ಮನಾ ನಡೆ |
ತಂದೆ ಸಲಹೊ ಪರಾಕು ಜಯಜಯ || ರಾಮ ರಾಮ || ||೭೨||

**ಭಾಮಿನಿ**

ಫಣಿಶಯನ ಪರಮಾತ್ಮ ಮಾಧವ
ತ್ರಿಣಯಸಖ ತ್ರೈಜಗದ ರಕ್ಷಕ
ಪ್ರಣವರೂಪ ಪರೇಶ ನಾರಾಯಣ ನಮೋಯೆಂದು |
ಮಣಿಯುತ್ತೈತಹ ಮಂತ್ರಿಗಳಸಹ
ವನಜಲೋಚನ ಕಾಣುತಲೆ ಲ
ಕ್ಷ್ಮಣನ ನೋಡಲು ಕರವ ಮುಗಿದಾ ಹನುಮನಿಂತೆಂದ || || ೭೩||

**ರಾಗ ಎರುಕಲ ಕಾಂಭೋಜಿ ಅಷ್ಟತಾಳ**

ದೇವ ಚಿತ್ತೈಸಯ್ಯ ಬಂದ ರಾಕ್ಷಸನೀತ |
ರಾವಣನ ಸಹಜಾತ | ಸಜ್ಜನರೊಳು |
ಕೋವಿದನತಿ ಪ್ರಖ್ಯಾತ || ||೭೪||

ಇಂದ್ರಜಿತನು ಕಟ್ಟಿ ತಂದಾಗಳಿವನ ಮಾ |
ತಿಂದ ಬಿಟ್ಟರು ಎನ್ನನು | ಬಲ್ಲವನೀತ |
ಮುಂದಹ ಕಾರ್ಯವನು || ||೭೫||

ಸೀತೆಯ ಬಿಡುಯೆಂಬ ಮಾತ ಹೇಳಿದನೆಂದು |
ಈತನ ಜರೆದನಂತೆ | ಪಟ್ಟಣದಿಂದ |
ಆತ ನೂಕಿಸಿದನಂತೆ || ||೭೬||

ಕಾರಣಗಳನು ತಿಳಿದು ಮುಂದೆ ಬಪ್ಪಂಥ |
ಮಾರಿಗೆ ಬೆದರಿ ತಾನು | ತನ್ನಯ ಮನ |
ಸೇರದಿಲ್ಲಿಗೆ ಬಂದನು || ||೭೭||

ಸಾರಿ ಪದಾಂಬುಜ ಸೇರಿ ಬದುಕಬಂದ |
ವೀರ ವಿಭೀಷಣನು | ಇವ ಪೂರ್ವದ |
ನಾಲ್ವರು ಮಂತ್ರಿಗಳಂತೆ || ||೭೮||

**ರಾಗ ಬೇಗಡೆ ಅಷ್ಟತಾಳ**

ನಚ್ಚ ಬಾರದೀತನಂತರಂಗವ ಕೇಳಿ |
ಆಶ್ಚರ್ಯವಾಯಿತು ನಮಗೆಲ್ಲ ||
ಹುಚ್ಚು ಮಾತಣ್ಣತಮ್ಮಂದ್ಯರು ಎಂಬಂಥ |
ವಾತ್ಸಲ್ಯವನು ಬಿಟ್ಟು ವೈರತ್ವವೆಂಬುದ || ||೭೯||

ದೇವೇಂದ್ರ ಮೊದಲಾದ ದೇವತೆಗಳು ನಿತ್ಯ |
ಸೇವೆಯಮಾಡಿಕೊಂಡಿಹರಂತೆ ||
ಜೀವವೊಂದೊಡಲೆರಡೆಂಬ ತನ್ನಗ್ರಜ |
ರಾವಣೇಶನ ಸೌಭಾಗ್ಯವ ಬಿಟ್ಟು ಬಂದುದ || ||೮೦||

ತಂದೆಯೊಬ್ಬ ತಾಯೊಬ್ಬಳಿಗೆ ಪುಟ್ಟಿದ ಮೇಲೆ |
ಬಂದು ವೈರಗಳಲ್ಲಿ ಬಾಳ್ವದು ||
ಹೊಂದಿಕೆ ಹೊಲಬಿನ ಮಾತಲ್ಲ ಹೊಸಪರಿ |
ಎಂದಿನಸುತ ವಾಯುನಂದನಗೆನಲೆಂದ || ||೮೧||

ಹಿಂದುದ್ಯಾನದಿಂದ ಹಿಡಿದು ಕಟ್ಟೈಳಕೊಂಡು |
ಬಂದೆನ್ನ ಸಭೆಯಲ್ಲಿ ಕೊಲುವಾಗ ||

ಬಂದು ಸುಜ್ಞಾನವ ಮಾತಾಡಿದನೀತ
ನೆಂದರೆ ಹನುಮನ ನುಡಿಗೊಡಂಬಡೆ ರಾಮ || ||೮೨||

**ರಾಗ ಘಂಟಾರವ ಝಂಪೆತಾಳ**

ಕಪಿರಾಯ ಕೇಳು ಕೈಮುಗಿದು ಮರೆಹೊಕ್ಕವರು |
ಕಪಟದವರಾದರೂ ಕಾವುದೇ ಬಿರುದು || ||೮೩||

ಜನನಿಯೊಂದಾದರೆಯು ಮನಸಿನಂತರ ಬೇರೆ |
ಕನಕವೊಂದಾದರೆಯು ಕಾಂಚನವು ಬೇರೆ || ||೮೪||

ಏಕಮೃತ್ಪಿಂಡದೊಳನೇಕ ಪಾತ್ರೆಗಳಹವು |
ಲೋಕೇಶ ಬರೆದ ಲಿಪಿ ತಾ ಕಡಿಮೆಯಹುದು || ||೮೫||

ಪ್ರಾರಬ್ಧ ಶೇಷಮತಿ ಪಡೆದ ಹಾಗೊದಗುವುದು |
ಕೇಳಿದರೆ ನಿನ್ನಣ್ಣ ವಾಲಿಯೇ ಸಾಕ್ಷಿ || ||೮೬||

**ವಾರ್ಧಕ**

ಶಿರವ ಪಿಡಿದೆತ್ತಿ ಪತಿಕರಿಸಿ ಲಂಕಾಪುರದ
ಅರಸ ರಾವಣನಿಂದ ಮೇಲೀತನೆಂದು ಸ
ರ್ವರ ಮುಂದೆ ಪಟ್ಟಾಭಿಷೇಕಮಂ ಮಾಡಿಸಿದ ವರವಿಭೀಷಣದೇವಗೆ |
ಸುರರ ದುಂದುಭಿ ಮೊಳಗಿತಾಗ ಜಯಜಯವೆಂದು
ಸುರಿದರಂಬರದಿಂದ ಪೂಮಳೆಯ ರಾಮ ಸಾ
ಗರದ ತಡಿಯಲಿ ನಿಂದು ಸಕಲಕಪಿನಾಯಕರ ಕರೆದಾಗಳಿಂತೆಂದನು || ||೮೭||

**ರಾಗ ಸೌರಾಷ್ಟ್ರ ಅಷ್ಟತಾಳ**

ಕಂಡಿರೆ ಶರಧಿಯ ಗಂಭೀರತನವನು |
ಕಂಡಿರೇನೈ | ನಭೋ |
ಮಂಡಲ ಪರ್ಯಂತ ತುಡುಕುವ ತೆರೆಗಳ |
ಕಂಡಿರೇನೈ || ||೮೮||

ಭೋರೆಂಬ ನಾದ ಝೇಂಕಾರ ನೀರ್ಸುಳಿಗಳ |
ಕಂಡಿರೇನೈ | ಮದ |

ವಾರಣದಂತೆ ಮುಂಬರಿದು ಘೋರ್ಗರೆವುದು |
ಕಂಡಿರೇನೈ || ||೮೯||

ಕಳವಳಿಸುವ ಬಲು ಸುಳಿಗಳನೊರೆಗಳ |
ಕಂಡಿರೇನೈ | ಭಯ |
ಗಳ ಬೀರುವಂಥ ಜೀವನದ ಚಡಾಳವ |
ಕಂಡಿರೇನೈ || ||೯೦||

ಪಂಕ್ತಿ ಪಂಕ್ತಿಗಳಿಂದ ಪಾರ್ವ ಮೀನುಗಳನ್ನು |
ಕಂಡಿರೇನೈ | ಬಲ |
ವಂತವಾಗಿರುವಂಥ ಮಕರದ ನಿಕರವ |
ಕಂಡಿರೇನೈ || ||೯೧||

ಸಾಗರ ಬಲಿದು ಹೆಚ್ಚಾಗಿ ಲಂಘಿಸುವುದ |
ಕಂಡಿರೇನೈ | ಇದ |
ಹೇಗೆ ದಾಟುವುದೆಂದು ನನಗೊಂದು ತಿಳಿಯದು |
ಕಂಡಿರೇನೈ || ||೯೨||

**ಚರಿತೆ, ರಾಗ ಪಂತುವರಾಳಿ ರೂಪಕತಾಳ**

ದಿನಕರ ಕುಲಜಾತನಿಂತೆಂದ ಮಾತಿಗೆ |
ದಿನಕರ ತನುಜ ಬೊಬ್ಬಿರಿದ ||
ವನಧಿಯ ಕಡಿದು ದಾರಿಯ ಮಾಳ್ಪೆ ಲಂಕೆಗೆಂ |
ದೆನುತ ಕಣ್ಣಲಿ ಕಿಡಿಗರೆದ || ||೯೩||

ಸೀಳುವದೇತಕಂಬುಧಿಯನ್ನು ಲಂಕೆಗೆ |
ಪಾಳೆಯ ನಡೆವದಿನ್ನೇಕೆ ||
ಬಾಲವ ಕಳುಹಿ ರಾವಣನ ತರುವೆನೆಂದು |
ನೀಲ ಕೈಮುಗಿದ ರಾಮನಿಗೆ || ||೯೪||

ಎಳೆದು ತರುವುದೇನು ದೊಡ್ಡಿತೈ ದನುಜನ |
ಬಲವೆಲ್ಲ ಲಂಕೆಯ ಸಹಿತ ||
ಇಳುಹುವೆ ಕಣ್ಣಮುಂದೆನುತ ಗವಾಕ್ಷನಂ |
ದಿಳಿಯೆ ಸುಗ್ರೀವ ಬೋಧಿಸಿದ || ||೯೫||

ಪುರವೊಂದ ತರುವುದು ಹೆಚ್ಚೆ ಬ್ರಹ್ಮಾಂಡಖ |
ರ್ಪರವನ್ನೇ ತರುವೆನೀಕ್ಷಣದಿ ||
ಹರಿಹರ ಬ್ರಹ್ಮಾದಿಗಳ ತಂದು ಕಣ್ಣಮುಂ |
ದಿರಿಸುವನೆಂದನಂಗದನು || ||೯೭||

ಜಾಂಬವಾದಿಗಳು ಮಿಕ್ಕವರೆಲ್ಲರೊಂದೊಂದು |
ಸಂಭ್ರಮಗಳ ಮಾತಾಡಿದರೆ ||
ಕುಂಭಕರ್ಣನ ತಮ್ಮ ನೀ ಹೇಳೆಂದೆನಲು ಪ |
ದಾಂಬುಜ ಕೆರಗುತಿಂತೆಂದ || ||೯೭||

**ರಾಗ ಸುರುಟಿ ಏಕತಾಳ**

ಸರ್ವೋತ್ತಮ ನೀನು | ಪ್ರಪಂಚವ |
ನರಿಯದ ಬಗೆಯೇನು || ಪಲ್ಲವಿ ||

ಮಾಡುವ ತಪಗಳನು | ಸಮುದ್ರನ |
ಬೇಡುವ ದಾರಿಯನು ||
ನೋಡುವ ಗುಣಗಳನು | ನಮ್ಮನಸಡ್ಡೆ |
ಮಾಡುವ ಪರಿಗಳನು || ||೯೮||

ಉಗುರಲಿ ಸೀಳ್ವುದಕೆ | ಕೊಡಲಿಯ |
ತೆಗೆದುಕೊಳ್ಳವದೇಕೆ ||
ಮಿಗುವರಿದರೆ ವರುಣ | ನೋಡುವ ಮೇಲಾ |
ತಗೆ ಮಾಡುವ ತೆರನ || ||೯೯||

**ರಾಗ ಪುನ್ನಾಗ (ತೋಡಿ) ವರಾಳಿ ಏಕತಾಳ**

ಶರಣನೆಂದ ಮಾತ ಕೇಳಿ | ಸರಿಯೆಂದರವರೆಲ್ಲ |
ಶರಧಿರಾಜನೊಡನೆ ಬಟ್ಟೆ | ಕೇಳ್ವುದೆಂಬ ಸೊಲ್ಲ || ಪಲ್ಲವಿ ||

ಬಂದು ಶೋಧಿಸಿ ಸುಸ್ಥಳವ | ಮಿಂದು ಮಡಿಯನುಟ್ಟು |
ಚಂದದಿಂದ ಹಣೆಗೆ ಗೋಪೀ | ಚಂದನವನಿಟ್ಟು ||
ಒಂದೊಂದು ತುಳಸಿಯ ಸರವ | ನಂದು ಕೊರಳಿಗಿಟ್ಟು |
ಸಿಂಧುರಾಜ ಕರುಣಿಸು ಶರ | ಣೆಂದು ಪೊಡಮಟ್ಟು || ||೧೦೦||

ಅಷ್ಟ ಮದಂಗಳ ಬಾಯ | ಕಟ್ಟಿ ಮನವ ಸೆಳೆದು |
ಕಟ್ಟುವದಾರವರ ಸೆರೆಯ | ಬಿಟ್ಟು ಮುಂದೆ ಕಳೆದು ||

ಇಷ್ಟವಾದ ಮೂವರೆಡೆಯ | ಕಟ್ಟಿ ಹೊಳೆಹೊಳೆದು |
ಶ್ರೇಷ್ಠವಾದ ಸೂರ್ಯನೆಡೆಗೆ | ಮುಟ್ಟುವಂತೆ ನಲಿದು || ||೧೦೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕುಶನೆ ಕೇಳೊಲಿದಿತ್ತಲಾ ರಾ |
ಕ್ಷಸಶಿರೋಮಣಿ ಕಳುಹೆ ಬೇಹಿಗೆ |
ಕುಶಲದಲಿ ನಡೆತಂದು ಪಾಳ್ಯದೊ | ಳೊಸೆಯುತಿರ್ದ || ||೧೦೨||

ಹಸನವೆಲ್ಲವ ತಿಳಿದು ಬಳಿಕಾ |
ಗಸಕೆ ಚಿಗಿಯಲು ಗಿಳಿಯ ಪಿಡಿದಾ |
ಹಸುರ ರೆಂಕೆಯ ಮುರಿದು ಸೆರೆಯಲಿ | ಪಸರಿಸಿದರು || ||೧೦೩||

ಅತ್ತ ರಾಘವ ನಾಲ್ಕುದಿನ ತಾ |
ಚಿತ್ತದಲಿ ಧ್ಯಾನಿಸೆ ಸಮುದ್ರನು |
ಮತ್ತನಾಗಿರೆ ರೋಷಮಯ ತಲೆ | ಯೆತ್ತಿತಾಗ || ||೧೦೪||

**ವಾರ್ಧಕ**

ಸೆಳೆದು ಲಕ್ಷ್ಮಣನ ಕೈಯಿಂದ ಧನು ಶರವದಕೆ
ಪ್ರಳಯಕಾಲದ ರುದ್ರನಂತೆ ಕ್ರೋಧಾಗ್ನಿಯಂ
ಒಲಿದು ವಾಹಿಸಿ ವರುಣನಿರವ ಕಳೆಯೆನಲು ತಲ್ಲಣಿಸಿತೀರೇಳು ಲೋಕ |
ಜಲನಿಧಿಯು ಬತ್ತಿತಲ್ಲಿರುವ ಜಂತುಗಳು ತಳ |
ಮಳಿಸಿದವು ರತ್ನಗಳು ಕರಗಿದುರಿಹಾರಿದವು |
ಭರದಿ ವರುಣನ ತಗುಲಿದಂಬುಜಾಕ್ಷಿಯರರಿತು ಬಲುಬೇಗ ನಡೆತಂದರು || ||೧೦೫||

**ರಾಗ ಘಂಟಾರವ ಅಷ್ಟತಾಳ**

ಚಂದವೇ ರಾಮಚಂದ್ರ ಅಯ್ಯಯ್ಯೋ |
ಇಂದು ಕೆಂಡದಿಂದ ಗಂಡ | ಬೆಂದ ಬೇಗ ನಿವಾರಿಸೋ || ||೧೦೬||

ಪಾಲಿಸೋ ಕರ್ಣದೋಲೆ ಮೂಗುತಿಯನ್ನು |
ಕೋಲ ಕಿಚ್ಚು ಛಡಾಳ ಹೆಚ್ಚು | ಆಲಯಗಳು ಸುಡುತಿವೆ || ||೧೦೭||

ತಂದೆಯಲ್ಲವೆ ಎಮಗೆ ನೀ ಮನ್ನಿಸಿ |
ಮಂದಮತಿಯಾದೆಮ್ಮ ಪತಿಯ ಯಿ | ದೊಂದು ತಪ್ಪನು ಪಾಲಿಸೋ || ||೧೦೮||

ಮಂಗಳಾಕರ ಮಾಧವನ ಮಹಿಮ ಭು |
ಜಂಗಶಾಯೀ ರಂಗದೇವೋ | ತ್ತುಂಗ ಕರುಣಾಪಾಂಗನೇ || ||೧೦೯||

ಗಂಗೆ ಗೌತಮಿ ಗಂಡಕಿ ಕೌಮೋದಿ |
ತುಂಗಭದ್ರೇ ಮಂಗಳಾದ್ರೇ | ಕಂಗಳಿಂದಭಿವಂದಿಸೇ || ||೧೧೦||

ರಾಮ ರಾಜೀವನೇತ್ರ ಸದಾನಂದ |
ಸೋಮ ಸದ್ಗುಣಧಾಮ ನಿರುಪಮ | ಕಾಮಿತಾ ಫಲದಾಯಕ || ||೧೧೧||

**ಭಾಮಿನಿ**

ಮಡದಿಯರು ಬಾಯ್ಬಿಡುತ ಹರಿಪದ
ದೆಡೆಗೆ ನಮಿಸಿ ಸಮುದ್ರರಾಜನ
ತೊಡರ ಪರಿಹರಿಸೆಂದು ಕಪಿನಾಯಕರು ಮುಂತಾಗಿ |
ಒಡನೊಡನೆ ಕೈಮುಗಿದು ಬಿನ್ನಹ
ಗೊಡಲು ಮಾರ್ಗಣದುರಿಯ ನಂದಿಸಿ |
ಕಡಲಧಿಪಗಭಯವನು ಕರುಣಿಸಿಕೊಡುತಲಿಂತೆಂದ || ||೧೧೨||

**ರಾಗ ನವರೋಜು ಏಕತಾಳ**

ಪದುಮದಳಾಂಬಕಿಯರಿರ | ಪತಿಭಕ್ತಿಯುಳ್ಳರಿರ ||
ಸದರವ ಮಾಡಲು ಪಾಪ | ಅದ | ಕಾಗಿ ಬಿಟ್ಟೆವು ಕೋಪ || ||೧೧೩||

ತಾನೇ ಬಾರನು ಎಂದು | ತಪಗಳ ಮಾಡಿದೆವಿಂದು ||
ಏನೇನಾದರು ವರುಣ | ಗಿಲ್ಲದಾಯಿತು ಕರುಣ || ||೧೧೪||

ಕಾರಿಯವುಂಟೆಮಗವನ | ಕರೆತನ್ನಿ ರತ್ನಾಕರನ ||
ಮೋರೆಯ ನೋಡುವೆನೆನಲು | ನಾರಿಯರಾಕ್ಷಣ ಬರಲು || ||೧೧೫||

ವರುಣನ ಬೇಗದಿ ಕರೆದು | ಚರಣವ ಕಾಣಿಸಲರಿದು ||
ಇರಿಸಿದ ಕಾಣಿಕೆಗಳನು | ಪರಿ ಪರಿ ರತುನಗಳನು || ||೧೧೬||

**ರಾಗ ಸುರುಟಿ ಆದಿತಾಳ**

ದಾರಿಯ ಕೊಡು ನಮಗೆ | ಲಂಕಾಪುರ |
ದೂರಿಗೆ ನಡೆವುದಕೆ || ಪಲ್ಲವಿ ||

ದಾನವ ರಾವಣನು | ಆತ ನಮ್ಮ |
ಮಾನಗೊಂಡ ಬಗೆಗೆ ||
ಏನಾದರೂ ಕಡೆಗೆ | ಪೋಗುವೆವೀ |
ಸೇನೆ ಸಹಿತ ತಡಿಗೆ || ||೧೧೭||

ಉಗಿದ ಬಾಣ ಬಿಡಲು |
ಯಾರಾದರೂ | ಪಗೆಗಳಿದ್ದರೆ ತೋರು |
ಮುಗುಳು ನಗೆಯ ನಗುತ |
ಸುಗ್ರೀವನ | ಮೊಗವೀಕ್ಷಿಸಿಕೊಳುತ || ||೧೧೮||

**[ರಾಗ ಘಂಟಾರವ ಝಂಪೆತಾಳ**

ಸಾಗರನ ಕೈವಿಡಿದು | ಸಾಕು ಬಳಲಿಕೆಯೆಂದು |
ರಾಘವನ ಮನ್ನಿಸಿದ | ನಾಗ ವಿನಯದಲಿ || ||೧೧೯||

ದಾರಿಯನು ಕೊಡು ನಮಗೆ | ದಾಟಿಲಂಕಾಪುರಕೆ |
ಸೇರಬೇಕೆಮಗೆ ಕಪಿ | ಸೇನೆಮುಂತಾಗಿ || ||೧೨೦||

ದಶಕಂಠಗೂ ನಮಗು | ಧರಣಿಜೆಯ ದೆಸೆಯಿಂದ |
ಕಸರಿಕೆಯ ಕಲಹ ಬಂ | ದೊದಗಿಹುದು ಮನಕೆ || ||೧೨೧||

ತಪವ ಮಾಡಿದೆವೀಗ | ಯೆಮ್ಮ ಕಾರ್ಯಕೆ ಬೇಗ |
ಕಪಿಸೇನೆ ದಾಟುವಂ | ತುಪಕರಿಸಬೇಕು || ||೧೨೨||

ಉಗಿದ ಬಾಣವ ಬಿಡಲು | ಊರೊಳಾರಾದರೂ |
ಹಗೆಗಳಿದ್ದರೆ ತೋರು | ಹಳುವಿಲ್ಲ ನಮಗೆ || ||೧೨೩||

**ರಾಗ ಶಂಕರಾಭರಣ ಅಷ್ಟತಾಳ**

ರಾಮ ರಘುನಾಯಕ | ಸಜ್ಜನಭಕ್ತ |
ಸ್ತೋಮ ಶುಭದಾಯಕ ||
ಕಾಮುಕನಾದೆನ್ನಪರಾಧ ಶತಗಳ |
ನೀ ಮನದೊಳಗಿಟ್ಟುಕೊಳದೆ ರಕ್ಷಿಸಿದೆ || ||೧೨೪||

ಸೃಷ್ಟಿಯ ಮನುಜರಿಗೆ | ಆಶ್ಚರ್ಯವ |
ಪುಟ್ಟಿಸುವ ಬಗೆಗೆ ||

ಬೆಟ್ಟ ಬೆಟ್ಟವ ತಂದು ಕೊಡಲಿ ನಳನ ಕೈಯ |
ಕಟ್ಟಿಸಿಕೊಂಬೆ ಥಟ್ಟನೆ ದಾಟಲಿ ಸೇನೆ || ||೧೨೫||

ತೊಟ್ಟ ಬಾಣವ ಬಿಡಲು | ದ್ವೀಪಾಂತದೊ |
ಳೊಟ್ಟಾಗಿ ಬಲಿದಿಹರು ||
ಕುಟ್ಟಲಿ ಬಾಣ ನಿಶಾಟಕೋಟಗಳನೆಂ |
ಬಷ್ಟರೊಳಗೆ ಸೆಳೆದಿಟ್ಟನಾ ಶರವನು ||] ||೧೨೬||

**ಭಾಮಿನಿ**

ಪ್ರತಿಯ ತೋರಿ ನಿಶಾಟಕುಲಸಂ |
ತತಿಯ ಕೊಲಿಸಿಯೆ ರತುನಗಳ ರಘು
ಪತಿಗೆ ಕಾಣಿಕೆಯಿತ್ತು ಜಯಜಯವೆಂದು ಕೊಂಡಾಡಿ |
ಸ್ತುತಿಯ ಮಾಡುತ ನಳನ ಕೈಯಲಿ
ಪಥವ ಕೊಡುವೆನೆನುತ್ತ ತನ್ನಯ
ಸತಿಯರನು ಕರಕೊಂಡು ಸಾಗರ ನಡೆದ ನಿಜಗತಿಗೆ || ||೧೨೭||

**ಕಂದ**

ಶರಧಿಯ ಬಂಧಿಸಿರೆನುತಾ
ಕರುಣಾಂಬುಧಿ ರಾಮಚಂದ್ರನಪ್ಪಣೆಗೊಡಲು |
ಸುರಪುರದಿಂದಾ ನಳನಂ
ತರಣಿಸುತಂ ಕರೆಸೆ ಪೊಡಮಡುತೆಂದಂ ||೧೨೮||

**ರಾಗ ಭೈರವಿ ಝಂಪೆತಾಳ**

ಶರಧಿಯನು ಬಂಧಿಸಲು | ಬೇಕೆಂದು ಶ್ರೀರಾಮ |
ತರಣಿನಂದನನಿಂದ | ಕರೆಸಿದನು ನಳನ || ||೧೨೯||

ನಳ ನಿನ್ನ ಕೈಯಿಂದ | ಒಳಗೊಂಬುದೀ ಜಲಧಿ |
ಛಲದಿಂದ ತೋರು ಭುಜ | ಬಲ ಪರಾಕ್ರಮವ || ||೧೩೦||

ಎನೆ ಹಸಾದವೆನುತ್ತ | ಹನುಮ ಹಾರಿದ ಗಿರಿಯ |
ಕೊನೆಬೆರಳಿನಿಂದುಗಿದ | ಘನಬೇಗದಿಂದ || ||೧೩೧||

ಅಂಬುಧಿಯ ನೆತ್ತಿಯೊಳ | ಗದನಿಳುಹಿ ರಾಮನ ಪ |
ದಾಂಬುಜಕೆ ಕೈಮುಗಿವು | ತದನು ಬಂಧಿಸಿದ ||] ||೧೩೨||

**ರಾಗ ಗೌಳೀಪಂತು ಏಕತಾಳ**

ರಘುವೀರ ಪಾಹಿ ಪಾಹಿ ಮಾಂ | ಶ್ರೀರಾಮಚಂದ್ರ || ಪಲ್ಲವಿ ||

ಪುಂಡರೀಕಲೋಚನ ಭೂ | ಮಂಡಲಾದಿಸಂರಕ್ಷಣ |
ಖಂಡಲಪೂಜಿತ ಸುಪ್ರ | ಚಂಡಸಾಹಸಾಗ್ರಗಣ್ಯ || ||೧೩೩||

ಎನ್ನಿಂದಾಗುವಂಥ ಸೇವೆ | ಯನ್ನು ಕಟ್ಟು ಮಾಡಿಸು ಪ್ರ |
ಸನ್ನ ತ್ರೈಲೋಕ್ಯ ಮೂರುತಿ | ಎನ್ನ ಪಾಲಿಸೋ ವಿಶ್ವೇಶ || ||೧೩೪||

**ರಾಗ ಗೌಳಮಲಹರಿ ಅಷ್ಟತಾಳ**

ನಳ ನಿನ್ನ ಕೈಯಿಂದಾಗಲಿ ಸೇತು |
ಒಳಗೊಂಬುದೀಗ ಸಾಗರನೆಂದ ಮಾತು || ಪಲ್ಲವಿ ||

ಬೆಟ್ಟ ಬೆಟ್ಟವ ತಂದು | ಕೊಟ್ಟರೆ ಕಪಿಗಳು |
ಕಟ್ಟಿಗೆ ಹವಣಿಸಿ | ಚಂದದಿ ನೀ ಕೈ |
ಮುಟ್ಟಿ ಬಂಧಿಸಿದರೆ | ಮುಂದೆ ಲಂಕೆಗೆ ದಾರಿ |
ಕೊಟ್ಟೆನೆಂದೆನುತ ಸಾ | ಗರನೆಂದ ಮಾತು || ||೧೩೫||

ವನಜಲೋಚನನೆಂದ | ಮಾತ ಕೇಳುತಲಂದಾ |
ಹನುಮ ಹಾರಿದ ಪರ್ವ | ತವನೊಂದ ಕಿತ್ತು ||
ಕೊನೆಬೆರಳಿಂದುರು | ಳಿಸಿದರೆ ನಳ ತಂದು |
ವನಧಿಯೊಳಿಟ್ಟು ರಾ | ಘವಗೆ ಕೈ ಮುಗಿದ || ||೧೨೬||

**ಚರಿತೆ (ಸಾಂಗತ್ಯ) ರೂಪಕತಾಳ**

ಸುರರು ಪೂಮಳೆಗಳ ಕರೆದರು ರಾಮನ |
ಚರಣದೆಡೆಗೆ ನಮೋ ಎಂದು ||
ಭರದಿಂದ ಶತಬಲಿ ಮತ್ತೊಂದು ಗಿರಿತಂದು |
ಶರಧಿಯಲಿಟ್ಟು ಬೊಬ್ಬಿರಿದ || ||೧೩೭||

ನುಂಗಿತು ತಿಮಿಯೆಂಬ ಮೀನು ಪರ್ವತವ ತಿ |
ಮಿಂಗಿಲನದರ ನುಂಗಿದುದು ||

ಸಂಗಡ ತಿಮಿಯ ತಿಮಿಂಗಲ ಗಿರಿಸಹ |
ನುಂಗಿತು ಬಳಿಕೊಂದು ಮಕರ || ||೧೩೮||

ವೃಷಭ ಕೇಸರಿ ಗಜ ಗವಯ ಗವಾಕ್ಷ ಪ |
ನಸರು ಒಂದೊಂದು ಪರ್ವತವ ||
ವಸುಧೆಯಿಂದೆತ್ತಿ ಸಮುದ್ರದೊಳಿಡಲು ಭ |
ಕ್ಷಿಸಿ ಬಾಯ ಕಳೆಯೆ ಮೀನುಗಳು || ||೧೩೯||

ನೆಗಳು ನೀರೊಳಪ್ಪಾನೆಗಳು ನಾಯಿಗಳು ಮೀ |
ನುಗಳು ಕೋಳಿಗಳು ಕೋಣಗಳು ||
ಬಗೆಬಗೆ ಜೀವಜಂತುಗಳೀ ಧ್ವನಿ ಕೇಳಿ |
ಅಗಣಿತವಾಗಿ ಕೂಡಿದವು || ||೧೪೦||

ದಡಪರಿಯಂತ ಬಾಯ್ಗಳೆದು ಚಪ್ಪರಿಸುವ |
ಬಿಡುಗಣ್ಣ ಜಲಚರಾದಿಗಳ ||
ಕಡುಹಿನಬ್ಬರಕಂಜಿ ಸುಗ್ರೀವನಜಸುತ |
ನೊಡನೆ ಪೇಳಿದನೊಂದು ಮಾತ || ||೧೪೧||

**ದ್ವಿಪದಿ**

ಕಂಡಿರೇ ಜಾಂಬವರು ಕಡುವಿಚಿತ್ರಗಳ |
ತಂಡತಂಡದಿ ಗಿರಿಯ ತಿಂಬ ಮೀನುಗಳ || ||೧೪೨||

ನೂತನವಿದೇನೆಂದು ನೀವು ಕಂಡುದನು |
ಪ್ರೀತಿಯಿಂ ಪೇಳಿ ಮುಂದಣ ಕಾರ್ಯವನ್ನು || ||೧೪೩||

ಸಾಧಿಸುವುದೆಂತೀಗ ಸೇತುಬಂಧನವ |
ಹಾದಿಯನು ತೋರಿ ಹಿರಿಯರು ನೀವರಿವುದ || ||೧೪೪||

ಎಂದ ಮಾತನು ಕೇಳಿ ಯೆಲ್ಲವರು ಕಡೆಗೆ |
ಬಂದರಾ ನಳನೆಡೆಗೆ ತರಣಿಜನ ನುಡಿಗೆ || ||೧೪೫||

**ರಾಗ ಕೇದಾರಗೌಳ ಅಷ್ಟತಾಳ**

ತಂದು ತಂದಡಕಿದ ಪರ್ವತಗಳನೆಲ್ಲ |
ತಿಂದ ಮೀನುಗಳ ನೋಡಿ ||

ಬಂದನು ನಳ ರಾಮನೆಡೆಗೆ ಹೇರಂಬನ |
ನಿಂದು ಪ್ರಾರ್ಥಿಸಿದರೆಲ್ಲ || ||೧೪೭||

ಸಕಲ ವಿಘ್ನಗಳೆಲ್ಲ ಪರಿಹರಿಸಯ್ಯ ಮೂ |
ಷಿಕರೂಢ ನೀನೆಯೆಂದು ||
ಭಕುತಿಯಿಂದೆರಗಿ ಬೇಡುವೆವು ನೀರೊಳಗೆ ಕಂ |
ಟಕ ಬಾರದಂತೆ ಕಾಯೊ || ||೧೪೭||

**ಚರಿತೆ ರಾಗ ಸೌರಾಷ್ಟ್ರ ರೂಪಕತಾಳ**

ಕಟ್ಟುವ ಭಣಿತ ಇದಲ್ಲ ಸಮುದ್ರವ |
ಘಟ್ಯಾಗಿ ಇರಬೇಕು ಸೇತು ||
ಕಟ್ಟಿನ ಮೊದಲಿಂದ ಬುಡವ ಶೋಧಿಸಿಕೊಂಡು |
ಬೆಟ್ಟವನಿಡಲಿ ಕಲ್ಲಿನಲಿ || ||೧೪೮||

ಶತಯೋಜನಗಲವಿಸ್ತೀರ್ಣಕ್ಕೆ ಪಾಷಾಣ |
ತತಿಯಿಂದ ಸೂತ್ರ ಸಂಕಲೆಯ ||
ಜೊತೆಯಾಗಿ ಭದ್ರಗಟ್ಟಣೆ ಸಾರಣೆಧಾತು ||
ಮಿತಿಯಿಂದ ನಡೆಯಲಿ ಸೇತು || ||೧೪೯||

ಬೆಟ್ಟವ ತರುವವರಿವರು ತಂದರೆ ಕೆಳ |
ಗಿಟ್ಟು ನಳನ ಕರದೊಳಗೆ ||
ಕೊಟ್ಟು ಬಂಧಿಸುವವರಿವರೆಂದು ಸುಗ್ರೀವ |
ಕಟ್ಟಳೆಗಳನು ಮಾಡಿಸಿದ ||೧೫೦||

ಖಳರಿಂದ ತೊಡರಾಗ ಬಾರದಂತಾಚೆಯ |
ಬಳಿಯಲಿಟ್ಟರು ವಿಭೀಷಣನ ||
ಜಲಧಿಯ ಮಥನಕ್ಕೆ ನೂರ್ಮಡಿಯಲಿ ಬೊಬ್ಬೆ |
ಗಳಲಿ ಕಟ್ಟಿದರು ಸೇತುವನು || || ೧೫೧ ||

ಬಂಗಾಳ ಗೌಳ ಗುಜ್ಜರಿಯಂಗ ವಂಗ ಕ |
ಳಿಂಗ ಕಾಶಿ ಭೋಜ ದೇಶಗಳ ||
ಸಿಂಗಳ ದ್ವೀಪದ್ವೀಪಂಗಳಲ್ಲಿಯ ಪರ್ವ |
ತಂಗಳ ತಂದಡಕಿದರು || ೧೫೨ ||

ಒಂದರ ಮೇಲೊಂದು ತಂದು ತಂದಿಡುವಾಗ |
ಅಂದಾದ ನೀರ ಗರ್ಜನೆಗೆ ||
ಹಿಂದಿನ ಶರಧಿಯ ಮಥನಕೆ ಇದು ಮಿಗಿ |
ಲೆಂದರಾಕಾಶದಿ ಸುರರು || ೧೫೩ ||

ಕೊಟ್ಟ ಪರ್ವತಗಳ ಕಟ್ಟೆಗೆ ಸೇರಿಸಿ |
ಥಟ್ಟನೆ ಬರಬರಲೆನುತ ||
ಸಿಟ್ಟು ಮಾಡುವ ಬರಲಿಲ್ಲ ಬೇಗ ಎಂದಿ |
ನ್ನೆಷ್ಟರ ಶೌರ್ಯನೊ ನಳನು || ೧೫೪ ||

**ವಾರ್ಧಕ**

ಎನ್ನ ಮೇಲತಿ ಪ್ರೀತಿಯಿಂದ ಲಕ್ಷ್ಮಣನಂತೆ
ಮನ್ನಿಸುವ ಶ್ರೀರಾಮನದಕೆ ತನುವಿನೊಳು ಚೈ
ತನ್ಯವುಳ್ಳನಿತು ಸಾಹಸಪಡುವೆನೆಂದೆನುತ ಚಿಣ್ಣನಂಗದ ನಡೆದನು |
ತನ್ನೊಳಗೆ ತಾನೆಯೋಚಿಸಿಕೊಂಡು ನಡೆದು ಮು
ಕ್ಕಣ್ಣನಿಹ ಗಿರಿಯನೀಕ್ಷಿಸಿ ಬಳಿಕಲಾಗಲಾನ್
ಸಣ್ಣವನು ನಮಗಿದೇ ಸಾಕೆಂದು ಪಿಡಿದ ಬಗೆ ಶಿವ ಗಿರಿಜೆಗಿಂತೆಂದನು || ೧೫೫ ||

**ರಾಗ ಕೇತಾರಗೌಳ ಅಷ್ಟತಾಳ**

ನೋಡಿದೆಯಾ ಗೌರಿ ರಾಮನಾಟಕವನೀ |
ರೂಢಿಯೊಳತಿಶಯವು ||
ಕಾಡ ಮಂಗಗಳೆಲ್ಲ ಮನುಜರಂದದಲಿ ಪೇ |
ಚಾಡುವ ಪಂಥಗಳ || ೧೫೬||

ನಾಡ ಪರ್ವತವೆಲ್ಲ ಕಿತ್ತುಕೊಂಡೊಯ್ದು ಬೀ |
ಸಾಡಿ ಸಮುದ್ರದಲಿ ||
ಕೇಡುಬಂತಿದಕೊ ನಮ್ಮೀ ಗಿರಿಗೆನುತಲೆ |
ಜೋಡಾಗಿ ನಡೆತಂದರು || ೧೫೭ ||

ತರಳ ನೀನ್ಯಾರ ಹೇಳಿಕೆಯಿಂದ ನಾವಿದ್ದ |
ಗಿರಿಯ ಶಕ್ತಿಯಲಿ ಕೀಳ್ವೆ ||
ಮರುಳೆ ನಮ್ಮೊಡನಿರ್ದ ಗಣಗಳ ಪರಿಯ ನೀ |
ನರಿಯೆ ಬಿಟ್ಟತ್ತ ಸಾರೊ || ೧೫೮ ||

ಯಾರು ಹೇಳಿದರೆಂದು ನಮ್ಮನ್ನು ಕೇಳ್ವ ವಿ |
ಚಾರವೆಲ್ಲಿಂದ ಬಂತು ||
ಶ್ರೀರಾಮನವರು ಕಟ್ಟಿಸುವ ಸೇತುವೆಗಾಗಿ |
ಹೋರುವೆನಿದರೊಳಗೆ || ೧೫೯ ||

ಕಪಿಬಾಲ ಕೇಳು ಕೈಲಾಸದ ಮಹಿಮೆಯ |
ಗುಪಿತವನರಿಯೆ ನೀನು ||
ತ್ರಿಪುರಾರಿ ನಾನು ಪಾರ್ವತಿಯೆಂದಡಿವಳೀಗ |
ಕಪಟ ಮಾತಲ್ಲವಯ್ಯ || ೧೬೦ ||

ಹರನಾದಡೇನು ಶಂಕರನಾದಡೆನಗೆ ಗೋ |
ಚರವಿಲ್ಲ ಮತ್ತೊರ್ವರ ||
ತರಣಿನಂದನನಾಜ್ಞೆ ಕಂಡ ಪರ್ವತಗಳ |
ಹೊರುವುದೆ ಛಲ ನಮಗೆ || ||೧೬೧||

**ದ್ವಿಪದಿ**

ಕಂಡೆಯಾ ಗಿರಿಜಾತೆ ಕಡುವಿಚಿತ್ರಗಳ |
ಪುಂಡರೀಕಾಕ್ಷ ಶ್ರೀರಾಮ ಚರಿತೆಗಳ || ||೧೬೨||

ಕಾಡಗಿಡಗಳಲಿರುವ ಕಪಿಗಳ್ಕೈತಂದು |
ಈಡರಿತು ನರರ ಸೇವೆಯ ಮಾಳ್ಪರಿಂದು || ||೧೬೩||

ಧರೆಯೊಳತಿ ಸೋಜಿಗವಿದೆನುತ ಸತಿಗೆಂದು |
ಮರಳಿಶಿವ ನುಡಿದನಾ ವಾನರನೊಳಂದು || ||೧೬೪||

ಏ ಕಪೀಶ್ವರ ಕೇಳು ಎನಗೂ ರಾಮನಿಗೂ |
ಏಕಸ್ವಭಾವಗಳು ಎಲ್ಲರರಿತಿಹರು || ||೧೬೫||

ಶಿವ ನಾನು, ಎನಗೆ ಸತಿ ಇವಳು ಗಿರಿಜಾತೆ |
ಪ್ಲವಗಪೋತಕ ಕೇಳು ಬದಲಿನ್ನು ಮಾತೇ || ||೧೬೬||

ಹರಿಹರರು ನಮ್ಮೊಳಗೆ ಭೇದವಿಕ್ಕಿದರೆ |
ಧರೆಯೊಳಿರುವರು ನರಕ ಹೊಂದದಿನ್ನಿಹರೆ || ||೧೬೭||

ರಾಮ ನಾರಾಯಣನು ನರನಾಗಿ ಬಂದು |
ಆ ಮಹಾರಾಕ್ಷಸರ ಕೊಲುವ ಬಗೆಗೆಂದು || ||೧೬೮||

**ರಾಗ ಘಂಟಾರವ ಝಂಪೆತಾಳ**

ಇಂದುಶೇಖರನೆತ್ತ | ಇನಕುಲಾಧಿಪನೆತ್ತ |
ಹೊಂದಿಕೆಯ ಮಾತಲ್ಲ | ಹೊಗಳಿ ಫಲವಿಲ್ಲ || ||೧೬೯||

ಎರಕವಾದರೆ ನೀವು | ಎನಗೆ ಮತ್ಸರವಿಲ್ಲ |
ತರಿಸೊಂದು ಗುರುತವನು | ತಿರಿಗಿ ಹೋಗುವೆನು || ||೧೭೦||

ಹೊರತಾಗಿ ಮಾತಿಲ್ಲ | ಹೋಗುವವ ನಾನಲ್ಲ |
ಬರಿಯ ಬೂಟುಗಳಿಂದ | ಬಳಲಲೇಕೆಂದ || ||೧೭೧||

**ವಚನ ||** ಇಂತೆಂದು ಅಂಗದನಾಡಿನ ಮಾತಿಗೆ ಪರಮೇಶ್ವರನು ಸಂತೋಷಚಿತ್ತದಿಂದ ತಾನೇ ರಾಮಮೂರ್ತಿಯಾಗಿರಲು ಅಂಗದನದಂ ಕಂಡನದೆಂತೆನೆ –

**ವಾರ್ಧಕ**

ರಾಮಾವತಾರವಂ ನೆರೆಕಂಡು ಬೆರಗಾಗಿ
ಆ ಮಹಾಪರ್ವತವನಲ್ಲಿಯೇ ಬಿಟ್ಟಿದರ
ಸಾಮೀಪ್ಯದಲ್ಲಿರುವ ಉಪಪರ್ವತಂಗಳಂ ಧರಿಸುತಂಗದ ನಡೆದನು |
ಭೂಮಿಯನ್ನೇ ಹೊತ್ತು ತಂದನೋ ಎಂಬಂತೆ
ರಾಮಲಕ್ಷ್ಮಣರು ಕಂಡತಿಚೋದ್ಯಮಂ ಬಡಲು
ಪ್ರೇಮದಿಂ ನಳನ ಕೈಗಿಡಲು ನಡೆದುದು ಸೇತು ದಶಯೋಜನಾಂತರದಲಿ || ||೧೭೨||

**ರಾಗ ತೋಡಿ (ಸಾಂಗತ್ಯ) ರೂಪಕತಾಳ**

ಬಾಲನಂಗದನ ಸಾಹಸವನ್ನು ನೆರೆಕಂಡು |
ನೀಲನುತ್ತರಕಾಗಿ ಬಂದು ||
ಕೀಳಲು ಮಂದರಗಿರಿಯನ್ನು ಸುರರಂಜಿ |
ಕೇಳಿದರಾ ಕಪೀಶ್ವರನ || ||೧೭೩||

ತರುಚರಾಧಿಪ ಕೇಳ್ನೀನರಿಯೆಯ ಮಂದರ |
ಗಿರಿಯ ಸೌಭಾಗ್ಯಲಕ್ಷಣವ ||

ಸುರರಿಗೆ ಬೇಕಾದ ದಿವ್ಯವಸ್ತುಗಳು ಇ |
ಲ್ಲಿರುವವಿಂತೆಂಬ ವಾರ್ತೆಗಳು || ||೧೭೪||

ಭೂಮಿಯೊಳತಿರೇಕವಾದ ದುಶ್ಚರ್ಯವ |
ರಾಮಸೇವಕರು ಮಾಡುವರೆ ||
ಈ ಮಾತು ಕೇಳದೆ ಕೀಳ್ವಾಗ ನಾರದ |
ಮಾಮುನಿ ಬಂದು ಬೋಧಿಸಿದ || ||೧೭೫||

ಮತ್ತಾಗ ಮುನಿಯ ಮಾತಿನ ಮೇಲೆ ಬಿಟ್ಟಲ್ಲಿ |
ಸುತ್ತಣ ಗಿರಿಗಳ ಕಿತ್ತು ||
ಹೊತ್ತುಕೊಂಡೈತಂದು ಕೊಡಲು ಸಾಗಿತು ಸೇತು |
ಹತ್ತು ಯೋಜನದಗಲದಲಿ || ||೧೭೬||

**ರಾಗ ಬಿಲಹರಿ ಏಕತಾಳ**

ಇವರ ವಿಕ್ರಮ ಒಂದು ಕಡೆಗಿಡು ಕಮಲಸಂ |
ಭವಜಾತ ನೆನೆದಂಥ ಹವಣ ನೀ ನೋಡು ||
ತವಕದಿಂದೆದ್ದು ವಿಂಧ್ಯವ ದಾಟಿ ಮುಂದೆ ಜಾಂ |
ಬವರು ಸಂಧಿಸಿಕೊಂಡರೈ ಹಿಮವಂತನ || ||೧೭೭||

ನೆಗಹಿ ಜೋಲುವ ಜೂಲುಗೂದಲನಗಲಿಸಿ |
ಮಿಗೆ ತುದಿ ಮೊದಲ ನೋಡಿದರೆ ಅಜ್ಜಯ್ಯ ||
ನೆಗಹಲು ಚೈತನ್ಯವಿಲ್ಲ ವೃದ್ಧರು ನಾವು |
ನಗುವವರ್ನಕ್ಕರೆ ನಗಲೆಮಗಿದೇ ಸಾಕು || ||೧೭೮||

**ವಾರ್ಧಕ**

ಎರಡು ಸಾವಿರ ಯೋಜನಗಲ ಬಳಕೈವತ್ತ
ಯೆರಡು ಸಾವಿರ ಯೋಜನೋನ್ನತದ ಪರ್ವತವ
ನೆರಡು ಕೈಯಿಂದಲುಗಿ ಕೀಳುತಿರೆ ಸಪ್ತಸಾಗರ ಕಲಿಕಿ ನೆಲವದುರಿತು |
ಇರದಿದೇನಾಶ್ಚರ್ಯವೆಂದು ಮೇನಕೆದೇವಿ
ಬೆರಗಾಗಿ ಮನಗುಂದಿ ಭರದಿಂದ ನಡೆತಂದು
ಹಿರಿಯರಿದು ನೆನೆದ ಕಟ್ಟಾಳುತನ ಲೇಸೆಂದು ಹಿರಿಮನದೊಳಿಂತೆಂದಳು || ||೧೭೯||

**ರಾಗ ಮಧ್ಯಮಾವತಿ ಏಕತಾಳ**

ಏಕಿದ ಕೀಳುವೆ ಏ ಕಪೀಶ್ವರನೆ ಪಿ |
ನಾಕಿ ಶಂಕರಗೆ ಬೇಕಾದವ ನೀನು ||
ಲೋಕದೊಳಗೆ ಬಲು ಹಿರಿಯರಾದವರಿಂಥ |
ಕಾಕುಕೃತ್ಯವನಾಚರಿಸುವುದುಂಟೆ || ||೧೮೦||

ಶಿವನಿಗೆ ಮದುವೆಯಾದವಳೆನ್ನ ಮಗಳು ಮ |
ತ್ತಿವನೆನ್ನ ರಮಣ ಮೇನಕೆಯು ನಾನು ||
ದಿವಿಜರು ಸಹಿತಲಂಜುವರೆಮ್ಮ ಬಳಗಕ್ಕೆ |
ಪ್ಲವಗಾಧಿಪತಿ ನೀನೇ ನೋಡು ಸನ್ಮತದಿಂದ || ||೧೮೧||

ಮಾರವೈರಿಯ ಚಿತ್ತ ದೂರವಾಗುವದೆಂದು |
ಬೇರುಡಿಯದ ಹಾಗೆ ಮೆಲ್ಲನಲ್ಲಿರಿಸಿ ||
ನಾರಿ ನಮ್ಮಮ್ಮ ನೀ ಹೋಗೆನುತಲ್ಲಿದ್ದ |
ಬೇರೆ ಪರ್ವತಗಳ ಬಿಡಿಸಿದನಜಸುತ || ||೧೮೨||

ಶಿರದೊಳೆಂಟದ್ರಿಭುಜವೆರಡರೊಳ್ನಾಲ್ಕು ನಾಲ್ಕು |
ಕರದೊಳೊಂದೊಂದು ಕಂಕುಳೊಳಗೊಂದೊಂದು ||
ಚರಣದೋಳುರುಳಿಸಿ ಬಹುದ ಕಾಣುತಲಾಗ |
ಬೆರಳ ಮೂಗಿನೊಳಿಟ್ಟು ಶಿರವ ತೂಗಿದ ರಾಮ || ||೧೮೩||

ಮೊದಲಿಗರಿವರು ಮಾಡಿದ ಕಷ್ಟಕತಿಮೆಚ್ಚಿ |
ಇದಿರು ಬಂದಾಕ್ಷಣ ಭಯಭಕ್ತಿಯಿಂದ ||
ಮುದದಿ ಬೊಬ್ಬಿಡುತ ಕಟ್ಟೆಗೆ ಸೇರಿಸಲು ಸೇತು |
ಒದಗಿತು ಹಲವು ಯೋಜನದ ಪರ್ಯಂತ || ||೧೮೪||

**ವಾರ್ಧಕ**

ಶಿರದೊಳೆಂಟದ್ರಿ ಭುಜವೆರಡರಲಿ ನಾಲ್ಕು ನಿಜ
ಕರದಳೊಂದೊಂದು ಗಿರಿ ಕೌಂಕುಳೊಳಗೆರಡೆರಡು
ಚರಣಗಳಿನೆರಡೆರಡನುರುಳಿಸುತ ಭರದಿ ನಡೆತರುವ ಸಂಭ್ರಮವ ಕಂಡು |
ಬೆರಳ ಮೂಗಿನೊಳಿಟ್ಟು ಶಿರವ ತೂಗಿದ ರಾಮ
ತ್ವರಿತದೊಳಿದಿರ್ಬಂದು ನಳನಧಿಕಶಕ್ತಿಯಿಂ
ದಿರದೆ ಕೈಗೊಟ್ಟು ಕಟ್ಟೆಗೆ ಸೇರಿಸಲು ಸೇತು ಹಲವು ಯೋಜನ ನಡೆದದು ||] ||೧೮೫||

**ರಾಗ ಸೌರಾಷ್ಟ್ರ ರೂಪಕತಾಳ**

ಈ ಸರ ಬಗೆಯೆಲ್ಲ ಕಂಡನು ಮುಖ್ಯ ಪ್ರಾ |
ಣೇಶನ ಸುತ ಹನುಮಂತ ||
ಈ ಸಮಯದಿ ಸುಮ್ಮನಿದ್ದರೆ ಒಡೆಯಗೆ |
ಬೇಸರಾಗುವುದು ಚಿತ್ತದಲಿ || ||೧೮೬||

ಖಂಡ ಖಂಡವ ದಾಟಿ ಬಂದು ಹತ್ತಿರ ನಿಂದು |
ಕಂಡನೆ ಮೇರುಪರ್ವತವ ||
ಪುಂಡರೀಕಾಕ್ಷನ ಸೇವೆಗೀ ಗಿರಿಯನ್ನು |
ಕೊಂಡೊಯ್ದು ಕೊಡುವೆ ನಾ ನಳಗೆ || ||೧೮೭||

ಲಕ್ಷ ಯೋಜನದುದ್ದ ಮೇಲೆ ನೋಡಿದರೊಂದು |
ಲಕ್ಷ ಯೋಜನದ ವಿಸ್ತಾರ ||
ಲಕ್ಷ್ಮಣಾಗ್ರಜ ಕಂಡಿಂದೆನ್ನ ಕಷ್ಟಕೆ ಮೆಚ್ಚಿ |
ಸುಕ್ಷೇಮದಿಂದ ಪಾಲಿಸುವ || ||೧೮೮||

ಅಬ್ಬರಿಸುತ ಕೈಯ ಚಪ್ಪಳಿಸುತ ಹಾರಿ |
ಉಬ್ಬಿ ಶಕ್ತಿಯೊಳಲುಗಿದರೆ ||
ತಬ್ಬಿಬ್ಬಾಯಿತು ಸಪ್ತಲೋಕ ಮಾನಸದಿಂದ |
ಎಬ್ಬಿಸಿತಬುಜಸಂಭವನ || ||೧೮೯||

**ವಾರ್ಧಕ**

ಪ್ರಳಯ ಕಂಪನದಿಂದ ಸಡಿಲಿತೆನೆ ಸೇತು ಕಳ
ವಳ ಬೇಡ ಹನುಮಂತ ನಮ್ಮ ಸೇವೆಗೆ ಮಾಳ್ಪ
ಕೆಲಸವಿದು ಬೆದರಲ್ಯಾಕರೆನಿಮಿಷ ಮಾತ್ರದಲಿ ತಿಳಿಯಬಹುದೆಂದ ರಾಮ |
ನಳಿನಸಂಭವನಿತ್ತಲರಿದು ರಾಮನ ಕೆಲಸ
ದೊಳವು ಲೇಸೆನುತ ಹತ್ತಿರ ಬಂದು ನೋಡಿದನು
ಭಳಿರೆ ಹನುಮಂತ ಮೆಚ್ಚಿದೆ ನಿನಗೆ ನೀ ಮೂರ್ಖರೊಳಗೆ ಸಲೆ ಜಾಣನಹುದೋ || ||೧೯೦||

[ಕೆಲಸವಿದು ಇದನರಿಯಬಹುದು ಅರೆನಿಮಿಷದೊಳು
ಕಲಿಹನುಮನಾಗಮವನೆಂದೆನುತ ಬಲಿಮುಖರ
ಬಲದೊಳಗೆ ಸುಗ್ರೀವ ಜಾಂಬವಂತರ ಕೂಡೆ ಮಾತಾಡುತಿರಲಿತ್ತಲು |
ಜಲಜಸಂಭವನರಿತು ಬೆರಗಾಗಿ ತನ್ನ ಮನ
ದಲಿ ನೋಡಿದರೆ ಪ್ರಳಯ ದೂರವಿಹುದೆಂದೆನುತ
ಬಲು ಬೇಗ ನಡೆತಂದು ಪವನಸಂಜಾತನಂ ಕಂಡವನೊಳಿಂತೆಂದನು ||] ||೧೯೧||

**ರಾಗ ಮೋಹನ ಏಕತಾಳ**

ಜಾಣ ನೀನಹುದೊ ಕಪಿ | ನಿನ್ನಂಥ ಸುಪ್ರ |
ವೀಣರಿಲ್ಲೈ ಜಗದಿ ||
ಕಾಣಲಂಜುವರು ಗೀ | ರ್ವಾಣರೀ ಗಿರಿಯನ್ನು |
ತ್ರಾಣದಿಂದನೀ ಕೀಳುವೆನೆಂಬ ವಿ |
ಧಾನ ಒಳ್ಳಿತದಕೇನು ಮತ್ಸರವೆ || ||೧೯೨||

ಲೋಕ ಲೋಕಂಗಳಿಗೆಲ್ಲ | ಆಧಾರವಾದ |
ಶ್ರೀಕರ ಭೂಧರವ ||
ನೀ ಕೀಳಲಾಗಿ ಮತ್ತಿ | ನ್ನೇಕೆ ಸೇತುಗಳಲ್ಲಿ |
ಸಾಕಾರಿಸಿತು ಬ್ರಹ್ಮಾಂಡಚತುಷ್ಟಯ |
ಚಾಕರಿ ಸಂತೆಮಗೀ ಕೆಲಸದಲಿ || ||೧೯೩||

ಚಂದ್ರಾದಿತ್ಯಾದಿ ಗ್ರಹರ | ಕಾಲದ ಚಕ್ರ |
ನಿಂದಿರ್ಪುದೀ ಪ್ರಪಂಚ ||
ಮಂದರವಿದನು ನೀ | ನಿಂದು ಕಿತ್ತಿಡಲು ಮ |
ಹೇಂದ್ರಮುಖ್ಯ ಸುರವೃಂದ ಜಾನಕಿ ರಾಮ |
ಚಂದ್ರ ಸೇತುಸಹ ಮುಂದೆಲ್ಲಿಹುದೈ || ||೧೯೪||

**ರಾಗ ಭೈರವಿ ಝಂಪೆತಾಳ**

ಸರಸಿಜೋದ್ಭವ ಕೇಳು | ಸಾಕು ಕೋಪಿಸಬೇಡ |
ಅರಿತುಕೊಂಡೆನು ನಾನು | ಅಂತರಂಗವನು || ||೧೯೫||

ಬೇಕಾದ ಪರ್ವತವ | ನಾ ಕೊಂಡುಪೋದರೀ |
ಲೋಕಾನುಲೋಕಗಳು | ತಾ ಕೆಡುವವೈಸೆ || ||೧೯೬||

ಬಾಲವನು ಸಲೆ ಬಳಸಿ | ಕೊಂಡೊಯ್ವೆ ನೀ ಗಿರಿಯ
ಊಳಿಗವ ಮುಗಿಸಿ ತಹೆ | ಹಾಳಾಗದಂತೆ || ||೧೯೭||

ಎಂಬ ಮಾತಿನ ಮೇಲೊ | ಡಂಬಡಿಸಿದನು ಕಮಲ |
ಸಂಭವರ ಕೈ ವಿಡಿದು | ನಂಬಿಸಿದನಾಗ || ||೧೯೮||

ನಾಳೆ ನಮ್ಮೊಡೆತನವ | ಪಾಲಿಸುವ ನೀನಾದ |
ಮೇಲೆ ನಾ ಹೆಚ್ಚಿನ್ನು | ಹೇಳಿ ಫಲವೇನು || ||೧೯೯||

ತನ್ನ ಮನೆ ಬದುಕುಗಳ | ತಾನೆ ಕೆಡಿಸುವರುಂಟೆ |
ಇನ್ನು ನೀನೇ ನೋಡು | ನಿನ್ನ ಮನದೊಳಗೆ || ||೨೦೦||

**ವಾರ್ಧಕ**

ಮಾತಿನೊಳೊಡಂಬಡಿಸಿ ಕಮಲಸಂಭವನವನ
ಪ್ರೀತಿಯಲಿ ಸಂತಯ್ಸಿ ಇತ್ತ ಮಹಮೇರು ಸಂ
ಗಾತದೊಳಗಿರುವಂಥ ದ್ರುಪದಕಾಂಚನ ಬಿಡಿಸಿ ಪೊತ್ತ ನೂರೆಣಿಕೆಯಿಂದ |
ವಾತಸಂಭವನ ಸೇವಾಮಹಿಮೆಗೆಂದು ರಘು
ನಾಥಲಕ್ಷ್ಮಣರು ಪ್ರಸಂಗಿಸಲು ನಳನ ಕೈ
ಯಾತುವಿಗೆ ಪಸರಿಸಿತು ಹನುಮ ತಂದದರೊಳಗೆ ಸಂಪೂರ್ಣವಾಯ್ತು ಸೇತು || ||೨೦೧||

**ರಾಗ ಸೌರಾಷ್ಟ್ರ ರೂಪಕತಾಳ**

ತುಂಬಿತು ಸೇತು ಹೋ ಹೋ ಸಾಕು ತರಬೇಡ |
ವೆಂಬ ಬೊಬ್ಬೆಗಳ ಸಂಭ್ರಮಕ್ಕೆ ||
ಮುಂಬರಿದಲ್ಲ್ಯಲ್ಲೇ ಬಿಸುಟು ಸುಗ್ರೀವ ಪ |
ದಾಂಬುಜಕಭಿನಮಿಸಿದರು || ||೨೦೨||

ಕಲ್ಲೆಡೆಯಲಿ ಮಣ್ಣು ಜರಿದು ಬೀಳದ ತೆರ |
ನಲ್ಲಿಗಲ್ಲಿಗೆ ಭದ್ರವಾಗಿ ||
ಚೆಲ್ಲುತ್ತ ತೆರೆ ಬಡಿವಲ್ಲಿಗೊತ್ತೊತ್ತಾಗಿ |
ಕಲ್ಲಸಂಕಲೆಯನಿಕ್ಕಿದರು || ||೨೦೩||

ಪಂಕಜಾಂಬಕ ನಿಂತ ಪಾದದ ಬಳಿಯಿಂದ |
ಲಂಕೆಯ ದಡಪರಿಯಂತ |
ಸಂಕೋಲೆ ಸರಪಣಿ ಪಾಷಾಣ ಮಣ್ಣಿಂದ |
ಲಂಕರಿಸಿತು ಸೇತು ನಡೆದು || ||೨೦೪||

ಮಣ್ಣ ಸಾರಣೆ ಮೇಲುಗಟ್ಟು ತೋರಣಗಳ |
ಚಿನ್ನದ ಕಲಶ ಕನ್ನಡಿಯ ||
ಚೆನ್ನಾಗಿ ರಚಿಸಿದನಾ ವಿಶ್ವಕರ್ಮನ |
ಬಿನ್ನಾಣವೆಂತು ಹೆಚ್ಚಿನದು || ||೨೦೫||

ಮೊಳಗಿತು ಭೇರಿ ತಮ್ಮಟೆ ವಾದ್ಯ ಸುರಪುರ |
ದೊಳಗೆ ಕಟ್ಟಿದರು ತೋರಣವ ||

ನಳಿನಲೋಚನ ರಾಮ ಜಯ ಜಯವೆಂದು ಪೂ |
ಮಳೆಗಳ ಸುರಿದರಂಬರದಿ || ||೧೦೯||

**ಭಾಮಿನಿ**

ಕುಶನೆ ಕೇಳೈ ಪುಷ್ಯ ಶುದ್ಧದ
ದಶಮಿಯಲಿ ಪ್ರಾರಂಭವಾಯಿತು
ಪಸರಿಸಿತು ಸಂಪೂರ್ಣವಾಗಿ ತ್ರಯೋದಶಿಯೊಳಂದು |
ವಸುಧೆ ಬೆಳಗಿದಳೆಂಟು ದೆಸೆಯಲಿ
ಕುಸುಮಮಳೆಗಳ ಸುರಿದರಮರರು
ಪೆಸರಿಡಿಸಿತೀ ಸಂಧಿ ಕಣ್ವಪುರೇಶನೊಲವಿನಲಿ || ||೧೦೮||

**|| ಸೇತುಬಂಧನ ಪ್ರಸಂಗ ಮುಗಿದುದು ||**

## ೮. ಅಂಗದ ಸಂಧಾನ - ಪಾತ್ರಗಳು

ರಾಮ
ಲಕ್ಷ್ಮಣ
ವಿಭೀಷಣ
ಸುಗ್ರೀವ
ಹನುಮಂತ
ಅಂಗದ
ಜಾಂಬವ
ನೀಲ
ಕಪಿಗಳು
ರಾವಣ
ಪ್ರಹಸ್ತ
ಇಂದ್ರಜಿತು
ಶುಕ
ಸಾರಣ
ವಿದ್ಯುಜ್ಜಿಹ್ವ
ರಾಕ್ಷಸಭಟರು
ಸೀತೆ
ತ್ರಿಜಟೆ

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕುಶನೆ ಕೇಳೈ ಪುಷ್ಯಶುದ್ಧದ |
ದಶಮಿಯಲಿ ಪ್ರಾರಂಭವಾಯಿತು |
ಉಸುರಲದು ಸಂಪೂರ್ಣವು ತ್ರಯೋ | ದಶಿಯೊಳಾಯ್ತು || ||೧||

ಆ ಕಪೀಂದ್ರರ ಸಹಸವೆಂತುಟೊ |
ನಾಲ್ಕು ದಿವಸದಿ ಸೇತು ನಡೆದುದು |
ನಾಕದಿಂ ಬಲು ಭೇರಿ ಮೊಳಗಿತ | ನೇಕರಭಸ || ||೨||

ಕೇಳು ಲವ ಮರುದಿವಸದಲಿ ಕಪಿ |
ಜಾಲ ಸಹಿತೈತಂದು ಶರಧಿಯ |
ಮೂಲದೆಡೆಯಲಿನಿಂದ ರವಿಜ ವಿ | ಶಾಲದಿಂದ || ||೩||

ದ್ವಿವಿದ ಶತಬಲಿ ಮೈಂದನಳಗಜ |
ಗವಯ ಪನಸ ಗವಾಕ್ಷ ಕೇಸರಿ |
ದಿವಿಜಪತಿಸುತತನುಜ ಸಾರಸ | ಭವತನುಜರೂ || ||೪||

ಮರುತನಂದನ ಸುಮುಖ ದುರ್ಮುಖ |
ವರಸುಷೇಣಾದ್ಯರನು ವಿನಯದಿ |
ಕರೆಕೊಳುತ ನಡೆತಂದುರಾಮನೊ | ಳೊರೆದನಿಂತು || ||೫||

ಭಾನುನಂದನನಾಗಳಾ ಕಪಿ |
ಸೇನೆಗಳ ಕರಕೊಂಡು ಬಂದಾ |
ದಾನವಾಂತಕಗೆರಗಿ ಪೇಳ್ದ ನಿ | ಧಾನದಿಂದ || ||೬||

**ರಾಗ ಯರಕಲಕಾಂಭೋಜಿ ಅಷ್ಟತಾಳ**

ಆಯಿತು ಸೇತು ಕಟ್ಟಿ ರಾಜೇಂದ್ರ |
ವಾಯುನಂದನ ತಂದ ಪರ್ವತವಿಡೆ ಪೂರ್ಣ || ವಾಯಿತು || ಪಲ್ಲವಿ ||

ಜಾಂಬವ ನೀಲಾಂಗದರ ಸಾಹಸವ ನಾನೇ |
ನೆಂಬೆನು ಹತ್ತು ಯೋಜನದಗಲದ ಸೇತು |
ಎಂಬ ಮಾತಿಗೆ ಶ್ರೀರಾಮ | ವಾನರರ ಕ |
ದಂಬವೀಕ್ಷಿಸಿ ನಿಸ್ಸೀಮ | ಲಕ್ಷ್ಮಣನ ಮು |
ಖಾಂಬುಜವನು ನೋಡಿ ನಗುತ ಸುಪ್ರೇಮ || ಆಯಿತು || ||೭||

ಸುರರ ಪಟ್ಟಣದಿಂದ ತರಿಸಿ ಬೇಕಾದಂಥ |
ವರಸೋಪಸ್ಕರಫಲಾಹಾರವನಿತ್ತುಪ |
ಚರದ ಮಾತುಗಳ ಹೇಳಿ | ಅನೇಕ ವಿ |
ಸ್ತರದ ಸಂತಸವ ತಾಳಿ | ಮುಂದೇನೆಂದು |
ತರಣಿನಂದನ ವಿಭೀಷಣರೊಳು ಕೇಳಿ || ಆಯಿತು || ||೮||

ಹೇಳಿ ಚಿತ್ತದೊಳಿದ್ದ ಹದನ ಮಾಳ್ಪುದಕೆಂದು |
ಕೇಳಿಕೊಳ್ಳಲು ಭಾನುಸುತ ಮುಂತಾದವರು ಭೂ |
ಪಾಲನಪ್ಪಣೆಯೊಳಂದು | ಸುಗ್ರೀವನ |
ಪಾಳೆಯ ಸಹಿತ ಬಂದು | ಕಟ್ಟೆತ್ತಿದ |
ಮೂಲದ ಬಳಿಯ ನೋಡುತ ರಾಮನಿಂದು || ಆಯಿತು || ||೯||

**ರಾಗ ಘಂಟಾರವ ಝಂಪೆತಾಳ**

ಭಾನುನಂದನನೆ ಬಲು | ಬಲು ದಣಿದರಿವರೆಲ್ಲ |
ಕಾಣಲಸದಳವೆಮಗೆ | ಕಟ್ಟಿರುವ ಬಗೆಗೆ || ||೧೦||

ಅಂಗದನ ಸಾಹಸಕೆ | ಮೆಚ್ಚದವರಾರುಂಟು |
ಕಂಗೊಳಿಪ ಜಾಂಬವರು | ಕಷ್ಟಕೊದಗಿದರು || ||೧೧||

ಹನುಮಂತ ಗುಣದಿಂದ | ಹಂಗನಿಕ್ಕಿಸಿಕೊಂಡ |
ಪನಸನತಿ ಪೌರುಷವ | ನೆಣಿಸಲಳವಲ್ಲ || ||೧೨||

ಸುಮುಖ ದುರ್ಮುಖರುಗಳ | ಸಾಹಸಂಗಳ ಪೊಗಳ |
ಲಮಮ ಇದು ಬಲು ಚೋದ್ಯ | ವೆಂಬಡೆಯಸಾಧ್ಯ || ||೧೩||

ವೃಷಭ ಕೇಸರಿ ನೀಲ | ಹೃದಯದೊಳಗತಿಶೀಲ |
ಪೆಸರ ಪಡೆದವರಿಂದ | ವಿಕ್ರಮಗಳಿಂದ || ||೧೪||

ಏಸು ನಾ ಪೊಗಳಿದರು | ಎಲ್ಲವರ ರೀತಿಯೆ ವಿ |
ಭೀಷಣನ ಗುಣವಿನ್ನು | ಪುತ್ಥಳಿಯ ಹೊನ್ನು || ||೧೫||

ನಳನ ಕಷ್ಟಗಳೆಲ್ಲ | ನಾವ್ ಪೊಗಳಿ ತುದಿಯಿಲ್ಲ |
ತಿಳಿಯಬಹುದಿವರ್ಗೆಲ್ಲ | ನಾವ್ ಕೊಡುವ ಸೊಲ್ಲ || ||೧೬||

ಇಂತೆನುತಲೆಲ್ಲರನು | ಈ ಬಗೆಯ ಕೊಂಡಾಡಿ |
ಕಂತುಪಿತ ಕರೆದಿನಜ | ಗಿಂತೆಂದನಾಗ || ||೧೭||

**ರಾಗ ಕೋರೆ (ಕಲ್ಯಾಣಿ) ಅಷ್ಟತಾಳ**

ಪೋಗಬೇಕಯ್ಯ | ಸೇತುವ ದಾಟಿ |
ಸಾಗಬೇಕಯ್ಯ || ಪಲ್ಲವಿ ||

ಈಗ ನಾ ಮುಂದೆ ತಾ ಮುಂದೆಂದು ಹೆಣಗದೆ |
ಸಾಗರದಲಿ ಬೀಳಲಾಗದಂದದಲಿ || ಅನುಪಲ್ಲವಿ ||

ಹಿಂದೆ ಇದ್ದವರು | ಸೇತುವ ದಾಟಿ |
ಮುಂದೆ ಹೋದವರು ||
ಒಂದೇ ಕಡೆಯಲಿ ಠಾಣ್ಯವನಿಕ್ಕಿರಲಿ ಹೀ |
ಗೆಂದು ಕಟ್ಟಳೆಯಾದ ಒಂದು ಕಟ್ಟಿನಲಿ || ಪೋಗ || ||೧೮||

ಅಲ್ಲಿ ಇದ್ದುದನು | ಮುಟ್ಟದಿರೊಂದು |
ಹುಲ್ಲು ಕಡ್ಡಿಯನು ||
ಎಳ್ಳಿನಷ್ಟಾದರು ಎಲ್ಲರೂ ಕೂಡಿಕೊಂ |
ಡಲ್ಲದೆ ಒಬ್ಬೊಬ್ಬರ್ತಿರುಗಾಡ ಬೇಡಿ || ಪೋಗ || ||೧೯||

**ಭಾಮಿನಿ**

ರವಿಕುಲೋದ್ಭವನುಚಿತವಚನವ
ರವಿಕುಮಾರಕ ಕೇಳ್ದು ಸೇನಾ
ನಿವಹಕಧಿಪತಿಗಳನು ನೇಮದ ಕಟ್ಟಿನಲಿ ನಿಲಿಸಿ |
ರವಿಕಿರಣವಡಗಲು ಮಹಾಂಬುಧಿ
ರವ ಮರೆಸೆ ಕಪಿಸೇನೆ ನಡೆದುದು
ಭುವನಕತಿಶಯ ಕೀರ್ತಿ ರಘುರಾಜೇಂದ್ರಚಂದ್ರಮನ || ||೨೦||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಡೆವ ದಳಪದಹತಿಯ ರಭಸಕೆ |
ನಡುಗುತಿದ್ದುದು ಸೇತು ನೀರಲಿ |
ಹಡಗಿನಂತೊಲೆದಾಡುತಿರ್ದುದು | ಬುಡವು ತುದಿಗೆ || ||೨೧||

ಕುಂಭಕರ್ಣಾದಿಗಳ ಪ್ರಾಣವ |
ಕೊಂಬ ಬಗೆಗೆನೆ ಚರಣವಿಟ್ಟ ಮ |
ಹಾಂಬುಧಿಯ ಸೇತುವಿನ ಮೊದಲಿನೊ | ಳಂಬುಜಾಕ್ಷ || ||೧೧||

**ರಾಗ ಪಂತುವರಾಳಿ ಮಟ್ಟೆತಾಳ**

ರಾಮ ಬಂದನು | ರಾಕ್ಷಸ ಕುಲ | ಭೀಮ ಬಂದನು || ಪಲ್ಲವಿ ||

ಕಾಮರೂಪಿಗಳಾದ ಕಪಿ | ಸ್ತೋಮವನ್ನು ಕೂಡಿಕೊಂಡು || ಅನುಪಲ್ಲವಿ ||

ಎಳೆಯಕಪಿಗಳಿದಿರುಲಾಗಂ | ಗಳ ನಿರಿಂಕಿ ನೋಡುತ |
ಗಳಿಗೆ ಗಳಿಗೆ ಹೊಳೆವಾಕಾಶ | ದೊಳಗೆ ಭೇರಿ ಮೊಳಗುತ |
ನಳಿನನಾಭನಡಿಗೆ ಸುಮದ | ಮಳೆಗಳು ಬಂದಿಳಿಯುತ |
ಭಳಿಗೆ ರಾಮ ಜಯ ಜಯ ವೆಂ | ದಾರತಿಗಳ ಬೆಳಗುತ |
ಒಲಿದು ಸುರರಂಬರದಿ ಪಾಡಿ | ರಾಮನಾಮ ಪೊಗಳುತ || ರಾಮ || ||೧೩||

ಕಡಲ ತೆರೆಗಳುಬ್ಬುತ್ತಡಿ | ಗಡಿಗೆ ದಡಕೆ ಬಡಿಯುತ |
ಒಡೆಯ ನೀ ನೋಡೆಂದು ಜಳದ | ಬೆಡಗನೊಡ್ಡಿ ತೋರುತ |
ತಡೆದು ತಡೆದು ನೀರೊಳಡ್ಡ | ಕೆಡಹುತೆಡಕುತಾಡುತ |
ಅಡಗಿದವರನಟ್ಟಿಕುಟ್ಟಿ | ಹಿಡಿದು ತಂದು ಕೂಡುತ |
ಪಡೆಯು ನಡೆಯಲಾಗ ಸೇತು | ಹಡಗಿನಂತೋಲಾಡುತ || ರಾಮ || ||೧೪||

ದಾಶರಥಿಯ ಕಣ್ಣಿನಿದಿರೊ | ಳಾ ಸಮುದ್ರದಿ ಬೀಳುತ |
ಭಾಷೆ ಪಂಥದಿಂದ ನೀರೊ | ಳೀಸಿ ಮುಳುಗುತೇಳುತ್ತ ||
ಏಸರಾಳುದ್ದುದಕವುಂಟೆಂ | ಬಾ ಸುದ್ದಿಗಳ ಕೇಳುತ್ತ |
ಬೀಸಿ ಬಾಲದಿಂದ ನೀರಾ | ಕಾಶದೆಡೆಗೆ ಚಿಮ್ಮುತ್ತ || ರಾಮ || ||೧೫||

**ವಾರ್ಧಕ**

ಅಣುಗ ಕೇಳಿಂತಾರು ದಿವಸ ನಡೆದುದು ದಂಡು
ಗೊಣಗುಟ್ಟಿದತ್ತಿತ್ತ ಸುಗ್ರೀವನಾಜ್ಞೆಯಲಿ
ಗಣನೆಗೆಪ್ಪತ್ತೇಳು ಕೋಟಿ ಕಪಿನಾಯಕರು ರಾಮಲಕ್ಷ್ಮಣರು ಸಹಿತ |
ಬಣಗು ರಕ್ಕಸರಲ್ಲಿ ಕಾವಲಿದ್ದವರತ್ತ
ಜುಣುಗಿದರು ಪಟ್ಟಣಕೆ ಬಂತು ದುರ್ದೆಸೆಯೆನುತ
ದಿನಮೂರರಣಿಕೆಯಲಿ ದುರ್ಗದ ಸಮೀಪದೊಳ್ ಬೀಡೆತ್ತಿತಾ ರಾಮನ || ||೧೬||

**ರಾಗ ಗೌಳಮಲಹರಿ ಅಷ್ಟತಾಳ**

ಗುಲ್ಲು ಹೆಚ್ಚಿತು ಲಂಕಾಪುರದಲ್ಲಿ | ಕಪಿ |
ಪಾಳ್ಯ ಮುಂತಾಗಿ ಪಟ್ಟಣವ ಮುತ್ತಿದರೆಂಬ || ಪಲ್ಲವಿ||

ಪಟ್ಟಣ ಜನ ಬಾಯ ಕಳೆಯುತ್ತ | ಅಯ್ಯೋ |
ಕೆಟ್ಟೆವು ಪಾಪಿರಾವಣನಿಂದಲೆನ್ನುತ್ತ ||
ಕಟ್ಟಿ ಸರಕ ತೆಗೆದೊಯ್ಯುತ್ತ | ಊರ |
ಬಿಟ್ಟಾರಣ್ಯವ ಸೇರಿ ಬದುಕುವೆವೆನ್ನುತ್ತ || ಗುಲ್ಲು || ||೧೭||

ಪೆಟ್ಟಿಗೆಗಳನು ಕಟ್ಟಿಡು ಮಾಣಿ | ಅಯ್ಯೋ |
ಕೆಟ್ಟಿತು ದೇವತಾರ್ಚನೆಯ ತುಂಬಿಡು ಗೋಣಿ ||
ಪಟ್ಟಿಯ ತೆಗೆಯದಿಪ್ಪಳೊ ರಾಣಿ | ಎಂಬ |
ಭಟ್ಟರುಗಳು ಊರು ಬಿಟ್ಟು ಓಡುವ ವಾಣಿ || ಗುಲ್ಲು || ||೧೮||

ಗಡಿಗೆ ಮಂಡೆಗಳೆಲ್ಲ ಹೊತ್ತರು | ಕೆಲ |
ರಡಿಗೆಯೂಟಗಳೆಂಬ ಗೊಡವೆಗೆ ನಿತ್ತರು |
ಗಡಿಯ ಬಾಗಿಲನೆಲ್ಲ ಕಿತ್ತರು | ಹಿಂದೆ |
ಸುಡುಗೇಡಿನಲಿ ಹೋದ ಬಗೆಯನೆಚ್ಚತ್ತರು || ಗುಲ್ಲು || ||೧೯||

ಗೋಧನಗಳನೆಲ್ಲ ಬಿಟ್ಟರು | ಕಡಲೆ |
ಗೋಧಿ ಬೆಲ್ಲಗಳ ಕಂಡವರಿಗೆ ಕೊಟ್ಟರು |
ಹಾದಿ ಹಾದಿಯೊಳು ಬೊಬ್ಬಿಟ್ಟರು | ಖೂಳ |
ರಾದ ದಾನವರ ದುರ್ಗದಲಿ ಸಾಲಿಟ್ಟರು || ಗುಲ್ಲು || ||೨೦||

ಕೇರಿಕೇರಿಯೊಳಿಹ ಮನೆಗಳ | ಅಲ್ಲಿ |
ನಾರಿ ಪುರುಷರ ಖೋಯೆಂಬ ಗರ್ಜನೆಗಳ ||
ಊರ ಬಿಟ್ಟೋಡುವ ಭರಗಳ | ಕಪಿ |
ವೀರರು ನೋಡುತ್ತ ನಗುವ ಸಂಭ್ರಮಗಳ || ಗುಲ್ಲು || ||೨೧||

**ವಾರ್ಧಕ**

ತನಯರಿರ ಕೇಳಿ ಲಂಕಾಪುರದ ಗಜಬಜವ
ಮುನಿವರರು ತಿಳಿದು ರಾಮನ ಪರಸಲಾ ರಾತ್ರಿ
ಘನ ಪಟ್ಟಣದೊಳೊಗೆದ ಕಾರ್ಯಗಳ ಸಂಭ್ರಮವ ಜನವಾರ್ತೆಯಿಂ ಕೇಳುತ |
ಮನಸಿನಲಿ ನೊಂದುಕೊಂಡಾ ಮಂತ್ರಿವೀರ ರಾ

ವಣನ ನಿದ್ರಾಲಯಕ್ಕಾಕ್ಷಣದಿ ಬಂದು ಮ
ತ್ತಿನಕುಲೇಂದ್ರನ ಸೈನ್ಯಮೈತಂದ ಚಾರಿತ್ರಮಂ ಪೇಳ್ದನತಿ ನಯದೊಳು || ||೩೨||

**ರಾಗ ಧನಶ್ರೀ ಅಷ್ಟತಾಳ**

ಕೇಳಯ್ಯ | ಮಾತ | ಕೇಳಯ್ಯ || ಪಲ್ಲವಿ ||

ಪೇಳುವದಿಂದೊಂದು | ಪೊಸಸುದ್ದಿ ಕಿವಿಗೊಟ್ಟು || ಅನುಪಲ್ಲವಿ ||

ಬಾಲೆಯ ನೀವು ತಂದಾಕೆಯ ಪತಿ ಎಪ್ಪ |
ತ್ತೇಳು ಕೋಟಿ ಕಪಿಗಳ ಕೂಡಿ | ಅಬ್ಧಿ |
ಗಾಲಸ್ಯಗೊಳದೆ ಸೇತುವ ಹೂಡಿ | ನೀರ |
ಮೇಲೆ ಬಪ್ಪಂತೆ ಹಾದಿಯ ಮಾಡಿ | ದಾಟಿ |
ದರುಗಾಢ | ಬಂದ |
ರಿದೆ ನೋಡ | ಇನ್ನು |
ಆಲೋಚಿಸಿದರೆ ಮಾಡುವದೇನು | ಲಯ |
ಕಾಲವಿದಿನ್ನೆಂದು ಫಲವೇನು || ಕೇಳಯ್ಯ || ||೩೩||

ಹಿಂದುದ್ಯಾನವ ಬಂದು ಕೆಡಿಸಿದ ಕಪಿಯಂಥ |
ದೊಂದೊಂದು ಲಕ್ಷ ಸಾವಿರವಂತೆ | ಕೆಲವು |
ಮಂದೆಯಾಗಿರ್ಪ ಭೀಕರವಂತೆ | ಕಯ್ಯೊ |
ಳೊಂದೊಂದು ಪರ್ವತ ತರುವಂತೆ | ಕಾಯ |
ಸ್ಥಿರವಂತೆ | ಮೆರೆ |
ದಿರುವಂತೆ | ಅವು |
ಹಿಂದಕ್ಕೆ ಪಡೆದಿರ್ಪ ವರವಂತೆ | ನಮ್ಮ |
ಕೊಂದೇವೆನ್ನುವ ಭರವಸವಂತೆ || ಕೇಳಯ್ಯ || ||೩೪||

ಬೇವ ನೋಡುವುದಕ್ಕೆ ಕಳುಹಿದ ಶುಕನನ್ನು |
ದೇವರನುಜರೆ ನೋಡಿದರಂತೆ | ಹಿಡಿದು |
ಕಾವಲ ಮನೆಗೆ ದೂಡಿದರಂತೆ | ಓಡಿ |
ಬಾಹವೆಂದಂಕೆ ಮಾಡಿದರಂತೆ | ಇದು |
ದಿಟವಂತೆ | ನಮ್ಮೊಳ್ |
ಹಟವಂತೆ | ಬಲು |
ಕೋವಿದ ವೀರಮರ್ಕಟರಂತೆ | ರಾಮ |
ಸೇವೆಯೊಳಗೆ ಬಲು ಭಟರಂತೆ || ಕೇಳಯ್ಯ || ||೩೫||

**ಕಂದ**

ಇಂತಾ ವೈರಿಗಳಂದವ
ಮಂತ್ರೀಶ್ವರ ಪೇಳೆ ಕೇಳ್ದು ದಶಕಂಧರನುಂ |
ಅಂತರ್ಭಾವವನರಿಯದೆ
ಇಂತಾಗಳೆ ಪೇಳ್ದ ಸಾರಣಗೆ ರಾಕ್ಷಸ ತಾ || ||೩೬||

**ರಾಗ ಕಲ್ಯಾಣಿ ಅಷ್ಟತಾಳ**

ತಿಳಿದು ಬಾ ರಾಮನ ಪಾಳ್ಯದಂಗವನೆಲ್ಲ |
ಬಲವಂತರೊ ನಿಧಾನರೊಯೆಂಬ ಬಗೆಯ ನೀ || ತಿಳಿದು || ||೩೭||

ಮಂಗಗಳೆಷ್ಟುಂಟು | ಸಿಂಗಳೀಕಗಳೆಷ್ಟು |
ಸಂಗಡ ಮುಸುಗಳೆ | ಷ್ಟೆಂಬ ಬಗೆಯನೆಲ್ಲ || ತಿಳಿದು || ||೩೮||

ನಮ್ಮವನಿಗು ರಾಮ | ಗೊಮ್ಮನಸೊ ಇಕ್ಕಟ್ಟೊ |
ತಮ್ಮೊಳೆಂತಿಹರೆಂದು | ಗಮ್ಮನೀಗಿರುಳೆದ್ದು || ತಿಳಿದು || ||೩೯||

ಅನ್ನಾಹಾರಗಳೇನು | ಎಣ್ಣೆ ನೀರಿಂಗೆಲ್ಲಿ |
ಹಣ್ಣು ಹಂಪಲು ತಿಂಬು | ದೆನ್ನುವ ನಿಜವ ನೀ || ತಿಳಿದು || ||೪೦||

ಮಡದಿಗೋಸುಗಬಂದು | ಹೊಡೆದಾಡಿ ನಿಲುವರೊ |
ಸಡಗರವನು ತೋರಿ | ತಿರಿಗಿ ಪೋಪರೊಯೆಂದು || ತಿಳಿದು || ||೪೧||

**ಕಂದ**

ಬಂದಾ ಸಾರಣ ಪಾಳ್ಯದೊ
ಳಂದಿರುಳೊಳ್ ತಿರುಗಲವನ ಕೈಸೆರೆವಿಡಿದು |
ಹಿಂದಿರ್ದಾತನ ಸಹಿತಲೆ
ತಂದಿದಿರಲಿ ನಿಲಿಸಿ ಪೇಳ್ದ ಭಾಸ್ಕರತನುಜಂ || ||೪೨||

**ರಾಗ ದೇಶಿ ಅಷ್ಟತಾಳ**

ಇವನೀಗ ಮೊದಲು ಬಂದಾತ | ಕಪ |
ಟವ ಮಾಡಿ ಕಯ್ಸೆರೆ ಸಿಕ್ಕಿಕೊಂಡಾತ || ಪಲ್ಲವಿ ||

ಇಂದು ಬಂದವನಿವನೀಗ | ಪಾಳ್ಯ |
ದಿಂದ ಕಳ್ಳರ ಹಾಗೆ ತಿರಿಗಿ ಪೋಪಾಗ ||
ಕಂದನಂಗದ ಕಂಡು ಬೇಗ | ಹಿಡಿ |
ತಂದ ರಾಕ್ಷಸದೂತರಿವರಿಬ್ಬರೀಗ || ಇವ || ||೪೩||

ಮುಂದಕ್ಕೆ ಕರೆಸಿದನವರ | ದಯ |
ದಿಂದ ಮನ್ನಿಸುತ ಕುಳ್ಳಿರಿಸಿಕೊಂಡವರ ||
ಬಂದುದೇಕೆಂದು ಬಲ್ಲವರ | ಕೇಳ |
ಲಂದು ವಿಸ್ತರವಾಗಿ ಪೇಳಿದರ್ವಿವರ || ||೪೪||

ನೆಲೆಯಾಗದ ಮಾತಾಡಿದರೆ | ಪ್ರಾಣ |
ಉಳಿಯದು ನೀವ್ ನಮ್ಮ ಮುನಿದು ನೋಡಿದರೆ ||
ಕಲಹಕಾರಣವ ಮಾಡಿದರೆ | ನಿಮ |
ಗಳವಲ್ಲ ರಾಕ್ಷಸರೊಳಗೆ ಕೂಡಿದರೆ || ||೪೫||

**ರಾಗ ಕಾಂಭೋಜಿ ಝಂಪೆತಾಳ**

ರಘುವೀರ ಕೇಳು ರಾವಣನ ಸೌಭಾಗ್ಯಗಳ |
ಪೊಗಳಲಳವಲ್ಲ ಫಣಿಪತಿಗೆ ||
ಅಗಣಿತನು ಕುಂಭಕರ್ಣನು ತಮ್ಮ ಶಕ್ರಜಿತು |
ಮಗನು ಧನಪತಿ ತದಗ್ರಜನು || ||೪೬||

ಈರೇಳು ಲೋಕದೊಡೆತನ ಕರೆದರೋಯೆಂದು |
ಮೋರೆದೊರ್ವಳು ಮಹಾಲಕ್ಷ್ಮೀ ||
ವೈರಿಗಳಿಗಳವಡದ ಇದುವೆ ಲಂಕಾದುರ್ಗ |
ಸೇರಿಹುದು ಸಕಲಸೌಭಾಗ್ಯ || ||೪೭||

ಜಾನಕಿಯ ಕಳವಿನಲಿ ತಂದನುಜನಂ ತೊರೆದ |
ಹೀನಗುಣವೆರಡದರ ಹೊರತು ||
ಏನುಬಗೆಯಲಿ ಕಂಡರೆಮ್ಮವನ ಜೈಸುವ ಸ |
ಮಾನರಿಲ್ಲೀ ಭುವನದೊಳಗೆ || ||೪೮||

ಭೇತಾಳ ಬ್ರಹ್ಮರಾಕ್ಷಸರೆಸೆದ ಸರಳ ಮೊನೆ |
ಈತಗಳ ತಗಲಿದರೆ ನೊಂದು |

ಮೈತುರಿಸಿ ಹಲ್ಗಿರಿದು ಹಣಿಗಿ ಕಿರಿಗುಟ್ಟಿ ಕಪಿ |
ಪೋತಗಳು ಓಡದಿರ್ದಪವೇ || ||೪೯||

ಕಂಡುದನು ಪೇಳಿದರೆ ಕೋಪವೇತಕೆ ಪೇಳು |
ಪುಂಡರೀಕದಳಾಕ್ಷ ರಾಮ |
ದಂಡಿಸಲದೇಕೆ ಸಂಧಾನಮಂ ನೆರೆಗೊಳಿಸಿ
ಹೆಂಡತಿಯನೊಯ್ವುದತಿ ಲೇಸು || ||೫೦||

**ರಾಗ ಪಂತುವರಾಳಿ ರೂಪಕತಾಳ**

ನೀತಿಯಲ್ಲ ನೀವು ಬಂದುದು | ರಾಮಚಂದ್ರ |
ನೀತಿಯಲ್ಲ ನೀವು ಬಂದುದು || ಪಲ್ಲವಿ ||

ನೀತಿಯಲ್ಲ ನೀವು ನ | ಮ್ಮಾತನೊಡನೆ ಸಮರದಲ್ಲಿ |
ಭೂತನಾಥಗರಿದು ಸೋಲ್ವ | ರೀತಿಯಲ್ಲವೆಂಬುದನೀ |
ಕೋತಿಕುಲಗಳೇನು ಮಾಳ್ಪವು | ಶರದ ಮೊನೆಯೊ |
ಳೋತು ಬಡಿದರೆಂತು ತಾಳ್ಪವು || ಹಲ್ಲ ಕಿರಿದು |
ಮೈ ತುರಿಸಿಕೊಂಡು ನೋಳ್ಪವು || ನೀತಿಯಲ್ಲ || ||೫೧||

ದೇವದೈತ್ಯರೊಮ್ಮೆಗಿವನ | ಸೇವೆ ಮಾಡಿ ಕಳೆವರ್ದಿನವ |
ಸಾವುದಿಲ್ಲವೆಂಬ ವರವು | ದೇವ ಕುಂಭಕರ್ಣಗುಂಟು |
ದೇವರೊಡೆಯಜಿತು ಕುಮಾರಕ | ಲಕ್ಷ್ಮಿ ಕರೆದ |
ಡೋಯೆನಿಪ್ಪ ಭಾಗ್ಯದಾಯಕ || ಸಕಲಶಾಸ್ತ್ರ |
ಕೋವಿದಾತ ನೀತಿ ಪೂರಕ || ನೀತಿಯಲ್ಲ || ||೫೨||

ಬಿನುಗಳಾದ ತಂಗಿ ಶೂ | ರ್ಪಣಖೆಯೆಂದ ಮಾತಕೇಳಿ |
ಜನಕಸುತೆಯ ತಂದು ವಿಭೀ | ಷಣನ ಬಿಟ್ಟುದೊಂದು ಮಾತ್ರ |
ಘನತೆಯಲ್ಲಿದೆರಡು ಗುಣಗಳು || ಅದರೊಳವನಿ |
ಗನುಭವಿಸದೆ ಬಿಡದು ವಿಧಿಗಳು || ಮಿಕ್ಕ ಭಾಗ್ಯ |
ವೆಣಿಸಿ ತುದಿಯಗಾಣೆವಿವನೊಳು || ನೀತಿಯಲ್ಲ || ||೫೩||

**ಕಂದ**

ಒಡೆಯನ ಗುಣಮಂ ಪೊಗಳುತ
ಸಡಗರದಿಂ ಕಪಿಗಳೆಲ್ಲರಂ ಜರೆಯಲ್ಕಾ |

ಹೊಡೆ ಬಡಿಯೆಂಬಾಮರ್ಕಟ
ರೊಡಬಡಿಸುತ ರಾಮ ಪೇಳ್ದ ಸುಗ್ರೀವನೊಳಂ || ||೫೪||

**ರಾಗ ಘಂಟಾರವ ಝಂಪೆತಾಳ**

ಕಪಿರಾಜ ಕೇಳಿದಕೆ | ಕೋಪವೇತಕೆ ನಮಗೆ |
ಕಪಟದವರಿವರಲ್ಲ | ಕಲಹ ತರವಲ್ಲ || ||೫೫||

ಬಂಟರಾದವರುಗಳ | ಬಲ್ಲತನ ತಮ್ಮೊಡೆಯ |
ನೆಂಟುಮಡಿ ಗುಣವ ನಿಜ | ವೆಂಬುದೇ ಸಹಜ || ||೫೬||

ಮುಖದಿಟ್ಟೆಯಂತುಸಿರ್ವ | ಮೋಸದವರಿವರಲ್ಲ |
ಸಕಲವನು ತಿಳಿದ ಸ | ರ್ವಜ್ಞರಿವರೈಸೆ || ||೫೭||

ನಮ್ಮ ಶೌರ್ಯಗಳಿರವ | ತಮ್ಮವರೊಳಾಡುವರು |
ನಿರ್ಮಲದಿ ಕಳುಹುವುದೆ | ಧರ್ಮವೈ ನಮಗೆ || ||೫೮||

ಕಡಲಧಿಪ ತಾ ಕೊಟ್ಟ | ಕಾಣಿಕೆಯ ರತುನಗಳ |
ಉಡುಗೊರೆಯ ಕೊಡಿಸಿದನು | ಉಚಿತಗಳ ನರಿತು || ||೫೯||

ತಳ್ಳಿಹೋಗದಿರೆಂಬ | ತಾಕೀತಿಗಳ ಮಾಡಿ |
ಪಾಳ್ಯದಿಂ ಕಳುಹಿದನು | ಪಟ್ಟಣಕ್ಕವರ || ||೬೦||

ಬಂದು ರಾವಣನೊಡನೆ | ಒಂದೆರಡು ಮಾತಾಡಿ |
ಮಂದಿರಕೆ ತೆರಳಲವ | ರಂದು ಬೆಳಗಾಯ್ತು || ||೬೧||

**ರಾಗ ಮೋಹನ ಅಷ್ಟತಾಳ**

ಸಾಂಬ ಸದಾಶಿವ | ಸಾಂಬ ಸದಾಶಿವ |
ಸಾಂಬ ಸದಾಶಿವ | ಸಾಂಬ ಶಿವ || ಪಲ್ಲವಿ ||

ದಿನಕರನುದಿಸುವ | ಮುನ್ನ ರಾವಣನೆದ್ದು |
ಘನಬೇಗದಿಂದ ಮ | ಜ್ಜನವ ಮಾಡಿದನು || ||೬೨||

ಲಿಂಗಪೂಜೆಯ ಮಾಡಿ | ಮಕ್ಕಳು ಸಹಿತಾಗಿ |
ಸಂಗಡ ಸಿಂಹಾ | ಸನವನೇರಿದನು || ||೬೩||

ಕರೆಸಿ ತಾ ಮಯ ವಿಶ್ವ | ಕರ್ಮರಿಬ್ಬರ ದುರ್ಗ |
ಭರಿತವೆಂದೆಸಗಿದ | ರರೆ ನಿಮಿಷದೊಳು || ||೬೪||

ಏಳು ಸುತ್ತಿನೊಳಾನೆ | ಕುದುರೆ ಭಂಡಿಗಳ ಬೇ |
ತಾಳ ರಾಕ್ಷಸರನ್ನು | ಸಾಲು ನಿಲಿಸಿದರು || ||೬೫||

ಅಗಳ ಹತ್ತಲು ವೈ | ರಿಗಳು ಬಂದರೆ ಜಾರಿ |
ಜಗುಳಿ ಬೀಳುವ ಹಾಗೆ | ಅಗೆಸಿದ ಜರಿಯ || ||೬೬||

ಕಂಡಿಕಂಡಿಗೆ ಕಾಣ | ದಂತೆ ಬಪ್ಪವರಿಗೆ |
ಮಂಡೆಯೊಳ್ ಬೀಳ್ವಂತೆ | ಗುಂಡುಕಲ್ಲುಗಳ || ||೬೭||

ಅಡವಿ ಕೋಡಗಗಳ | ಮದ್ದುಗುಂಡುಗಳಿಂದ |
ಕೆಡೆವ ರಾಕ್ಷಸರ ವಿಂ | ಗಡವ ಮಾಡಿದರು || ||೬೮||

ಹೊಗುವ ಹೆದ್ದಾರಿಯ | ಕೊತ್ತಳಂಗಳ ಮೇಲೆ |
ಅಗಣಿತದಾ ಫಿರಂ | ಗಿಗಳನಿಕ್ಕಿದರು || ||೬೯||

ಈಟಿ ಸಬಳ ಕೊಟ್ಟು | ತೊಂಬತ್ತನಾಲುಕು |
ಕೋಟಿ ದಾನವರ ನೀ | ಟಕೆ ನಿಲಿಸಿದನು || ||೭೦||

ಸುಣ್ಣ ಸಾಸುವೆ ಸೀಗೆ | ಮೆಣಸಿನಹುಡಿ ಹಾಕಿ |
ಎಣ್ಣೆಕೊಪ್ಪರಿಗೆಯ | ಒಲೆಯಲಿಕ್ಕಿಸಿದ || ||೭೧||

ಹಣ್ಣು ಮುದುಕರನ್ನ | ದಕೆ ನಿಲಿಸಿದ ಬಲು |
ಸಣ್ಣವರಿಗೆ ಕವಣೆ | ಕಲ್ಲ ಕೊಡಿಸಿದ || ||೭೨||

**ವಾರ್ಧಕ**

ಭರತಾದಿ ನವಖಂಡದೇಶಗಳ ಭೂಭುಜರ
ಕರೆಸಿದನು ಗರುಡ ಗಂಧರ್ವ ಉರಗಾಧಿಪರ
ಕರಿ ತುರಗ ರಥ ಪುರುಷನೆರವಿ ಸೇನೆಯೊಳು ಸಂಗರಕೆ ಸನ್ನಾಹವಾಗೆ |
ಹೊರಸುತ್ತಿನಗಳ ನೀಟಿನ ಮೇಲೆ ನಿಂದು ವಾ
ನರಸೈನ್ಯಮಂ ಕಾಣಬೇಕೆಂದು ಶುಕಸಾರ
ಣರ ಕರೆಸಿ ಯಾರುಯಾರೆಂದು ಬೆಸಗೊಳಲು ಶುಕ ಬೆರಳಿಂದ ತೋರಿಸಿದನು || ||೭೩||

**ರಾಗ ಕೇತಾರಗೌಳ ಅಷ್ಟತಾಳ**

ನೋಡಿದೆಯಾ ರಾವಣೇಂದ್ರ ನಿನ್ನನುಜನ |
ಕೂಡೆ ಯೇಕಾಂತದಿಂದ ||
ಆಡುವ ಮಾತಿಗೆ ಕಿವಿಗೊಟ್ಟು ನಮ್ಮೆಲ್ಲ |
ನೋಡುವಾತನೆ ರಾಘವ || ||೭೪||

ಜೋಡಾಗಿ ಎರಡುಬಿಲ್ಲೊಂದು ಕೈಯಲಿ ಪಿಡಿ |
ದಾಡುವಾತನೆ ಲಕ್ಷ್ಮಣ ||
ಮೂಡಣ ದೆಸೆಯಲಿ ನಿಲಬೇಡೆಂದೆನುತ ಕೈ |
ಮಾಡುವಾತನೆ ಸುಗ್ರೀವ || ||೭೫||

ಕುಂಭಿನಿಯುದಿಸುವ ಮುನ್ನ ಪುಟ್ಟಿದನಾತ |
ನೆಂಬರು ಜಗದೊಳೆಲ್ಲ ||
ಅಂಬಿಕೆ ಶಿವನಿಗೆ ಮದುವೆಯಾದಾಗ ಹ |
ತ್ತೊಂಭತ್ತು ವರುಷವಂತೆ || ||೭೬||

ಜಂಭಾರಿ ಮೊದಲಾದ ದಿವಿಜರೀತಗೆ ನಮೋ |
ಎಂಬುದು ಸಹಜವಂತೆ ||
ಅಂಬುಜಾಸನನ ಚೊಚ್ಚಲ ಕಂದನದೆ ನೋಡು |
ಜಾಂಬವನಧಿಕಶೌರ್ಯ || ||೭೭||

ತರಣಿಯೊಳ್ ಪಂಥದಿಂ ಸುರಗಿರಿಯನು ದಿನ |
ಕೆರಡುಬಾರಿಗೆ ಸುತ್ತಿದ ||
ಭರಿತವಿಕ್ರಮನಂತೆ ಯವ್ವನದೊಳಗೀಗ |
ಮೆರೆವನು ವಾರ್ಧಕ್ಯದಿ || ||೭೮||

ವನದಲ್ಲಿ ಜಂಬುಮಾಲಿಯ ಕೊಂದು ನಮ್ಮ ಪ |
ಟ್ಟಣವ ಹೋಮಿಸಿದ ವೀರ ||
ಹನುಮಂತನದಕೊ ಲಕ್ಷ್ಮಣನ ಹತ್ತಿರ ನಿಂದು |
ಕುಣಿದಾಡುವವನೆ ನೋಡು || ||೭೯||

ವಿನಯದಿ ಕಪಿಪೋತಂಗಳ ಹೆಗಲೇರಿ ಕೊಂ |
ಡೊನರುವಾತನೆಯಂಗದ ||
ವನದೊಳು ತಪಸಿದ್ಧ ಮುನಿಗಳ ಹಾಗಿಪ್ಪಾ |
ತನೆ ಗಜ ಗವಯ ನೋಡು || ||೮೦||

ವೃಷಭನವನ ಹಿಂದೆ ಕೈಲಾಸದಿಂ ನೀ ನಿಂ |
ದಿಸುತ ರಕ್ಕರಿದೆಯಂತೆ ||
ಅಸುರ ಕೇಳಾ ಪಂಥದಿಂದ ಮರ್ಕಟನಾಗಿ |
ಬೆಸೆದಿಪ್ಪನವನೆ ನೋಡು || ||೮೧||

ಜೀಯಚಿತ್ತೈಸು ಪಲ್ಗಿರಿದು ಮುಂದುಬ್ಬೆಟ್ಟು |
ಬಾಯೊಳಾರ್ಭಟಿಸುವಾತ ||
ರಾಯನಪ್ಪಣೆಯಿಂದ ದಳಕೆಲ್ಲ ನೀಲನೇ |
ನಾಯಕವಾಡಿಯಂತೆ || ||೮೨||

ಶತಬಲಿ ಸುಮುಖ ದುರ್ಮುಖ ಗಜ ಗವಯರೆಂ |
ಬತುಳ ವಿಕ್ರಮರದಕೊ ||
ಮಿತಿಯಾಗದೆಣಿಸಿ ರಾಮನಪಾಳ್ಯದೊಳಗೆ ಬಂ |
ದತಿ ಬಲಾನ್ವಿತರ ನೋಡೈ || ||೮೩||

ಉಸುರಲಿನ್ನವನಿಂದ ಬಲಭಾಗದಲಿ ರಂ |
ಜಿಸುವಾತನವನೆ ನಳ ||
ಪೆಸರಿಸಲರಿಯೆ ಮೇಲಾದ ವಾನರವೀರ |
ರೆಸೆದಿರ್ಪರದಕೊ ನೋಡು || ||೮೪||

**ಕಂದ**

ಈ ಪರಿಯಿಂದಂ ವರ್ಣಿಸಿ
ಭೂಪಾಲನ ಪಾಳ್ಯದೊಳಗೆ ಕಪಿನಾಯಕರಂ |
ಕೋಪಿಸಿ ದಶಕಂಧರನುಂ
ತಾ ಪೌರುಷದಿಂದ ಪೇಳ್ದ ಶುಕಸಾರಣರ್ಗಂ || ||೮೫||

**ರಾಗ ಕೇತಾರಗೌಳ ಅಷ್ಟತಾಳ**

ಮರುಳಾದೆಯೇನೊ ನೀ ಬದನೆಕಾಯನು ದೊಡ್ಡ |
ಪರಬ್ರಹ್ಮವೆಂಬ ಹಾಗೆ ||
ಮರದಿಂದ ಮರಕೆ ಲಂಘಿಸುವಂಥ ಕಪಿಗಳ್ಗೆ |
ಅರಿಯಲ್ಲವೆಂಬರೇನೋ || ||೮೬||

ಸೂರ್ಯಗೆ ಮೋಡಗಳಿದಿರೆ ಕಪ್ಪೆಗಳು ಕಾ |
ಳೋರಗಕೆಣೆಯಹವೇ ||

ಗಾರುಗೆಡುವುದಲ್ಲದಿವು ನಮಗಿದಿರಾಗಿ |
ಹೋರುವದೆಲ್ಲ ಸುಳ್ಳು || ||೮೭||

ಬೇರ ಬಲ್ಲವರಿಗೆ ಮರದೆಲೆಯನು ತಂದು |
ತೋರುವರೆಲೆ ಮರುಳೆ ||
ಮೂರು ಲೋಕದ ಗಂಡನಾರಿಂತೆಂದೆಂಬ ವಿ |
ಚಾರವ ತಿಳಿದು ಪೇಳು || ||೮೮||

ಅಂತಕ ಮೊದಲಾದ ಅಮರರು ಸಹಿತಾರ |
ಚಿಂತೆಯೊಳಿಹರು ಪೇಳು ||
ಭ್ರಾಂತುಬುದ್ಧಿಯಲಿದಿರಾಗಿ ರಾಘವ ತನ್ನ |
ಕಾಂತೆಯನೊಯ್ವುದುಂಟೆ || ||೮೯||

ಸರಳಿನ ಮೊನೆಯೊಂದು ತಾಗಿದಡಿವು ಮೆಯ್ಯ |
ತುರಿಸಿ ಕಿಕ್ಕಿರಿಗುಟ್ಟುತ್ತ ||
ಭರದೊಳೋಡುವ ಕಪಿ ಪರಿವಾರಂಗಳಿಗೆ ಸಂ |
ಗರದೊಳೆಚ್ಚಾಟವಂತೆ || ||೯೦||

ಏಸು ಮರ್ಕಟರಿದ್ದರೇನಾಯ್ತು ನಮ್ಮ ವಿ |
ಭೀಷಣ ಹೊರತು ಮಿಕ್ಕ ||
ಸಾಸಿರಸಂಖ್ಯೆಯ ವಾನರಬಲವೆಲ್ಲ |
ಕಾಸಿಂದ ಕಡೆ ನಮಗೆ || ||೯೧||

ದೂಷಣ ತ್ರಿಶಿರ ಮಾರೀಚ ಮುಂತಾದರ |
ನಾಶಗೊಳಿಸಿದನೆಂಬ ||
ಮೆಯ್ಸಿರಿ ಹೆಮ್ಮೆಲ್ಲ ನಿಲಿಸದಿರ್ದಡೆ ರಾವ |
ಣೇಶನೆಯಲ್ಲ ತಾನು || ||೯೨||

ಇನಿತು ಮಾತಾಡುತ್ತಲಿರಲು ತಮ್ಮನ ಕಯ್ಯ |
ಧನುವ ತೆಕ್ಕೊಂಡು ರಾಮ ||
ಕಣೆಯೊಂದನೆಸೆದು ರಾವಣನ ಶ್ವೇತಚ್ಛತ್ರ |
ವನೆ ತುಂಡುಗೆಯ್ಯಲಾಗ || ||೯೩||

ಇನಸುತ ಹಾರಿ ಈರ್ಯೆದು ಕಿರೀಟವ |
ಘನವೇಗದಿಂದ ತಂದು ||

ವನಜನಾಭನ ಕಣ್ಣಮುಂದಿಡಲದ ಕಂಡು |
ಮನದಿ ಕೋಪಿಸಿದ ರಾಮ || ||೯೪||

**ವಾರ್ಧಕ**

ಲವನೆ ಕೇಳೇಕಶರದಿಂದ ರಾವಣನ ಛ
ತ್ರವ ತರಿಯಲಾ ಭಂಗದಿಂದ ಮರಳಿದ ಮನೆಗೆ
ಅವಮಾನ ಲಕ್ಷ್ಮಿಮೈದೋರಿದಳು ಪ್ರಥಮಚುಂಬನ ದಂತಭಗ್ನದಂತೆ |
ಹವಣಿಸಿರಲಿತ್ತ ರಾಮನಪಾಳ್ಯದವರಿದೇ
ಸಮಯ ಲಗ್ಗೆಯ ಪಡೆವಡಪ್ಪಣೆಯ ಕೊಡಿಸೆನಲು
ದಿವಸಾಧಿಪತಿಕುಲೋದ್ಭವನವರ ಸಂತವಿಸಿ ರವಿಜಾತಗಿಂತೆಂದನು || ||೯೫||

**ರಾಗ ದೇಶ್ಯಕಾಪಿ ಅಷ್ಟತಾಳ**

ಸಾರಿ ಕೊಂದರೆ ಪಾಪವಿಲ್ಲ | ನಮ್ಮ |
ಧಾರಿಣೀಪತಿಗಳ ನಡತೆ ಇದಲ್ಲ || ಪಲ್ಲವಿ ||

ಇನ್ನಾದರೆಮ್ಮನು ಕಂಡು | ಸತಿ |
ಯನ್ನು ತಂದಿತ್ತು ತಮ್ಮನ ಕೂಡಿಕೊಂಡು |
ಮನ್ನಿಸಿದರೆ ಬಂದ ದಂಡು | ಪೋಪು |
ದನ್ಯಾಯವಲ್ಲ ಕೀರ್ತಿಯನು ಮುಂಕೊಂಡು || ||೯೬||

ಭ್ರಾಂತಿಬುದ್ಧಿಗಳೆಲ್ಲ ಬಿಡಲಿ | ತನ್ನ |
ಪಂಥ ಪೌರುಷವನಾಚೆಯೊಳು ಕಟ್ಟಿಡಲಿ |
ಸಂತಾನ ಸಹಿತ ಬಾಳಿರಲಿ | ಸಾಯು |
ವಂಥಾದಿದ್ದರೆ ನಮ್ಮೊಳಿದಿರೊಡ್ಡಿ ಬರಲಿ || ಸಾರಿ || ||೯೭||

ಸಂಧಾನಕೋರ್ವನ ಕಳುಹಿ | ನಾವಿಂ |
ತೆಂದ ಮಾತುಗಳ ರಾವಣನಿಗೆ ತಿಳುಹಿ ||
ಬಂದರೊಳ್ಳಿತು ಮಾತನುಳುಹಿ | ಕಾರ್ಯ |
ಹೊಂದದಿದ್ದರೆ ಬರಲಿತ್ತ ತಾನಿಳುಹಿ || ಸಾರಿ || ||೯೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದಾನವಾಂತಕನೆಂದ ಮಾತಿಗೆ |
ಭಾನುಸುತ ತನ್ನಿಂದ ಜ್ಯೇಷ್ಠನ |
ಸೂನುವನು ಬೀಳ್ಕೊಟ್ಟನರಿಸಂ | ಧಾನಗೊಳಲು || ||೯೯||

ಭಾನುಮಾರ್ಗದೊಳಡರಿ ದುರ್ಗವ |
ಜಾಣನಂಗದ ಬರಲು ಕೇರಿಯ |
ಮಾನಿನಿಯರಂಜಿದರು ಮೊದಲದು | ತಾನೆಯೆಂದು || ||೧೦೦||

ಸೀರೆಗಳ ನಡಗಿಸಿದರೆಣ್ಣೆಯ |
ದೂರದಲಿ ಬಚ್ಚಿಟ್ಟು ಬಂದರು |
ನೀರ ಚಿಮ್ಮಿದರೊಲೆಗೆ ಹಿಂದಣ | ಮಾರಿಗಂಜಿ || ||೧೦೧||

ಬೆದಬೆದರಿ ವಾನರನ ಬಾಲದ |
ತುದಿಯನೀಕ್ಷಿಸಿ ಕಿವಿಯೊಳೇಕಾಂ |
ತದಲಿ ಮಾತಾಡಿದರು ಕೆಲವರು | ಬದಲಿದೆಂದು || ||೧೦೨||

ಸಣ್ಣವರು ನೋಡಿದರೆ ಬಾಳೆಯ |
ಹಣ್ಣುಗಳ ಕರೆಕರೆದು ಕೊಡುವರು |
ಪುಣ್ಯವುಳ್ಳದ್ದೆನುತ ಕೆಲರದ | ಮನ್ನಿಸಿದರು || ||೧೦೩||

ಇಕ್ಕಲದಲಂಗಡಿಯ ಬಾಗಿಲ |
ನಿಕ್ಕಿದವರನು ಜರೆದು ಭರಣಿಯ |
ಸಕ್ಕರೆಯ ಮೆಲುತರಮನೆಯ ಒಳ | ಹೊಕ್ಕನಾಗ || ||೧೦೪||

ತಡೆದ ಬಾಗಿಲ ಭಟರ ಮಂಡೆಯ |
ನೊಡೆದನಾ ಕಂಕುಳಿನ ಮರದಲಿ |
ಕಡೆಗೆ ಕುಳಿತನು ಬಂದಿದಿರು ಚಾ | ವಡಿಯ ಮುಂದೆ || ||೧೦೫||

**[ಭಾಮಿನಿ**

ಬಾಲವನು ಸುರುಳಿಕ್ಕಿ ಕುಳಿತನು
ಕಾಲಭೈರವನಂತೆ ಜನರೊ
ಡ್ಡೋಲಗದೊಳಿದ್ದವರು ಕೆಲರೊಳಸರಿದರಲ್ಲಲ್ಲಿ ||
ಕಾಳಗದ ತೆರನಲ್ಲ ತಮ್ಮವ
ರೂಳಿಗದ ಕಪಿಯೆನುತ ಬಳಿಕ ವಿ
ಶಾಲಮತಿ ನಡೆತಂದು ಮಾತಾಡಿಸಿದನಂಗದನ ||] ||೧೦೬||

**ರಾಗ ಮಧ್ಯಮಾವತಿ ಏಕತಾಳ**

ಏನು ಸಡಗರ ಖಳಸಭಾಸ್ಥಾನ |
ತಾ ನೆರೆದಿಹುದು ರಾಕ್ಷಸರವಿತಾನ || ಪಲ್ಲವಿ ||

ಮುಖಗಳೆರಡು ಮೂರು ನಾಲ್ಕೈದರವರ್ಯಾರು |
ಮುಖ ನಿರೀಕ್ಷಿಸಲಾಗಿ ದಶಪರಿಯಂತ ||
ಮುಖವಿಹುದಿದರೊಳು ಭೂಪುತ್ರಿಯನು ರಾತ್ರಿ |
ಮುಖದೊಳು ಕದ್ದು ತಂದಧಮನಾರಯ್ಯ || ಏನು || ||೧೦೭||

ಹೇಳಲಾಗದೆ ಬಲ್ಲವರು ಭೂಮಿಪಾಲಕ |
ಹೇಳಿ ಕಳುಹಿಸಿದಂಥ ರಾಜಕಾರ್ಯವನು ||
ಹೇಳಿಹೋಗಲು ಬಂದೆ ಪ್ರತಿಭಟನಾನಲ್ಲ |
ಹೇಳಿ ಸೀತೆಯ ತಂದ ಕಳ್ಳನಾರಯ್ಯ || ||೧೦೮||

**ಭಾಮಿನಿ**

ನಗರದಹನದ ಕಪಿಯ ಮೋಡಿಯ
ಮಿಗಿಸುತಿದೆ ಮಾತಿನಲಿ ವದನದ
ಹೊಗರು ಹೊಸ ಪರಿಯಾಗಿ ತೋರುತಿದೆ ವಿವೇಕಿಸಲು |
ವಿಗಡನಿವನಹುದೆಂದು ಮನದಲಿ
ಬಗೆಯರಿದು ಬಳಿಕಾ ಪ್ರಹಸ್ತನು
ಮುಗುಳು ನಗೆಯಲಿ ನುಡಿದನಾ ಕಪಿರಾಜಪುತ್ರಂಗೆ || ||೧೦೯||

**ರಾಗ ಕುರಂಜಿ (ಪಹಡಿ) ಅಷ್ಟತಾಳ**

ಆರೋ ಬಂದವ ಕಪಿ ತಾನು | ನಿನ್ನ |
ದಾರಟ್ಟಿದರು ಕಾರ್ಯವೇನು | ನೋಡೆ |
ಮೂರುಕಣ್ಣವನಂತೆ ನೀನು | ನಮ್ಮ |
ದ್ವಾರಪಾಲಕರನಂಜಿಸಿ ಹೊಕ್ಕು ಬಲು ಮೊನೆ |
ಗಾರನಂದದೊಳತಿ ಗರ್ವದಿ ಕುಳಿತಿಹೆ || ||೧೧೦||

ಲೇಸು ನಾ ಪೇಳ್ವೆ ಬಂದೊಳವ | ಕೇ |
ಳಾ ಶೂರ್ಪಣಖೆಯ ಕೃತ್ರಿಮವ | ಕಂಡು |
ನಾಸಾ ಭೇದಿಸಿ ಕೊಳುಗುಳವ | ಗೈದು |

ದೂಷಣಾದ್ಯರ ಶಿರವಿಳುಹಿಸಿ ಮೆರೆವಂಥ |
ದಾಶರಥಿಯ ಕಡೆ ದೂತನಾಗಿರುವೆನು || ||೧೧೧||

ಮೆಯ್ಯೊಳಿಪ್ಪರ ಮದವೇಕೆ | ಎರಡೂ |
ಕಯ್ಯ ಪರ್ವತ ವೃಕ್ಷ ಸಾಕೇ | ನ |
ಮ್ಮಯ್ಯನವರು ಕಾಂಬರ್ಜೋಕೆ | ಈಗ |
ಬಾಯ ಹೊಯ್ಸುವರು ಹೋಗಾಕಡೆಯಲಿ ನಿನ್ನ |
ಕಯ್ಯಾಯುಧವ ಕೆಳಗಿಟ್ಟು ಮಾತಾಡಯ್ಯ || ||೧೧೨||

ಬೆದರುವದೇಕೆ ನೀವೆಲ್ಲ | ನಿಮ್ಮೊಳ್ |
ಕದನಕ್ಕೆ ಬಂದವನಲ್ಲ | ಶ್ರೀ |
ಪದುಮಲೋಚನೆಂದ ಸೊಲ್ಲ || ದಶ |
ವದನಗೆ ಹೇಳಿ ಕಳುಹಿಸಿದುದ ಪೇಳಿಯೆ |
ಬದಲುತ್ತರವನೊಯ್ವ ಚದುರನು ನಾ ಕಾಣ್ರೈ || ||೧೧೩||

ಮರದಿಂದ ಮರಕೆ ಹಾರುವಿರಿ | ಸಂಧಿ |
ಮರಿಯಾದೆಗಳನೇನನರಿವಿರಿ | ಮಿಗೆ |
ಪುರುಬುಗಳೆತ್ತಿ ಹಣ್ಕುವಿರಿ || ನೋಯೆ |
ಕಿರಿಕಿರಿ ಕಿರ್ರೆನೆ ಟಿಟ್ಟರಿ ಗುಟ್ಟುತ್ತ |
ಭರದಿಂದಲೋಡುವ ಭಟರು ನೀವಲ್ಲವೈ || ||೧೧೪||

ದುರುಳಬುದ್ಧಿಗಳೆಲ್ಲ ಕಲಿಸಿ | ಚಾಡಿ |
ತರಳೆಮಾತುಗಳೆಲ್ಲ ತಿಳಿಸಿ | ನೀತಿ |
ತೊರೆದ ಧರ್ಮವ ನಿತ್ಯಗಳಿಸಿ || ಪರ |
ತರುಣಿಯರನು ಬಲಾತ್ಕಾರದಿಂದೆಳೆತಂದು |
ಸೆರೆಯೊಳಿಕ್ಕಿಸುವಂಥ ಮಂತ್ರಿ ನೀನಲ್ಲವೈ || ||೧೧೫||

ಅಂಗವಿಲ್ಲದ ಮಾತನಾಡಿ | ದಶ |
ನಂಗಳ ಕಳಕೊಂಬೆ ಹೇಡಿ | ನಿ |
ನ್ನಂಗವಣೆಯ ಬಲು ಮೋಡಿ || ಈಗ |
ಭಂಗಿಸಿ ನಾವು ಕೊಂದರೆ ಕೇಳುವವರ್ಯಾರು |
ಮಂಗಚೇಷ್ಟೆಯ ಬಿಟ್ಟು ಜತನದಿ ಮಾತಾಡು || ||೧೧೬||

ಇರುಳೊಳು ಕಾಡೆಲ್ಲ ನಡೆದು | ಮೂಗು |
ಪರಿಯಂತ ಮದ್ಯವ ಕುಡಿದು | ಅಲ್ಲಿ |

ಪರರ ಹೆಂಗಳನಟ್ಟಿ ಹಿಡಿದು || ಮತಿ |
ಮರೆದು ಬಳಿಕ ತಲೆ ತಿರುಗಿ ಬೀಳುತ್ತಲಿ |
ನೊರೆನೊರೆ ಕಾರುವ ಖಳರು ನೀವಲ್ಲವೈ || ||೧೧೭||

**ರಾಗ ಕೇದಾರಗೌಳ ಅಷ್ಟತಾಳ**

ಮಾತಿನೊಳಗೆ ಜಾಣನಹುದು ನಿನ್ನನು ಪೆತ್ತ |
ಮಾತೆ ಯಾರಯ್ಯ ಹೇಳು ||
ತಾತನೆಲ್ಲಿಹನಾವ ದೇಶ ರಕ್ಷಿಸಿದಂಥ |
ದಾತನಾರದ ತಿಳುಹು || ||೧೧೮||

ತಾತ ನಿಮ್ಮವನ ತೊಟ್ಟಿಲಬಳಿಯಲಿ ಕಟ್ಟಿ |
ದಾತ ಹೆತ್ತವಳು ತಾರೆ ||
ಭೂತಳಾಧಿಪ ರಾಮದೂತನಂಗದನೆಂಬ |
ಪ್ರೀತಿಯ ಪೆಸರೆನಗೆ || ||೧೧೯||

ಲೇಸ ಮಾಡಿದ ಸುಗ್ರೀವ ಹಿಂದಣ ಮನಃ |
ಕ್ಲೇಶವ ಬಿಡದೆ ನಿನ್ನ ||
ಮೋಸದಿ ರಿಪುಬಾಯೊಳಳಿಯಲೆಂದಟ್ಟಿದ |
ನೀ ಶಿಶುವರಿತುದಿಲ್ಲ || ||೧೨೦||

ದೋಷಕರ್ಮವ ತಂದೆ ಮಾಡಿದರಿಂದ ಸ |
ರ್ವೇಶನಪ್ಪಣೆಯೊಡ್ಡಿತು ||
ಆಸುರ ಗುಣಗಳು ಸಂತು ನಿಮ್ಮವನಿಗು |
ನೀ ಸೈರಿಸೆರಡು ದಿನ || ||೧೨೧||

ಅನ್ಯಾಯ ರವಿಜ ಮಾಡಿದರೇನು ನಮಗೆ ನೀ |
ಸಣ್ಣವನಾದ ಮೇಲೆ ||
ನಿನ್ನ ರಾಜ್ಯವ ನಿನಗಿತ್ತುಪಚಾರದಿ |
ಮನ್ನಿಸಿ ಕಳುಹುವೆವು || ||೧೨೨||

ಕನ್ನೆಯ ಕದ್ದು ತಂದಂಥ ರಾವಣನೆಂಬ |
ಕುನ್ನಿಯಾರೆಂದವನ ||
ಕಣ್ಣಿಗೆ ಕಾಣಿಸಿ ಕೊಡುವದರಿಂ ಹೆಚ್ಚು |
ಮನ್ನಣೆ ಬೇಡೆಮಗೆ || ||೧೨೩||

ಬಾಲ ನೀನರಿಯೆ ಬಾಯಿಗೆ ಬಂದ ವಚನವ |
ಹೇಳಿ ಹಿಂದೊಂದು ಮಂಗ ||
ಬಾಲಸುಡಿಸಿಕೊಂಡು ಲಜ್ಜೆಗೆಟ್ಟೋದಂಥ |
ಕಾಲ ಬಪ್ಪುದು ನಿನಗೆ || ||೧೨೪||

ಕೇಳಲಿಲ್ಲವೆ ಬಂದಾ ಕಪಿಯ ಪೋತಗಳೆಲ್ಲ |
ಬಾಲಸುಡುಕ ನೀನೆಂದು ||
ಆಲಿಬೊಬ್ಬಿರಿದಟ್ಟೆ ಬದಲು ಬಂದವ ನಮ್ಮ |
ಬಾಲವ ಕೆಣಕಿ ನೋಡೈ || ||೧೨೫||

ಎಷ್ಟರ ಚಪಲತ್ವ ಕಲಿತೆಯಾದರು ನಿನ್ನ |
ಹುಟ್ಟು ಮರ್ಕಟನೆಂಬರು ||
ಸೃಷ್ಟೀಶ ನಿನ್ನೊಳೆಂದಂತರಂಗದ ಮಾತ |
ಕೊಟ್ಟು ನೀ ನಡೆ ಸುಮ್ಮನೆ || ||೧೨೬||

ಎಷ್ಟು ನೀ ಪಾರುಪತ್ಯವ ಮಾಡಿದರು ದೊರೆ |
ಯಿಟ್ಟ ಚಾಕರನಲ್ಲ ವೈ ||
ಸೃಷ್ಟಿ ಜಾತೆಯ ಕಳವಿನಲಿ ವಂಚಿಸಿ ತಂದ |
ಭೃಷ್ಟಾನಾರಯ್ಯ ತೋರು || ||೧೨೭||

**ರಾಗ ಶಂಕರಾಭರಣ ಅಷ್ಟತಾಳ**

ಕಂಡೆಯಾ | ಕಡು ವೀರರಾವಣನ ನೀ |
ಕಂಡೆಯಾ || ಪಲ್ಲವಿ ||

ಕಂಡೆಯ ಕಪಿ ಕಡು ಜಾಣ | ಮಾ |
ರ್ತಂಡಪ್ರಕಾಶಪ್ರವೀಣ | ಸುಪ್ರ |
ಚಂಡ ನಿರತ ಪಂಚಬಾಣ || ಅಖಿ |
ಲಾಂಡಕೋಟಿ ಬ್ರ | ಹ್ಮಾಂಡನಾಯಕ ಶತ್ರು |
ಖಂಡನ ರಿಪುಗಜ | ಗಂಡಭೇರುಂಡನ || ಕಂಡೆಯಾ || ||೧೨೮||

ಸಂಗರ ವಿಜಯವಿಹಾರ | ಶಿವ |
ಲಿಂಗಪೂಜೆಯಲಿ ವಿಸ್ತಾರ | ಚತು |
ರಂಗವೇದದ ಸದ್ವಿಚಾರ || ಕರು |

ಣಂಗಳಿಂದಖಿಳಲೋ | ಕಂಗಳನಾಳ್ವ ಉ |
ತ್ತುಂಗಬಲಾಢ್ಯ ಶ್ರೀ | ಮಂಗಳ ಕಾಂತಿಯ | ಕಂಡೆಯಾ || ||೧೨೯||

ಶಿವನಿಂದಾಯುಷ್ಯವ ಪಡೆದ | ಮತ್ತೆ |
ದಿವಿಜರೆಲ್ಲರನಟ್ಟಿ ಹಿಡಿದ | ಸೊಕ್ಕಿ |
ದವರ ತಗ್ಗಿಸಿ ಬಾಯ ಹೊಡೆದ || ಜನ |
ನಿವಹವಚ್ಚರಿಗೊಳಲವನಿಜೆಯನುಬಂಧ |
ನವ ಮಾಡುತೊಡ್ಡೋಲಗದಿ ಕುಳ್ಳಿರ್ಪಾತನ || ಕಂಡೆಯಾ || ||೧೩೦||

**ಭಾಮಿನಿ**

ಈತನೇ ದಶಕಂಠನಾ ರಘು
ನಾಥನಿಲ್ಲದ ವೇಳೆಯಲಿ ಭೂ
ಜಾತೆಯನು ಕದ್ದೊಯ್ವ ಸಮಯದಿ ತಡೆದ ಖಗಪತಿಯ |
ಘಾತಕವ ತಾನೆಸಗಿ ಕೊಂದಾ
ಪಾತಕಿಯ ನೋಡಿದರೆ ದೋಷವ
ದೇತಕಕಟಾ ಕಂಡೆನೆನುತಲೆ ಮಾತನಾಡಿಸಿದ || ||೧೩೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೋಪ ನಿಮಗೇಕಿನಿತು ಸರಿಸ |
ಲ್ಲಾಪವೇ ನಾವೀ ನಿಶಾಚರ |
ರೂಪಿನವರುಂಟಾಗಿ ಕೇಳಿದೆ | ವೀಪರಿಯೊಳು || ||೧೩೨||

ಆ ಪರಂತಪ ಬಲಿಯ ಭವನದ |
ಕೈಪರೆಯ ನಾರಿಯರ ವಚನಾ |
ಳಾಪಹಾಸ್ಯದ ಭಿಕ್ಷದವನೀ | ಪಾಪಿಯಹುದೆ || ||೧೩೩||

ಘನಪರಾಕ್ರಮಿ ಕಾರ್ತವೀರ್ಯಾ |
ರ್ಜುನನೊಡನೆ ಸಲೆ ಮತ್ಸರಿಸಿ ಸೆರೆ |
ಮನೆಯೊಳಗೆ ಕುರಿಯಂತೆ ಸಿಲುಕಿದ | ದನುಜನಿವನೆ || ||೧೩೪||

ವನಿತೆ ವೇದಾವತಿಯ ಶಾಪಕೆ |
ತನುವ ತೆತ್ತವನೀತನಲ್ಲವೆ |
ಮನದ ಭಯ ನಿಮಗೇಕೆ ತಿಳುಹಿಸಿ | ರೆನಗೆ ಪರಿಯ || ||೧೩೫||

ತೋಳ ದರ್ಪದೊಳುಬ್ಬಿ ವಾಲಿಯ |
ಬಾಲಕನ ಬಚ್ಚಣೆಯ ತೊಟ್ಟಿಲ |
ಕಾಲದೆಸೆಯಲಿ ಕಟ್ಟುವಡೆದಿಹ | ಖೂಳನಲ್ಲೈ || ||೧೩೬||

ಶೂಲಿಯಲಿ ಗರ್ವಿಸಿ ಮಹೀಧರ |
ಮೂಲದಲಿ ಕೈಸಿಕ್ಕಿ ನಾಯೋ |
ಲೂಳಿದವ ತಾನೀತನಲ್ಲವೆ | ಹೇಳಿರಯ್ಯ ||೧೩೭||

ಜನಕಜೆಯ ವೈವಾಹದಲಿ ಶಿವ |
ಧನುವಿನಲಿ ನರಿ ಸಿಕ್ಕು ಸಿಕ್ಕಿದ
ಶುನಕ ತಾನಿವನಲ್ಲವೇ ಸುಡಿ | ಘನತೆಗಳನು || ||೧೩೮||

**ಭಾಮಿನಿ**

ಆಗಲಾಗದೆ ಮಾಣಲಿವನೊಡ
ನಾ ಗಭೀರಪರಾಕ್ರಮರು ಹೇ
ಳ್ದಾಗಮವನಿವಗೆಂಬೆ ಮಿಕ್ಕಿದ ಮಾತದೇಕೆಮಗೆ |
ರೋಗಿಗೌಷಧ ಸೊಗಸೆ ಹಿತಕರ
ವಾಗಿರಲು ನಮ್ಮುಕ್ತಿಗಳು ಕಿವಿ
ಗಾಗಿಸುವೆವಾವೊಮ್ಮೆ ಕೇಳಲಿ ಕೇಳದಿರಲೆಂದ || ||೧೩೯||

**ರಾಗ ಗೌಳಮಲಹರಿ ಏಕತಾಳ**

ಏನ್ಯಾ ರಾವಣೇಂದ್ರ ನೀನ್ಮ್ಯಾ ಜಾನಕಿಯನ್ನು |
ಕಾಣದಂತೆ ಕದ್ದು ತರಬಹುದೇನ್ಯಾ ||
ತಾನಾಗಿ ರಾಮಚಂದ್ರ ಸೇನೆಯ ಕೂಡಿಕೊಂಡು |
ನೀನಿದ್ದ ಬಳಿಗೇ ಬಂದ ಕಾಣ್ಯಾ || ||೧೪೦||

ನಿನ್ನ ಬಳಿಗೆ ರಾಮ ಎನ್ನ ಕಳುಹಿಕೊಟ್ಟ |
ಇನ್ನಾದ್ರೂ ಸೀತೆಯ ಬಿಡುಹೇಳ್ಯಾ ||
ಎನ್ನಿಂದ ತಪ್ಪಾತೆಂದು ಹೊನ್ನ ಕಾಣಿಕೆ ಕೊಟ್ಟು |
ಬೆನ್ನಾಗೆ ಮರೆಯೊಕ್ಕು ಇರುತೆಯೇನ್ಯಾ || ||೧೪೧||

ಏತಕೀ ಛಲ ರಘುನಾಥ ಮಾನವನಲ್ಲ |
ಆತ ನಾರಾಯಣ ಸ್ವಾಮಿ ಕಾಣ್ಯಾ ||

ಸೀತೆ ಲಕ್ಶುಮಿ ಮಾಶೇಷ ಲಕ್ಶುಮಣ |
ಭೂತಳದೊಳಗವತರಿಸಿದೋರ್‌ಮ್ಯಾ || ||೧೪೨||

ಮಂಡೋದರಿ ಭಾಳ ಮಕ್ಕಳ ಹೆತ್ತವಳೆ |
ಕಂಡೋರ ಬಾಯ್ ಕುತ್ತ ಮಾಡೋಬೇಡ್ಮ್ಯಾ ||
ಕೊಂಡೆಯದ ಮಾತಕೇಳಿ ಕೊಲಿಸದಿರು ಜಾತಿಯ
ದಿಂಡತನದಿ ಸಾಯಬೇಕೆ ನೋಡ್ಮ್ಯಾ || ||೧೪೩||

ರುಂಡ ಮಾಲೆಯನಿಟ್ಟುಕೊಂಡಂಥ ಶಿವಕೊಟ್ಟ |
ದ್ದುಂಡುಂಡು ಸುಕದಾಗೇ ಸಾಯಿ ಕಾಣ್ಮ್ಯಾ ||
ಚಂಡಾಲತನದಿ ಸಿಕ್ಕಿ ತಂಡ ತಂಡದೊಳಿಪ್ಪ |
ಹೆಂಡಿರ ಓಲೆಯ ಕಳಚ ಬೇಡ್ಮ್ಯಾ || ||೧೪೪||

ಈರೇಳು ಲೋಕದಾ ಪಾರುಪತ್ಯ ಮಾಡಿ |
ಗಾರಾಗಿ ಕೆಟ್ಹೋಗೊ ಬೇಡ ಕಾಣ್ಮ್ಯಾ ||
ಭಾರೀ ಸಂಪತ್ತು ಲಂಕೆಯೂರನೆ ಹಾಳ್ಮಾಡಿ |
ಚೋರತನಕೆ ಮಾನ ಮಾರಬೇಡ್ಮ್ಯಾ || ||೧೪೫||

ಶೂರುಪನಖೆ ಹುಚ್ಚು ಮೂಳಿಯ ಮಾತ್ ಕೇಳಿ |
ವೀರಖರ ದೂಷಣರೇನಾದರ್ ಹೇಳ್ಮ್ಯಾ ||
ಸಾರವ ನೋಡ್‌ಕೊಂಡು ಸಕಲವ ತಿಳಿದು ದೊಡ್ಡ |
ಮಾರಿಯ ಬಾಯ ಹೊಕ್ಕು ಸಾಯದಿರ್ಮ್ಯಾ || ||೧೪೬||

**ರಾಗ ಭೈರವಿ ಏಕತಾಳ**

ಇನಿತೆಂದಾ ನುಡಿಕೇಳಿ | ಆ |
ದನುಜನು ರೋಷವ ತಾಳಿ ||
ವನಚರನನು ಹೊಯೆಂದ | ಅಂಗ |
ದನ ಮುತ್ತಿತು ಖಳವೃಂದ || ||೧೪೭||

ಗಜರಥ ತುರಗಗಳಿಂದ | ಖಳ |
ವ್ರಜರುಗಳೈತರಲಂದಾ ||
ಭುಜಬಲಗಳ ತೋರೆಂದಾ | ಸುರ |
ಪಜನ ಕುಮಾರಕ ಕೊಂದ || ||೧೪೮||

ಈಟಿಯವರ ಸದೆಬಡಿದ | ಬಿ |
ಲ್ಲಾಟದವರ ಬೆನ್ನೊಡೆದ ||
ಮೀಟಿಗಜದ ಕಾಲ್ಪಿಡಿದ | ಹೊರ |
ಕೋಟೆಯ ಸಂದಿಗೆ ಸೆಡಿದ || ||೧೪೯||

ಬೀಳುವ ಗಜತುರಗಗಳ | ರಾಮ |
ಕೇಳಿದ ಬಲು ಬೊಬ್ಬೆಗಳ ||
ಕಾಳೆಗವಾಯ್ತಂಗದಗೆ | ಶಿಶು |
ತಾಳುವುದೆಂತೀ ಬಗೆಗೆ || ೧೫೦ ||

ಮರುತಸುತನೆ ನೀ ಬೇಗ | ಹೋಗಿ |
ಕರೆತಾರಂಗದನೀಗ |
ತೆರಳೆಂದೆನೆ ಶರಣೆಂದ | ಬಲು |
ತರ ರೌದ್ರದಿ ನಡೆತಂದ || || ೧೫೧ ||

**ಕಂದ**

ಕೈಮರ ಗಿರಿಯಿಂದವರಂ
ಹೊಯ್ದಾಡುತ್ತಿರಲು ಹನುಮ ಕಂಡಂಗದನಂ |
ಕೈಪಿಡಿದೆಲೆ ಮರುಳೆಂದೆಳೆ
ದೊಯ್ಯುತ್ತುಂ ಪೇಳ್ದನಂದು ತಾರಾಸುತಗಂ || ೧೫೨ ||

**ರಾಗ ವೃಂದಾವನ ಸಾರಂಗ (ಜಹಜು) ಏಕತಾಳ**

ಏನವತಾರ ವಾಲಿನಂದನ | ಇಂಥ |
ಆನೆ, ಕುದುರೆ ಮತ್ತೀ ದಾನವರನು ಕೊಲ್ವ || ಪಲ್ಲವಿ ||

ನೀತಿಯ ಪೇಳ್ವಡೆ ನೀನು ಬಂದರೆ | ಮತ್ತೀ |
ಘಾತುಕರನು ನೆರೆ ಕೊಂದರೆ | ರಘು |
ನಾಥ ಸಹಿತ ಭಾನು | ಜಾತ, ಕೋಪಿಸುವರು || ೧೫೩ ||

ಪೋಗುವ ನಾವ್ ರಾಮನಲ್ಲಿಗೆ | ನಾಳೆ |
ಹೇಗೊ ಬರುವುದುಂಟು ಇಲ್ಲಿಗೆ || ಮತ್ತೆ |
ರಾಘವನಿದಿರು ತೋ | ರಾಗ ನಿನ್ನಯ ಶೌರ್ಯ || ೧೫೪ ||

**ಕಂದ**

ಬಂದಾ ಮಾರುತನಂದನ
ಕೊಂದಾಟವ ನಿಲಿಸಿ ದನುಜನಿದಿರೊಳ್ನಿಂದು |
ಮುಂದಿನ್ನಹ ಕಾರ್ಯಂಗಳ
ದಂದುಗಮಂ ತಿಳಿಯೆಪೇಳ್ದ ನಾ ರಾವಣಗಂ || ೧೫೫ ||

**ರಾಗ ಆನಂದ ನೀಲಾಂಬರಿ ಏಕತಾಳ**

ಏನಯ್ಯಾ ನಿನ್ನಂತರಂಗ | ಮಾನವಲ್ಲದೀ ಪ್ರಸಂಗ |
ವೇನಯ್ಯಾ | ಮುಂದಿ | ನ್ನೇನಯ್ಯಾ || ಪಲ್ಲವಿ ||

ಸೃಷ್ಟಿಜಾತೆಯ ನೀ ತಂದು | ಕೊಟ್ಟು ರಾಮಚಂದ್ರನ ಕೂಡಿ |
ಬಾಳಿಂತು | ಕೆಡಲು | ಬೇಡಿಂತು || ೧೫೬ ||

ತಮ್ಮನ ನೀ ಕೂಡಿಕೊಂಡು | ಒಮ್ಮನದಿಂದೊಪ್ಪಿ ಸುಖದೊ |
ಳಿರುವೆಯಾ | ರಣಕೆ | ಬರುವೆಯಾ || ೧೫೭ ||

ಜಗದ ದೈವದ ಕೂಡಿಂತು | ಹಗೆತನ ಬಳಸಿಕೊಂಡೆಂತು |
ಇರುವದು | ಕೀರ್ತಿ | ಬರುವದು || ೧೫೮ ||

ಕಡೆಗೆ ನೀನೆಂಬ ಮಾತೇನು | ಒಡೆಯನ ಪಾದಕ್ಕದನ್ನು |
ಪೇಳ್ವೆವು | ಏನ | ಹೇಳ್ವೆವು || ೧೫೯ ||

**ರಾಗ ಪಂತುವರಾಳಿ (ವರಾಳಿ) ಏಕತಾಳ**

ಆಯಿತೇ ನಿನ್ನ ಮಾತು ಹೇಳಿ | ಮರ್ಕಟ ನಿವಾಳಿ |
ಆಯಿತೇ ನಿನ್ನ ಮಾತು ಹೇಳಿ || ಪಲ್ಲವಿ ||
ಭೂತಳ ಕೆಳಕ್ಕೆ ಸರಿದರೂ | ಪಾತಾಳ, ಮೇಲಕ್ಕೆ ನೆಗೆದರೂ |
ಸೀತೆಯ ನಾ ಬಿಟ್ಟುಕೊಡುವ | ಮಾತುಂಟೇನೋ ಛೀ ಛೀ ಮರುಳೆ || ೧೬೦ ||

ಅರ್ಣವ ಬತ್ತಿಹೋದರೇನು | ಭಾನು ತಣ್ಣಗಾದರೇನು |
ಪ್ರಾಣವಳಿದು ಹೋಗುವನಕ | ಕಾಣಿಸಿಕೊಡುವದುಂಟೆ || ||೧೬೧||

ಇರುಳಾದಿತ್ಯ ಮೂಡಿದರೂ | ಒರೆಳೆದ್ದು ಮಾತಾಡಿದರೂ |
ಮರುಳು ಹಿಡಿದು ಹೋದ ತಮ್ಮ | ಬರಲೆಂದು ಪೇಳ್ವ ಮಾತುಂಟೆ || ||೧೬೨||

**ವಾರ್ಧಕ**

ರಘುವರನ ಸೇವಕರ ಹಿತಕರದ ವಚನಮಂ
ಬಗೆಗೊಳದೆ ಜರೆದು ಕಳುಹಿಸಿದಡವರಿಬ್ಬರುಂ
ಪಗಲೊಡೆಯವಂಶಾಬ್ಧಿಚಂದ್ರನೆಡೆಗಯ್ದಿ ಕೈಮುಗಿದು ಪೇಳ್ದಾ ಹದನಮಂ |
ಮಗುಳೆ ರಾವಣ ಕಳುಹಿದುತ್ತರವ ತಿಳುಹಲಾ
ಸಗರವಂಶಜನೆಂದನಿನ್ನೇನು ನಿಮ್ಮ ಹವ
ಣಿಗೆ ತಕ್ಕ ಕಾರ್ಯಮಂ ವರ್ತಿಸುವುದೆನಲು ಲಗ್ಗೆಗೆ ಪಡೆದರಪ್ಪಣೆಯನು || ||೧೭೩||

**ರಾಗ ಮುಖಾರಿ ಏಕತಾಳ**

ಮುತ್ತಿದರಾ ದುರ್ಗವ | ವಾನರರೆಲ್ಲ
ಹತ್ತಿದರಾ ದುರ್ಗವ || ಪಲ್ಲವಿ ||

ಕೊತ್ತಳಗಳ ಮುರಿಯುತ್ತೊಡನೊಡನೆ ಭ |
ಟೋತ್ತಮರುಡುಗುತ ಸುತ್ತಲು ಕವಿದು || ||೧೭೪||

ಕತ್ತಿ ಕುಂತ ತೋಮರಗಾಯದ ಬಿಸಿ |
ನೆತ್ತರ ಕಾರುತಲತ್ತ ಮರ್ಕಟರು || ||೧೭೫||

ತೂರಿನೊಳಿದೆ ಜಂಭಾರಿಯ ಪೆಟ್ಟಿನ |
ಕೂರಿಕೆ ಗಣಿಸದೆ ಓರಣದಿಂದ || ||೧೭೬||

ಅಂಬರ ಮುಸುಕುವ ಅಂಬಿನ ಗಾಯದ |
ಬಂಬಲನೆಣಿಸದೆ ಮುಂಬಂದೊಳಗೆ || ||೧೭೭||

ಕೋಟೆಯ ಬಣಗಳ ಈಟಿಯ ಗಾಯವ |
ಪಾಟಿಯ ಮಾಡದೆ ಸೂಟಿಯ ಭಟರು || ||೧೭೮||

ಬಾಣದ ತಗಲಿಗೆ ಶೋಣಿತ ಸುರಿಯಲು |
ಕಾಣಿಸಿಕೊಳ್ಳದೆ ಚೂಣಿಯ ಭಟರು || ||೧೭೯||

ಹತ್ತಿರ ದುರ್ಗವ ಸುತ್ತಲು ಹೆಣಗಿ ನು |
ಗ್ಗೊತ್ತುವ ಡೊಗ್ಗರ ಪತ್ತುಗೆಯಿಂದ || ||೧೮೦||

**ಭಾಮಿನಿ**

ಮುರಿದ ಕೈಕಾಲುಗಳ ಕಪಿಗಳ
ಹರಿದ ಹೊಟ್ಟೆಯ ಕರುಳುಗಳ ಜೋ

ಲ್ವರಿವ ಮೂಗಿನ ಸಿಗಿದ ತುಟಿಗಳ ಸುರಿವಶೋಣಿತದ |
ಮೊರೆವ ಭೇರಿ ಡಮಾಮಿ ವಾದ್ಯದ
ಭರಕೆ ನೆಲಬಾಯ್ಬಿಡಲು ಕೋಟೆಯ
ಮುರಿದು ಲಗ್ಗೆಯ ಕಪಿಕದಂಬಕ ಬಂದುದೊಳಸರಿದು || ||೧೭೧||

**ರಾಗ ಕುರಂಜಿ ಅಷ್ಟತಾಳ**

ಹೋಯಿತು | ಲಂಕಾಪಟ್ಟಣ ಕೈವಶ | ವಾಯಿತು || ಪಲ್ಲವಿ ||

ಹೋಯಿತು ಲಂಕೆ ರಾವಣಗೆ | ವಶ |
ವಾಯಿತು ರಾಮಚಂದ್ರನಿಗೆ ||
ಹೋಯಿತು ಸೆರೆಯಮರರಿಗೆ | ಎಂಬು |
ದಾಯಿತೊಂದೇ ಕ್ಷಣದೊಳಗೆ | ಪೆಟ್ಟ |
ಹಾಯಲಾರದೆ ದಂಡು | ಬೀಯವಾದುದ ಕಂಡು ||
ಘೋಯೆಂದು ದನುಜರ್ ಪ | ಲಾಯನ ಗೆಯ್ದರು || ಹೋಯಿತು || ||೧೭೨||

ಸೊಂಡಿಲ ಮುರಿದರಾನೆಗಳ | ಕಲ್ಲು |
ಗುಂಡಲಿಟ್ಟರು ಕುದುರೆಗಳ ||
ತಂಡತಂಡದ ಭಟರುಗಳ | ಬಡಿದು |
ಮಂಡೆಯನೊಡೆವ ಹಬ್ಬಗಳ | ನೆಲ್ಲ |
ಕಂಡು ರಾವಣ ನಾಚಿ | ಕೊಂಡು ಹೋಯಿತು ನಮ್ಮ |
ದಂಡುಯೆಂದೆನುತಲೆ | ಮಂಡೋದರಿಗೆ ಪೇಳ್ದ || ಹೋಯಿತು || ||೧೭೩||

ತೊಂಬತ್ತು ಕೋಟಿ ದಾನವರು | ಇವರ |
ಡೊಂಬಿಗೆ ನಿಲಲಾರದವರು ||
ಇಂಬಿಲ್ಲದೆಡೆಗೆ ಸತ್ತವರು | ಎಲ್ಲಿ |
ಕಂಬಿಟ್ಟರಲ್ಲಿ ನಿತ್ತವರು | ಸೆಳೆ |
ಕೊಂಬರೀ ಸಮಯವಿ | ದೆಂಬಷ್ಟ ರೊಳಗೆಲ್ಲ |
ಜಾಂಬವಾದಿಗಳ ಕ | ದಂಬ ಮುತ್ತಿದರಾಗ || ಹೋಯಿತು || ||೧೭೪||

ಅರಮನೆಯೊಳವೊಕ್ಕ ತಂಡ | ಕಪಿ |
ಪರಿವಾರ ದಶಕಂಠ ಕಂಡ |
ಭರದಿ ಖಂಡೆಯುವ ಕಯ್ಕೊಂಡ | ಕಡಿ |
ದುರುಳಿಸೆ ಕಪಿಗಳ ರುಂಡ | ಹಗ |

ಲಿರುಳಾಯಿತೋ ಮಂಡೋ | ದರಿಯ ಪುಣ್ಯದೊಳೆಂಬ |
ತೆರನ ಕಾಣಿಸಿತು ಒಂ | ದರೆಗಳಿಗೆಯೊಳೆಲ್ಲ || ಹೋಯಿತು || ||೧೭೫||

ಕೊಬ್ಬಿದ ರಾಮಸೈನ್ಯವನು | ಕಾದು |
ತೊಬ್ಬ ರಾವಣ ಓಡಿಸಿದನು ||
ಪರ್ಬಿದ ಖಳಸೇನೆಗಳನು | ಬಲು |
ಬೊಬ್ಬಿಡುವಾನೆ ಕುದುರೆಯನು | ಬಡಿ |
ದೆಬ್ಬಿತು ರಾಮನ | ಪಾಳ್ಯವೆಂಬಷ್ಟರೊ |
ಳಬ್ಜಬಾಂಧವ ಪಶ್ಚಿ | ಮಾಬ್ಧಿಗಾದುದು ಬಿಂಬ ||
ಹೋಯಿತು | ಲಂಕೆ ರಾಮನಿಗೆ | ತಿರಿ |
ಗ್ಯಾಯಿತು ರಾವಣೇಶನಿಗೆ || ಪಲ್ಲವಿ || ||೧೭೬||

**ವಾರ್ಧಕ**

ಓಡಿಸಿದನಾ ದಿವಸ ಬಳಿಕ ದುರ್ಗವ ಸಜ್ಜು
ಮಾಡಿಸಿದ ಮಾಲ್ಯವಂತನ ಮಾತ ಕೇಳದೆ ವಿ
ಭಾಡಿಸಿದ ಜಾನಕಿಯ ಮುಂದೆ ಮಾಯಾರಾಮಶಿರವತೋರಿಸುವ ಬಗೆಗೆ ||
ರೂಢಿಸಿದ ಮಾಯಕದ ಶಿರವ ವಿದ್ಯುಜ್ಜಿಹ್ವ
ನೋಡಿಸಿದನವನಿಜೆಯ ಮುಂದಿಳುಹಿ ಬಳಿಕ ಮಾ
ತಾಡಿಸಿದ ತಾ ಕಲಿತ ಕುಶಲ ದುರ್ಬುದ್ಧಿಗಳ ಜೋಡಿಸಿದ ಹವಣಗತಿಯ || ||೧೭೭||

**ರಾಗ ನವರೋಜು ಚೌತಾಳ**

ನೋಡು ನೋಡು ಸೀತೆ | ರಾಮನ ಶಿರವ || ಪಲ್ಲವಿ ||

ಓಡಿ ಹೋದವರೊಂದು | ಗೂಡಿ ಸಂಗರದೊಳೆ |
ಚ್ಚಾಡಿದಡಿದೆ ತುಂಡು | ಮಾಡಿದ ಶಿರವ || ||೧೭೮||

ಥಳ ಥಳಿಸುವ ಮೊಗ | ಸುಳಿಗುರುಳಿನ ಸೊಗ |
ವಲರಂಬನ ಧನು | ಪೊಳೆವ ಪುರ್ಬುಗಳ || ||೧೭೯||

ಸಂಪಗೆ ಬಿರಿಮುಗು | ಳಂ ಪೋಲ್ವ ಮೂಗಿನ |
ತುಂಬುಗಲ್ಲದ ತುಟಿ | ಕೆಂಪಿನ ಸೊಬಗ || ||೧೮೦||

ಕನ್ನಡಿ ಕದಪಿನ | ಚೆನ್ನದ ರೇಖೆಯ |
ಸನ್ನೆಗೊಳಿಪ ಸೋಗೆ | ಗಣ್ಣಿನ ಸೊಬಗ || ||೧೮೧||

**ರಾಗ ಶಂಕರಾಭರಣ ಅಷ್ಟತಾಳ**

ದೃಢವಾಯಿತೇನೆ ಸೀತೆ | ರಾವಣ ಜಗ |
ದೊಡೆಯನೆಂದೆಂಬ ಮಾತು ||
ತೊಡರಿಲ್ಲವಲ್ಲ ರಾವಣನ ಚಿತ್ತದೊಳಿದ್ದ |
ಕಡುಹತೀರಿಸಿ ಕೊಟ್ಟು ನಡೆಸಿಕೊಂಬುದಕಿಷ್ಟು || ||೧೮೨||

ಸಿಂಹದ ಗವಿಯ ಪೊಕ್ಕು | ಸಿಂಗಳಿಕನು |
ಸಂಹರಿಸಲು ಬಲ್ಲುದೆ ||
ಬ್ರಹ್ಮಾದಿ ಸುರರಿಂದ ಪೂಜಿತ ದಶಕಂಠ |
ನಿರ್ಮ್ಮಾತನಿದಿರಪ್ಪನೇ ಏತಕೆ ಭ್ರಮೆ || ||೧೮೩||

ಗರುಡನಿದ್ದೂರೊಳಗೆ | ಗಂಭೀರವಾ |
ದುರಗನುತ್ಸಾಹವುಂಟೆ ||
ತಿರಿಗಿ ರಾಘವ ನಿನ್ನನೊಯ್ವನೆಂಬಾಸೆಗೆ |
ಬರಿದೆ ನೀ ದಣಿದೆ ಕಾಂತೇ ಸದ್ಗುಣವಂತೆ || ||೧೮೪||

ಪ್ರಾಯದ ಸುಖವುಣ್ಣದೆ | ಸುಮ್ಮನೆ ನಿನ್ನ |
ಕಾಯವ ದಂಡಿಸಿದೆ ||
ಬಾ ಇನ್ನಾದರೂ ಬಲ್ಲಿದನ ಚಿತ್ತದೊಳಗಿದ್ದ |
ಪ್ರೇಯವ ಸಲಿಸಿ ಪಟ್ಟದ ರಾಣಿಯಾಗವ್ವ || ||೧೮೫||

**ವಾರ್ಧಕ**

ಈತೆರದ ಮಾಯದಭಿರಂಜನೆಯ ಶಿರವ ಭೂ
ಜಾತೆ ಕಂಡಂಜೆ ಮರುಮರುಗಿ ಮೂರ್ಛಿತೆಯಾಗಿ
ಧಾತುಗೆಟ್ಟಂಗನೆಯ ಮುಖತುಹಿನಕರ ರಾಹು ಸೋಂಕಿದಂತಾಯ್ತು ಕ್ಷಣಕೆ ||
ಘಾತಕದ ತಲೆಯದೇನೆಂದರಿಯದಬಲೆ ರಘು
ನಾಥನೇ ಸರಿಯೆಂದು ಚಿಬುಕಾಗ್ರ ನಾಸಿಕವ
ನೋತು ತಡವರಿಸಿ ಮಡಿಲೊಳಗಿರಿಸಿ ಮುದ್ದಿಡುತ ಪ್ರೀತಿ ಮಿಗಲಿಂತೆಂದಳು || ||೧೮೬||

**ರಾಗ ಪುನ್ನಾಗವರಾಳಿ ಏಕತಾಳ**

ಪ್ರೀಯ ಮಮ ಜೀವಿತೇಶ | ಪ್ರಾಣನಾಯಕ |
ಸುಪ್ರತಾಪ ಸೌಂದರ್ಯಾತ್ಮ | ಅಪ್ರಮೇಯಾನಂದಕಾಯ || ||೧೮೭||

ದುರ್ಜನಕುಲವಿಘಾತ | ಸಜ್ಜನಜನಸುಪ್ರೀತ |
ನಿರ್ಜರಗಣವಂದಿತ | ಗರ್ಜನ ಸಿಂಧು ಸಮೇತ || ||೧೮೮||

ಅಂಗಜಕೋಟಿಲಾವಣ್ಯ | ಆಶ್ರಿತಜನವರೇಣ್ಯ |
ತುಂಗವಿಕ್ರಮಕಾರುಣ್ಯ | ಸಂಗೀತಲೋಲಾಗ್ರಗಣ್ಯ || ||೧೮೯||

**ರಾಗ ಕೇದಾರಗೌಳ ಅಷ್ಟತಾಳ**

ನೋಡಿದೆಯಾ ನೀನು ತ್ರಿಜಟೆ ಪೂರ್ವದಲಿ ನಾ |
ಮಾಡಿದ ಸುಕೃತಂಗಳ ||
ನಾಡದೈವಗಳ ನಂಬಿದಡಿಂತು ಶಿವದಯೆ |
ಮಾಡಿದ ವಿಕೃತಂಗಳ || ||೧೯೦||

ಅಣ್ಣ ತಮ್ಮ ಬಂಧು ಬಳಗದಾಸೆಯ ಬಿಟ್ಟು |
ಎನ್ನವರಡಿಯ ಕಾಯ್ದೆ ||
ಪುಣ್ಯದ ಫಲವಿಂತು ಮಾಡಿತೀ ಭಾಗ್ಯವ |
ಕಣ್ಣಾರೆ ಕಂಡೆಯಲ್ಲ || ||೧೯೧||

ಜಗತಿಯೊಳೆಲ್ಲಾದರಿನ್ನಿಂಥ ಚೆಲುವಿನ |
ಮೊಗವುಳ್ಳ ಪುರುಷರುಂಟೇ ||
ಬಗೆಯಲಿನ್ನೇನ ಹೇಳಿದರೇನು ಸರಮೆ ಸಾ |
ವಿಗೆ ದಾರಿ ತೋರೆನಗೆ || ||೧೯೨||

ಇಂತೆಂದು ಸೀತೆ ರೋದಿಸುವಂಥ ಪರಿಯನು |
ಅಂತರಂಗದಲಿ ಪೋಗಿ ||
ಸಂತಸದಲಿ ವಿದ್ಯುಜ್ಜಿಹ್ವ ಪೇಳಿದ ಕಾಮ |
ಭ್ರಾಂತನಾದಸುರೇಂದ್ರಗೆ || ||೧೯೩||

**ವಚನ ||** ಇತ್ತಲಾ ಸರಮೆ ತ್ರಿಜಟೆಯರು ಜಾನಕಿಯ ಕೈಯಲ್ಲಿದ್ದಾ ಶಿರವಂ
ಕಂಡು ಕೌಳಿಕದ ಗಳರೇಖೆಯಂ ನೋಡಿ ಏನೆಂದರು ಎಂದರೆ

**ರಾಗ ರೇಗುಪ್ತಿ ಏಕತಾಳ**
ನಿತ್ಯಮಂಗಲೆ ನೀನು | ನಿರುತ ಶಾಶ್ವತ ರಾಮ |
ಸತ್ತು ಹುಟ್ಟುವದೆಂಬ | ಸಂಸಾರವೇನು ||
ಅತ್ತ ಬಿಸಾಡಸುರ | ಕೃತ್ರಿಮದ ಶಿರವ ನೀ |
ನೆತ್ತಿ ದುಃಖಿಪುದುಂಟೆ | ಮತ್ತೇಭಗಮನೆ || ||೧೯೪||

ಗಳದ ರೇಖೆಯ ಕಂಡು | ತಿಳಿದಳಂಜಿಕೆಗೊಂಡು |
ಇಳೆಗೆ ಬಿಸುಟಳಂದು | ಆಶ್ಚರ್ಯವೆಂದು ||
ಅಳುತ ಶಾಪವನ್ನಿತ್ತ | ಳೆನ್ನ ರಾಮನ ಬಾಣ |
ಇಳುಹಲೀ ಧರೆಗೆ ಆ | ತಲೆಹತ್ತನೆಂದು || ||೧೯೫||

**ವಾರ್ಧಕ**

ಅರಸು ಮಕ್ಕಳು ಕೇಳಿ ಮರುದಿವಸದುದಯದಲಿ
ಕರಿ ತುರಗ ರಥ ಪದಾತಿಗಳ ಸನ್ನಾಹಮಂ
ನೆರಹಿ ಭೈರವಗೆ ನೂರ್ಮಡಿಯಾದ ರಕ್ಕಸರ ಪರಿವಾರಮಂ ಕೂಡಿಸಿ ||
ಸುರಪಜಿತು ಸಕಲಪಡೆ ಸಹಿತ ನಡೆತಂದು ಸಂ
ಗರಕೆ ನಿಲಲಾರ್ಭಟಿಸೆ ಕಂಡು ವಾನರರು ತರ
ಹರಿಸುತಿರಲಿತ್ತ ರಾಮನ ಪಾಳ್ಯದೊಳು ವಿಭೀಷಣ ಕಾಣುತ್ತಿಂತೆಂದನು || ||೧೯೬||

**ರಾಗ ಘಂಟಾರವ ಝಂಪೆತಾಳ**

ಅವಧರಿಸು ರಾಜೇಂದ್ರ | ಈತನೇ ಶಕ್ರಜಿತು |
ಭುವನದೊಳಗತಿಭಟನು | ಭುಜಬಲಾನ್ವಿತನು || ||೧೯೭||

ಈತನಂಜಿಕೆಗಾಗಿ | ಈಶನಜಮೊದಲಾಗಿ |
ಶ್ವೇತಕುಂಜರರೂಢ | ಸೋತನುರೆ ಗಾಢ || ||೧೯೮||

ಸಕಲದಿವಿಜಾದಿಗಳು | ಸೇವೆಯನು ಮಾಡುವರು |
ನಿಖಿಲದಾನವರುಗಳ | ಆಳಾದರವರು || ||೧೯೯||

ಈತನೊಬ್ಬನು ನಮಗೆ | ಸೋತನಾದರೆ ಕಡೆಗೆ |
ಏತಕೂ ಬೇಡ ಬರು | ವಾತಗಳ ಬವರ || ||೨೦೦||

ಕುಂಭಕರ್ಣನಿಗಂತೂ | ತಲೆಗೆ ನಿದ್ರಾಭ್ರಾಂತು |
ಕಾಂಬ ಮಿಕ್ಕಾದವರ | ಡೊಂಬಿಗಳ ಪರಿಯ || ||೨೦೧||

**ರಾಗ ಮಾರವಿ ಮಟ್ಟೆತಾಳ**

ಎಂದು ರಾಮನೊಡನೆ ಶರಣ | ನಂದು ಬಿನ್ನವಿಸಲು ಗಡಣೆ |
ಯಿಂದ ರವಿಜ ನೀಲ ಸಹಿತ | ಬಂದರಲ್ಲಿಗೆ ||

ಒಂದು ಕಯ್ಯಶೈಲ ಮ | ತ್ತೊಂದು ಕಯ್ಯವೃಕ್ಷಗಳಿ |
ಬಂದು ರಾಮಚಂದ್ರಗೆರಗಿ | ನಿಂದರಿದಿರಲಿ || ||೨೦೨||

ಇಳೆಯನೆಲ್ಲ ಮಡಿದು ಕೌಂ | ಕುಳಲಿ ಧರಿಸಹೇಳು ಶರಧಿ
ಜಲವ ಬತ್ತಿಸೆನ್ನು ಜವನ | ಸೆಳೆದು ತಪ್ಪೆವು ||
ಲಲನೆಗಳನಣುಗನೊಬ್ಬ | ಸುಲಭದೈತ್ಯನೊಡನೆ ಕಾದಿ |
ಗೆಲುವ ಬಗೆಗೆ ಚಿಂತೆ ವೆ | ಗ್ಗಳಿಸಲಾದುದೆ || ||೨೦೩||

ಕಳುಹಿ ನೋಡು ರಾಮಪಾದ | ದೊಲುಮೆಯಿಂದ ಇಂದ್ರಜಿತುವ |
ತಲೆಯ ತಂದು ಕೊಡುವೆನೆಂದು | ಬೆಳೆದನಂಗದ ||
ಇಳಿದ ಭರವ ಕಂಡು ನೀಲ | ಸುಳಿದನಸುರರಿದಿರು ನೋಡಿ |
ದಳವ ಬಿಟ್ಟನಂದು ಪಾಳ್ಯ | ಗಳ ವಿಭಾಗಿಸಿ || ||೨೦೪||

ಬೊಬ್ಬಿಡುತ್ತ ಬರುವ ಕಪಿಗ | ಳುಬ್ಬಟೆಯನು ಕಂಡು ಖಳರೊ |
ಳೊಬ್ಬರೊಬ್ಬರಿದಿರು ನಿಂದ | ರಾರ್ಭಟಿಸುತಲಿ |
ಕೊಬ್ಬಿದಸುರಮರ್ಕಟಾದಿ | ಸರ್ವ ಜಂಗುಲಿಯೊಳಾಯ್ತು |
ಹಬ್ಬಿತೆರಡು ಸೈನ್ಯ ರಣದ | ಹಬ್ಬವೆಸಗಿತು || ||೨೦೫||

**ದ್ವಿಪದಿ**

ತರಣಿನಂದನಗಿಂತು ತಾನೆ ಶಕ್ರಜಿತು
ವರಪ್ರಹಸ್ತಗೆ ನೀಲನೊಳುಕಲಹವಾಯ್ತು || ||೨೦೬||

ಕುಂಭನಿಗೆ ನಳನಾ ನಿಕುಂಭಗಂಗದನು
ಜಾಂಬವರಿಗಿದಿರಾಯ್ತು ಧೂಮ್ರಾಕ್ಷನೊಡನೆ || ||೨೦೭||

ಶತಬಲಿಯು ದುರ್ಮುಖನು ಸೆಣಸಿದರು ಮತ್ತಾ
ಪ್ರತಿಯಾದ ದೇವಾಂತಕನರಾಂತರೊಡನೆ || ||೨೦೮||

ಅತಿಕಾಯ ನೋಡಿದನು ಅಲ್ಲಿ ಲಕ್ಷ್ಮಣನ
ಖತಿಯಿಂ ಮಹೋದರ ಸುಪಾರ್ಶ್ವಗಿದಿರಾದ || ||೨೦೯||

ಕನಲಿ ವಿಕ್ರಮದಿಂದ ಕಂಪ ನಡೆತಂದು
ಹನುಮಂತಗಿದಿರಾಗಿ ಮತ್ಸರದೊಳಂದು || ||೨೧೦||

ವಜ್ರಸುತನಂದನಗೆ ಒದಗಿತನಿತರಲಿ
ವಜ್ರದಂಷ್ಟ್ರನಕೊಡೆ ಸಮರವೆಸಗಿತ್ತು || ||೨೧೧||

ಮಿತ್ರಘ್ನನೊಡನೆ ನಿಂದಾ ವಿಭೀಷಣನು
ಶತ್ರುತ್ವಮಂ ಬಳಸುತೊಡನೆ ಕಾದಿದನು || ||೨೧೨||

**ರಾಗ ಭೈರವಿ ತ್ರಿವುಡೆತಾಳ**

ಆಯಿತಾಗ | ಕಲಹಗ | ಳಾಯಿತಾಗ || ಪಲ್ಲವಿ ||

ರಾಯದಳ ರಾಕ್ಷಸರ ಪಾಳ್ಯದ |
ಬಾಯ ಬೊಬ್ಬೆಯ ಕದನಕರ್ಕಶ || ಅನುಪಲ್ಲವಿ ||

ಶರಧಿಮಥನದೊಳಂದು ಹುಟ್ಟಿದ |
ತೆರೆಗೆ ನೂರ್ಮಡಿ ಹೆಚ್ಚಿತು |
ಧರಿಸಲಾರದೆ ಭೂಮಿಭಾರವ |
ಕರಿಕಮಠರೆದೆ ಬಿಚ್ಚಿತು ||
ನೆರೆದು ನೋಡುವ ಸುರರ ಕಂಗಳ |
ಪರೆಯು ತಾನೇ ಮುಚ್ಚಿತು |
ಸರಳಮೊನೆ ತರು ಗಿರಿಗಳಾಟದ |
ಸರಣಿ ತಲೆಗಳ ಕೊಚ್ಚಿತೀಪರಿ | ಆಯಿತಾಗ || ||೨೧೩||

ಬಾಣಗಳ ತಗಲಿದರೆ ಕಪಿಗಳು |
ತ್ರಾಣದಿಂ ಪಲ್ಗಿರಿಯುತ |
ಆನಲಾರದೆ ಗಿರಿಯ ಹೊಡೆತಕೆ |
ದಾನವರು ಘೋರ್ಗರೆಯುತ |
ಕಾಣುತುಭಯಬಲಂಗಳೊಳು ಮೈ |
ಶೋಣಿತದ ಮಳೆ ಸುರಿಯುತ |
ಕ್ಷೋಣಿಗತ್ಯಾಶ್ಚರ್ಯವೆನೆ ಬಹು |
ಪ್ರಾಣವರಿಗಳನರಿಯುತಾಗಲೆ || ಆಯಿತಾಗ || ||೨೧೪||

**ರಾಗ ಮಧ್ಯಮಾವತಿ ಅಷ್ಟತಾಳ**

ಬಹುಮಂದಿ ಲಯವಾಯಿತು | ರಘೂ |
ದ್ವಹನ ಪಾಳ್ಯದಿ ಕಪಿದಾನವರೊಳಗೆ || ಪಲ್ಲವಿ ||

ಏಳರ್ಬುದವೆಣಿಸಿದರು ದಾನವರಲ್ಲಿ |
ಪೇಳಲೇನೈದು ಸಾವಿರ ಲಯವಾಯ್ತು ||
ಕಾಲುಕೈ ಮುರಿದು ಬಿದ್ದವರ ಲೆಕ್ಕವನೆಲ್ಲ |
ಪಾಲುಮಾಡುವರಾರು ಪರಮಾತ್ಮ ಬಲ್ಲ || ||೧೦೫||

ಕಲಿವಿಭೀಷಣನು ಮಿತ್ರಘ್ನರಾಕ್ಷಸನು ತ |
ಮ್ಮೊಳಗೆ ಪೌರುಷವಾದ ಹೆಣಕೆಯಿಂದ |
ತಳಮಗುಚಲು ಜಾವ ಪರಿಯಂತ ಹೆಣಗಾಡಿ |
ಇಳೆಗೊರಗಿಸಿದ ಮಿತ್ರಘ್ನರಾಕ್ಷಸನ || ||೧೦೬||

**ವಾರ್ಧಕ**

ದನುಜ ಮಿತ್ರಘ್ನಪಾತಕಿ ಯುದ್ಧದಲಿ ಬಿದ್ದ
ಹೆಣನ ನೋಡಲು ಪಾಪವೆಂದು ತಾವರೆಯ ಮಿ
ತ್ರನು ಪಶ್ಚಿಮಾಂಬುಧಿಗೆ ಸಾಗಿದಡೆಯಾದಿನದಿ ಶಕ್ರಜಿತು ಪಂಥದಿಂದ |
ಮನನೊಂದು ಪಾಳ್ಯಮಂ ಜೈಸಿಕೊಳದನಕ ಪ
ಟ್ಟಣವ ಹೊಗೆನೆನುತ ಮಿಕ್ಕೆಲ್ಲರಂ ಕಳುಹಿ ತಾ
ಘನ ಸತ್ವಯುಕ್ತಿಯಿಂ ಮಾಯಕದ ಕಲ್ಪಿತವ ನೆನೆದು ಮಾಡಿದ ಘಾತವ || ||೧೦೭||

**ರಾಗ ಮಾರವಿ ಏಕತಾಳ**

ಕಾಳಗಕೆನುತಲೆ | ಮೇಲಭ್ರದಿ ನಿಂ |
ದಾಳುತನದ ವಿಷ | ಗಾಳಿಯ ಮಹಫಣಿ |
ಗೋಲನುವಹಿಸಿ ಕ | ರಾಳ ಶರವಕಪಿ |
ಪಾಳೆಯಕಿಟ್ಟನು | ತೋಳಬಲ್ಪಿನಲಿ || ಪೇಳಲೇನು || ||೧೦೮||

ಬಸಿವಾ ರುಧಿರವ | ನೊಸೆದ ಭೂತಂಗಳು |
ದೆಸೆದೆಸೆ ತುಂಬುತ | ಪಸರಿಸಿತೆಲ್ಲವ |
ಘಸಣಿಗೊಳುತ ಪರ | ವಶರಾಗುತ ಪವ |
ಡಿಸಿತಾ ವಾನರ | ವಿಸರವು ಜಗದಿ || ಪೇಳಲೇನು || ||೧೦೯||

ಹನುಮನಿಗೊಂಭತ್ತಿನಜಗೆರಡು ಮ |
ತ್ತನಲಜಗಾರಂಗದನಿಗೀರೈದು |
ಪನಸಗವಯಮುಖ ವನಚರ ಸಂಕುಲ
ವನು ತಗಲಿತ್ತುರ | ಗನ ಶರ ಬಂದು | ಪೇಳಲೇನು || ||೧೧೦||

ಒರಗಿದ ನೀಲನು | ಸೊರಗಿದ ಶತಬಲಿ |
ಮರುಗೆ ಗವಯ ನೀ | ಟೆರಗಿದ ಸುಷೇಣ |
ಭರದ ಮೋಹನಿ | ದ್ರೆಯ ಸ್ಯೆರಿಸದುರೆ |
ತಿರಿಗಿತು ತಲೆ ಕೆಲ | ಕರಗಿದರೆಲ್ಲ | ಪೇಳಲೇನು || ||೧೧೧||

ದುರುಳರಿಯದಡೇ | ನಾಯಿತು ಶರವೇ |
ನರಿಯದೆ ಶ್ರೀ ರಘು | ವರಮಾಹಾತ್ಮ್ಯವ |
ಶರಧಿಯೊಳಗೆ ಉರ | ಗನ ಮೇಲೊರಗುವ |
ತೆರನಂದಾ ರಘು | ವರ ಪವಡಿಸಿದ | ಪೇಳಲೇನು || ||೧೧೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಉರಗತಾಪದ ಕಡುಹಿನಲಿ ಮೆಯ್ |
ಮರೆದರೆಂಬುದ ನರಿತನಿರುಳಲಿ |
ಗರುಡ ಬಂದೆಬ್ಬಿಸಿದ ಖಳರಾ | ರರಿಯದಂತೆ || ||೧೧೩||

ಮರುದಿವಸದುದಯದಲಿ ಕೋಟೆಯ |
ಹರಿದರಂದಿನ ಗಸಣಿಗೋಸುಗ |
ಪುರದ ಜನ ತಲ್ಲಣಿಸೆ ರಾವಣ | ನರಿತ ಮನದಿ || ||೧೧೪||

ಕರೆದನಾ ಧೂಮ್ರಾಕ್ಷರಾಕ್ಷಸ |
ದುರುಮುಖಾದಿಯ ವಜ್ರದಂಷ್ಟ್ರನ |
ಧುರಗಡಿವ ಬಗೆಗೆಂದು ಕಳುಹಿದ | ದುರುಳ ಬೇಗ || ||೧೧೫||

**ರಾಗ ಶಂಕರಾಭರಣ ಮಟ್ಟೆತಾಳ**

ವಾಲಿಸುತನು ರಣದೊಳವರ | ಕಾಲನೂರಿಗಟ್ಟಲಾಗ |
ಮೇಲೆ ಬಂದ ಕಂಪನೆಂಬ | ಖೂಳದೈತ್ಯನ || ||೧೧೬||

ಸೀಳು ಮಾಡಿ ಬಿಸುಟನಂದು | ಭಾಳ ಸುಪ್ರತಾಪದಿಂದ |
ನೀಲ ಬಂದು ಸಚಿವಪತಿಯ | ಬೀಳಗೆಡಹಿದ || ||೧೧೭||

ದಾನವೇಂದ್ರ ತಾನೆ ಬಂದು | ವಾನರೇಂದ್ರನೊಡದೆ ಕಾದಿ |
ತ್ರಾಣದಿಂದ ಸೋಲಿಸಿದನು | ಭಾನುತನುಜನ || ||೧೧೮||

ಕಾಣುತಿದಿರು ಬಂದು ವೈ | ಶ್ವಾನರನ ಕುಮಾರಕನನು |
ಕ್ಷೋಣಿಗೊರಗಿಸಿದನು ಮೂರು | ಬಾಣದಿಂದಲಿ || ||೧೧೯||

ಮರುತಜಾತನೊಡನೆಸೋತು | ಮರಳಿ ತಿವಿದು ಗೆಲುತಲವನ |
ತೆರಳಿಬಂದನೀಶನಂತೆ | ಧುರಪರಾಕ್ರಮಿ || ||೧೩೦||

ಬರುವ ಬರುವ ಕಪಿಗಳೆಲ್ಲ | ಗೆಲುವೆನೆಂದು ಕೋಪದಿಂದ |
ಧರಣಿಪಾಲನನುಜ ಪೊರಟ | ನುರುತರಾಗ್ರದಿ || ||೧೩೧||

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ನೀನೆ ರಾವಣೇಂದ್ರನೆಂಬ | ದನುಜ ಪಾತಕ ||
ವಾನರರನು ಬರಿದೆಕೊಲುವು | ದೇನು ಘಾತಕ || ||೧೩೨||

ಬಲ್ಲೆ ನಿನ್ನ ಬಗೆಯ ಜಾತಿ | ಕಳ್ಳನಹೆ ಛಲ ||
ಅಲ್ಲಿ ಮೂಗ ಕೊಯ್ದ ಜಾಣ | ನಲ್ಲವೇನೆಲ || ||೧೩೩||

ಕಳ್ಳನಲ್ಲದವನಿಸುತೆಯ | ಕದ್ದು ತಂದವ |
ಬಲ್ಲತನದಿ ಕೊಳ್ಳೊ ನಮ್ಮ | ಬಾಣಜಾತವ || ||೧೩೪||

ಬಾಣವೆಸೆವ ಬಗೆಯನೆಲ್ಲ | ಬಲ್ಲೆ ನಿನ್ನಯ |
ತ್ರಾಣದಂಗಗಳ ಪರೀಕ್ಷೆ | ಕಾಣೊ ನಮ್ಮಯ || ||೧೩೫||

ಬಿಡಲು ರಾವಣನ ಶರವ | ಕಡಿದ ಲಕ್ಷ್ಮಣ |
ಜಡಿದು ಹೂಂಕರಿಸಿ ಪ್ರತಿಗೆ | ತೊಡುವನಾಕ್ಷಣ || ||೧೩೬||

ಹಲವು ಶಸ್ತ್ರದಿಂದ ಕಾದಿ | ಗೆಲುವು ಕಾಣದೆ |
ಇಳೆಗೆ ಮೂರ್ಛೆಯಾಗಿ ಬಿದ್ದ | ಖಳನ ಬಾಣದೆ || ||೧೩೭||

**ಕಂದ**

ಯುದ್ಧಾಂಗಣದೊಳ್ ತಮ್ಮಂ
ಬಿದ್ದಿಹುದಂ ಕಂಡು ರಾಮ ತಾನೇ ಬರಲಾ |
ಗೆದ್ದನುಜನೊಡಗೊಂಡತಿ
ರೌದ್ರಾನ್ವಿತರಾಗಿ ಕಾದಿದರ್ ಸಂಗರದೊಳ್ || ||೧೩೮||

**ರಾಗ ಪಂತುವರಾಳಿ ಮಟ್ಟೆತಾಳ**

ರಾವಣನೆಂದೆಂಬ ಖೂಳ | ನೀನೇ ನಮ್ಮಂಗನೆ ಸೀತಾ |
ದೇವಿಯ ತಂದಿಟ್ಟುಕೊಂಡ | ಕಾರಣವೇನೊ || ||೧೩೯||

ಭೂವರೇಣ್ಯ ಕೇಳಾದರೆ | ಕೇವಲ ನಮ್ಮನುಜೆಯ ಮ |
ತ್ತಾವ ಕಾರ್ಯಕ್ಕಾಗಿ ನಾಸಿ | ಕವನು ಕೊಯ್ದೆಲ || ||೧೪೦||

ಹೆಂಗುಸರಾದವರು ಪರರ | ಇಂಗಿತವನರಿತುಕೊಳದೆ |
ಅಂಗಕೆ ಬೀಳ್ವಡಿದರಂತ | ರಂಗವೇನಯ್ಯಾ || ||೧೪೧||

ಆದರಾಗಲದೊಂದು ಮೋಸ | ಮೇದಿನೀಪಾಲಕ ನೀಯೆನ್ನ |
ಸೋದರರನೆಲ್ಲ ಕೊಂದ | ಭೇದವೇನಯ್ಯ || ||೧೪೨||

ಸಾಧುಮಾರ್ಗದಲ್ಲಿರುವರ | ಯೋಗಿಗಳ ನಿತ್ಯ ನಿತ್ಯ |
ಬಾಧಿಸುವಡಿದಂಗವೇ ನಿಮ | ಗಾದುದೇನಯ್ಯ || ||೧೪೩||

ಊರೊಳಾಗುವಾ ವಿಚಾರ | ಪಾರುಪತ್ಯವೆನಗಿದ್ದಂಥಾ |
ದ್ದಾರು ಕೊಟ್ಟರಯ್ಯ ನಿನಗೆ | ಧಾರಿಣೀಪಾಲ || ||೧೨೪||

ಸೂರ್ಯವಂಶಜಾತರಿಹೆವು | ಧಾರಿಣಿ ನಮ್ಮದಿರಲು |
ಬೇರೆ ಕೇಳ್ವರಾರಿದೆಲ್ಲ | ಚೋರರಾಕ್ಷಸ || ||೧೪೫||

ದೇವತೆಯರೆಲ್ಲ ನಮ್ಮ | ಸೇವೆಯವರಾದ ಮೇಲೆ |
ಯಾವನಂತೆ ನೀನು ನಮ್ಮ | ದೂರ ಕೇಳ್ವರೆ || ||೧೪೬||

ಕೋವಿದ ಜಾಣನಾದಡೆ | ಈ ವಿಧದ ಕರ್ಮಂಗಳ |
ಯಾವ ಕೀರ್ತಿಗಾಗಿ ಮಾಳ್ಪೆ | ದ್ರೋಹಿ ರಾಕ್ಷಸ || ||೧೪೭||

ನಾವು ದನುಜವಂಶದವರು | ಭೂವಲಯದಿ ಶ್ರೇಷ್ಠರೆಮ್ಮ |
ನಾವನಾದರಿನ್ನು ಕೆಣಕಿ | ಜೀವಿಸಲುಂಟೆ || ||೧೪೮||

ದಾನವ ಸಾಕಯ್ಯ ಕೇಳವ | ಸಾನದ ಮಾತೊಂದನೀಗ |
ಜಾನಕಿಯ ಬಿಟ್ಟುಕೊಡುವ | ಮಾನಸವುಂಟೇ || ||೧೪೯||

ನೀನು ನಿನ್ನ ತಾತ ಸಹಿತ | ಏನು ಕಾಣಿಕೆಯಿತ್ತರೂ ಆ |
ಮಾನಿನಿಯ ಬಿಡುವುದುಂಟೆ | ಹೀನಮಾನವ || ||೧೫೦||

ಕಾಣಿಕೆಯೊಂದುಂಟು ನಿನ್ನ | ಗೋಣಿಗೊಡ್ಡಿದಂಥದೆನ್ನ |
ಬಾಣವಿದೆಕೊ ತಾಳಿ ಕೊಳ್ಳೈ | ಹೀನ ರಾಕ್ಷಸ || ||೨೫೦||

ಭಾನುವಂಶಜಾತ ಬಿಟ್ಟ | ಬಾಣ ರಾವಣೇಂದ್ರನುಟ್ಟ |
ಚೇನವಸ್ತ್ರ ಚಿಂದಿಗೆಯ್ದು | ದೇನನೆಂಬೆನು || ||೨೫೧||

ಮತ್ತೆ ಗಜವು ತೇರು ವಾಜಿ | ಎತ್ತಿದಾ ಛತ್ರ ಚಾಮರ |
ವೆತ್ತ ಹೋಯಿತೆಂದು ಬೆರ | ಗೆತ್ತುದಾಕ್ಷಣ || ||೨೫೩||

ಹತ್ತು ತಲೆಯಾತ ತಾ ನಾ | ಚುತ್ತಲಿಪ್ಪಾಗ ವಾನರರ |
ಮೊತ್ತ ಘೇಯೆನಲು ದನುಜ | ಬತ್ತಲೆ ನಿಂತ || ||೨೫೪||

**ವಾರ್ಧಕ**

ಗೋಚರಿಸದಂದದಲಿ ನಾಲ್ಕು ಶರದಿಂ ಕಮಲ
ಲೋಚನನು ರಾವಣನ ಕಾಯದ ದುಕೂಲಮಂ
ತಾ ಚಮತ್ಕಾರದಲಿ ಕತ್ತರಿಸೆ ತಿರುಗಿದಂ ನಾಚಿಕೆಯ ಕಂಡು ಬಳಿಕ |
ನಾ ಚರಿಪುದಿಲ್ಲೆಂದು ರವಿ ಕಡಲೊಳಡಗಲು ನಿ
ಶಾಚರೇಂದ್ರನು ಮನೆಗೆ ತೆರಳಿದನು ಕಪಿಪಾಳ್ಯ
ಕೀಚೆಯಲಿ ಗೆಲವಾಯಿತೆಂದಮರರೆಲ್ಲರುಂ ಪುಷ್ಪಾರ್ಚನಂ ಗೆಯ್ದರು || ||೨೫೫||

**ರಾಗ ಆಂದೋಳಿ (ಡವಳಾರ) ತ್ರಿವುಡೆ (ಧ್ರುವ) ತಾಳ**

ಅಂಬರದಲಿ | ಚರಿಸುವ | ದಿವಿಜಕ |
ದಂಬವದೀ | ಕ್ಷಿಸುತಲೆ | ಬಂದತಿ |
ಸಂಭ್ರಮ | ದಿಂ | ದ
ನೆರೆ | ದ | ರು ||
ನೆರೆದರು ಶ್ರೀ | ರಾಮನ | ಚರಣಕೆ |
ಅಂಬುಜಪೂ | ಮ ಳೆ | ಯ ||
ಕ ರೆ | ದ | ರು ||
ಶೋ | ಭಾ | ನೆ || ||೨೫೬||

ಇಂದ್ರಾದಿಗ | ಳಿಹ ಪುರ | ದೊಳು ಸುರ |
ದುಂದುಭಿ ಮೊಳ | ಗುವುದೆಂ | ದೆನುತಲೆ |
ಗಂಧರ್ವ | ಸತಿ | ಯರ್ || ಸ ಹಿ | ತಾ | ಗಿ ||
ಸಹಿತಲೆ ನಡೆ | ತಂದಾ | ದಶರಥ |

ನಂದನಗಾ | ರ ತಿ | ಯ ||
ಬೆಳ | ಗಿ | ರೆ ||
ಶೋ | ಭಾ | ನೆ || ||೧೫೭||

ರಾಕ್ಷಸನು ದಿ | ಗಂಬರ | ನಾಗಿಹ |
ಸಾಕ್ಷಿಗೆ ಬಂ | ದವರೆಂ | ದೆನುತಲೆ |
ಯಕ್ಷರ್ಮಾ | ನಿ ನಿ | ಯ ರ್ |
ನ ಡೆ | ತಂ | ದು ||
ನಡೆತಂದೇ | ಶೋಭನ | ಪಾಡುತ |
ಅಕ್ಷತಾ | ರ ತಿ | ಯ ||
ಬೆಳ | ಗಿ | ರೆ |
ಶೋ | ಭಾ | ನೆ || ||೧೫೮||

**ವಾರ್ಧಕ**

ಶ್ರವಣ ಪರ್ವತದಿಂದ ಮುಂದೆ ಬಂದಾ ಮಹಾ
ರ್ಣವವ ಸಂಧಿಸಿಕೊಂಡು ಸೇತುವಂ ಕಟ್ಟಿ ಕಪಿ
ನಿವಹ ಸಹಿತಲೆ ಲಂಕೆಯೊಳು ಪಾಳ್ಯಮಂ ಚೆದರಿ ದುರ್ಗಮಂ ಪುಡಿಗೆಯ್ಯುತ |
ಬವರದಲಿ ಬಹುರಾಕ್ಷಸರ ಕೊಂದು ರಾವಣನ
ವಿವಸನದಿ ನಿಲಿಸಿದಲ್ಲಿಗೆ ಸಂಧಿಯೆಂದೆನುತ
ಲವಕುಶರಿಗಾ ಮುನಿಪನೊರೆದ ವರಕಣ್ವಪುರಕೃಷ್ಣನ ಕಟಾಕ್ಷದಿಂದ || ||೧೫೯||

ರಾಮಚರಿತವನು ಕನ್ನಡಯಕ್ಷಗಾನದಲಿ
ನಾ ಮನಸುಬಂದಂತೆ ವರ್ಣಿಸಿದೆನಿದರ ನಿ
ಸ್ಸೀಮಕವಿಗಳು ಕೇಳಿ ತಪ್ಪುಗಳ ಕಳೆದು ಶುದ್ಧಪ್ರತಿಯ ಮಾಡಿ ಬಳಿಕ |
ಭೂಮಿಯೊಳು ರಾಗತಾಳವನರಿತು ಪಾಡಿದರೆ
ಆ ಮಹಾಕಣ್ವಪುರದೊಡೆಯ ಶ್ರೀಕೃಷ್ಣ ಸು
ಪ್ರೇಮದಿಂ ಸಕಲಭಾಗ್ಯವನಿತ್ತು ಸಕಲರಂ ರಕ್ಷಿಸುವನನುದಿನದೊಳು || ||೧೬೦||

**|| ಅಂಗದಸಂಧಾನ ಪ್ರಸಂಗ ಮುಗಿದುದು ||**